

ಇದು ಭಾರತ! ಇದು ಭಾರತ!!

ಸಮಾಜವಾದಿ ಸಂಕಥನಗಳು- ೨

ಡಿ ಎಸ್ ನಾಗಭೂಷಣ

೧೯೫೨ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ತಿಮ್ಮಸಂದ್ರದಲ್ಲಿ ಸಿ.**ಹೆಚ್. ಸೂರಾಚಾರ್** ಹಾಗೂ **ಗೌರಮ್ಮ** ದಂಪತಿಗಳ ಎರಡನೇ ಮಗನಾಗಿ ಜನಿಸಿದ **ಡಿ.ಎಸ್. ನಾಗಭೂಷಣ,** ಅದೇ ಜಿಲ್ಲೆಯ ಹಸಿಗಾಳ ಮತ್ತು ತ್ಯಾಮಗೊಂಡ್ಲುಗಳಲ್ಲಿ ಶಾಲಾ ವಿದ್ಯಾಭ್ಯಾಸ ಮುಗಿಸಿ, ಬೆಂಗಳೂರು ವಿಶ್ವವಿದಾಲಯದಿಂದ ೧೯೭೩ರಲ್ಲಿ ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ ೩೦ ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ಈಗ ಸ್ವಯಂ ನಿವೃತ್ತಿ ಪಡೆದು ತಮ್ಮ ಪತ್ನಿ **ಸವಿತಾ ನಾಗಭೂಷಣ** ಅವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.

ಕರ್ನಾಟಕದ ದಲಿತ ಮತ್ತು ರೈತ ಚಳುವಳಿಗಳೊಂದಿಗೆ ಆಪ್ತವಾದ ಒಡನಾಟವಿಟ್ಟುಕೊಂಡಿದ್ದ ನಾಗಭೂಷಣ, ನಮ್ಮ ಸದ್ಯದ ಮುಖ್ಯ ಸಂಸ್ಕೃತಿ ಹಾಗೂ ಸಮಾಜವಾದಿ ಚಿಂತಕರಲ್ಲೊಬ್ಬರು. **ಮಾನವ** ಮತ್ತು **ಸಾಹಿತ್ಯ ಸಂವಾದ** ಪತ್ರಿಕೆಗಳ ಸಂಪಾದಕರೂ ಆಗಿದ್ದ ಇವರ ಪ್ರಮುಖ ಸಾಹಿತ್ಯ ವಿಮರ್ಶೆಯ ಕೃತಿಗಳು: **ಗಮನ** (೧೯೯೦), **ಅನೇಕ** (೨೦೦೫), **ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ** (೨೦೦೬) **ಕುವೆಂಪು ಸಾಹಿತ್ಯ ದರ್ಶನ** (೨೦೦೭). ಸಮಾಜವಾದಿ ಚಿಂತನೆ ಮತ್ತು ವಿಮರ್ಶೆಯ ಕೃತಿಗಳೆಂದರೆ, **ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ** (೨೦೦೩), **ಬೇರು ಬಿಳಲು** (೨೦೦೬), **ಲೋಹಿಯಾ ಸಮಾಜವಾದ ದರ್ಶನ** (೨೦೦೬), ಹಾಗೂ **ಮರಳಿ ಬರಲಿದೆ ಸಮಾಜವಾದ!** (೨೦೦೭) **ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ: ಏಕೆ ಬೇಡ** (೨೦೦೭) ಇದು ಇವರ ಇನ್ನೊಂದು ಮುಖ್ಯ ಕೃತಿ.

ಈ ಕೃತಿಗಳಲ್ಲದೆ ಡಿ.ಎಸ್.ನಾಗಭೂಷಣ ಅವರು **ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ** (೧೯೮೦), **ಕಾಡಿನ ಹುಡುಗ ಕೃಷ್ಣ:** ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ (೧೯೯೦), **ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ** (೧೯೯೧), **ಒಲವು:** ಅಂತರ್ಜಾತೀಯ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ (೧೯೯೫), **ಹಣತೆ:** ಜಿ.ಎಸ್. ಶಿವರುದ್ರಪ್ಪನವರ ಅಭಿನಂದನ ಗ್ರಂಥ (೨೦೦೧), **ಕುವೆಂಪು: ಒಂದು ಪುನರನ್ವೇಷಣೆ** (೨೦೦೫)–ಈ ಕೃತಿಗಳ ಸಂಪಾದನೆ/ಸಹಸಂಪಾದನೆಯನ್ನೂ ಮಾಡಿದ್ದಾರೆ. **ಜೆಪಿ ಸೆರೆಮನೆಯ ದಿನಚರಿ** (೧೯೭೭) ಇವರ ಅನುವಾದಿತ ಕೃತಿ.

ಸ್ವಲ್ಪ ಕಾಲ ಇವರು **ಮಾನವ** ಸಮಾಜವಾದಿ ಮಾಸಪತ್ರಿಕೆ ಹಾಗೂ **ಸಾಹಿತ್ಯ ಸಂವಾದ** ಸಾಹಿತ್ಯ ದ್ವೈಮಾಸಿಕದ ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. **ಅಭಿರುಚಿ** ಹಾಗೂ **ತಿಂಗಳು** ಇವರು ಕ್ರಮವಾಗಿ ಚಿತ್ರದುರ್ಗ ಹಾಗೂ ಮೈಸೂರಿನಲ್ಲಿ ಆರಂಭಿಸಿದ ಸಾಹಿತ್ಯಿಕ– ಸಾಂಸ್ಕೃತಿಕ ವೇದಿಕೆಗಳು. **ಕರ್ನಾಟಕ ಸಮಾಜವಾದಿ ಅಧ್ಯಯನ ವೇದಿಕೆಯ** ಸಂಚಾಲಕರೂ ಆಗಿರುವ ಡಿ.ಎಸ್. ನಾಗಭೂಷಣ, ಈ ವೇದಿಕೆಯ ಆಶ್ರಯದಲ್ಲಿ ರಾಜ್ಯಾದ್ಯಂತ ಸಂಸ್ಕೃತಿ ಹಾಗೂ ಸಮಾಜವಾದಿ ಶಿಬಿರಗಳನ್ನು ಆಯೋಜಿಸುವ ಕೆಲಸವನ್ನೂ ಮಾಡುತ್ತಿದ್ದಾರೆ.

ಡಿ.ಎಸ್. ನಾಗಭೂಷಣ

ಇದು ಭಾರತ !
ಇದು ಭಾರತ !!

ಸಮಾಜವಾದಿ ಸಂಕಥನಗಳು-೨

◆

ರೂಪ ಪ್ರಕಾಶನ

ಬಿ ೨೧, ಮಹಡಿ, ಮಲ್ಲಿಗೆ ರಸ್ತೆ,
ಕುವೆಂಪುನಗರ
ಮೈಸೂರು- ೫೭೦ ೦೨೩

IDU BHARATA! IDU BHARATA!! (This is India! This is India!!) - a weekly column for *Vikrantha Karnataka*, a Kannda weekly by **D.S. Nagabhushana**, HIG-5, 'Nudi', KHB Colony, Kallahally Extension, Vinoba Nagara, Shivamogga-577 204 Ph: 08182-248574, 94492 42284.

Published by: **Roopa Prakashana,** No. B 21, Upstair, Mallige Road, Mysore-570 023. Ph: 93422 74331

Cover and book designed by: **N.S.Shankar**
First Impression: **2008**
Printed at: **Dharani Printers,** Bengalooru
Paper: **Weightless maplitho 70 gsm**
Pages: **296**
Price: **Rs.150**

ಇದು ಭಾರತ ! ಇದು ಭಾರತ !!
('ವಾರದ ಒಳನೋಟ' ಅಂಕಣಗಳ ಸಂಗ್ರಹ)
ಲೇಖಕ: ಡಿ.ಎಸ್. ನಾಗಭೂಷಣ
ಪ್ರಕಾಶಕರು: ರೂಪ ಪ್ರಕಾಶನ, ಮೈಸೂರು- ೫೭೦ ೦೨೩
ರಕ್ಷಾಪುಟ ಮತ್ತು ಪುಸ್ತಕ ವಿನ್ಯಾಸ: ಎನ್.ಎಸ್. ಶಂಕರ್
ಮೊದಲ ಮುದ್ರಣ: ೨೦೦೮
ಮುದ್ರಣ: ಧರಣಿ ಪ್ರಿಂಟರ್ಸ್, ಬೆಂಗಳೂರು
ಮುದ್ರಣ ಕಾಗದ: ಹಗುರ ಎಸ್‌ಎಸ್ ಮ್ಯಾಪ್‌ಲಿಥೊ ೭೦ ಜಿಎಸ್‌ಎಂ
ಪುಟಗಳು: ೨೯೬
ಬೆಲೆ: ೧೫೦ ರೂಪಾಯಿ

ಮಾಚನಹಳ್ಳಿಯ ನನ್ನಮ್ಮ
ಅನಕ್ಷರಸ್ಥೆ ಗೌರಮ್ಮನ
ಪ್ರಚಂಡ ಬುದ್ಧಿಮತ್ತೆ ಮತ್ತು ಅನುಪಮ ಭಾಷಾ ಸಾಮರ್ಥ್ಯಕ್ಕೆ
ನಮಿಸುತ್ತಾ

ಈ ಅರ್ಪಣೆ

ಲೇಖಕನ ಮಾತು

ಇದು ನಾನು ಕಳೆದ ಒಂದು ವರ್ಷದ ಕಾಲ 'ವಿಕ್ರಾಂತ ಕರ್ನಾಟಕ' ವಾರಪತ್ರಿಕೆಗೆ ಬರೆದ ಲೇಖನಗಳ ಸಂಗ್ರಹ. ಇವುಗಳಲ್ಲಿ ಒಂದೆರಡನ್ನು ಬಿಟ್ಟರೆ, ಮಿಕ್ಕವೆಲ್ಲವೂ ಈ ಪತ್ರಿಕೆಯಲ್ಲಿ 'ವಾರದ ಒಳನೋಟ' ಶೀರ್ಷಿಕೆಯಡಿ ಬರೆದ ಅಂಕಣ ಬರಹಗಳು. ಹಾಗಾಗಿ ಈ ಲೇಖನಗಳಲ್ಲಿ ಆಯಾ ವಾರದ (ಸಂಚಿಕೆಯ ದಿನಾಂಕಗಳನ್ನು ಪ್ರತಿ ಲೇಖನದ ಕೊನೆಯಲ್ಲಿ ನೀಡಲಾಗಿದೆ) ಮುಖ್ಯ ಸುದ್ದಿಗಳೇ ವಿಶ್ಲೇಷಣೆಗೆ ಒಳಗಾಗಿರುವುದು ಸಹಜವೇ ಆಗಿದೆ. ಆದರೆ, ಈ ಲೇಖನಗಳು ಇಂತಹ ವಿಶ್ಲೇಷಣೆಯ ಮೂಲಕವೇ ತಮ್ಮ ತತ್ಕಾಲೀನತೆಯುನ್ನು ದಾಟಿ ಒಂದು ಸ್ಪಂದನಶೀಲ ತಾತ್ವಿಕತೆಯೆಡೆಗೆ ತುಡಿಯುವುದನ್ನೂ ಓದುಗರು ಗಮನಿಸಬಹುದು. ಹಾಗೆ ನೋಡಿದರೆ ಈ ತಾತ್ವಿಕತೆಯೇ ಈ ಎಲ್ಲ ವಿಶ್ಲೇಷಣೆಗಳಿಗೆ ಸ್ಫೂರ್ತಿಯೂ, ನೆಲೆಗಟ್ಟೂ ಆಗಿದೆ. ಹಾಗಾಗಿಯೇ ಇವು ಸಮಾಜವಾದಿ ಸಂಕಥನಗಳು ಕೂಡಾ ಎನ್ನಿಸಿಕೊಂಡಿವೆ. ಇಂತಹ ಸಮಾಜವಾದಿ ಸಂಕಥನಗಳ ಸಂಗ್ರಹವೊಂದನ್ನು ಈಗಾಗಲೇ 'ಬೇರು ಬಿಳಲು' ಶೀರ್ಷಿಕೆಯಡಿ ನಾನು ಎರಡು ವರ್ಷಗಳ ಹಿಂದೆ ಪ್ರಕಟಿಸಿದ್ದೆನಾದ್ದರಿಂದ, ಇದು ನನ್ನ ಇಂಥ ಸಂಕಥನಗಳ ಎರಡನೇ ಭಾಗವಾಗಿದೆ.

ತತ್ಕಾಲೀನ ವಿಷಯಗಳ ವಿಶ್ಲೇಷಣೆಯ ಜೊತೆಜೊತೆಗೇ ಜಾಗತೀಕರಣದ ಪ್ರಭಾವದಲ್ಲಿ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ರಾಜಕಾರಣ ಬದಲಾಗುತ್ತಿರುವ ಪರಿಯನ್ನು ಪರಿಶೀಲಿಸುವ ಮೂಲಕ; ನಾವು ನಮ್ಮ ವ್ಯಕ್ತಿತ್ವದ ಮೂಲ ಮಾತೃಕೆಗಳನ್ನೇ ಕಳೆದುಕೊಂಡು ಖೊಟ್ಟಿಯಾಗುತ್ತಿದ್ದೇವೇನೋ ಎಂಬ ನನ್ನಲ್ಲೇ ಹುಟ್ಟಿದ ಭಯ- ಅನುಮಾನಗಳಿಗೆ ಮುಖಾಮುಖಿಯಾಗುವ ಪ್ರಯತ್ನವೂ ಈ ಲೇಖನಗಳಲ್ಲಿದೆ ಎಂದು ನಾನು ಭಾವಿಸಿದ್ದೇನೆ. ಜೊತೆಗೆ, ಕಳೆದೊಂದು ವರ್ಷದಲ್ಲಿ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರದ ಹೆಸರಿನಲ್ಲಿ ನಡೆದ- ಹಿಂದೆಂದೂ ಕಾಣದಂತಹ- ಅತ್ಯಂತ ರೂಕ್ಷ ಹಾಗೂ ಹೇಯ ರಾಜಕಾರಣದ ಹಿಂದಿನ ತಾತ್ವಿಕ ದಿವಾಳಿಕೋರತನ ಸೂಚಿಸುವ ರಾಜಕೀಯ ಶೀಲದ ಅವನತಿಯ ಕಾರಣಗಳನ್ನು ಗುರುತಿಸುವ ಪ್ರಯತ್ನಗಳನ್ನೂ ಇಲ್ಲಿ ಅಗತ್ಯ ನಿಷ್ಠುರತೆಯಿಂದಲೇ ಮಾಡಿದ್ದೇನೆ ಎಂದುಕೊಂಡಿದ್ದೇನೆ. ಈ ಪುಸ್ತಕದ ಬಗ್ಗೆ ಇನ್ನು ಹೆಚ್ಚು ಹೇಳಿದರೆ, ಈ ಲೇಖನಗಳ ಓದಿನ ಸ್ವಾರಸ್ಯವನ್ನು ನಾನೇ ಕಳೆದಂತಾದೀತು! ಒಟ್ಟಾರೆ ಇಲ್ಲಿನ ಲೇಖನಗಳು ಕಳೆದೊಂದು ವರ್ಷದ ಸಾಮಾಜಿಕ-ಆರ್ಥಿಕ- ಸಾಂಸ್ಕೃತಿಕ- ರಾಜಕೀಯ ವಿದ್ಯಮಾನಗಳ ವಿಶ್ಲೇಷಣಾತ್ಮಕ ಪ್ರಸ್ತುತಿಗಳು ಎಂದು ಹೇಳಬಹುದೇನೋ....

ಇದನ್ನು ನನ್ನಿಂದ ಆಗು ಮಾಡಿಸಿದ ಶ್ರೇಯಸ್ಸು ಇಬ್ಬರಿಗೆ ಸಲ್ಲಬೇಕು. 'ವಿಕ್ರಾಂತ ಕರ್ನಾಟಕ'ದ ಮೂಲ ಸಂಸ್ಥಾಪಕರಾದ ಕಿರಿಯ ಗೆಳೆಯ ರವಿಕೃಷ್ಣಾ ರೆಡ್ಡಿಯವರು ವರ್ಷದ ಹಿಂದೊಮ್ಮೆ ಅಮೆರಿಕಾದಿಂದ ಬಂದಿದ್ದಾಗ, ಶಿವಮೊಗ್ಗದ ನಮ್ಮ ಮನೆಯವರೆಗೂ ಬಂದು ತಮ್ಮ ಪತ್ರಿಕೆಗೆ ನಿಯಮಿತವಾಗಿ ಬರೆಯಲು ಪ್ರೀತಿಪೂರ್ವಕವಾಗಿ ಆಗ್ರಹಿಸಿದರು. ಪ್ರತಿವಾರ ನಿಯಮಿತವಾಗಿ ಬರೆಯುವುದು ನನ್ನಿಂದ ಸಾಧ್ಯವೇ ಎಂಬ ಅನುಮಾನದಲ್ಲಿ ನಾನು ಅಂಕಣವನ್ನು ಆರಂಭಿಸಿದಾಗ, ಪತ್ರಿಕೆಯ ಗೌರವ ಸಂಪಾದಕರಾದ ರವೀಂದ್ರ ರೇಷ್ಮೆಯವರು ತಮ್ಮ ಮೆಚ್ಚುಗೆಯ ಹಾಗೂ ಪ್ರೋತ್ಸಾಹದ ಮಾತುಗಳಿಂದ ನನ್ನಲ್ಲಿ ವಿಶ್ವಾಸ ತುಂಬಿದರು. ಅಷ್ಟೇ ಅಲ್ಲ, ರೇಷ್ಮೆಯವರ ವಿಚಾರಗಳ ವಿರುದ್ಧವೇ ನಾನು ಕೆಲವು ಬಾರಿ ಅನಿವಾರ್ಯವಾಗಿ ಬರೆಯಬೇಕಾಗಿ ಬಂದಾಗಲೂ, ಅವರು ಪ್ರಜಾತಾಂತ್ರಿಕ ಸಹನೆಯಿಂದ ಅವನ್ನು ಅವಿದ್ದ ಹಾಗೆಯೇ ಪ್ರಕಟಿಸಿ, ಪತ್ರಿಕಾಧರ್ಮದ ಮೂಲ ಪಾಠಗಳನ್ನು ಕುರಿತ ತಮ್ಮ ನಿಷ್ಠೆಯನ್ನು ಪ್ರದರ್ಶಿಸಿದ್ದಾರೆ. ಹಿಂದೊಮ್ಮೆ 'ಲಂಕೇಶ್ ಪತ್ರಿಕೆ'ಯ ಶಿಖರ ಕಾಲದಲ್ಲಿ ನನಗೂ ಮತ್ತು ರೇಷ್ಮೆಯವರಿಗೆ ಆ ಪತ್ರಿಕೆಯಲ್ಲಿ ಸಹೋದ್ಯೋಗ! ಆದರೆ ಅದು ನನ್ನ ಪಾಲಿಗೆ, ರೇಷ್ಮೆಯವರಿಗೆ ಮರೆತೇಹೋಗಿರುವಷ್ಟು ಸ್ವಲ್ಪ ಕಾಲ ಮಾತ್ರ ದಕ್ಕಿತ್ತು. ಈಗ ಎಷ್ಟೋ ವರ್ಷಗಳ ನಂತರ ಅವರ ಗೌರವ ಸಂಪಾದಕತ್ವದ ಪತ್ರಿಕೆಯಲ್ಲಿ ನಾನು ಅಂಕಣಕಾರನಾಗಿ ಮತ್ತೆ ಪತ್ರಕರ್ತನೆನಿಸಿಕೊಳ್ಳುತ್ತಿರುವುದು ನನಗೆ ಹೆಮ್ಮೆಯ ವಿಷಯವೇ ಆಗಿದೆ. ಇವರಿಬ್ಬರಿಗೂ ನನ್ನ ಕೃತಜ್ಞತೆಗಳು.

ಇನ್ನು ನಾನು ಹೀಗೆ ಪತ್ರಿಕಾ ಅಂಕಣಕಾರನಾಗಿ ಮೂಡಲು ನನ್ನ ತಪ್ಪು-ಒಪ್ಪುಗಳನ್ನೆಲ್ಲ ಸಹಿಸುತ್ತಾ ಸಹಕರಿಸಿದ ಇನ್ನಿಬ್ಬರೆಂದರೆ, ಪತ್ರಿಕೆಯ ಸಿಬ್ಬಂದಿಯಾದ ಮಲ್ಲನಗೌಡರು ಮತ್ತು ಬಸವರಾಜು ಅವರು. ಅವರೊಂದಿಗೆ ಪತ್ರಿಕೆಯ ಇತರ ಸಿಬ್ಬಂದಿಯನ್ನು ಕೂಡಾ ಇಲ್ಲಿ ನೆನೆಯಬೇಕು. ಗೆಳೆಯ ಎನ್.ಎಸ್. ಶಂಕರ್ ಈ ಪುಸ್ತಕವನ್ನು- ಇದರ ರಕ್ಷಾಪುಟವೂ ಸೇರಿದಂತೆ- ಅಚ್ಚುಕಟ್ಟಾಗಿ ವಿನ್ಯಾಸ ಮಾಡಿದ್ದಾರಲ್ಲದೆ, ಇಲ್ಲಿನ ಲೇಖನಗಳಿಗೆ ಕಿರು ಕನ್ನಡಿ ಹಿಡಿಯುವಂತಹ ಬೆನ್ನುಡಿಯನ್ನೂ ಬರೆದಿದ್ದಾರೆ. ಇವರಿಗೆ ನನ್ನ ಪ್ರೀತಿಪೂರ್ವಕ ಧನ್ಯವಾದಗಳು. ನನ್ನ ಸಮಾಜವಾದಿ ಸಂಕಥನಗಳ ಮೊದಲ ಸಂಪುಟ 'ಬೇರು ಬಿಳಲು' ಪುಸ್ತಕವನ್ನು ಪ್ರಕಟಿಸಿದ ಮೈಸೂರಿನ ರೂಪ ಪ್ರಕಾಶನದ ಗೆಳೆಯ ಯು.ಎಸ್. ಮಹೇಶ್ ಅವರೇ ಈ ಎರಡನೇ ಸಂಪುಟವನ್ನೂ ಪ್ರಕಟಿಸುತ್ತಿರುವುದು ನನಗೆ ಸಂತಸ ತಂದಿದೆ.

ಧರಣಿ ಪ್ರಿಂಟರ್ಸ್‌ನವರು ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ನಮಸ್ಕಾರಗಳು.

–ಡಿ.ಎಸ್. ನಾಗಭೂಷಣ

ಶಿವಮೊಗ್ಗ
ಮೇ ೧೦, ೨೦೦೮

ಈ ಕ್ರಮದಲ್ಲಿ

ಬಜೆಟ್ ಬೂಟಾಟಿಕೆ

ಹಿರಿಯ ಗಾಂಧಿವಾದಿ ಅರ್ಥಶಾಸ್ತ್ರಜ್ಞ ಎಲ್.ಸಿ.ಜೈನ್ ಅವರ ವಿರುದ್ಧ ಮಾನ ನಷ್ಟ ಮೊಕದ್ದಮೆ ಹೂಡುವುದಾಗಿ ನಮ್ಮ ಉಪಮುಖ್ಯಮಂತ್ರಿ ಯಡಿಯೂರಪ್ಪ ಗುಟುರು ಹಾಕಿದ್ದಾರೆ. ಇಂತಹವರಿಗೆ ಒಮ್ಮೆ ಶಿಕ್ಷೆಯಾದರೆ, ಅದು ಇನ್ನು ಮುಂದೆ ಆಧಾರರಹಿತ ಮಾತುಗಳನ್ನಾಡುವವರಿಗೆ ಎಚ್ಚರಿಕೆಯಾಗುತ್ತದೆ ಎಂದಿದ್ದಾರೆ ಅವರು. ಆದರೆ ಆಧಾರರಹಿತ ಬಜೆಟ್ ಮಂಡಿಸುವವರಿಗೆ ಏನು ಶಿಕ್ಷೆ ಮತ್ತು ಎಚ್ಚರಿಕೆ ಎಂದು ಮಾತ್ರ ಅವರು ಹೇಳಿಲ್ಲ! ಜೈನ್ ಅವರು ಮಾಡಿರುವ ಅಪರಾಧವೆಂದರೆ, ಹೋದ ವರ್ಷದ ಬಜೆಟ್ಟಿನ ವಿವಿಧ ಬಾಬ್ತುಗಳ ಖರ್ಚು ಮತ್ತು ಗುರಿ ಸಾಧನೆಯ ಚಿತ್ರ ಕೊಡದೆ, ಈ ಬಜೆಟ್ಟನ್ನು ಒಂದು ದಾನ ಪತ್ರದಂತೆ ಮಂಡಿಸಲಾಗಿದೆ ಎಂದು ಅಭಿಪ್ರಾಯ ಪಟ್ಟಿರುವುದು. ಯಡಿಯೂರಪ್ಪನವರ ಪ್ರಕಾರ ತಮ್ಮ ಬಜೆಟ್ಟನ್ನು ಕರ್ನಾಟಕದ ಮನೆ ಮನೆಯಲ್ಲೂ ಚರ್ಚಿಸುತ್ತಿರುವಾಗ, ಈ ಮುದುಕ ಹೀಗೆ ಟೀಕೆ ಮಾಡುತ್ತಿರುವುದು ಶಿಕ್ಷಾರ್ಹ ಅಪರಾಧವಾಗಿದೆ!

ಹಿಂದಿನ ಯಾವ ಸರ್ಕಾರವೂ ಯೋಚನೆ ಕೂಡಾ ಮಾಡದ ಸಾರಾಯಿ ನಿಷೇಧ ಹಾಗೂ ಲಾಟರಿ ನಿಷೇಧಗಳಂತಹ ದಿಟ್ಟ ನಿರ್ಧಾರಗಳನ್ನು ಪ್ರಕಟಿಸಿರುವ ಯಡಿಯೂರಪ್ಪ ಖಂಡಿತ ಅಭಿನಂದನಾರ್ಹರಾಗಿದ್ದಾರೆ. ಆದರೆ, ಈ ನಿರ್ಧಾರಗಳನ್ನು ಕಳ್ಳಭಟಿ ಹಾಗೂ ಮಟ್ಕಾ ಚಟುವಟಿಕೆಗಳು ತಲೆ ಎತ್ತದಂತೆ ಕಟ್ಟುನಿಟ್ಟಾಗಿ ಜಾರಿ ಮಾಡಿದಾಗ ಮಾತ್ರ ಯಡಿಯೂರಪ್ಪ, ಈ ಸಂಬಂಧ ಜನತೆಯ ಪೂರ್ಣ ಅಭಿನಂದನೆಗೆ ಪಾತ್ರರಾಗಬಹುದಾಗಿದೆ. ಏಕೆಂದರೆ, ಈ ನಿರ್ಧಾರಗಳನ್ನು ಸರ್ಕಾರವು ಕರ್ನಾಟಕದ ಒಟ್ಟಾರೆ ಅಭಿವೃದ್ಧಿಯ ದೃಷ್ಟಿಯಿಂದ ಕೈಗೊಂಡಿದೆಯೋ ಅಥವಾ ಅಗ್ಗದ ಜನಪ್ರಿಯತೆಯ ವೋಟಿನ ರಾಜಕಾರಣದ ದೃಷ್ಟಿಯಿಂದ ಕೈಗೊಂಡಿದೆಯೋ ಎಂದು ಅನುಮಾನ ಪಡುವ ರೀತಿಯಲ್ಲಿ ಅವನ್ನು ಅವರು ಚಿಂದಿಚಿಂದಿಯಾಗಿ ಮಂಡಿಸುವ ಮೂಲಕ ತಮ್ಮ ಈ ವರ್ಷದ ಬಜೆಟ್ ಕಲ್ಪನೆಯನ್ನೇ ಚಿಂದಿ ಚಿಂದಿ ಮಾಡಿರುವುದು ವಿಷಾದಕರವೂ, ರಾಜ್ಯದ ಸುಸ್ಥಿರ ಅಭಿವೃದ್ಧಿಯ ದೃಷ್ಟಿಯಿಂದ ಆಘಾತಕರವೂ ಆಗಿದೆ. ಬಜೆಟ್ ಮಂಡಿಸಿದ ಹತ್ತು ದಿನಗಳಲ್ಲೇ, ಬಜೆಟ್ ಮೇಲಿನ ಚರ್ಚೆಗೆ

ಉತ್ತರ ಕೊಡುವ ಕೊನೆಯ ಘಟ್ಟದಲ್ಲೂ ಸಂಪುಟದ ಪೂರ್ವಾನುಮತಿಯಿಲ್ಲದೆಯೇ ಪ್ರಕಟಿಸಿದ ೨೦೫ ಕೋಟಿ ರೂಪಾಯಿಗಳ ಹೊಸ ಯೋಜನೆಗಳು ಸೇರಿದಂತೆ, ಮೂಲ ಬಜೆಟ್ಟಿನ ಗಾತ್ರದ ಕಾಲು ಭಾಗದಷ್ಟು ಪೂರಕ ಅಂದಾಜು ವೆಚ್ಚಗಳನ್ನು ನಮ್ಮ ಉಪ ಮುಖ್ಯಮಂತ್ರಿಯವರು ಸದನದ ಮುಂದೆ ಮಂಡಿಸಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ ಸುಮಾರು ಸಾವಿರದ ಐನೂರು ಕೋಟಿ ರೂಪಾಯಿಗಳ ಪೂರಕ ಬೇಡಿಕೆಗಳನ್ನು ಗಣನೆಗೆ ತೆಗೆದುಕೊಂಡರೆ, ಇದೊಂದು ಬೃಹತ್ ಆರ್ಥಿಕ ಅಶಿಸ್ತಿನ ಐತಿಹಾಸಿಕ ದಾಖಲೆಯೇ ಸರಿ. ಬಜೆಟ್ಟಿನ ಹೆಸರಿನಲ್ಲಿ ಈಗ ನಡೆದಿರುವುದು ಕ್ಷೇತ್ರ– ಮಾಹಿತಿ, ಚರ್ಚೆ, ಕಾರ್ಯಸಾಧುತ್ವದ ಆರ್ಥಿಕ ಪರಿಶೀಲನೆ ಮುಂತಾದ ಯಾವುದೇ ಪೂರ್ವಭಾವಿ ಆಡಳಿತಾತ್ಮಕ ಔಪಚಾರಿಕತೆ ಅಥವಾ ದೃಢೀಕರಣಗಳಿಲ್ಲದೆ, ಅರ್ಥಮಂತ್ರಿಯೇ ಸರ್ಕಾರವೆಂಬಂತೆ ತಮ್ಮ ಅಥವಾ ತಮ್ಮ ರಾಜಕೀಯ ಅನುಯಾಯಿಗಳ ಮನಸ್ಸಿಗೆ ಸರಿಕಂಡ ಯೋಜನೆ– ಕಾರ್ಯಕ್ರಮಗಳಿಗೆ ಸಾರ್ವಜನಿಕ ಬೊಕ್ಕಸದಿಂದ ಹಣ ಹಂಚುವ ಹುಚ್ಚಾಟವಾಗಿದೆ.

ನೈಸರ್ಗಿಕ ಅನಾಹುತ ಅಥವಾ ಅನಿರೀಕ್ಷಿತ ಅಶಾಂತಿ ಸಂದರ್ಭದ ಕಾನೂನು ಪಾಲನೆ ಮುಂತಾದ ತುರ್ತು ಅಗತ್ಯಗಳಿಗೆ ೫ ಕೋಟಿ ರೂಪಾಯಿಗಳವರೆಗೆ ಪೂರಕ ಅಂದಾಜು ವೆಚ್ಚ ಮಂಡಿಸುವ ಅಧಿಕಾರ ಅರ್ಥಮಂತ್ರಿಗಿದೆ. ಆದರೆ ಯಡಿಯೂರಪ್ಪ ಈಗ ಮಂಡಿಸಿರುವುದು, ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ ಪೂರಕ ಅಂದಾಜು ವೆಚ್ಚ! ಅದೂ ಯಾವುದಕ್ಕಾಗಿ? ಬಹುಪಾಲು ವಿವಿಧ ಜಾತಿ ಸಂಘ– ಸಂಸ್ಥೆಗಳ ಹಾಗೂ ಖಾಸಗಿ ಒಡೆತನದಲ್ಲಿ ಜಾತೀಯತೆಯ ಗೂಡುಗಳಾಗಿ ಕೊಬ್ಬಿರುವ ವಿವಿಧ ಸಾಹಿತ್ಯಕ– ಸಾಂಸ್ಕೃತಿಕ ಪ್ರತಿಷ್ಠಾನಗಳ 'ಅಭಿವೃದ್ಧಿ'ಗೆ! ಇಂತಹ 'ಅಭಿವೃದ್ಧಿ'ಯ ಜೊತೆಗೆ ಕೆಲವು ಸಾರ್ವಜನಿಕ ಸಂಸ್ಥೆಗಳ ಅಭಿವೃದ್ಧಿಗೂ ಹಣ ಪ್ರಕಟಿಸಲಾಗಿದೆಯಾದರೂ, ಇದನ್ನು ಬಜೆಟ್‌ನ ಅವಿಭಾಜ್ಯ ಅಂಗವಾಗಿ ಪ್ರಕಟಿಸದೆ, ಪೂರಕ ಅಂದಾಜು ವೆಚ್ಚದ ರೂಪದಲ್ಲಿ ಪ್ರಕಟಿಸುವ ಉದ್ದೇಶವಾದರೂ ಏನು? ಇದು ತಾವು ಅರ್ಥಮಂತ್ರಿಯಾಗಿ ವೈಯುಕ್ತಿಕ ಆಸಕ್ತಿ ವಹಿಸಿ ಕೊಟ್ಟಿರುವ ಹಣವೆಂದು ಪ್ರತಿಬಿಂಬಿಸುವುದೇ ಇದರ ಉದ್ದೇಶವಾಗಿದೆ ಎಂಬುದು ಸ್ಪಷ್ಟ. ಸಮ್ಮಿಶ್ರ ಸರ್ಕಾರದ ಜೆ.ಡಿ.ಎಸ್. ಭಾಗವನ್ನು ಮಂಗ ಮಾಡ ಹೊರಟಿರುವ ಈ ಬಿ.ಜೆ.ಪಿ. ಪಕ್ಷ ರಾಜಕಾರಣದ ಪ್ರಯತ್ನ, ಒಟ್ಟಾರೆ ರಾಜ್ಯದ ಪ್ರಗತಿಯ ಗತಿಯನ್ನೇ ಭಂಗಗೊಳಿಸಿದೆ. ಸರ್ಕಾರದ ಎಲ್ಲ ಖರ್ಚಿನ ಬಾಬತ್ತುಗಳೂ, ಸರ್ಕಾರ ಸಕಲ ದಾಖಲೆ ಹಾಗೂ ಅವುಗಳ ಪರಿಶೀಲನೆಯ ಆಧಾರದ ಮೇಲೆ ರೂಪಿಸಿದ ಪ್ರಗತಿ ಚಿತ್ರದ ಭಾಗವಾಗಿ ಮಂಡಿತವಾಗಬೇಕು. ಆಗ ಮಾತ್ರ ಪ್ರಗತಿಯ ದಿಕ್ಕು ಹಾಗೂ ಗುಣಮಟ್ಟ ಸ್ಪಷ್ಟ ಹಾಗೂ ನಿರ್ದಿಷ್ಟವಾಗುತ್ತದೆ. ಆದರೆ ಈ ಬಜೆಟ್ ಹಾಗೂ ಅದರ ಪೂರಕ ಅಂದಾಜು ವೆಚ್ಚಗಳು, ಒಂದಕ್ಕೊಂದು ಸಂಬಂಧವಿಲ್ಲದಂತೆ ತೋರುವ ಬಾಬತ್ತುಗಳಿಗೆ ನಿಗದಿಯಾಗಿ, ಪ್ರಗತಿ ನಕ್ಷೆಯ ವಿಕಾಸಕ್ಕೆ ಬಹು ಮುಖ್ಯವೆನಿಸುವ ಗುರಿ ಸಾಧನೆ ಹಾಗೂ ಗುಣಮಟ್ಟ ಪರಿಶೀಲನೆಯ ಕೆಲಸವನ್ನೇ ಅಪ್ರಸ್ತುತಗೊಳಿಸಿದೆ. ಇದನ್ನೇ ಜೈನ್‌ರಂತಹವರು ಪ್ರಶ್ನಿಸಿ, ಮಾನನಷ್ಟ ಮೊಕದ್ದಮೆಯ ಬೆದರಿಕೆಗೆ ಒಳಗಾಗಿರುವುದು.

ಸಮಾಜದ ಎಲ್ಲ ಜಾತಿ- ವರ್ಗಗಳ ಪರಸ್ಪರ ಅಂತರಗಳನ್ನು ನಿವಾರಿಸಿಕೊಳ್ಳುತ್ತಾ ಹೋಗುವ ರೀತಿಯಲ್ಲಿ ಇಡೀ ರಾಜ್ಯವನ್ನು ಒಂದು ಸಾಮಾನ್ಯ ಪ್ರಗತಿ ತಾತ್ವಿಕತೆಯ ಬಂಧದಲ್ಲಿ ಒಗ್ಗೂಡಿಸಿಕೊಂಡು ಮುನ್ನಡೆಸಬೇಕಾದ ಬಜೆಟ್, ಈಗ ವಿವಿಧ ಜಾತಿ- ವರ್ಗಗಳ, ಖಾಸಗಿ ಹಿತಾಸಕ್ತಿಗಳ ಪೋಷಣೆಗೆ ಹೊರಡುವ ಮೂಲಕ ನಮ್ಮ ಎಲ್ಲ ಸಾಮಾಜಿಕ ಅನಿಷ್ಟಗಳಿಗೂ ಮೂಲ ಕಾರಣವಾಗಿರುವ ಸಾಮಾಜಿಕ ಪ್ರತ್ಯೇಕತೆಗಳನ್ನು ಮಾನ್ಯ ಮಾಡುವುದಷ್ಟೇ ಅಲ್ಲ, ನಿರ್ಲಜ್ಜವಾಗಿ ಬೆಂಬಲಿಸ ಹೊರಟಿದೆ. ಸಿದ್ಧಗಂಗಾ ಶ್ರೀಗಳಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಕೊಟ್ಟು ಸಾರ್ಥಕ ಕೆಲಸ ಮಾಡಿದ ಸರ್ಕಾರ, ಅವರ ಮಠದ ಅಭಿವೃದ್ಧಿಗೆಂದು ಹತ್ತು ಕೋಟಿ ರೂಪಾಯಿಗಳಿಗೂ ಮೀರಿ ಧನ ಸಹಾಯ ಘೋಷಿಸಿ ಆ ಸಾರ್ಥಕತೆಯ ರುಚಿಯನ್ನೇ ಕೆಡಿಸಿದೆ. ಹಾಗೇ, ಜಾತಿ ಬಂಧಿತವಾದ ಮಠವೊಂದು ಆಯೋಜಿಸಿರುವ ಗೋರಕ್ಷಾ ಸಮ್ಮೇಳನಕ್ಕೆಂದೂ, ವಿವಿಧ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆಂದೂ ಮತ್ತು ವಿವಿಧ ಜಾತಿಗಳ ಭವನಗಳಿಗೆಂದೂ ಕೋಟ್ಯಾಂತರ ರೂಪಾಯಿಗಳ ಹಣ ಪ್ರಕಟಿಸಿ,ಈ ಸರ್ಕಾರ ಪ್ರಗತಿಯ ಅರ್ಥವನ್ನೇ ವಿಕ್ಷಿಪ್ತಗೊಳಿಸಿದೆ. ಜನತೆಯ ಬದುಕನ್ನು ಹಸನು ಮಾಡಲು ಬೇಕಾದ ಮೂಲ ಸೌಲಭ್ಯಗಳನ್ನು ಒದಗಿಸುವ ಅಭಿವೃದ್ಧಿ ಪರಿಕಲ್ಪನೆಯನ್ನು ಈ ಸರಕಾರ ಪೂರ್ಣವಾಗಿ ವಿಶ್ವಬ್ಯಾಂಕ್ ಮತ್ತಿತರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಸುಪರ್ದಿಗೊಪ್ಪಿಸಿ, ತನ್ನನ್ನು ಇಂತಹ ದಾನ- ಧರ್ಮದ ಕೆಲಸಗಳಿಗೆ ಸೀಮಿತಗೊಳಿಸಿಕೊಂಡಂತಿದೆ!

ಇಂತಹ ವಾತಾವರಣದಲ್ಲಿ ಸಹಜವಾಗಿಯೇ ತರುಣಸಾಗರ ಮುನಿಯಂತಹವರು ಜಾತಿ ವ್ಯವಸ್ಥೆಯ ಮೇಲು ಕೀಳುಗಳನ್ನು ಸಮರ್ಥಿಸುತ್ತ ಸಾರ್ವಜನಿಕ ಪ್ರವಚನ ನೀಡುವ ಹಾಗೂ ಭೈರಪ್ಪನಂತಹವರು ಕಾದಂಬರಿ ರಚನೆಯ ಹೆಸರಿನಲ್ಲಿ, ಈಗಾಗಲೇ ಹದಗೆಟ್ಟಿರುವ ಹಿಂದೂ- ಮುಸ್ಲಿಂ ಕೋಮು ಸಂಬಂಧವನ್ನು ಇನ್ನಷ್ಟು ಹದಗೆಡಿಸುವಂತಹ 'ಆವರಣ'ದಂತಹ ಕಗ್ಗವನ್ನು ಹೊಸೆಯುವ ಧೈರ್ಯ ಮಾಡುತ್ತಾರೆ. ಇವರ ವಿರುದ್ಧ ಯಾರೂ ಮಾನನಷ್ಟ ಮೊಕದ್ದಮೆ ಹೂಡುವುದಿಲ್ಲ. ಏಕೆಂದರೆ, ಬಲಿಷ್ಠ ಜಾತಿಯ ಮಠಾಧೀಶರೊಬ್ಬರು ಅರಣ್ಯ ಒತ್ತುವರಿ ಆರೋಪ ಎದುರಿಸುತ್ತಿದ್ದಾರೆ ಎಂದು ಗೊತ್ತಾದ ಮರು ಬೆಳಿಗ್ಗೆಯೇ, ಮುಖ್ಯಮಂತ್ರಿಯೂ ಸೇರಿದಂತೆ, ಆ ಜಾತಿಗೆ ಸೇರಿದ ಘಟಾನುಘಟಿ ಮಂತ್ರಿಗಳೆಲ್ಲರೂ ಆ ಮಠಾಧೀಶರ ಬಳಿ ಸಾಗಿ ಕಾಲಿಗೆ ಬಿದ್ದು ಕ್ಷಮೆ ಕೋರುವಂತಹ ನಿರ್ಲಜ್ಜ ಹಾಗೂ ಭಂಡ ರಾಜನೀತಿಗೆ ಸಿಕ್ಕಿರುವ ಇಂದಿನ ಕರ್ನಾಟಕ, ಎಲ್ಲ ಸಾಮಾಜಿಕ ಸೂಕ್ಷ್ಮಗಳನ್ನೂ ಕಳೆದು ಕೊಂಡಂತಿದೆ. ಇಂತಹ ಸ್ಥಿತಿಯಲ್ಲಿರುವ ಕರ್ನಾಟಕವನ್ನು ಕಾಪಾಡುವವರಾದರೂ ಯಾರು? ಕಾಂಗ್ರೆಸ್ಸಿಗರಂತೂ ಅಲ್ಲ. ಏಕೆಂದರೆ ಅವರೇ ತಮ್ಮ ಅವಕಾಶವಾದಿ ಅಧಿಕಾರ ರಾಜಕಾರಣದ ಮೂಲಕ ಕರ್ನಾಟಕದ ಈ ಸ್ಥಿತಿಗೆ ಕಾರಣರಾಗಿರುವವರು.

ಏಪ್ರಿಲ್ ೧೩, ೨೦೦೭

ರಾಜ್‌ಕುಮಾರ್ ಎಂಬ ಪವಾಡ

ಐವತ್ತು ವರ್ಷಗಳ ಹಿಂದೆ ಕನ್ನಡ ರಾಜ್ಯೋದಯವಾದಾಗ ಕನ್ನಡಿಗರು ಕಂಡ ಕನಸುಗಳು ಹಲವಾರು. ಹರಿದು ಹಂಚಿಹೋಗಿದ್ದ ಕನ್ನಡದ ಜನ ನೂರಾರು ವರ್ಷಗಳ ನಂತರ ಮತ್ತೆ ಒಂದಾದ ಸಂದರ್ಭದಲ್ಲಿ ಕನ್ನಡದ ಹೆಸರಿನಲ್ಲಿ ಹೊಸ ಉತ್ಸಾಹ ತಾಳಿದರು. ಏಕೆಂದರೆ, ಕನ್ನಡವೆಂಬುದು ಆಗ ಕೇವಲ ಒಂದು ಭಾಷೆಯ ಹೆಸರು ಮಾತ್ರವಾಗಿರದೆ ಅದು, ಸಾವಿರಾರು ವರ್ಷಗಳ ಒಂದು ಸಾಮಾನ್ಯ ಸಂಸ್ಕೃತಿಯ ಸ್ಮೃತಿಕೋಶದ ಹಕ್ಕುದಾರಿಕೆಯುಳ್ಳ ಒಂದು ಭಾಷಾ ಸಮುದಾಯ ಮತ್ತೆ ಹೊಸ ಉತ್ಸಾಹದೊಡನೆ ಒಟ್ಟಾಗಿ, ಕನ್ನಡ ಬದುಕೆಂಬುದನ್ನು ಕಟ್ಟಿಕೊಳ್ಳುವ ಛಲದ ಪ್ರತೀಕವೂ ಆಗಿತ್ತು. ಈ ಉತ್ಸಾಹ, ಛಲಗಳಿಗೆ ಸಾಹಿತ್ಯ, ಸಂಸ್ಕೃತಿ, ರಾಜಕಾರಣ ಮುಂತಾದ ಕ್ಷೇತ್ರಗಳಿಂದ ಒತ್ತಾಸೆಯಾಗಿ ಬಂದವರು ಹಲವು ಮಹನೀಯರು. ಈ ಮಹನೀಯರ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುವ ಒಂದು ಮಹಾನ್ ವ್ಯಕ್ತಿತ್ವ ರಾಜ್‌ಕುಮಾರ್.

ವಿಶಿಷ್ಟ ಏಕೆಂದರೆ, ರಾಜ್‌ಕುಮಾರ್ ಬೇರೆ ಮಹನೀಯರಂತೆ ಒಂದು ಸಾಂಸ್ಕೃತಿಕ ಮಹತ್ವಾಕಾಂಕ್ಷೆಯಿಂದೇನೂ ಕನ್ನಡ ಜನಮನವನ್ನು ಪ್ರವೇಶಿಸಲಿಲ್ಲ. ಒಂದು ಸಾಮಾನ್ಯ ಸಾಮಾಜಿಕ, ಕೌಟುಂಬಿಕ ಹಿನ್ನೆಲೆಯಿಂದ ಬಂದ ಮೂರನೆಯ ತರಗತಿಯವರೆಗೆ ಮಾತ್ರ ಓದಿದ ಈ ಮುತ್ತುರಾಜ್, ಕರ್ನಾಟಕ ರಾಜ್ಯೋದಯ ಸಂದರ್ಭದ ಒಬ್ಬ ಸಾಮಾನ್ಯ ಕನ್ನಡಿಗನ ಪ್ರತೀಕ ಮಾತ್ರವಾಗಿದ್ದರು. ಆದರೆ ಮುಂದಿನ ಐವತ್ತು ವರ್ಷಗಳಲ್ಲಿ ಅವರು ಮುಟ್ಟಿದ ಎತ್ತರ, ಅವರನ್ನು ಕರ್ನಾಟಕದ ಒಂದು ದೊಡ್ಡ ಸಾಂಸ್ಕೃತಿಕ ಶಕ್ತಿಯನ್ನಾಗಿ ಮಾರ್ಪಡಿಸಿತ್ತು. ಆಧುನಿಕ ಕರ್ನಾಟಕವನ್ನು ಕಟ್ಟಿದ್ದು ಮೂರು ಶಕ್ತಿಗಳು: ಕುವೆಂಪು– ಕಾರಂತ– ರಾಜ್‌ಕುಮಾರ್. ಇವರಲ್ಲಿ ಒಬ್ಬೊಬ್ಬರೂ ಕನ್ನಡದ ಮನಸ್ಸಿಗೆ ಹೊಸ ಉದ್ದ– ಅಗಲ– ಎತ್ತರಗಳನ್ನು ಒದಗಿಸಿದರು.

ರಾಜ್‌ಕುಮಾರ್ ಒಬ್ಬ ಅಸಾಮಾನ್ಯ ಕಲಾವಿದ. ಆದರೆ ಈ ರೀತಿ ಅಸಾಮಾನ್ಯ ಕಲಾವಿದರೆಲ್ಲರೂ ರಾಜ್‌ಕುಮಾರ್‌ರಂತೆ ಒಂದು ಭಾಷಾ ಸಮುದಾಯದ ಅಸ್ಮಿತೆಯ ಸಂಕೇತವಾದದ್ದು ಕಡಿಮೆ. ಇದಕ್ಕೆ ಕಾರಣ, ರಾಜ್‌ಕುಮಾರ್ ಕೇವಲ ಅಸಾಮಾನ್ಯ ಕಲಾವಿದನಾಗಿ ಮಾತ್ರವಲ್ಲ, ಅಸಾಮಾನ್ಯ ಮನುಷ್ಯನಾಗಿ ಕೂಡಾ ಜನತೆಯ ಮನದಲ್ಲಿ ಬೆಳೆದದ್ದು. ನಿಜ, ಇದಕ್ಕೆ ಅವರು ಆರಿಸಿಕೊಂಡ ಚಲನಚಿತ್ರ ಮಾಧ್ಯಮದ ಜನಪ್ರಿಯತೆಯೂ ಕಾರಣವಾಯಿತು. ಆದರೆ ಅವರಂತೆ ಕನ್ನಡಕ್ಕೆ ಅರ್ಪಿಸಿಕೊಂಡ ನಟರು ಕಡಿಮೆ. ಕನ್ನಡಕ್ಕೆ ಅರ್ಪಿಸಿಕೊಂಡದ್ದು ಎಂದರೆ ಮತ್ತೆ ಭಾಷಾನಿಷ್ಠೆ ಮಾತ್ರವಲ್ಲ. ಅವರು ಕನ್ನಡ ಸಿನಿಮಾ ಭಾಷೆ ಮೂಲಕ ಕನ್ನಡ ಜನತೆಗೆ ಒಂದು ವಿಶಿಷ್ಟ ಅಭಿರುಚಿ ಹಾಗೂ ಮೌಲ್ಯ ಪ್ರಪಂಚವನ್ನು ಕಟ್ಟಿಕೊಟ್ಟರು. ಅವರ ಬಾಯಲ್ಲಿ ಕನ್ನಡ ಭಾಷೆ ಒಂದು ಹೊಸ ಶಕ್ತಿ ಹಾಗೂ ಶೋಭೆಯನ್ನು ಪಡೆದುಕೊಂಡಿತು. ಅರವತ್ತು– ಎಪ್ಪತ್ತರ ದಶಕದ ತಲೆಮಾರಿನ ಸಾಮಾನ್ಯ ಕನ್ನಡ ಜನತೆಗೆ ರಾಜ್‌ಕುಮಾರ್, ಕನ್ನಡ ಬದುಕಿನ ಅತ್ಯುತ್ತಮ ಮೌಲ್ಯಗಳ ಪ್ರತೀಕವಾಗಿದ್ದರು. ವಿಮರ್ಶೆಯಲ್ಲಿ ಅವುಗಳ ಮಿತಿ ಏನೇ ಇರಲಿ, ತಂದೆ– ಮಗ, ಗಂಡ– ಹೆಂಡತಿ, ಅಣ್ಣ– ತಮ್ಮ, ಅಣ್ಣ– ತಂಗಿ ಮುಂತಾದ ಕೌಟುಂಬಿಕ ಸಂಬಂಧಗಳಿಗೆ ಮತ್ತು ಸ್ನೇಹ, ದುಡಿಮೆ, ಮಾತು ಮುಂತಾದ ಸಾಮಾಜಿಕ ಮೌಲ್ಯಗಳಿಗೆ ತಮ್ಮ ಚಿತ್ರಗಳ ಮೂಲಕ ಒಂದು ಘನತೆ ತಂದುಕೊಟ್ಟರು. ರಾಜ್‌ಕುಮಾರ್ ಚಿತ್ರಗಳ ಮೌಲ್ಯಗಳೊಂದಿಗೆ, ಆದರ್ಶಗಳೊಂದಿಗೆ ಎರಡು– ಮೂರು ಕನ್ನಡದ ತಲೆಮಾರುಗಳು ಬೆಳೆದವು. ಹಾಗೇ ರಾಜ್‌ಕುಮಾರ್ ಕೂಡಾ ಕನ್ನಡದ ವಿವೇಕ, ವಿನಯ, ಪ್ರತಿಭೆ ಹಾಗೂ ಸ್ವಾಭಿಮಾನದ ಸಂಕೇತವಾಗಿ ಬೆಳೆದರು.

ಭಕ್ತಿ ಪ್ರಧಾನವಾದ *ಬೇಡರ ಕಣ್ಣಪ್ಪ, ಭಕ್ತ ಕನಕದಾಸ, ಸಂತ ತುಕಾರಾಂ* ಅಥವಾ *ಮಂತ್ರಾಲಯ ಮಹಾತ್ಮೆ* ಇರಲಿ, ಪುರಾಣ, ಇತಿಹಾಸ ಪ್ರಧಾನವಾದ *ರಣಧೀರ ಕಂಠೀರವ, ಸತ್ಯ ಹರಿಶ್ಚಂದ್ರ, ಕಿತ್ತೂರು ಚೆನ್ನಮ್ಮ* ಅಥವಾ *ಶ್ರೀ ಕೃಷ್ಣದೇವರಾಯ* ಇರಲಿ; ಸಾಮಾಜಿಕವಾದ *ಅಣ್ಣ ತಂಗಿ, ಕರುಣೆಯೇ ಕುಟುಂಬದ ಕಣ್ಣು, ಕಣ್ತೆರೆದು ನೋಡು, ನಾಂದಿ, ಮಣ್ಣಿನ ಮಗ, ಕಸ್ತೂರಿ ನಿವಾಸ, ಸಾಕ್ಷಾತ್ಕಾರ,* ಅಥವಾ *ಭಾಗ್ಯವಂತರುದಂತಹ* ಚಿತ್ರಗಳಿರಲಿ; ಮನರಂಜನಾ ಪ್ರಧಾನವಾದ *ಜೇಡರ ಬಲೆ, ಶಂಕರ್ ಗುರು, ಭಾಗ್ಯದ ಲಕ್ಷ್ಮಿ ಬಾರಮ್ಮ*ದಂತಹ ಚಿತ್ರಗಳಿರಲಿ, ಅವರು ತಮ್ಮ ಕಲಾ ಪ್ರೌಢಿಮೆಯ ಜೊತೆಗೆ ಸಾಂಸ್ಕೃತಿಕ ಎಚ್ಚರವನ್ನು ಮೆರೆದರು. ಕುವೆಂಪು– ಕಾರಂತರಿಲ್ಲದೆ ಕನ್ನಡ– ಕನ್ನಡ ಜನತೆ ಹೇಗೆ ಹೀಗಿರಲಾಗುತ್ತಿರಲಿಲ್ಲವೋ ಹಾಗೆ, ರಾಜ್‌ಕುಮಾರ್ ಇಲ್ಲದೆಯೇ ಕನ್ನಡ– ಕನ್ನಡ ಜನತೆ ಹೀಗಿದ್ದಂತೆ ಇರುತ್ತಿರಲಿಲ್ಲ. ಹಾಗಾಗಿ ರಾಜ್‌ಕುಮಾರ್ ಕರ್ನಾಟಕದ ಮಟ್ಟಿಗೆ ಇಪ್ಪತ್ತನೇ ಶತಮಾನದ ಉತ್ತರಾರ್ಧದ ಇತಿಹಾಸದ ಉಜ್ವಲ ತಾರೆಗಳಲ್ಲೊಬ್ಬರು.

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಪವಾಡವೇನಾದರೂ ಸಂಭವಿಸಿದ್ದರೆ, ಆ ಪವಾಡ ರಾಜಕುಮಾರರೇ. ಏಕೆಂದರೆ ಅವರು ಬಂದ ಸಾಮಾಜಿಕ ಹಿನ್ನೆಲೆ ಹಾಗೂ ಪ್ರತಿಭೆ ಮತ್ತು ಜನಮನ್ನಣೆ– ಈ ಎರಡೂ ವಿಷಯಗಳಲ್ಲಿ ಅವರು ಮುಟ್ಟಿದ ಎತ್ತರ,

ಯಾರನ್ನಾದರೂ ಬೆಕ್ಕಸ ಬೆರಗಾಗಿಸುವಂತದು. ಹಾಗೆ ನೋಡಿದರೆ ಇದು ಪ್ರಜಾಪ್ರಭುತ್ವದ ವಿಜಯ; ಕನ್ನಡ ರಾಜ್ಯೋತ್ಸವದ ಯಶಸ್ಸಿನ ಸಂಕೇತವೂ ಹೌದು. ಇಂತಹ ರಾಜ್‌ಕುಮಾರ್ ಇನ್ನಿಲ್ಲ ಎಂದರೆ ನಂಬುವುದು ಕಷ್ಟ. ಅವರು ಕನ್ನಡದ ಸ್ಮೃತಿಕೋಶದ ಅವಿಭಾಜ್ಯ ಅಂಗ. ಹಾಗಾಗಿ ಅವರಿಗೆ ಸಾವಿಲ್ಲ.

ಏಪ್ರಿಲ್ ೨೦, ೨೦೦೭

ಅವನತಿಗೊಳ್ಳುತ್ತಿರುವ ನಮ್ಮ ಸಾಮಾಜಿಕ ಚಳುವಳಿಗಳು

ಕಂಬಾಲಪಲ್ಲಿ ದೌರ್ಜನ್ಯದ ಮೊಕದ್ದಮೆಯ ಆಪಾದಿತರೆಲ್ಲರೂ ಬಿಡುಗಡೆಗೊಂಡ ಸುದ್ದಿ ಕಳೆದೊಂದು ತಿಂಗಳಿಂದ ವಿವಿಧ ರೂಪಗಳ ಸುದ್ದಿಯಾಗಿ ಹಾರಾಡುತ್ತಿದೆ. ದಲಿತ ಸಂಘರ್ಷ ಸಮಿತಿಯ ವಿವಿಧ ಗುಂಪುಗಳ ವಕ್ತಾರರಿಂದ ಪತ್ರಿಕಾ ಹೇಳಿಕೆಗಳು, ಪ್ರತಿಭಟನೆಗಳು, ಧರಣಿ ಇತ್ಯಾದಿಗಳು ವೃತ್ತಪತ್ರಿಕೆಗಳಲ್ಲಿ ಸುದ್ದಿ ಮಾಡುತ್ತಿವೆ. ಈ ದೌರ್ಜನ್ಯವನ್ನು ರಾಷ್ಟ್ರೀಯ ಸುದ್ದಿಯಾಗಿ ಪ್ರತಿಬಿಂಬಿಸಿ, ರಾಷ್ಟ್ರೀಯ ಕರ್ತವ್ಯವೊಂದನ್ನು ಮಾಡಿದಂತೆ ಬೀಗಿದ ರಾಷ್ಟ್ರೀಯ ವಾರ್ತಾ ವಾಹಿನಿಗಳೂ, ಈಗ ತಮಗೂ ಇದಕ್ಕೂ ಸಂಬಂಧವಿಲ್ಲದಂತೆ ತೆಪ್ಪಗಾಗಿವೆ. ಇದರಲ್ಲಿ ಕೊಲೆಯಾದವರು, ಜೆಸ್ಸಿಕಾ ಲಾಲ್‌ರಂತಹ ಥಳಕು- ಬಳುಕು ಲೋಕದ ಕನ್ಯೆಯರಲ್ಲವಲ್ಲ- ಈ ಬಗ್ಗೆ ಅವು ತಮ್ಮ ಮಾಧ್ಯಮಗಳಲ್ಲಿ ಪ್ರಚಾರ ನಡೆಸಿ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು! ಸರ್ಕಾರ ಕೂಡಾ, ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಇಂಗಿತ ವ್ಯಕ್ತಪಡಿಸಿದ್ದರೂ, ಈ ದಿಸೆಯಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳುವ ತುರ್ತೇನೂ ಕಾಣಬರುತ್ತಿಲ್ಲ. ಮೇಲ್ಮನವಿ ಸಲ್ಲಿಸಿದರೂ, ಹಂಗರಹಳ್ಳಿ ಜೀತ ಪ್ರಕರಣದಂತೆಯೇ ಈ ಪ್ರಕರಣವೂ ಅಂತಿಮವಾಗಿ 'ಏನೂ ಮಾಡಲಾಗದ ಪರಿಸ್ಥಿತಿ'ಯಿಂದಾಗಿ 'ಖುಲಾಸೆ'ಯಾದರೆ ಆಶ್ಚರ್ಯವಿಲ್ಲ...

ದೌರ್ಜನ್ಯಕ್ಕೆ ಒಳಗಾದವರೇ ಪ್ರತಿಕೂಲ ಸಾಕ್ಷ್ಯ ಅಥವಾ ಹೇಳಿಕೆ ನೀಡುವ ಅಸಹಾಯಕ ಸಂದರ್ಭ ಸೃಷ್ಟಿಯಾದರೆ, ನ್ಯಾಯಾಲಯಗಳಾದರೂ ಏನು ಮಾಡಿಯಾವು? ಆದರೆ ಈಚೆಗೆ ಇಂತಹ ಸಂದರ್ಭಗಳಲ್ಲಿ ನ್ಯಾಯಾಲಯ- ನ್ಯಾಯಾಧೀಶರನ್ನೇ ಟೀಕಿಸುವ ಸಾಮಾಜಿಕ ನ್ಯಾಯವಾದಿಗಳಿಗೇನೂ ನಮ್ಮಲ್ಲಿ ಕೊರತೆಯಿಲ್ಲ. ಉದಾಹರಣೆಗೆ, ಇತ್ತೀಚೆಗೆ ಸರ್ವೋನ್ನತ ನ್ಯಾಯಾಲಯವು ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೇ.೨೭ರಷ್ಟು ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ಕ್ರಮಕ್ಕೆ ತಡೆಯಾಜ್ಞೆ ನೀಡಿದ್ದಕ್ಕೆ,

ಈ ತೀರ್ಪು ನೀಡಿದ ನ್ಯಾಯಾಧೀಶರುಗಳ ಜಾತಿ ಹಿನ್ನೆಲೆಯೇ ಕಾರಣವೆಂದು ಉದಿತ್ ರಾಜ್ ಎಂಬ ಸಾಮಾಜಿಕ ನ್ಯಾಯವಾದಿಯೊಬ್ಬರು ಮೊನ್ನೆ ಟಿ.ವಿ. ಚರ್ಚೆಯೊಂದರಲ್ಲಿ ನೇರವಾಗಿ ಆಪಾದಿಸಿ, ಎಲ್ಲರನ್ನೂ ದಂಗುಬಡಿಸಿದರು. ಅಲ್ಲದೆ, ಚರ್ಚೆಯಲ್ಲಿ ಭಾಗವಹಿಸಿದ್ದ ಇತರರಿಗೆ ಮಾತನಾಡಲೂ ಅವಕಾಶ ಕೊಡದಷ್ಟು ಉದ್ವಿಗ್ನರಾಗಿ ಒಂದೇ ಸಮನೆ ಕಿರುಚಾಡಿ ಹಾಸ್ಯಾಸ್ಪದರೆನಿಸಿದರು. ಇದು ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಚಳುವಳಿ ಮುಟ್ಟಿರುವ ಅಧೋರೂಪ. ತನ್ನ ಜಾತಿಯವರ ಹೊರತಾಗಿ ಉಳಿದವರಿಂದ ನ್ಯಾಯ ಸಿಗದು ಎಂಬ ನಂಬಿಕೆಯನ್ನು ಬಿತ್ತಬಯಸುವ ಚಳುವಳಿ ಎಂತಹ ಸಮಾಜವನ್ನು ನಿರ್ಮಿಸಹೊರಟಿದೆ ಎಂದು ಊಹಿಸಿದರೇ ಭಯವಾಗುತ್ತದೆ.

ಇದಕ್ಕೆ ಮುಖ್ಯ ಕಾರಣ, ಸಮಾಜವಾದಿ ಚಳುವಳಿಯ ಅಂಗವಾಗಿ ರೂಪು ತಳೆದ ಈ ಸಾಮಾಜಿಕ ನ್ಯಾಯ ಚಳುವಳಿ, ತನ್ನ ಆರಂಭಿಕ ಯಶಸ್ಸಿನ ಮತ್ತಿನಲ್ಲಿ ಸಮಾಜವಾದವನ್ನೇ ಕೈಬಿಟ್ಟು ಹಿಡಿದು ಹೊರಟ ಅಡ್ಡದಾರಿಯೇ ಕಾರಣವಾಗಿದೆ. ಸಮಾಜವಾದ ಮುನ್ನೋಡಿದ್ದ ಜಾತಿರಹಿತ ಸಮಾಜ, ಜಾತ್ಯತೀತತೆ, ಸರಳ– ಸಭ್ಯ ಜೀವನ ಶೈಲಿ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ, ಮಿತಿಗಳುಳ್ಳ ಬದುಕಿನ ಕಲ್ಪನೆ– ಇವೆಲ್ಲವನ್ನೂ ಕೈಬಿಟ್ಟು, ತಮಗೆ ಅನ್ಯಾಯ ಮಾಡಿದುವೆಂದು ಹೇಳಲಾದ ಜಾತಿಗಳ ಸ್ಥಾನ– ಮಾನಗಳನ್ನು ಪಡೆಯುವುದನ್ನೇ ಸಾಮಾಜಿಕ ನ್ಯಾಯವೆಂದು ಪ್ರತಿಪಾದಿಸುವ ಜನಪ್ರಿಯ ರಾಜಕೀಯ ವರಸೆಗೆ ಈ ಚಳುವಳಿ ಬಲಿಯಾಯಿತು. ಇದರಿಂದಾಗಿ ಇದು, ಸಹಜವಾಗಿಯೇ ಕರ್ನಾಟಕದಲ್ಲಿನ ಇತರ ಸಾಮಾಜಿಕ ಚಳುವಳಿಗಳಾದ ದಲಿತ ಹಾಗೂ ರೈತ ಚಳುವಳಿಗಳನ್ನೂ ದಾರಿ ತಪ್ಪಿಸುವಲ್ಲಿ ಯಶಸ್ವಿಯಾಯಿತು. ಇವೆರಡೂ ಸಮಾಜವಾದಿ ಆದರ್ಶಗಳೊಂದಿಗೆ ಆರಂಭವಾಗಿದ್ದರೂ, ಅವುಗಳ ನಾಯಕರ ಕೈಮೀರಿ ಅಂತಿಮವಾಗಿ ಜಾತಿ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳುವ ಸಾಮಾಜಿಕ ವಿಭಜನಾ ಶಕ್ತಿಗಳಾಗಿ ಕೊನೆಗೊಂಡಿದ್ದನ್ನು ನಾವು ವಿಷಾದದಿಂದ ಗಮನಿಸಿದ್ದೇವೆ. ಇದರಿಂದ ಬುದ್ಧಿ ಕಲಿಯದ ನಾವು, ಶೇ. ೨೭ರ ಮೀಸಲಾತಿ ಬಗ್ಗೆ ಕೆಲವು ಸ್ಪಷ್ಟೀಕರಣಗಳನ್ನು ಕೇಳಿ ತಾತ್ಕಾಲಿಕ ತಡೆಯಾಜ್ಞೆಯನ್ನಷ್ಟೇ ನೀಡಿರುವ ನ್ಯಾಯಾಂಗದ ವಿರುದ್ಧ ಬಂದ್, ಧರಣಿ, ಪ್ರದರ್ಶನ, ಗೊತ್ತುವಳಿ ಅಂಗೀಕಾರ, ಟೀಕೆ– ಟಿಪ್ಪಣಿ ಇತ್ಯಾದಿಗಳಿಗೆ ಕೈ ಹಾಕುವ ಮೂಲಕ ಸಾಮಾಜಿಕ ನ್ಯಾಯ ಚಳುವಳಿಯ ಎಂತಹ ಹಿನ್ನಡೆಗೆ ಕಾರಣರಾಗುತ್ತಿದ್ದೇವೆ ಎಂಬುದನ್ನೇ ಅರಿಯದವರಾಗಿದ್ದೇವೆ. ನ್ಯಾಯಾಲಯ ಶೇ. ೨೭ರ ಮೀಸಲಾತಿಯನ್ನು ಈಗಾಗಲೇ ತಾತ್ವಿಕವಾಗಿ ಒಪ್ಪಿಕೊಂಡಿದೆ ಹಾಗೂ ಅದರ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಯನ್ನಷ್ಟೇ ಅದು ಕೇಳುತ್ತಿದೆ ಎಂಬುದನ್ನು ಮರೆತು, ನ್ಯಾಯಾಂಗದ ಮೇಲೇ ಜಾತೀಯತೆಯ ಆರೋಪ ಹೊರಿಸುವುದು; ನಮ್ಮ ಜಾತೀಯತೆಯ ಪ್ರದರ್ಶನ ಮಾತ್ರವಾಗುತ್ತದೆ ಎಂಬ ಪ್ರಜ್ಞೆ ನಮಗಿದ್ದರೆ ಒಳಿತು.

ಈ ಮೀಸಲಾತಿಯನ್ನು ವಿರೋಧಿಸುತ್ತಿರುವ ವಿದ್ಯಾರ್ಥಿ ಸಮೂಹವನ್ನು ನಾವು ಶತ್ರುವಂತೆ ನೋಡುವಂತಾಗಿದ್ದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿಯ ಚಿಂತನೆಯ

ಮಟ್ಟ, ಕನಿಕರ– ಸಹಾನುಭೂತಿಗಳಿಗಷ್ಟೇ ಅರ್ಹವಾದ ಆ ವಿದ್ಯಾರ್ಥಿಗಳ ಚಿಂತನೆಯ ಮಟ್ಟಕ್ಕಿಂತ ಮೇಲೇರಿಲ್ಲವೆಂದೇ ಅರ್ಥ. ಒಂದು ಚಳುವಳಿ ಸಾಮಾಜಿಕ ಚಳುವಳಿ ಅನ್ನಿಸಿಕೊಳ್ಳಬೇಕಾದರೆ, ಅದು ಜಾತಿ– ವರ್ಗಗಳನ್ನು ಮೀರಿ ಇಡೀ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡು ತನ್ನ ತಾತ್ವಿಕತೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ ಹಾಗೂ ಅದರ ಆಧಾರದ ಮೇಲೆ ತನ್ನ ಹೋರಾಟವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಸಾಮಾಜಿಕ ನ್ಯಾಯ ಚಳುವಳಿ ಸಮಾಜವಾದಿ ಚಳುವಳಿಯ ಅಂಗವಾಗಿ ಆ ರೀತಿಯಲ್ಲೇ ಹುಟ್ಟಿತಾದರೂ, ಹಾಗೇ ಬೆಳೆಯಲಿಲ್ಲವಾದ್ದರಿಂದಲೇ ಅದು ಇತ್ತೀಚೆಗೆ ಒಂದು ವರ್ಗದ ಪ್ರಬಲ ವಿರೋಧವನ್ನು ಸತತವಾಗಿ ಎದುರಿಸುವಂತಾಗಿದೆ. ಅಂದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿ ತನ್ನ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿಲ್ಲವೆಂದೇ ನಾವು ತಿಳಿಯಬೇಕಿದೆ. ಇಂದು ನ್ಯಾಯಾಲಯ ಈ ಚಳುವಳಿಯ ಮುಂದೆ ಹಲವು ಪ್ರಶ್ನೆಗಳನ್ನಿಟ್ಟಿದ್ದರೆ, ಅದು ಈ ಚಳುವಳಿ ನಿರ್ವಹಿಸದೇ ಹೋದ ಈ ಜವಾಬ್ದಾರಿಗಳನ್ನು ತಾನು ನಿರ್ವಹಿಸಹೊರಟಿದೆ ಎಂದೇ ಅರ್ಥ. ಶೇ. ೨೭ರ ಪ್ರಮಾಣ ನಿಗದಿಗೆ ಅನುಸರಿಸಿದ ಮಾನದಂಡವೇನು ಹಾಗೂ ಮೀಸಲಾತಿಯ ಹೊರತಾಗಿ ಸಾಮಾಜಿಕ ನ್ಯಾಯ ಸಾಧನೆಗೆ ಬೇರೆ ಮಾರ್ಗಗಳಿಲ್ಲವೇ ಎಂಬ ಪ್ರಶ್ನೆಗಳನ್ನು ನ್ಯಾಯಾಲಯ ಕೇಳಿದ್ದರೆ, ಸಾಮಾಜಿಕ ನ್ಯಾಯ ಚಳುವಳಿಕಾರರು ಇದು ತಮ್ಮ ಚಳುವಳಿಯ ಗುರಿಗಳ ವಿಷದೀಕರಣ ಹಾಗೂ ಸಮರ್ಥನೆಗಾಗಿಯೇ ಎಂದು ತಿಳಿಯುವಷ್ಟು ವಿನಯವನ್ನು ಮೈಗೂಡಿಸಿಕೊಳ್ಳಬೇಕಿದೆ.

ಆದರೆ, ನಮ್ಮ ಸಾಮಾಜಿಕ ಚಳುವಳಿಯ ನಾಯಕರು ಇದನ್ನು ತಿಳಿಯಲಾಗದಷ್ಟು ಮೀಸಲಾತಿ ಮೌಢ್ಯಕ್ಕೆ ಒಳಗಾಗಿರುವುದು ಎದ್ದು ಕಾಣುತ್ತಿದೆ. ಸಾಮಾಜಿಕ ನ್ಯಾಯ ಕಲ್ಪನೆಯನ್ನು ಉದ್ಯೋಗ ಮೀಸಲಾತಿಗಷ್ಟೇ ಸೀಮಿತಗೊಳಿಸಿರುವುದರಿಂದಾಗಿ ಸೃಷ್ಟಿಯಾಗಿರುವ ಇಂತಹ ಮೌಢ್ಯದಿಂದಾಗಿಯೇ, ಜನಗಣತಿಯಲ್ಲಿ ಜಾತಿಯ ಕಾಲಂಗಾಗಿ ಒತ್ತಾಯಿಸುವ ಕಾರ್ಯಕ್ರಮದ ಅಥವಾ ಚಳುವಳಿಯ ಅಗತ್ಯವೇ ಅದಕ್ಕೆ ಈವರೆಗೆ ಹೊಳೆದಿಲ್ಲ. ಹಾಗೇ ಮೀಸಲಾತಿ ವ್ಯವಸ್ಥೆಯು, ಮೀಸಲಾತಿಯನ್ನು ಅಗತ್ಯಗೊಳಿಸಿದ ಜಾತಿವ್ಯವಸ್ಥೆಗೆ ಹೊಸ ಪಾವಿತ್ರ್ಯ ಹಾಗೂ ಮಾನ್ಯತೆಗಳನ್ನೊದಗಿಸುವ ದಾರಿ ಹಿಡಿದಿರುವ ಬಗೆಗೆ ಅದಕ್ಕೆ ಚಿಂತೆಯೂ ಇಲ್ಲದಾಗಿದೆ! ಆದುದರಿಂದ ಸಾಮಾಜಿಕ ಚಳುವಳಿಗೇನಾದರೂ ಸಾಮಾಜಿಕ ಮರ್ಯಾದೆಯ ಪರಿವೆ ಇದ್ದಲ್ಲಿ, ಅದು ನ್ಯಾಯಾಲಯವನ್ನು ಕುರುಡಾಗಿ ಟೀಕಿಸದೆ; ನ್ಯಾಯಾಲಯ ಕೇಳಿರುವ ಮಾಹಿತಿಯನ್ನು ಪೂರೈಸುವ ದಿಸೆಯಲ್ಲಿ ತುರ್ತು ಕ್ರಮ ಕೈಗೊಳ್ಳುವಂತೆ ಹಾಗೂ ಅಲ್ಲಿಯವರೆಗೆ ಮೀಸಲಾತಿಗೆ ತಾತ್ಕಾಲಿಕ ಅನುಮತಿ ನೀಡುವಂತೆ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಲು ಸರ್ಕಾರವನ್ನು ಒತ್ತಾಯಿಸಬೇಕಿದೆ.

ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯವೂ ಸಾಮಾಜಿಕ ನ್ಯಾಯ ಚಳುವಳಿಯ ಇಂತಹುದೇ ವಿಕ್ಷಿಪ್ತತೆಯ ಪರಿಣಾಮವೇ ಆಗಿದೆ. ದಲಿತರ ಆತ್ಮಗೌರವದ ಚಳುವಳಿಯಾಗಿ ಆರಂಭವಾದ ದಲಿತ ಚಳುವಳಿ, ೨೫ ವರ್ಷಗಳ ಹಿಂದೆ ಶೇಷಗಿರಿಯಪ್ಪನ ಕೊಲೆ ಪ್ರಕರಣವನ್ನು

ಹೇಗೆ ಯಶಸ್ವಿಯಾಗಿ ನಿರ್ವಹಿಸಿತೆಂಬುದನ್ನು ನೆನಪಿಸಿಕೊಂಡರೆ, ಕಂಬಾಲಪಲ್ಲಿ ಮೊಕದ್ದಮೆಯ ವೈಫಲ್ಯದ ಕಾರಣಗಳು ಹೊಳೆಯುತ್ತವೆ. ಶೇಷಗಿರಿಯಪ್ಪನ ಕೊಲೆ ಪ್ರಕರಣದ ವಿಷಯದಲ್ಲಿ ದಲಿತ ಚಳುವಳಿಗೆ ಇಡೀ ಸಮಾಜದ ಸಹಾನುಭೂತಿ ದೊರಕಿತ್ತು. ಆದರೆ, ಕಂಬಾಲಪಲ್ಲಿ ದೌರ್ಜನ್ಯದ ಹೊತ್ತಿಗೆ ದಲಿತ ಚಳುವಳಿ ಎಡ, ಬಲಗಳೆಂದು ಮಾತ್ರವಲ್ಲದೆ ವ್ಯಕ್ತಿನಿಷ್ಠ ಗುಂಪುಗಳಾಗಿ ಕೂಡ ಹಲವು ದಿಕ್ಕುಗಳಲ್ಲಿ ಒಡೆದು ಹೋಗುವ ಮೂಲಕ ರಾಜಕೀಯ ಪುಢಾರಿಗಿರಿಯ ಹಾಳು ಮಂಟಪದಂತಾಗಿ ಸಾರ್ವಜನಿಕರ ಸಹಾನುಭೂತಿ ಕಳೆದುಕೊಂಡಿತ್ತು. ಇಂತಹ ವಾತಾವರಣದಲ್ಲಿ ಈ ಸಂಬಂಧದ ಮೊಕದ್ದಮೆಯು ಕೇವಲ ಒಂದು ಸರ್ಕಾರಿ ಮೊಕದ್ದಮೆಯಾಗಿ ಪರಿವರ್ತಿತವಾಗಿ, ತಾನು ಕಾಣಬೇಕಾದ ಗತಿಯನ್ನೇ ಕಂಡಿದೆ. ಅನ್ಯಾಯಕ್ಕೊಳಗಾದವರಿಗೆ ಅಗತ್ಯ ಅಭಯ ಹಾಗೂ ರಕ್ಷಣೆ ಸಿಗದೆ, ಅವರು ಸಿಕ್ಕಿರುವ ಪರಿಹಾರದಲ್ಲಿ ಹೇಗೋ ಬದುಕಿಕೊಂಡರೆ ಸಾಕಪ್ಪಾ ಎಂಬ ಅಸಹಾಯಕತೆಗೆ ಶರಣಾಗಿ ಮೊಕದ್ದಮೆ ಬುಡಮೇಲುಗೊಂಡಿದೆ.

ಇದಕ್ಕೆ ಸರ್ಕಾರದ ಬೇಜವಾಬ್ದಾರಿತನ ಎಷ್ಟು ಕಾರಣವೋ, ದಲಿತ ಚಳುವಳಿಯ ಬೇಜವಾಬ್ದಾರಿತನವೂ ಅಷ್ಟೇ ಕಾರಣವಾಗಿದೆ. ದೌರ್ಜನ್ಯವಾದಾಗ ಹುಯಿಲೆಬ್ಬಿಸಿದ ದಲಿತ ನಾಯಕರು ಈಗ ಮತ್ತೆ ಸುದ್ದಿಯಲ್ಲಿರುವುದು ಮೊಕದ್ದಮೆ ವಿಫಲವಾದಾಗ ಹುಯಿಲೆಬ್ಬಿಸುವ ಮೂಲಕವೇ. ವರ್ಷ ಪೂರ್ತಿ ಅಂಬೇಡ್ಕರ್ ಜಯಂತಿ ಆಚರಿಸುತ್ತಾ ಸ್ವಯಂಮರುಕ ಹಾಗೂ ಅನ್ಯಾಕ್ರಮಣಗಳ ಸಂಭ್ರಮದಲ್ಲೇ ಮುಳುಗಿ ಹೋಗುತ್ತಿರುವ ಇಂದಿನ ದಲಿತ ಚಳುವಳಿಗೆ, ಅಂಬೇಡ್ಕರ್ ಜಯಂತಿ ಆಚರಣೆಗಿಂತ ಮುಖ್ಯ ಕೆಲಸ ಕಂಬಾಲಪಲ್ಲಿ ಮೊಕದ್ದಮೆಯಲ್ಲಿ ನ್ಯಾಯ ಪಡೆಯುವುದು ಎಂಬುದು ಅರ್ಥವಾದಾಗ ಮಾತ್ರ ಅದು ಮತ್ತೆ ಆತ್ಮಗೌರವದ ಚಳುವಳಿಯಾಗಬಲ್ಲುದು ಹಾಗೂ ಈಚಿನ ದಿನಗಳಲ್ಲಿ ಹೆಚ್ಚುತ್ತಿರುವ ದಲಿತ– ಸವರ್ಣೀಯ ಘರ್ಷಣೆಗಳಿಗೆ ಕಡಿವಾಣ ಹಾಕಬಹುದು. ಆದರೆ ನಮ್ಮ ಎಲ್ಲ ಸಾಮಾಜಿಕ ಚಳುವಳಿಗಳು ತಮ್ಮ ಅಂತಿಮ ಗುರಿಗಳ ಕಲ್ಪನೆಯನ್ನೇ ಕಳೆದುಕೊಂಡು ಅಲ್ಪಾವಧಿ ಲಾಭಗಳಿಗಷ್ಟೇ ಎಚ್ಚೆತ್ತುಕೊಳ್ಳುವ ಹುಯಿಲುಗಳಾಗಿ ಅವನತಿಗೊಂಡಿರುವಾಗ ಯಾರೇನು ಮಾಡಬಲ್ಲರು?

ಏಪ್ರಿಲ್ ೨೭, ೨೦೦೭

ನಾರಾಯಣಮೂರ್ತಿ ಮಾದರಿ :
ಬಾಣಲೆಯಿಂದ ಬೆಂಕಿಗೆ ?

ಕಳೆದ ವಾರದ ನನ್ನ 'ವಾರದ ಒಳನೋಟ' ಅಂಕಣದ ಬರಹ ತಲುಪಿದ ದಿನವೇ 'ವಿಕ್ರಾಂತ ಕರ್ನಾಟಕ' ಪತ್ರಿಕೆಯ ಗೌ|| ಸಂಪಾದಕರಾದ ಮಿತ್ರ ರವೀಂದ್ರ ರೇಷ್ಮೆಯವರು 'ಇನ್ಫೋಸಿಸ್'ನ ನಾರಾಯಣಮೂರ್ತಿಯವರ ಸಾಧನೆಗಳ ಬಗ್ಗೆ ನನ್ನೊಡನೆ ಸುಮಾರು ಅರ್ಧ ತಾಸು ದೂರವಾಣಿಯಲ್ಲಿ ಮಾತನಾಡಿದರು. ಆ ಮಾತುಕತೆಯ ಹೂರಣವೆಲ್ಲ ಅದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಅವರ ಮುಖಪುಟ ಲೇಖನದಲ್ಲಿ ಪ್ರಸ್ತುತಗೊಂಡಿದೆ. ರೇಷ್ಮೆಯವರು ನನ್ನೊಡನೆ ಮಾತನಾಡಿದ್ದು ಆ ಲೇಖನವನ್ನು ಬರೆಯುವ ಮುನ್ನವೋ, ಬರೆದ ನಂತರವೋ ತಿಳಿಯದು. ಆದರೆ ಅವರು ನಾರಾಯಣಮೂರ್ತಿಯವರನ್ನು ಕುರಿತ ತಮ್ಮ ನಿಲುವನ್ನು ಪರಿಶೀಲಿಸಿಕೊಳ್ಳಲು ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡಿದ್ದಲ್ಲಿ, ಅವರಿಗೆ ನಾನು ಕೃತಜ್ಞ. ಏಕೆಂದರೆ, ನಾರಾಯಣಮೂರ್ತಿಯವರನ್ನು ಕುರಿತ ನನ್ನ ನಿಲುವನ್ನು ನಾನು ಇನ್ನಷ್ಟು ಸ್ಪಷ್ಟಗೊಳಿಸಿಕೊಳ್ಳಲು ಅವರು ಈ ಮೂಲಕ ನೆರವಾಗಿದ್ದಾರೆ.

ಈ ದೂರವಾಣಿ ಮಾತುಕತೆಯಲ್ಲಿ, ರಾಷ್ಟ್ರಗೀತೆ ಗಾಯನಕ್ಕೆ ಸಂಬಂಧಿಸಿದಂತೆ ನಾರಾಯಣಮೂರ್ತಿಯವರು ನೀಡಿದ ಹೇಳಿಕೆ ಹುಟ್ಟು ಹಾಕಿರುವ ಗದ್ದಲದ ವೈಪರೀತ್ಯಗಳ ಬಗ್ಗೆ ನಮ್ಮಲ್ಲಿ ಸಹಮತ ವ್ಯಕ್ತವಾಯಿತು. ಅಂದರೆ, ನಾರಾಯಣಮೂರ್ತಿ ಮಾಡಿರುವುದು ಅಕ್ಷಮ್ಯ ಅಪರಾಧವೇನೂ ಅಲ್ಲ; ಒಮ್ಮೆ ಅವರು ಕ್ಷಮೆ ಕೋರಿದೊಡನೆ ಆ ಪ್ರಕರಣ ಮುಕ್ತಾಯವಾಗಬೇಕು. ಆದರೆ ಅದೇ ಸಮಯದಲ್ಲಿ, ಅವರಿಗೆ ಇಂತಹ ಹೇಳಿಕೆಗಳನ್ನು ಪದೇ ಪದೇ ನೀಡುವ (ಉದಾ: ಎಲ್ಲ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಲು ಆಗ್ರಹ, ಮೀಸಲಾತಿಗೆ ವಿರೋಧ, ಅಧ್ಯಕ್ಷ ಪದ್ಧತಿಯ ರಾಷ್ಟ್ರಾಡಳಿತದ ಸಲಹೆ ಇತ್ಯಾದಿ) ಧೈರ್ಯದ ಮೂಲ ಹಾಗೂ ಅವು ಹುಟ್ಟಿಸುವ ಪ್ರತಿರೋಧದಿಂದ ಅವರನ್ನು ರಕ್ಷಿಸುವ ಶಕ್ತಿಗಳ ಹಿಂದಿರುವ ರಾಜಕಾರಣದ ಬಗ್ಗೆ ನನ್ನಂತಹವರ ಕುತೂಹಲ ಇದ್ದೇ ಇದೆ. ನಾರಾಯಣಮೂರ್ತಿಯವರು ಇಂದು ಭಾರತ ಕಂಡ ಅಪರೂಪದ ಲೌಕಿಕ ಯಶಸ್ಸಿನ ಸಂಕೇತವೆಂದು ರಾಷ್ಟ್ರಾದ್ಯಂತ ಪ್ರಸ್ತುತಪಡಿಸಲ್ಪಡುತ್ತಿದ್ದಾರೆ. ಹಾಗೇ, ಈ ಯಶಸ್ಸಿನ ರುಚಿ

ನೋಡಿರುವ ನಮ್ಮ ಸಮಾಜದ ಒಂದು ವರ್ಗದ ಪಾಲಿಗೆ ಅವರು, ಭವಿಷ್ಯದ ರಾಷ್ಟ್ರ ಪ್ರಗತಿಯ ತೋರುಗೈಯಾಗಿ ಪರಿಣಮಿಸಿದ್ದಾರೆ. ಹಾಗಾಗಿ, ಈ ಪರಿಣಾಮಕ್ಕೊಂದು ನೆಲೆ ಕಾಣಿಸುವ ಪ್ರಯತ್ನವಾಗಿಯೇ ಅವರನ್ನು ರಾಷ್ಟ್ರಪತಿ ಮಾಡುವ ಸಲಹೆಗೆ (ಬಹು ಹಿಂದಿನಿಂದಲೇ) ಚಾಲನೆ ನೀಡಲಾಗಿದ್ದು; ಅದನ್ನು ಈಗ ರಾಷ್ಟ್ರಪತಿ ಚುನಾವಣೆ ಹತ್ತಿರ ಬರುತ್ತಿದ್ದಂತೆ ಚುರುಕುಗೊಳಿಸಲಾಗಿದೆ ಎಂದು ಜನ ಭಾವಿಸತೊಡಗಿದರೆ ಆಶ್ಚರ್ಯವೇನು?

ಭಾರತದ ಯಾವುದೇ ಅರ್ಹ ಪ್ರಜೆ ರಾಷ್ಟ್ರಪತಿಯಾಗುವ ಅವಕಾಶ ಸಂವಿಧಾನದಲ್ಲಿರುವಾಗ, ನಾರಾಯಣಮೂರ್ತಿಯವರನ್ನು ರಾಷ್ಟ್ರಪತಿಯನ್ನಾಗಿ ಮಾಡುವ ಪ್ರಯತ್ನಕ್ಕೆ ಯಾರದೇ ಅಡ್ಡಿ ಇರಲಾರದು. ಆದರೆ, ರಾಷ್ಟ್ರಪತಿ ಸ್ಥಾನಕ್ಕೆ ಅವರು ಅಭ್ಯರ್ಥಿಯಾಗುವುದೇ ಆದರೆ; ಯಾರ ಮತ್ತು ಯಾವ ಹಿತಾಸಕ್ತಿಗಳ ಪ್ರತಿನಿಧಿಯಾಗಿ ಈ ಸ್ಥಾನಕ್ಕೆ ಅವರು ಅಭ್ಯರ್ಥಿಯಾಗಬಯಸಿದ್ದಾರೆ ಎಂಬುದು ಬಹು ದೊಡ್ಡ ಚರ್ಚೆಯ ವಿಷಯವೇ ಆಗುತ್ತದೆ. ರೇಷ್ಮೆಯವರು ತಮ್ಮ ಲೇಖನದಲ್ಲಿ ಅವರ ಸದ್ಗುಣಗಳ ಪಟ್ಟಿ ಮಾಡಿದ್ದಾರೆ. ನಿರ್ದಿಷ್ಟವಾಗಿ ಕರ್ನಾಟಕದ ಉದ್ಯೋಗ, ಶಿಕ್ಷಣ, ಬೆಂಗಳೂರು ನಗರಾಡಳಿತ ಹಾಗೂ ತನ್ನ ಆಂತರಿಕ ಆಡಳಿತ ವಿಷಯಗಳಲ್ಲಿ ಅವರ ಇನ್ಫೋಸಿಸ್ ಮಾಡಿರುವ ಸಾಧನೆಗಳನ್ನು ವಿಷದೀಕರಿಸಿದ್ದಾರೆ. ಈ ಬಿಡಿ ಬಿಡಿ ಸಾಧನೆಗಳನ್ನು ಬಿಡಿ ಬಿಡಿಯಾಗಿ ನೋಡಿದಾಗ ಯಾರೂ ಅವನ್ನು ಅಲ್ಲಗಳೆಯಲಾರರು. ಆದರೆ ಇವುಗಳನ್ನೇ ಆಧಾರವಾಗಿಟ್ಟುಕೊಂಡು, ಇದು ರಾಷ್ಟ್ರಕ್ಕೆ ದೊರಕಿರುವ ಪರ್ಯಾಯ ಅಭಿವೃದ್ಧಿ ಮಾದರಿಯೆಂದು ನಂಬಿಬಿಡುವುದು ಹುಂಬತನ ಮಾತ್ರವಾದೀತು. ಹಾಗಾಗಿಯೇ, ರೇಷ್ಮೆಯವರು ನನ್ನೊಡನೆ ನಡೆಸಿದ ಮಾತುಕತೆಯ ಕೊನೆಗೆ ಪ್ರಸ್ತಾಪ ಮಾಡಿದ, 'ನಾರಾಯಣ ಮೂರ್ತಿಯವರು ಪ್ರತಿನಿಧಿಸುವ ಗುರಿ ಮತ್ತು ಮಾರ್ಗಗಳ ಬಗ್ಗೆ ಅವರೊಂದಿಗೆ ನಮ್ಮಂತಹವರು ಒಂದು ಸಂಭಾಷಣೆಯನ್ನು ಏಕೆ ಆರಂಭಿಸಬಾರದು?' ಎಂಬ ಸಲಹೆಯನ್ನು ಗಂಭೀರವಾಗಿ ಪರಿಗಣಿಸುವ ಮುನ್ನ ನಮಗೆ ನಾವೇ ಸ್ಪಷ್ಟಪಡಿಸಿಕೊಳ್ಳಬೇಕಾದ ಹಲವು ಮುಖ್ಯ ವಿಚಾರಗಳಿವೆ ಎಂದು ನಾನು ಭಾವಿಸಿದ್ದೇನೆ. ಈ ಸಂಬಂಧದ ಮುಖ್ಯ ಪ್ರಶ್ನೆಗಳೆಂದರೆ:

೧. ನಾರಾಯಣ ಮೂರ್ತಿ ಇಂದು ಪ್ರತಿನಿಧಿಸುತ್ತಿರುವ ತ್ವರಿತ ಹಾಗೂ ವಿಪರೀತ ಪ್ರಮಾಣದ ಆಸ್ತಿ ನಿರ್ಮಾಣದ ತರ್ಕ ಹಾಗೂ ಅದು ನಂಬಿರುವ ಮಾಹಿತಿ ತಂತ್ರಜ್ಞಾನದ ಹೊರಗುತ್ತಿಗೆ ಪದ್ಧತಿ ಎಷ್ಟು ಕಾಲ ಬಾಳಬಲ್ಲುದು?

೨. ಈ ಹೊಸ ಕೈಗಾರಿಕಾ ಪದ್ಧತಿ ಸೃಷ್ಟಿ ಮಾಡಿರುವ ಸಮೃದ್ಧಿಯ ದ್ವೀಪಗಳು ಇಡೀ ಸಮಾಜದ ಮೇಲೆ ಯಾವ ಯಾವ ನೆಲೆಗಳಲ್ಲಿ ಮತ್ತು ಯಾವ ಯಾವ ರೀತಿಯ ಒತ್ತಡಗಳನ್ನು ಉಂಟುಮಾಡುತ್ತಿವೆ? ಧ್ಯಾನ ಮತ್ತು ಕೊಲೆ ಸಂಸ್ಕೃತಿಗಳು ಒಟ್ಟೊಟ್ಟಿಗೆ ಬೆಳೆಯುತ್ತಿರುವುದರ ಮರ್ಮವಾದರೂ ಏನು?

೩. ಈ ದ್ವೀಪಗಳಲ್ಲಿನ ಜನ ಅಳವಡಿಸಿಕೊಳ್ಳುತ್ತಿರುವ ಜೀವನ ಶೈಲಿ ಸಮಾಜದ ಎಲ್ಲರಿಗೂ ವಿಸ್ತರಿಸುವ ಸಾಧ್ಯತೆ ಎಷ್ಟರಮಟ್ಟಿಗಿದೆ? ಆ ಸಾಧ್ಯತೆ ಹೆಚ್ಚುತ್ತಿದ್ದಂತೆ ನಮ್ಮ ಜೀವ

ಪರಿಸರ ಹಾಗೂ ಸಾಮಾಜಿಕ ಪರಿಸರಗಳ ಮೇಲೆ ಆಗುವ ಪರಿಣಾಮಗಳೇನು? ಹಾಗೇ, ಆ ಸಾಧ್ಯತೆ ಕಡಿಮೆಯಾಗುತ್ತಿದ್ದಂತೆ ಉಂಟಾಗಬಹುದಾದ ಸಾಮಾಜಿಕ ಅನಾಹುತಗಳೆಂತಹವು?

೪. ಇನ್ಫೋಸಿಸ್ ಪ್ರತಿನಿಧಿಸುತ್ತಿರುವ ಅಭಿವೃದ್ಧಿ ಮೀಮಾಂಸೆ ಇಡೀ ಜಗತ್ತನ್ನು ನಗರೀಕರಿಸುವ ಅಗತ್ಯದ ಮೇಲೆ ನಿಂತಿದೆ. (ಇದನ್ನು ಈ ಸಂಸ್ಥೆಯ ನಂದನ್ ನಿಲೇಕಣಿ ಅವರು ಇತ್ತೀಚಿನ 'ಔಟ್‌ಲುಕ್' ಪತ್ರಿಕೆಯ ಸಂಚಿಕೆಯ ಲೇಖನವೊಂದರಲ್ಲಿ ಸುಸ್ಪಷ್ಟಗೊಳಿಸಿದ್ದಾರೆ.) ಇದು ನಮ್ಮ 'ದುಡಿಮೆ' ಹಾಗೂ ಅದನ್ನಾಧರಿಸಿದ 'ಸಂಸ್ಕೃತಿ'ಯ ಅರ್ಥಗಳನ್ನೇ ಮೂಲಭೂತವಾಗಿ ಪಲ್ಲಟಗೊಳಿಸುವಂತಹದು. ಈ ಪಲ್ಲಟವನ್ನು ತಡೆದುಕೊಳ್ಳುವ ಶಕ್ತಿ ನಮ್ಮ ಗ್ರಾಮೀಣ ಭಾರತಕ್ಕಿದೆಯೆ? ಇಂತಹ ಪಲ್ಲಟಕ್ಕೆ ಈ ಹಿಂದೆಯೇ ಪ್ರಯತ್ನಿಸಿದ ನೆಹರೂ ಕಾಲದ ಆಧುನೀಕರಣವು ಅದನ್ನು ನಡು ನೀರಿನಲ್ಲಿ ಕೈ ಬಿಟ್ಟಿರುವ ದುರಂತ, ನಿಲ್ಲದ ರೈತರ ಆತ್ಮಹತ್ಯೆ ಸರಣಿ ರೂಪದಲ್ಲಿ ನಮ್ಮ ಕಣ್ಮುಂದೆಯೇ ಸಂಭವಿಸುತ್ತಿಲ್ಲವೇ? ಯಾಕೆ ಮತ್ತು ಯಾರಿಗಾಗಿ ಈ ನಗರೀಕರಣದ ತೆವಲು? ಇಂತಹ ಅಭಿವೃದ್ಧಿ ಮೀಮಾಂಸೆ ಹಿಂದಿನ ಜಾಗತಿಕ ರಾಜಕಾರಣ ಇಂದು ಅನೇಕ ರೂಪಗಳಲ್ಲಿ ಬಟ್ಟಬಯಲಾಗುತ್ತಿರುವಾಗಲೂ ಏಕೆ ಈ ಆಕರ್ಷಣೆ?

೫. ಬರೀ ತಂತ್ರಜ್ಞಾನದ ವೈವಿಧ್ಯಮಯ ಅನ್ವಯವನ್ನೇ ನಂಬಿ ಬೆಳೆಯುತ್ತಿರುವ ಈ ಸಿರಿಗರ ಬಡಿದುಕೊಂಡ ನಾಗರೀಕತೆ, ಮೂಲಭೂತ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳ ಸಾವನ್ನು ಪರೋಕ್ಷವಾಗಿ ಸಾರುತ್ತಾ, ಮನುಕುಲದ ಮನಸ್ಸನ್ನು ಏಕಾಕಾರಕ್ಕೆ ಒಗ್ಗಿಸುತ್ತಿರುವ ಪ್ರಯತ್ನದ ದೂರಗಾಮಿ ಪರಿಣಾಮಗಳೇನು?

ರೇಷ್ಮೆಯವರು ವಿವರಿಸಿರುವ ನಾರಾಯಣಮೂರ್ತಿಯವರ ಪ್ರಾಮಾಣಿಕ ಪ್ರಯತ್ನ ಭಾರಿ ಯಶಸ್ಸಿನಂತೆ ಕಾಣುತ್ತಿರುವುದು, ನಮ್ಮ ಸರ್ಕಾರಿ ಯಂತ್ರವು ಭ್ರಷ್ಟಾಚಾರ ಹಾಗೂ ಅದಕ್ಷತೆಗಳಿಂದಾಗಿ ಕುಸಿದು ಬಿದ್ದಿರುವ ದುರಾಡಳಿತದ ಹಿನ್ನೆಲೆಯಲ್ಲಿ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗಾಗಿ ನಾವು ಬಾಣಲೆಯಿಂದ ಬೆಂಕಿಗೆ ಬೀಳುವಂತಾಗದಿರಲು, ಮೇಲಿನ ಪ್ರಶ್ನೆಗಳಿಗೆ ಬಹು ಎಚ್ಚರದಿಂದ ಉತ್ತರಗಳನ್ನು ಸ್ಪಷ್ಟಗೊಳಿಸಿಕೊಳ್ಳಬೇಕಿದೆ. ಈ ಉತ್ತರಗಳನ್ನು, ಎಲ್ಲೆಯಿಲ್ಲದ ವಿಸ್ತರಣೆಯ ಮಾದರಿಯ ಮೇಲೆ ಕಟ್ಟಲ್ಪಡುತ್ತಿರುವ ಪ್ರಸ್ತುತ ಆಧುನಿಕ ನಾಗರೀಕತೆಯ ಇಬ್ಬರು ಮಹಾನ್ ವಿಮರ್ಶಕರೆನಿಸಿದವರ, ಈ ಎರಡು ಅರ್ಧ ಲೌಕಿಕ ಹಾಗೂ ಅರ್ಧ ದಾರ್ಶನಿಕ ಮಾತುಗಳ ನಿಕಷಕ್ಕೊಡ್ಡಿ ಪರಿಶೀಲಿಸಕೊಳ್ಳಬೇಕಿದೆ:

ಇರುವ ಈ ಒಂದು ನಮ್ಮ ಭೂಮಿ ಎಲ್ಲರ ಆಶೆಗಳನ್ನು ಪೂರೈಸಬಲ್ಲದು; ದುರಾಶೆಗಳನ್ನಲ್ಲ– *ಮಹಾತ್ಮ ಗಾಂಧಿ*

ಕೊನೆಗೂ ಒಬ್ಬ ಮನುಷ್ಯನಿಗೆ ಎಷ್ಟು ಭೂಮಿ ಬೇಕು?– *ಮಹರ್ಷಿ ಟಾಲ್‌ಸ್ಟಾಯ್*

ಮೇ ೪, ೨೦೦೭

ಮುಳುಗುತ್ತಿರುವ, ಆದರೆ ಮುಳುಗಬಾರದ ಹಡಗು : ಕಾಂಗ್ರೆಸ್

ರಾಜಕೀಯ ಆಸಕ್ತಿಯುಳ್ಳ ನಾವು ಕೆಲವು ಗೆಳೆಯರು ಇತ್ತೀಚೆಗೆ ಲೋಕಾಭಿರಾಮವಾಗಿ ಮಾತನಾಡುತ್ತಾ, ಈಗ ವಿಧಾನಸಭಾ ಚುನಾವಣೆ ನಡೆದರೆ ಯಾವ್ಯಾವ ಪಕ್ಷ ಎಷ್ಟೆಷ್ಟು ಸ್ಥಾನಗಳನ್ನು ಪಡೆಯಬಹುದು ಎಂಬ ಊಹೆಗೆ ಚಾಲನೆ ನೀಡಿದೆವು. ಆಶ್ಚರ್ಯವೆಂದರೆ, ಎಲ್ಲರ ಪ್ರಕಾರವೂ ಭಾರತೀಯ ಜನತಾ ಪಕ್ಷಕ್ಕೆ ಅತಿ ಹೆಚ್ಚು– ಅದೃಷ್ಟ ಖುಲಾಯಿಸಿದರೆ, ಬಹುಮತದಷ್ಟು– ಸ್ಥಾನಗಳು ದೊರೆಯಬಹುದು. ಎರಡನೇ ಸ್ಥಾನ, ಸಾಕಷ್ಟು ದೂರದಲ್ಲಿ ಜಾತ್ಯತೀತ ಜನತಾ ದಳಕ್ಕೆ. ಕಾಂಗ್ರೆಸ್ಸಿಗೇನಿದ್ದರೂ ಬಹು ದೂರದ ಮೂರನೇ ಸ್ಥಾನ– ತನ್ನ ಪಾರಂಪರಿಕ ಭದ್ರ ಕೋಟೆಗಳಲ್ಲಿ ಮಾತ್ರ ಅದು ಗೆಲ್ಲಬಹುದು.

ಇದು ಕೇವಲ ಊಹೆ ಮಾತ್ರವಲ್ಲ; ಬೀದಿಗಿಳಿದು ಸಾಮಾನ್ಯ ಜನರನ್ನು ಮಾತನಾಡಿಸಿದರೂ, ಇದೇ ಮುನ್ಸೂಚನೆ ನೀಡಿಯಾರು. ಇದಕ್ಕೆ ಮುಖ್ಯ ಕಾರಣ, ಸಮ್ಮಿಶ್ರ ಸರ್ಕಾರ– ವಿಶೇಷವಾಗಿ ಹಣಕಾಸು ಖಾತೆಯನ್ನೂ, ವಿಶಾಲ, ದಕ್ಷ ಹಾಗೂ ಬದ್ಧ ಪ್ರಚಾರ ಜಾಲವನ್ನೂ ಹೊಂದಿರುವ ಭಾ.ಜ.ಪ.– ಜನಪ್ರಿಯ ಕಾರ್ಯಕ್ರಮಗಳ ಪ್ರಕಟಣೆ ಹಾಗೂ ಚಾಲನೆಯ ಮೂಲಕ ಸೃಷ್ಟಿಸಲಾಗಿರುವ ಹೊಸ ಭರವಸೆಯ ವಾತಾವರಣವೆಂಬಂತೆ ಕಂಡರೂ, ಅಷ್ಟೇ ಮುಖ್ಯವಾದ ಇನ್ನೊಂದು ಕಾರಣವಿದೆ. ಅದೆಂದರೆ, ಅಧಿಕಾರ ಕಳಕೊಂಡ ದಿಗ್ಭ್ರಮೆಯಿಂದ ಇನ್ನೂ ಹೊರಬರಲಾಗದೆ, ವಿರೋಧ ಪಕ್ಷವಾಗಿ ಪ್ರತಿ ರಾಜಕಾರಣ ಮಾಡುವ ಸಾಮರ್ಥ್ಯವನ್ನೇ ಕಳೆದುಕೊಂಡಂತೆ ತೋರುತ್ತಿರುವ ಕಾಂಗ್ರೆಸ್ ಪಕ್ಷದ ಜೋಭದ್ರಗೇಡಿತನ. ಈಗಾಗಲೇ ಜನಪ್ರಿಯ ಪತ್ರಿಕೋದ್ಯಮದ ಪರಿಭಾಷೆಯಲ್ಲಿ ಸೆಟ್ ದೋಸೆಗಳೆಂದು ಹೆಸರಾಗಿರುವ ಖರ್ಗೆ– ಧರ್ಮಸಿಂಗ್– ಎಚ್.ಕೆ. ಪಾಟೀಲ್ ತ್ರಿವಳಿ ಪತ್ರಿಕಾಗೋಷ್ಠಿಗಳಲ್ಲಿ ಮಾತನಾಡುವ ರೀತಿಯನ್ನೇ ಗಮನಿಸಿ. ಯಾವ ಮಾತನ್ನು ಖಚಿತವಾಗಿ ಆಡಿಬಿಟ್ಟರೆ ಸನಿಹದಲ್ಲೇ ಎಲ್ಲೋ ಅಡ್ಡಾಡುತ್ತಿರಬಹುದಾದ ಅಧಿಕಾರದ ಸಾಧ್ಯತೆ ಎಲ್ಲಿ ಕೈ ತಪ್ಪಿ

ಹೋಗುವುದೋ ಎಂಬ ಆತಂಕದಲ್ಲೇ ಕನ್ನಡ ಭಾಷೆಯ ವ್ಯಾಕರಣ ಹಾಗೂ ವಾಕ್ಯರಚನೆಯ ಸಾಧ್ಯತೆಗಳನ್ನೆಲ್ಲಾ ಸೂರೆ ಮಾಡುತ್ತಾ, ಇವರ ದಾರಿ ಏನೆಂಬುದು ಸ್ಪಷ್ಟವೇ ಆಗದ ರೀತಿಯಲ್ಲಿ ಮಾತನಾಡುವುದರಲ್ಲಿ ಇವರು ನಿಸ್ಸೀಮರಾಗಿರುವುದು ಕಂಡುಬರುತ್ತದೆ! ಇಂತಹವರ ಬಳಿ ಪಕ್ಷ ಕಟ್ಟುವುದಕ್ಕೆ ಅಗತ್ಯವಾದ ಹೊಸ ಆಲೋಚನೆಯಾಗಲೀ, ಕಟಿಬದ್ಧತೆಯಾಗಲೀ ಸುಳಿಯಬಲ್ಲುದೆಂದು ಯಾರೂ ನಿರೀಕ್ಷಿಸಲಾರರು. ಇವರ ಪ್ರಕಾರ ಈಗ ಪಕ್ಷ ಕಟ್ಟುವುದೆಂದರೆ ಆಡಳಿತ ಪಕ್ಷಗಳ ಒಳಜಗಳದ ಲಾಭ ಪಡೆದು ಹೇಗಾದರೂ, ಯಾವ ಪ್ರಮಾಣದದ್ದಾದರೂ ಅಧಿಕಾರ ಹಿಡಿಯುವುದು!

ಇನ್ನು ಪಕ್ಷಕ್ಕೆ ಹೊಸದಾಗಿ ಪ್ರವೇಶಿಸಿರುವ ಸಿದ್ಧರಾಮಯ್ಯನವರು ತಮ್ಮ ಅಮೋಘ 'ಚಾಮುಂಡೇಶ್ವರಿ ವಿಜಯ'ಕ್ಕಾಗಿ 'ಅಹಿಂದ' ಬಳಗದಿಂದ ಸನ್ಮಾನಗಳನ್ನು ಸ್ವೀಕರಿಸುವ ಹಾಸ್ಯಾಸ್ಪದ ರಾಜಕಾರಣದಲ್ಲಿ ತೊಡಗಿದ್ದಾರೆ. ಪಕ್ಷದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಇಂತಹ ಅಡ್ಡದಾರಿ ಹಿಡಿದಿರುವ ಇವರು ಬಹು ಬೇಗ ಲಡ್ಡಾದ ರಾಜಕಾರಣಿಯಂತೆ ಕಾಣಿಸತೊಡಗಿ ಎಲ್ಲರಲ್ಲೂ ಆಶ್ಚರ್ಯ, ವಿಷಾದ ಮೂಡಿಸಿದ್ದಾರೆ. ಇದ್ದುದರಲ್ಲಿ ವಿಚಾರ–ಹೋರಾಟಗಳೆರಡರಲ್ಲೂ ಪ್ರತಿಭೆ ತೋರಬಲ್ಲವರಾಗಿದ್ದ ರಮೇಶ್ ಕುಮಾರ್ ವಿವಾದಾಸ್ಪದ ಕೊಲೆ ಮೊಕದ್ದಮೆಯೊಂದನ್ನು ಎದುರಿಸುತ್ತ ಅನ್ಯಮನಸ್ಕರಾದಂತೆ ಕಾಣುತ್ತಿದ್ದರೆ, ನಾಯಕತ್ವದ ಎಲ್ಲ ಗುಣಗಳನ್ನೂ ಪಡೆದಿರುವಂತೆ ತೋರುವ ಕಾಗೋಡು ತಿಮ್ಮಪ್ಪನವರು ಕಳೆದ ಚುನಾವಣೆಯ ಸೋಲಿನಿಂದ ಕಂಗಾಲಾದವರಂತೆ, ಜನ ಕಂಡರೆ ಕನಲಿ ಕೆಂಡವಾಗಿ ದೂರವಿರತೊಡಗಿದ್ದಾರೆ! ಇನ್ನು ಪಕ್ಷದಲ್ಲಿ ಈಗ ಯುವ ಶಕ್ತಿಯ ನಾಯಕರೆಂದು ಹೇಳಲಾದ ಡಿ.ಕೆ. ಶಿವಕುಮಾರ್, ದಿನೇಶ್ ಗುಂಡೂರಾವ್ ಇತ್ಯಾದಿಗಳ ಚರಿತ್ರೆ ಬಲ್ಲ ಯಾರೂ ಕಾಂಗ್ರೆಸ್ಸಿನಿಂದ ಸಾರ್ವಜನಿಕ ಒಳಿತನ್ನು ನಿರೀಕ್ಷಿಸಲಾರರು.

ಮೊನ್ನೆ ಕಾಗದದ ಮೇಲೆಯೇ ಕಾನೂನು ಹೋರಾಟ ಮಾಡಿ ಬರಮಾಡಿಕೊಂಡ ವಿಧಾನ ಪರಿಷತ್ತಿನ ಸಭಾಪತಿ ಚುನಾವಣೆಯನ್ನು ರಾಜ್ಯ ಕಾಂಗ್ರೆಸ್ ನಿರ್ವಹಿಸಿದ ರೀತಿ ನೋಡಿದರೆ, ಅದಕ್ಕೆ ತಗುಲಿರುವ ಒಳ ರೋಗದ ಅರಿವಾದೀತು. ಪಕ್ಷದ ರಾಜ್ಯ ನಾಯಕರ ಶಿಫಾರ್ಸಿಗೆ ದೆಹಲಿ ಮಟ್ಟದಲ್ಲಿ ಮೂರು ಕಾಸಿನ ಬೆಲೆ ಇಲ್ಲದಾಗಿದೆ. ಜನತೆಯ ರಾಜಕಾರಣ ಮಾಡುವವರಿಗಿಂತ ಮಧ್ಯವರ್ತಿಗಳಾಗಿ ಹಣದ ಥೈಲಿ ರಾಜಕಾರಣ ಮಾಡುವ 'ಪ್ರತಿಷ್ಠಿತ'ರ ಗುಂಪೇ ದೆಹಲಿ ಮಟ್ಟದಲ್ಲಿ ಮೇಲುಗೈ ಪಡೆದಿರುವುದೇ ಕಾಂಗ್ರೆಸ್‌ನ ಈ ದುಃಸ್ಥಿತಿಗೆ ಕಾರಣವೆಂದು ಪಕ್ಷದೊಳಗಿನವರೇ ಹೇಳತೊಡಗಿದ್ದಾರೆ. ಹೀಗೆ ಪಕ್ಷ ಬೆಂಗಳೂರಿನಿಂದ ದೆಹಲಿಯವರೆಗೆ ಹರಿದು ಹಂಚಿಹೋಗಿದ್ದು, ರಾಜ್ಯ ರಾಜಕಾರಣದ ವಾಸ್ತವಗಳಿಂದಲೇ ಅದು ದೂರಾಗಿರುವಂತೆ ತೋರುತ್ತಿದೆ. ಇದು ದುರಂತ. ಆ ಪಕ್ಷಕ್ಕೆ ಮಾತ್ರವಲ್ಲ; ರಾಜ್ಯದ ಜನತೆಗೂ ಕೂಡ.

ಮೊನ್ನೆ ವಿಧಾನ ಪರಿಷತ್ ಸದಸ್ಯೆ ಮೋಟಮ್ಮನವರು ಮೂಡಿಗೆರೆಯಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಗೆ ಅತಿಥಿಯಾಗಿ ಹೋಗಿದ್ದೆ. ತನ್ನ ಸಹಜ ಸರಳತೆ,

ಸಭ್ಯತೆಗಳ ಜೊತೆಗೆ ದಿಟ್ಟತನ ಹಾಗೂ ದಕ್ಷತೆಗಳನ್ನೂ ಮೈಗೂಡಿಸಿಕೊಂಡಿರುವ ಮೋಟಮ್ಮ ಅಸಾಧಾರಣ ಜನಪದ ವಿವೇಕದೊಂದಿಗೆ, ಸಾವಿರಾರು ಜನರಿದ್ದ ಆ ಸಮಾರಂಭದಲ್ಲಿ ಹತ್ತಾರು ಜೊತೆಗಳ ಸಾಮೂಹಿಕ ವಿವಾಹದ ಯಜಮಾನಿಕೆಯನ್ನೂ ವಹಿಸಿ ಅದನ್ನು ನಡೆಸಿಕೊಟ್ಟ ರೀತಿ, ಚಲನ ಚಿತ್ರ ತಾರೆಯರಾದ ಶ್ರುತಿ– ಮಹೇಂದ್ರರೂ ಸೇರಿದಂತೆ ಅಲ್ಲಿದ್ದ ಅತಿಥಿ ಸಮೂಹವನ್ನು ಬೆರಗುಗೊಳಿಸಿತು. ಅಂಬೇಡ್ಕರ್ ಜಯಂತಿಯನ್ನು ವಿಚಾರದ ಸೊಗಸು, ಬಣ್ಣದ ಬೆಡಗು ಹಾಗೂ ಸಾಂಸ್ಕೃತಿಕ ಸಂಭ್ರಮಗಳ ಸಮ್ಮಿಲನದ ಒಂದು ಜನಪದ ಹಬ್ಬವಾಗಿ ಅವರು ಕಲ್ಪಿಸಿಕೊಂಡ ರೀತಿಯೇ ಅವರ ವ್ಯಕ್ತಿತ್ವವನ್ನು ಸಮಗ್ರವಾಗಿ ಪರಿಚಯ ಮಾಡಿಕೊಡುವಂತಿತ್ತು. ಇಲ್ಲಿ ನನಗುಂಟಾದ ಒಂದೇ ವಿಷಾದವೆಂದರೆ, ಯಾರ್‍ಯಾರನ್ನೋ ಚುನಾವಣೆಗಳಲ್ಲಿ ಗೆಲ್ಲಿಸಿ ಕಳಿಸುವ ಜನ, ಮೋಟಮ್ಮನವರಂತಹ ಮಣ್ಣಿನ ಮಗಳನ್ನೇಕೆ ಸೋಲಿಸುತ್ತಾರೆ ಎಂಬುದು! ಈ ಪ್ರಶ್ನೆಯನ್ನು ನಾನು ಮೋಟಮ್ಮನವರಿಗೇ ಕೇಳಿದೆ. ಅವರ ಬದಲಿಗೆ ಅಲ್ಲಿ ಹಾಜರಿದ್ದ ಹತ್ತಾರು ಜನ ಸ್ಥಳೀಯ ಕಾಂಗ್ರೆಸ್ ನಾಯಕರೇ ಉತ್ತರಿಸಿದರು: ಪಕ್ಷದೊಳಗೇ ಅವರನ್ನು ಸಹಿಸದ ಜನರಿದ್ದಾರೆ. ಈ ಪರಸ್ಪರ ಅಸಹನೆ– ಈರ್ಷ್ಯೆಗಳು ಪಕ್ಷವನ್ನು ನಾಶ ಮಾಡುತ್ತಿವೆ. ಅದೂ ಒಳ್ಳೆಯದಕ್ಕೇ– ಪೂರ್ಣ ನಾಶವಾದ ಮೇಲಾದರೂ ಎಲ್ಲವನ್ನೂ ಹೊಸದಾಗಿ ಕಟ್ಟಬಹುದು! ನಾನು ಗಾಬರಿಯಾಗಿ, ಆ ಹೊತ್ತಿಗೆ ರಾಜ್ಯ ಯಾರ ಕೈಗೆ ಸಿಕ್ಕಿ ಏನಾಗಿರುತ್ತದೆ ಎಂಬ ಪರಿವೆಯಾದರೂ ನಿಮಗಿದೆಯೇ? ಎಂದು ಕೇಳಿದೆ. ಪಕ್ಕದಲ್ಲಿದ್ದ ಸ್ಥಳೀಯ ಸಿ.ಪಿ.ಐ. ನಾಯಕ ಸಾತಿ ಸುಂದರೇಶ್ ನನ್ನ ಪ್ರಶ್ನೆಗೆ ಸಹಾನುಭೂತಿ ತೋರಿಸುವವರಂತೆ ನಕ್ಕರು. ಆದರೆ. ಆ ಕಾಂಗ್ರೆಸ್ ನಾಯಕರು ಏನೂ ಉತ್ತರ ಹೇಳುವ ಸ್ಥಿತಿಯಲ್ಲಿರಲಿಲ್ಲ...

ನನಗೆ ತಕ್ಷಣ ನೆನಪಾದದ್ದು, ಕಳೆದ ಎಂಭತ್ತರ ದಶಕದ ಕೊನೆಯಲ್ಲಿ ಬಹು ಮುಖ್ಯ ರಾಜಕೀಯ ಸಂವಾದಕ್ಕೆ ಪೀಠಿಕೆ ಹಾಕಿದ್ದ ಸಮಾಜವಾದಿ ನಾಯಕ ಮಧು ಲಿಮಯೆ ಅವರ ಮುನ್ನೋಟದ ಮಾತುಗಳು. ೧೯೮೯ ಇರಬೇಕು, ಅಧಿಕೃತ ಕೆಲಸದ ಮೇಲೆ ದೆಹಲಿಗೆ ಹೋಗಿದ್ದ ನನ್ನನ್ನು ಸಮಾಜವಾದಿ ಗೆಳೆಯ ಮದನ್‌ಲಾಲ್ ಹಿಂದ್, 'ಮಧು ಲಿಮಯೆಗೆ ತುಂಬಾ ಅನಾರೋಗ್ಯ, ನೋಡಿಕೊಂಡು ಬರೋಣ' ಎಂದು ಜನಪಥ್‌ನಲ್ಲಿದ್ದ ಸಂಸತ್ ಸದಸ್ಯರೊಬ್ಬರ ವಸತಿ ಗೃಹಕ್ಕೆ ಕರೆದುಕೊಂಡು ಹೋಗಿದ್ದರು. ನನಗೆ ನೆನಪಿದ್ದಂತೆ ಅದು ಆಗ ರಾಜ್ಯಸಭಾ ಸದಸ್ಯರಾಗಿದ್ದ ಸಮಾಜವಾದಿ ನಾಯಕ ಲಾಡ್ಲಿ ಮೋಹನ್ ನಿಗಂ ಅವರ ಎರಡು ಕೊಠಡಿಗಳ ಚಿಕ್ಕ ಮನೆ. ಅಲ್ಲಿ ಲಿಮಯೆ ವಿಶ್ರಾಂತಿಗೆ ತಂಗಿದ್ದರು. ಲೋಕಸಭೆಯಲ್ಲಿ ಆಡಳಿತ ಪಕ್ಷದವರ (ಅಂದರೆ ಕಾಂಗ್ರೆಸ್ಸಿನವರ) ಪಾಲಿಗೆ ಸಿಂಹಸ್ವಪ್ನರಾಗಿದ್ದ, ಲೋಹಿಯಾರ ನಿಜ ವಾರಸುದಾರರಂತಿದ್ದ ಅವರು ಈಗ ಹಣ್ಣಾಗಿ ಹೋಗಿದ್ದರು. ಗೋವಾ ವಿಮೋಚನಾ ಚಳುವಳಿಯಲ್ಲಿ ಅವರು ಎದುರಿಸಿದ ಪೋಲಿಸ್ ದೌರ್ಜನ್ಯದ– ಮೂಳೆ ಹಾಗೂ ಮಾಂಸಖಂಡಗಳಿಗೆ ಆಗಿದ್ದ ಆಘಾತ ಇತ್ಯಾದಿ– ಪರಿಣಾಮಗಳು ಈ ಇಳಿ ವಯಸ್ಸಿನಲ್ಲಿ ಕಾಣತೊಡಗಿದ್ದವು. ಕಣ್ಣುಗಳೂ ಮಂಜಾಗಿದ್ದವು. ಆ ತೊಂದರೆಗಳ ನಡುವೆಯೂ ಅವರು

ಒಂದು ತಾಸು ಸಮಾಜವಾದಿ ಚಳುವಳಿ ಮುನ್ನಡೆಯಬೇಕಾದ ಹಾದಿಯ ಬಗ್ಗೆ ನಮ್ಮೊಂದಿಗೆ ಮಾತನಾಡಿದರು. ಈ ಮಾತುಕತೆಯಲ್ಲಿ ನಾನು, ಜನತೆಯ ಬಹುದಿನದ ಕನಸಾಗಿದ್ದ ಹಾಗೂ ಲೋಹಿಯಾರ 'ಕಾಂಗ್ರೆಸ್ಸೇತರವಾದ'ದ ಆಶಯವಾಗಿದ್ದ ಆಗಿನ ಜನತಾ ಪಕ್ಷದ ನೇತೃತ್ವದ ಕಾಂಗ್ರೆಸ್ಸೇತರ ಸರ್ಕಾರವನ್ನು, ದ್ವಿಸದಸ್ಯತ್ವದ ವಿವಾದದ ನೆಪದಲ್ಲಿ ಏಕೆ ಬೀಳಿಸಿದಿರಿ? ಎಂದು ಕೇಳಿದೆ. ಅದಕ್ಕವರು, ಆ ಮೂಲಕ ತಾವೊಂದು ಐತಿಹಾಸಿಕ ಕೆಲಸ ಮಾಡಿರುವುದಾಗಿ ಹೇಳಿದ ಮಾತುಗಳು ಅಪೂರ್ವ ಒಳನೋಟಗಳಿಂದ ಕೂಡಿದುವಾಗಿದ್ದವು.

ಜೆ.ಪಿ.ಯಂತಹ ಹಿರಿಯರ ನೈತಿಕ ಒತ್ತಡದಿಂದಾಗಿ ತೀರಾ ವಿಭಿನ್ನ ತತ್ವ ಪ್ರಣಾಳಿಕೆಗಳನ್ನು ಹೊಂದಿದ್ದ ಪಕ್ಷಗಳು ನಾಮಕಾವಸ್ತೆ ಮಾತ್ರ ಒಂದಾಗಿ, ಜನತಾ ಪಕ್ಷವನ್ನು ರಚಿಸಿಕೊಂಡಿದ್ದವು. ಆದರೆ, ಜೆ.ಪಿ. ದುರ್ಬಲರಾಗುತ್ತಿದ್ದಂತೆ, ಆರ್.ಎಸ್.ಎಸ್. ಮೂಲದ ಜನಸಂಘಿಗಳು ಆರ್.ಎಸ್.ಎಸ್. ಸದಸ್ಯತ್ವನ್ನು ಬಿಟ್ಟುಕೊಡದೆ, ಪಕ್ಷ ಸರ್ವಸಮ್ಮತವಾಗಿ ಒಪ್ಪಿಕೊಂಡಿದ್ದ ಗಾಂಧಿ ಸಮಾಜವಾದಿ ಕಾರ್ಯಕ್ರಮವನ್ನು ಒಳಗೊಳಗೇ ಬುಡಮೇಲುಗೊಳಿಸುತ್ತ, ಆಂತರಿಕವಾಗಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಮರು ಸ್ಥಾಪಿಸಿಕೊಂಡು ಪಕ್ಷವನ್ನು ವಶ ಮಾಡಿಕೊಳ್ಳುವ ಸನ್ನಾಹ ಮಾಡಿದರು. ಇದನ್ನು ಚಿಗುರಿನಲ್ಲೇ ಮುರುಟಿ ಹಾಕದಿದ್ದರೆ ದೇಶಕ್ಕೆ ಗಂಡಾಂತರ ಖಂಡಿತ ಎಂದು ಮುನ್ನೋಡಿಯೇ, ಒಂದು ಪ್ರಗತಿಪರ ರಾಜಕೀಯ ಪಕ್ಷವಾಗಿ ಬೆಳೆಯುವ ಆಂತರಿಕ ಸಾಮರ್ಥ್ಯವನ್ನೇ ಪ್ರದರ್ಶಿಸದ ಜನತಾ ಪಕ್ಷವನ್ನು ಒಡೆಯಲು ನಿರ್ಧರಿಸಿದ್ದಾಗಿ ಲಿಮೆಯೆ ವಿವರಿಸಿದರು. ಈ ಮುನ್ನೋಟದ ಭಾಗವಾಗಿಯೇ ಅವರು, ಆ ಹೊತ್ತಿಗಾಗಲೇ ಜನತಾ ಪಕ್ಷದಿಂದ ಸಿಡಿದು ಭಾರತೀಯ ಜನತಾ ಪಕ್ಷವಾಗಿ ಪುನರ್ಸಂಘಟಿತವಾಗಿದ್ದ ಜನಸಂಘಿಗಳ ವಿಚ್ಛಿದ್ರಕಾರಿ ರಾಜಕಾರಣವನ್ನು ಎದುರಿಸುವ ಏಕೈಕ ಮಾರ್ಗವೆಂದರೆ; ಭಾರತೀಯ ಜನತೆಯ ಬಹುಮುಖಿ ಆಶೋತ್ತರಗಳ ನಿಜವಾದ ಪ್ರತಿನಿಧಿಯಾಗಿದ್ದು, ಆಗಾಗ್ಗೆ ಅಧಿಕಾರದ ಅಮಲಿನಲ್ಲಿ ಅಡ್ಡಹಾದಿ ಹಿಡಿಯುವ ಕಾಂಗ್ರೆಸ್ ಪಕ್ಷವನ್ನು ಉಳಿಸಿ ಸರಿ ಹಾದಿಯಲ್ಲಿ ಬೆಳೆಸುವುದೇ ಆಗಿದೆ ಎಂದು ವಿವರಿಸಿದರು. ಸಮಾಜವಾದಿ ಚಳುವಳಿಯನ್ನು ಸಂಘಟಿಸಬೇಕಾದ್ದೂ, ಈ ರೀತಿಯ ಒಂದು ನೈತಿಕ ಒತ್ತಡದ ವಾತಾವರಣ ನಿರ್ಮಿಸುವ ಕಾರ್ಯಯೋಜನೆಯಾಗಿಯೇ ಎಂದವರು ಸೂಚಿಸಿದರು.

ಇಂದು ಈ ಮಾತು ಎಷ್ಟು ನಿಜವೆನ್ನಿಸುತ್ತಿದೆ! ಲೋಹಿಯಾರ ಕಾಂಗ್ರೆಸ್ಸೇತರವಾದ ಇಂದು ಭಾಜಪೇತರವಾದವಾಗುವ ಅನಿವಾರ್ಯತೆ ಉಂಟಾಗಿದೆ. ಜನಸಂಘವು ಭಾ.ಜ.ಪ. ಆಗುವ ಪ್ರಕ್ರಿಯೆಯಲ್ಲಿ ಸಾಕಷ್ಟು ಬದಲಾವಣೆಗೆ ಒಳಪಟ್ಟಿದೆ ಎಂಬ ಹಲವರ ನಂಬಿಕೆ ಹುಸಿಯಾಗಿ, ಇಂದು ಭಾ.ಜ.ಪ. ಪ್ರಭಾವ ಹೆಚ್ಚುತ್ತಿದ್ದಂತೆ, ದೇಶ ಮಧ್ಯಯುಗಕ್ಕೆ ಕಾಲಿಡುತ್ತಿರುವ ಅನುಭವವಾಗುತ್ತಿದೆ. ಇದಕ್ಕೆ ಸರಿಯಾದ ಜೊತೆಯಾದಂತೆ ಜಾಗತೀಕರಣವೂ ಸೇರಿಕೊಂಡು, ಹೊಸ ಆಡಂಬರಗಳೊಂದಿಗೆ ಹಳೆಯ ಊಳಿಗಮಾನ್ಯ ಪದ್ಧತಿಯ ನಂಬಿಕೆಗಳು, ಆಚರಣೆಗಳು ಮತ್ತೆ ತಲೆ ಎತ್ತುತ್ತಿವೆ. ಸತಿ ಪದ್ಧತಿಯ ಆಚರಣೆಗೆ ಪರೋಕ್ಷ ಪ್ರೋತ್ಸಾಹ, ಸಾಮೂಹಿಕ

ಪ್ರಾಣಿಬಲಿ, ಸಾರ್ವಜನಿಕ ಹೋಮ ಹವನಗಳು, ಜಾತಿ ಹಾಗೂ ಧರ್ಮ ಸಂಬಂಧಿ ನಿರ್ಬಂಧಗಳು ಹಾಗೂ ಹಿಂಸಾಚಾರಗಳು ಹೊಸ ಮಾನ್ಯತೆ ಪಡೆದು, ಹೊಸದೊಂದು ಸಾಮಾಜಿಕ ಸಂಹಿತೆಯೊಂದನ್ನು ಪರ್ಯಾಯ ಸಂವಿಧಾನವೆಂಬಂತೆ ಜನತೆಯ ಮೇಲೆ ಹೇರುವ ಸನ್ನಾಹದ ಎಲ್ಲ ಸೂಚನೆಗಳು ಕಾಣಬರುತ್ತಿವೆ. ಜಾತಿ ಮಠಾಧೀಶರ ಸಿಂಹಾಸನದ ಕೆಳಗಡೆ ಕುರ್ಚಿ ಹಾಕಿಸಿಕೊಂಡು ಅವರ ಅಕ್ಕ- ಪಕ್ಕ ಕೂತು ಧನ್ಯರಾಗಬಯಸುವ ಮುಖ್ಯಮಂತ್ರಿ- ಉಪ ಮುಖ್ಯಮಂತ್ರಿಗಳಿಂದ, ಜನತೆ ಕುರಿತಂತೆ ಯಾವ ರೀತಿಯ ಬದ್ಧತೆಯನ್ನು ನಿರೀಕ್ಷಿಸಬಹುದಾಗಿದೆ? ಭಾ.ಜ.ಪ. ಭದ್ರವಾಗಿ ನೆಲೆಗೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕ ಜೀವನವನ್ನು ಉಸಿರುಗಟ್ಟಿಸುವ ಪರಿಸ್ಥಿತಿ ರೂಪುಗೊಳ್ಳುತ್ತಿರುವುದರ ಹಿಂದಿನ ರಾಜಕಾರಣವನ್ನು ಬಲ್ಲ ಯಾರಾದರೂ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಹಬ್ಬಬಹುದಾದ ಪರಿಸ್ಥಿತಿಯ ಕಲ್ಪನೆ ಮಾಡಿಕೊಳ್ಳಬಲ್ಲರು. ಸಮಾಜದಲ್ಲಿ ಮಧ್ಯಯುಗೀನ ರಾಜ- ಪುರೋಹಿತ- ಸೇನಾ (ಕರ್ನಾಟಕದಲ್ಲಿ ಎಷ್ಟೊಂದು 'ಸೇನೆ'ಗಳಿವೆ!) ವ್ಯವಸ್ಥೆಯ ನೀತಿ ಸಂಹಿತೆ ಜಾರಿಗೆ ಬರುವ ಭಯ ಇಂದು ಸುಳ್ಳಾಗಿ ಕಾಣುತ್ತಿಲ್ಲ. ಇದಕ್ಕೆ ಜಾತ್ಯತೀತ ಜನತಾ ದಳದಂತಹ, ಅಧಿಕಾರವೇ ತತ್ವವಾಗಿರುವಂತಹ 'ಪಕ್ಷ'ಗಳ ಬೆಂಬಲ ದೊರೆತು, ಕರ್ನಾಟಕ ಧಾರ್ಮಿಕ ಪಾಳೇಗಾರರ ವಶವಾಗುವ ಅಪಾಯ ಹತ್ತಿರದಲ್ಲೇ ಇದ್ದಂತೆ ತೋರುತ್ತಿದೆ.

ಇಂತಹ ಸಂದರ್ಭದಲ್ಲಿ ತಾತ್ವಿಕ ಸ್ಪಷ್ಟತೆಯೊಂದಿಗೆ ಹಾಗೂ ಕಾರ್ಯಕ್ರಮಗಳ ತೀವ್ರತೆಯೊಂದಿಗೆ, ಪ್ರಸಕ್ತ ಸರ್ಕಾರದ ಜನಪ್ರಿಯ ರಾಜಕಾರಣದ ಬೂಟಾಟಿಕೆ ಹಾಗೂ ಅಪಾಯಗಳನ್ನು ಬಹಿರಂಗಗೊಳಿಸುವ ಮೂಲಕ ಜನತೆಯ ವಿಶ್ವಾಸಾರ್ಹತೆಯನ್ನು ಪುನಃ ಗಳಿಸಿಕೊಳ್ಳುವಂತಹ ಜನಮಧ್ಯದ ಕಾರ್ಯಾಚರಣೆಗಳನ್ನು ನಡೆಸಬೇಕಾದ ಕಾಂಗ್ರೆಸ್, ಇಂದು ಸುಲಭ ಅಧಿಕಾರದ ಅವಕಾಶಗಳಿಗಾಗಿ ಹೊಂಚು ಹಾಕುತ್ತಾ ಕೂತಿರುವ ಪಕ್ಷದಂತೆ ಪ್ರಸ್ತುತಗೊಳ್ಳುತ್ತಿರುವುದು ಶೋಚನೀಯ. ಇಂತಹ ರಾಜಕಾರಣ ಪಕ್ಷವನ್ನು ಮತ್ತು ಆ ಮೂಲಕ ರಾಜ್ಯವನ್ನು ಇನ್ನಷ್ಟು ಅಧೋಗತಿಗೆ ತಳ್ಳಬಹುದಷ್ಟೆ.

ಇದನ್ನು ಆ ಪಕ್ಷಕ್ಕೆ ಮನವರಿಕೆ ಮಾಡಿಕೊಡುವವರಾದರೂ ಯಾರು? ಅಥವಾ ಇಂತಹ ಕಾಂಗ್ರೆಸ್‌ಗೆ ಪರ್ಯಾಯ ರೂಪಿಸುವವರಾದರೂ ಯಾರಿದ್ದಾರೆ, ಕರ್ನಾಟಕದಲ್ಲಿ?

ಮೇ ೧೧, ೨೦೦೭

ಪರ್ಯಾಯ ರಾಜಕಾರಣದ ಸಾಧ್ಯತೆಗಳು

ಕಳೆದ ಸಂಚಿಕೆಯ 'ವಾರದ ಒಳನೋಟ'ವನ್ನು ಕೊನೇ ನಿಮಿಷದಲ್ಲಿ ಕಳಿಸಬೇಕಾದ ಅನಿವಾರ್ಯತೆಯ ಅವಸರದಲ್ಲಿ ಒಂದೆರಡು ಕಡೆ ಮುಖ್ಯ ಪದಗಳೇ ಬಿಟ್ಟು ಹೋಗಿ ಅರ್ಥ ಸಂದಿಗ್ಧತೆ ಉಂಟಾಗಿರುವುದನ್ನು ಓದುಗರು ಗಮನಿಸಿರಬಹುದು. ಹಾಗಾಗಿ, ಅಂಕಣದ ಕೊನೆಯ ವಾಕ್ಯ ಹೀಗಿರಬೇಕಿತ್ತು: '...ಇಂತಹ ಕಾಂಗ್ರೆಸ್ಸಿಗೆ ಪರ್ಯಾಯ ರೂಪಿಸುವವರಾದರೂ ಯಾರಿದ್ದಾರೆ, ಕರ್ನಾಟಕದಲ್ಲಿ?' ಇಲ್ಲಿ ಬಿಟ್ಟು ಹೋಗಿದ್ದ ಪದ: ಪರ್ಯಾಯ. ಹೌದು, ರಾಜಕೀಯ ಪರ್ಯಾಯದ ಬಗ್ಗೆ ಇಂದು ನಾವು ಗಂಭೀರವಾಗಿ ಆಲೋಚಿಸುವ ಅನಿವಾರ್ಯತೆ ಉಂಟಾಗಿದೆ.

ಈಗ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಯಾವುದೇ ಸರ್ಕಾರ ಬಂದರೂ, ಹೆಚ್ಚೂ ಕಡಿಮೆ ಅದು ಪಾರಂಪರಿಕ ಕಾಂಗ್ರೆಸ್ ಮಾರ್ಗಕ್ಕೇ ಬಂದು ಬೀಳುವುದನ್ನು ನಾವು ಗಮನಿಸುತ್ತಾ ಬಂದಿದ್ದೇವೆ. ಕಾಂಗ್ರೆಸ್‌ಗಿಂತ ಬಹು ಭಿನ್ನವಾದ ರಾಜಕೀಯ ಸಂಸ್ಕೃತಿಯೊಂದಿಗೆ ಬೆಳೆದದ್ದೆಂದು ಹೇಳಲಾದ ಭಾರತೀಯ ಜನತಾ ಪಕ್ಷ ಕೂಡ ಕ್ಷಿಪ್ರವಾಗಿ ಅಧಿಕಾರ ಹಿಡಿಯುವ ಹಠದಲ್ಲಿ ಒಂದು ಸಮೂಹ ಪಕ್ಷವಾಗುತ್ತಿದ್ದಂತೆ, ಅದೂ ಕಾಂಗ್ರೆಸ್ಸೀಕರಣಕ್ಕೆ ಒಳಪಟ್ಟಿರುವುದನ್ನು ನಾವು ಕಳೆದ ಎರಡು ದಶಕಗಳಲ್ಲಿ ಗಮನಿಸಿದ್ದೇವೆ. ಭಾ.ಜ.ಪ. ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ ಸರ್ಕಾರ ಕಳೆದ ಚುನಾವಣೆಗಳಲ್ಲಿ ಅಧಿಕಾರ ಕಳೆದುಕೊಂಡಿದ್ದೇ, ಅದರ ರಾಜಕೀಯ ಕಾಂಗ್ರೆಸ್ಸಿಗಿಂತ ಏನೂ ಭಿನ್ನವಲ್ಲ ಎಂಬ ಕಾರಣಕ್ಕಾಗಿ! ಅದೇ ಭ್ರಷ್ಟಾಚಾರ, ಅದೇ ಸ್ವಜನ ಪಕ್ಷಪಾತ, ಅದೇ ಜನವಿಮುಖಿ ಆರ್ಥಿಕ ನೀತಿ ಹಾಗೂ ಆಡಳಿತ ಮತ್ತು ಅಧಿಕಾರದ ಅಮಲಿನಲ್ಲಿ ನಡೆಸಲಾಗುವ ಅದೇ ಕುಕೃತ್ಯಗಳು, ಹತ್ಯಾಕಾಂಡಗಳು... ಈಚೆಗೆ ಕೇಳಿ ಬರುತ್ತಿರುವ ಕಟಾರ, ರೇಣುಕಾಚಾರ್ಯ, ಗುಜರಾತ್‌ನ ಹುಸಿ ಎನ್‌ಕೌಂಟರ್ ಪ್ರಕರಣಗಳು, ಅದರ ಮುಂದುವರೆದ ಉದಾಹರಣೆಗಳಷ್ಟೆ.

ದುರಂತವೆಂದರೆ, ಈ ಕಾಂಗ್ರೆಸ್ ಹಾಗೂ ಭಾ.ಜ.ಪ. ಹೊರತಾದ ಮೂರನೆಯ ಶಕ್ತಿಯನ್ನು ಕಟ್ಟುವ ಪ್ರಯತ್ನ ಕೂಡಾ ಈ ಎರಡು ಪಕ್ಷಗಳ ಸಹಕಾರವಿಲ್ಲದೆ ಯಶಸ್ವಿಯಾಗಲಾರದು ಎಂಬುದೂ, ಇಂತಹ ಎರಡು ಪ್ರಯತ್ನಗಳ ವೈಫಲ್ಯದಿಂದ (ಒಂದು, ಭಾ.ಜ.ಪ. ಬೆಂಬಲದ ವಿ.ಪಿ.ಸಿಂಗ್ ಸರ್ಕಾರ; ಇನ್ನೊಂದು ಕಾಂಗ್ರೆಸ್ ಬೆಂಬಲದ ದೇವೇಗೌಡರ ಸರ್ಕಾರ) ಈಗ ಖಾತರಿಯಾಗಿದೆ. ಹಾಗಾಗಿ ಈಗ ರಾಜಕೀಯ ಅನುಕೂಲತೆಗಳಿಗನುಸಾರ ಜೊತೆಗಾರರು ಬದಲಾಗುವ ಎರಡು ರಾಜಕೀಯ ರಂಗಗಳು ಇಂದು ರಾಷ್ಟ್ರದಲ್ಲಿ ಅಸ್ತಿತ್ವದಲ್ಲಿವೆ. ಇದರಿಂದಾಗಿ, ಯಾರೇ ಅಧಿಕಾರಕ್ಕೆ ಬರಲಿ, ರಾಜಕಾರಣವು ಒಂದು ತಾತ್ವಿಕ ಬದ್ಧತೆಯಿಲ್ಲದೆ, ಅಭಿವೃದ್ಧಿಯ ದಿಕ್ಕಿನ ಬಗ್ಗೆ ಒಂದು ಸ್ಪಷ್ಟತೆಯಿಲ್ಲದೆ; ಜೊತೆಗಾರ ಪಕ್ಷಗಳ ರಾಜಕೀಯ ಒತ್ತಡಗಳಿಗನುಸಾರ ಆಡಳಿತ ಮತ್ತು ಅಭಿವೃದ್ಧಿ ನೀತಿಗಳನ್ನು ಅತ್ತಿತ್ತ ಎಳೆದಾಡುತ್ತ, ಹೇಗೋ ಐದು ವರ್ಷದ ಅಧಿಕಾರಾವಧಿಯನ್ನು ಮುಗಿಸುವುದೇ ಒಂದು ಸಾಧನೆ ಎಂದು ಮೆಚ್ಚುವ ಹಾಗೂ ಅದನ್ನು ಭಾರತೀಯ ಪ್ರಜಾಪ್ರಭುತ್ವದ ಯಶಸ್ಸು ಎಂದು ಕೊಂಡಾಡುವ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇದರ ಉಪಯೋಗ ಪಡೆದ ಅಂತಾರಾಷ್ಟ್ರೀಯ ರಾಜಕೀಯ ಹಿತಾಸಕ್ತಿಗಳು, ಜಾಗತೀಕರಣದ ಹೆಸರಿನಲ್ಲಿ ನಮ್ಮ 'ಅಭಿವೃದ್ಧಿ'ಯ ಹಾದಿಯನ್ನು ತಾವೇ ನಿರ್ಧರಿಸತೊಡಗಿವೆ. ಇದರಿಂದಾಗಿ ರಾಷ್ಟ್ರಜೀವನದ ಚುಕ್ಕಾಣಿ ಜನತಾ ಶಕ್ತಿಯ ಕೈ ತಪ್ಪಿ, ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈವಶವಾಗುತ್ತಿರುವ ದುರಂತವನ್ನು ನಾವಿಂದು ಕಾಣುತ್ತಿದ್ದೇವೆ.

ಜನತೆಯನ್ನು ಇತ್ತ, ಬಿ.ಪಿ.ಎಲ್. ಕಾರ್ಡ್, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸಂಧ್ಯಾ ಸುರಕ್ಷಾ, ಭಾಗ್ಯಲಕ್ಷ್ಮಿ, ಮಧ್ಯಾಹ್ನದ ಬಿಸಿಯೂಟ, ಶಾಲಾ ಮಕ್ಕಳಿಗೆ ಸೈಕಲ್, ತಾಳಿಭಾಗ್ಯ ಮುಂತಾದ ದಾನ- ಧರ್ಮ- ಸಹಾನುಭೂತಿ ಶೈಲಿಯ ಕಾರ್ಯಕ್ರಮಗಳ ಮೂಲಕ ಸಂತೈಸುತ್ತ; ಅತ್ತ, ದೇಶವನ್ನು ಕಾರ್ಪೊರೇಟ್ ಲಾಭದ ಒಂದು ಅಂಗಡಿಯನ್ನಾಗಿ ಪರಿವರ್ತಿಸುವ ನೀತಿ ಇಂದು 'ಅಭಿವೃದ್ಧಿ' ಎಂದು ಮಾನ್ಯತೆ ಗಳಿಸುತ್ತಿದೆ. ಇದರಿಂದಾಗಿ, 'ಅಭಿವೃದ್ಧಿ' ಎಂಬುದು ಆತ್ಯಂತಿಕವಾಗಿ ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ಸೂಚಕವಾಗದೆ, ನೈಸರ್ಗಿಕ ಸಂಪನ್ಮೂಲಗಳ ಹೆಚ್ಚೆಚ್ಚು ಹಾಗೂ ಹೊಸ ಹೊಸ ರೀತಿಯ ಬಳಕೆಯ ಸಾಧ್ಯತೆಗಳ ಸೂಚಕವಾಗುತ್ತಿದೆ. ಇದು, ಮನುಷ್ಯನನ್ನು ಕೇವಲ ವೈಯುಕ್ತಿಕ ಸುಖಾಪೇಕ್ಷೆಯ ಸಾಹಸಗಳಲ್ಲಿ ತೊಡಗಿಸಿ, ಅವನನ್ನು ಸಾಮಾಜಿಕ ಹಾಗೂ ಜೈವಿಕ ಎಚ್ಚರಗಳ ಸೂಕ್ಷ್ಮಗಳಿಗೆ ಎರವಾಗಿಸುತ್ತಿದೆ.

ಇದರ ಪರಿಣಾಮವೆಂದರೆ, ಈವರೆಗೆ ರಾಷ್ಟ್ರದ ಚೈತನ್ಯವನ್ನು ಒಡೆದಿಟ್ಟದ್ದ ಜಾತಿವ್ಯವಸ್ಥೆ ಈಗ ಹೊಸ ಪ್ರತ್ಯೇಕತೆ ಹಾಗೂ ಶ್ರೇಣೀಕರಣಗಳ ರೂಪಗಳಲ್ಲಿ ಕಾಣತೊಡಗಿದೆ. ಇದರಿಂದಾಗಿ, ಸಾಮುದಾಯಿಕ ವೈರತ್ವದ ಹೊಸ ಹೊಸ ಮಾದರಿಗಳು ಸೃಷ್ಟಿಯಾಗುತ್ತಾ ಸಾಮಾಜಿಕ ಬಿಗುವು ಆಸ್ಫೋಟನಕಾರಿ ಹಂತ ತಲುಪಿದೆ. ಇಂತಹ ಆಸ್ಫೋಟಗಳು,

ಹೆಚ್ಚುತ್ತಿರುವ ಆತ್ಮಹತ್ಯೆ, ಕೊಲೆ, ಹೊಸ ಹೊಸ ರೀತಿಯ ಲೈಂಗಿಕ ಅಪರಾಧಗಳು, ಕೋಮು ಅಶಾಂತಿಯೂ ಸೇರಿದಂತೆ ವಿವಿಧ ರೀತಿಯ ಸಾಮಾಜಿಕ ಹಿಂಸಾಚಾರಗಳು ಮತ್ತು ದಿನ ನಿತ್ಯದ ರಸ್ತೆ ಅಪಘಾತಗಳ ರೂಪದಲ್ಲಿಯೂ ಕಾಣತೊಡಗಿವೆ. ಇವು ಈಗ ಬಿಡಿ ಬಿಡಿಯಾಗಿ ಅಲ್ಲಲ್ಲಿ ಚದುರಿದಂತೆ ಸಂಭವಿಸುತ್ತಿರುವಂತೆ ತೋರುತ್ತಿವೆಯಾದರೂ, ಇವೆಲ್ಲ ಬರಲಿರುವ ದೊಡ್ಡ ಸಾಮಾಜಿಕ ಆಶಾಂತಿಯ ಆರಂಭಿಕ ಸೂಚನೆಗಳಾಗಿದ್ದರೆ ಆಶ್ಚರ್ಯವಿಲ್ಲ.

ಇಂತಹ ಅಶಾಂತಿಯ ಮುನ್ಸೂಚನೆಗಳಾಗಿಯೇ, ಕರ್ನಾಟಕದಲ್ಲಿ ಬಹು ಹಿಂದೆಯೇ ದಲಿತ ಚಳುವಳಿ, ರೈತ ಚಳುವಳಿ, ಕನ್ನಡ ಚಳುವಳಿ ಹಾಗೂ ಪರಿಸರ ಚಳುವಳಿಗಳು ಆರಂಭವಾದವು. ಅವೆಲ್ಲ, ಕರ್ನಾಟಕದ ಅಭಿವೃದ್ಧಿ– ಆಡಳಿತದ ದಾರಿಯ ಬಗ್ಗೆ ಬಹು ಹಿಂದೆಯೇ ಸಾಮಾನ್ಯ ಜನತೆ ವ್ಯಕ್ತಪಡಿಸಲಾರಂಭಿಸಿದ್ದ ಪ್ರತಿಭಟನೆಯ ಸಂಕೇತಗಳೇ ಆಗಿದ್ದವು. ಅಷ್ಟೇ ಅಲ್ಲ, ಅವುಗಳಲ್ಲಿ ಕೆಲವು– ದಲಿತ ಹಾಗೂ ರೈತ ಚಳುವಳಿಗಳು– ಒಗ್ಗೂಡಿ ಕರ್ನಾಟಕಕ್ಕೆ ಪರ್ಯಾಯ ಅಭಿವೃದ್ಧಿ ಮಾದರಿಯೊಂದನ್ನು ರೂಪಿಸಬಲ್ಲ ಹೊಸ ರಾಜಕಾರಣವನ್ನು ಆರಂಭಿಸುವ ಸೂಚನೆಗಳನ್ನೂ ನೀಡಿದ್ದವು. ಆದರೆ, ಪ್ರೊ॥ ನಂಜುಂಡಸ್ವಾಮಿ ಹಾಗೂ ಪ್ರೊ॥ ಬಿ ಕೃಷ್ಣಪ್ಪನವರ ಹಠಮಾರಿತನಗಳಿಂದಾಗಿ ಅದು ಕೈಗೂಡಲಿಲ್ಲ. ನಂತರ ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಸಂಘ ಏಕಾಂಗಿಯಾಗಿ ಮಾಡಹೊರಟ ರಾಜಕಾರಣ ಅಷ್ಟೇನೂ ಯಶಸ್ವಿಯಾಗದೆ, ರೈತ ಸಂಘವೇ ಇಬ್ಭಾಗವಾಗುವುದರಲ್ಲಿ ಕೊನೆಗೊಂಡಿತು. ಇನ್ನು ಕೃಷ್ಣಪ್ಪನವರು ಜನತಾ ಪಕ್ಷದ ಬಾಗಿಲು ಬಡಿದು ಕೋಲಾರ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಸೋತು ನಿರಾಶರಾಗಿ, ನಂತರದಲ್ಲೇ ಬಿ.ಎಸ್.ಪಿ. ಸೇರುವುದರೊಂದಿಗೆ ದಲಿತ ಚಳುವಳಿಯೂ ಛಿದ್ರವಾಗುತ್ತಾ ಹೋದದ್ದು ಈಗ ಇತಿಹಾಸ.

ಇಷ್ಟಾದರೂ, ರಾಜ್ಯದಲ್ಲಿ ಪರ್ಯಾಯ ರಾಜಕಾರಣದ ಆಸೆ ಇಂಗಿಲ್ಲ. ಅದಕ್ಕೆ ಕಾರಣ, ದಿನೇ ದಿನೇ ಅಧೋಗತಿಗಿಳಿಯುತ್ತಿರುವ ರಾಜ್ಯದ ರಾಜಕಾರಣವೇ ಆಗಿದೆ. ಹೋದ ವರ್ಷ ತಾನೇ, ದಲಿತ ಚಳುವಳಿಯೊಂದಿಗೆ ಇದ್ದೂ ಇಲ್ಲದಂತಿರುವ ನಾಯಕ ದೇವನೂರ ಮಹಾದೇವ ಹಾಗೂ ರೈತ ಸಂಘದ ಕೆ.ಎಸ್. ಪುಟ್ಟಣ್ಣಯ್ಯ ಸಮಾನ ಮನಸ್ಕರೊಡನೆ ಸೇರಿ ಆಗ ಅತಿ ಅನಿವಾರ್ಯವಾಗಿದ್ದಂತೆ 'ಸರ್ವೋದಯ ಕರ್ನಾಟಕ' ಪಕ್ಷದ ಸ್ಥಾಪನೆಯ ಘೋಷಣೆ ಮಾಡಿದರು. ಅದಕ್ಕೆ ತಕ್ಕದಾಗಿ ಕೆಲವು ನವೀನ ಕಾರ್ಯಕ್ರಮಗಳನ್ನೂ ರಾಜ್ಯದ ಜನತೆಯ ಮುಂದಿಟ್ಟರು. ಈ ಕುರಿತು ರಾಜ್ಯಾದ್ಯಂತ ಅಲ್ಲಲ್ಲಿ ಭರವಸೆಯ ಸಂಚಲನ ಶುರುವಾಗುತ್ತಿದ್ದಂತೆಯೇ, ಅದೇಕೋ ಏನೋ ಈ ಪ್ರಯತ್ನವೇ ಹಿನ್ನೆಲೆಗೆ ಸರಿದುಹೋಯಿತು! ಈ ಬಗ್ಗೆ ದೇವನೂರ ಮಹಾದೇವರನ್ನು ಕೇಳಿದರೆ, ಸಮಜಾಯಿಷಿ ಕೊಡುವ ಶೈಲಿಯಲ್ಲಿ 'ಇಲ್ಲ, ಕೆಲಸ ನಡೀತಾ ಇದೆ' ಎನ್ನುತ್ತಿದ್ದಾರೆ. ಆದರೆ, ಎಲ್ಲಿ, ಏನು ಕೆಲಸ ನಡೆಯುತ್ತಿದೆ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ!

ಇನ್ನು ಪುಟ್ಟಣ್ಣಯ್ಯ ಮೊನ್ನೆ ಸಭೆಯೊಂದರಲ್ಲಿ ಸ್ವಯಂಪ್ರೇರಿತರಾಗಿ, 'ಪಕ್ಷದ ವಿಳಾಸವನ್ನ ಕಳೀದೆ ಜೋಪಾನವಾಗಿ ಮಡಿಕ್ಕಂಡಿದ್ದೀವಿ' ಎಂದು ವ್ಯಂಗ್ಯವಾಗಿ ಹೇಳುವ ಮೂಲಕ ಈ ಪ್ರಯತ್ನದಲ್ಲಿ ತಮಗೇ ನಂಬಿಕೆ ಹೋಗಿರುವುದನ್ನು ಸೂಚಿಸಿದ್ದಾರೆ.

ಜನರಲ್ಲಿ ಸುಪ್ತವಾಗಿರುವ ಪರ್ಯಾಯ ರಾಜಕಾರಣದ ನಿರೀಕ್ಷೆಯ ಮೇಲಾಗಲೀ ಅಥವಾ ತಮ್ಮ ಮೇಲಾಗಲೀ ನಂಬಿಕೆ ಇಲ್ಲದೆ; ಬಂಗಾರಪ್ಪ ರಾಜ್ಯದಲ್ಲಿ ಸಮಾಜವಾದಿ ಪಕ್ಷ ಸ್ಥಾಪಿಸಿ ಮತ್ತು ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿ ತಮ್ಮ ಪ್ರಯತ್ನಕ್ಕೆ ಆಘಾತ ಮಾಡಿದರು ಎಂದು ಖಾಸಗಿಯಾಗಿ ಅಲವತ್ತುಕೊಳ್ಳುತ್ತಿರುವ ಈ ನಾಯಕರಿಗೆ, ತಾವು ಹೊಸ ರಾಜಕಾರಣದ ಕಾರ್ಯಕ್ರಮ ನಕ್ಷೆಯನ್ನು (Agenda) ಮುಂದಿಟ್ಟು, ಅದರ ಆಧಾರದ ಮೇಲೆ ಸದ್ಯದ ರಾಜಕಾರಣದ ಚೌಕಟ್ಟಿನಿಂದ ಹೊರಬರಲಿಚ್ಛಿಸುವ ಮರ್ಯಾದಸ್ಥ ರಾಜಕೀಯ ನಾಯಕರನ್ನು ಆಕರ್ಷಿಸುವ ರಚನಾತ್ಮಕ ಪ್ರಯತ್ನ ಮಾಡದೆ, ಇದಕ್ಕೆ ವಿರುದ್ಧವಾದ ಪ್ರಯತ್ನಕ್ಕೆ ಕೈಹಾಕಿದ್ದರಿಂದಲೇ 'ಸರ್ವೋದಯ ಕರ್ನಾಟಕ'ವನ್ನು ಜನತೆಯ ಮುಂದೆ ತರಲು ಧೈರ್ಯವಿಲ್ಲದಾಗಿದೆಯೇನೋ ಅನ್ನಿಸುತ್ತಿದೆ. ಅದೇನೇ ಇರಲಿ, 'ಸರ್ವೋದಯ ಕರ್ನಾಟಕ'ದ ತಾತ್ವಿಕ ಕಲ್ಪನೆ ನಿಜವಾಗಿಯೂ ಪರ್ಯಾಯ ರಾಜಕಾರಣಕ್ಕೊಂದು ಅದ್ಭುತ ಮಾದರಿಯಂತಿದೆ. ಅದರ ನಾಯಕರು ಜನತೆಯಲ್ಲಿ ನಂಬಿಕೆಯಿಟ್ಟು ತೆರೆಮರೆಯ ದಲಿತ– ರೈತ ರಾಜಕಾರಣದ ಜಟಿಲತೆಗಳನ್ನು ನಿರ್ಲಕ್ಷಿಸಿ ಸಾರ್ವಜನಿಕರ ಮಧ್ಯೆ ಬಂದಿದ್ದರೆ, ಈ ಹೊತ್ತಿಗೆ ಅದು ರಾಜ್ಯಾದ್ಯಂತ ಒಂದು ಆಂದೋಲನವಾಗಿ ಬೆಳೆಯುವ ಸಾಧ್ಯತೆಗಳಿದ್ದವು.

ಈ ಮಾತನ್ನು ನಾನು ಇಷ್ಟು ವಿಶ್ವಾಸದಿಂದ ಏಕೆ ಹೇಳುತ್ತಿದ್ದೇನೆಂದರೆ, ಪ್ರಸಕ್ತ ರಾಜಕಾರಣದಿಂದ ಬೇಸತ್ತು, ಹೊಸ ರಾಜಕೀಯ ಸಂಸ್ಕೃತಿಯ ಅಗತ್ಯವನ್ನು ಮನದಾಳದೊಳಗೆಲ್ಲೋ ಹೊಳಹಾಗಿ ಕಾಣುತ್ತಿರುವ ದೊಡ್ಡ ಜನಸ್ತೋಮವೇ ಇದೆ. ಇದರ ಬಿಡಿ ಬಿಡಿ ಅಭಿವ್ಯಕ್ತಿ ರೂಪಗಳಾಗಿ, ಈ ದಿಸೆಯಲ್ಲಿ ಕ್ರಿಯಾಶೀಲರಾಗಲು ಅಥವಾ ತಮ್ಮ ಮಿತಿಗಳಲ್ಲೇ ಕೊಡುಗೆ ಸಲ್ಲಿಸಲು ಸಿದ್ಧವಿರುವ ಗುಂಪುಗಳು ರಾಜ್ಯಾದ್ಯಂತ ಅಲ್ಲಲ್ಲಿ ಕ್ರಿಯಾಶಾಲಿಯಾಗಿರುವುದನ್ನು ನಾನು ಸ್ವತಃ ಗಮನಿಸಿದ್ದೇನೆ ಹಾಗೂ ಅವುಗಳಲ್ಲಿ ಕೆಲವುಗಳೊಡನೆ ಒಡನಾಡಿದ್ದೇನೆ. ಉದಾಹರಣೆಗೆ ಮೊನ್ನೆ ತಾನೆ, ಹಾಸನದಂತಹ ಚಿಕ್ಕ ಊರಲ್ಲಿ 'ಜನತಾ ಮಾಧ್ಯಮ' ಪತ್ರಿಕೆ ಸಂಪಾದಕ ಆರ್.ಪಿ. ವೆಂಕಟೇಶಮೂರ್ತಿ ಪರ್ಯಾಯ ರಾಜಕಾರಣದ ಸಾಧ್ಯತೆಗಳನ್ನು ಚರ್ಚಿಸಲು ಕೊನೇ ನಿಮಿಷದಲ್ಲಿ ಕರೆದಿದ್ದ ಹಾಗೂ ಮಾರನೆಯ ದಿನ ಮಧ್ಯಾಹ್ನ ಅದೇ ಉದ್ದೇಶದಿಂದ ಏರ್ಪಡಿಸಿದ್ದ 'ತೇಜಸ್ವಿ ನಮನ' ಹಾಗೂ 'ಲೋಹಿಯಾ ನೆನಪು' ಕಾರ್ಯಕ್ರಮಕ್ಕೆ, ಅಂದು ಕಛೇರಿ ದಿನವಾಗಿದ್ದರೂ ಬಂದಿದ್ದ ಜನರ ಆಸೆ– ಆಸಕ್ತಿ ನೋಡಿದರೆ, 'ಸರ್ವೋದಯ ಕರ್ನಾಟಕ'ದ ನಾಯಕರು ನಂಬಿಕೆ ಕಳೆದುಕೊಳ್ಳುವ ಅಗತ್ಯವಿಲ್ಲವೆಂದು ಕಾಣುತ್ತದೆ. ಏಕೆಂದರೆ, 'ಸರ್ವೋದಯ ಕರ್ನಾಟಕ'ದ ಸ್ಥಾಪನೆಯ ಸಂದರ್ಭದಲ್ಲಿ ಅದರ ನಾಯಕರೇ ಹೇಳಿಕೊಂಡಿದ್ದಂತೆ, ಅದರ ಸದ್ಯದ ಉದ್ದೇಶ ಅಧಿಕಾರ ಹಿಡಿಯುವುದಾಗಿರದೆ, ರಾಜ್ಯದಲ್ಲಿ ಹೊಸದೊಂದು

ರಾಜಕೀಯ ಸಂಸ್ಕೃತಿಯನ್ನು ಬಿತ್ತಿ ಬೆಳೆಯುವುದೇ ಆಗಿದೆ. ಇದು ಇಂದಿನ ತುರ್ತು ಅಗತ್ಯವಷ್ಟೇ ಅಲ್ಲ, ಈಗ ಕರ್ನಾಟಕವನ್ನು ಸಾರ್ವತ್ರಿಕ ಲೂಟಿಯಿಂದ ರಕ್ಷಿಸಲು ಅನಿವಾರ್ಯವೂ ಆಗಿದೆ. ಹಾಗಾಗಿ ಈ ದಿಸೆಯಲ್ಲಿ ಗಂಭೀರ ಪ್ರಯತ್ನ ಮತ್ತೆ ಆರಂಭವಾಗಬೇಕಿದೆ.

ಮೇ ೧೮, ೨೦೦೭

ಇದು ಭಾರತ ! ಇದು ಭಾರತ !!

ಬರೋಡದಲ್ಲಿನ ಅಂತಾರಾಷ್ಟ್ರೀಯ ಖ್ಯಾತಿಯ ಕಲಾಶಾಲೆಯಲ್ಲಿ, ಚಂದ್ರಮೋಹನ್ ಎಂಬ ವಿದ್ಯಾರ್ಥಿ ತನ್ನ ಪರೀಕ್ಷೆಗಾಗಿ ಬರೆದಿದ್ದ ಚಿತ್ರ ಅಶ್ಲೀಲ ಹಾಗೂ ಧರ್ಮದ್ರೋಹಿ ಎಂದು ಆರೋಪಿಸಿ ಕೆಲವು ಹಿಂದೂ ಸಂಘಟನೆಗಳಿಂದ ಆ ಶಾಲೆಯಿದ್ದ ವಿಶ್ವವಿದ್ಯಾಲಯದ ಆವರಣದ ಮೇಲೆ ದಾಳಿ. ದಾಂಧಲೆಯ ಮೂಲಕ ಭಯದ ವಾತಾವರಣ ಸೃಷ್ಟಿ. ವಿದ್ಯಾರ್ಥಿಸಮೂಹ ಹಾಗೂ ಶಿಕ್ಷಕ ಸಿಬ್ಬಂದಿಗೆ ಬೆದರಿಕೆ. ವಿಭಾಗದ ಮುಖ್ಯಸ್ಥನ ಅಮಾನತಿಗೆ ಆಗ್ರಹ ಹಾಗೂ ಅದರಲ್ಲಿ ಯಶಸ್ವಿ ಕೂಡಾ. ಚಂದ್ರಮೋಹನನ ಮೇಲೆ ಸ್ಥಳೀಯ ನ್ಯಾಯಾಲಯದಲ್ಲಿ ಆರೋಪ ಸಲ್ಲಿಕೆ. ಆ ವಿದ್ಯಾರ್ಥಿಗೆ ಐದು ದಿನಗಳ ಸೆರೆಮನೆವಾಸದ ಶಿಕ್ಷೆ. ಇದನ್ನೆಲ್ಲ ಪೋಲೀಸ್ ಸಹಕಾರದಿಂದಲೇ ಒಂದೇ ದಿನದಲ್ಲಿ ಮಾಡಲಾಗಿದೆ! ಅಷ್ಟೇ ಅಲ್ಲ, ಆ ವಿದ್ಯಾರ್ಥಿಗೆ ಜಾಮೀನು ನೀಡುವ ಅಧಿಕಾರವಿರುವ ನ್ಯಾಯಾಧೀಶ ಇದ್ದಕ್ಕಿದ್ದಂತೆ ರಜೆ ಮೇಲೆ ಹೋಗುತ್ತಾರೆ... ಯಾರು ಹೇಳಿದರು, ನಮ್ಮ ನ್ಯಾಯಾಂಗ ನಿಧಾನ ಗತಿಯದೆಂದು?

ಮಧ್ಯಪ್ರದೇಶಧ ಇಂದೂರಿನಲ್ಲಿ ಮುಸ್ಲಿಮೇತರ (ಸಿಂಧಿ) ಹುಡುಗಿಯೊಬ್ಬಳು ಮುಸ್ಲಿಂ ಹುಡುಗನನ್ನು ಮದುವೆಯಾದದ್ದಕ್ಕಾಗಿ ಹಿಂದೂ ಧರ್ಮ ರಕ್ಷಣೆಗಾಗಿ ಇರುವುವೆಂದು ಹೇಳಲಾಗುವ ಸಂಘಟನೆಗಳಿಂದ ಊರು ತುಂಬ ಪ್ರತಿಭಟನೆ. ಉದ್ರೇಕಕಾರಿ ಘೋಷಣೆಗಳು. ಮದುವೆಯನ್ನು– ನವ ವಧು ವರರ ಕೋರಿಕೆಯ ಮೇರೆಗೇ– ಸಾರ್ವಜನಿಕ ಮಾನ್ಯತೆ ಹಾಗೂ ಬೆಂಬಲಕ್ಕಾಗಿ– ಒಂದು ಸುದ್ದಿ ತುಣುಕಾಗಿ ಪ್ರಸಾರ ಮಾಡಿದ ಟಿ.ವಿ. ವಾಹಿನಿಯ ಮೇಲೆ ಈ ಸಂಘಟನೆಗಳ ಬೆಂಬಲಿಗರಿಂದ ಹಲ್ಲೆ. ಅಂತರ್ಧರ್ಮೀಯ ಮದುವೆಗಳು ರಾಷ್ಟ್ರವಿರೋಧಿ ಕೃತ್ಯಗಳೆಂಬಂತೆ, ಗುಜರಾತ್– ರಾಜಸ್ಥಾನ್– ಸರ್ಕಾರಗಳಿಂದ ಅವುಗಳ ಗಣತಿಗಾಗಿ ಗುಪ್ತ ಆದೇಶ! ಇವೆಲ್ಲವುಗಳ ಮಧ್ಯೆ, ವಿಶ್ವ ಹಿಂದೂ ಪರಿಷತ್‌ನ ಗಿರಿರಾಜ ಕಿಶೋರರಿಂದ, 'ಮುಸ್ಲಿಮ್ ಹುಡುಗರ ಆಕರ್ಷಣೆ ಎಂದರೆ, ಮುಂಜಿ ಮಾಡಿಸಿಕೊಂಡ ಅವರು ಮುಸ್ಲಿಮೇತರ ಹುಡುಗಿಯರಿಗೆ ಹೆಚ್ಚಿನ ಶಾರೀರಿಕ ಸುಖ ನೀಡುತ್ತಾರೆ' ಎಂಬ ಕುತೂಹಲಕರ ಸಂಶೋಧನೆ ಬೇರೆ!

ಹಿಂದೂ ದೇವತೆಗಳನ್ನು ಅಶ್ಲೀಲವಾಗಿ ಚಿತ್ರಿಸಿದ್ದಾರೆಂಬ ಮೊಕದ್ದಮೆಯ ಸಂಬಂಧ ನ್ಯಾಯಾಲಯಕ್ಕೆ ಹಾಜರಾಗಲಿಲ್ಲವೆಂಬ ಕಾರಣದ ಮೇಲೆ, ಹರಿದ್ವಾರದ ಸ್ಥಳೀಯ ನ್ಯಾಯಾಲಯದಿಂದ ರಾಷ್ಟ್ರದ ಸುವಿಖ್ಯಾತ ಕಲಾವಿದ ಎಂ.ಎಫ್. ಹುಸೇನರ ಆಸ್ತಿ– ಪಾಸ್ತಿ ಮುಟ್ಟುಗೋಲಿಗೆ ಆಜ್ಞೆ! ಸದ್ಯ, ಸರ್ವೋಚ್ಚ ನ್ಯಾಯಾಲಯದಿಂದ ಕೆಳ ನ್ಯಾಯಾಲಯದ ವಿಚಾರಣೆಗೆ ತಡೆಯಾಜ್ಞೆ.

ಹಿರಿಯ ಕ್ರಿಕೆಟಿಗ ರವಿಶಾಸ್ತ್ರಿ ಎಲ್ಲೋ ಗೋಮಾಂಸ ತಿಂದನೆಂದು ನ್ಯಾಯಾಲಯದಲ್ಲಿ ದಾವೆ. ಅದಕ್ಕೆ ನ್ಯಾಯಾಲಯದ ಮನ್ನಣೆ!

ಗುಜರಾತ್‌ನಲ್ಲಿ ಒಂದಾದರಮೇಲೊಂದು ಬಹಿರಂಗಗೊಳ್ಳುತ್ತಿರುವ ನಕಲಿ ಎನ್‌ಕೌಂಟರ್‌ಗಳಲ್ಲಿ ಸತ್ತವರು ಮುಸ್ಲಿಮರೆಂಬ ಕಾರಣಕ್ಕೆ ಈ 'ಎನ್‌ಕೌಂಟರ್' ಗಳನ್ನು ನಡೆಸಿದ ಪೋಲೀಸ್ ಅಧಿಕಾರಿಗಳ ಪರವಾಗಿ ಹಿಂದೂ ಸಂಘಟನೆಗಳ ಪ್ರಚಾರಾಂದೋಲನ! ಈ ಪ್ರಕರಣಗಳ ಹಿಂದಿರುವುದು ದೇಶಭಕ್ತಿಯಲ್ಲ, ಗುಜರಾತ್– ರಾಜಸ್ಥಾನಗಳ ರಿಯಲ್ ಎಸ್ಟೇಟ್– ಗ್ರಾನೈಟ್ ಉದ್ಯಮಗಳ ತಿಮಿಂಗಿಲಗಳು ತಮ್ಮ ದುರ್ವ್ಯವಹಾರಗಳ ರಕ್ಷಣೆಗಾಗಿ ಪೋಲೀಸರಿಗೆ ಕೊಟ್ಟ ಸುಪಾರಿ ಎಂಬುದು ಕ್ರಮೇಣ ಸ್ಪಷ್ಟವಾಗುತ್ತಿದ್ದರೂ, ಈ ಪ್ರಕರಣದ ರೂವಾರಿ ಹಾಗೂ ಕೋಟ್ಯಾಂತರ ರೂಪಾಯಿಗಳ ಅಕ್ರಮ ಆಸ್ತಿ ಗಳಿಸಿರುವ ಗುಜರಾತ್ ಪೋಲೀಸ್ ಅಧಿಕಾರಿ ವನ್ಜಾರನ ಪರ ಅವನ ಜಾತಿ ಸಮುದಾಯದವರಿಂದ ಪ್ರತಿಭಟನೆ!

ಕೊಲ್ಲಾಪುರದಲ್ಲಿ ಮತಾಂತರದಲ್ಲಿ ತೊಡಗಿದ್ದರೆಂದು ಹೇಳಲಾದ ಇಬ್ಬರು ಕ್ರೈಸ್ತ ಪಾದ್ರಿಗಳ ಮೇಲೆ ರಕ್ತಸಿಕ್ತವಾದ ಹಲ್ಲೆ. ಪೋಲೀಸ್ ನಿಷ್ಕ್ರಿಯತೆ ಸೇರಿದಂತೆ ಪ್ರಕರಣದ ಬಗ್ಗೆ ಮಹಾರಾಷ್ಟ್ರ ಸರ್ಕಾರದಿಂದ ತನಿಖೆಗೆ ಆಜ್ಞೆ!

ಮಹಿಳೆಯರನ್ನು ಅಕ್ರಮವಾಗಿ ವಿದೇಶಗಳಿಗೆ ಸಾಗಿಸುವ ದಂಧೆಯಲ್ಲಿ, ತಮ್ಮ ಸಭೆಗಳಲ್ಲಿ 'ಮಾತೆಯರಿಗೇ ಪ್ರತ್ಯೇಕ ಸ್ಥಳ ಕಾದಿರಿಸುವ' ಸಂಘ ಪರಿವಾರದ ಪಕ್ಷವೂ ಸೇರಿದಂತೆ ನಾಲ್ಕಾರು ಪಕ್ಷಗಳಲ್ಲಿ ಹರಡಿ ಹೋಗಿರುವ ಸಂಸತ್ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರೇ ಭಾಗಿಯಾಗಿ; ವಿಚಾರಣೆ ಮುಂದುವರೆದಂತೆ ಒಬ್ಬೊಬ್ಬರೇ ಪೋಲೀಸರಿಗೆ ಶರಣು!

ತಮಿಳ್ನಾಡಿನ ಮಧುರೈನಲ್ಲಿ, ಅಲ್ಲಿನ ಮುಖ್ಯಮಂತ್ರಿಯ ಕುಟುಂಬ ರಾಜಕಾರಣದ ವೈಷಮ್ಯದಿಂದಾಗಿ, ಪ್ರತಿಕೂಲ ರಾಜಕೀಯ ಸಮೀಕ್ಷೆಯ ನೆಪದಲ್ಲಿ ಪತ್ರಿಕೆಯೊಂದರ ಮೇಲೆ ದಾಳಿ, ಹಲವರ ಮರಣ! ದಕ್ಷ ಕೇಂದ್ರ ಮಂತ್ರಿಯೊಬ್ಬರ ರಾಜಕೀಯ ಬಲಿ.

ಕರ್ನಾಟಕಕ್ಕೆ ಬಂದರೆ, ನಮ್ಮ ಜಲ ಸಂಪನ್ಮೂಲ ಮಂತ್ರಿ ಕೆ.ಎಸ್. ಈಶ್ವರಪ್ಪನವರಿಂದ ಗೋಹತ್ಯೆ ಮಾಡಿದವರ ಕೈ ಕತ್ತರಿಸಲು ಕರೆ! ನಂತರದಲ್ಲೇ, ಅದಕ್ಕೆ ಅವಕಾಶ ಮಾಡಿಕೊಡುವ ಕಾನೂನು ಮಾಡಲು ಸಲಹೆ ಮಾತ್ರ ನೀಡಿದ್ದಾಗಿ ಸ್ಪಷ್ಟನೆ!

ಜಾತಿ ಆಧಾರದ ಮೇಲೆ ಊಟದ ವ್ಯವಸ್ಥೆ ಮಾಡಿದ್ದ ಮತ್ತು ಗೋಮೂತ್ರ ಸರ್ವರೋಗ ನಿವಾರಿಣಿ ಎಂದು ವೈಜ್ಞಾನಿಕವಾಗಿ ಸಿದ್ಧವಾಗಿದೆ ಎಂದು ಹುಸಿ ಘೋಷಣೆ ಮಾಡಿ, ದನಗಳ ಹೆಸರಲ್ಲಿ ಜನರನ್ನು ಮರಳು ಮಾಡಿದ 'ವಿಶ್ವ ಸಮ್ಮೇಳನ'ವೊಂದಕ್ಕೆ ನಮ್ಮ

ಸರ್ಕಾರದಿಂದ ಎರಡು ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಹಣದ ಕೊಡುಗೆ! ನಮ್ಮ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳ ಪ್ರಕಾರ, ಸರ್ಕಾರ ಮಾಡಲಾಗದ ಕೆಲಸಗಳನ್ನು ಮಠ ಮಾನ್ಯಗಳು ಮಾಡುತ್ತಿವೆ! ಎಂತಹ ತಪ್ಪೊಪ್ಪಿಗೆ! ಅಥವಾ... ವ್ಯಂಗ್ಯ?

ಈ ಟೀಕೆಗಳಿಂದ ಕೆರಳಿದ ಯಡಿಯೂರಪ್ಪನವರಿಂದ ಈಗ ಸರ್ಕಾರಿ ಖಜಾನೆ ತಮ್ಮ ಅಥವಾ ತಮ್ಮ ಪಕ್ಷದ ಖಾಸಗಿ ಆಸ್ತಿಯೆಂಬಂತೆ, ಮತ್ತೆ ಆ ಮಠಕ್ಕೆ ಹತ್ತು ಕೋಟಿ ರೂಪಾಯಿ ಕೊಟ್ಟೇನು ಎಂಬ ಠೇಂಕಾರದ ಮಾತು!

ಕಂಬಾಲಪಲ್ಲಿ ದೌರ್ಜನ್ಯ ಪ್ರಕರಣದಲ್ಲಿ ತೀರ್ಪು ಬಂದು ತಿಂಗಳುಗಳು ಕಳೆದಿದ್ದರೂ, ಸರ್ಕಾರದಿಂದ ಮೇಲ್ಮನವಿಯ ಸುಳಿವಿಲ್ಲ. ಆದರೆ ಕಾಕತಾಳೀಯವೆಂಂತೆ, ರಾಜ್ಯದ ವಿವಿಧೆಡೆ ಸವರ್ಣೀಯರು ಮತ್ತು ಅಸ್ಪೃಶ್ಯರ ನಡುವೆ ಘರ್ಷಣೆಗಳ ಸ್ಫೋಟ. ಕೆಲವೆಡೆ, ಅಸ್ಪೃಶ್ಯರಿಗೆ ಬಹಿಷ್ಕಾರ...

ಬೆಂಗಳೂರಲ್ಲಿ ಭೂಮಿಯ ಬೆಲೆ ಚಿನ್ನದ ಬೆಲೆಯನ್ನೂ ಮೀರಿ ಬೆಳೆದಿದ್ದು, ಇಲ್ಲಿ ಸಾವಿರಾರು ಎಕರೆ ಸರ್ಕಾರಿ ಭೂಮಿ ಪ್ರಭಾವಿ ವ್ಯಕ್ತಿಗಳಿಂದಲೇ ಒತ್ತುವರಿಯಾಗಿದೆಯೆಂದು ಸದನ ಸಮಿತಿಯೇ ವರದಿ ನೀಡಿದ್ದರೂ, ಏನೂ ಮಾಡದ ಸರ್ಕಾರದಿಂದ ಸಕ್ರಮಕ್ಕಾಗಿ ಕಾಯುತ್ತಿರುವ ಬಡವರ ಒತ್ತುವರಿ ಭೂಮಿಯನ್ನಷ್ಟೇ ಆಯ್ದು ಹರಾಜು ಹಾಕುವ ಆತುರ... ಈ ಬಗ್ಗೆ ಸರ್ಕಾರದಿಂದ 'ಹೌದೇ, ಪರಿಶೀಲಿಸೋಣ' ಎಂದಷ್ಟೇ ಪ್ರತಿಕ್ರಿಯೆ!

ಈ ಒಂದೇ ವಾರದಲ್ಲಿ ಸಾಲ ಬಾಧೆ ತಾಳದೆ ಮೂವ್ವರು ರೈತರಿಂದ (ಅದರೊಲ್ಲಬ್ಬರು ತಮ್ಮ ಕಬ್ಬಿನ ಗದ್ದೆಗೆ ಬೆಂಕಿ ಇಟ್ಟು) ಆತ್ಮಹತ್ಯೆ.

ಸ್ವತಃ ಮುಖ್ಯಮಂತ್ರಿಯೇ ವಿಶ್ವವಿದ್ಯಾಲಯವೊಂದರ ಆವರಣಕ್ಕೆ ನುಗ್ಗಿ, ಮುಷ್ಕರ ನಿರತ ಉದ್ಯೋಗಿಗಳನ್ನು ಉಪಕುಲಪತಿಯ ವಿರುದ್ಧ ಎತ್ತಿಕಟ್ಟಿದ್ದನ್ನು ಎಲ್ಲಿಯಾದರೂ ಕೇಳಿದ್ದೀರಾ? ನಮ್ಮ ಯುವ ಮುಖ್ಯಮಂತ್ರಿ ಅದನ್ನು ಮಾಡಿದ್ದಾರೆ. ಏಕೆಂದರೆ, ಇದು ಕುಲ ಬಾಂಧವರ ಹಿತದ ಪ್ರಶ್ನೆ! ಈ ಕುಲಬಾಂಧವರೆಲ್ಲ, ಈ ಹಿಂದಿನ ಕುಲಬಾಂಧವನೊಬ್ಬ ಉಪಕುಲಪತಿಯಾಗಿ ಮಾಡಿದ ಅಕ್ರಮ ನೇಮಕಾತಿಯ ಲಾಭ ಪಡೆದವರು. ಅದನ್ನು ಮಾನ್ಯ ಮಾಡಲು ನಿರಾಕರಿಸಿರುವ ಸದ್ಯದ ಉಪಕುಲಪತಿಯನ್ನು ಬೆಂಬಲಿಸಬೇಕಾದ ನಮ್ಮ ಮುಖ್ಯಮಂತ್ರಿ, ಹೋಗಿ ಹೆದರಿಸಿ ಬಂದಿದ್ದಾರೆ. ಇದರ ವಿರುದ್ಧ ಯಾವ ಶಿಕ್ಷಣ ತಜ್ಞನಿಂದಲೂ ಸೊಲ್ಲಿಲ್ಲ!

– ಇದು ಕಳೆದ ವಾರದ ಭಾರತ! ಇದು ಸರಿ ಸುಮಾರಾಗಿ, ಪ್ರತಿ ವಾರದ ಪ್ರಸ್ತುತ ಭಾರತ ಕೂಡ. ಈ ಭಾರತ ಈಗ ಅಭೂತಪೂರ್ವವಾದ ಶೇ. ೧೦ರ ದರದೊಂದಿಗೆ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಮಾಧ್ಯಮಗಳು ಬೊಬ್ಬೆ ಹಾಕುತ್ತಲೇ ಇವೆ. ಆದರೆ, ಮೇಲೆ ಸಂಕ್ಷಿಪ್ತವಾಗಿ ಚಿತ್ರಿಸಿರುವ ಕಳೆದ ಒಂದು ವಾರದ (ಪೂರ್ತಿ ತಲೆ ಕೆಟ್ಟಂತಿರುವ) ಭಾರತವನ್ನು ಗಮನಿಸಿ ನೀವೇನಾದರೂ, ಮುನ್ನಡೆಯುತ್ತಿರುವುದು ಯಾವ ಕಡೆಗೆ ಮತ್ತು ಯಾಕೆ ಎಂದು ಗಾಬರಿಯಿಂದ, ಇಂತಹ ಮುನ್ನಡೆಯ ಬಗ್ಗೆ ಅನುಮಾನ

ತಾಳುವಿರಾದರೆ; ನೀವು ಹುಚ್ಚರೇ ಸರಿ ಎನ್ನುತ್ತದೆ, ಅದೇ ವಾರದಲ್ಲಿನ 'ಪ್ರಜಾವಾಣಿ' ಪತ್ರಿಕೆಯ ದಿನವಹಿ ಎಸ್.ಎಂ.ಎಸ್. ಸಮೀಕ್ಷೆಯೊಂದು. ಈ ಸಮೀಕ್ಷೆಯಲ್ಲಿ ಕೇಳಲಾದ, 'ಬಿಸಿಯಾಗುತ್ತಿರುವ ಧರೆ ಬಗ್ಗೆ ನೀಡಲಾಗುತ್ತಿರುವ ಮಾಹಿತಿ ಅತಿರಂಜಿತವೇ?'ಎಂಬ ಪ್ರಶ್ನೆಗೆ (ಈ ಪ್ರಶ್ನೆಯೇ ಎಷ್ಟು ಬೇಜವಾಬ್ದಾರಿಯದು ಎಂಬುದನ್ನೂ ಗಮನಿಸಿ) ಪ್ರತಿಕ್ರಿಯಿಸಿರುವವರಲ್ಲಿ ಶೇ. ೮೦ರಷ್ಟು ಜನ 'ಹೌದು' ಎಂದು ಎಂದು ಉತ್ತರಿಸಿದ್ದಾರೆ! ಅಂದರೆ ನಮ್ಮ ಜನ (ಈ ಪ್ರಶ್ನೆಯನ್ನು ರೂಪಿಸಿದ ಪತ್ರಕರ್ತನು ಪ್ರತಿನಿಧಿಸುವ ನಮ್ಮ ಮಾಧ್ಯಮದವರೂ ಸೇರಿದಂತೆ!) ಈ ಅಭೂತಪೂರ್ವ 'ಪ್ರಗತಿ'ಯ ಎಂತಹ 'ಸುಖ'ದಲ್ಲಿ ಹೇಗೆ ಮೈ ಮರೆತಿದ್ದಾರೆಂದರೆ, ಅವರಿಗೆ ದೂರದ ಸಿಡಿಲಿನ ಶಬ್ದವಿರಲಿ, ಹತ್ತಿರದ ಬೆಂಕಿಯ ತಾಪವೂ ತಾಗದಾಗಿದೆ!

ಇನ್ನು ಏಳು ವರ್ಷಗಳಲ್ಲಿ ಜಗತ್ತಿನ ಜನತೆ ತನ್ನ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕು– ಅಂದರೆ, ಬದುಕಿನ ವಿವಿಧ ರಂಗಗಳಲ್ಲಿನ ಪ್ರಸ್ತುತ ಇಂಧನ ಬಳಕೆಯ ರೀತಿ ನೀತಿಗಳನ್ನು ಪರಿಷ್ಕರಿಸಿಕೊಳ್ಳಬೇಕು. ಆ ಮೂಲಕ ಇಂಗಾಲದ ಹೊರಸೂಸುವಿಕೆಯ ಪ್ರಮಾಣವನ್ನು, ಕ್ರಮೇಣ ನಿಗದಿತ ಗತಿಯಲ್ಲಿ ತಗ್ಗಿಸಬೇಕು. ಇಲ್ಲದಿದ್ದಲ್ಲಿ, ಭೂಮಿ ಹಿಂದೆಂದೂ ಕಾಣದಂತಹ ಹವಾಮಾನ ಅಲ್ಲೋಲ ಕಲ್ಲೋಲಗಳಿಗೆ ಸಿಕ್ಕಿ, ಯಾವ ಜೀವ ಸಂತತಿಗೂ ಬದುಕಲು ಯೋಗ್ಯವಾದ ಜಾಗವಾಗಿ ಉಳಿಯಲಾರದು. ಹೀಗೆಂದು ಸ್ವತಃ ವಿಜ್ಞಾನಿಗಳೇ, ವಿಶ್ವಸಂಸ್ಥೆಯ ಮಾರ್ಗದರ್ಶನದಲ್ಲಿ ಏರ್ಪಾಡಾಗಿದ್ದ ಬ್ಯಾಂಕಾಕ್ ವಿಶ್ವ ಪರಿಸರ ಸಮ್ಮೇಳನದಲ್ಲಿ ವೈಜ್ಞಾನಿಕ ಪ್ರಯೋಗ ಹಾಗೂ ಸಮೀಕ್ಷೆಗಳ ಆಧಾರದ ಮೇಲೆ ನಿಷ್ಕರ್ಷಿಸಿ ಹೇಳಿದ್ದರೂ ನಾವು– 'ಪ್ರಜಾವಾಣಿ'ಯ ಪ್ರಕಾರ ಶೇ. ೮೦ರಷ್ಟು ಜನ– ನಂಬಲಾರದವರಾಗಿದ್ದೇವೆ! ಇದು ಹತ್ತು ವರ್ಷಗಳ ಹಿಂದೆ ಕ್ಯೂಟೋ ಸಮ್ಮೇಳನದಲ್ಲಿ ನೀಡಲಾಗಿದ್ದ ಸಲಹೆ ಹಾಗೂ ಎಚ್ಚರಿಕೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಹೋಗಿರುವ ಜಗತ್ತಿಗೆ, ಈಗ ವಿಜ್ಞಾನಿಗಳು ನೀಡಿರುವ ಕೊನೆಯ ಎಚ್ಚರಿಕೆ. ಆದರೂ ನಾವು ಕೇಳಲು ನಿರಾಕರಿಸುತ್ತಿದ್ದೇವೆ... ಆಶ್ಚರ್ಯವೆಂದರೆ, ಯಾವ ವಿಜ್ಞಾನದ ಸುಖ ಫಲಗಳನ್ನು ಉಣ್ಣುತ್ತ ಈ ಆಧುನಿಕ ನಾಗರೀಕತೆಯನ್ನು ನಾವೂ ಸ್ವಾಗತಿಸಿದ್ದೆವೋ, ಆ ವಿಜ್ಞಾನವೇ ಇಂದು ಈ ನಾಗರೀಕತೆಗೆ ಕಡಿವಾಣ ಹಾಕಬೇಕೆಂದು ಬಾರಿ ಬಾರಿ ಹೇಳುತ್ತಿದ್ದರೂ, ಅದಕ್ಕೆ ಪ್ರತಿಸ್ಪಂದಿಸುವ ಶಕ್ತಿಯನ್ನೇ ನಾವಿಂದು ಕಳೆದುಕೊಂಡಿದ್ದೇವೆ. ಎಂತಹ 'ಅಂಗ'ವಿಕಲತೆ ಇದು!

ಮನಸ್ಸನ್ನು ವಿಸ್ತರಿಸಬೇಕಾದ ವಿಜ್ಞಾನ, ಮನಸ್ಸನ್ನು ಮುಚ್ಚಿಬಿಡುವ ತಂತ್ರಜ್ಞಾನವಾಗಿ ಅವನತಿಗೊಳ್ಳುವ ಈ ದುರಂತವನ್ನೇ ಗಾಂಧೀಜಿ, ಆಧುನಿಕ ನಾಗರೀಕತೆಯ ಆಂತರಿಕ ದೌರ್ಬಲ್ಯವೆಂದು ಗುರುತಿಸಿ, ಅದರ ವಿರುದ್ಧ ಎಚ್ಚರಿಕೆ ನೀಡಿದ್ದು. ಆ ಎಚ್ಚರಿಕೆಯೇ ಇಂದು ಆಧುನಿಕ ಪರಿಭಾಷೆಯಲ್ಲಿ ಪರಿಸರದ ಪ್ರಶ್ನೆಯಾಗಿ ನಮ್ಮ ಮುಂದೆ ಪ್ರಸ್ತುತಗೊಳ್ಳುತ್ತಿದೆ. ಆದರೇನು, ಈ ನಾಗರೀಕತೆಯ ಸದ್ಯದ ನಾಯಕತ್ವ ವಹಿಸಿರುವ ಮತ್ತು ಧರೆಯ ಬಿಸಿಯೇರಿಕೆಗೆ ಬಹು ದೊಡ್ಡ ಕೊಡುಗೆ ನೀಡುತ್ತಿರುವ ದೇಶವಾದ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಷ್ ಈಗಲೂ ಕೂಡ, 'ನನ್ನ ಜನ ತಮ್ಮ ಬದುಕಿನ ಶೈಲಿಯನ್ನು ಬದಲಿಸಿಕೊಳ್ಳಲು ಸಿದ್ಧರಿಲ್ಲ'

ಎಂದು ಘೋಷಿಸುವ ಮೂಲಕ ಈ ನಾಗರೀಕತೆ ಮೂರ್ಖತನದ ಪರಮಾವಧಿಯನ್ನು ಮುಟ್ಟಿರುವ ಸೂಚನೆಯನ್ನು ನೀಡಿದ್ದಾರೆ. ಕ್ಯೂಟೋ ಸಮ್ಮೇಳನ ರೂಪಿಸಿದ ಪರಿಸರ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸಿ ತಳೆದ ನಿಲವನ್ನು ಅಮೆರಿಕಾ ಬದಲಾಯಿಸಿಕೊಂಡಿಲ್ಲ. ಅಂದರೆ, 'ಇರಾಕ್ ಯದ್ಧ'ಗಳಿಗೆ ಸದ್ಯಕ್ಕಂತೂ ಕೊನೆಯಿಲ್ಲ!

ಇದು ಮಾನವತೆ ಪ್ರವೇಶಿಸಿರುವ ಪಾತಾಳ ಲೋಕ. ಸುಖದ ಅಮಲಿನಲ್ಲಿ ಅಥವಾ ನಿರೀಕ್ಷೆಯಲ್ಲಿ ಎಲ್ಲ ಸೂಕ್ಷ್ಮಗಳನ್ನೂ, ಸಂವೇದನಾಶೀಲತೆಯನ್ನೂ ಕಳೆದುಕೊಳ್ಳುತ್ತಿರುವ ಜನಾಂಗವೊಂದು ಜಗತ್ತಿನಾದ್ಯಂತ ಸೃಷ್ಟಿಯಾಗುತ್ತಿರುವ ದುರಂತ ಚಿತ್ರವಿದು. ಇದಕ್ಕೆ ಕಾರಣ, ಸಮಾಜದ ಒಳಚೇತನವಾದ 'ಧಾರ್ಮಿಕತೆ' ಎನ್ನುವುದು ವಿಕ್ಷಿಪ್ತಗೊಳ್ಳುತ್ತಿರುವುದೇ ಆಗಿದೆ. ಮನುಷ್ಯನ ಎಲ್ಲ ಸಹಜ ದೌರ್ಬಲ್ಯಗಳ ವಿರುದ್ಧ ಮನಸ್ಸಾಕ್ಷಿಯ ರೂಪದಲ್ಲಿ ಅರಳಿಕೊಳ್ಳಬೇಕಾದ ಧರ್ಮವಿಂದು ಆಧುನೀಕರಣದ ಒತ್ತಡಗಳಿಗೆ ಸಿಕ್ಕಿ, ಕೇವಲ ವಿಧಿ-ನಿಷೇಧಗಳ ಕರ್ಮಕಾಂಡವಾಗಿ ಕ್ರಿಯಾಶೀಲವಾಗತೊಡಗಿದೆ. ಸಿರಿವಂತರ ಸಿರಿ ಹೆಚ್ಚಿದಷ್ಟೂ ಈ ಕರ್ಮಕಾಂಡ ಅವರ ಪಾಪಪ್ರಜ್ಞೆಯ ಪ್ರತೀಕವಾಗುತ್ತಾ ಹಲವು ಹಿಂಸಾತ್ಮಕ ರೂಪಗಳನ್ನು ಪಡೆಯುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಅಮೇರಿಕಾದಂತಹ ಅಮರಿಕಾವೇ ಇಂದು 'ನವ ಸಂಪ್ರದಾಯವಾದಿ'(Neo conservatives)ಗಳ ಕೈವಶವಾಗಿ, ಅಮೆರಿಕನ್ ಸರ್ಕಾರದ ನೀತಿ ನಿರ್ಧಾರಗಳ ಹಿಂದೆ ಅಲ್ಲಿನ ಚರ್ಚ್‌ನ ಕೈವಾಡ ಎದ್ದು ಕಾಣವಂತಾಗಿದೆ. ಇನ್ನು ಮುಸ್ಲಿಂ ರಾಷ್ಟ್ರಗಳ ಕಥೆ ಹೊಸದೇನೂ ಅಲ್ಲ. ಹೊಸದು ಅಂದರೆ, ಉದಾರವಾದಿ ಮುಸ್ಲಿಂ ಸಮಾಜಗಳನ್ನು ಸಲಹುತ್ತಿದ್ದ ಟರ್ಕಿ, ಈಜಿಪ್ಟ್, ಇರಾಕ್ ಹಾಗೂ ಬಾಂಗ್ಲಾದೇಶಗಳಲ್ಲೂ ಈಗ ಮತೀಯ ಮೂಲಭೂತವಾದ ದೊಡ್ಡ ಪ್ರಮಾಣದಲ್ಲಿ ತಲೆ ಎತ್ತುತ್ತಿರುವುದು. ದುಃಖದ ಸಂಗತಿಯೆಂದರೆ, ಭಾರತವೂ ಇದೇ ಹಾದಿಯಲ್ಲಿ ನಡೆಯುವ ಆತಂಕ ಈಗ ಎದುರಾಗಿರುವುದು. ಈ ಬರಹದ ಮೊದಲಲ್ಲಿ ನೀಡಿರುವ ನಮ್ಮ ಇಂದಿನ ದೈನಂದಿನ ಬದುಕಿನ ವಿವರಗಳ ಪರೋಕ್ಷ ಸೂಚನೆ ಇದೇ ಆಗಿದೆ.

ಭಾರತದ ಧರ್ಮ ಇತರ ಧರ್ಮಗಳ 'ಹಾವಳಿ'ಯನ್ನು ಎದುರಿಸಲು ಹೋಗಿ, ತಾನೇ ಅವುಗಳಂತಾಗುವ ದುರಂತವನ್ನೀಗ ಎದುರಿಸುತ್ತಿದೆ. ಇತರ ಧರ್ಮಗಳ ಈ ಹಾವಳಿಗೆ ತಾನು ತನ್ನೆಲ್ಲ ಆಧ್ಯಾತ್ಮಿಕತೆಯನ್ನು ಕಳೆದುಕೊಂಡಿರುವುದೇ ಕಾರಣವಾಗಿದೆ ಎಂಬ ಜ್ಞಾನೋದಯ ಭಾರತದ ಧರ್ಮಕ್ಕಿನ್ನೂ ಆಗಿಲ್ಲ. ಆಗುವಂತೆಯೂ ತೋರುತ್ತಿಲ್ಲ, ಅದರ ನಾಯಕತ್ವದ ಸದ್ಯದ ಶಸ್ತ್ರಾಸ್ತ್ರ ಸ್ವರೂಪ ನೋಡಿದರೆ! ಇದರ- ಇಂತಹ ವಾತಾವರಣದ- ಪರಿಣಾಮಗಳು ಇಂದು, ನಮ್ಮ ಶಾಸಕಾಂಗವಿರಲಿ- ಅದನ್ನು ಹೇಗೋ ಚುನಾವಣೆಗಳ ಮೂಲಕ ನಿವಾರಿಸಿಕೊಳ್ಳಬಹುದು- ನಮ್ಮ ಕಾರ್ಯಾಂಗ (ವಿಶೇಷವಾಗಿ ಪೋಲೀಸ್ ಇಲಾಖೆ) ಮತ್ತು ಮುಖ್ಯವಾಗಿ ನ್ಯಾಯಾಂಗದ ಮೇಲೆ ಆಗುತ್ತಿರುವ ರೀತಿ ನೋಡಿದರೆ, ನಾವು ಹೆಚ್ಚು ಹೆಚ್ಚು ಆಧುನಿಕವಾಗುತ್ತಾ ಹೋದಂತೆ ಹೇಗೆ ಹೆಚ್ಚೆಚ್ಚು ಅನಾಗರೀಕವಾಗುತ್ತಾ ಹೋಗುತ್ತಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಪೋಲೀಸ್ ಹಾಗೂ ನ್ಯಾಯಾಂಗದ ಕೆಳ

ಹಂತಗಳಿಗಷ್ಟೇ ಹಬ್ಬಿರುವ ಧಾರ್ಮಿಕ ವಿಕ್ಷಿಪ್ತತೆಯ ಈ ರೋಗ, ಮೇಲಿನ ಹಂತಗಳಿಗೂ ತಲುಪಲು ಬಹು ಕಾಲ ಬೇಕಾಗಲಾರದು, ಪರಿಸ್ಥಿತಿ ಹೀಗೇ ಮುಂದುವರೆದರೆ. ಅಂದರೆ ಜನತೆ, ಮಾರುಕಟ್ಟೆ- ಆಧುನಿಕತೆಯ ಅಮಲಿನಲ್ಲಿ ತನ್ನ ಪಜ್ಞೆಯನ್ನೇ ಕಳೆದುಕೊಳ್ಳುತ್ತಾ, ಕೊನೆಗೆ ಭೂಮಿಯನ್ನೇ ಕಳೆದುಕೊಳ್ಳುವ ಸ್ಥಿತಿಯನ್ನು ಆಹ್ವಾನಿಸುವ ದಾರಿಯಲ್ಲಿ ನಡೆಯುತ್ತಾ ಹೋದರೆ!

ಈ ನಡಿಗೆಯ ದಿಕ್ಕನ್ನು, ರಾಜಕೀಯ ಇಚ್ಛಾಶಕ್ತಿಯಿದ್ದರೆ ಬದಲಾಯಿಸಬಹುದು ಎಂಬ ವಿಶ್ವಾಸವನ್ನು ಹುಟ್ಟಿಸುವಂತಿದೆ, ಉತ್ತರ ಪ್ರದೇಶದ ಇತ್ತೀಚಿನ ಚುನಾವಣೆಯ ಫಲಿತಾಂಶಗಳು. ಇಲ್ಲಿ ನಾನು ಬಿ.ಎಸ್.ಪಿ.ಯ ವಿಜಯದ ಬಗ್ಗೆ ಹೇಳುತ್ತಿಲ್ಲ. ಏಕೆಂದರೆ, ಮನುಷ್ಯನ ಪ್ರಜ್ಞೆ ತಪ್ಪಿಸುವ ಆಧುನಿಕ ನಾಗರೀಕತೆ ಕುರಿತಂತೆ ಬಿ.ಎಸ್.ಪಿ. ನಾಯಕರ ನಿಲುವು- ಅವರು ಬುದ್ಧನಿಗೆ ನಮಿಸುವವರಾದರೂ, ಅದು ಬರೀ ಪ್ರತೀಕಾರಾರ್ಥವಾದುದಾಗಿರುವುದರಿಂದ- ಇತರ ಪಕ್ಷಗಳ ನಾಯಕರಿಗಿಂತ ವಿಭಿನ್ನವಾಗಿರುವಂತೆ ಕಾಣುತ್ತಿಲ್ಲ. ಸಿರಿ ಸಂಪತ್ತನ್ನು ಕುರಿತಂತೆ ಅವರ ನಾಯಕಿ ಪದೇ ಪದೇ ಪ್ರದರ್ಶಿಸುತ್ತಿರುವ ದೌರ್ಬಲ್ಯವೇ ಇದಕ್ಕೆ ಸಾಕ್ಷಿಯಾಗಿದೆ.. ನಿಜ, ಬಿ.ಎಸ್.ಪಿ. ಸದ್ಯದ ಎಲ್ಲ ರಾಜಕೀಯ ಪಕ್ಷಗಳು ಪ್ರತಿನಿಧಿಸುವ ಅವಾಂತರಕಾರಿ ಪರಿಸ್ಥಿತಿಗೆ ಪರ್ಯಾಯವಲ್ಲದಿರಬಹುದು; ಆದರೆ ಕಣ್ಣಿಗೆ ರಾಚುವಂತಹ ದೊಡ್ಡ ಪ್ರತಿಕ್ರಿಯೆಯಂತೂ ಹೌದು. ಅಷ್ಟೇ ಅಲ್ಲ, ಹೀಗೇ ಎಚ್ಚರ ತಪ್ಪುತ್ತಾ ಹೋದರೆ ಎಂತಹ ಪರ್ಯಾಯ ರೂಪುಗೊಳ್ಳಬಹುದು ಎಂಬುದರ ಎಚ್ಚರಿಕೆ ಗಂಟೆ ಕೂಡಾ ಆಗಿರಬಹುದು!

ಮೇ ೨೫, ೨೦೦೭

ಮಾಧ್ಯಮಗಳ ಮಾಯಾ ಬಝಾರ್ !

ಮಾಧ್ಯಮಗಳ ಎಲ್ಲ ಸಮೀಕ್ಷೆ ಮತ್ತು ನಿರೀಕ್ಷೆಗಳನ್ನು ಹುಸಿ ಮಾಡಿ ಮಾಯಾವತಿ ಸ್ವಂತ ಬಲದ ಮೇಲೆ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಈ ಚುನಾವಣೆಯ ಮೂಲಕ ಮೂಡಿ ಬಂದ 'ಕಥಾನಕ' (ಇಂಗ್ಲಿಷ್ ಟಿ.ವಿ. ಮಾಧ್ಯಮಗಳ ಪರಿಭಾಷೆಯಲ್ಲಿ 'Big Story') ಎಂದರೆ, ಮಾಯಾವತಿ ರೂಪಿಸಿದ ಹೊಸ, ಯಶಸ್ವಿ ಜಾತಿ ಸಮೀಕರಣವೆಂದು ರಾಷ್ಟ್ರೀಯ ಟಿ.ವಿ. ವಾಹಿನಿಗಳು ಹೇಳುತ್ತಿವೆ. ಆದರೆ, ಇಲ್ಲಿನ ನಿಜವಾದ 'ಕಥಾನಕ' ಎಂದರೆ, ಈ ಚುನಾವಣಾಂತ್ಯ ಸಮೀಕ್ಷೆಗಳ ಮೂಲಕ ತನ್ನ ನೋಡುಗರ ಕಿವಿಗೆ ಹೂವಿರಿಸಿ ತನ್ನ ಮುಂದೆ ಕೂರಿಸಿಕೊಳ್ಳುವ ಈ ಟಿ.ವಿ. ವಾಹಿನಿಗಳ ಹುನ್ನಾರ ಬಯಲಾದದ್ದು. ಈ ಟಿ.ವಿ. ವಾಹಿನಿಗಳು, ತಾವು ಪ್ರಾಯೋಜಿಸಿದ್ದ ಚುನಾವಣಾಂತ್ಯದ ಸಮೀಕ್ಷೆಗಳಲ್ಲಿ ಮಾಯಾವತಿಯವರ ಪಕ್ಷಕ್ಕೆ ೧೧೦ರಿಂದ ಹೆಚ್ಚೆಂದರೆ ೧೫೦ರವರೆಗೆ ಮಾತ್ರ ವಿಧಾನಸಭಾ ಸ್ಥಾನಗಳನ್ನು ಮುನ್ನೋಡಿ ಅತಂತ್ರ ವಿಧಾನ ಸಭೆಯ ಭವಿಷ್ಯ ನುಡಿದಿದ್ದವು. ಇದರ ಆಧಾರದ ಮೇಲೇ ಭವ್ಯ ರಾಷ್ಟ್ರೀಯ ಚರ್ಚೆಗಳನ್ನೂ ನಡೆಸಿದ್ದವು. ಆದರೀಗ, ತಮ್ಮ ಈ 'ವೈಜ್ಞಾನಿಕ ಸಮೀಕ್ಷೆಗಳು' ಹೀಗೆ ಸಾರಾ ಸಗಟಾಗಿ ತಲೆಕೆಳಗಾದದ್ದಾದರೂ ಏಕೆ ಎಂಬ ಬಗ್ಗೆ ಕ್ಷಮಾಪಣೆ ಇರಲಿ, ಒಂದು ವಿವರಣೆಯನ್ನೂ ನೀಡದೆ ನಿರ್ಲಜ್ಜೆಯಿಂದ, ತಾವು ಮುನ್ನೋಡಿದ್ದಂತೆಯೇ ಮಾಯಾವತಿ ಸರ್ಕಾರ ರಚಿಸಿದ್ದಾರೆ ಎಂದು 'exclusive' ಹೆಮ್ಮೆಯಿಂದ ಘೋಷಿಸಿಕೊಂಡು ತಮ್ಮ ರಾಷ್ಟ್ರೀಯ ಚರ್ಚೆಗಳನ್ನು ಮುಂದುವರೆಸಿರುವುದು ನಮ್ಮ ಈ ಮಾಧ್ಯಮಗಳ ಭಂಡತನಕ್ಕೆ ಸಾಕ್ಷಿಯಾಗಿದೆ.

ಹಾಗೆ ನೋಡಿದರೆ, ಈ ಮಾಧ್ಯಮಗಳಿಗೆ ಬೇಕಿರುವುದು ಸತ್ಯವಲ್ಲ. ಬದಲಿಗೆ, ಸತ್ಯದ ತಮ್ಮದೇ ಆವೃತ್ತಿಗಳನ್ನು ರಚಿಸಿಕೊಂಡು, ಅವುಗಳ ಆಧಾರದ ಮೇಲೆ ಮಸಾಲಾ ಚರ್ಚೆಗಳನ್ನು ಏರ್ಪಡಿಸುವ ಮೂಲಕ ತಂತಮ್ಮ ಜಾಹೀರಾತು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು. ಅವು ದಿನವಹಿ ನಡೆಸುತ್ತಿರುವ ಇ– ಮೇಲ್ ಮತ್ತು ಎಸ್.ಎಂ.ಎಸ್.

ಆಧಾರಿತ ಸಮೀಕ್ಷೆಗಳನ್ನು ಅಥವಾ ತನ್ನ ಒಂದಿಷ್ಟು ಪ್ರೇಕ್ಷಕರನ್ನು ಕೂರಿಸಿಕೊಂಡು ನಡೆಸುವ ಚರ್ಚಾಕೂಟ (Talk *show*– ಅಂದರೆ, ಮಾತಿನ ಆಟ!)ಗಳ ವಿನ್ಯಾಸವನ್ನು ಗಮನಿಸಿ. ತಮ್ಮ ವಾಹಿನಿಗಳಿಗೆ ವಾಣಿಜ್ಯಕವಾಗಿ ಲಾಭದಾಯಕವಾಗುವ ರೀತಿಯ ಚರ್ಚೆಗಳಿಗೆ ಅನುವು ಮಾಡಿಕೊಡುವಂತಹ ಪ್ರಶ್ನೆಗಳನ್ನು (ಇತ್ತೀಚಿನ ಉದಾ: ಗುಜರಾತ್ ನಕಲಿ ಎನ್‌ಕೌಂಟರ್‌ಗಳ ಬಗೆಗಿನ ವಿಚಾರಣೆಯನ್ನು ಸಿ.ಬಿ.ಐ.ಗೆ ಒಪ್ಪಿಸಲು ಸುಪ್ರೀಂ ಕೋರ್ಟಿನ ನಿರಾಕರಣೆಯು ನರೇಂದ್ರ ಮೋದಿಯವರಿಗೆ ದೊರೆತಿರುವ ವಿಜಯವೇ?) ಕೇಳುವ ಮೂಲಕ ತನ್ನ ಪ್ರೇಕ್ಷಕ ವರ್ಗದಲ್ಲಿ ಒಂದು ನಿರ್ದಿಷ್ಟ ರಾಜಕೀಯ ಅಭಿಪ್ರಾಯ ರೂಪಿಸಲಾಗುತ್ತದೆ. ನಂತರ ಅದರ ಆಧಾರದ ಮೇಲೆ ಒಂದು ಸಾರ್ವತ್ರಿಕ ಸಾರ್ವಜನಿಕ ಅಭಿಪ್ರಾಯವನ್ನು ಕಟ್ಟುವ ಪ್ರಯತ್ನ ಮಾಡಲಾಗುತ್ತದೆ. ಇಂತಹ ಪ್ರಯತ್ನಗಳು ಮಾಧ್ಯಮಗಳು ತಮ್ಮ ಸೀಮಾರೇಖೆಯನ್ನು ಮೀರಲು ಹಾಗೂ ರಾಜಕಾರಣಿಗಳನ್ನು ಟೀಕಿಸುತ್ತಲೇ ಅವರ ರಾಜಕಾರಣವನ್ನು ಮೀರಿಸುವಂತಹ ರಾಜಕಾರಣ ಮಾಡಲು ಹವಣಿಸುತ್ತಿರುವುದರ ಸೂಚನೆಗಳೇ ಆಗಿವೆ! ಮಾಧ್ಯಮಗಳು ಹೀಗೆ ತಮ್ಮೆಲ್ಲ ಸಾಮಾಜಿಕ ಕರ್ತವ್ಯಗಳನ್ನು ಮರೆತು, ಒಂದು ಲಾಭಾಧಾರಿತ ಕೈಗಾರಿಕೆಯಾಗಿ ಮಾತ್ರ ಬೆಳೆಯುತ್ತಿರುವುದು ಆರೋಗ್ಯಕರ ಸಮಾಜದ ದೃಷ್ಟಿಯಿಂದಂತೂ ಒಳ್ಳೆಯದಲ್ಲ. ಇತ್ತೀಚಿನ ದಿನಗಳಲ್ಲಿ ಎಲ್ಲ ರಂಗಗಳಲ್ಲೂ ನಮಗೆ ಅಮೆರಿಕಾವೇ ಮಾದರಿಯಾಗುತ್ತಿರುವುದರ ಇನ್ನೊಂದು ಉದಾಹರಣೆಯಂತೆ ಗೋಚರಿಸುತ್ತಿರುವ ಈ ಬೆಳವಣಿಗೆ, ದೇಶದ ರಾಜಕಾರಣದ ಚುಕ್ಕಾಣಿ ಜನತೆಯ ಕೈತಪ್ಪಿ ಪೂರ್ತಿಯಾಗಿ ಉದ್ಯಮ ವಲಯದ ಕೈವಶವಾಗುವ ಅಪಾಯವನ್ನೊಳಗೊಂಡಿದೆ. ಏಕೆಂದರೆ, ಅಮೆರಿಕಾದ ರಾಜಕಾರಣ, ಅರ್ಧ ಶಶ್ತ್ರಾಸ್ತ್ರ ತಯಾರಿಕಾ ಉದ್ಯಮದ ಅಧಿಪತಿಗಳ ಹಾಗೂ ಇನ್ನರ್ಧ ಮಾಧ್ಯಮ ಉದ್ಯಮದ ಅಧೀಪತಿಗಳ ಪ್ರಭಾವದಲ್ಲಿದೆ ಎಂದು ಹೇಳಲಾಗುತ್ತಿದೆ.

ಈ ಇಂಗ್ಲಿಷ್ ಟಿ.ವಿ. ಮಾಧ್ಯಮಗಳು ನಡೆಸುತ್ತಿರುವ ಇಂತಹ ಕೃತಕ ರಾಜಕೀಯ ಚರ್ಚೆಗಳಲ್ಲಿ, ಚರ್ಚೆಯನ್ನು ಆದಷ್ಟೂ ವಿವಾದಾಸ್ಪದಗೊಳಿಸಿ ಅದರ ಕಾವೇರಿಸುವ ಮೂಲಕ ಹೆಚ್ಚೆಚ್ಚು ಪ್ರೇಕ್ಷಕರನ್ನು ಆಕರ್ಷಿಸುವ ಉದ್ದೇಶವಿದೆ. ಹಾಗಾಗಿಯೇ, ಅದರ ಸಂಚಾಲಕರು ಪದೇ ಪದೇ ಹಾಕುವ ಮುಜುಗರದ ಪ್ರಶ್ನೆಗಳು ಹಾಗೂ ಪರೋಕ್ಷ ಛೀಮಾರಿಗಳ ನಡುವೆಯೂ ಇಷ್ಟಗಲ ಬಾಯಿ ಬಿಟ್ಟುಕೊಂಡು ಭಾಗವಹಿಸುವ ನಮ್ಮ ರಾಜಕಾರಣಿಗಳನ್ನು ನೋಡಿದಾಗ; ಈ ಇಬ್ಬರೂ ಸೇರಿ ರಾಷ್ಟ್ರಜೀವನವನ್ನೇ ಒಂದು ವಾಣಿಜ್ಯೋದ್ಯಮದ ಆಟವನ್ನಾಗಿ ಪರಿವರ್ತಿಸುವ ಪೈಪೋಟಿಯಲ್ಲಿದ್ದಾರೇನೋ ಎಂಬ ಅನುಮಾನ ಬಂದರೆ ಆಶ್ಚರ್ಯವಿಲ್ಲ. ಈ ಮಾಧ್ಯಮಗಳು ಹಿಂದೆ ಇದ್ದಂತೆ ಈಗಲೂ ಬೃಹತ್ ಉದ್ಯಮಿಗಳ ಒಡೆತನದಲ್ಲೇ ಇರುವುವಾದರೂ, ಅವುಗಳ ಸಂಚಾಲಕ ಸಿಬ್ಬಂದಿ ಸಂಪೂರ್ಣ ಬದಲಾಗಿದೆ. ಹಿರಿಯ, ಅನುಭವಿ, ವೃತ್ತಿಪರ ಮಾಧ್ಯಮ ತಜ್ಞರು ಕಾಣೆಯಾಗಿ, ಅವರ ಜಾಗದಲ್ಲಿ ಹೊಸ ಮಾಧ್ಯಮ ರಾಜಕಾರಣಕ್ಕೆ ತಕ್ಕುನಾದ, ಉದ್ಯಮ ಲೋಕದ ಬಾಡಿಗೆ ಬಂಟರೇ ತುಂಬಿ ಹೋಗಿದ್ದಾರೆ. ಈ ಯುವ ಪಡ್ಡೆಗಳಲ್ಲಿ ಬಹುಪಾಲು ಜನಕ್ಕೆ ಪಟಪಟನೆ ಇಂಗ್ಲಿಷ್ ಮಾತಾಡುವ ಹಾಗೂ

ಎಲ್ಲಂದರಲ್ಲಿ ನುಗ್ಗಿ 'ಕಥಾನಕ'ಗಳನ್ನು ಕಟ್ಟಿಕೊಂಡು ಬರುವ ಚಾಕಚಕ್ಯತೆಗಳ ಹೊರತಾಗಿ, ಮತ್ತಾವ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸ್ಮೃತಿಯಾಗಲೀ, ಮುನ್ನೋಟವಾಗಲೀ ಇರುವಂತೆ ತೋರುತ್ತಿಲ್ಲ. ಮಾಧ್ಯಮ ಪೈಪೋಟಿ ಹೆಚ್ಚಿದಷ್ಟೂ ಇಂತಹವರ ಸಂಖ್ಯೆ ಹೆಚ್ಚುತ್ತಿದೆ. ಸದ್ಯ, ಭಾರತದಲ್ಲಿ ಇಂಗ್ಲಿಷ್ ಟಿ.ವಿ. ವಾಹಿನಿಗಳನ್ನು ನೋಡುವವರ ಸಂಖ್ಯೆ ಗಣನೀಯವಾಗಿಲ್ಲವೆಂದು ಸಮಾಧಾನ ಪಟ್ಟುಕೊಳ್ಳಬಹುದೇನೋ! ಈ ಇಂಗ್ಲಿಷ್ ಟಿ.ವಿ. ವಾಹಿನಿಗಳಿಗಿಂತ ಹೆಚ್ಚು ಪ್ರೇಕ್ಷಕರನ್ನು ಹೊಂದಿರುವ ಹಿಂದಿ ವಾರ್ತಾ ವಾಹಿನಿಗಳು ಸಾಕಷ್ಟು ಸಂಖ್ಯೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಇದೇ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆಯಾದರೂ, ಇವು ಭಾರತೀಯ ಭಾಷೆ ಮತ್ತು ನುಡಿಗಟ್ಟುಗಳಲ್ಲೇ ಚರ್ಚೆಗಳನ್ನು ನಡೆಸುತ್ತವೆ ಮತ್ತು ಇವುಗಳ ಪ್ರೇಕ್ಷಕ ವರ್ಗವೂ ವಿಭಿನ್ನ ಸಾಮಾಜಿಕ ನೆಲೆಗಳಿಗೆ ಸೇರಿದೆ. ಹಾಗಾಗಿ, ಸತ್ಯದ 'ಕೃತಕ ರಚನೆ'ಗಳು ಸೃಷ್ಟಿಯಾಗುತ್ತಿದ್ದಂತೆಯೇ, ಅವು ಪ್ರೇಕ್ಷಕ ವರ್ಗದ ನೆಲೆಯಲ್ಲಿ ನೆಲದ ವಾಸ್ತವಗಳಿಗೆ ಮುಖಾಮುಖಿಯಾಗಿ ತಮ್ಮ ನಿಜ ಮೌಲ್ಯದ ನೆಲೆಯಲ್ಲಿ ಮಾತ್ರ ಪರಿಣಾಮವನ್ನು ಉಂಟು ಮಾಡುವ ಸಾಧ್ಯತೆ ತೆರೆದಿರುತ್ತದೆ. ಆದರೆ ಈಗ ಎಲ್ಲರಿಗೆ ಇಂಗ್ಲಿಷ್ ಕಲಿಸಿ 'ಮೇಲೇರಿಸುವ' ಚಳುವಳಿಯೊಂದು ಆರಂಭವಾಗಿದೆಯಲ್ಲಾ? ಈ ಚಳುವಳಿಯ ಹಿಂದೆ ಇಂತಹ ಪಾರದರ್ಶಕ ಸಂವಹನದ ಸಾಧ್ಯತೆಯನ್ನೂ ನಾಶ ಮಾಡುವ ದುರುದ್ದೇಶ ಇದ್ದರೂ ಆಶ್ಚರ್ಯಪಡಬೇಕಿಲ್ಲ!.

ಈಗ ಕನ್ನಡದಲ್ಲೂ 'ಭ್ರಷ್ಟಾಚಾರ ನಿರ್ಮೂಲ ಮಾಡಲು' ಹಾಗೂ 'ಸ್ವಸ್ಥ ಸಮಾಜ ಕಟ್ಟಲು' ತನ್ನೊಂದಿಗೆ ಕೈ ಜೋಡಿಸುವಂತೆ ಕರೆ ನೀಡುತ್ತಿರುವ ಸ್ವಯಂಘೋಷಿತ 'ಸಾರ್ವಜನಿಕ ಹಿತಾಸಕ್ತಿ'ಯ ಟಿ.ವಿ. ವಾಹಿನಿಯೊಂದು ಆರಂಭವಾಗಿರುವುದನ್ನು ನೀವೂ ಗಮನಿಸಿರಬಹುದು. ಈವರೆಗೆ ಕನ್ನಡದಲ್ಲಿದ್ದ ಎರಡು ಪ್ರಮುಖ ಖಾಸಗಿ ಟಿ.ವಿ. ವಾಹಿನಿಗಳಲ್ಲಿ ಒಂದು, ವಿಶ್ಲೇಷಣೆಯೇ ಇಲ್ಲದೆ ಬರೀ ಸ್ಥೂಲ ವಿವರಗಳ ವಾರ್ತೆಗಳೊಂದಿಗೆ; ಮತ್ತೊಂದು ಅದಕ್ಕೆ ಸ್ವಲ್ಪ ಮಸಾಲಾ ಸೇರಿಸಿ ರುಚಿಗೊಳಿಸಿ ಬಡಿಸುತ್ತ (ಸರ್ಕಾರಿ ಟಿ.ವಿ.ಯ ವಾರ್ತೆ, ರೇಡಿಯೋ ವಾರ್ತೆಯು ದೃಶ್ಯರೂಪ ಮಾತ್ರವಾಗಿ ಬಿತ್ತರಗೊಳ್ಳುತ್ತಾ, ಎಂದೋ ಮಹತ್ವ ಕಳೆದುಕೊಂಡಾಗಿದೆ), ಇಂಗ್ಲಿಷ್ ಟಿ.ವಿ. ವಾರ್ತೆಗಳ ಮುಂದೆ ಕನ್ನಡ ವಾರ್ತೆಗಳು ಬಡಕಲಾಗಿ ಕಾಣತೊಡಗಿದ್ದಾಗ, ಈ ೨೪ ತಾಸುಗಳ ವಾರ್ತಾ ವಾಹಿನಿ ಆರಂಭವಾಯಿತು. ಅದು ತನ್ನ ವರದಿಗಾರರ ದೊಡ್ಡ ಜಾಲದೊಂದಿಗೆ ಸುದ್ದಿಯನ್ನು ಸರ್ವತೋಮುಖ ವಿಶ್ಲೇಷಣೆಯೊಂದಿಗೆ ವಿವರವಾಗಿ ಜಾಲಾಡತೊಡಗಿದಾಗ, ಕನ್ನಡಿಗರಲ್ಲಿ ತಮಗೊಂದು ಪೂರ್ಣ ಪ್ರಮಾಣದ ವಾರ್ತಾ ವಾಹಿನಿಯೊಂದು ದೊರೆತ ಸಂತೋಷ ಉಂಟಾಗಿತ್ತು. ಆದರೀಗ ಅದು ವಾರ್ತೆಯ ಹೆಸರಿನಲ್ಲಿ ಸಮಾಜ ಸುಧಾರಣೆಯ ದೀಕ್ಷೆ ತೊಟ್ಟ ವೀರ ಯೋಧನಂತೆ ಸಮಾಜದ 'ಹುಳುಕು'ಗಳನ್ನು ಆಯ್ದಾಯ್ದು ತನ್ನ ತೆರೆಯ ಮೇಲೆ ಪ್ರದರ್ಶಿಸುತ್ತಾ, ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಪೋಲೀಸರ ಮೇಲೆ ವೀರ ಎಚ್ಚಮನಾಯಕನ ಶೈಲಿಯಲ್ಲಿ ಅರಚಾಡತೊಡಗಿದೆ. ಅಂದರೆ, ಬಹುಬೇಗ ಅಗ್ಗದ

ಜನಪ್ರಿಯತೆಗೆ ಬಲಿಯಾಗಿ ತನ್ನ ವೃತ್ತಿಪರತೆಯನ್ನೇ ಮರೆಯತೊಡಗಿದೆ. ಅಲ್ಪಾವಧಿಯಲ್ಲೇ ಅನೇಕ 'ಭ್ರಷ್ಟಾಚಾರ'ಗಳನ್ನು ತೆರೆಯ ಮೇಲೆ ಬಹಿರಂಗಗೊಳಿಸಿದ 'ಹೆಗ್ಗಳಿಕೆ'ಯನ್ನು ಸಂಪಾದಿಸಿರುವುದಾಗಿ ತಾನೇ ಡಂಗುರ ಹೊಡೆದುಕೊಳ್ಳುತ್ತಿರುವ ಈ ವಾಹಿನಿ, ಇತ್ತೀಚೆಗೆ ಸ್ಥಳೀಯ ಸಂಘ– ಸಂಸ್ಥೆಗಳು ಹಾಗೂ ಪೋಲೀಸರ 'ಸಹಕಾರ'ದೊಂದಿಗೆ 'ದುಷ್ಟ ಶಕ್ತಿ'ಗಳ ಅಡ್ಡೆಗಳ ಮೇಲೆ ದಾಳಿ ಕೂಡ ಆರಂಭಿಸಿ, ಆ 'ದಿಟ್ಟ' ದೃಶ್ಯಗಳನ್ನು ಹೆಮ್ಮೆಯಿಂದ ಬಿತ್ತರಿಸತೊಡಗಿವೆ.

ಅಪರಾಧ ಲೋಕವನ್ನು ರೋಚಕ ರೀತಿಯಲ್ಲಿ ಪ್ರಸ್ತುತಗೊಳಿಸುವ ಈ ಪ್ರವೃತ್ತಿ ಕನ್ನಡ ಟಿ.ವಿ. ಲೋಕದಲ್ಲಿ ಬಹು ಹಿಂದೆಯೇ ಆರಂಭವಾಗಿ, ಸಾಕಷ್ಟು ಚರ್ಚೆಯನ್ನು ಹುಟ್ಟು ಹಾಕಿ, ಮಾಧ್ಯಮ ಸ್ವಾತಂತ್ರ್ಯದ ಹೆಸರಿನಲ್ಲಿ ಮುಕ್ತಾಯವಾಗಿತ್ತು. ಆದರೆ, ಅದೀಗ ವ್ಯಾಪಾರ ಅಥವಾ ಸುದ್ದಿ ಮೌಲ್ಯದ ಪರಿಧಿಯನ್ನು ದಾಟಿ, ಸರ್ಕಾರಿ ಇಲಾಖೆಯೊಂದರ ಸಹಕಾರದೊಂದಿಗೆ ತನ್ನದೇ ಸ್ವಾಯತ್ತತೆಯ ಮೌಲ್ಯವನ್ನು ಸ್ಥಾಪಿಸಿಕೊಳ್ಳಹೊರಟಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೇ ಕಂಟಕಪ್ರಾಯವಾಗಬಹುದಾಗಿದೆ. ರಾಷ್ಟ್ರ ಮಟ್ಟದ ಟಿ.ವಿ. ವಾಹಿನಿಗಳಲ್ಲಿ ಈ ಹಿಂದೆ ದೊಡ್ಡ ಸುದ್ದಿಯಾಗಿದ್ದ ಗುಪ್ತ ಚಿತ್ರೀಕರಣದ ಪ್ರಸಂಗಗಳ ಹಿಂದಿನ ರಾಜಕಾರಣ ಬಯಲಾಗಿ, ಅವುಗಳ ವಿಶ್ವಾಸಾರ್ಹತೆ ಘಾಸಿಗೊಂಡಿತ್ತು. ಇದೀಗ ಈ ಗುಪ್ತ ಚಿತ್ರೀಕರಣದ ಜೊತೆ ಅಪರಾಧಗಳ ಬಹಿರಂಗ ಚಿತ್ರೀಕರಣವೂ ಸೇರಿ, ಮಾಧ್ಯಮ ಕರ್ತವ್ಯದ ಹೆಸರಿನಲ್ಲಿ, ಅಪರಾಧ ವಿಚಾರಣೆಯ ಹಂತ ಮುಟ್ಟುವ ಮುನ್ನವೇ 'ಅಪರಾಧ'ದ ಸಾರ್ವಜನಿಕ ಘೋಷಣೆಯಾಗುತ್ತಿದೆ. ಇದರ ಮುಂದಿನ ಸಹಜ ಘಟ್ಟವಾಗಿ ಈ 'ಅಪರಾಧಿ'ಗಳನ್ನು ಜನರ ಒಂದು ಗುಂಪೋ, ಮಾಧ್ಯಮಗಳ ಏಜೆಂಟರೋ ಅಥವಾ ಪೋಲೀಸರೋ ನೈತಿಕ ಹಕ್ಕನ್ನು ಆವಾಹಿಸಿಕೊಂಡು ಥಳಿಸುವ, ಅವಮಾನಿಸುವ ದೃಶ್ಯಗಳನ್ನು ರಾಜಾರೋಷವಾಗಿ ತೋರಿಸಲಾಗುತ್ತಿದೆ. ಈ ಮೂಲಕ ಅಪರಾಧ ವಿಚಾರಣಾ ಸಂಹಿತೆಯನ್ನೇ ಉಲ್ಲಂಘಿಸಲಾಗುತ್ತಿದ್ದು, ಸಂವಿಧಾನದತ್ತ ನಾಗರಿಕ ಅಧಿಕಾರಗಳ ಅತಿಕ್ರಮಣಕ್ಕೆ ದಾರಿ ಮಾಡಿಕೊಡಲಾಗುತ್ತಿದೆ. ಇದು ಸಾಮಾಜಿಕ ಅರಾಜಕತೆಯ ಆಹ್ವಾನವೂ ಹೌದು. ಹೋಗಲಿ, ಈ ಕಾರ್ಯಾಚರಣೆಯನ್ನು ನಡೆಸುತ್ತಿರುವವರಾದರೂ ಯಾರು? ಸಂಬಂಧಿತ ಕ್ಷೇತ್ರಗಳಲ್ಲಿ ವೃತ್ತಿ ಪರಿಣಿತಿ ಹೊಂದಿದ ಅನುಭವಿಗಳೇ? ಅಲ್ಲ, ಈ ಚಿತ್ರೀಕರಣದ ರೋಚಕ ಸಂಕಲನ ಹಾಗೂ ಅದರ ನಿರೂಪಣೆಯಲ್ಲಿನ ವೀರಾವೇಶದ ಭಾಷೆಯೇ ಸೂಚಿಸುವಂತೆ, ಸುದ್ದಿ ಮಾಡಿ ಮಜ ತೆಗೆದುಕೊಳ್ಳುವ ಎಳೆ ಪಡ್ಡೆಗಳು!

ಈ ವಾಹಿನಿ ಒಡ್ಡುತ್ತಿರುವ ಸ್ಪರ್ಧೆಗೆ ಬೆದರಿ, ಇದ್ದುದರಲ್ಲಿ ಸ್ವಲ್ಪ ಪ್ರಬುದ್ಧವಾಗಿ ಕಾರ್ಯ ನಿರ್ವಹಿಸುತ್ತಿದ್ದ ವಾಹಿನಿಯೊಂದರ ಅಗ್ರ ರಾಷ್ಟ್ರೀಯ ವಾರ್ತೆ ಈಗ ಉಗ್ರ ರಾಷ್ಟ್ರೀಯ ವಾರ್ತೆಯಾಗಿ ಪರಿವರ್ತಿತಗೊಳ್ಳತೊಡಗಿದೆ! ಇತ್ತೀಚಿನ ದಿನಗಳಲ್ಲಿ ಚಿತ್ರ ವಿಚಿತ್ರ ಸುದ್ದಿ ಶೀರ್ಷಿಕೆಗಳೊಂದಿಗೆ, ರಣರಂಗ, ರಣ ಕಹಳೆ ಹಾಗೂ ರಣವೀಳ್ಯದ ಪರಿಭಾಷೆಯನ್ನೂ ರೂಢಿಸಿಕೊಂಡಿರುವ ಈ ವಾಹಿನಿ, ಈಗ 'ಉಳ್ಳಾಲ ವಾರ್'ನ್ನು ಘೋಷಿಸಿದೆ! ವಾಸ್ತವವಾಗಿ

ಇದು, ಜಾಹೀರಾತು ಮಾರುಕಟ್ಟೆಗಾಗಿ ನಡೆದಿರುವ ವಾಹಿನಿಗಳ 'ವಾರ್' ಅಷ್ಟೆ! ಉಳ್ಳಾಲದ(ಉಪಚುನಾವಣೆಯ)ಲ್ಲಿ 'ವಾರ್' ನಡೆದರೂ ನಡೆಯಬಹುದು; ನಡೆಯದೆಯೂ ಇರಬಹುದು.ಆದರೆ ಮುಂದಿನ ದಿನಗಳಲ್ಲಿ ಜನ ಈ ಟಿ.ವಿ.ವಾಹಿನಿಗಳಲ್ಲಿ 'ವಾರ್'ನಂತೆಯೇ ಚಿತ್ರಿತವಾಗುವ ಚುನಾವಣೆಯನ್ನು ನೋಡಿ ಮಜಾ ತೆಗೆದುಕೊಳ್ಳಬಹುದು! ಹೀಗೆ ಟಿ.ವಿ. ವಾಹಿನಿಗಳೆಂಬುವು ಇಂದು ನಿಜಕ್ಕೆ ನಿಜವೂ ಅಲ್ಲದ, ಸುಳ್ಳಿಗೆ ಸುಳ್ಳೂ ಅಲ್ಲದ ಸತ್ಯದ 'ಕೃತಕ ರಚನೆ'ಗಳನ್ನು ತಯಾರಿಸುವ ಕಾರ್ಖಾನೆಗಳಾಗತೊಡಗಿವೆ. ಇದನ್ನು 'ರಾಕ್ಷಸ ಮಾಯೆ'ಗೆ ಸದೃಶವಾದ 'ಮಾಧ್ಯಮ ಮಾಯೆ' ಎನ್ನಬಹುದೇ?

ಈ 'ಮಾಧ್ಯಮ ಮಾಯೆ' ಟಿ.ವಿ. ವಾಹಿನಿಗಳಿಗಷ್ಟೇ ಸೀಮಿತವಾಗದೆ, ಈ ಮಾಧ್ಯಮಗಳ ಪ್ರಭಾವಕ್ಕೆ ಸಿಕ್ಕ ಸಮಾಜವನ್ನು ಸ್ವಲ್ಪ ತಮ್ಮೆಡೆಗೂ ಸೆಳೆದುಕೊಳ್ಳಲು ಯತ್ನಿಸುತ್ತಿರುವ ಇತರ ಮಾಧ್ಯಮಗಳು– ವಿಶೇಷವಾಗಿ ಮುದ್ರಣ ಮಾಧ್ಯಮ– ತಮ್ಮ ಮಾಧ್ಯಮ ವಿಶಿಷ್ಟ ಉದ್ದೇಶಗಳನ್ನೇ ಮರೆತಂತೆ, ವಿಚಿತ್ರ ಕಸರತ್ತುಗಳನ್ನು ಆರಂಭಿಸಿವೆ. ಉದಾಹರಣೆಗೆ ನಮ್ಮ ದಿನಪತ್ರಿಕೆಗಳು ದೈನಿಕ ಧರ್ಮ ಪ್ರವಚನದ ಕಾಲಂ, ವಿವಿಧ ಪರೀಕ್ಷೆಗಳ ತಯಾರಿ ಪಾಠಗಳು, ಇಂಗ್ಲಿಷ್ ಕಲಿಕೆ ಮಾರ್ಗದರ್ಶನ ಇತ್ಯಾದಿಗಳ ಜೊತೆಗೆ ಇತ್ತೀಚೆಗೆ 'ಫುಟ್ ಪಾತ್ ಮೇಲೆ ಬೆಳೆದ ಹುಲ್ಲು, ಚರಂಡಿಗಳು ಕಟ್ಟಿಕೊಳ್ಳಲು ಕಾರಣವಾಗುತ್ತದೆಯೇ?' ಎಂಬಂತಹ ಪ್ರಶ್ನೆಗಳನ್ನು ಸಾರ್ವಜನಿಕರಿಗೆ ಕೇಳುವ ದಿನವಹಿ ಎಸ್.ಎಂ.ಎಸ್. ಸಮೀಕ್ಷೆಗಳನ್ನೂ ಆರಂಭಿಸಿವೆ! ಅಲ್ಲದೆ, ಈಗ ಕನ್ನಡದಲ್ಲಿ ಟ್ಯಾಬ್ಲಾಯಿಡ್ ಪತ್ರಿಕೋದ್ಯಮದ ಮಜಾ ಪಡೆಯಲು, ವಾರದವರೆಗೆ ಕಾಯಬೇಕಿಲ್ಲ. ಕನ್ನಡದ ಒಂದೆರಡು ದಿನಪತ್ರಿಕೆಗಳು ಈ ಟ್ಯಾಬ್ಲಾಯಿಡ್‌ಗಳನ್ನೂ ನಾಚಿಕೆಗೀಡು ಮಾಡುವಷ್ಟು ರೋಚಕವಾಗಿ ಗಾಳಿ ಹಾಗೂ ಕಲ್ಪಿತ ಸುದ್ದಿಗಳನ್ನು ಮಸಾಲಾ ಶೀರ್ಷಿಕೆಗಳೊಂದಿಗೆ ಮುಖಪುಟದಲ್ಲಿ ದೊಡ್ಡಕ್ಷರಗಳಲ್ಲಿ ಪ್ರಕಟಿಸುತ್ತಾ, ಇದೇ ಹೊಸ ಕಾಲದ ಹೊಸ ಪತ್ರಿಕೋದ್ಯಮ ಎಂದು ಹೆಮ್ಮೆಯಿಂದ ಸಾರಿಕೊಳ್ಳುತ್ತಿವೆ. ಮಾಹಿತಿ, ಮನರಂಜನೆ ಹಾಗೂ ಶಿಕ್ಷಣಗಳನ್ನೇ ಮೂಲೋದ್ದೇಶಗಳನ್ನಾಗಿಟ್ಟುಕೊಂಡಿದ್ದ ನಮ್ಮ ಮಾಧ್ಯಮಗಳಿಂದು, ಮಾಹಿತಿ– ಶಿಕ್ಷಣಗಳೆರಡನ್ನೂ ಮನರಂಜನೆಯ ಸರಕನ್ನಾಗಿ ಪರಿವರ್ತಿಸುತ್ತಿರುವುದರ ಹಿಂದಿರುವುದು ಹೊಸ ಮಾರುಕಟ್ಟೆ ಅರ್ಥಶಾಸ್ತ್ರವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

(ಈ ವಾರದ ಈ ಅಂಕಣ ಬರಹ ಮಾಯಾವತಿಯವರ ವಿಜಯದ ಪ್ರಸ್ತಾಪದೊಂದಿಗೆ ಆರಂಭವಾಗಿ ಎಲ್ಲಿಗೋ ಹೋಗಿ ಮುಟ್ಟಿದೆ. ಹೀಗಾಗಿ 'ಮಾಯಾವತಿ ವಿಜಯ'ವನ್ನು ಮುಂದಿನ ವಾರ ನೋಡೋಣ.)

ಜೂನ್ ೧, ೨೦೦೭

'ಮಾಯಾವತಿ ವಿಜಯ'ದ ಹಿಂದಿನ ಸತ್ಯಗಳು

ಮೊನ್ನೆ ಉತ್ತರ ಪ್ರದೇಶದಲ್ಲಿ ನಡೆದ ಚುನಾವಣೆಗಳಲ್ಲಿ ಮಾಯಾವತಿಯವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವುದು ಒಂದು ಹೊಸ ರಾಜಕೀಯ ಪರ್ವದ ಆರಂಭ ಎಂದು ರಾಜಕೀಯ ವಿಶ್ಲೇಷಕರು ವ್ಯಾಖ್ಯಾನಿಸುತ್ತಿದ್ದಾರೆ. ಕೇವಲ ಎರಡು ದಶಕಗಳ ಸಕ್ರಿಯ ರಾಜಕಾರಣದಲ್ಲಿ, ಅದೂ ಒಂದು ದಶಕದಿಂದೀಚೆಗೆ ಏಕಾಂಗಿಯಾಗಿ ರಾಜಕಾರಣ ಮಾಡುತ್ತಾ ಬಂದ ದಲಿತ ಮಹಿಳೆಯೊಬ್ಬಳು ಯಾರ ಮುಲಾಜೂ ಇಲ್ಲದೆ, ಸ್ವಂತ ರಾಜಕೀಯ ಶಕ್ತಿಯ ಆಧಾರದ ಮೇಲೆ ರಾಷ್ಟ್ರದ ಅತಿ ದೊಡ್ಡ ಹಾಗೂ ರಾಜಕೀಯವಾಗಿ ಅತಿ ಮಹತ್ವವುಳ್ಳ ರಾಜ್ಯವೊಂದರ ಮುಖ್ಯಮಂತ್ರಿಯಾಗುವುದು ಸಾಮಾನ್ಯ ಸಂಗತಿಯಲ್ಲ. ಈ ದೃಷ್ಟಿಯಿಂದ ಮಾಯಾವತಿಯವರು ಅಭಿನಂದನಾರ್ಹರಷ್ಟೇ ಅಲ್ಲ, ಮುಂದಿನ ದಿನಗಳ ರಾಜಕಾರಣವನ್ನು ಗುಣಾತ್ಮಕವಾಗಿ ಬದಲಾಯಿಸಬಲ್ಲ ರೀತಿಯಲ್ಲಿ ಅವರು ಆಡಳಿತ ನಡೆಸಲಿ ಎಂಬ ಹಾರೈಕೆಗೂ ಬಾಧ್ಯರಾಗಿದ್ದಾರೆ.

ಆದರೆ ಈ ಉತ್ಸಾಹದಲ್ಲಿ ಉತ್ತರ ಪ್ರದೇಶ ಚುನಾವಣಾ ಫಲಿತಾಂಶವನ್ನು ರಾಜಕಾರಣದ ಹೊಸ ಪರ್ವವೆಂದು ಘೋಷಿಸುವಂತಹ ಕ್ರಾಂತಿಕಾರಕ ಬದಲಾವಣೆಯೇನೂ ಈ ಚುನಾವಣೆಯಲ್ಲಿ ಘಟಿಸಿಲ್ಲ ಎಂಬುದನ್ನೂ ನಾವು ಮರೆಯಬಾರದು. ಏಕೆಂದರೆ, ಮಾಯಾವತಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗುತ್ತಿರುವುದು ಇದು ಮೊದಲೇನಲ್ಲ; ಇದು ನಾಲ್ಕನೇ ಬಾರಿ. ಅಂದರೆ, ದಲಿತ ನಾಯಕತ್ವವನ್ನು ನಮ್ಮ ರಾಜಕಾರಣ ಈಗಾಗಲೇ ಒಪ್ಪಿಕೊಂಡಿದೆ. ಆದುದರಿಂದ ಇದೇನೂ ಹೊಸ ಬೆಳವಣಿಗೆಯಲ್ಲ. ಇನ್ನು ಮಾಯಾವತಿ ಈ ಚುನಾವಣೆ ಹೊತ್ತಿಗೆ ರೂಪಿಸಿಕೊಂಡ ಜಾತಿ ಸಮೀಕರಣವೂ ನಮ್ಮ ರಾಜಕಾರಣಕ್ಕೆ ಹೊಸದೇನೂ ಅಲ್ಲ. ಏಕೆಂದರೆ ಪ್ರತಿ ಚುನಾವಣೆಯಲ್ಲೂ ಹಲವು ಜಾತಿ ಸಮೀಕರಣಗಳ ಪ್ರಯೋಗಗಳು ನಡೆದೇ ಇರುತ್ತವೆ. ಕಾಂಗ್ರೆಸ್, ಬಿಜೆಪಿಗಳು ಅಧಿಕಾರ ಗದ್ದುಗೆ ಏರಿದ್ದೂ ಇಂತಹ ಜಾತಿ ಸಮೀಕರಣಗಳ ಯಶಸ್ಸಿನ ಆಧಾರದ ಮೇಲೇ. ಈಗ ಬಿ.ಎಸ್.ಪಿ. ಯಶಸ್ವಿಯಾಗಿ

ಸಾಧಿಸಿರುವ ದಲಿತ+ಬ್ರಾಹ್ಮಣ+ಮುಸ್ಲಿಂ ಸಮೀಕರಣ ೨೫ ವರ್ಷಗಳ ಹಿಂದಿನವರೆಗೆ ಕಾಂಗ್ರೆಸ್ ಯಶಸ್ವಿಯಾಗಿ ಪ್ರಯೋಗಿಸುತ್ತಿದ್ದ ಜಾತಿ ಸಮೀಕರಣವೇ ಆಗಿದೆ. ಒಂದು ಬದಲಾವಣೆ ಎಂದರೆ ಈ ಸಮೀಕರಣ ಈಗ ತಲೆಕೆಳಗಾಗಿ ನಿಂತಿದೆಯಷ್ಟೆ: ನಾಯಕತ್ವ ಮೇಲ್ಜಾತಿಯಿಂದ ಅಸ್ಪೃಶ್ಯ ಜಾತಿಗೆ ಹೋಗಿದೆ. ಇದನ್ನು ಬಿ.ಎಸ್.ಪಿ. ಸ್ವಂತ ಬಲದಿಂದ ಸಾಧಿಸಿದೆ ಎಂದು ಹೇಳುವುದೂ ಅರ್ಧ ಸತ್ಯದ ಮಾತು ಮಾತ್ರ ಆಗುತ್ತದೆ.

ಬಿ.ಎಸ್.ಪಿ., ಎಲ್ಲ ದ್ವಿಜ ಜಾತಿಗಳ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ವಿರುದ್ಧ ರಣಕಹಳೆ ಊದುತ್ತ; ಜಾತಿ ಶ್ರೇಣೀಕರಣದಲ್ಲಿ ಅಂತರ್ಗತವಾಗಿದೆ ಎಂದು ಹೇಳಲಾದ 'ಮನುವಾದಿ' ವಿರೋಧಿ ರಾಜಕಾರಣವನ್ನೇ ತನ್ನ ತಾತ್ವಿಕ ಕೇಂದ್ರವಾಗಿಟ್ಟುಕೊಂಡು ರಾಜಕಾರಣ ಆರಂಭಿಸಿತ್ತು. ಈಗ ಅದು, ತನ್ನ ಚುನಾವಣಾ ಚಿಹ್ನೆ ಆನೆಯನ್ನು 'ಇದು ಆನೆಯಲ್ಲ, ಸಾಕ್ಷಾತ್ ಗಣೇಶ' ಎಂದು ಘೋಷಿಸಿಕೊಂಡು, ಅದೇ ಜಾತಿಗಳ ಓಲೈಕೆಯೊಂದಿಗೆ ರಾಜಕಾರಣ ಮಾಡುವ ಸ್ಥಿತಿಗೆ ಈಡಾಗಿದೆ. ಈ ವಿರೋಧಾಭಾಸವನ್ನು ವಿವರಿಸುವುದಾದರೂ ಹೇಗೆ? ಇದನ್ನು 'ಸಮಕಾಲೀನ ವಾಸ್ತವ ರಾಜಕಾರಣ' ಎಂದು ಕರೆಯುವುದಾದರೆ ಹೊಸ ರಾಜಕೀಯ ಪರ್ವದ ಆರಂಭದ ಮಾತಿಗೇನಿದೆ ಅರ್ಥ? ನಾಯಕತ್ವದ ಜಾತಿ ಬದಲಾವಣೆಯನ್ನೇ ಸಾಮಾಜಿಕ ಕ್ರಾಂತಿಯ ಆರಂಭ ಎಂದು ನಂಬುವ ಕಾಲ ಎಂದೋ ಮುಗಿದುಹೋಗಿದೆ. ಯಾಕೆಂದರೆ ಒಂದಲ್ಲ ಒಂದು ಹಂತದಲ್ಲಿ ನಮ್ಮ ರಾಷ್ಟ್ರ- ರಾಜ್ಯ ರಾಜಕಾರಣದಲ್ಲಿ ಎಲ್ಲ ಜಾತಿಗಳ ನಾಯಕತ್ವದ ಪ್ರಯೋಗ ಆಗಿ ಹೋಗಿದೆ. ಅವೆಲ್ಲವೂ ರಾಜಕಾರಣದಲ್ಲಿ ಯಾವುದೇ ಮೂಲಭೂತ ಬದಲಾವಣೆ ತರುವಲ್ಲಿ ವಿಫಲವಾಗಿರುವುದನ್ನು ಸಮಕಾಲೀನ ರಾಜಕೀಯ ಚರಿತ್ರೆ ಹೇಳುತ್ತಿದೆ.

ಪಟ್ಟಭದ್ರ ಹಿತಾಸಕ್ತಿಗಳೆಂದು ಸರಿಯಾಗಿಯೇ ಗುರುತಿಸಲ್ಪಟ್ಟಿದ್ದ ಬ್ರಾಹ್ಮಣ- ಬನಿಯಾ ಜಾತಿ ರಾಜಕಾರಣದ ವಿರುದ್ಧ ಅರವತ್ತರ ದಶಕದಲ್ಲಿ ತಾತ್ವಿಕವಾಗಿ ಹೋರಾಟ ಆರಂಭಿಸಿದ ಸಮಾಜವಾದಿ ರಾಜಕಾರಣ ಕಾಲಾಂತರದಲ್ಲಿ ಭ್ರಷ್ಟಗೊಂಡು, ಹಲವು ಪಕ್ಷಗಳ ರೂಪದಲ್ಲಿ ಕೌಟುಂಬಿಕ ಪಾಳೇಗಾರಿ ರಾಜಕಾರಣವಾಗಿ ಅವನತಿಗೊಂಡಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಯಾವ ಜಾತಿಪದ್ಧತಿಯಿಂದಾಗಿ ಅನೇಕ ಅನ್ಯಾಯಗಳಾಗಿದ್ದವೋ ಅವನ್ನು ಸರಿಪಡಿಸಲೆಂದೇ ಆರಂಭವಾದ ರಾಜಕಾರಣ, ಅದೇ ಜಾತಿಪದ್ಧತಿಯನ್ನು ಸ್ಥಿರಗೊಳಿಸುವ ಪ್ರಯತ್ನವಾಗಿ ಪರಿವರ್ತಿತವಾಗಿರುವ ವಿಪರ್ಯಾಸವಿದು! ಜಾತಿ ರಾಜಕಾರಣ ಎರಡಲಗಿನ ಕತ್ತಿಯಿದ್ದಂತೆ: ಎಚ್ಚರ ತಪ್ಪಿದರೆ ಅದು ಜಾತೀಯ ರಾಜಕಾರಣವಾಗುತ್ತದೆ. ಈಗ ಆಗಿರುವುದೂ ಅದೇ. ಒಂದು ನಿರ್ದಿಷ್ಟ ಅರ್ಥದ ಸಾಮಾಜಿಕ ನ್ಯಾಯವನ್ನೇ ಸಮಾಜವಾದದ ಪರಮ ಮೌಲ್ಯವೆಂದು ಪ್ರತಿಪಾದಿಸುವ ಈ ರಾಜಕಾರಣವನ್ನು ಸಮಾಜವಾದಿ ರಾಜಕಾರಣವೆಂದು ಕರೆಯುವುದು, ಸಮಾಜವಾದಕ್ಕೆ ಮಾಡಬಹುದಾದ ದೊಡ್ಡ ಅಪಚಾರವೇ ಆಗುತ್ತದೆ. ಬಿ.ಎಸ್.ಪಿ. ಹುಟ್ಟಿದ್ದೇ ಇಂತಹ ವಕ್ರ ಸಮಾಜವಾದದ ರಾಜಕಾರಣಕ್ಕೆ ಪ್ರತಿಕ್ರಿಯೆಯಾಗಿ.

ಈ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದಲ್ಲಿನ ಮಾಯಾವತಿ ವಿಜಯ; ಅರ್ಧ ಅವರ ವಿಜಯವಾಗಿದ್ದರೆ, ಇನ್ನರ್ಧ ಮುಲಾಯಂ ಸಿಂಗ್ ಯಾದವರ ಅಪಜಯವಾಗಿದೆ. ಸಮಾಜವಾದದ ಹೆಸರು ಹೇಳಿಕೊಂಡೇ ಅಮರ್ ಸಿಂಗ್‌ರಂತಹ ಅಸಭ್ಯ ಮತ್ತು ಅಮಿತಾಭ್ ಬಚ್ಚನ್‌ರಂತಹ ಅವಕಾಶವಾದಿ ರಾಜಕೀಯ ದಲ್ಲಾಳಿಗಳ ಸಹವಾಸದಲ್ಲಿ, ಅನಿಲ್ ಅಂಬಾನಿಯಂತಹ ಬಂಡವಾಳಶಾಹಿಗಳ ಜೊತೆ ಶಾಮೀಲಾಗಿ ರಾಜ್ಯಭಾರ ಮಾಡತೊಡಗಿದ್ದ ಮುಲಾಯಂ ಸೃಷ್ಟಿಸಿದ ಆಡಳಿತಾತ್ಮಕ ಅವಾಂತರಗಳೇ ಬಿ.ಎಸ್.ಪಿ.ಗೆ ವರವಾಗಿ ಪರಿಣಮಿಸಿದವು. ಮುಲಾಯಂರ ಜಾತಿ ಬಾಂಧವರು ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಅಮರ ಸಿಂಗರ ಬಾಡಿಗೆ ಬಂಟರು ನಗರ ಪ್ರದೇಶಗಳಲ್ಲಿ ನಡೆಸುತ್ತಿದ್ದ ದುಂಡಾವರ್ತಿ; ರಾಜ್ಯದಲ್ಲಿ ಮೊದಲು ಕಾನೂನು ಹಾಗೂ ಶಿಸ್ತು ಪರಿಪಾಲನೆಯಾಗಬೇಕಿದೆ, ನಂತರ ಅಭಿವೃದ್ಧಿಯ ವಿಷಯ ಎಂಬ ಅಭಿಪ್ರಾಯವನ್ನು ಕೆಳಜಾತಿ ಹಾಗೂ ಮೇಲ್ಜಾತಿಗಳೆರಡರಲ್ಲೂ ಗಟ್ಟಿಗೊಳಿಸಿತು. ಇದಕ್ಕೆ ತಕ್ಕುನಾಗಿ, ಈ ಹೊತ್ತಿಗೆ ಮಾಯಾವತಿಗೆ ಹಿಂದಿನ ಚುನಾವಣೆಗಳ ಮತ್ತು ಅಧಿಕಾರಾವಧಿಗಳ ಅನುಭವದ ಆಧಾರದ ಮೇಲೆ, ಬರೀ ದಲಿತರ ಮತಗಳ ಮೇಲೆ ತಮ್ಮ ರಾಜಕೀಯ ಕನಸು ನನಸಗಾದೆಂದು ಮನವರಿಕೆಯಾಗತೊಡಗಿತ್ತು. ತಮ್ಮ ಗುರು ಕಾನ್ಶೀರಾಮರಿಂದ ದಲಿತ ರಾಜಕಾರಣದ ಯಶಸ್ಸಿಗೆ ಯಾವ ರಾಜಕೀಯ ಪರಿಸ್ಥಿತಿಯನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಎಲ್ಲ ಪಾಠಗಳನ್ನು ಕಲಿತಿದ್ದ ಅವರು, ಜಾತಿ ರಾಜಕಾರಣದ ಹೊಸ ಅಧ್ಯಾಯಕ್ಕಾಗಿ ವೇದಿಕೆಯನ್ನು ಸಿದ್ಧಪಡಿಸಿದ್ದರು. ಈಗ, ಸತೀಶ್ ಚಂದ್ರ ಮಿಶ್ರ ಎಂಬ ಉತ್ತರ ಪ್ರದೇಶದ ದಕ್ಷ ಮತ್ತು ಸಮಚಿತ್ತದ ಬ್ರಾಹ್ಮಣ ಐ.ಎ.ಎಸ್. ಅಧಿಕಾರಿಯನ್ನು ತಮ್ಮ ಆಪ್ತ ಸಲಹೆಗಾರನನ್ನಾಗಿ ಆಯ್ದುಕೊಂಡ ಮಾಯಾವತಿ ರಾಜ್ಯಾದ್ಯಂತ ಸೋದರತಾ ಸಮ್ಮೇಳನಗಳನ್ನು ಏರ್ಪಡಿಸುತ್ತಾ ಹೋದರು. ಆ ಮೂಲಕ ಅವರು, ತಮ್ಮದು ಹೆಸರಿಗೆ ಬಹುಜನ ಪಕ್ಷವಾದರೂ, ಅದು ವಾಸ್ತವವಾಗಿ ಸರ್ವಜನರ ಪಕ್ಷವಾಗಲು ಬಯಸಿದೆ ಎಂಬ ಸಂದೇಶವನ್ನು ಬಿತ್ತರಿಸತೊಡಗಿದರು. ಹಾಗೇ, ಹಿಂದಿನ ಚುನಾವಣೆಯ ಹೊತ್ತಿಗೇ ಆರಂಭಿಸಿದ್ದ ಮೇಲ್ಜಾತಿ ಜನರಿಗೂ ತಮ್ಮ ಪಕ್ಷದ ಟಿಕೆಟ್ ಕೊಡುವ ನೀತಿಯನ್ನು; ಈ ಚುನಾವಣೆಗಳಲ್ಲಿ ಇನ್ನಷ್ಟು ವಿಸ್ತರಿಸಿ, ರಾಜ್ಯದಲ್ಲಿ ಅತ್ಯಂತ ಹೆಚ್ಚು ಮೇಲ್ಜಾತಿ ಜನರಿಗೆ ಟಿಕೆಟ್ ನೀಡಿದ 'ಹೆಗ್ಗಳಿಕೆ'ಯನ್ನು ಬಿ.ಎಸ್.ಪಿ.ಗೆ ತಂದುಕೊಟ್ಟರು!

ಕೆಲವೇ ವರ್ಷಗಳ ಹಿಂದಿನವರೆಗೆ ದ್ವಿಜ ಜಾತಿಗಳ ವಿರುದ್ಧದ ದ್ವೇಷಮಯ ಘೋಷಣೆಗಳ ಮೂಲಕವೇ ರಾಜಕಾರಣ ಮಾಡುತ್ತಿದ್ದ ಬಿ.ಎಸ್.ಪಿ.ಯ ಈ ಉತ್ತರೋತ್ತರ ಬದಲಾವಣೆಯನ್ನು, ದ್ವಿಜ ಜಾತಿಗಳೂ ಸೇರಿದಂತೆ ಮುಲಾಯಂರ ಆಳ್ವಿಕೆಯಲ್ಲಿ ತೊಂದರೆ ಅನುಭವಿಸಿದ್ದ ಎಲ್ಲ ಜಾತಿಗಳು, ರಾಜ್ಯದಲ್ಲಿ ಕುಸಿದು ಬಿದ್ದಿದ್ದ ಕಾನೂನು ಮತ್ತು ಶಿಸ್ತಿನ ಹಿನ್ನೆಲೆಯಲ್ಲಿ ಒಪ್ಪಿಕೊಂಡದ್ದು ಸಹಜವೇ ಆಗಿತ್ತು. ಈ ಸಮುದಾಯಗಳು ಮಾಯಾವತಿ ತಮ್ಮ ಈ ಹಿಂದಿನ ಅಧಿಕಾರಾವಧಿಯಲ್ಲಿ ಕಾನೂನು ಮತ್ತು ಶಿಸ್ತಿನ ವಿಷಯದಲ್ಲಿ ಎಷ್ಟು ಕಟ್ಟುನಿಟ್ಟಾದ ನಿರ್ಧಾರ ಕೈಗೊಳ್ಳಬಲ್ಲರೆಂಬುದನ್ನು ಗಮನಿಸಿದ್ದರು. ಅಲ್ಲದೆ, ರಾಜ್ಯದ

ಇನ್ನೊಂದು ಪ್ರಮುಖ ಪಕ್ಷವಾಗಿದ್ದ ಬಿ.ಜೆ.ಪಿ., ಮುಖ್ಯವಾಗಿ ಕ್ಷತ್ರಿಯರ ಹಾಗೂ ಯಾದವೇತರ ಮಧ್ಯಮ ಜಾತಿಗಳ ಪಕ್ಷವಾಗಿ ಪರಿವರ್ತಿತವಾಗಿದ್ದುದರಿಂದ, ಈ ಜಾತಿಗಳಿಗೆ ಅಲ್ಲಿ ಜಾಗವಿಲ್ಲದೇ ಹೋಗಿತ್ತು. ಜೊತೆಗೆ, ಮುಲಾಯಂ ತಮ್ಮ ಕಾಂಗ್ರೆಸ್ ವಿರೋಧಿ ರಾಜಕಾರಣದ ಅಂಗವಾಗಿ ಬಿ.ಜೆ.ಪಿ.ಯೊಂದಿಗೆ ತೆರೆಮರೆಯಲ್ಲಿ ಚೆಲ್ಲಾಟ ನಡೆಸುತ್ತಿದ್ದುದನ್ನು ಗಮನಿಸುತ್ತಿದ್ದ ಮುಸ್ಲಿಮರು, ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಗೆಲ್ಲುವ ಕುದುರೆ ಬಿ.ಎಸ್.ಪಿ.ಯೇ ಎಂದು ಗೊತ್ತಾಗುತ್ತಿದ್ದಂತೆ ತಮ್ಮ ನಿಷ್ಠೆಯನ್ನು ಬದಲಾಯಿಸಿ, ಬಹುಪಾಲು ಮಾಯಾವತಿ ಪಕ್ಷಕ್ಕೇ ಮತ ಹಾಕಿದರು.

ಹೀಗಾಗಿ ಮಾಯಾವತಿ ವಿಜಯ ಒಂದು ಅನುಕೂಲಕರ ರಾಜಕೀಯ ಪರಿಸ್ಥಿತಿಗೆ ತಕ್ಕುನಾಗಿ ಅನುಸರಿಸಿದ ಜಾಣ ರಾಜಕೀಯ ತಂತ್ರದ ಗೆಲುವಾಗಿದೆಯೇ ಹೊರತು, ಯಾವುದೇ ರಾಜಕೀಯ ದರ್ಶನ ಅಥವಾ ಒಳನೋಟವನ್ನಾಧರಿಸಿದ ವಿಜಯವಾಗಿಲ್ಲ. ನಿಜ, ನಮ್ಮ ರಾಜಕಾರಣದ ಇತ್ತೀಚಿನ ಎಲ್ಲ ಗೆಲುವುಗಳೂ ಇಂತಹವೇ ಆಗಿವೆ. ಆದರೆ, ಅರವತ್ತು ವರ್ಷಗಳ ರಾಷ್ಟ್ರ ರಾಜಕಾರಣದ ಸಾಮಾಜಿಕ ಸಂರಚನೆಯನ್ನೇ ಬುಡಮೇಲುಗೊಳಿಸಿದ ಈ ವಿದ್ಯಮಾನ, ಯಾವದೇ ತಾತ್ವಿಕ ಬೆನ್ನೆಲುಬಿಲ್ಲದ ಜಾತಿ ಸಮೀಕರಣವೊಂದರ ತಾಂತ್ರಿಕ ಯಶಸ್ಸಿನ ಆಧಾರದ ಮೇಲೆ ಘಟಿಸಿರುವುದು ಭವಿಷ್ಯದ ರಾಜಕಾರಣದ ದೃಷ್ಟಿಯಿಂದ ಆಶಾದಾಯಕ ಸಂಗತಿಯೇನೂ ಅಲ್ಲ. ಮಾಯಾವತಿ ಅಧಿಕಾರ ಸ್ವೀಕರಿಸಿದೊಡನೆ ಮಾಡಿದ ಎರಡು ಪ್ರಕಟಣೆಗಳನ್ನು ಗಮನಿಸಿ. ಮೊದಲನೆಯದು, ತಮ್ಮ ಹಿಂದಿನ ಅಧಿಕಾರಾವಧಿಯಲ್ಲಿ ತಮ್ಮ ರಾಜಕೀಯ ಅಸ್ಮಿತೆಯ ಸಂಕೇತವಾಗಿ ಸ್ಥಾಪಿಸಿದ್ದ ಅಂಬೇಡ್ಕರ್ ವನವನ್ನು ನಿರ್ಲಕ್ಷಿಸಲಾಗಿದೆಯೆಂದು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥನನ್ನು ಅಮಾನತ್ತಿನಲ್ಲಿಟ್ಟುದುದು. ಎರಡನೆಯದು, ಮೇಲ್ಜಾತಿಗಳ ಬಡವರಿಗೂ ಮೀಸಲಾತಿ ವಿಸ್ತರಿಸುವ ಪ್ರಸ್ತಾಪ. ಇವೆರಡೂ ಯಾವುದೇ ಸಾಮಾಜಿಕ ದರ್ಶನವಿಲ್ಲದ ರೂಕ್ಷ ಜಾತಿ ರಾಜಕಾರಣ ತಂದುಕೊಡುವ ಅಗ್ಗದ ಜನಪ್ರಿಯತೆಯ ಮೇಲೆ ಕಣ್ಣಿಟ್ಟ ರಾಜಕೀಯ ಅಪ್ರಬುದ್ಧತೆಯ ನಿದರ್ಶನಗಳೇ ಆಗಿವೆ.

ಇಷ್ಟೆಲ್ಲ ಮಿತಿಗಳ ನಡುವೆಯೂ ಮಾಯಾವತಿಯವರ ಈ ಪ್ರಯೋಗ ತಕ್ಕ ಮಟ್ಟಿಗಾದರೂ ಯಶಸ್ವಿಯಾಗಿ, ಹೊಸ ರಾಜಕಾರಣದ ನಾಂದಿ ಪ್ರಯೋಗವಾದರೂ ಆಗಲಿ ಎಂದು ಆಸೆಯಿಂದ ಹಾರೈಸುವವರಲ್ಲಿ ಕೂಡಾ ಅವರ ರಾಜಕೀಯ ಯಶಸ್ಸಿನ ಬಗ್ಗೆ ಗಂಭೀರ ಅನುಮಾನಗಳಿವೆ. ಕಾರಣಗಳು ಹಲವಾರು: ಅವರು ಪಕ್ಷ ಕಟ್ಟಿರುವ ಸರ್ವಾಧಿಕಾರಿ ರೀತಿ, ಅವರ ಅರಮನೆಗಳಂತಹ ಬಂಗಲೆಗಳು ಮತ್ತು ದುಂದು ವೆಚ್ಚದ ಅವರ ಹುಟ್ಟುಹಬ್ಬದ ಸಮಾರಂಭಗಳಲ್ಲಿ ಪ್ರದರ್ಶಿತವಾಗುವ ವಜ್ರಾಭರಣಗಳ ವೈಭೋಗ ಹಾಗೂ ಅಧಿಕಾರಕ್ಕಾಗಿ ಎಲ್ಲ ಮೌಲ್ಯಗಳನ್ನೂ ಧಿಕ್ಕರಿಸಿ ನಿಲ್ಲುವ ಅವರ ರಾಜಕೀಯ ಭಂಡತನ. ಅತಿ ಹೆಚ್ಚು ಮೇಲ್ಜಾತಿಯವರಿಗೆ ಟಿಕೆಟ್ ಕೊಟ್ಟ ಹೆಗ್ಗಳಿಕೆ ಇರುವ ಇವರ ಪಕ್ಷದ ಇನ್ನೊಂದು ಹೆಗ್ಗಳಿಕೆಯೆಂದರೆ, ಅತ್ಯಂತ ಹೆಚ್ಚು ಜನ ಅಪರಾಧಿಗಳಿಗೆ ಟಿಕೆಟ್ ಕೊಟ್ಟದ್ದು. ಅವರಲ್ಲಿ

ಅರ್ಧದಷ್ಟು ಜನ ಗೆದ್ದು ಮಂತ್ರಿಮಂಡಲದ ಅರ್ಧ ಭಾಗವನ್ನು ಆಕ್ರಮಿಸಿಕೊಂಡಿದ್ದಾರೆ! ಇದು ಸಾಧ್ಯವಾದದ್ದು, ಪಕ್ಷದ ಬಹುತೇಕ ಟಿಕೆಟ್‌ಗಳನ್ನು ಅತಿ ಹೆಚ್ಚು 'ಶುಲ್ಕ' ನೀಡುವವರಿಗೆ 'ಹರಾಜು' ಹಾಕಿದುದರಿಂದಾಗಿ. ಹಾಗಾಗಿಯೇ ಹೆಚ್ಚು ಶ್ರೀಮಂತ ಅಭ್ಯರ್ಥಿಗಳ ವಿಷಯದಲ್ಲಿಯೂ ಇವರ ಪಕ್ಷ ಪ್ರಥಮ ಸ್ಥಾನದಲ್ಲಿತ್ತು!

ಹೀಗೆ ಯಾವುದೇ ರಾಜಕೀಯ ಮುನ್ನೋಟದ ಪ್ರಣಾಳಿಕೆಯೇ ಇಲ್ಲದೆ, ಜಾತಿಯೊಂದಿಗೆ ಹಣದ ರಾಜಕೀಯವನ್ನೇ ನಂಬಿ ಮಾಯಾವತಿ ಈ ಚುನಾವಣೆಗಳಲ್ಲಿ ಯಶಸ್ಸು ಸಾಧಿಸಿದ್ದಾರೆ. ಆದರೆ, ಅವರನ್ನು ಈ ಯಶಸ್ಸಿನವರೆಗೆ ಕರೆದು ತಂದಿರುವ ಅವರ ಈವರೆಗಿನ ಹದಿನೈದು ವರ್ಷಗಳ ಸಕ್ರಿಯ ರಾಜಕಾರಣದ ಸ್ವರೂಪದ ಮೇಲೆ ಬೆಳಕು ಚೆಲ್ಲುವಂತಿವೆ, ಅವರ ವಿರುದ್ಧ ದಾಖಲಾಗಿರುವ ಈ ಭ್ರಷ್ಟಾಚಾರದ ಮೊಕದ್ದಮೆಗಳು: ಸುಪ್ರೀಂ ಕೋರ್ಟಿನ ಸೂಚನೆಯನ್ವಯ ದಾಖಲಾಗಿರುವ ೧೭೫ ಕೋಟಿ ರೂಪಾಯಿಗಳ ತಾಜ್ ಕಾರಿಡಾರ್ ಹಗರಣ ಮತ್ತು ಸಿ.ಬಿ.ಐ. ದಾಖಲಿಸಿರುವ ೮.೭೭ ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಹಾಗೂ ೭.೩೬ ಕೋಟಿ ರೂಪಾಯಿಗಳ ಲೆಕ್ಕ ತೋರಿಸದ ನಗದು ಹಣದ ಮೊಕದ್ದಮೆಗಳು; ಜೊತೆಗೆ ಹತ್ತು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಬೇನಾಮಿ ಆಸ್ತಿ ಸಂಬಂಧ ನಡೆಯುತ್ತಿರುವ ತನಿಖೆ. ಇವುಗಳ ಎದುರಿನಲ್ಲಿ ಮತ್ತು ತದ್ವಿರುದ್ಧ ರಾಜಕೀಯ ನಿರೀಕ್ಷೆಗಳನ್ನು ಪ್ರತಿನಿಧಿಸುವ ಜಾತಿ ಶಕ್ತಿಗಳ ಮಧ್ಯೆ, ಇಡೀ ಸಮಾಜದ ಸಾರ್ವತ್ರಿಕ ಉನ್ನತಿಯಿರಲಿ; ಸರ್ವಜಾತಿಗಳ ಬಡವರ ಉದ್ಧಾರಕ್ಕಾಗಿಯಾದರೂ ಅವರು ಯಾವ ತಾತ್ವಿಕ ಮತ್ತು ನೈತಿಕ ನೆಲೆಗಟ್ಟಿನಲ್ಲಿ ಕೆಲಸ ಮಾಡಲು ಸಾಧ್ಯವಾಗುವುದೋ ಕಾದು ನೋಡಬೇಕು.

ಜೂನ್ ೮, ೨೦೦೭

‘ಆನು ದೇವಾ....’: ಜಾತಿ ವ್ಯವಸ್ಥೆ ಕುರಿತ ಹೊಸ ನೋಟದತ್ತ...

ಬಂಜಗೆರೆ ಜಯಪ್ರಕಾಶರ ‘ಆನು ದೇವಾ ಹೊರಗಣವನು...’ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ಕೂಗು ಕೇಳಿ ಬರಲಾರಂಭಿಸಿದೆ. ಈ ಪುಸ್ತಕವನ್ನು ಒಂದು ಸೃಜನಶೀಲ ಸಂಶೋಧನ ಗ್ರಂಥವೆಂದು ಓದಿದ ಯಾರಿಗೂ, ಈ ಕೂಗೇಕೆ ಎಂಬುದೇ ಅರ್ಥವಾಗುತ್ತಿಲ್ಲ. ಏಕೆಂದರೆ, ಬಸವಣ್ಣ ಹುಟ್ಟಿನಿಂದ ಬ್ರಾಹ್ಮಣ ಎಂಬ ಬಗ್ಗೆ ಅಲ್ಲಲ್ಲಿ ಆಗಾಗ್ಗೆ ವ್ಯಕ್ತವಾಗುತ್ತಿದ್ದ ಅನುಮಾನಗಳನ್ನು ಹಳೆ ಮತ್ತು ಹೊಸ ಆಕರಗಳ ಆಧಾರದ ಮೇಲೆ ಪರಿಶೀಲಿಸುವ ಪ್ರಯತ್ನ ಮಾಡುವ ಈ ಪುಸ್ತಕ, ಆತ ಮಾದಿಗನಾಗಿದ್ದಿರಬಹುದಾದ ಸೂಚನೆಗಳನ್ನು ಮಾತ್ರ ನೀಡುತ್ತದೆ. ಬಸವಣ್ಣ ಜಾತಿ ವ್ಯವಸ್ಥೆಯ ವಿರುದ್ಧ ಭಾರತ ತನ್ನ ಇತಿಹಾಸದಲ್ಲೇ ಕಂಡರಿಯದಂತಹ ಬಹು ಆಯಾಮಗಳ ಆಂದೋಲನದ ನೇತೃತ್ವ ವಹಿಸಿದ್ದ ಮಹಾಪುರುಷ. ಆತ ಹುಟ್ಟಿನಿಂದ ಮಾದಿಗ ಜಾತಿಗೆ ಸೇರಿದವನಾಗಿದ್ದ ಎಂದು ಯಾರಾದರೂ ಸಾಧಿಸಿ ತೋರಿದರೆ, ಅದನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕಾದ ಅವನ ಅನುಯಾಯಿಗಳು ಸಿಡಿದೇಳುತ್ತಿದ್ದಾರೆ ಎಂದರೆ; ಅವರು ‘ಮಾದಿಗ’ ಶಬ್ದವನ್ನು ಒಂದು ಬೈಗುಳವೆಂದೇ ಅರ್ಥ ಮಾಡಿಕೊಂಡಿರುವುದರ ಹೊರತಾಗಿ ಬೇರೇನೂ ಕಾರಣ ಹೊಳೆಯದು. ಇದು ಬಸವಣ್ಣನಿಗೆ ಅವನ ಅನುಯಾಯಿಗಳೆಂದು ಹೇಳಿಕೊಳ್ಳುವವರು ಮಾಡಬಹುದಾದ ದೊಡ್ಡ ಅವಮಾನ. ಹೀಗೆ ಅವಮಾನ ಮಾಡುತ್ತಿರುವವರ ಸಾಲಿನಲ್ಲಿ ‘ಈ ಪುಸ್ತಕದ ಲೇಖಕನ್ನು ಸುಟ್ಟು ಹಾಕಬೇಕು’ ಎಂದರಚಿರುವ ಅಸಭ್ಯ ಸ್ವಾಮಿಯೊಬ್ಬನ ಕೂಗಿನ ಜೊತೆಗೆ ಪಾಟೀಲ ಪುಟ್ಟಪ್ಪನಂತವರು ‘ರಾಜ್ಯದಲ್ಲಿ ಕಿಚ್ಚು ಹತ್ತಿ ಉರಿಯುವ’ ಎಚ್ಚರಿಕೆ ನೀಡಿದ್ದಾರೆ. ಮೊದಲು ಸರ್ಕಾರ ಈ ಪ್ರಚೋದಕ ಹೇಳಿಕೆಗಳಿಗಾಗಿ ಈ ಇಬ್ಬರ ವಿರುದ್ಧ ಕಾನೂನು ಕ್ರಮ ಕೈಗೊಂಡು, ಇವರ ನಿಲುವಿನ ಜೊತೆ ಗುರುತಿಸಿಕೊಂಡಿರುವ ಇತರರಿಗೆ ವಿವೇಕ ಹೇಳಬೇಕಿದೆ. ಈ ವಿಷಯದಲ್ಲಿ ದಿಟ್ಟ ನಿರ್ಧಾರ ತೆಗೆದುಕೊಂಡಿರುವ

ಗೃಹ ಮಂತ್ರಿ ಎಂ.ಪಿ. ಪ್ರಕಾಶರು ಅಭಿನಂದನಾರ್ಹರಾಗಿದ್ದು, ಮುಂದಿನ ದಿನಗಳಲ್ಲಿ ಅವರು ಯಾವ ಒತ್ತಡಕ್ಕೂ ಮಣಿಯದೆ ತಮ್ಮ ಸಾಂಸ್ಕೃತಿಕ ತಿಳುವಳಿಕೆ ಕೇವಲ ತೋರುಗಾಣಿಕೆಯದಲ್ಲ ಎಂಬುದನ್ನು ಕನ್ನಡ ಜನತೆಯ ಮುಂದೆ ಸಾಬೀತುಪಡಿಸಬೇಕಿದೆ.

ಹಾಗೇ, ಜಾತಿ ಮುಖಂಡರ ದಾಕ್ಷಿಣ್ಯಕ್ಕೆ ಒಳಗಾದದಂತೆ ತೋರುತ್ತಿರುವ ಕಲ್ಬುರ್ಗಿ, ಕಣವಿ, ಜಿ.ಎಸ್. ಸಿದ್ಧಲಿಂಗಯ್ಯ ಮುಂತಾದವರು; ಇದೇ ಜಾತಿ ಮುಖಂಡರು ಈ ಪುಸ್ತಕ ಅಂಬೇಡ್ಕರ್ ಮತ್ತು ಕುವೆಂಪು ಅವರನ್ನೂ ಅವಮಾನಿಸಿದೆ ಎಂದು ಅಪ್ಪಟ ಸುಳ್ಳು ಹೇಳುತ್ತಾ ಇತರ ಜಾತಿ ಸಮುದಾಯಗಳನ್ನೂ ಪ್ರಚೋದಿಸುತ್ತಿರುವುದರ ಹಿಂದಿನ ಸಣ್ಣತನವನ್ನು ಅರಿತು, ಈ ಸಂಕುಚಿತ ವಲಯದಿಂದ ಆದಷ್ಟು ಬೇಗ ಮುಕ್ತಗೊಂಡು ತಮ್ಮ ಘನತೆಯನ್ನು ಕಾಪಾಡಿಕೊಳ್ಳಬೇಕಿದೆ. ಜಾತಿ ವ್ಯವಸ್ಥೆ ಇತಿಹಾಸದ ಒತ್ತಡಗಳಿಗೆ ಸಿಕ್ಕಿ ತನ್ನ ನೆಲೆಗಳನ್ನೂ, ಸ್ವರೂಪವನ್ನೂ ಸದಾ ಬದಲಾಯಿಸಿಕೊಳ್ಳುತ್ತಾ ಹೋಗುತ್ತಿರುವಾಗ, ಒಂದು ಕಾಲದ ಜಾತಿ ವ್ಯವಸ್ಥೆಯ ಒಳಸುಳಿಗಳ ಅಧ್ಯಯನವನ್ನು ಇನ್ನೊಂದು ಕಾಲದ ಜಾತಿ ವ್ಯವಸ್ಥೆಯ ಕಣ್ಣಿನಲ್ಲಿ ಅರ್ಥೈಸಿಕೊಳ್ಳುತ್ತಾ ಹೋದರೆ, ಈಗಾಗಿರುವಂತೆ ಅಪಾರ್ಥಗಳೇ ಹೆಚ್ಚಾಗಿ ಹೊಮ್ಮುವ ಅಪಾಯವಿದೆ ಎಂಬುದೂ ಇವರ ಗಮನದಲ್ಲಿದ್ದರೆ ಒಳ್ಳೆಯದು. ಅಲ್ಲದೆ, ಈ ಗೌರವಾನ್ವಿತ ಸಾಹಿತಿ– ವಿದ್ವಾಂಸರು, ಸಾಮಾಜಿಕ– ಸಾಂಸ್ಕೃತಿಕ ಸಂಶೋಧನೆಯ ಈ ಗ್ರಂಥವನ್ನು ಅದಕ್ಕೆ ತಕ್ಕ ಶೈಕ್ಷಣಿಕ ಗಾಂಭೀರ್ಯದೊಂದಿಗೆ ಓದಬೇಕೇ ಹೊರತು, ಕೇವಲ ಜಾತಿ ದೃಷ್ಟಿಯನ್ನಿಟ್ಟುಕೊಂಡಲ್ಲ ಎಂಬುದನ್ನು ತಮ್ಮ ಜಾತಿ ಮುಖಂಡರಿಗೆ ಮನದಟ್ಟು ಮಾಡಿಕೊಡುವುದು ಸದ್ಯದ ಗೊಂದಲದ ಸಂದರ್ಭದಲ್ಲಿ ತಮ್ಮ ಕರ್ತವ್ಯವೆಂದು ಭಾವಿಸಬೇಕಿದೆ. ಇವರಿಗೆ, ಈ ಪುಸ್ತಕದ ಬಗ್ಗೆ ಭಿನ್ನಾಭಿಪ್ರಾಯಗಳೇನಾದರೂ ಇದ್ದರೆ ಅದನ್ನು ವಿವರವಾಗಿ ತಮ್ಮ ಘನತೆಗೆ ತಕ್ಕ ವೇದಿಕೆಗಳಲ್ಲಿ ಜನತೆಯ ಮುಂದಿಟ್ಟು, ವೈಚಾರಿಕ ನೆಲೆಯಲ್ಲಿ ಈ ಪುಸ್ತಕದ ಮೌಲ್ಯಮಾಪನ ನಡೆಯಲು ದಾರಿ ಮಾಡಿಕೊಡಲಿ. ಏಕೆಂದರೆ, ಬಸವಣ್ಣ ಕೇವಲ ಒಂದು ಜಾತಿಯ ನಾಯಕನಾಗಿರದೆ, ಇಡೀ ಕನ್ನಡ ಸಮಾಜದ ನಾಯಕನಾಗಿದ್ದಾನೆ ಮತ್ತು ಇಂತಹ ವಿಷಯಗಳನ್ನು ಮೌಲಿಕವಾಗಿ ಚರ್ಚೆ ಮಾಡಬಲ್ಲಂತಹ ವಿದ್ವದ್‌ವೇದಿಕೆಗಳು ಕರ್ನಾಟಕದಲ್ಲಿ ನಮ್ಮ ಅದೃಷ್ಟಕ್ಕೆ ಕೆಲವಾದರೂ ಇನ್ನೂ ಜೀವಂತವಿವೆ.

ಬಂಜಗೆರೆಯವರು ಈ ಪುಸ್ತಕವನ್ನು ರಚಿಸಿರುವುದು ಅವರೇ ಈ ಪುಸ್ತಕದಲ್ಲಿ ಹೇಳಿಕೊಂಡಿರುವಂತೆ, ಮಾದಿಗ ಜಾತಿಗೆ ಸೇರಿದ ಬೇರೆ ಬೇರೆ ಪ್ರದೇಶಗಳ ಇಬ್ಬರು ಕಿರಿಯ ಸ್ನೇಹಿತರು 'ಬಸವಣ್ಣ ನಮ್ಮ ಜಾತಿಗೆ ಸೇರಿದವನಂತೆ, ಹೌದೆ?' ಎಂದು ತಮ್ಮನ್ನು ಕೇಳಿದ ಪ್ರಶ್ನೆಯಿಂದ ಕುತೂಹಲಗೊಂಡು ನಡೆಸಿದ ಸಂಶೋಧನೆಯ ಆಧಾರದ ಮೇಲೆ. ಅವರು ಮೊದಲಿಗೆ ಈ ಪುಸ್ತಕದಲ್ಲಿ ಬಸವಣ್ಣ ಜನ್ಮಜಾತ ಬ್ರಾಹ್ಮಣನಾಗಿದ್ದು, ನಂತರ ಬಂಡೆದ್ದು (ಯಾಕೆಂದು ಯಾರಿಗೂ ಗೊತ್ತಿಲ್ಲ!) ಕೆಳಜಾತಿಗಳೊಂದಿಗೆ ಗುರುತಿಸಿಕೊಂಡು ಅವರ ಆತ್ಮಗೌರವದ ಹೋರಾಟದಲ್ಲಿ ತೊಡಗಿಸಿಕೊಂಡ ಎಂಬ ಜನಪ್ರಿಯ ಸತ್ಯ ಹೇಗೆ ಪಟ್ಟಭದ್ರ (ಜಾತಿ) ಹಿತಾಸಕ್ತಿಗಳ ಹುನ್ನಾರದ ಪರಿಣಾಮವಾಗಿರಬಹುದು ಎಂಬುದನ್ನು; 'ಇತಿಹಾಸವನ್ನು

ಓದುವ ಮೊದಲು ಇತಿಹಾಸಕಾರನನ್ನು ಓದು' ಎಂಬ ಇತಿಹಾಸ ಶಾಸ್ತ್ರದ ಬೀಜ ವಾಕ್ಯವನ್ನು ವಿವಿಧ ನೆಲೆಗಳಲ್ಲಿ ವ್ಯಾಖ್ಯಾನಿಸುವ ಮೂಲಕ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾರೆ. ಅಲ್ಲದೆ, ನಮ್ಮದೇ ಮಹಾಭಾರತ– ರಾಮಾಯಣಗಳ ಅನೇಕ ವಿವರಗಳು ಹಾಗೂ ಬುದ್ಧನ ಜೀವನ ಪ್ರಸಂಗಗಳನ್ನು ಕುರಿತ ಸ್ಥಾಪಿತ ನಂಬಿಕೆಗಳನೇಕವು ಕಾಲಾನುಕಾಲದ ಇತಿಹಾಸ ಸಂಶೋಧನೆಗಳ ಮೂಲಕ ಹೇಗೆ ಬುಡಮೇಲುಗೊಂಡಿವೆ. ಎಂಬುದನ್ನು ಸೋದಾಹರಣವಾಗಿ ವಿವರಿಸುತ್ತಾರೆ. ಜೊತೆಗೆ, ಇತ್ತೀಚಿನ ಇತಿಹಾಸದಲ್ಲೇ ಕನಕದಾಸರನ್ನು ಮಾಧ್ವ ಬ್ರಾಹ್ಮಣನೆಂದು ನಂಬಿಸಿದುದನ್ನೂ;ವಿರುದ್ಧ ಸಾಕ್ಷ್ಯಗಳ ಎದುರಿನಲ್ಲೂ ಈಗಲೂ ಪುರಂದರ ದಾಸರನ್ನು ಬ್ರಾಹ್ಮಣರೆಂದೇ ಬಿಂಬಿಸುತ್ತಿರುವುದನ್ನು ಮತ್ತು ನಮ್ಮ ಕಾಲದಲ್ಲೇ ಅಂಬೇಡ್ಕರ್ ಹಾಗೂ ಕುವೆಂಪುರಂತಹ ಪ್ರತಿಭಾವಂತರ ಹುಟ್ಟಿನ ಮೂಲಗಳ ಬಗ್ಗೆ ಕೆಲವು ವಲಯಗಳಲ್ಲಿ ಕುಹಕವಾಡುವುದನ್ನೂ ನಮ್ಮ ಗಮನಕ್ಕೆ ತರುತ್ತಾರೆ.

ಹೀಗೆ ವಿಸ್ತಾರವಾಗಿ ಬಸವಣ್ಣನ ಮೂಲ ಜಾತಿ ಕುರಿತ ತಮ್ಮ ಸಂಶೋಧನೆಗೆ ಸಾಧುತ್ವವನ್ನೂ, ಸಮರ್ಥನೆಯನ್ನು ಒದಗಿಸಿಕೊಳ್ಳುವ ಲೇಖಕರು, ಬಸವಣ್ಣನ ಜೀವನ ಚರಿತ್ರೆಯನ್ನು ಈವರೆಗೆ ಕಟ್ಟಿಕೊಟ್ಟಿರುವ– ಅವನು ಜನ್ಮತಃ ಬ್ರಾಹ್ಮಣ ಎಂದು ಪ್ರಬಲವಾಗಿ ಪ್ರತಿಪಾದಿಸುವ ಡಾ॥ ಎಂ. ಚಿದಾನಂದಮೂರ್ತಿಯವರೂ ಸೇರಿದಂತೆ– ಹಲವು ಸಂಶೋಧಕರ ಆಕರಗಳು ಹಾಗೂ ವ್ಯಾಖ್ಯಾನಗಳನ್ನು, ಇತರ ಪೂರಕ ಮಾಹಿತಿ ಹಾಗೂ ಅವುಗಳ ವ್ಯಾಖ್ಯಾನಗಳ ಮೂಲಕ ಪುನಾರಚಿಸುತ್ತಾರೆ. ಈ ಪುನಾರಚನೆಗಳ ಆಧಾರದ ಮೇಲೆ, ಮುಖ್ಯವಾಗಿ ಬಸವಣ್ಣ ಜನ್ಮತಃ ಬ್ರಾಹ್ಮಣನಲ್ಲ ಹಾಗೂ ನಿರ್ದಿಷ್ಟವಾಗಿ ಆತ ಮಾದಿಗ ಜಾತಿಗೆ ಸೇರಿದವನು ಎಂಬುದನ್ನು ನಿರೂಪಿಸಲು ಪ್ರಯತ್ನಿಸುತ್ತಾರೆ. ಮೊದಲಿಗೆ ಬಸವಣ್ಣನಿಗೆ ಸಂಬಂಧಿಸಿದಂತೆ ಈವರೆಗೆ ಲಭ್ಯವಾಗಿರುವ ಎರಡೇ ಎರಡು 'ವಿಶ್ವಾಸಾರ್ಹ' ಶಾಸನಗಳ ಪಠ್ಯಗಳ ವಿಶ್ಲೇಷಣೆಯನ್ನು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ಕೈಗೊಳ್ಳುತ್ತಾರೆ. ಆ ಶಾಸನದಲ್ಲಿ ಉಕ್ತವಾಗಿರುವ 'ಮುನಿಪ' ಸಂಸ್ಕೃತಿಯ ಕುರುಹುಗಳನ್ನು ಹಿಂಬಾಲಿಸಿ, ಅವು ಹೇಗೆ ಬಸವಣ್ಣನ ಜಾತಿ ಮೂಲವನ್ನು ಮಾದಿಗ ಕುಲ ಪರಂಪರೆಯತ್ತ ಬೊಟ್ಟು ಮಾಡುತ್ತವೆ ಎಂದು ಸೂಚಿಸುತ್ತಾರೆ. ನಂತರ ಕಲ್ಯಾಣ ಕ್ರಾಂತಿಯ ಕಾಲ ಹಾಗೂ ಅದರ ಚರಿತ್ರೆಯು ಕಾವ್ಯ– ಪುರಾಣಗಳ ರೂಪದಲ್ಲಿ ದಾಖಲಾದ ಕಾಲಗಳ ನಡುವಣ ಸುಮಾರು ಒಂದು– ಒಂದೂವರೆ ಶತಮಾನದ ಅಂತರದಲ್ಲಿ ಶುದ್ಧ ಸ್ಮಾರ್ತ ಶೈವರು ಹಾಗೂ ಆರಾಧ್ಯ ಬ್ರಾಹ್ಮಣರು ಬಸವಣ್ಣ ಕಟ್ಟಿದ್ದ ಲಿಂಗಾಯತ ಚಳುವಳಿಯನ್ನು ವೀರಶೈವೀಕರಣಗೊಳಿಸಿದ ಧಾರ್ಮಿಕ ರಾಜಕಾರಣದ ಹೊಳಹನ್ನು ಆಧಾರ ಸಹಿತ ನೀಡುತ್ತಾರೆ. ಇಂತಹ ರಾಜಕಾರಣದ ಪ್ರಭಾವ ವಲಯಕ್ಕೆ ಸಿಕ್ಕಿಯೇ, ಮುಂದೆ ರಚಿತಗೊಂಡ ಸಾಹಿತ್ಯದಲ್ಲಿ ಬಸವಣ್ಣ ಬ್ರಾಹ್ಮಣನೆಂದು ನಿರೂಪಿತವಾಗಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಕೊನೆಗೆ, ಇದೆಲ್ಲವುಗಳ ಆಧಾರದ ಮೇಲೆ, ಬಸವಣ್ಣನ ಕಾಲದಲ್ಲಿ ಕರ್ನಾಟಕದ ಆ ಪ್ರದೇಶದಲ್ಲಿ ಪ್ರಬಲವಾಗಿದ್ದ ಅವೈದಿಕ ಆಗಮ ಶಾಸ್ತ್ರಾಚಾರಗಳಿಗಿದ್ದ (ಕಾಪಾಲಿಕ,

ಕಾಳಾಮುಖ ಇತ್ಯಾದಿ) ಸಾಮಾಜಿಕ ಮಾನ್ಯತೆಯ ಹಿನ್ನೆಲೆಯಲ್ಲಿ, ಆತ ಮಾದಿರಾಜನ 'ಕರಸಂಜಾತ'ನಾದ 'ಸಿಸುಮಗ'ನಾಗಿದ್ದುದು ಹೆಚ್ಚು ನಂಬಲರ್ಹ ಸಂಗತಿಯಾಗಿರುತ್ತದೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಬಂಜಗೆರೆಯವರು ತಮ್ಮ ಈ ತೀರ್ಮಾನವನ್ನು ಮಂಡಿಸಿರುವುದು ಮುಖ್ಯವಾಗಿ ಈ ಮೂರು ಸಂಗತಿಗಳ ಆಧಾರದ ಮೇಲೆ:

೧. ಬಸವ ಎಂಬ ಹೆಸರು ಮತ್ತು ಅದರ ಏಕವಚನ ಸಂಬೋಧನೆ ಸಂಪೂರ್ಣ ಬ್ರಾಹ್ಮಣೇತರ ಮೂಲದ್ದಾಗಿದೆ ಹಾಗೂ ಬಸವಣ್ಣ ಮಾದಾರ ಚೆನ್ನಯ್ಯನನ್ನು ತನ್ನ ಕುಲದ ಮೂಲಪುರುಷನೆಂದು ತನ್ನ ವಚನಗಳಲ್ಲಿ ಪದೇ ಪದೇ ಮತ್ತು ವಿವಿಧ ರೀತಿ– ನೀತಿಗಳಲ್ಲಿ ನಿವೇದಿಸಿಕೊಂಡಿದ್ದಾನೆ.

೨. ಬಸವಣ್ಣನಿಗೆ ಹುಟ್ಟಿನಲ್ಲೇ ಶಿವದೀಕ್ಷೆಯಾಗಿತ್ತು ಎಂಬ ನಂಬಿಕೆ ಹಾಗೂ ಉಲ್ಲೇಖಗಳು ಆತ 'ದೇವರ ಮಗ'ನೆಂದು ಸೂಚಿಸುತ್ತಿದ್ದು; ಅದು, ಆತ ಆಗಮಶಾಸ್ತ್ರದ ಪ್ರಕಾರ ದೀಕ್ಷೆ ಪಡೆದ ನಂತರವಷ್ಟೇ ಆ ಕಾಲದ ಆಚಾರದಂತೆ 'ಬ್ರಾಹ್ಮಣ'ನಾಗಿ 'ಜಾತ್ಯಂತರ'ನಾದನೆಂಬುದನ್ನೂ ಹೇಳುತ್ತದೆ.

೩. 'ಸಿಸು ಮಗ'ನನ್ನು ಪಡೆಯುವ ಆಗಮ ಯೋಗಾಚಾರ, ಮಾತೃಪ್ರಧಾನವಾದ ಮಾದಿಗ ಪರಂಪರೆಗೆ ಸೇರಿದ್ದೆಂಬುದನ್ನು ಸಾಂಸ್ಕೃತಿಕ ಅಧ್ಯಯನಗಳು ದೃಢಪಡಿಸುತ್ತವೆ. ಹಾಗೇ, ಮಾದಲಾಂಬಿಕೆಯ ತಾಯಿಯ ಮನೆ ಇಂತಹ ಯೋಗಾಚಾರದ ಅನೇಕ ಸಿದ್ಧರ ನೆಲೆಯಾಗಿತ್ತು ಎಂಬುದೂ ಚರಿತ್ರೆಯಿಂದ ತಿಳಿದು ಬರುತ್ತದೆ.

ಇದಕ್ಕೆ ಪೂರಕವಾಗಿ ಬಂಜಗೆರೆಯವರು ವಾಯುವ್ಯ ಕರ್ನಾಟಕದಲ್ಲಿ ಆಗ ಆರ್ಥಿಕ ಉತ್ಕರ್ಷಕ್ಕೆ ಬಂದಿದ್ದುವೆಂದು ಹೇಳಲಾದ ಕುಶಲಕರ್ಮಿ ಜಾತಿಗಳ ಎಡ ಹಾಗೂ ಬಲ ಪಣಕಟ್ಟುಗಳ ವಿಂಗಡಣೆ ಹಾಗೂ ಆ ವಿಂಗಡಣೆಯ ಪರಿಣಾಮದಿಂದುಂಟಾದ ಜನಿವಾರ ಸಹಿತವಾದ ಹೊಸ ಅಸ್ಪೃಶ್ಯ ಜಾತಿಗಳ ನಿರ್ಮಾಣ; ಕಲ್ಯಾಣ ಕ್ರಾಂತಿಯ ನಂತರ ನಡೆದ ಮಾದೇಶ್ವರ, ಗೋಣಿ ಬಸವೇಶ್ವರ, ಮಂಟೇಸ್ವಾಮಿ, ಮರುಳಸಿದ್ಧರ ನೇತೃತ್ವದ ಕೆಳ ಜಾತಿಗಳ ಆಂದೋಲನದ ಕತೆಗಳು; ಈ ಬಗ್ಗೆ ದೇವ ಚಂದ್ರನ 'ರಾಜಾವಳಿ ಕಥೆ' ನೀಡುವ ಸೂಚನೆಗಳು ಹಾಗೂ ಈಗಲೂ ಕಲ್ಯಾಣ ಕರ್ನಾಟಕದಲ್ಲಿ ಪ್ರಚಲಿತವಿರುವ 'ಬಾಲ ಬಸಪ್ಪ' ಪರಂಪರೆಯ ಮಾದಿಗ ಕುಲತ್ವ ಇತ್ಯಾದಿಗಳ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಹಾಗೇ ಮನೆಯಿಂದ ಓಡಿಬಂದ ಬಸವಣ್ಣನಿಗೆ ಆಶ್ರಯ ನೀಡಿದನೆಂದು ಹೇಳಲಾದ ಜಾತವೇದಿ ಮುನಿಯ ಗುಡಿಗೆ (ಸಮಾಜದ) ಆಚೆಯವರ ಗುಡಿ ಎಂಬರ್ಥದಲ್ಲಿ, 'ಆಚೇಶ್ವರ ಗುಡಿ'ಯೆಂಬ ಹೆಸರಿರುವುದನ್ನೂ ಉಲ್ಲೇಖ ಮಾಡುತ್ತಾರೆ

ಬಸವಣ್ಣ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನೆಂಬುದು ಐತಿಹಾಸಿಕವಾಗಿ ಸಾಧಿತವಾದ ಸತ್ಯವೇನಲ್ಲ. ಅದು ಜಾತಿ ಶ್ರೇಣೀಕರಣದಲ್ಲಿ ಆನಂದ ಪಡೆಯುತ್ತಿದ್ದ ಸಮಾಜದ ಪ್ರಭಾವ ವಲಯಕ್ಕೆ ಸಿಕ್ಕ ಬಸವ ಸಂಪ್ರದಾಯ ರೂಢಿಸಿಕೊಂಡ ಒಂದು ನಂಬಿಕೆ ಇರಬಹುದು. ಆತ ಎಡ ಪಣಕಟ್ಟಿನ ನಾಯಕತ್ವ ವಹಿಸಿದ್ದ ವಿಶ್ವಕರ್ಮ ಜಾತಿಗೆ ಸೇರಿದವನೆಂಬ ನಂಬಿಕೆ

ವ್ಯಾಪಕವಾಗಿ ಕಲ್ಯಾಣ ಕರ್ನಾಟಕದಲ್ಲಿರುವುದನ್ನೂ, ಈ ಸಂಬಂಧ ಅನೇಕ ಸಂಶೋಧನ ಪ್ರಬಂಧಗಳು ಪ್ರಕಟವಾಗಿರುವುದನ್ನು ನಾವು ಗಮನಿಸಬಹುದು. ಈ ಎಲ್ಲ ಹಿನ್ನೆಲೆಯಲ್ಲಿ ಬಂಜಗೆರೆಯವರ ವಾದವನ್ನು ಪರಿಶೀಲಿಸಿದಾಗ, ಬಸವಣ್ಣ ಬ್ರಾಹ್ಮಣನೆಂಬ ನಂಬಿಕೆಗಿಂತ ಆತ ಬ್ರಾಹ್ಮಣನಲ್ಲವೆಂಬ ಅನುಮಾನವೇ ಹೆಚ್ಚು ವಿಶ್ವಸನೀಯವಾಗಿ ಕಾಣುತ್ತದೆ. ಆದರೆ ಆತ ಮಾದಿಗ ಜಾತಿಗೆ ಸೇರಿದ್ದವನು ಎಂಬುದನ್ನು ಖಚಿತಪಡಿಸುವಂತಹ ಪುರಾವೆಗಳನ್ನು ಲೇಖಕರು ಒದಗಿಸಿಲ್ಲವೆಂದೇ ಹೇಳಬೇಕಾಗುತ್ತದೆ.

ಅವರ ವಾದದ ಪ್ರಕಾರವೇ ಆತ 'ಸಿಸುಮಗ'ನಾಗಿ ಹುಟ್ಟಿ ಬಾಲಯೋಗಿದ್ದರೆ, ಆ ಪರಂಪರೆಯ ಬಗ್ಗೆ ಗೌರವ ಇಟ್ಟುಕೊಂಡೂ ಆತನಿಗೆ ಯಾವುದೇ ಜಾತಿಯನ್ನು ಆರೋಪಿಸುವುದು ಎಷ್ಟು ಸರಿ ಅಥವಾ ಸಂಗತ ಎಂಬ ಪ್ರಶ್ನೆಯೂ ಏಳುತ್ತದೆ. ಅಲ್ಲದೆ, ಬಸವಣ್ಣ ಹಾಗೆ ಮಾದಿಗನೇ ಆಗಿದ್ದರೆ ಮತ್ತು ಹುಟ್ಟಿನಿಂದ ಕ್ಷೌರಿಕನಾದರೂ ಕ್ಷತ್ರಿಯನಾಗಿ ಪಟ್ಟವೇರಿದ್ದ ಬಿಜ್ಜಳ, ತನ್ನ ತಂಗಿಯನ್ನು ಆತನಿಗೆ ಮದುವೆ ಮಾಡಿಕೊಡುವಂತಹ ಉದಾರವಾದ ಸಾಮಾಜಿಕ ವಾತಾವರಣ ಆಗ ಇದ್ದುದಾದರೆ; ಹರಳಯ್ಯ– ಮಧುವರಸರ ಮಕ್ಕಳ ಮದುವೆ ಬಗ್ಗೆ ಬಿಜ್ಜಳನೇಕೆ ಅಷ್ಟು ಕೆರಳಬೇಕು? ಹಾಗೇ, ಜೈನರು ಮತ್ತು ಬ್ರಾಹ್ಮಣರು ಆ ಪ್ರಮಾಣದ ರಾದ್ಧಾಂತ ಸೃಷ್ಟಿಸಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗಳು ಏಳುತ್ತವೆ.

ಇವಕ್ಕೆಲ್ಲ, ಮೊನ್ನೆ ಶಿವಮೊಗ್ಗದಲ್ಲಿ ನಡೆದ ಒಂದು ಸಂವಾದದಲ್ಲಿ ಜಯಪ್ರಕಾಶರು, ಬಿಜ್ಜಳ– ಬಸವಣ್ಣನ ಸಂಬಂಧ ಹಾಗೂ ಹರಳಯ್ಯ– ಮಧುವರಸರ ಮಕ್ಕಳ ಮದುವೆ ಕುರಿತಂತೆ ಇರುವ ಕಥೆಗಳು ಕಲ್ಪಿತವಾದವು; ಅವಕ್ಕೆ ಯಾವುದೇ ಚಾರಿತ್ರಿಕ ಆಧಾರಗಳಿಲ್ಲ ಎಂದು ಹೇಳುವ ಮೂಲಕ ಸ್ಪಷ್ಟೀಕರಣ ನೀಡಲು ಯತ್ನಿಸಿದರಾದರೂ, ಅವರ ಅಧ್ಯಯನದಲ್ಲಿ ಯಾವುದೋ ಒಂದು ಬಹು ಮುಖ್ಯ ಆಯಾಮ ಪರಿಶೀಲನೆಯಿಂದ ತಪ್ಪಿಸಿಕೊಂಡಂತಿದೆ ಎಂದೆನ್ನಿಸದಿರದು. ಆದರೆ ಈ ಯಾವ ಕೊರತೆಯೂ ಬಂಜಗೆರೆಯವರ ವಾದದ ಆಶಯವನ್ನು ಅನುಮಾನಸ್ಪದಗೊಳಿಸಲಾರದು. ಹಾಗೇ ಈ ಸಂಶೋಧನಾ 'ವಿವಾದ'ದಿಂದ ಪ್ರಯೋಜನವಾದರೂ ಏನು ಎಂದು ಕೇಳುವ ಕಳ್ಳ 'ಜಾತ್ಯತೀತ'ರ ಮಳ್ಳತನವೇನೂ ಮುಚ್ಚಿಹೋಗದು. ಈಗ ಜಯಪ್ರಕಾಶರು ಜರೂರಾಗಿ ಮಾಡಬೇಕಾದ ಕೆಲಸವೆಂದರೆ, ತಮ್ಮ ಸದ್ಯದ ಪುಸ್ತಕ ಕುರಿತು ಈವರೆಗೆ ನಡೆದಿರುವ ಚರ್ಚೆಗಳನ್ನು ಗಮನದಲ್ಲಿಟ್ಟುಕೊಡು, ಬದಲಾಗುತ್ತಿರುವ ಭಾರತದ ಜಾತಿ ವ್ಯವಸ್ಥೆಯ ಸ್ವರೂಪದ ಅಧ್ಯಯನದ ನೆಲೆಯಲ್ಲಿ ತಮ್ಮ ಈ ಪುಸ್ತಕವನ್ನು ವಿಸ್ತರಿಸಿ ಬರೆಯುವುದು.

ಜೂನ್ ೧೫, ೨೦೦೭

ಅವನತಿಗೊಳ್ಳುತ್ತಿರುವ ಸಂವಾದ ಸಂಸ್ಕೃತಿ...

'ಆವರಣ' ಕೃತಿಯ ಬಗ್ಗೆ ಲೇಖನ ಬರೆಯುವ ನೆಪದಲ್ಲಿ ಹಲವರು ಅನಂತಮೂರ್ತಿ ಮೇಲೆ ವೈಯುಕ್ತಿಕ ದಾಳಿ ನಡೆಸುವ ಯತ್ನ ಮಾಡಿದ್ದಾರೆ. ಇದು ಮತ್ತೆ 'ಆವರಣ' ಕೃತಿಯ ಹಿಂದಿರುವ ರಾಜಕೀಯ ಕಾರ್ಯಕ್ರಮದ ಮುಂದುವರೆದ ಭಾಗವೇ ಆಗಿದೆ. ಅನಂತಮೂರ್ತಿ ಟೀಕಾತೀತರೇನಲ್ಲ. ಅನೇಕ ಬಾರಿ ಅಧಿಕಾರಸ್ಥರ ದಾಕ್ಷಿಣ್ಯಕ್ಕೋ, ಸುಲಭ ಜನಪ್ರಿಯತೆಗಾಗಿಯೋ ವಿರೋಧಾಭಾಸಗಳ ಹೇಳಿಕೆಗಳನ್ನು ನೀಡಿ ಅವರ ಗೆಳೆಯರಿಂದಲೂ, ವಿರೋಧಿಗಳಿಂದಲೂ ಅವರು ಟೀಕೆಗೊಳಗಾಗಿದ್ದಾರೆ. ಆದರೆ, 'ಆವರಣ' ಕುರಿತ ಚರ್ಚೆಯ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆಯ ಪರಿಧಿ ದಾಟದೆ ಭೈರಪ್ಪನವರ ಬಗ್ಗೆ ಅವರು ಮಾಡಿದ ಟೀಕೆ, ಸಾಹಿತ್ಯ ವಿಮರ್ಶೆಯ ಚೌಕಟ್ಟಿನಲ್ಲಿ ನಡೆಯದೆ, ಅನಂತಮೂರ್ತಿಯವರ ಮೇಲಿನ ಯಾವುದೋ ಹಳೆಯ ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ನಡೆಯುತ್ತಿರುವುದು ವಿಷಾದಕರ. ಇದಕ್ಕೊಂದು ಒರಟಾದ ಉದಾಹರಣೆಯೆಂದರೆ, ಈಚೆಗೆ 'ವಿಕ್ರಾಂತ ಕನಾಟಕ' ವಾರಪತ್ರಿಕೆಯಲ್ಲಿ ಪ್ರಕಟವಾಗಿರುವ (ಇದು ಅಂತರ್ಜಾಲದಲ್ಲೂ ಲಭ್ಯವಿದೆಯಂತೆ) 'ಸನಾತನಿ' ಅಥವಾ 'ಜೆಹಾದಿ' ಶಬ್ದಗಳನ್ನು ಉಡಾಫೆಯಿಂದ ಬಳಸಿದ್ದ ಶೀರ್ಷಿಕೆಯಡಿ ಪ್ರಕಟವಾದ ಪ್ರೇಮ ಶೇಖರ ಎಂಬುವವರ ಲೇಖನ.

ಸಂಪಾದಕರಿಂದ 'ಜಿಜ್ಞಾಸೆ'ಯೆಂಬ ಅವಸರದ ಅಭಿದಾನ ಪಡೆದಿರುವ ಈ ಬರಹ; ಅಸಭ್ಯ ಭಾಷೆಯಿಂದಲೂ, ಅದಕ್ಕೆ ಕಾರಣವಾದ ಒರಟೊರಟಾದ ವಾದ ಸರಣಿಯಿಂದಲೂ ಕೂಡಿ, ಓದಿದವರ ಬಾಯಲ್ಲಿ ಕೆಟ್ಟ ವಾಸನೆಯನ್ನಷ್ಟೇ ಬಿಟ್ಟುಹೋಗುತ್ತದೆ. ಅನಂತಮೂರ್ತಿ ಬುದ್ಧಿಜೀವಿ ಅಲ್ಲ, ಅವರು ಜ್ಞಾನಪೀಠಕ್ಕೆ ಅರ್ಹರಲ್ಲ; ಭೈರಪ್ಪ ಸತ್ಯವನ್ನೇ ಬರೆದಿದ್ದಾರೆ, ಇಸ್ಲಾಂನ್ನು ಅವರು ಅದಿರುವ ಹಾಗೆಯೇ ಚಿತ್ರಿಸಿದ್ದಾರೆ ಎಂದು ಯಾರಿಗಾದರೂ ಅನ್ನಿಸಿದ್ದರೆ, ಅದನ್ನು ಹೇಳುವುದರಲ್ಲಿ ತಪ್ಪೇನಿಲ್ಲ. ಅದು ಒಳ್ಳೆಯ ಚರ್ಚೆಗೆ ಆಹ್ವಾನವೂ ಆಗುತ್ತದೆ. ಆದರೆ, ಚರ್ಚೆಯ ಸಂದರ್ಭಕ್ಕೆ ಸಲ್ಲದ ಹಾಗೂ ಚರ್ಚೆಯ ಚೌಕಟ್ಟಿನಲ್ಲಿ ಸಮರ್ಥನೆಯೇ ಇಲ್ಲದಂತಹ ವೈಯುಕ್ತಿಕ ಅಭಿಪ್ರಾಯಗಳನ್ನು ತಮ್ಮ ವಾದ ಮಂಡಿಸಲು ಬಳಸಿಕೊಂಡು, ಅಂತಿಮ ತೀರ್ಪು ನೀಡುವ ಸರ್ವಜ್ಞಗರ್ವದ ಶೈಲಿಯಲ್ಲಿ ಬರೆಯುವುದು,

ಈಗಾಗಲೇ ಕಲುಷಿತಗೊಂಡಿರುವ ಸಾಂಸ್ಕೃತಿಕ ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸಬಲ್ಲುದು ಮಾತ್ರ.

ಇಂದು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಚರ್ಚೆಯಾಗುತ್ತಿರುವುದು, 'ಆವರಣ' ಕಾದಂಬರಿಯೋ ಅಲ್ಲವೋ ಎಂಬುದರ ಬಗ್ಗೆ. ಹಾಗೇ, ಭೈರಪ್ಪ ಕಾದಂಬರಿಕಾರರೇ ಅಲ್ಲವೆಂದು ಅನಂತಮೂರ್ತಿ ಹೇಳಿದ್ದಾರೆಂದು ವರದಿಯಾಗಿರುವ ಮಾತಿನ ಬಗ್ಗೆ. ಅನಂತ ಮೂರ್ತಿಯವರಿಗೆ ಭೈರಪ್ಪ ಕಾದಂಬರಿಕಾರ ಅಲ್ಲವೇ ಅಲ್ಲ ಎನ್ನಿಸಿದ್ದರೆ, ಅದನ್ನು ಅವರು ಯಾಕೆ ಹೇಳಬಾರದು? ತಮಗೆ ಏಕೆ ಹಾಗೆ ಅನ್ನಿಸಿದೆ ಎನ್ನುವುದನ್ನು ಅವರು 'ಗೃಹಭಂಗ'ವನ್ನು ಮೆಚ್ಚುತ್ತಲೇ ವಿವರಿಸಿರುವುದನ್ನು ಹಲವಾರು ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಅವರ ಭಾಷಣದ ಪೂರ್ಣ ಪಾಠವನ್ನು ಓದಿ ತಿಳಿಯಬಹುದು. ಜೊತೆಗೆ 'ಆವರಣ' ಕುರಿತು ಅನಂತಮೂರ್ತಿ ಮಾತಾಡುವ ಬಹುಮುನ್ನವೇ ಬಂದಿರುವ ಎಲ್ಲ ಪತ್ರಿಕಾ ವಿಮರ್ಶೆಗಳು (ಇವರೆಲ್ಲರೂ ಭೈರಪ್ಪ ವಿರೋಧಿಗಳೇನೂ ಅಲ್ಲ) ಹಾಗೂ ಅವಕ್ಕೆ ಬಂದಿರುವ ಪ್ರತಿಕ್ರಿಯೆಗಳು, ಈ ಕೃತಿ ಕಾದಂಬರಿಯಾಗಿರುವ ಬಗ್ಗೆ ತಮ್ಮದೇ ರೀತಿಯಲ್ಲಿ ಅನುಮಾನಗಳನ್ನು ವ್ಯಕ್ತಪಡಿಸಿರುವುದನ್ನೂ ನಾವು ಗಮನಿಸಬಹುದು.

ಇಷ್ಟಾದರೂ, ಅದನ್ನು ಕಾದಂಬರಿಯೆಂದು ಸಮರ್ಥಿಸುವ ಹಾಗೂ ಅನಂತಮೂರ್ತಿಯವರ ವಾದವನ್ನು ಅಲ್ಲಗೆಳೆಯುವ ಸಾಹಿತ್ಯಿಕ ಪ್ರಯತ್ನಗಳನ್ನು ಯಾರಾದರೂ ಮಾಡಿದರೆ, ಅದನ್ನು ಪರಿಶೀಲಿಸಲೇಬೇಕಾಗುತ್ತದೆ, ನಿಜ. ಆದರೆ ಅಂತಹ ಪ್ರಯತ್ನಗಳನ್ನು, ಅನಂತಮೂರ್ತಿ ಬುದ್ಧಿಜೀವಿಯಲ್ಲ, ಮತ್ತೆಂತಹುದೋ ಎಂದು ಬೀದಿ ಬದಿಯ ಹೊಲಸು ಭಾಷೆಯಲ್ಲಿ ತೆಗಳುತ್ತಾ; ಅನ್ಯಮತಗಳ ಧಾರ್ಮಿಕ ಪರಿಕಲ್ಪನೆಗಳನ್ನು ಅಸಹ್ಯ ಬರುವಂತೆ ನಿರೂಪಿಸುತ್ತಾ (ಇದನ್ನು ಇನ್ನಷ್ಟು ಅಸಹ್ಯವಾಗಿ ನಮ್ಮ ವಾಲ್ಮೀಕಿ ರಾಮಾಯಣದ ಹಾಗೂ ಗರುಡ ಪುರಾಣಗಳಂತಹ ಅನೇಕ ಪುರಾಣಗಳ ಅನೇಕ ಪ್ರಸಂಗಗಳಿಗೆ ಸಂಬಂಧಿಸಿದಂತೆಯೂ ಮಾಡಬಹುದು); ಹಿಂದೂ ಧರ್ಮವನ್ನು ವಿಮರ್ಶಿಸುವವರನ್ನು, ಅವರು ಅನ್ಯಮತಗಳನ್ನು ವಿಮರ್ಶಿಸುವುದಿಲ್ಲ ಎಂಬ ಸುಳ್ಳು ಮತ್ತು ಈಗಾಗಲೇ ತುಕ್ಕು ಹಿಡಿದಿರುವ ಕಾರಣ ಕೊಟ್ಟು 'ಖೋಟಾ ಸೆಕ್ಯುಲರಿಸ್ಟರು' ಎಂದು ಹೀಯಾಳಿಸುತ್ತಾ ಒರಟೊರಟಾಗಿ ಮಾಡುವುದರಿಂದ ನಮ್ಮ ಯಾವುದೋ ವೈಯುಕ್ತಿಕ ತೆವಲುಗಳನ್ನು ತೀರಿಸಿಕೊಳ್ಳಬಹುದೇ ಹೊರತು, ಅನಂತಮೂರ್ತಿ ಮಾಡಿರಬಹುದಾದ ತಪ್ಪುಗಳನ್ನು ಸರಿಯಾದ ಅರ್ಥದಲ್ಲಿ ವಿಮರ್ಶಿಸಲೂ ಆಗುವುದಿಲ್ಲ ಮತ್ತು ನಮ್ಮ ವಾದವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲೂ ಸಾಧ್ಯವಾಗುವುದಿಲ್ಲ.

ಹಾಗೆ ನೋಡಿದರೆ, ಅನಂತಮೂರ್ತಿ ಕನ್ನಡ ಸಾಹಿತ್ಯ– ಸಾಂಸ್ಕೃತಿಕ ಲೋಕದಲ್ಲಿ ಒಂದಲ್ಲ ಒಂದು ಕಾರಣಕ್ಕೆ ಸದಾ ಟೀಕೆಗೊಳಗಾಗುತ್ತಾ ಬಂದಿದ್ದಾರೆ. ಆ ಟೀಕೆಗಳೆಲ್ಲ ಅವರ ಸಾಹಿತ್ಯ ಕೃತಿಗಳ ವಿಮರ್ಶೆಯ ಭಾಗವಾಗಿ ಮತ್ತು ಅವರ ಕೆಲವು ಸಾಂಸ್ಕೃತಿಕ ನಿಲವುಗಳು ಸೃಷ್ಟಿಸಿದ ವಿವಾದ– ಚರ್ಚೆಯ ಭಾಗವಾಗಿ ವ್ಯಕ್ತವಾಗಿ, ಸಾಹಿತ್ಯ ವಿಮರ್ಶೆಯ ಪರಿಧಿಯನ್ನು

ವಿಸ್ತರಿಸುವಲ್ಲಿ ಹಾಗೂ ಸಾಂಸ್ಕೃತಿಕ ಗೊಂದಲಗಳನ್ನು ನಿವಾರಿಸಿಕೊಳ್ಳುವಲ್ಲಿ ಸಹಾಯಕವಾಗಿರುವಂತಿದ್ದವೇ ಹೊರತು; ಅವೆಂದೂ ಈಗಾಗುತ್ತಿರುವಂತೆ, ವೈಯುಕ್ತಿಕ ನೆಲೆಯ ದಾಳಿಯ ರೂಪದಲ್ಲಿ ವ್ಯಕ್ತವಾಗಿ ಸಾಮಾಜಿಕ ವಾತಾವರಣವನ್ನು ಬಿಗುವುಗೊಳಿಸುವ ವಿಚ್ಛಿದ್ರಕಾರಿ ಪ್ರಯತ್ನಗಳಾಗಿರುತ್ತಿರಲಿಲ್ಲ.

ಅನಂತಮೂರ್ತಿ ಮಹತ್ವಾಕಾಂಕ್ಷಿ ಯಾಕಾಗಿರಬಾರದು? ಅವರು ಪಡೆದ ಸ್ಥಾನಮಾನಗಳೆಲ್ಲ ಅವರ ಸಾಹಿತ್ಯದಿಂದ ದೊರೆತ ಪ್ರಯೋಜನಗಳಾದರೆ, ಭೈರಪ್ಪನವರೂ ಅಂತಹ ಪ್ರಯೋಜನಗಳನ್ನು ಪಡೆಯಲು ಯಾರು ತಡೆದಿದ್ದರು? ಅಥವಾ ಅವರು ಪಡೆದೇ ಇಲ್ಲ ಎಂದು ಹೇಗೆ ಹೇಳುವುದು? ಅಥವಾ ಅವರ ಸಾಹಿತ್ಯ ಅಂತಹ ಪ್ರಯೋಜನಗಳನ್ನು ಪಡೆಯುವುದಕ್ಕೆ ಅರ್ಹವಾಗಿರಲಿಲ್ಲವೋ? ಅನಂತಮೂರ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷತೆಗೆ ಸ್ಪರ್ಧಿಸುವುದು ಸಾಹಿತ್ಯ ಕೃಷಿಯ ದುರುಪಯೋಗ ಎನ್ನುವ ಬಾಲಿಶ ವಾದವನ್ನು ಒಪ್ಪಿಕೊಂಡು ಮುಂದುವರೆಯುವುದಾರೆ, ಅವರನ್ನು ಸೋಲಿಸಲು ಭಾರತದಾದ್ಯಂತ ಸಂಚರಿಸಿ ಅವರ ವಿರುದ್ಧ ಪ್ರಚಾರ ಮಾಡಿದ ಭೈರಪ್ಪನವರ ವಿಫಲ ಪ್ರಯತ್ನಗಳನ್ನು ಏನೆಂದು ಕರೆಯೋಣ? ಜ್ಞಾನಪೀಠ ಸಿಗಬೇಕಾಗಿದ್ದದ್ದು ಭೈರಪ್ಪನವರಿಗೇ ಹೊರತು ಅನಂತಮೂರ್ತಿಯವರಿಗಲ್ಲ ಎಂದು ಹೇಳುವ ಇವರಿಗೆ, ಈಗಾಗಲೇ ಅನಂತಮೂರ್ತಿಯವರಂತಹ 'ಅನರ್ಹ'ರಿಗೆ ಸಿಕ್ಕಿ ಬೆಲೆ ಕಳೆದುಕೊಂಡಿರುವ ಜ್ಞಾನಪೀಠದ ಬಗ್ಗೆ ಇನ್ನೂ ಇಷ್ಟೊಂದು ಹಪಾಹಪಿ ಏಕೆ?

ಭೈರಪ್ಪನವರನ್ನು ಕನ್ನಡದ ಸರ್ವಶ್ರೇಷ್ಠ ಸಾಹಿತಿಯೆಂದು ಆರಾಧಿಸುತ್ತ, ಅವರನ್ನು ತಮ್ಮ ವೈಯುಕ್ತಿಕ ಸಾಹಿತ್ಯಿಕ ಸಲಹಾಗಾರರನ್ನಾಗಿ ಮಾಡಿಕೊಂಡಿದ್ದ ಡಾ॥ ಹಾ.ಮಾ. ನಾಯಕರೆಂಬ ಸಾಹಿತ್ಯ ಆಡಳಿತಗಾರರು ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಆಯಕಟ್ಟಿನ ಸ್ಥಾನಗಳಲ್ಲಿರುವವರೆಗೆ, ಲಂಕೇಶ್, ತೇಜಸ್ವಿ, ಅನಂತಮೂರ್ತಿಯವರಿಂದ ಹಿಡಿದು ದೇವನೂರು ಮಹದೇವ, ಕೃಷ್ಣ ಆಲನಹಳ್ಳಿಯವರವರೆಗೆ, ಆ ಕಾಲದ ಯಾವ ಪ್ರತಿಭಾಶಾಲಿಗೂ ಆ ಅಕಾಡೆಮಿಗಳ ಯಾವ ತೆರನ ಮಾನ್ಯತೆಯೂ ದೊರಕದಂತೆ ನೋಡಿಕೊಂಡ ಸಾಹಿತ್ಯ ರಾಜಕಾರಣದ ಹಿಂದಿದ್ದ ಶಕ್ತಿಗಳಾದರೂ ಯಾವುವು? ಇಂತಹ ನಮಗೆ ಗೊತ್ತಿರುವ ಹಾಗೂ ಗೊತ್ತಿಲ್ಲದ ಅನೇಕ ಪ್ರಶ್ನೆಗಳಿವೆ. ಪರಿಸ್ಥಿತಿ ಹೀಗಿರುವಾಗ, ಗಲಾಟೆಯಾದಾಗ ಗುಂಪಿನಲ್ಲಿ ಸೇರಿಕೊಂಡು ಯಾವುದ್ಯಾವುದೋ ಹಳೆಯ ಕಾರಣಗಳಿಗಾಗಿ, ಆಗದವನ ಮೇಲೆ ಕಲ್ಲೆಸೆಯುವ ರೀತಿಯ ವಾದ ಮಾಡುತ್ತಾ ಹೋಗುವುದು ಈಗಾಗಲೇ ಕುಗ್ಗುತ್ತಿರುವ ಪ್ರಜಾಪ್ರಭುತ್ವವಾದಿ ಅವಕಾಶವನ್ನು ಇನ್ನಷ್ಟು ಕುಗ್ಗಿಸುತ್ತದಷ್ಟೆ. ಅಷ್ಟೇ ಅಲ್ಲ, ಸಮಾಜದ ಸಂವಾದ ಸಂಸ್ಕೃತಿಯನ್ನು ನಾಶ ಮಾಡಿ, ಪುಂಡು– ಪೋಕರಿಗಳೇ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಈಗಾಗಲೇ ನಡೆಸುತ್ತಿರುವ ಪ್ರಯತ್ನಗಳನ್ನು ಬೆಂಬಲಿಸಿದಂತಾಗುತ್ತದಷ್ಟೆ.

ರಾಜಸ್ಥಾನದಲ್ಲಿ ಗುಜ್ಜರರು ಇತ್ತೀಚೆಗೆ ಒಂದು ವಾರ ಎಗ್ಗಿಲ್ಲದೆ ನಡೆಸಿದ ದಾಂಧಲೆಯನ್ನೇ ಗಮನಿಸಿ. ಅಲ್ಲಿ ಒಂದು ವಾರ ಪ್ರಜಾಪ್ರಭುತ್ವವೇ ಕುಸಿದು ಬಿದ್ದಿತ್ತು. ಪುಂಡು ಪೋಕರಿಗಳದೇ ರಾಜ್ಯಭಾರ. ಗುಜ್ಜರರಿಗೆ ೨೦೦೩ರ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಯ ಸ್ಥಾನಮಾನ ನೀಡುವುದಾಗಿ ಮೂಗಿಗೆ ತುಪ್ಪ ಹಚ್ಚಿ ಬಿಟ್ಟಿದ್ದ ಸಂಘ ಪರಿವಾರ, ಅಧಿಕಾರಕ್ಕೆ ಬಂದ ಮೇಲೆ ಯಾವ ಜಾತಿ ರಾಜಕೀಯ ಕಾರಣಗಳಿಗಾಗಿ ಈ ಆಶ್ವಾಸನೆ ನೀಡಿತ್ತೋ, ಅದೇ ಜಾತಿ ರಾಜಕೀಯ ಕಾರಣಗಳಿಗಾಗಿ (ಇವರಿಗೆ ಆ ಸ್ಥಾನಮಾನ ಕೊಟ್ಟರೆ, ಇನ್ನೊಂದು ಜಾತಿಯವರು ಸಿಡಿದೇಳುತ್ತಾರೆ!) ಆ ಆಶ್ವಾಸನೆಯನ್ನು ಈಡೇರಿಸಲಾಗದ ಪರಿಸ್ಥಿತಿಗೆ ಸಿಕ್ಕು, ಜನ ಪ್ರತಿಭಟನೆಗಿಳಿದಾಗ ದಿಙ್ಮೂಢವಾಗಿ ಕೂತಿತು! ಕೈಗೆ ಸಿಕ್ಕ ಆಯುಧಗಳೊಂದಿಗೆ ಬೀದಿಗಿಳಿದ ಜನಸಮೂಹ, ನಾಯಕತ್ವದ ದಿಕ್ಕು ದೆಸೆಯಿಲ್ಲದೆ ವ್ಯಾಪಕ ಹಿಂಸಾಚಾರಕ್ಕಿಳಿದು ಜನರಿದ್ದ ರೈಲು– ಕಾರು– ಬಸ್ಸು– ಕಟ್ಟಡ ಎನ್ನದೆ, ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಸಾರ್ವಜನಿಕ ಆಸ್ತಿಪಾಸ್ತಿಯನ್ನು ನಾಶ ಮಾಡುತ್ತಾ ಹೋಯಿತು.

ಸರ್ಕಾರ ಎಚ್ಚೆತ್ತುಕೊಳ್ಳುವ ವೇಳೆಗೆ ಗುಜ್ಜರರಿದ್ದ ಪಕ್ಕದ ದೆಹಲಿ, ಹರ್ಯಾಣ ಮತ್ತು ಪಶ್ಚಿಮ ಉತ್ತರ ಪ್ರದೇಶಗಳಿಗೂ ಈ ಹಿಂಸಾಚಾರ ಜಾತಿ ದ್ವೇಷದ ಜ್ವಾಲೆಯಾಗಿ ಹಬ್ಬಿ, ಪೋಲೀಸರೂ ಸೇರಿದಂತೆ ಹತ್ತಾರು ಜನರ ಪ್ರಾಣವನ್ನೂ ಬಲಿತೆಗೆದುಕೊಂಡಿತ್ತು. ಇದರಿಂದಾಗಿ ದೆಹಲಿ ಸೇರಿದಂತೆ ಹಲವಾರು ನಗರ– ಪಟ್ಟಣಗಳ ಜನಜೀವನ ಅಸ್ತವ್ಯಸ್ತಗೊಂಡಾಗ, ಜನರ ನೆರವಿಗೆ ಬಂದದ್ದು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ. ಏನು ನಡೆಯುತ್ತಿದೆ ಈ ದೇಶದಲ್ಲಿ– ಯಾರೂ ಹೇಳುವವರು ಕೇಳುವವರಿಲ್ಲವೇ ಎಂದು ಅದು ಸಂಬಂಧಪಟ್ಟ ಸರ್ಕಾರಗಳಿಗೆ ಛೀಮಾರಿ ಹಾಕಿ; ಕಾನೂನು ಮತ್ತು ಶಿಸ್ತು ಪಾಲನೆಯ ವರದಿ ಕೇಳಿದಾಗಲೇ, ಸರ್ಕಾರಗಳೆಂಬುವು ಎಚ್ಚೆತ್ತುಕೊಂಡು ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಕಾರ್ಯಾಚರಣೆ ಮತ್ತು ಸಂಬಂಧಪಟ್ಟ ಜಾತಿ ಮುಖಂಡರೊಂದಿಗೆ ಮಾತುಕತೆ ಆರಂಭಿಸಿದ್ದು! ಇದು ನಮ್ಮ ಪ್ರಜಾಪ್ರಭುತ್ವ!

ಶಾಸಕಾಂಗ ಮತ್ತು ಕಾರ್ಯಾಂಗಗಳೆರಡೂ ತಂತಮ್ಮ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತಗಳ ಸುಖಗಳಲ್ಲಿ ಮುಳುಗಿಹೋಗಿ ಪ್ರಜಾಪ್ರಭುತ್ವವನ್ನು ಕೈಬಿಟ್ಟಂತಿವೆ. ಹಾಗಾಗಿ, ಜನರೀಗ ಅಂತಿಮ ಆಶ್ರಯವೆಂದು ನ್ಯಾಯಾಂಗದತ್ತ ನೋಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಇದು ನ್ಯಾಯಾಂಗ ಸರ್ವಾಧಿಕಾರಕ್ಕೆ ಎಡೆ ಮಾಡಿಕೊಟ್ಟು, ಅಂತಿಮವಾಗಿ ಪ್ರಜಾಪ್ರಭುತ್ವದ ವಿಶ್ವಾಸಾರ್ಹತೆಯನ್ನೇ ನಾಶ ಮಾಡುವ ಅಪಾಯವನ್ನೊಳಗೊಂಡಿದೆ. ಆದರೆ, ಈ ಅಪಾಯ ಉಂಟಾಗದಂತೆ ಪ್ರಜಾಪ್ರಭುತ್ವದ ಕಾವಲು ನಾಯಿಗಳಂತಿರಬೇಕಾದ ನಮ್ಮ ಬುದ್ಧಿಜೀವಿಗಳು, ಸರ್ಕಾರದಿಂದ ದೊರೆಯುವ ಸವಲತ್ತುಗಳಿಗಾಗಿ ಕ್ಯೂ ನಿಂತು ತಮ್ಮ ಜವಾಬ್ದಾರಿಗಳನ್ನೇ ಮರೆತರೆ?

ನಮ್ಮ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ॥ ಸಿದ್ದಲಿಂಗಯ್ಯನವರನ್ನೇ ನೋಡಿ. ತಮ್ಮ ಇತ್ತೀಚಿನ ಪುಸ್ತಕವನ್ನು ತಮ್ಮ ಇತ್ತೀಚಿನ ನಾಯಕರಾದ ಮುಖ್ಯಮಂತ್ರಿ

ಎಚ್.ಡಿ. ಕುಮಾರಸ್ವಾಮಿಯವರಿಗೆ ಅರ್ಪಿಸಿರುವ ಈ ಮಾಜಿ ಕ್ರಾಂತಿ ಕವಿ, 'ಭೈರಪ್ಪನವರು ಶ್ರೇಷ್ಠ ಕಾದಂಬರಿಕಾರರು, ನಮ್ಮ ಮಾರ್ಗದರ್ಶಿಗಳು. ಅವರ ಇತ್ತೀಚಿನ ಕಾದಂಬರಿಯಲ್ಲಿ ನಮ್ಮ ಸಮಾಜಕ್ಕೆ ಪೂರಕವಲ್ಲದ ಕೆಲವು ವಿಷಯಗಳಿರುವುದು ಸರಿಯಲ್ಲವಷ್ಟೆ...' ಎಂಬ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿಕೃತ ಟಿಪ್ಪಣಿಗಳ ಪರಿಭಾಷೆಯಲ್ಲಿ ನಾಜೂಕಾದ ಮಾತುಗಳನ್ನಾಡುವ ಮೂಲಕ, ಸರ್ಕಸ್ ಕಂಪನಿಯಲ್ಲಿ ತಂತಿಯ ಮೇಲೆ ವಿಚಿತ್ರವಾಗಿ ತೂಗಾಡುತ್ತಾ ಜನರನ್ನು ನಗಿಸಿ ನಡೆಯುವ ವಿದೂಷಕನಂತೆ ತೋರುತ್ತಿದ್ದಾರೆ. ಇಂತಹವರು ಏನನ್ನು ತಾನೆ ರಕ್ಷಿಸಬಲ್ಲರು? ಪ್ರಜಾಪ್ರಭುತ್ವದ ಭಾಷೆಯಾಗಿ ಕನ್ನಡವನ್ನಿರಲಿ, ಅದರ ಪ್ರತಿಮೆಗಳಂತಿರಬೇಕಾದ ಬೀದಿ ಬದಿಯ ಕನ್ನಡ ಬೋರ್ಡುಗಳನ್ನು ಸಹ ರಕ್ಷಿಸಲಾರರು.

ಇಂತಹ ಪರಿಸ್ಥಿತಿ ಉಂಟಾಗಿರುವುದರಿಂದಲೇ, ಗಂಭೀರ ಸಾಮಾಜಿಕ– ಸಾಂಸ್ಕೃತಿಕ ಚರ್ಚೆಗೆ ಅನುವು ಮಾಡಿಕೊಡಬೇಕಾದ 'ಆನುದೇವ ಹೊರಗಣವನು...' ಪುಸ್ತಕ, ಚರ್ಚೆಗಳಿಗೆ ಬದಲಾಗಿ ನಿಷೇಧದ ಆತಂಕವನ್ನು ಎದುರಿಸಬೇಕಾಗಿ ಬಂದಿರುವುದು. ಕಾವಿ– ಖಾಕಿ ಉಡುಪಿನಲ್ಲಿರುವ ಜಾತಿವಾದಿ ಪುಂಡರು ಬೆಂಕಿ ಹಚ್ಚುವ, ರಕ್ತ ಹರಿಸುವ ಬೆದರಿಕೆಗಳನ್ನು ಹಾಕುತ್ತಾ, ಸರ್ಕಾರವನ್ನು ಮಣಿಸುವ ಹವಣಿಕೆಯಲ್ಲಿರುವುದು. ವಿಚಾರ ನಡೆಯಬೇಕಾದ ಕಡೆ ಗಲಭೆಕೋರರ ಗುಂಪು ನುಗ್ಗಿಸಿ ಸಂವಾದ ಸಂಸ್ಕೃತಿಯನ್ನು ನಾಶ ಮಾಡತೊಡಗಿರುವುದು. ಇಷ್ಟೆಲ್ಲ ಆಗುತ್ತಿದ್ದರೂ, ನಮ್ಮ ರಾಷ್ಟ್ರಕವಿಗಳು ಮಾತ್ರ ತಮ್ಮ ಈ ಇಳಿವಯಸ್ಸಿನಲ್ಲೂ ರಾಜ್ಯಾದ್ಯಂತ ಸಂಚಾರ ಮಾಡುತ್ತಾ; ಶಿಕ್ಷಣ, ಜಾತಿ ಮತ್ತು ಧರ್ಮಗಳ ಹೋಟೆಲ್ಲುಗಳನ್ನಿಟ್ಟುಕೊಂಡು ಭರ್ಜರಿ ಸಮಾಜಸೇವೆ ಮಾಡುತ್ತಿರುವ ಧರ್ಮಾತ್ಮರಿಂದ ಪೇಟ, ಕಿರೀಟ ಇತ್ಯಾದಿಗಳ ಸನ್ಮಾನ ಸ್ವೀಕರಿಸುವ ಸಂಭ್ರಮದಲ್ಲಿದ್ದಾರೆ. 'ಆವರಣ' ಮತ್ತು 'ಆನುದೇವ...' ಕೃತಿಗಳ ಸುತ್ತ ಸೃಷ್ಟಿಯಾಗಿರುವ ಸಾಂಸ್ಕೃತಿಕ ಬಿಕ್ಕಟ್ಟಿನ ಬಗ್ಗೆ ಇನ್ನೂ ಒಂದು ಮಾತನ್ನು ಆಡದಿರುವ ಜಿ.ಎಸ್. ಶಿವರುದ್ರಪ್ಪನವರು, 'ರಾಷ್ಟ್ರಕವಿ' ಎನ್ನುವುದು ಸರ್ಕಾರಿ ಮರ್ಯಾದೆಗಿಂತ ಹೆಚ್ಚಾಗಿ ಕರ್ನಾಟಕದ ಜನತೆಯ ಪರವಾಗಿ ನಿರ್ವಹಿಸಬೇಕಾದ ಒಂದು ಸಾರ್ವಜನಿಕ ಜವಾಬ್ದಾರಿ ಎನ್ನುವುದನ್ನೇ ಮರೆತಿರುವಂತೆ ಕಾಣುತ್ತದೆ.

ಜೂನ್ ೨೨, ೨೦೦೭

ರೈತರ ಆತ್ಮಹತ್ಯೆ : ತುಕ್ಕು ಹಿಡಿದ ಚರ್ಚೆ

ರೈತರ ಆತ್ಮಹತ್ಯೆ ತಡೆಯಲು ರಾಜ್ಯ ಸರ್ಕಾರ ಅಧ್ಯಯನ ಸಮಿತಿಯೊಂದನ್ನು ರಚಿಸಿದೆ. ಅದು, ಹೋದ ವಾರ ಮುಖ್ಯಮಂತ್ರಿಗಳು ಕರೆದಿದ್ದ ರೈತರೊಡನೆಯ ಸಂವಾದ ಕಾರ್ಯಕ್ರಮದಲ್ಲಿ ವ್ಯಕ್ತವಾದ ಸಲಹೆ– ಸೂಚನೆಗಳ ಆಧಾರದ ಮೇಲೆ ಪರಿಹಾರ ಸಾಧ್ಯತೆಗಳನ್ನು ಪರಿಶೀಲಿಸುವುದಂತೆ. ಆದರೆ, ಈ ಕಾರ್ಯಕ್ರಮದಲ್ಲಿ ವ್ಯಕ್ತವಾದ ಸಲಹೆ– ಸೂಚನೆಗಳು ಎಷ್ಟರ ಮಟ್ಟಿಗೆ ಹೊಸವು ಮತ್ತು ಈವರೆಗೆ ಪರಿಶೀಲನೆಗೆ ಒಳಗಾಗಿಲ್ಲದಂತಹವೇ ಎಂಬ ಪ್ರಶ್ನೆ ಇದ್ದೇ ಇದೆ. ಈ ದೃಷ್ಟಿಯಿಂದ ನೋಡಿದಾಗ ಮತ್ತು ಸಂವಾದ ಕಾರ್ಯಕ್ರಮದ ಕೊನೆಯಲ್ಲಿ ಮುಖ್ಯಮಂತ್ರಿಗಳು ಆಡಿದ ಮಾತುಗಳು ವಿದಾಯ ಭಾಷಣದ ಶೈಲಿಯಲ್ಲಿದ್ದುದನ್ನು ಗಮನಿಸಿದಾಗ, ಇಡೀ ಕಾರ್ಯಕ್ರಮ ಯಾವುದೋ ತತ್ಕಾಲೀನ ರಾಜಕೀಯ ಬಿಕ್ಕಟ್ಟಿನಿಂದ ಬಚಾವಾಗುವ ಪ್ರಯತ್ನವೆಂಬಂತೆಯೂ ಕೆಲವರಿಗೆ ಕಂಡಿದ್ದರೆ ಆಶ್ಚರ್ಯವಿಲ್ಲ.

ರಾಷ್ಟ್ರದಲ್ಲಿ ಈವರೆಗೆ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ ಆರೇಳು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಮುವ್ವತ್ತು ಸಾವಿರವನ್ನು ಮೀರಿದೆ. ಈ ಸರ್ಕಾರ ಬಂದ ಮೇಲೆ ಈ ಆತ್ಮಹತ್ಯೆ ಪ್ರವೃತ್ತಿ ಇನ್ನಷ್ಟು ತೀವ್ರಗೊಂಡಿರುವುದು ಇನ್ನೊಂದು ವಿಶೇಷ. ಅಲ್ಲದೆ, ಈವರೆಗೆ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಈ ಸಂಬಂಧ ಕೈಗೊಂಡ ಅಧ್ಯಯನಗಳು ಮಾಡಿದ ಶಿಫಾರ್ಸುಗಳ ಆಧಾರದ ಮೇಲೆ ಸಾಲ ಮನ್ನಾ, ಸುಲಭ ಬಡ್ಡಿ ದರದ ಸಾಲ ಸೌಲಭ್ಯ, ಬೀಜ ಪೂರೈಕೆ ಹಾಗೂ ಸಂಗ್ರಹ ಸಾಮರ್ಥ್ಯದ ಸುಧಾರಣೆ, ಕನಿಷ್ಠ ಮತ್ತು ಬೆಂಬಲ ಬೆಲೆ ಘೋಷಣೆ ಮುಂತಾದ ಪರಿಹಾರ ಕ್ರಮಗಳನ್ನು ಪ್ರಕಟಿಸುತ್ತಾ ಹೋದಂತೆ, ರೈತರ ಆತ್ಮಹತ್ಯೆ ಪ್ರಕರಣಗಳೂ ಹೆಚ್ಚುತ್ತಿರುವುದನ್ನೂ ಗಮನಿಸಬೇಕಿದೆ. ನಮ್ಮ ಮುಖ್ಯಮಂತ್ರಿಗಳ ಸಂವಾದ ಕಾರ್ಯಕ್ರಮ ನಡೆಯುತ್ತಿದ್ದ ಸಮಯದಲ್ಲೇ ಮತ್ತು ಅನಂತರವೂ ರಾಜ್ಯದ ಹಲವಾರು ಕಡೆಯಿಂದ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. ಇವೆಲ್ಲ ಏನನ್ನು ಸೂಚಿಸುತ್ತವೆ?

ರೈತರ ಸಮಸ್ಯೆ ಸಾಲ, ಬೀಜ ಪೂರೈಕೆ, ಬೆಳೆ ಬೆಲೆ ಮುಂತಾದ ಕಸುಬು ಸಂಬಂಧಿ ಸಮಸ್ಯೆಯಾಗಿ ಮಾತ್ರ ಉಳಿದಿಲ್ಲ. ಸಂವಾದದಲ್ಲಿ ಪಾಲ್ಗೊಂಡಿದ್ದ ರೈತ ಮುಖಂಡರೊಬ್ಬರು ಸೂಕ್ಷ್ಮವಾಗಿ ಹೇಳಿದಂತೆ, ರೈತರ ಆತ್ಮಬಲ ಕುಸಿದು ಹೋಗಿರುವುದೇ ಆತ್ಮಹತ್ಯೆಗೆ ಮೂಲ ಕಾರಣವಾಗಿದೆ. ಆದರೆ, ಈ ಸೂಚನೆ ನೀಡಿದ ಮುಖಂಡರು ಅದನ್ನು ವಿಸ್ತರಿಸಿ ವಿಶ್ಲೇಷಿಸಲು ಹೋಗಲಿಲ್ಲ. ನಮ್ಮ ರೈತ ಚಳುವಳಿಯಿಂದ ನಮ್ಮ ರೈತ ಮುಖಂಡರಿಗೆ ಬಳುವಳಿಯಾಗಿ ಬಂದ ದೌರ್ಬಲ್ಯವಿದು. ರೈತ ಚಳುವಳಿಯನ್ನು ಸ್ಥೂಲವಾಗಿ ಬೆಳೆ ಬೆಲೆ ಕೇಂದ್ರಿತವಾದ ಕಾರ್ಯಕ್ರಮವಾಗಿ ರೂಪಿಸಿದ ಅದರ ನಾಯಕರು, ರೈತನ ಸಮಸ್ಯೆ ಹೇಗೆ ಒಟ್ಟಾರೆ ವ್ಯವಸ್ಥೆಯ ಸಮಸ್ಯೆಯೇ ಆಗಿದೆ ಎಂಬುದನ್ನರಿತು ವಿವರಿಸಿ ಚಳುವಳಿಯನ್ನು ಕಟ್ಟುವ ವ್ಯವಧಾನವಿಲ್ಲದೆ, ಅದನ್ನು ಸರ್ಕಾರ ವಿರೋಧಿ ಕಾರ್ಯಕ್ರಮವನ್ನಾಗಿ ಬೆಳಸುವ ವೀರಾವೇಶದಲ್ಲೇ ತಮ್ಮೆಲ್ಲ ಶಕ್ತಿಯನ್ನು ವ್ಯಯಿಸಿಕೊಂಡರು. ಈ ಚಳುವಳಿ ಶಿಖರ ಸ್ಥಿತಿಯಲ್ಲಿದ್ದಾಗ, ಚಳುವಳಿಯ ಮುಖ್ಯ ನಾಯಕರೊಬ್ಬರು, ರೈತರೇಕೆ ಐ.ಎ.ಎಸ್. ಅಧಿಕಾರಿಗಳ ಜೀವನ ಶೈಲಿಗಾಗಿ ಆಸೆಪಡಬಾರದೆಂದು ಕೇಳಿ ನನ್ನನ್ನು ದಂಗುಬಡಿಸಿದ್ದರು! ತಮ್ಮ ದುಃಸ್ಥಿತಿಗೆ ಕಾರಣವಾದ ವ್ಯವಸ್ಥೆಯ ಬಗೆಗೇ ಸಿಟ್ಟಿಲ್ಲದ ಇವರು, ರೈತರ ಸಮಸ್ಯೆ ಬಗೆಗೆ ಮಾತ್ರ ಸಿಟ್ಟಾಗತೊಡಗಿದ್ದುದು ರೈತ ಚಳುವಳಿಯ ಮೂಲ ದೌರ್ಬಲ್ಯವಾಗಿತ್ತು.

ಹಾಗಾಗಿಯೇ ಇಂದು ಕೂಡಾ ರೈತ ಮುಖಂಡರೆನಿಸಿಕೊಂಡವರು, ಈ ಆತ್ಮಹತ್ಯೆಗಳು ಏಕೆ ಕಳೆದ ಹತ್ತುವರ್ಷಗಳಿಂದೀಚೆಗೆ, ಅದೂ ನೀರಾವರಿ ಇರುವ ಪ್ರದೇಶಗಳಲ್ಲೇ ಹೆಚ್ಚು ಸಂಭವಿಸುತ್ತಿವೆ ಎಂಬ ಬಗ್ಗೆ ಆಲೋಚನೆಯನ್ನೇ ಮಾಡಿದಂತಿಲ್ಲ. ಅಂದಾಕ್ಷಣ ಹತ್ತು ವರ್ಷಗಳ ಹಿಂದೆ ಹಾಗೂ ನೀರಾವರಿ ಇಲ್ಲದ ಪ್ರದೇಶಗಳ ರೈತರು ಸುಖದಿಂದಿದ್ದರು ಅಥವಾ ಇದ್ದಾರೆ ಎಂದು ಇದರರ್ಥವಲ್ಲ. ಆದರೆ ಈ ಹಿಂದೆ ಕ್ಷಾಮ- ಢಾಮರಗಳ ಭಯಂಕರ ಬವಣೆಗಳನ್ನು ಎದುರಿಸಿದ ನಮ್ಮ ರೈತರು, ಆತ್ಮಹತ್ಯೆ ಅನಿವಾರ್ಯವಾಗುವಂತಹ ಮಹಾ ಸಂಕಟಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಾತ್ರ ಮತ್ತು ಹೆಚ್ಚಾಗಿ ನೀರಾವರಿ ಬೆಳೆ ಪ್ರದೇಶದಲ್ಲೇ ಏಕೆ ತುತ್ತಾಗುತ್ತಿದ್ದಾರೆ ಎಂಬುದು ಚಿಂತನಾರ್ಹವಾಗಿದೆ ಎಂದಷ್ಟೇ ಹೇಳುತ್ತಿರುವೆ. ಹಸಿರು ಕ್ರಾಂತಿ ಪರಿಚಯಿಸಿದ ಕೃಷಿ ವ್ಯವಸ್ಥೆ ತನ್ನ ಶಿಖರ ಸ್ಥಿತಿ ಮುಟ್ಟಿ ಸ್ಥಗಿತಗೊಂಡಿರುವುದೇ ಇದಕ್ಕೆ ಮುಖ್ಯ ಕಾರಣವೆನಿಸುತ್ತದೆ. ಅದು ಸೃಷ್ಟಿಸಿದ ಆಧುನಿಕ ನೀರಾವರಿ ಮೂಲ ಸೌಲಭ್ಯಗಳು, ಕೃಷಿ ಪದ್ಧತಿಗಳು, ಹಣಕಾಸು ವ್ಯವಸ್ಥೆ ಹಾಗೂ ಅವುಗಳನ್ನಾಧರಿಸಿದ ರೈತರ ಜೀವನ ದರ್ಶನ ಮತ್ತು ಶೈಲಿ ಇಂದು ಸಂಪೂರ್ಣ ಬಿಕ್ಕಟ್ಟಿನಲ್ಲಿವೆ. ನೀರಿನ ಮೂಲಗಳು ಬತ್ತಿಹೋಗಿ, ಬೃಹತ್ ಜಲಾಶಯಗಳಲ್ಲಿ ಹೂಳು ತುಂಬಿ, ಕಾಲುವೆಗಳು ಶಿಥಿಲಗೊಂಡು, ಭೂಮಿ ವಿಷಯುಕ್ತವಾಗಿ ಬಂಜರುಗೊಂಡು, ಬೆಳೆ ಮತ್ತು ಬೆಲೆಗಳೆರಡೂ ಏರುಪೇರಾಗಿ, ಬಂಡವಾಳ ಹೂಡಿಕೆಯ ಚಕ್ರ ಸ್ಥಗಿತಗೊಂಡ ಪರಿಣಾಮವಾಗಿ ಸಾಲ ಮೈಮೇಲೆ ಬಿದ್ದು; ಹೊಸ ಆರ್ಥಿಕ ನೀತಿಗಳಿಂದಾಗಿ ಬದಲಾದ ಸಾರ್ವಜನಿಕ ಬದುಕಿನ ದರ್ಶನ ಹಾಗೂ ಶೈಲಿಗಳ ಮಧ್ಯೆ ಹೊರದಾರಿಗಳೇ ಇಲ್ಲದೆ ಅವನಿಗೆ ಉಸಿರುಗಟ್ಟಿದಂತಾಗಿದೆ. ಇದನ್ನರಿತೇ ವಿದರ್ಭದಲ್ಲಿ ಪ್ರಯೋಗಾತ್ಮಕವಾಗಿ

ಆರಂಭಿಸಿದ ಮಾನಸಿಕ ಪುನರುಜ್ಜೀವನ ಚಿಕಿತ್ಸಾ ಕಾರ್ಯಕ್ರಮಗಳು ಅಷ್ಟಾಗಿ ಫಲ ನೀಡದೆ, ಆತ್ಮಹತ್ಯೆಗಳು ಮುಂದುವರೆದಿವೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಮುಖ್ಯಮಂತ್ರಿಯೋ, ರೈತ ಮುಖಂಡರೋ ಕೈ ಮುಗಿದು 'ದಯವಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬೇಡಿ' ಎಂದು ಬೇಡಿಕೊಂಡರೆ ಆತ್ಮಹತ್ಯೆ ನಿಂತಾವೆಯೇ?

ಅಲ್ಲದೆ, ಕೃಷಿ ಸಮಾಜವನ್ನು ಇದ್ದಕ್ಕಿದ್ದಂತೆ ಕೈಗಾರಿಕಾ ಸಮಾಜವನ್ನಾಗಿ ಪರಿವರ್ತಿಸುವ ವಿಶೇಷ ಆರ್ಥಿಕ ವಲಯ, ರೈತರ ಭಾಗವಹಿಸುವಿಕೆಯೇ ಇಲ್ಲದ ಜೈವಿಕ ಕೃಷಿ ತಂತ್ರಜ್ಞಾನ ಚಟುವಟಿಕೆಗಳ ವಿಸ್ತರಣೆ, ಬೃಹತ್ ಬೆಂಗಳೂರಿನಂತಹ ರೈತ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಹ ಅತಿ ನಗರೀಕರಣದ ಯೋಜನೆಗಳನ್ನು ಹೊಸ ಬದುಕಿನ ನಾಂದಿ ಕಾರ್ಯಕ್ರಮಗಳಂತೆ ಯುದ್ಧೋಪಾದಿಯಲ್ಲಿ ಆರಂಭಿಸಿ, ಆ ಹೊಸ ಬದುಕಿನಲ್ಲಿ ಅವನ ಸ್ಥಾನವೇನು ಎಂಬುದು ಗೊತ್ತಾಗದ ರೀತಿಯಲ್ಲಿ ಅವನ್ನು ಜಾರಿಗೊಳಿಸುತ್ತಿರುವ ಸಂದರ್ಭದ ಒತ್ತಡವೂ ಆತನಲ್ಲಿ ತನ್ನ ಅಸ್ತಿತ್ವದ ಆಧ್ಯಾತ್ಮಿಕತೆಯನ್ನು ಸ್ಪರ್ಶಿಸಿದ್ದರೆ ಆಶ್ಚರ್ಯವಿಲ್ಲ. ರೈತನನ್ನು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯನ್ನಾಗಿ ಮಾತ್ರ ನೋಡುವ ಆಧುನಿಕ ಮನಸ್ಸಿಗೆ ಈ ಸಂಕಟದ ಸಂಕೀರ್ಣತೆ ಅರ್ಥವಾಗದು. ಹಾಗೇ, ಚಳುವಳಿಯ ಯಶಸ್ಸಿನ ಮೇಲೆ ಮಾತ್ರ ಕಣ್ಣಿಟ್ಟು ರೈತನ ಬದುಕನ್ನು ಆರ್ಥಿಕ ಪ್ರಶ್ನೆಯ ನೆಲೆಗೇ ಇಳಿಸಿ ನೋಡುವಂತಹ ಚಳುವಳಿಕೋರ ರೈತ ನಾಯಕರ ಸಮೀಪ ದೃಷ್ಟಿಗೂ ಇದು ಸಿಗದು. ಲೆಕ್ಕ ಇಟ್ಟವನು ರೈತನಾಗಲಾರ ಎಂಬ ರೈತ ನಾಯಕ ಕಡಿದಾಳು ಶಾಮಣ್ಣ ಅವರ ಮಾತು ಇಂದಿನ ಸಂದರ್ಭದಲ್ಲಿ ಸ್ವಲ್ಪ ಉತ್ಪ್ರೇಕ್ಷೆಯ ಮಾತೆನ್ನಿಸಿದರೂ, ರೈತ ಬರಿ ಬೆಳೆ ಉತ್ಪಾದಕನಲ್ಲ; ಅವನೊಂದು ಜೀವನ ಕ್ರಮದ ಪ್ರತೀಕ ಎಂಬರ್ಥದಲ್ಲಿ ಅವರ ಮಾತನ್ನು ಅರ್ಥ ಮಾಡಿಕೊಂಡರೆ, ರೈತರ ಆತ್ಮಹತ್ಯೆ ಕುರಿತ ನಮ್ಮ ನೋಟಕ್ರಮ ಮೂಲಭೂತವಾಗಿ ಬದಲಾಗಬಲ್ಲದು. ರೈತರ ಆತ್ಮಹತ್ಯೆ ವಿದ್ಯಮಾನವನ್ನು ಒಟ್ಟಾರೆ, ಜಾಗತೀಕರಣದ ಒತ್ತಡಗಳು ನಿರ್ಮಿಸುತ್ತಿರುವ ಒಂದು ದೊಡ್ಡ ಸಾಮಾಜಿಕ- ಸಾಂಸ್ಕೃತಿಕ ಬಿಕ್ಕಟ್ಟನ್ನಾಗಿ ಪರಿಗ್ರಹಿಸಿದಾಗ ಮಾತ್ರ ಅದರ ಪರಿಹಾರಗಳೂ ಹೊಳೆದಾವು ಎನ್ನಿಸುತ್ತದೆ. ಹೀಗಾಗಿ ಇಂದಿನ ಮುಖ್ಯ ಪ್ರಶ್ನೆ, ಇಂದು ನಾವು ಕಾಣುತ್ತಿರುವ ದುಡಿಮೆ, ಈ ದುಡಿಮೆಯ ಗುರಿ, ದುಡಿಮೆಯ ಆನಂದ ಹಾಗೂ ಅವುಗಳಿಂದ ಹೊಮ್ಮುವ ಬದುಕಿನ ಸಾರ್ಥಕತೆಯ ಅರ್ಥ ಪಲ್ಲಟಗಳನ್ನು ನಾವು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳಬಹುದು ಎಂಬುದೇ ಆಗಿದ್ದು, ಅದಕ್ಕೆ ಸಿಗುವ ಉತ್ತರವನ್ನು ಆಧರಿಸಿಯೇ ಈ ಪರಿಹಾರಗಳ ಸ್ವರೂಪವನ್ನು ನಿರ್ಧರಿಸಬೇಕಾಗುತ್ತದೆ. ರೋಗ ಚಿಹ್ನೆಯನ್ನೇ ರೋಗವೆಂದು ಬಗೆವ ತಪ್ಪಾಗಬಾರದು.

ಸಾಲಮನ್ನಾ, ಸಾಲ ಸೌಲಭ್ಯ, ಬೀಜ ಸೌಲಭ್ಯ, ಸಕಾಲದಲ್ಲಿ ವಿದ್ಯುತ್ ಸರಬರಾಜು, ನ್ಯಾಯೋಚಿತ ಬೆಂಬಲ ಬೆಲೆ ಇತ್ಯಾದಿ ಪರಿಹಾರ ಕ್ರಮಗಳು ರೈತರನ್ನು ಮುಟ್ಟುವ ವೇಳೆಗೆ; ಅಧಿಕಾರಶಾಹಿಯ ಆಲಸ್ಯ, ತಾಂತ್ರಿಕ ಕೊಕ್ಕೆಗಳು ಮತ್ತು ಭ್ರಷ್ಟತೆಯಿಂದಾಗಿ ಅವು ತಮ್ಮ ಗುರಿ ಕಳೆದುಕೊಂಡು, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಗಳು ರೈತ ಪ್ರತಿನಿಧಿಗಳ

ಮಾತುಗಳ ಮೂಲಕ ಮಾತ್ರವಲ್ಲ, ಸ್ವತಃ ಮುಖ್ಯಮಂತ್ರಿಗಳ ಮಾತುಗಳ ಮೂಲಕವೇ ಅಂದಿನ ಸಂವಾದ ಸಭೆಯ ಸಂದರ್ಭದಲ್ಲಿ ದುರಂತಮಯವಾಗಿ ಮೂಡಿಬಂತು. ಮುಖ್ಯಮಂತ್ರಿಯೊಬ್ಬರು, ತಮ್ಮ ಸದುದ್ದೇಶದ ಯೋಜನೆಗಳೆಲ್ಲವೂ ಅಧಿಕಾರಶಾಹಿಯ ಮಧ್ಯಪ್ರವೇಶದಿಂದಾಗಿ ಹಾಳಾಗುವ ಸಾಧ್ಯತೆಗಳನ್ನು ಬಹಿರಂಗವಾಗಿ ಹೇಳಿಕೊಳ್ಳುವ ಸ್ಥಿತಿ ಉಂಟಾಗಿದೆಯೆಂದರೆ, ಈ ಮೇಲೆ ಪ್ರಸ್ತಾಪಿಸಿದ್ಧ ಸಾಮಾಜಿಕ– ಸಾಂಸ್ಕೃತಿಕ ಬಿಕ್ಕಟ್ಟು ನಮ್ಮ ರಾಜಕಾರಣವನ್ನು ಎಷ್ಟು ದಿಕ್ಕೆಡಿಸಿದೆ ಎಂಬುದು ಗೊತ್ತಾಗುತ್ತದೆ. ಶಾಸಕಾಂಗ ತನ್ನ ಪರಮ ಭ್ರಷ್ಟತೆ, ಅದಕ್ಷತೆ ಹಾಗೂ ಕರ್ತವ್ಯ ವಿಮುಖತೆಗಳ ಮೂಲಕ ವಿಶ್ವಾಸಾರ್ಹತೆ ಕಳೆದುಕೊಂಡು, ಈ ವಿಷಯಗಳಲ್ಲಿ ಕಾರ್ಯಾಂಗದೊಂದಿಗೆ ಶಾಮೀಲಾಗಿರುವುದೇ, ಕಾರ್ಯಾಂಗವು ಶಾಸಕಾಂಗವನ್ನು – ಮುಖ್ಯಮಂತ್ರಿಗಳು ಹೀಗೆ ಬಹಿರಂಗವಾಗಿ ಅಲವತ್ತುಕೊಳ್ಳುವ ಮಟ್ಟದಲ್ಲಿ– ಯಾಮಾರಿಸುತ್ತಿರುವುದಕ್ಕೆ ಕಾರಣವಾಗಿದೆ. ಅಧಿಕಾರಿಗಳಿಗೆ ಕಟ್ಟುನಿಟ್ಟಾದ ನಿರ್ದೇಶನ ನೀಡಲು ಅಗತ್ಯವಾದಂತಹ ಒಂದು ರಾಜಕೀಯ ತಾತ್ವಿಕತೆಯ ಬೆನ್ನೆಲುಬಾಗಲೀ, ದೀರ್ಘ ರಾಜಕೀಯ ಅನುಭವ ತಂದುಕೊಡುವ ಆಡಳಿತಾತ್ಮಕ ತಿಳುವಳಿಕೆಯಾಗಲೀ, ಕೈ– ಬಾಯಿ ಶುದ್ಧವಾಗಿಟ್ಟುಕೊಂಡ ನೈತಿಕ ಸ್ಥೈರ್ಯವಾಗಲೀ ಸದ್ಯದ ರಾಜಕೀಯ ನಾಯಕತ್ವಕ್ಕೆ ಇಲ್ಲದೇ ಹೋಗಿರುವುದೇ ಶಾಸಕಾಂಗದ ಈ ವೈಫಲ್ಯಕ್ಕೆ ಕಾರಣವಾಗಿದೆ.

ಜಾಗತೀಕರಣ ಒತ್ತಾಯಿಸುವ ಅಭಿವೃದ್ಧಿ ಮಾದರಿ ಹಾಗೂ ಆದ್ಯತೆಗಳು ಸಮಾಜದ ಆಯಕಟ್ಟಿನ ಸ್ಥಾನಗಳಲ್ಲಿರುವ ಜನರ ಪಾಲಿಗೆ, ದುಡಿಮೆ ಇಲ್ಲದೆಯೇ ಸುಲಭ ಹಾಗೂ ಲೆಕ್ಕಕ್ಕೆ ಸಿಗದ ಅಪಾರ ಹಣ ಗಳಿಸುವ ಭ್ರಷ್ಟಾಚಾರದ ದಿಡ್ಡಿ ಬಾಗಿಲುಗಳನ್ನು ತೆರೆದಿಟ್ಟಿರುವ ಈ ಸಂದರ್ಭದಲ್ಲಿ, ಕೋಟ್ಯಾಂತರ ರೂಪಾಯಿಗಳ ವೆಚ್ಚದ ರೆಸಾರ್ಟ್ ರಾಜಕಾರಣದ ಮೂಲಕ ನಾಯಕತ್ವ ವಹಿಸಿಕೊಂಡು ಮತ್ತು ಅದರ ಬಲದ ಮೇಲೇ ನಾಯಕರಾಗಿ ಮುಂದುವರಿಯಬೇಕಾಗಿರುವುದರಿಂದಾಗಿ ಬಂದೊದಗಿರುವ ಅಸಹಾಯಕತೆ– ಅವಮಾನವಿದು! ಇದು ರಾಜ್ಯದ ಜನತೆ ಅನುಭವಿಸಬೇಕಾಗಿರುವ ಅಸಹಾಯಕತೆ– ಅವಮಾನವೂ ಆಗಿದೆ. ಇಂತಹ ಇಕ್ಕಟ್ಟಿನಲ್ಲಿರುವ ನಾಯಕತ್ವದಿಂದ, ರೈತರ ಆತ್ಮಹತ್ಯೆಗೆ ಕಾರಣವಾಗಿರುವ ವ್ಯವಸ್ಥೆಯ ಬದಲಾವಣೆಯನ್ನು ನಿರೀಕ್ಷಿಸುವುದು ಕಷ್ಟವೇ ಸರಿ. ಏಕೆಂದರೆ, ತಾವೂ ಭಾಗಿಯಾಗಿರುವ ಸಮಕಾಲೀನ ರಾಜಕಾರಣದ ಚಾರಿತ್ರ್ಯಹೀನತೆಯೇ ಈ ಎಲ್ಲ ದುರಂತಗಳಿಗೆ ಕಾರಣ ಎಂಬ ಮೂಲಭೂತ ಅರಿವೇ ಇಲ್ಲದವರು ಎಷ್ಟೇ ಜನಪರತೆಯ ಕಣ್ಣೀರು ಹರಿಸಿದರೂ ರೈತರ ಆತ್ಮಹತ್ಯೆ ಪ್ರತಿನಿಧಿಸುವ ಜನತೆಯ ಕಣ್ಣೀರು ನಿಲ್ಲಲಾರದು.

ಆದರೂ ಅಂದಿನ ಸಭೆಯಲ್ಲಿ ತಮ್ಮ ಗ್ರಾಮ ವಾಸ್ತವ್ಯ ಹಾಗೂ ಇತರೆ ಜನಪ್ರಿಯ ಕಾರ್ಯಕ್ರಮಗಳ ಸದುದ್ದೇಶಗಳ ಬಗ್ಗೆ ಏಕೋ ಏನೋ ದುರಂತ ನಾಯಕನಂತೆ, ಅತಿ ವಿಷಾದಿಂದಲೂ ಅತಿವಿನಯದಲ್ಲೂ ಮಾತನಾಡಲು ಯತ್ನಿಸಿದ ಮುಖ್ಯಮಂತ್ರಿಗಳು ಆ ವಿಷಾದ– ವಿನಯಗಳಲ್ಲಿ ಎಷ್ಟು ಮೈಮರೆತರೆಂದರೆ, ತಮ್ಮ ಸತ್ಯವಂತಿಕೆಗೆ ತಾವೇ ಅರ್ಹತಾ ಪತ್ರ ಕೊಟ್ಟುಕೊಳ್ಳುತ್ತಾ; ಬೆಂಗಳೂರಲ್ಲಿ ವಶಪಡಿಸಿಕೊಳ್ಳಲಾಗಿರುವ ಅತಿಕ್ರಮಿತ ಭೂಮಿಯನ್ನು

ತಮ್ಮ ನಂತರ ಬರುವ ಮುಖ್ಯಮಂತ್ರಿಯು ತಮ್ಮಂತಿರದೆ, ಆ ಭೂಮಿಯನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ತಮ್ಮ ಅಧಿಕಾರಾವಧಿಯಲ್ಲೇ ಅದರ 'ಸದುಪಯೋಗ' ಮಾಡುವ ಪ್ರಸ್ತಾವ ಮುಂದಿಟ್ಟರು! ಆಶ್ಚರ್ಯವೆಂದರೆ ಅಂದು ಆ ಸಭೆಯಲ್ಲಿ ವಿರೋಧ ಪಕ್ಷದ ಹಲವು ಮುಖಂಡರು ಕಂಡರಾದರೂ, ರೈತ ನಾಯಕರೆಂದೇ ಸಾರ್ವಜನಿಕವಾಗಿ ಪ್ರತಿಬಿಂಬಿಸಲ್ಪಟ್ಟು ತಮ್ಮ ರಾಜಕೀಯ ಜೀವನವನ್ನು ಕಟ್ಟಿಕೊಂಡ ರಾಜ್ಯದ ಉಪಮುಖ್ಯಮಂತ್ರಿಯೂ ಮತ್ತು ರೈತರ ಆತ್ಮಹತ್ಯೆ ತಡೆಯುವ ಸರ್ಕಾರದ ಉದ್ದೇಶಿತ ಕಾರ್ಯಕ್ರಮಗಳಿಗೆ ಹಣಕಾಸಿನ ನೆರವು ಒದಗಿಸಬೇಕಾದ ಅರ್ಥಮಂತ್ರಿಯೂ ಆದ ಯಡಿಯೂರಪ್ಪನವರೂ ಸೇರಿದಂತೆ, ಮಿತ್ರ ಪಕ್ಷವಾದ ಬಿ.ಜೆ.ಪಿ.ಯ ಯಾವ ನಾಯಕರೂ ಅಲ್ಲಿ ಹಾಜರಿದ್ದಂತಿರಲಿಲ್ಲ. ಅವರದೇ ಏನೋ ಪ್ರತ್ಯೇಕ ಸಭೆ ನಡೆದಿತ್ತು ಇನ್ನೊಂದು ಕಡೆ!

ಜೂನ್ ೨೯, ೨೦೦೭

ಇನ್ನೆಲ್ಲಿ ಆ ತಾಪ... ಆ ಬೆಳಕು !

ಕರ್ನಾಟಕದ ಪ್ರತಿಭಟನೆಯ ಧ್ವನಿ ಉಡುಗಿ ಹೋಗಿದೆ. ಪ್ರೊ॥ ಕೆ ರಾಮದಾಸ್ ಇನ್ನಿಲ್ಲ. ಕಳೆದ ೪೦ ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಎಲ್ಲ ರೀತಿಯ 'ಪ್ರಭುತ್ವ'ಗಳ ವಿರುದ್ಧ ಸಮರ ಸಾರಿದ್ದ ರಾಮದಾಸ್, ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳನ್ನು ರೂಪಿಸಬೇಕಿದ್ದ ಸಂಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಜಾಗತೀಕರಣದ ಒತ್ತಡಗಳಿಗೆ ಸಿಕ್ಕಿ ಉಸಿರು ಕಳೆದುಕೊಳ್ಳುತ್ತಿದ್ದಂತೆ, ಒಂಟಿದನಿಯಾಗಿಯೇ ತಮ್ಮ ಸಮರವನ್ನು ಮುಂದುವರೆಸಿದ್ದರು. ಆ ಸಮರವೂ ಈಗ ನಿಲುಗಡೆಗೆ ಬಂದಂತಾಗಿದೆ. ಸ್ವತಃ ತಮ್ಮ ಆರೋಗ್ಯದ ಬಗ್ಗೆ ಮೊದಲಿಂದಲೂ ಅಷ್ಟೇನೂ ಕಾಳಜಿಯನ್ನಿಟ್ಟುಕೊಳ್ಳದೆ, ಪೂರ್ತಾ ಅಶಾಂತಿಯ ಮತ್ತು ತಳಮಳದ ಬದುಕು ನಡೆಸಿದ ರಾಮದಾಸ್ ತಮ್ಮ ಆಪ್ತ ಗೆಳೆಯ ಲಂಕೇಶರ ನಿಧನಾನಂತರ ಸಾರ್ವಜನಿಕ ಬದುಕಿನಿಂದ ಅರ್ಧ ನಿವೃತ್ತರಾಗಿದ್ದರು. ನಂತರದ ದಿನಗಳಲ್ಲಿ, ಪತ್ನಿ ನಿರ್ಮಲಾ ಅವರ ದೀರ್ಘಕಾಲಿಕ ಅನಾರೋಗ್ಯ ಹಾಗೂ ಇತ್ತೀಚಿನ ತೇಜಸ್ವಿ ನಿಧನದಿಂದ ಜರ್ಝರಿತರಾಗಿದ್ದರು

ರಾಮದಾಸರನ್ನು ನಾನು ಮೊದಲು ನೋಡಿದ್ದು, ೧೯೭೭ರ ಚುನಾವಣೆಗಳ ನಂತರ ಜನತಾ ಸರ್ಕಾರ ಅಧಿಕಾರ ಸ್ವೀಕರಿಸಿ, ರಾಷ್ಟ್ರ ಸರ್ವಾಧಿಕಾರದ ಆತಂಕದಿಂದ ಬಿಡುಗಡೆಗೊಂಡು ನಿಟ್ಟುಸಿರು ಬಿಡುತ್ತಿದ್ದ ಹೊತ್ತಿನಲ್ಲಿ. ಬೆಂಗಳೂರಿನ ಗಾಂಧಿ ಭವನದಲ್ಲಿ ಸೇರಿದ್ದ ಕರ್ನಾಟಕದ ಪಕ್ಷಾತೀತ ಸಮಾಜವಾದಿಗಳ ಸಭೆಯಲ್ಲಿ ಪ್ರೊ॥ ನಂಜುಂಡ ಸ್ವಾಮಿಯವರ ವಿರುದ್ಧ ತಮ್ಮ ಕಂಚಿನ ಕಂಠದಲ್ಲಿ ವಾಕ್ಸಮರದಲ್ಲಿ ತೊಡಗಿದ್ದ ಅವರು, ಅಂದು ಒಬ್ಬ ಪರಿಣತ ಚರ್ಚಾಪಟುವಿನಂತಷ್ಟೇ ನನಗೆ ಗೋಚರಿಸಿದ್ದರು. ಅಲ್ಲೇ ನನಗೆ ಆಗ ಹಿರಿಯ ಸಮಾಜವಾದಿಗಳೆನಿಸಿದ್ದ ರಾಚಪ್ಪ ಬೆಟ್ಟೂರ್, ರಾಚಪ್ಪ ಹಡಪದ್, ಕಡಿದಾಳು ಶಾಮಣ್ಣ, ಕೆ.ಎಂ. ಶಂಕರಪ್ಪರಿಂದ ಹಿಡಿದು ಆಗ ತಾನೇ ಸಮಾಜವಾದಿ ಚಳುವಳಿಗೆ ಕಣ್ಣು ಬಿಡುತ್ತಿದ್ದ ರವಿವರ್ಮ ಕುಮಾರ್, ಮಂಜುನಾಥ ದತ್ತ, ವೆಂಕಟೇಶ ಮೂರ್ತಿ, ರಾಜೇಗೌಡ ಮುಂತಾದವರ ಪರಿಚಯವಾದದ್ದು. ಆಗ ಉದ್ಯೋಗ ನಿಮಿತ್ತ ದೆಹಲಿಯಲ್ಲಿ ವಾಸವಿದ್ದ ಕಾರಣದಿಂದಾಗಿ ಉತ್ತರ ಭಾರತದ ಮಣ್ಣಿನ ವಾಸನೆಯ ದಟ್ಟ ದರಿದ್ರಾವಸ್ಥೆಯ ಸಮಾಜವಾದಿಗಳನ್ನಷ್ಟೇ ಕಂಡಿದ್ದ ನನಗೆ, ಕರ್ನಾಟಕದ ಈ ಮಧ್ಯಮ ವರ್ಗದ ನಾಜೂಕಿನ

ಸಮಾಜವಾದಿಗಳನ್ನು ಕಂಡು ಸ್ವಲ್ಪ ಆಶ್ಚರ್ಯವೂ, ಸ್ವಲ್ಪ ಕುತೂಹಲವೂ ಉಂಟಾಯಿತು. ಮುಂದೆ ನನಗೆ ರಾಮದಾಸ್ ಈ ಮಧ್ಯಮ ವರ್ಗದ ಸಮಾಜವಾದಿಗಳ ವಿಶಿಷ್ಟ ಮಾದರಿಯಂತೆಯೇ ಕಾಣಲಾರಂಭಿಸಿದ್ದರೆ, ಅವರ ಈ ಮೊದಲ ದರ್ಶನ ಸಂದರ್ಭವೇ ಕಾರಣವಾಗಿರಬಹುದು.

ರಾಮದಾಸ್ ಅವರನ್ನು ನಾನು ಮೊದಲ ಬಾರಿಗೆ ಹತ್ತಿರದಿಂದ ಕಂಡದ್ದು, ೧೯೭೦ರಲ್ಲಿ ಹಾಸನದಲ್ಲಿ ಏರ್ಪಡಿಸಲಾಗಿದ್ದ 'ತರುಣ ಲೋಹಿಯಾವಾದಿಗಳ ಸಮ್ಮೇಳನ'ದಲ್ಲಿ. ಕಿಷನ್ ಪಟ್ನಾಯಕ್, ಪ್ರೊ॥ ನಂಜುಂಡಸ್ವಾಮಿ, ತೇಜಸ್ವಿಯವರು ಹಾಜರಿದ್ದ ಆ ಸಮ್ಮೇಳನದಲ್ಲಿ ಸಮಾಜವಾದಿ ತತ್ವವನ್ನು ಸಾರಸಂಗ್ರಹವಾಗಿ ಹೀರಿಕೊಂಡಂತೆ, ಕಟು ಬದ್ಧತೆಯಿಂದ ನಿಷ್ಠುರವಾಗಿ ಮಾತನಾಡಿ ನನ್ನ ಗಮನ ಸೆಳೆದವರೆಂದರೆ ಈ ಕೆ. ರಾಮದಾಸರೇ. ಅಲ್ಲದೆ, ಸಮಾಜವಾದಿ ಯುವಜನ ಸಭಾವನ್ನು ಪುನರುಜ್ಜೀವನಗೊಳಿಸಲು ಅಲ್ಲಿ ಸೇರಿದ್ದ ಪ್ರತಿಯೊಬ್ಬರೂ ಪ್ರತಿ ತಿಂಗಳು ತಮ್ಮ ಮಾಸಿಕ ಆದಾಯದ ಶೇ. ೫ರಷ್ಟನ್ನು ಅದರ ಹೊಸ ಸಂಚಾಲಕರಿಗೆ ಕಳಿಸಿಕೊಡಬೇಕೆಂಬ ತೀರ್ಮಾನಕ್ಕೆ ಬದ್ಧರಾದವರು ರಾಮದಾಸ್ ಮತ್ತು ನಾನು ಮಾತ್ರ ಆಗಿದ್ದೆವು! ಅಂದಿನಿಂದ ಆರಂಭವಾದ ನಮ್ಮ ಪರಸ್ಪರ ಗೌರವದ ಗೆಳೆತನ ಹಲವು ಬಾರಿ ವೈಯುಕ್ತಿಕ ಭಿನ್ನಾಭಿಪ್ರಾಯಗಳಿಂದುಂಟಾದ ಘರ್ಷಣೆಗಳ ಕಹಿಯ ಹೊರತಾಗಿಯೂ, ಅವರ ಸಾವಿನ ದಿನದವರೆಗೂ ನಿರಂತರವಾಗಿ ಮುಂದುವರಿದುಕೊಂಡು ಬರಲು ಸಾಧ್ಯವಾದದ್ದು, ಮತ್ತೆ ಅವರ ಆಳದ ಸಮಾಜವಾದಿ ಬದ್ಧತೆಯಿಂದಾಗಿ.

ರಾಷ್ಟ್ರ ಮಟ್ಟದಲ್ಲಿ ಡಾ॥ ರಾಮಮನೋಹರ ಲೋಹಿಯಾ ಹಾಗೂ ರಾಜ್ಯ ಮಟ್ಟದಲ್ಲಿ ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ರೂಪುಗೊಂಡಿದ್ದ ಸಮಾಜವಾದಿ ಚಳುವಳಿಯಿಂದ ಪ್ರಭಾವಿತರಾಗಿದ್ದ ರಾಮದಾಸ್, ಈ ಇಬ್ಬರು ನಾಯಕರ ಅಕಾಲಿಕ ಮರಣದಿಂದಾಗಿ ಆ ಚಳುವಳಿ ದಿಕ್ಕು ತಪ್ಪಿದಾಗ, ರಾಜ್ಯ ಮಟ್ಟದಲ್ಲಿ ಪಕ್ಷಾತೀತ ಸಮಾಜವಾದಿ ಚಳುವಳಿಯನ್ನು ಸಂಘಟಿಸಿದವರಲ್ಲಿ ಪ್ರಮುಖರು. ಮುಖ್ಯವಾಗಿ, ಪ್ರೊ॥ ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಪ. ಮಲ್ಲೇಶ್, ಕಡಿದಾಳು ಶಾಮಣ್ಣ ಹಾಗೂ ದೇವನೂರ ಮಹಾದೇವ ಅವರೊಂದಿಗೆ, ಹಿರಿಯ ಸಮಾಜವಾದಿ ಕಿಷನ್ ಪಟ್ನಾಯಕರ ಮಾರ್ಗದರ್ಶನದಲ್ಲಿ 'ಸಮಾಜವಾದಿ ಯುವಜನ ಸಭಾ'ವನ್ನು ರಾಜ್ಯಾದ್ಯಂತ ಪ್ರಭುತ್ವದ ಅನ್ಯಾಯಗಳ ವಿರುದ್ಧ ಧ್ವನಿಯೆತ್ತುವ ವೇದಿಕೆಯನ್ನಾಗಿ ರೂಪಿಸಿದ ಅವರು, ಅದರ ಪ್ರಮುಖ ವಕ್ತಾರರೂ ಆದರು.

ಎಪ್ಪತ್ತರ ದಶಕದಲ್ಲಿ ರಾಜ್ಯಾದ್ಯಂತ ಆರಂಭವಾದ ಜಾತಿ ವಿರೋಧಿ ಆಲೋಚನಾ ಲಹರಿಗೂ, ಅಂತರ್ಜಾತಿ ವಿವಾಹಗಳ ಚಳುವಳಿಗೂ ಪ್ರೇರಣೆ ನೀಡಿದ 'ಜಾತಿ ವಿನಾಶ ಸಮ್ಮೇಳನ', 'ನವ್ಯ'ದ ಹೆಸರಿನಲ್ಲಿ ಸಾಮಾಜಿಕವಾಗಿ ಸಂಕುಚಿತಗೊಳ್ಳುತ್ತಿದ್ದ ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದ 'ಅಖಿಲ ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟ', ನಂತರ ಜೆ.ಪಿ. ನೀಡಿದ 'ಸಂಪೂರ್ಣ ಕ್ರಾಂತಿ'ಯ ಕರೆಗೆ ಬೆಂಬಲವಾಗಿ ಕರ್ನಾಟಕದಲ್ಲಿ ಆರಂಭವಾದ 'ನವನಿರ್ಮಾಣ' ಚಳುವಳಿ; ಈ ಚಳುವಳಿ ಹಳಿ ತಪ್ಪಿದಾಗ ರೂಪುಗೊಂಡ

ದಲಿತ ಹಾಗೂ ರೈತ ಚಳುವಳಿ; ತದನಂತರದ 'ಲಂಕೇಶ್ ಪತ್ರಿಕೆ'ಯ ಆರಂಭ, ಗೋಕಾಕ್ ಚಳುವಳಿ, 'ಪ್ರಗತಿರಂಗ' ಹಾಗೂ ಅಂತರ್ಜಾತಿ ವಿವಾಹಗಳ ರಾಜ್ಯ ಮಟ್ಟದ ವೇದಿಕೆ 'ಮಾನವ ಮಂಟಪ'– ಹೀಗೆ ಕಳೆದ ನಲವತ್ತು ವರ್ಷಗಳಲ್ಲಿ ಕರ್ನಾಟಕ ಕಂಡ ಎಲ್ಲ ಸಾಮಾಜಿಕ–ಸಾಂಸ್ಕೃತಿಕ ವಿದ್ಯಮಾನ– ಚಳುವಳಿಗಳ ಮುಂಚೂಣಿಯಲ್ಲಿರುತ್ತಿದ್ದ ರಾಮದಾಸ್, ತಾವು ನೆಲೆಸಿದ್ದ ಮೈಸೂರಿನ ಸಾಮಾಜಿಕ ವಾತಾವರಣವನ್ನು ಹದಗೆಡಿಸುತ್ತಿದ್ದ ವಿಶ್ವವಿದ್ಯಾಲಯದ ರಾಜಕಾರಣ, ಮತೀಯವಾದಿಗಳ ಹುನ್ನಾರ, ಪ್ರತಿಷ್ಠಿತರ ದಬ್ಬಾಳಿಕೆಗಳ ವಿರುದ್ಧವೂ ಬೀದಿಗಿಳಿಯುತ್ತಿದ್ದ ಸ್ಥಳೀಯ ಹೋರಾಟಗಾರರೂ ಆಗಿದ್ದರು.

ಮಲೆನಾಡಿನ ಅಜ್ಞಾತ ಮೂಲೆಯೊಂದರ ಅಜ್ಞಾತ ಜಾತಿಗೆ ಸೇರಿದ್ದ ರಾಮದಾಸ್ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು, ನರ್ಸ್ ಉದ್ಯೋಗದಲ್ಲಿದ್ದ ತಾಯಿ ಮಂಜಮ್ಮನವರ ಹಠದಿಂದಾಗಿ ಬಡತನದ ಸಂಕಷ್ಟಗಳ ಮಧ್ಯೆಯೂ ಅಧ್ಯಯನಕ್ಕಾಗಿ ಮೈಸೂರಿನವರೆಗೆ ಬಂದವರು ಮತ್ತು ಅಲ್ಲೇ ಉದ್ಯೋಗ ಪಡೆದು ನೆಲೆಸಿದವರು. ತಮ್ಮ ಬಾಲ್ಯದಲ್ಲೇ ಲೋಹಿಯಾ ದರ್ಶನ ಮಾಡಿ, ಸಮಾಜವಾದಿ ಚಳುವಳಿಯ ಪ್ರಭಾವಕ್ಕೊಳಗಾಗಿದ್ದ ರಾಮದಾಸ್ ಅದು ಕಲಿಸಿಕೊಟ್ಟ ಸ್ವಾಭಿಮಾನ ಹಾಗೂ ದಿಟ್ಟತನಗಳ ಮೂಲಕ ಬದುಕು ಕಟ್ಟಿಕೊಂಡವರು. ನಮ್ಮ ಪ್ರಜಾಪ್ರಭುತ್ವದ ವೈಫಲ್ಯಗಳ ಬಗ್ಗೆ ಯಾರೇ ಏನೇ ಹೇಳಲಿ, ಅದು ರಾಮದಾಸರಂತಹ ಅಲಕ್ಷಿತ ಸಮುದಾಯಗಳ ಪ್ರತಿನಿಧಿಗಳಿಗೆ ಅವಕಾಶ ಹಾಗೂ ಆತ್ಮವಿಶ್ವಾಸಗಳ ಎದೆ ಹಾಲು ನೀಡಿ ಪೊರೆದ ಕೀರ್ತಿಗಂತೂ ಭಾಜನವಾಗಿದೆ. ಹಾಗಾಗಿಯೇ ರಾಮದಾಸರು ಪ್ರಜಾಪ್ರಭುತ್ವದ ಯಾವುದೇ ಮೌಲ್ಯಕ್ಕೆ ಧಕ್ಕೆ ಒದಗಿದರೂ, ಅದು ಸಾವು ಬದುಕುಗಳ ಪ್ರಶ್ನೆಯೆಂಬಷ್ಟು ತೀವ್ರವಾಗಿ ಪ್ರತಿಭಟನೆಗೆ ಸಜ್ಜಾಗುತ್ತಿದ್ದರು.

ಕುವೆಂಪುರಿಂದ ಹಿಡಿದು ದೇವನೂರು ಮಹದೇವ ಅವರವರೆಗೆ ನಮ್ಮ ಕಾಲದ ಅತ್ಯುತ್ತಮ ಮನಸ್ಸುಗಳೊಂದಿಗೆ ತಮ್ಮ ವಿಶಿಷ್ಟ ನಿಷ್ಠುರತೆಯೊಂದಿಗೆ ಸಂವಾದ ಮಾಡಿದ ರಾಮದಾಸ್, ಒಮ್ಮೊಮ್ಮೆ ತಮ್ಮ ವೈಚಾರಿಕ ಕಟಿಬದ್ಧತೆಗೆ ತಾವೇ ಮಾರು ಹೋಗಿ ಇತರ ಸಾಮಾನ್ಯರ ಮೇಲೆ ಅನಗತ್ಯವಾಗಿ ಹರಿಹಾಯುತ್ತಿದ್ದುದೂ ಉಂಟು! ಲಂಕೇಶರ ಪತ್ರಿಕೋದ್ಯಮದ ಆರಂಭದ ಅತ್ಯುತ್ತಮ ವರ್ಷಗಳಲ್ಲಿ ಅವರ ಆತ್ಮೀಯ ಸಖನಾದ ರಾಮದಾಸ್, ಆ ಪತ್ರಿಕೋದ್ಯಮದ ಅವನತಿಯ ಕೊನೆಯ ವರ್ಷಗಳಲ್ಲೂ ಬರಿ ಸಖನಾಗಿಯೇ ಮುಂದುವರಿದು ಆಶ್ಚರ್ಯ ಹುಟ್ಟಿಸಿದ್ದರು. ವೈಯುಕ್ತಿಕ ನೆಲೆಯಲ್ಲಿ ಇಂತಹ ವೈರುಧ್ಯಗಳಿಗೆ ಆಗಾಗ್ಗೆ ಬಲಿಯಾಗುತ್ತಿದ್ದ ಅವರು, ಅದರಿಂದಾಗಿಯೋ ಏನೋ ಸದಾ ಆಂತರಿಕವಾಗಿ ಅಶಾಂತರಾಗಿ ಚಡಪಡಿಕೆಯಲ್ಲಿರುತ್ತಿದ್ದರು. ವಿಚಾರವಾದ ಹಾಗೂ ಸಮಾಜವಾದಗಳ ಕಲಸುಮೇಲೋಗರದ ಚಡಪಡಿಕೆಯದು.

ಅನ್ಯಾಯದ ವಿರುದ್ಧ ಪ್ರತಿಭಟಿಸದವನು ಅನ್ಯಾಯದಲ್ಲಿ ಪಾಲುದಾರನೇ ಎಂಬ ಲೋಹಿಯಾ ಅವರ ಮಾತಿನಲ್ಲಿ ಅಚಲ ನಂಬಿಕೆಯಿಟ್ಟಿದ್ದ ರಾಮದಾಸ್, ತಮ್ಮ ಬದುಕಿನುದ್ದಕ್ಕೂ ತಮ್ಮ ಸುತ್ತಮುತ್ತ ಯಾವುದೇ ಅನ್ಯಾಯ ನಡೆಯಲಿ, ಅಲ್ಲಿ ಹಾಜರಿರುತ್ತಿದ್ದರು. ಕ್ರೋಧದ

ಜೊತೆಗೆ ಕರುಣೆಯೂ ಕ್ರಿಯಾಶೀಲವಾಗಿದ್ದಾಗ ಮಾತ್ರ ಪ್ರತಿಭಟನೆ ರಚನಾತ್ಮಕವಾಗಿರಬಲ್ಲುದು ಎಂಬ ಲೋಹಿಯಾ ಅವರ ಇನ್ನೊಂದು ಮಾತನ್ನು ಅವರು ಮರೆತಂತೇ ತೋರುತ್ತಿದ್ದುದರಿಂದಾಗಿ; ಹಲವು ಬಾರಿ ಅವರ ಪ್ರತಿಭಟನೆಯ ತೀವ್ರತೆ ಔಚಿತ್ಯ ಮೀರಿ ಪ್ರಕಟವಾಗುತ್ತಾ, ಅವರೊಡನಿರುತ್ತಿದ್ದ ಗೆಳೆಯರಿಗೆ ಮುಜುಗರವಾಗುತ್ತಿದ್ದುದೂ ಉಂಟು. ಇದನ್ನು ಕಂಡು ಬಹುಬೇಗ ಆಸ್ಫೋಟಗೊಳ್ಳುತ್ತಿದ್ದ ರಾಮದಾಸ್, ತಮ್ಮ ಆಪ್ತ ಗೆಳೆಯರ ಮೇಲೂ ಅನುಚಿತವಾದ ದಾಳಿ ಮಾಡಲು ಹಿಂಜರಿಯುತ್ತಿರಲಿಲ್ಲ. ಹೀಗಾಗಿ ಕ್ರಮೇಣ ಗೆಳೆಯರಿಂದ ದೂರವಾಗುತ್ತಾ ಹೋದ ಅವರು, ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಒಂಟಿತನದ ಹತಾಶೆಯಲ್ಲಿ ದಿಕ್ಕೆಟ್ಟಂತಿದ್ದರು. ಆದರೆ ಇದೇ ಹೊತ್ತಿಗೆ, ಇದೆಲ್ಲದರ ಪರಿಣಾಮವೋ ಎಂಬಂತೆ ಕಾಣಿಸಿಕೊಂಡ ಪತ್ನಿ ನಿರ್ಮಲಾ ಅವರ ತೀವ್ರ ಅನಾರೋಗ್ಯ ಅವರಿಗೆ ಕೊನೆಗೂ ಸಹನೆ- ಸಂಯಮಗಳನ್ನು ಕಲಿಸತೊಡಗಿತ್ತು. ಗೆಳೆಯರು ಮತ್ತೆ ಕ್ರಮೇಣ ಬರಲಾರಂಭಿಸಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಕ್ರೋಧದ ಕಹಿ ಕಳೆದುಕೊಂಡಂತೆ ಸದಾ ಪ್ರೀತಿ ಸೂಸುತ್ತಿದ್ದ ರಾಮದಾಸ್, ಬದುಕಿನ ಮೂಲಪಾಠ ಕಲಿತು ಲೋಕ ತ್ಯಜಿಸಿದ ಅದೃಷ್ಟವಂತ.

ರಾಮದಾಸರನ್ನು ಅವರ ಗೆಳೆಯರು ಸಮಾಜವಾದಿ, ವಿಚಾರವಾದಿ, ನಿಷ್ಠುರವಾದಿ, ಹಠವಾದಿ, ಜಗಳಗಂಟ ಎಂದೆಲ್ಲ ಗುರುತಿಸಿದ್ದುಂಟು. ಆದರೆ ಇವೆಲ್ಲ ಸೇರಿದಂತೆ, ಅವರ ವ್ಯಕ್ತಿತ್ವಕ್ಕೊಪ್ಪುವ ಅಭಿದಾನವೆಂದರೆ, a permanent non- conformist (ನಿರಂತರ ಬಂಡುಕೋರ)- ಕೆಲವು ಬಾರಿ ಈ ಬಂಡುಕೋರತನ ನಿಷ್ಕಾರಣವೂ, ಉದ್ದೇಶರಹಿತವಾಗಿಯೂ ಇದ್ದಂತೆ ಕಾಣುತ್ತಿತ್ತಾದರೂ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಮತೀಯತೆ, ಜಾತೀಯತೆ, ಮೌಢ್ಯಾಚರಣೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಯುವಜನರ ನಿಷ್ಕ್ರಿಯತೆಗಳ ಬಗ್ಗೆ ಚಿಂತಿತರಾಗಿದ್ದ ರಾಮದಾಸ್, ಕಳೆದ ಶತಮಾನದಲ್ಲಿ ವಿದ್ಯೆ ಪಡೆದು ಆತ್ಮವಿಶ್ವಾಸ ಗಳಿಸಿಕೊಂಡ ಅನೇಕ ಅನಾಮಿಕ ಅಲ್ಪಸಂಖ್ಯಾತ ಜಾತಿಗಳ ಧೀರ, ಆದರೆ ಅಶಾಂತ ಪ್ರತಿನಿಧಿಯಾಗಿ; ಇದನ್ನೆಲ್ಲ ವಿಷಾದದಿಂದ ನೋಡುತ್ತಾ, ಸರಿಮಾಡಲಾಗದ ಸಂಕಟದಲ್ಲಿ ನಮ್ಮನ್ನಗಲಿ ಹೋಗಿದ್ದಾರೆ. ತಮ್ಮ ವಿದ್ಯಾಗುರು ಜಿ.ಎಸ್.ಎಸ್. ಅವರ ಅಭಿನಂದನ ಗ್ರಂಥಕ್ಕೆ ಬರೆದ ಲೇಖನವೊಂದರಲ್ಲಿ ಅವರು, ತಮ್ಮ ಗುರುಗಳು ಕತ್ತಲಲ್ಲಿ ದೀಪ ಹಿಡಿದು ಹೊರಟಿದ್ದರೆ, ತಾವು ಪಂಜು ಹಿಡಿದು ಹೊರಟಿರುವುದಾಗಿ ತಮ್ಮನ್ನು ತಾವೇ ವರ್ಣಿಸಿಕೊಂಡಿದ್ದರು. ರಾಮದಾಸ್‌ರಿಗೆ ಇದಕ್ಕಿಂತ ಸರಿಯಾದ ವರ್ಣನೆ ಮತ್ತೊಂದಿರಲಾರದು!

ಆ ಪಂಜು ಇಂದು ಆರಿ ಹೋಗಿದೆ. ಇನ್ನೆಲ್ಲಿ ಅಂಥ ಆ ತಾಪ, ಆ ಬೆಳಕು?

ಜೂನ್ ೨೯, ೨೦೦೭

ಇಂದು ಕಡಿದಾಳು ಶಾಮಣ್ಣ... ನಾಳೆ ?

ಕಡಿದಾಳು ಶಾಮಣ್ಣ ನಕ್ಸಲೈಟ್... ಇದು ಹೋದ ವಾರದ ಜೋಕ್! ಈ ಮೂಲಕ ನಿಜವಾದ ಜೋಕ್ ಎನಿಸಿಕೊಂಡಿರುವುದು ನಮ್ಮ ರಾಜ್ಯದ ಪೋಲೀಸ್ ಇಲಾಖೆ. ಶಾಮಣ್ಣ ಶಾಂತವೇರಿ ಗೋಪಾಲಗೌಡರ ಅನುಯಾಯಿಯಾಗಿ ಸಮಾಜವಾದಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಆನಂತರ ರೈತ ಚಳುವಳಿಯ ಸಾತ್ವಿಕ ಮುಖವಾಗಿ ಕಾಣಿಸಿಕೊಂಡು ಅಪ್ಪಟ ಗಾಂಧಿವಾದಿ ಎನಿಸಿಕೊಂಡವರು. ಅಂತಹವರನ್ನು ನಕ್ಸಲೈಟೆಂದೋ, ನಕ್ಸಲೈಟರ ಹಿತೈಷಿಯೆಂದೋ ಪತ್ತೆ ಹಚ್ಚಿರುವುದು ನಮ್ಮ ಪೋಲೀಸ್ ಪತ್ತೇದಾರಿಕೆಯಲ್ಲಿನ ವೃತ್ತಿಪರತೆಯ ದಾರಿದ್ರ್ಯಕ್ಕೂ, ಈ ಸಾಹಸಮಯ ಪತ್ತೆಯನ್ನು ಯಾವುದೇ ಪರಿಶೀಲನೆಗೆ ಒಳಪಡಿಸದೆ ಸಾರ್ವಜನಿಕವಾಗಿ ಪ್ರಕಟಿಸಿರುವ ನಮ್ಮ ಪೋಲೀಸ್ ಇಲಾಖೆಯ ಒಟ್ಟಾರೆ ಮತಿಹೀನತೆಗೂ ಸಾಕ್ಷಿಯಾಗಿದೆ. ಈ ಹಿಂದೆ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ ಅವರನ್ನೂ, ನಕ್ಸಲೈಟ್ ಎಂದು ಗುರುತಿಸಲಾಗಿದೆ ಎಂಬ ವರದಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇಂತಹ ಅಸಂಬದ್ಧತೆಗಳಿಗೆ ಕಾರಣ, ನಮ್ಮ ಪೋಲೀಸರ ರಾಜಕೀಯ ಪರಿಜ್ಞಾನ ಅಧೋಗತಿಯಲ್ಲಿರುವುದೇ ಆಗಿದೆ.

ಜನತೆಯನ್ನು ಸದಾ ಶತ್ರುಗಳಂತೆ ನೋಡುವ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಜನತೆಯಿಂದ ಶತ್ರುಗಳಂತೆ ಪರಿಗಣಿಸಲ್ಪಡುವ ದುರಂತಮಯ ವಿಷವ್ಯೂಹದಲ್ಲಿ ಸಿಕ್ಕಿಕೊಂಡಿರುವ ಪೋಲೀಸ್, ನಮ್ಮ ಪ್ರಜಾಪ್ರಭುತ್ವ ಈಗ ಕೆಲಸ ಮಾಡುತ್ತಿರುವ ಬೌದ್ಧಿಕ ಮಟ್ಟದ ಪ್ರತೀಕದಂತಿದೆ. ಆಳುವವರ ಮರ್ಜಿ ಕಾಯುವ ಕಾಯಕದ ಅಂಗವಾಗಿಯೇ ಕಾನೂನು ಮತ್ತು ಶಿಸ್ತಿನ ಪರಿಪಾಲನೆಯ ಉಸ್ತುವಾರಿ ನಡೆಸುತ್ತಿರುವ ಪಡೆಯೆಂದು ಸಾಮಾನ್ಯ ಜನತೆಯಿಂದ ಗುರುತಿಸಲ್ಪಟ್ಟಿರುವ ಪೋಲೀಸ್; ತನ್ನ ಹಲವು ಜನ ದಕ್ಷ ಹಾಗೂ ಪ್ರತಿಭಾವಂತ ಅಧಿಕಾರಿಗಳ ಮತ್ತು ಜನಪರ ಕಾಳಜಿಯ ಕೆಳ ಹಂತದ ಸಿಬ್ಬಂದಿಯ ಸೇವಾ ದಾಖಲೆಗಳ

ಹೊರತಾಗಿಯೂ, ಇದುವರೆಗೆ ತನ್ನ ಚರಿತ್ರೆಯಲ್ಲಿ ಯಾವುದೇ ಕಾರ್ಯಾಚರಣೆಯ ಸಂಬಂಧವಾಗಿ ಜನರ ಒಟ್ಟಾರೆ ಮೆಚ್ಚುಗೆಗೆ ಅಥವಾ ಸಹಾನುಭೂತಿಗೆ ಪಾತ್ರವಾಗಿಲ್ಲವೆನ್ನುವ ಸಂಗತಿ, ಅದರ ಮೂಲ ಸಾಂಸ್ಥಿಕ ದೌರ್ಬಲ್ಯದ ಕಡೆ ಬೊಟ್ಟು ಮಾಡುತ್ತದೆ.

ತಾನೇ ಸಾಕಿಕೊಂಡಿರುವ ವೃತ್ತಿನಿರತ ಸುಳ್ಳು ಸಾಕ್ಷಿದಾರರ ಮತ್ತು ಪೊಳ್ಳು ಮಾಹಿತಿದಾರರ ಮೂಲಕವೇ ಮೊಕದ್ದಮೆಗಳನ್ನು ನಡೆಸುವ ಹಾಗೂ ಗುಪ್ತಚರ ಕಡತಗಳನ್ನು ನಿರ್ಮಿಸುವ ದೀರ್ಘ ಪರಂಪರೆಯುಳ್ಳ ಪೋಲೀಸ್ ಈಗ, ಗಾಂಧಿವಾದ ಹಾಗೂ ನಕ್ಸಲಿಸಂ ಎಂಬ ಎರಡು ತಾತ್ವಿಕ ತುದಿಗಳ ನಡುವಣ ವ್ಯತ್ಯಾಸವೂ ಕಾಣದಷ್ಟು ಅಸೂಕ್ಷ್ಮವಾಗಿ ಹೋಗಿದೆ. ತನ್ನ ತತ್ಕಾಲೀನ ರಾಜಕೀಯ ಯಜಮಾನರು ಯಾರು ಎಂಬುದರ ಆಧಾರದ ಮೇಲೇ ಸಮಾಜದ ಶತ್ರುಗಳನ್ನು ಗುರುತಿಸುವ ಸಂಪ್ರದಾಯಕ್ಕೆ ಒಗ್ಗಿ ಹೋಗಿರುವ ನಮ್ಮ ಪೋಲೀಸ್‌ಗೆ ಗುಪ್ತಚರ ದಳದ ಮಟ್ಟಿಗಾದರೂ ರಾಜಕೀಯ ಶಿಕ್ಷಣದ ಅಗತ್ಯ ಕಂಡು ಬಂದಿಲ್ಲವೆಂದರೆ, ಅದರ ಶೈಕ್ಷಣಿಕ ದಾರಿದ್ರ್ಯ ಯಾವ ಮಟ್ಟ ಮುಟ್ಟಿದೆ ಎಂಬುದರ ಅರಿವಾದೀತು. ಈ ದಾರಿದ್ರ್ಯದಿಂದಾಗಿಯೇ, ಲೋಹಿಯಾ ಎಂಬ ಶಬ್ದ ತನ್ನ ಅಪರಿಚಿತತೆಯಿಂದಾಗಿಯೇ ಅವರಲ್ಲಿ ಅನುಮಾನಗಳನ್ನು ಹುಟ್ಟಿಸಿ, ಆ ಶಬ್ದದ ಒಡನಾಟವೇ ನಕ್ಸಲೈಟರ ಪಟ್ಟಿಗೆ ಕೆಲವರ ಹೆಸರು ಸೇರ್ಪಡೆಯಾಗಲು ಅರ್ಹತೆಯಾಗಿಬಿಟ್ಟಿದೆ. ಇದರ ಜೊತೆಗೆ, ಸ್ಥಳೀಯ ರಾಜಕೀಯ ಯಜಮಾನರುಗಳ ಅಥವಾ ಅವರ ಚೇಲಾಗಳ ಸೂಚನೆಗಳಿಗನುಸಾರ ಯಾರ್ಯಾರೋ ಏನೇನೋ ಆಗಿ ಪೋಲೀಸ್ ಕಡತ ಸೇರುವ ಅಸಂಬದ್ಧಗಳು ಹಾಗೂ ಅನಾಹುತಗಳು ಸೃಷ್ಟಿಯಾಗತೊಡಗಿವೆ.

ಚಿಕ್ಕಮಗಳೂರು ಜಿಲ್ಲೆ ನಕ್ಸಲ್‌ವಾದದ ನೆಲೆಯಾಗುವ ಮೊದಲು ಅದರ ಮಾರುವೇಷದ ರಾಜಕೀಯ ಪೂರ್ವಸಿದ್ಧತೆ ನಡೆದದ್ದು, ಅನೇಕ ರಾಜಕೀಯ ಹೋರಾಟಗಳ ಚರಿತ್ರೆ ಇರುವ ಮತ್ತು ಗ್ರಾಮೀಣ ಮಲೆನಾಡಿನ ವಿಶಾಲ ವಿದ್ಯಾರ್ಥಿ ಸಮೂಹದ ಹಾಗೂ ಹಲವು ಪ್ರಗತಿಪರ ಚಿಂತಕರ ನೆಲೆಯಾಗಿರುವ ಶಿವಮೊಗ್ಗದಲ್ಲಿ. ಕೋಮು ಸೌಹಾರ್ದ, ತುಂಗಾ ಉಳಿಸಿ, ಕುದುರೆಮುಖ ರಾಷ್ಟ್ರೀಯ ಉದ್ಯಾನದ ಆದಿವಾಸಿಗಳ ಪುನರ್ವಸತಿ ಇತ್ಯಾದಿ ಚಳುವಳಿಗಳಲ್ಲಿ ನಾಲ್ಕಾರು ವರ್ಷಗಳ ಕಾಲ ಸಕ್ರಿಯವಾಗಿ ಭಾಗವಹಿಸಿದ ಶಿವಮೊಗ್ಗದ ಅನೇಕ ಜನ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರು, ಈ ಚಳುವಳಿಗಳ ಹಿಂದಿನ ನಕ್ಸಲೀಯ ರಾಜಕಾರಣದ ಸುಳಿವು ಸಿಕ್ಕೊಡನೆ, ಸಹಜವಾಗಿಯೇ ಅವುಗಳೊಡನೆಯ ಸಂಪರ್ಕ ಕಡಿದುಕೊಂಡರು. ಇವರಲ್ಲಿ ಎದ್ದು ಕಾಣುವಂತಿರುವವರು, ಕುವೆಂಪು ವಿಶ್ವವಿದ್ಯಾಲಯದ ಜನಪ್ರಿಯ ಅಧ್ಯಾಪಕ ಹಾಗೂ ಪ್ರಖರ ಬುದ್ಧಿಜೀವಿ ಡಾ॥ ರಾಜೇಂದ್ರ ಚೆನ್ನಿಯವರು. ಕನ್ನಡದ ಬಹು ಮುಖ್ಯ ಸಂಸ್ಕೃತಿ ಚಿಂತಕರೂ, ಸಾಹಿತ್ಯ ವಿಮರ್ಶಕರೂ ಆದ ಚೆನ್ನಿ, ಕಳೆದ ಹತ್ತಾರು ವರ್ಷಗಳಿಂದ ಶಿವಮೊಗ್ಗದಲ್ಲಿ ಸಂಘ ಪರಿವಾರದ ರಾಜಕಾರಣದ ವಿರುದ್ಧದ ಚಟುವಟಿಕೆಗಳಿಗೆ ಒಂದು ಬೌದ್ಧಿಕ ಆಯಾಮವನ್ನು ಒದಗಿಸುತ್ತಾ ಬಂದವರು. ಹೀಗಾಗಿ ಇವರನ್ನು ಆದಷ್ಟು ಬೇಗ ನಿವಾರಿಸಿಕೊಳ್ಳುವುದು ಸ್ಥಳೀಯ ಸಂಘ

ಪರಿವಾರದ ಪುಢಾರಿಗಳಿಗೆ ಅತಿ ಅಗತ್ಯವಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ. ಹಾಗಾಗಿಯೇ ಚೆನ್ನಿ ಈಗ ಪೋಲೀಸ್ ಕಡತಗಳಲ್ಲಿ ನಕ್ಸಲೈಟ್ ಬೆಂಬಲಿಗ!

ಹಾಗೇ, ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲ ಪ್ರಗತಿಪರ ಚಟುವಟಿಕೆಗಳ ಮುಂಚೂಣಿಯಲ್ಲಿದ್ದುಕೊಂಡು, ಅವುಗಳಿಗೆ ಸಾಮಾನ್ಯ ಜನತೆಯ ಮಟ್ಟದಲ್ಲಿ ಒಂದು ವಿಶ್ವಾಸಾರ್ಹತೆ ಒದಗಿಸುತ್ತಿರುವ ಕಡಿದಾಳು ಶಾಮಣ್ಣ, ಸಂಘ ಪರಿವಾರದ ಸ್ಥಳೀಯ ಅಂಗ ಸಂಸ್ಥೆಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದಾರೆ. ಹೀಗಾಗಿ, ತಮ್ಮ ಚಟುವಟಿಕೆಗಳ ವಿಸ್ತರಣೆಯ ದೃಷ್ಟಿಯಿಂದ ಶಾಮಣ್ಣನವರ ನೈತಿಕ ಸ್ಥೈರ್ಯವನ್ನು ಕುಗ್ಗಿಸುವುದು ಸಂಘ ಪರಿವಾರದವರ ಸದ್ಯದ ಗುರಿಯಾಗಿರುವಂತೆ ತೋರುತ್ತದೆ. ಏಕೆಂದರೆ, ಶಾಮಣ್ಣ ಪೋಲೀಸ್ ಕಡತಗಳಿಗೆ ನಕ್ಸಲೈಟಾಗಿ ಸೇರಿಕೊಳ್ಳುವಂತಾಗಲು ಮತ್ತಾವ ಕಾರಣವೂ ಗೋಚರಿಸುತ್ತಿಲ್ಲ. ಹಾಗೇ, ಹಳೆಯ ಗೂಂಡಾಗಿರಿ ಪ್ರಕರಣವೊಂದರಲ್ಲಿ ಸಂಘ ಪರಿವಾರದವರು ಹೆಸರು ಕೆಡಿಸಿಕೊಳ್ಳಲು ಕಾರಣರಾಗಿದ್ದ ಸ್ಥಳೀಯ ಪತ್ರಕರ್ತ ಎನ್. ಮಂಜುನಾಥರ ಹೆಸರೂ, ಹಳೇ ದ್ವೇಷದ ಮೇಲೆ ನಕ್ಸಲೀಯರ ಪಟ್ಟಿಗೆ ಸೇರುವಂತೆ ನೋಡಿಕೊಳ್ಳಲಾಗಿದೆ.

ಪೋಲೀಸ್ ಮತ್ತು ರಾಜಕಾರಣದ ಇಂತಹ ಅಕ್ರಮ ಸಂಬಂಧದಿಂದ ಉಂಟಾಗಿರುವ ಅಸಂಬದ್ಧತೆಗಳ ವಿರುದ್ಧ ಕಡಿದಾಳು ಶಾಮಣ್ಣ ನ್ಯಾಯಾಲಯದಲ್ಲಿ ದೂರು ಸಲ್ಲಿಸುವ; ಚೆನ್ನಿ ಪೋಲೀಸರ ಈ 'ಅವಿವೇಕ'ದ ವಿರುದ್ಧ ಕಿಡಿ ಕಾರುತ್ತಾ, ತಾವು ನಕ್ಸಲೀಯ ರಾಜಕಾರಣವನ್ನು ಎಂದೂ ಒಪ್ಪಿಲ್ಲ ಎಂದು ಸ್ಪಷ್ಟೀಕರಿಸುವ ಪತ್ರಿಕಾ ಹೇಳಿಕೆ ನೀಡುವ ಸ್ಥಿತಿ ಉಂಟಾಗಿದೆ. ಹೀಗಾಗಿ ಈಗ ಶಿವಮೊಗ್ಗ ಜಿಲ್ಲೆಯ ಮಟ್ಟಿಗೆ ನಕ್ಸಲೀಯರ ಪಟ್ಟಿಯ ಪ್ರಕಟಣೆ, ಸಂಘ ಪರಿವಾರದವರ ರಾಜಕೀಯಕ್ಕೆ ವಿರುದ್ಧವಂತೆ ತೋರುವ ಯಾವುದೇ ಚಟುವಟಿಕೆ ನಡೆಯದಂತೆ ತಡೆಯುವ ರಾಜಕೀಯ ಹುನ್ನಾರವಾಗಿರಲಿಕ್ಕೂ ಸಾಕು. ಏಕೆಂದರೆ, ಪಟ್ಟಿ ಪ್ರಕಟವಾಗುವುದನ್ನೇ ಕಾಯುತ್ತಿದ್ದಂತೆ, ಸ್ಥಳೀಯ ಸಂಘ ಪರಿವಾರದ ಅಂಗ ಸಂಸ್ಥೆಗಳು ಇವರನ್ನೆಲ್ಲ ಕೂಡಲೇ ಬಂಧಿಸುವಂತೆ ಹಾಹಾಕಾರವೆಬ್ಬಿಸುತ್ತಿವೆ. ಅಷ್ಟೇ ಅಲ್ಲ, ನಕ್ಸಲೀಯ ಚಟುವಟಿಕೆಗಳನ್ನು ಕಾನೂನು ಮತ್ತು ಶಿಸ್ತು ಪಾಲನೆಯ ವಿಷಯವಾಗಿ ಮಾತ್ರ ನೋಡಬಯಸದೆ, ಒಂದು ಸಾಮಾಜಿಕ– ಆರ್ಥಿಕ ವಿದ್ಯಮಾನವಾಗಿಯೂ ಪರಿಶೀಲಿಸಲು ಯತ್ನಿಸುತ್ತಿರುವ ಹಿರಿಯ ಪೋಲೀಸ್ ಅಧಿಕಾರಿ ಶಂಕರ ಬಿದರಿಯವರನ್ನು ನಕ್ಸಲೀಯರ ಬೆಂಬಲಿಗರೆಂದು ಕರೆಯಲೂ ಇವು ಹಿಂಜರಿದಿಲ್ಲ.

ನಕ್ಸಲೀಯ ಚಳುವಳಿಯೊಂದಿಗೆ ಸಹಾನುಭೂತಿ ಹೊಂದಿರುವವರೆಂದು ಈ ಹಿಂದೆ ಪೋಲೀಸರಿಂದಲೇ ಗುರುತಿಸಲ್ಪಟ್ಟವರೆಂದು ಹೇಳಲಾದ ಅನೇಕರನ್ನು ಕೈಬಿಟ್ಟು, ಸಂಬಂಧಪಡದಿದ್ದವರನ್ನೆಲ್ಲಾ ಪಟ್ಟಿಗೆ ಸೇರಿಸಿರುವುದರಿಂದಾಗಿ ರಾಜ್ಯ ಸರ್ಕಾರದ ನಕ್ಸಲ್ ವಿರೋಧಿ ಕಾರ್ಯಾಚರಣೆ ತನ್ನ ವಿಶ್ವಾಸಾರ್ಹತೆಗೇ ಭಂಗ ತಂದುಕೊಂಡಿದೆ. ಸಂಘ ಪರಿವಾರದ ಸ್ಥಳೀಯ ನಾಯಕರಿಗೆ ಹಾಗೂ ಸ್ಥಳೀಯ ಪೋಲೀಸ್ ವ್ಯವಸ್ಥೆಗೆ ನಕ್ಸಲೀಯ ಸಮಸ್ಯೆಯ ಪರಿಹಾರದ ಬಗ್ಗೆ ನಿಜವಾದ ಬದ್ಧತೆಯಿದ್ದಲ್ಲಿ, ಅವು ಕ್ರಮವಾಗಿ ಸ್ಥಳೀಯ

ರಾಜಕಾರಣವನ್ನು ಮೀರುವ ಮತ್ತು ಮೆಟ್ಟಿ ನಿಲ್ಲುವ ವಿವೇಕವನ್ನು ಈಗಲಾದರೂ ಪ್ರದರ್ಶಿಸಬೇಕಿದೆ. ಉಪ ಮುಖ್ಯಮಂತ್ರಿ ಯಡಿಯೂರಪ್ಪನವರು ಹಾಗೂ ಸಂಬಂಧಪಟ್ಟ ಪೋಲೀಸ್ ಅಧಿಕಾರಿ ಶಂಕರ ಬಿದರಿಯವರು ಈಗಾಗಲೇ ಇಂತಹ ವಿವೇಕದ ಸೂಚನೆ ನೀಡಿರುವುದು ಸಂತೋಷದ ಸಂಗತಿಯಾಗಿದೆ. ಪಟ್ಟಿಯಲ್ಲಿ ತಪ್ಪುಗಳು ನುಸುಳಿದ್ದರೆ, ಸರಿಪಡಿಸುವ ಮಾತನ್ನು ಇಬ್ಬರೂ ಆಡಿದ್ದಾರೆ. ಸರಿಪಡಿಸುವುದರ ಜೊತೆಗೆ ಇಂತಹ ತಪ್ಪೇಕಾಯಿತು ಎಂಬುದನ್ನು ಪರಿಶೀಲಿಸಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಅಲ್ಲದೆ, ಈ ತಪ್ಪುಗಳಿಂದಾಗಿ ನೊಂದವರ ಕ್ಷಮೆ ಕೇಳುವುದೂ ನಾಗರಿಕ ಆಡಳಿತದ ಪಾವಿತ್ರ್ಯವನ್ನು ಕಾಪಾಡುವ ದೃಷ್ಟಿಯಿಂದ ಅಗತ್ಯವಾಗಿದೆ.

ಗೃಹ ಮಂತ್ರಿ ಎಂ.ಪಿ. ಪ್ರಕಾಶ್ ಅವರು ಇಂತಹ ವಿಷಯಗಳಲ್ಲಿ ಮುಜುಗರ ವ್ಯಕ್ತಪಡಿಸುವ ತತ್ಕಾಲೀನ ಪ್ರತಿಕ್ರಿಯೆಗಳ ಇಕ್ಕಟ್ಟಿಗೆ ಸಿಲುಕುವ ಬದಲು, ಪೋಲೀಸ್ ವ್ಯವಸ್ಥೆಗೆ ರಾಜಕೀಯ ಒತ್ತಡಗಳನ್ನು ಮೆಟ್ಟಿ ನಿಂತು ಜನತೆಯ ಸೇವೆಗೆ ಬದ್ಧವಾಗಿ ಕಾರ್ಯ ನಿರ್ವಹಿಸುವಂತಹ ವೃತ್ತಿಪರವಾದ ನೈತಿಕ ಹಾಗೂ ಶೈಕ್ಷಣಿಕ ತರಬೇತಿ ಒದಗಿಸುವ ಶಾಶ್ವತ ವ್ಯವಸ್ಥೆ ಮಾಡಿದರೆ, ರಾಜ್ಯದ ಪೋಲೀಸರು, ಜನತೆಯೂ ಒಟ್ಟಿಗೆ ಅವರಿಗೆ ಋಣಿಯಾಗಿರುತ್ತಾರೆ. ಏಕೆಂದರೆ, ರಾಜಕೀಯ ಒತ್ತಡ ಹಾಗೂ ಕೃಪಾಶ್ರಯಗಳಿಂದಾಗಿಯೇ ಭ್ರಷ್ಟ ಹಾಗೂ ದುಷ್ಟವಾಗುತ್ತಾ ಹೋಗುವ ಪೋಲೀಸ್, ಸಮಾಜವನ್ನು ಕಾಯುವುದಕ್ಕಿಂತ ಹೆಚ್ಚಾಗಿ ಕಾಡುವ ವ್ಯವಸ್ಥೆಯಾಗಿಯೇ ಬೆಳೆಯುವ ಅಪಾಯವಿರುತ್ತದೆ. ರಾಜ್ಯದ ಮಾಜಿ ರಾಜ್ಯಪಾಲ ದಿವಂಗತ ಧರ್ಮವೀರ ಅವರ ಅಧ್ಯಕ್ಷತೆಯ ರಾಷ್ಟ್ರೀಯ ಪೋಲೀಸ್ ಸುಧಾರಣಾ ಆಯೋಗ ಬಹು ವರ್ಷಗಳ ಹಿಂದೆಯೇ, ಪೋಲೀಸ್ ವ್ಯವಸ್ಥೆಯನ್ನು ರಾಜಕೀಯ ಒತ್ತಡಗಳಿಂದ ಮುಕ್ತಗೊಳಿಸುವಂತಹ ಅನೇಕ ಕ್ರಮಗಳನ್ನು ಶಿಫಾರ್ಸು ಮಾಡಿದ್ದರೂ, ನಮ್ಮ ರಾಜಕೀಯ ವ್ಯವಸ್ಥೆ ಅವನ್ನು ಜಾರಿಗೆ ತರಲು ಹಿಂಜರಿಯುತ್ತಿರುವದರ ಹಿಂದಿನ ಮರ್ಮವಾದರೂ ಏನಿರಬಹುದು ಎಂದು ಯೋಚಿಸಿದರೇ, ರಾಜಕಾರಣ ಮತ್ತು ಪೋಲೀಸ್ ವ್ಯವಸ್ಥೆಯ ನಡುವೆ ಈಗಾಗಲೇ ಎಂತಹ ಎಷ್ಟು 'ಘನ' ಸಂಬಂಧ ಸ್ಥಾಪಿತವಾಗಿದೆ ಎಂಬುದು ಅರ್ಥವಾಗುತ್ತದೆ. ಇಂದು ಕೋಟ್ಯಾಂತರ ರೂಪಾಯಿಗಳ ದಂಧೆಯಾಗಿ ಪರಿವರ್ತಿತವಾಗಿರುವ ರಾಜಕಾರಣದ ಆಟದಲ್ಲಿ ಪೋಲೀಸ್ ವ್ಯವಸ್ಥೆ ಈಗ ಇನ್ನೂ ಸುಲಭವಾಗಿ ಹಾಗೂ ಸಲೀಸಾಗಿ ದಾಳವಾಗಿ ಬಳಕೆಯಾಗುವ ಸಾಧ್ಯತೆ ಇದೆ. ಇದರ ಪರಿಣಾಮಗಳನ್ನು ಸಾಮಾನ್ಯ ಜನತೆಯೇ ಎದುರಿಸಬೇಕಾಗುತ್ತದೆ. ಆದುದರಿಂದ, ನಾಗರಿಕ ಸಮಾಜ ಈ ಪ್ರವೃತ್ತಿಯ ವಿರುದ್ಧ ಸದಾ ಎಚ್ಚರದಿಂದಿರುವ ಅಗತ್ಯವಿದೆ. ಇಂದು ಕಡಿದಾಳು ಶಾಮಣ್ಣ... ನಾಳೆ?

ಜುಲೈ ೬, ೨೦೦೭

ಬುದ್ಧ ಮತ್ತು ಹಿಂದೂ ಧರ್ಮ : ಕೆಲವು ಚಿಂತನೆಗಳು

'ವಿಕ್ರಾಂತ ಕರ್ನಾಟಕ'ದ ಕಳೆದ ಸಂಚಿಕೆಯಲ್ಲಿ, ಕೆಲವು ವಾರಗಳ ಹಿಂದೆ ಬೆಂಗಳೂರಿನಲ್ಲಿ ಕೆಲವು ದಲಿತ ಗೆಳೆಯರ ನೇತೃತ್ವದಲ್ಲಿ ಎರಡು ಸಾವಿರ ಜನರು ಬೌದ್ಧ ಧರ್ಮಕ್ಕೆ ಮತಾಂತರವಾದ ಘಟನೆ ಬಗ್ಗೆ ಎರಡು ಬರಹಗಳಿವೆ. ಒಂದು, ಸಹಾನುಭೂತಿಪರವಾದ ವರದಿಯಂತಿದ್ದರೆ, ಇನ್ನೊಂದು ಅದನ್ನು ವಿಮರ್ಶಿಸುವ ಸಂಪಾದಕೀಯ ಲೇಖನವಾಗಿದೆ. ಮತಾಂತರ ಇಂದು ಭಾವನೆಗಳನ್ನು ಕೆರಳಿಸುವ ವಿದ್ಯಮಾನವೆನಿಸಿದ್ದರೆ, ಅದಕ್ಕೆ ಕಾರಣ ಬಹುಪಾಲು ಎಲ್ಲ ಮತಾಂತರಗಳೂ ಬಹುಸಂಖ್ಯಾತ ಹಿಂದೂ ಧರ್ಮದಿಂದ ಇತರ ಧರ್ಮಗಳಿಗೆ ಆಗುತ್ತಿರುವುದೂ ಮತ್ತು ಇವುಗಳ ಹಿಂದೆ ಧಾರ್ಮಿಕ ಕಾರಣಗಳಿಗೆ ಹೊರತಾದ ಬೇರೆಯೇ ಕಾರಣಗಳಿವೆ ಎಂಬ ನಂಬಿಕೆಯೇ ಆಗಿದೆ. ಆದರೆ, ಬೌದ್ಧ ಧರ್ಮಕ್ಕೆ ಆಗುವ ಮತಾಂತರಗಳ ಬಗ್ಗೆ ಹಿಂದೂ ಧರ್ಮಪಾಲಕರಲ್ಲಿ ಅಷ್ಟೇನೂ ಕ್ಷೋಭೆ ಉಂಟಾಗದಿರಲು, ಅದು ಹಿಂದೂ ಧರ್ಮದ ಒಂದು ಭಾಗವೇ ಆಗಿದೆ ಎಂಬ ಸುಪ್ತ ಭಾವನೆಯೇ ಕಾರಣವಾಗಿದೆ. ಹತ್ತಾರು ಜನ ಹಿಂದೂಗಳು ಕ್ರಿಶ್ಚಿಯನ್ನರೋ, ಮುಸಲ್ಮಾನರೋ ಆಗಹೊರಟಾಗ ಹಿಂದೂ ಸಂಘಟನೆಗಳು ಮಾಡುವ ರಾದ್ಧಾಂತ, ಐವತ್ತು ವರ್ಷಗಳ ಹಿಂದೆ ಅಂಬೇಡ್ಕರ್ ಅವರು ತಮ್ಮ ಸಾವಿರಾರು ಅನುಯಾಯಿಗಳೊಂದಿಗೆ ಆರಂಭಿಸಿದ ಬೌದ್ಧ ಧರ್ಮದೆಡಗಿನ ಮತಾಂತರದಿಂದ ಹಿಡಿದು ಮೊನ್ನೆಯ ಮೈಸೂರಿನ ಮತಾಂತರದವರೆಗೆ ಎಲ್ಲಿಯೂ ಕಂಡುಬಂದಿಲ್ಲ ಎಂಬುದು ಗಮನಾರ್ಹ. ರವೀಂದ್ರ ರೇಷ್ಮೆಯವರ ಸಂಪಾದಕೀಯದಲ್ಲಿ ಕಾಣಬರುವ 'ಇದರಿಂದೇನು ಪ್ರಯೋಜನ?' ಎಂಬಂತಹ ಗೊಣಗಾಟಗಳ ಹೊರತಾಗಿ ಮತ್ತಾವ ರೀತಿಯ ಉಗ್ರ ಪ್ರತಿಕ್ರಿಯೆಗಳನ್ನೂ ಈ ಮತಾಂತರಗಳು ಎದುರಿಸಿಲ್ಲ.

ಹಾಗೆ ನೋಡಿದರೆ, ಭಾರತ ತನ್ನ ಇತಿಹಾಸದಲ್ಲಿ ಇಂತಹ ಅನೇಕ ಮತಾಂತರಗಳನ್ನು ಕಂಡಿದೆ. ಬದುಕಿನ ಅರ್ಥವನ್ನು ತಿಳಿಯುವ ಮನುಷ್ಯನ ಮೂಲಭೂತ ಹಂಬಲದಿಂದ ಪ್ರೇರಿತವಾದ ತಾತ್ವಿಕ ಅನ್ವೇಷಣೆಯ ಪರಿಣಾಮವಾಗಿ ನಡೆದ ಮತಾಂತರಗಳು ಮನುಷ್ಯನ ಬದುಕನ್ನು ಹೆಚ್ಚೆಚ್ಚು ಸಂಪನ್ನಗೊಳಿಸಿವೆ. ಕ್ರಿ.ಪೂ. ಮೂರರಿಂದ ಆರನೇ ಶತಮಾನದವರೆಗೆ ಭಾರತದಲ್ಲಿ ನಡೆದ ಇಂತಹ ತಾತ್ವಿಕ ಅನ್ವೇಷಣೆಗಳು ಶ್ರಮಣ ಸಂಸ್ಕೃತಿಯ ರೂಪದಲ್ಲಿ ಭಾರತೀಯ ತತ್ವಜ್ಞಾನಕ್ಕೆ ಅನೇಕ ಅಭೂತಪೂರ್ವ ಕೊಡುಗೆಗಳನ್ನು ನೀಡಿದೆ. ಭಾರತೀಯ ತತ್ವಜ್ಞಾನದ ಷಡ್ದರ್ಶನಗಳು ಸ್ಪಷ್ಟ ರೂಪು ತಳೆದದ್ದೇ ಇಂತಹ ಅನೇಕ 'ಮತಾಂತರ'ಗಳ ಮೂಲಕ. ಮತಾಂತರ ಎಂದರೆ, ಬದುಕನ್ನು ಕುರಿತ ಹೊಸ ಒಳನೋಟಗಳ ಮೂಲಕ ತನ್ನ ಆಧಾರ ನಂಬಿಕೆಗಳನ್ನು ಬದಲಿಸಿಕೊಳ್ಳುವುದು ಎಂದರ್ಥ.

ಆದರೆ, ನಾಗರೀಕತೆಯ ಬೆಳವಣಿಗೆಯೊಂದಿಗೆ (ಇದರಲ್ಲಿ ಸಂಸ್ಕೃತಿ ವಿಸ್ತರಣೆಯೂ ಸೇರಿದೆ), ಅಲ್ಲಲ್ಲಿ ಹರಡಿ ಹೋಗಿದ್ದ ಜನಸಮುದಾಯಗಳು ಪರಸ್ಪರ ಸಂಪರ್ಕ ಸಾಧಿಸಿಕೊಂಡು ಬೆರೆಯುವ ಅನಿವಾರ್ಯತೆ ಉಂಟಾದಾಗ; ನಂಬಿಕೆಗಳ ಮೇಲಾಟ ಶುರುವಾಗಿ ಮತನಿಷ್ಠೆಯು ರಾಜಕೀಯ ನಿಷ್ಠೆಯಾಗಿ ಪರಿವರ್ತಿತವಾಗತೊಡಗಿತು. ಮತಾಂತರದ ಅರ್ಥವೇ ಬದಲಾಯಿತು. ಇದರ ಪರಿಣಾಮಗಳು ತಾತ್ವಿಕ ಅನ್ವೇಷಣೆಯ ರೀತಿ– ನೀತಿಗಳ ಮೇಲೂ ಆಗದಿರಲಿಲ್ಲ. ಹೀನಯಾನ– ಮಹಾಯಾನ– ವಜ್ರಯಾನ, ಥೇರವಾದ, ಯೋಗಾಚಾರ, ಚಾರ್ವಾಕ, ಶೈವ, ವೈಷ್ಣವ, ಶಾಕ್ತ, ಕಾಳಾಮುಖ ಮುಂತಾಗಿ ಉಂಟಾದ ಸೂಕ್ಷ್ಮ ಉಪ ವಿಂಗಡಣೆಗಳು ಮತ್ತು ಅವಕ್ಕೆ ಸಂಬಂಧಪಟ್ಟ ಶಾಸ್ತ್ರಾಚಾರಗಳೂ ಇದರ ಫಲಗಳೇ ಆಗಿವೆ. ಗುಡಿಗಳು, ವಿಹಾರಗಳು, ಬಸದಿಗಳು ಕೇವಲ ಮತಶ್ರದ್ಧೆಯ ಕೇಂದ್ರಗಳಾಗದೆ, ರಾಜಕೀಯ ಶಕ್ತಿ ಕೇಂದ್ರಗಳೂ ಆಗತೊಡಗಿದ್ದೂ, ಪುರೋಹಿತಶಾಹಿಯೆಂಬ ಮಧ್ಯವರ್ತಿ ವರ್ಗವೊಂದು ಸೃಷ್ಟಿಯಾದದ್ದೂ ಹಾಗೂ ಮತ ಮತ್ತು ರಾಜಕಾರಣ ಪರಸ್ಪರ ಹಾಸು ಹೊಕ್ಕಾಗತೊಡಗಿದ್ದೂ ಈ ಸಂಕ್ರಮಣ ಕಾಲಘಟ್ಟದಲ್ಲೇ.

ಈ ಪ್ರಕ್ರಿಯೆಯಲ್ಲಿ, ಜನಸಮುದಾಯದ ಮಟ್ಟಿಗೆ ಅನೇಕ ತಾತ್ವಿಕ ಸೂಕ್ಷ್ಮಗಳು ಸ್ಥೂಲಗೊಂಡು ಆವರೆಗಿನ ಎಲ್ಲ ತಾತ್ವಿಕ ಪ್ರಯೋಗಗಳೂ ಕಲಸು ಮೇಲೋಗರವಾಯಿತು. ಇದರ ಸಗಟು ರೂಪವೇ– ಸಿಂಧು ನದಿಯಾಚೆಯ ಜನ ಸಮುದಾಯದ ಜೀವನ ಕ್ರಮ ಎಂಬರ್ಥದಲ್ಲಿ– 'ಹಿಂದೂ ಧರ್ಮ'ವೆಂಬುದು ಗುರುತಿಸಲ್ಪಟ್ಟು, ವಿಕಾಸ ಹೊಂದುತ್ತಾ ನಡೆಯಿತು. ಈ ಸಂಕ್ರಮಣ ಸಂದರ್ಭದಲ್ಲಿ ಹೊರಗಿನಿಂದ ಬಂದ ಅನೇಕ ಕುಲಗಳು (ಉದಾ: ಯವನರು, ಹೂಣರು, ಕುಶಾನರು ಇತ್ಯಾದಿ) ಇಲ್ಲಿನ ಈ ಮತ– ರಾಜಕಾರಣದ ಸಂಘರ್ಷದಲ್ಲಿ ತಾವೂ ಭಾಗಿಯಾಗಿ, ಅದರ ಫಲವಾದ ಹೊಸ ಮತೀಯ– ರಾಜಕೀಯ ವ್ಯವಸ್ಥೆಯ ಭಾಗವೇ ಆಗಿ; ಇಲ್ಲಿನ ಕುಲಗಳೊಳಕ್ಕೇ ಸೇರಿಹೋದರು.

ಪುರಾತನ ವರ್ಣವ್ಯವಸ್ಥೆಯಿಂದ ಕಾಲಾನುಕ್ರಮದಲ್ಲಿ ಮೂಡಿದ (ಅಥವಾ ಹೇರಲ್ಪಟ್ಟ?) ಜಾತಿವ್ಯವಸ್ಥೆಯ ಎರಕದಲ್ಲಿ ಈ ಮತಾಧಾರಿತ ರಾಜಕೀಯ ವ್ಯವಸ್ಥೆಯು

ಒಂದು ಸ್ಥಿರ ಸ್ಥಿತಿಯನ್ನು ತಲುಪಿತಾದರೂ, ನಂತರದ ದಿನಗಳಲ್ಲಿ ವಿವಿಧ ಉದ್ದೇಶಗಳೊಂದಿಗೆ ಬರಲಾರಂಭಿಸಿದ ಕುಲಗಳು (ಉದಾ: ಅರಬ್ಬರು, ಪರ್ಷಿಯನ್ನರು, ಯೂರೋಪಿಯನ್ನರು) ಬರಿ ಕುಲಗಳಾಗಿರದೆ, ಮತನಿಷ್ಠ ಸಮುದಾಯಗಳೂ ಆಗಿದ್ದುದರಿಂದ, ಭಾರತದಲ್ಲಿ ಮತ-ರಾಜಕಾರಣದ ಮತ್ತೊಂದು ತಳಮಳ ಶುರುವಾಯಿತು. ಯಾವ ಜಾತಿ ಪದ್ಧತಿ ಈ ಮುನ್ನ ಭಾರತೀಯ ಕುಲ ವ್ಯವಸ್ಥೆಯ ಸ್ಥಿರತೆಗೆ ಕಾರಣವಾಗಿತ್ತೋ, ಅದೇ ಜಾತಿ ಪದ್ಧತಿ ಈಗ ಈ ಹೊಸ ತಳಮಳದ ವೇಗವರ್ಧಕವಾಗಿ ಕೆಲಸ ಮಾಡುವ ವಿಪರ್ಯಾಸ ಸೃಷ್ಟಿಯಾಯಿತು. ಮೊದಮೊದಲು ಒಂದು ಸಾಮಾಜಿಕ ಒಪ್ಪಂದದಂತೆ ಕೆಲಸ ಮಾಡುತ್ತಿದ್ದ ಜಾತಿ ಪದ್ಧತಿ, ಕಾಲಕ್ರಮದಲ್ಲಿ ಸಾಮಾಜಿಕವಾಗಿ ಶ್ರೇಣೀಕರಣಗೊಂಡ ಪ್ರತ್ಯೇಕತೆಗಳನ್ನು ನಿರ್ಮಿಸಿದ್ದುದರಿಂದ, ಈ ಹೊಸ ಮತೀಯ ಕುಲಗಳೊಂದಿಗೆ ಆತ್ಮವಿಶ್ವಾಸದಿಂದ ಅನುಸಂಧಾನ ನಡೆಸುವ ಅವಕಾಶವನ್ನೂ, ಶಕ್ತಿಯನ್ನೂ ಈ 'ಹಿಂದೂ ಧರ್ಮ' ಕಳೆದುಕೊಂಡಿತು. ಇದರಿಂದಾಗಿ, ಈ ತಳಮಳದಲ್ಲಿ ಅನುಸಂಧಾನಕ್ಕಿಂತ ಸಂಘರ್ಷವೇ ಮೇಲುಗೈ ಪಡೆಯಿತು.

ಮಧ್ಯಯುಗದಲ್ಲಿನ ಭಕ್ತಿ ಪಂಥ, ಸೂಫಿ ಪಂಥ ಹಾಗೂ ಆಧುನಿಕ ಯುಗದಲ್ಲಿನ ಮಿಷನರಿ ಸೇವೆ ಮತ್ತು ಹೊಸ ವೈಚಾರಿಕತೆ– ವೈಜ್ಞಾನಿಕತೆಗಳ ಅನಾವರಣವು ಈ ತಳಮಳದ ಅಂಗವಾಗಿ ನಡೆದ ಅನುಸಂಧಾನಗಳ ಸಿಹಿ ಫಲಗಳಾಗಿದ್ದರೆ; ರಾಜಕೀಯ ಪ್ರೇರಿತ ಮತಾಂತರಗಳು, ಅವು ಸಾಮಾಜಿಕ ಜೀವನದಲ್ಲಿ ಉಂಟು ಮಾಡಿದ ಅನೇಕ ರೀತಿಯ ಅಲ್ಲೋಲಕಲ್ಲೋಲಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಭಾರತವೆಂಬ ಆಧುನಿಕ ರಾಜ್ಯ ವ್ಯವಸ್ಥೆಯ ಉದಯದೊಂದಿಗೇ ಸಂಭವಿಸಿದ ರಾಷ್ಟ್ರ ವಿಭಜನೆ ಈ ತಳಮಳ ಉಂಟು ಮಾಡಿದ ಸಂಘರ್ಷದ ಕಹಿ ಫಲಗಳಾಗಿವೆ. ಆದರೆ, ಸಿಹಿ ಫಲಗಳ ಸಿಹಿಗಿಂತ ಕಹಿ ಫಲಗಳ ಕಹಿಯೇ ಹೆಚ್ಚಾಗಿದ್ದರೆ, ಅದಕ್ಕೆ ಈ ತಳಮಳದಲ್ಲಿ ಮತ ಮತ್ತು ರಾಜಕಾರಣಗಳು ಪರಸ್ಪರ ಅನುಸಂಧಾನಗೊಳ್ಳದೆ, ಕ್ರಮೇಣ ಏಕೀಕರಣಗೊಳ್ಳುತ್ತಾ ಹೋದುದೇ ಕಾರಣವಾಗಿದೆ. ಇದಕ್ಕೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹುಟ್ಟಿಕೊಂಡ ಕೋಮುವಾದಿ ಎಂದು ಕರೆಯಲಾಗುವ ಸಂಸ್ಥೆಗಳು ಎಷ್ಟು ಕಾರಣವೋ, ಈ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್‌ನ ಅನೇಕ ನಾಯಕರ ಮತೀಯ ವರ್ತನೆಗಳೂ ಕಾರಣವಾಗಿತ್ತು. ಸ್ವತಃ ಮಹಾತ್ಮ ಗಾಂಧಿಯವರು ಹೋರಾಟದ ಆರಂಭದಲ್ಲಿ ತಮ್ಮ ಹೊಸ ರಾಜಕಾರಣದ ಬಲವೃದ್ಧಿಗಾಗಿ; ಹಿಂದೂ-ಮುಸ್ಲಿಂ ಐಕ್ಯತೆ ವರ್ಧಿಸುವುದೆಂದು (ಬಹುಶಃ ತಪ್ಪಾಗಿ) ಭಾವಿಸಿ, ಜಾಗತಿಕ ಮುಸ್ಲಿಂ ಆಂದೋಲನದ ಬೀಜರೂಪದಂತಿದ್ದ ಖಿಲಾಫತ್ ಆಂದೋಲನಕ್ಕೆ ಬೆಂಬಲ ಘೋಷಿಸುವ ಮೂಲಕ ಜನ ಸಂಘಟನೆಯನ್ನು ತಪ್ಪು ಹೆಜ್ಜೆಯೊಂದಿಗೆ ಆರಂಭಿಸಿದ್ದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ನಂತರ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಹೊಸ ವೈಚಾರಿಕತೆ–ವೈಜ್ಞಾನಿಕತೆಗಳು ಪರಿಚಯಿಸಿದ 'ಸೆಕ್ಯುಲರಿಸಂ' ಎಂಬ ಪರಿಕಲ್ಪನೆಯ ಮೂಲಕ ಮತ ಮತ್ತು ರಾಜಕಾರಣಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲು ಎಡಬಿಡಂಗಿ ಪ್ರಯತ್ನಗಳನ್ನು

ಮಾಡಲಾಯಿತು., ಭಾರತದ ಬಹು ಮತೀಯ ಸಂದರ್ಭದಲ್ಲಿ ಇದು, ಅನೇಕ ರೀತಿಯ ಸಾಮಾಜಿಕ– ಸಾಂಸ್ಕೃತಿಕ ಬಿಗುವುಗಳನ್ನು ಸೃಷ್ಟಿಸಿದವು. ಅವೇ ಇಂದು ಕೋಮುವಾದಿ ರಾಜಕಾರಣದ ಮೂಲಕ ಅಭಿವ್ಯಕ್ತಿ ಕಂಡುಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ, ಹಳೆಯ ಮತೀಯತೆ ಮತ್ತು ಹೊಸ ಆಧುನಿಕತೆಯ ನಡುವಣ ಸಂವೇದನಾಹೀನ ಹಾಗೂ ಸಂವಾದಹೀನ ಸಂಬಂಧವೇ ಇಂದಿನ ಎಲ್ಲ ಮತೀಯ (ಮತ್ತು ಜಾತೀಯ) ವಿಕೃತಿಗಳಿಗೆ ಕಾರಣವಾಗಿದೆ ಎನ್ನಬಹುದು. ಈಚಿನ ಬೌದ್ಧ ಮತಾಂತರ ಕೂಡ ಇಂತಹ ವಿಕೃತಿಗಳ ಬಗೆಗಿನ ಒಂದು ಸ್ಥಳೀಯ ಪ್ರತಿಕ್ರಿಯೆಯೇ ಆಗಿದೆ. ಇದಕ್ಕೆ ಸದ್ಯದ ಪ್ರೇರೇಪಣೆ ಭೈರಪ್ಪನವರು 'ಆವರಣ'ದ ಮೂಲಕ ಪ್ರಯತ್ನಿಸಿದ 'ಸತ್ಯಾನ್ವೇಷಣೆ' ಎಂಬ ವಿಕೃತಿಯೇ ಆಗಿದ್ದರೆ ಆಶ್ಚರ್ಯಪಡಬೇಕಿಲ್ಲ. ಏಕೆಂದರೆ, ದಲಿತರ ಒಂದು ಸಂಘಟಿತ ಗುಂಪು ಅಂಬೇಡ್ಕರ್‌ರ ಮತಾಂತರದ ಐವತ್ತನೇ ವರ್ಷದ ಸಂದರ್ಭದಲ್ಲಿ 'ಮರಳಿ ಮನೆಗೆ' ಎಂಬ ಆಂದೋಲನದಡಿ ಸಾಮೂಹಿಕವಾಗಿ ಬೌದ್ಧರಾಗುವ ಕಾರ್ಯಕ್ರಮ ರೂಪಿಸಿದೆಯಾದರೂ, ಅದಿನ್ನೂ ಪೂರ್ಣ ಪ್ರಮಾಣದಲ್ಲಿ ಚಾಲನೆಗೊಳ್ಳುವ ಮುನ್ನವೇ ಇದ್ದಕ್ಕಿದ್ದಂತೆ ಈ ಮತಾಂತರ ನಡೆದಿದೆ!

ಅದೇನೇ ಇರಲಿ, ಈ ಮತಾಂತರವು ಸ್ಥಳೀಯ ಹಿಂದೂ ಮೂಲಭೂತವಾದಿಗಳಿಗೆ ಒಂದು ಸ್ಥಳೀಯ ಎಚ್ಚರಿಕೆ ಕೊಟ್ಟಿದ್ದರ ಹೊರತಾಗಿ ಸಾಧಿಸಿದ್ದಾದರೂ ಏನು? ಇಂದಿನ ಸಂದರ್ಭದಲ್ಲಿ ಮತಾಂತರ ಅಂದರೆ, ಒಂದು ಪುರೋಹಿತಶಾಹಿಯಿಂದ ಇನ್ನೊಂದು ಪುರೋಹಿತಶಾಹಿ ವಶಕ್ಕೆ ಹೋದಂತೆ ಅಲ್ಲವೆ? ಕೆಲವು ವರ್ಷಗಳ ಹಿಂದೆ ನಮ್ಮ ಕೆ.ಬಿ. ಸಿದ್ಧಯ್ಯನವರ ಮಗಳ ಮದುವೆ ಬೌದ್ಧ ವಿಧಿಗಳಿಗನುಸಾರ, ಯಾರಿಗೂ ಅರ್ಥವಾಗದ ಪಾಳಿ ಭಾಷೆಯಲ್ಲಿ ಹಾಗೂ ವೈದಿಕ ಆಚರಣೆಗಳನ್ನೂ ನಾಚಿಸುವಂತಹ ಶಾಸ್ತ್ರಾಚಾರಗಳೊಂದಿಗೆ ನಡೆದ ರೀತಿ ನೋಡಿ ಗಾಬರಿಯಾಗಿದ್ದ ನಾನು ಈಗ, ದೇವನೂರ ಮಹಾದೇವ ಸದರಿ ಮತಾಂತರದ ಸಮಾರಂಭದಲ್ಲಿ ತಮ್ಮ ಗೆಳೆಯರೊಂದಿಗೆ ಬೌದ್ಧ ಪುರೋಹಿತರ ಮಧ್ಯೆ ಬುದ್ಧ ಪ್ರತಿಮೆಯ ಮುಂದೆ ಕೈಮುಗಿದು ನಿಂತ ಭಂಗಿ ನೋಡಿ ಮತ್ತಷ್ಟು ಗಾಬರಿಯಾದೆ! ಅವರನ್ನು ಹತ್ತಾರು ವರ್ಷಗಳಿಂದ ಹತ್ತಿರದಿಂದ ಬಲ್ಲ ನನಗೆ ಅವರ ಈ ಭಂಗಿ ನಗೆಯನ್ನೂ, ಮರುಕವನ್ನೂ ಒಟ್ಟಿಗೆ ಉಂಟು ಮಾಡಿತು. ಹಾಗಾದರೆ, ಮಹಾದೇವ ಇನ್ನು ಮುಂದೆ ಬದುಕನ್ನು ಕುರಿತ ಮೂಲ ನಂಬಿಕೆಗಳಲ್ಲಿ, ಅವರ ಹಾಗೆ ಮತಾಂತರಗೊಳ್ಳದ ನಮಗಿಂತ ಭಿನ್ನವೇ? ಹಾಗಾದರೆ, ಯಾವ ರೀತಿ? ಬಹುಶಃ ಇದನ್ನೇ ತಮ್ಮ ಸಂಪಾದಕೀಯ ಶೀರ್ಷಿಕೆಯಲ್ಲಿ ರೇಷ್ಮೆಯವರು 'ಧರ್ಮ ಬದಲಾದರೆ, ಮನೋಧರ್ಮ ಬದಲಾದೀತೆ?' ಎಂದು ಕೇಳಿರುವುದು. ಇದನ್ನೇ ಇನ್ನೊಂದು ರೀತಿಯಲ್ಲಿ ಬೌದ್ಧ ಗುರು ದಲೈಲಾಮ ಹೀಗೆ ಹೇಳಿರುವುದು: ಬೌದ್ಧನಾಗಲು ಯಾರೇ ತಮ್ಮ ಧರ್ಮ ಬದಲಾಯಿಸುವ ಅಗತ್ಯವಿಲ್ಲ. ಇದರರ್ಥ, ಬೌದ್ಧ ಧರ್ಮ ಮೂಲತಃ ಒಂದು ಮನೋಧರ್ಮವಾಗಿದ್ದು,

ಸಾರತಃ ಮತೀಯ ವಿಧಿ- ವಿಧಾನಗಳಿಂದ ಹೊರತಾಗಿದೆ. ಹಾಗಾಗಿ, ಬೌದ್ಧನಾಗಲು ಬೌದ್ಧಮತಕ್ಕೆ ಔಪಚಾರಿಕವಾಗಿ ಸೇರುವ ಅಗತ್ಯವಿಲ್ಲ.

ಹಿಂದೂ ಧರ್ಮವೆನ್ನುವುದು ಹಲವು ಮತಗಳ ಕಲಸು ಮೇಲೋಗರವಾಗಿದ್ದು, ಇದರಲ್ಲಿ ಬೌದ್ಧ ಧರ್ಮವೂ ತನ್ನ ಅನೇಕ ಆವೃತ್ತಿಗಳ ರೂಪದಲ್ಲಿ ಹಾಸುಹೊಕ್ಕಾಗಿದೆ. ಅದು ಹಿಂದೂ ಧರ್ಮ ವೈದಿಕ ಧರ್ಮವಾಗಿ ಪರಿವರ್ತಿತವಾಗದಂತೆ ತಡೆಯುತ್ತಿರುವ ಶಕ್ತಿಯಾಗಿ ಅನೇಕ ರೂಪಗಳಲ್ಲಿ ಕೆಲಸ ಮಾಡುತ್ತಿದೆ. ಹಾಗೆ ನೋಡಿದರೆ, ಭಾರತದಲ್ಲಿ ಬೌದ್ಧ ಧರ್ಮ ಅನೇಕ ರೂಪಾಂತರಗಳನ್ನು ಕಂಡು ತನ್ನ ಮೂಲ ಚಹರೆಗಳನ್ನು ಕಳೆದುಕೊಳ್ಳುತ್ತಾ, ಕಾಲಕ್ರಮದಲ್ಲಿ ಸನಾತನ ಧರ್ಮದೊಂದಿಗೆ (ಅಂದರೆ, ಆದಿ ಧರ್ಮ ಎಂಬರ್ಥದಲ್ಲಿ) ಅನುಸಂಧಾನಗೊಳ್ಳುತ್ತಾ ಹೋದ ಪರಿಣಾಮವಾಗಿ; ವೈದಿಕ ಧರ್ಮವೂ ಅನೇಕ ರೂಪಾಂತರಗಳನ್ನು ತಾಳಿ, ತನ್ನ ಮೂಲ ಚಹರೆಗಳನ್ನು ಕಳೆದುಕೊಂಡಿದೆ. ಹಿಂದೂ ಕೋಮುವಾದಿ ತಾತ್ವಿಕತೆಯ ಮೂಲ ಸಿಟ್ಟೂ ಇದೇ ಆಗಿದ್ದು, ಇತರ ಮತಗಳನ್ನು ಕುರಿತ ಅದರ ಅಸಹನೆ ಈ ಮೂಲದಿಂದಲೇ ಬಂದಂತಹುದಾಗಿದೆ. (ಹೆಚ್ಚಿನ ವಿವರಗಳಿಗಾಗಿ ಭೈರಪ್ಪನವರ 'ಸಾರ್ಥ' ಓದಿ). ಮುಖ್ಯವಾಗಿ, ಅನಾತ್ಮವಾದಿಯಾದ ಬೌದ್ಧ ಧರ್ಮ ಆತ್ಮವಾದಿಯಾದ ವೈದಿಕ ಧರ್ಮದ ಆತ್ಮ ಮೀಮಾಂಸೆಯನ್ನು ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಮುಂತಾದ ಅನೇಕಾನೇಕ ಮೀಮಾಂಸಾ 'ಆವರಣ'ಗಳಿಗೆ ಸಿಲುಕಿಸಿ ಅಲುಗಾಡಿಸಿದೆ. ಇದರಿಂದಾಗಿ ವೈದಿಕ ಧರ್ಮದ ಸಾಮಾಜಿಕ ರಚನೆಗೆ ಅಡಿಗಲ್ಲಿನಂತಿದ್ದ ವರ್ಣ ವ್ಯವಸ್ಥೆಯ ತಾತ್ವಿಕ ಆಧಾರಗಳೇ ಅಲುಗಾಡಿ, ಜಾತಿ ವ್ಯವಸ್ಥೆ ಪ್ರಶ್ನಾರ್ಹವೆನಿಸಿಕೊಂಡಿದೆ.

ಹೀಗೆ ಬೌದ್ಧ ಧರ್ಮ ಹಿಂದೂ ಧರ್ಮದ ಒಂದು ಒಳಕುದಿಯಾಗಿಯೇ ಕೆಲಸ ಮಾಡುತ್ತಾ, ಕರ್ಮಕಾಂಡದ ರೂಪದಲ್ಲಿದ್ದ ಅದರ 'ಅವಿದ್ಯೆ'ಯನ್ನು ತನ್ನ ಜ್ಞಾನ ಕಾಂಡದ ಮೂಲಕ ನಿವಾರಿಸುವ ಪ್ರಯತ್ನ ಮಾಡಿತು. ಇಂದಿನ ನಮ್ಮ ಅನೇಕ ದೇವರುಗಳು, ಅದರ ಮೂರ್ತಿಗಳು, ಸಂನ್ಯಾಸ, ಮಠ, ಪೂಜೆ, ಧ್ಯಾನ, ಪ್ರಾರ್ಥನೆ, ವ್ರತ, ಹರಕೆ, ಜಾತ್ರೆ, ಅನೇಕ ಜಾನಪದ ಆಚರಣೆಗಳು, ಪ್ರದರ್ಶಕ ಕಲೆಗಳು; ಪ್ರಜ್ಞಾಶಾಸ್ತ್ರವಾಗಿ ಬೆಳೆದಿದ್ದ ಬೌದ್ಧ ಧರ್ಮದ ವಿವಿಧ ಆವೃತ್ತಿಗಳ ಮೂಲಕ ಮಾನಸಿಕ ಚಿಕಿತ್ಸಾ ರೂಪಗಳಲ್ಲಿ ಹಿಂದೂ ಧರ್ಮಕ್ಕೆ ದತ್ತವಾದವು. ಇವುಗಳಲ್ಲಿ ಕೆಲವು ಮೌಢ್ಯಾಚರಣೆಗಳಾಗಿದ್ದರೆ, ಅದಕ್ಕೆ ಆಯಾ ಬೌದ್ಧ ಆವೃತ್ತಿಗಳೇ ಹೊಣೆಯಾಗಿವೆ ಎಂಬುದನ್ನು ನಾವು ಮರೆಯಬಾರದು. ಹೀಗಾಗಿ ಬೌದ್ಧ ಧರ್ಮವನ್ನು ಭಾರತದಿಂದ ಓಡಿಸಲಾಯಿತು ಎಂಬುದು ಅರ್ಧ ಸತ್ಯ ಮಾತ್ರ. ಏಷ್ಯಾದ ವಿವಿಧ ದೇಶಗಳಲ್ಲಿ ಅದು ವಿವಿಧ ರೂಪಗಳಲ್ಲಿದ್ದಂತೆ ಅದು ಭಾರತದಲ್ಲೂ ಹಿಂದೂ ಧರ್ಮದ ಬಹುಮುಖಿ ಆಚರಣೆ- ನಂಬಿಕೆಗಳಲ್ಲಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಶಂಕರನಿಂದ ಹಿಡಿದು ನಮ್ಮ ಅಲ್ಲಮ- ಬಸವರೂ ಸೇರಿದಂತೆ ಪರಮಹಂಸ- ವಿವೇಕಾನಂದ- ಮಹಾತ್ಮ ಗಾಂಧಿ- ರಮಣರವರೆಗೆ, ಬುದ್ಧ ಭಾರತೀಯ ಜೀವನ ಮತ್ತು ದರ್ಶನಗಳಲ್ಲಿ ವಿವಿಧ

ಪ್ರಮಾಣಗಳಲ್ಲಿ ಮತ್ತು ಹದದಲ್ಲಿ ಅಭಿವ್ಯಕ್ತಗೊಂಡಿದ್ದಾನೆ. ಬಹುಸಂಖ್ಯಾತ ಹಿಂದೂಗಳ ಮನೆಯಲ್ಲಿ ಬುದ್ಧನ ಚಿತ್ರವೋ, ಪ್ರತಿಮೆಯೋ ಇರುವುದರ ಅರ್ಥವಾದರೂ ಏನು?

ಇಂದು ಹಿಂದೂ ಕೋಮುವಾದಿಗಳೆನಿಸಿಕೊಂಡವರು, ತಮ್ಮ ಕೃತ್ಯಗಳ ಸಮರ್ಥನೆಯಾಗಿ ತಮ್ಮ ಧರ್ಮ ಇತರ ಧರ್ಮಗಳಿಗೆ ಹೋಲಿಸಿದರೆ, ಸಹನಶೀಲ, ಪ್ರಬುದ್ಧ, ಉದಾರಿ ಎಂದು ಹೇಳಿಕೊಳ್ಳುತ್ತಿದ್ದರೆ, ಅದಕ್ಕೆ ಅದರೊಳಗೆ ಕ್ರಿಯಾಶೀಲವಾಗಿರುವ ಬೌದ್ಧ ಧಾರೆಯೇ ಕಾರಣವಾಗಿದೆ ಎಂಬುದನ್ನು ಅರಿಯದವರಾಗಿದ್ದಾರೆ. ಹಾಗೆ ನೋಡಿದರೆ, ಡಾ॥ ಅಂಬೇಡ್ಕರ್‌ರ ಮತಾಂತರಕ್ಕೆ ಚಾರಿತ್ರಿಕ ಮಹತ್ವವಿದ್ದಷ್ಟು, ಧಾರ್ಮಿಕ ಮಹತ್ವವಿರಲಾರದು. ಏಕೆಂದರೆ, ಅವರು ಮಾರ್ಕ್ಸ್‌ವಾದಿ ಮೀಮಾಂಸೆಯ ನೆಲೆಯಲ್ಲಿ ಬೌದ್ಧ ಧರ್ಮದ ಮೂಲ ಆಧಾರ ಕಲ್ಪನೆಯಾದ 'ದುಃಖ'ವನ್ನು ಆಸ್ತಿಗೆ ಸಮೀಕರಿಸುವ ಮೂಲಕ ಅದರ ಭೌತವಾದಿ ನಿರೂಪಣೆಯನ್ನಷ್ಟೇ ಮಂಡಿಸಿ, ಅದಕ್ಕೆ ತಮ್ಮನ್ನೊಪ್ಪಿಸಿಕೊಂಡವರು. ಆದರೆ, ಬೌದ್ಧ ಧರ್ಮದ ಯಾವ ಜಿಜ್ಞಾಸುವೂ ಅವರ ಈ ನಿರೂಪಣೆಯನ್ನು ಒಪ್ಪಿಲ್ಲವೆಂದು ಹೇಳಲಾಗುತ್ತಿದೆ. ಸ್ವತಃ ಅವರೇ ಹೇಳಿಕೊಂಡಂತೆ, 'ದ್ವೇಷ'ದ ಮೇಲೇ ("...ದ್ವೇಷ ಭಾವನೆಯಲ್ಲಿಯೇ ನನ್ನ ನಿಜವಾದ ಶಕ್ತಿ ಅಡಗಿದೆ... ಈ ದ್ವೇಷವೇ ನಾನು ಬಲವಾಗಿ ನಂಬಿರುವಂತಹ ತತ್ವಗಳು ಮತ್ತು ಧ್ಯೇಯಗಳ ಬಗ್ಗೆ ನಾನು ಹೊಂದಿರುವ ಪ್ರೀತಿಯ ಪ್ರತಿಬಿಂಬಗಳಾಗಿವೆ.": '*ರಾನಡೆ, ಗಾಂಧಿ ಮತ್ತು ಜಿನ್ನಾ*'ಪುಸ್ತಕದ ಪ್ರಸ್ತಾವನೆ) ತಮ್ಮ ರಾಜಕಾರಣವನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಕ್ಕಿದ್ದ ಅಂಬೇಡ್ಕರ್, ತಮ್ಮ ಜೀವನದ ಕೊನೆಯ ದಿನಗಳಲ್ಲಿ ತಮ್ಮ ಮಾತನ್ನು ಉಳಿಸಿಕೊಳ್ಳಲು ಮಾತ್ರವೆಂಬಂತೆ, ಎಲ್ಲ 'ದುಃಖ'ದ ಅಂತಿಮ ಪರಿಹಾರವಾಗಿ 'ಕರುಣಾ'ವನ್ನು (ಅಂದರೆ, ಸಕಲ ಜೀವರಾಶಿಯೊಂದಿಗೆ ಸಹ-ಅನುಭೂತಿ) ಬೋಧಿಸಿದ ಧರ್ಮದ ಮೊರೆ ಹೋಗಬೇಕಾದುದು ಒಂದು ರೀತಿಯಲ್ಲಿ ಸಹಜ ಧಾರ್ಮಿಕ ನ್ಯಾಯವೇ ಹೌದು. ಆದರೆ ಆನಂತರ ಅವರ ಅನುಯಾಯಿಗಳು ಪ್ರತೀಕಾರ- ಪ್ರತಿಭಟನಾರ್ಥವಾಗಿ ಬೌದ್ಧ ಧರ್ಮ ಸೇರಿ ಏನಾಯಿತು? ನವ ಬೌದ್ಧರೆಂಬ ಹೊಸ 'ಜಾತಿ' ಸೃಷ್ಟಿಯಾಗಿ, ಮತ್ತೆ ಜಾತಿ- ಅಸ್ಪೃಶ್ಯತೆಗಳ ಶಾಪ- ತಾಪಗಳನ್ನು ತಪ್ಪಿಸಿಕೊಳ್ಳಲು ಮೀಸಲಾತಿಗಾಗಿ ಹೊಡೆದಾಡುವ ಸಂದರ್ಭ ಉಂಟಾಯಿತು... ಬುದ್ಧ ಹೇಳಿದ ಮೊದಲ ಆರ್ಯ ಸತ್ಯವಾದ 'ಸಂಸಾರ ದುಃಖಮಯ' ಎಂಬುದು ಆಳವಾಗಿ ಮನವರಿಕೆಯಾಗದ ಹೊರತು, ಯಾರೂ ಬೌದ್ಧರೆನಿಸಿಕೊಳ್ಳಲಾರರು ಮತ್ತು ಬುದ್ಧನ ಹಾದಿಯಲ್ಲಿ ಒಂದು ಹೆಜ್ಜೆಯನ್ನೂ ಮುಂದಿಡಲಾರರು. ಅಲ್ಲಿಯವರೆಗೆ ಅವರಿಗೆ ಹಿಂದೂ ಧರ್ಮವೇ ಸರಿಯಾದ ಜಾಗ; ಅಭ್ಯಾಸ ಕ್ಷೇತ್ರ!

ಪರಿಸ್ಥಿತಿ ಹೀಗಿರುವಾಗ, ಮೊನ್ನೆಯ ಮತಾಂತರದ ಸಂದರ್ಭದಲ್ಲಿ ಮಹಾದೇವ ಅವರು ಹೇಳಿದ 'ಇದರಿಂದ ದಲಿತರೇನೂ ಕಳೆದುಕೊಳ್ಳುವುದಿಲ್ಲ' ಎಂಬ ಮಾತು ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಗಳ ಮೇಲಿನ ಸಿಟ್ಟಿನ ನೆಲೆಯಲ್ಲಿ ಮಾತ್ರ ಸತ್ಯವೆನಿಸುವ ಮಾತು. ಇಂತಹ ಮತಾಂತರದಿಂದ ಅಸ್ಪೃಶ್ಯರು ಆ ಸಿಟ್ಟಿನ ನೈತಿಕ ಹಕ್ಕನ್ನು ಕಳೆದುಕೊಳ್ಳುತ್ತಾರೆ ಮಾತ್ರವಲ್ಲ; ತಮ್ಮಂತೆ ಸಾಂಕೇತಿಕವಾಗಿ ಮತಾಂತರಗೊಳ್ಳಲಾಗದಿರುವ ಅಸಂಖ್ಯಾತ ಅಸ್ಪೃಶ್ಯ

ಶ್ರೀಸಾಮಾನ್ಯರನ್ನು ತಬ್ಬಲಿಗಳನ್ನಾಗಿ ಮಾಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಇವರು ತಮ್ಮ ಪ್ರತಿಭಟನೆ ಹಾಗೂ ಪರಿಷ್ಕಾರಗಳ ಮೂಲಕ ಹಿಂದೂ ಧರ್ಮದೊಳಗಿನ ಬೌದ್ಧ ಆವೃತ್ತಿಯನ್ನೇ ಸುಧಾರಿಸುತ್ತಾ, ಅದನ್ನು ಬಹುಸಂಖ್ಯಾತರ 'ನಿಜ'ವೆನ್ನಿಸುವ ಬೌದ್ಧ ಧರ್ಮವನ್ನಾಗಿ ವಿಸ್ತರಿಸುವ ಐತಿಹಾಸಿಕ ಕರ್ತವ್ಯದಿಂದ ಕಳ್ಳ ತಪ್ಪಿಸಿಕೊಂಡು ಹೋಗಿ, ಭಾರತದಲ್ಲಿ ಸಾಂಕೇತಿಕವಾಗಿ ಮಾತ್ರ ಅಸ್ತಿತ್ವದಲ್ಲಿರುವ 'ಅಧಿಕೃತ' ಬೌದ್ಧ ಧರ್ಮದ ಹುದಲಲ್ಲಿ ಕಳೆದು ಹೋಗುತ್ತಾರೆ.

ಇಷ್ಟೆಲ್ಲ ಹೇಳಿದ ಮೇಲೆ ರೇಷ್ಮೆಯವರ ಸಂಪಾದಕೀಯದಲ್ಲಿನ ಒಂದು ಮಾತನ್ನು ಬಲವಾಗಿ ಅಲ್ಲಗೆಳೆಯಲೇಬೇಕಿದೆ. ಬೌದ್ಧ ಧರ್ಮವಿರುವ ದೇಶಗಳು ಸರ್ವಾಧಿಕಾರಿ ರಾಷ್ಟ್ರಗಳೋ ಅಥವಾ ಜಪಾನಿನಂತೆ ಉಪಗ್ರಹ ರಾಷ್ಟ್ರವೋ ಆಗಿವೆ ಎಂಬ ಅವರ ಮಾತು, ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಒಂದು ಧರ್ಮದ ಬಗ್ಗೆ ಅರ್ಧ ಶತಮಾನದ ಆಧುನಿಕ ರಾಜಕೀಯ ಇತಿಹಾಸವನ್ನಷ್ಟೇ ಗಮನದಲ್ಲಿಟ್ಟುಕೊಂಡು ಆಡಿರುವ ತುಂಬಾ ಸುಲಭದ ಹಾಗೂ ಬಿಡುಬೀಸಾದ ಮಾತಾಗಿದೆ. ಹಾಗೆ ನೋಡಿದರೆ, ಜಗತ್ತಿನ ಎಲ್ಲ ಧಾರ್ಮಿಕ ಸಮಾಜಗಳೂ ಎಲ್ಲ ತೆರನ ರಾಜಕೀಯ ಪ್ರಯೋಗಗಳಿಗೂ ಒಳಗಾಗುತ್ತಾ ಬಂದಿವೆ. ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆಯ ಮೊದಲ ಪ್ರಯತ್ನ ನಡೆಯುತ್ತಿದ್ದ ಸಂದರ್ಭದಲ್ಲಿ ಧರ್ಮ ಪ್ರಚಾರ ಆರಂಭಿಸಿದ ಬುದ್ಧ, ಇಂತಹ ಪ್ರಯತ್ನಗಳ ವಿರುದ್ಧ ರಕ್ಷಣೆಯಾಗಿ ಗ್ರಾಮ ಗಣ ರಾಜ್ಯಗಳ ಮಹಾಪೋಷಕನಾಗಿದ್ದ ಎಂಬುದನ್ನು ನಾವು ಮರೆಯಬಾರದು. ಹಾಗೇ, ಪ್ರಪಂಚದ ಏಕೈಕ 'ಹಿಂದೂ ರಾಷ್ಟ್ರ'ವೆನಿಸಿದ್ದ ನೇಪಾಳ ನಿನ್ನೆ ಮೊನ್ನೆಯವರೆಗೂ 'ಅಣಕು ಪ್ರಜಾಪ್ರಭುತ್ವ'ವೆನಿಸಿಕೊಂಡು ರಾಜಶಾಹಿ ರಾಷ್ಟ್ರವಾಗಿಯೇ ಉಳಿದಿತ್ತು ಎಂಬುದನ್ನು ಕೂಡ.

ಜುಲೈ ೧೩, ೨೦೦೭

ರಾಮದಾಸ್‌ಗೆ ನಮಸ್ಕಾರ...

ಸ್ನೇಹಿತರೆ,

ಇದು 'ಚಿಂತನಾಗೋಷ್ಠಿ'. ಆಹ್ವಾನ ಪತ್ರಿಕೆ ಪ್ರಕಾರ ನಾನು ಮಾತನಾಡಬೇಕಾಗಿರುವುದು 'ಸಮಾಜವಾದಿ ಹೋರಾಟ'ದ ಬಗ್ಗೆ. ಆದರೆ ಇದು ರಾಮದಾಸರ ನೆನಪಿನ ಕಾರ್ಯಕ್ರಮವೂ ಆಗಿರುವುದರಿಂದ ನಾನು ಮಾತನಾಡಬೇಕಾಗಿರುವುದು ಸಮಾಜವಾದಿ ಹೋರಾಟದ ಬಗೆಗೋ, ಸಮಾಜವಾದಿ ಹೋರಾಟದಲ್ಲಿ ರಾಮದಾಸರ ಪಾತ್ರದ ಬಗೆಗೋ ತಿಳಿಯದಾಗಿದೆ. ಈ ಕಾರ್ಯಕ್ರಮದ ಸಂಘಟಕರು ಇದೀಗ ತಾನೇ, ಎರಡೂ ವಿಷಯ ಸೇರಿಸಿ ಮಾತನಾಡಬಹುದು ಎಂದು ಸೂಚಿಸಿದ್ದಾರೆ! ಹಾಗೆ ನೋಡಿದರೆ, ಆಹ್ವಾನ ಪತ್ರಿಕೆಯನ್ನು ಕಣ್ಣಾರೆ ನೋಡುವವರೆಗೂ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗುತ್ತದೆನ್ನುವುದು ನನಗೆ ಗೊತ್ತಿರಲಿಲ್ಲ... ಇದನ್ನು ನಾನು ಸಂಘಟಕರ ಲೋಪವನ್ನು ಸೂಚಿಸಲು ಹೇಳುತ್ತಿಲ್ಲ. ಬದಲಿಗೆ, ಲೋಹಿಯಾ, ಗೋಪಾಲಗೌಡರಂತಹ ಹಿರಿಯ ನಾಯಕರಿಂದ ಹಿಡಿದು ರಾಮದಾಸರವರೆಗೆ ನಮ್ಮ ಬಹುಪಾಲು ಸಮಾಜವಾದಿಗಳು ಅನಿರೀಕ್ಷಿತ ಅನಾರೋಗ್ಯ ಹಾಗೂ ಅಕಾಲಿಕ ಮರಣಕ್ಕೆ ತುತ್ತಾಗುತ್ತಿರುವುದಕ್ಕೆ, ಹತ್ತಾರು ವರ್ಷಗಳಿಂದ ಸಾರ್ವತ್ರಿಕವಾಗಿ ನಮ್ಮ ಬಹುಪಾಲು ಎಲ್ಲ ಪ್ರಗತಿಪರ ಚಟುವಟಿಕೆಗಳು ಮತ್ತು ನಿರ್ದಿಷ್ಟವಾಗಿ ಸಮಾಜವಾದಿ ಚಟುವಟಿಕೆಗಳು ಹೀಗೆ ಅವ್ಯವಸ್ಥಿತವಾಗಿ, ಯಾವುದೇ ನಿರಂತರತೆ ಇಲ್ಲದೆ– ಒಂದು ಸಮಗ್ರ ಗುರಿಯಿಲ್ಲದೆ– ದಿನವಹಿ ಆಧಾರದ ಮೇಲೆ ನಡೆದುಕೊಂಡು ಬರುತ್ತಿರುವುದೂ ಒಂದು ಕಾರಣವಿರಬಹುದಲ್ಲವೇ ಎಂದು ಸೂಚಿಸಲು ಮಾತ್ರ, ದಯವಿಟ್ಟು ಯೋಚಿಸಿ.

ರಾಮದಾಸ್ ಸ್ವತಃ ಹೀಗಿರಲಿಲ್ಲ. ತಮ್ಮ ವೈಯುಕ್ತಿಕ ಬದುಕಿನಲ್ಲಿ ಸ್ವಲ್ಪ ಅಶಿಸ್ತಿನ ಮನುಷ್ಯರಾಗಿದ್ದಂತೆ ತೋರಿದರೂ, ತಾನೇ ಕಾರ್ಯಕ್ರಮವೊಂದನ್ನು ಸಂಘಟಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಾಗ ಸಕಲ ವಿವರಗಳ ಕಡೆಗೂ ಗಮನ ನೀಡಿ

ಕಾರ್ಯಕ್ರಮಕ್ಕೊಂದು ಗುರಿ ಒದಗಿಸುತ್ತಿದ್ದರಲ್ಲದೆ, ಅದು ಆ ಗುರಿ ಮುಟ್ಟುವಂತೆ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದರು. ಆ ಸಂದರ್ಭದಲ್ಲಿನ ಅವರ ಪೇಚಾಟವನ್ನು ನೋಡಿ ನಮಗೇ ಕನಿಕರ ಮೂಡುತ್ತಿತ್ತು! ಅವರ ಸಮಾಜವಾದಿ ಬದ್ಧತೆಯೂ ಅಷ್ಟೆ. ಸಮಾಜವಾದಿ ಚಟುವಟಿಕೆಗೆ ಸಂಬಂಧಿಸಿದಂತೆ ಯಾರೇ ಎಲ್ಲಿಗೇ ಕರೆಯಲಿ, ಯಾವುದೇ ನೆಪ ಹೇಳದೆ– ಹಲವು ಬಾರಿ ತೀವ್ರ ಅನಾರೋಗ್ಯದ ನಡುವೆಯೂ– ಸಕಾಲದಲ್ಲಿ ಹಾಜರಾಗಿ ತಮಗನ್ನಿಸಿದ್ದನ್ನು ನಿಷ್ಠುರವಾಗಿ ಹೇಳಿ ಬರುತ್ತಿದ್ದರು ಮತ್ತು ಇಂತಹ ಕಾರ್ಯಕ್ರಮಗಳಲ್ಲಿ ತೆಗೆದುಕೊಳ್ಳುತ್ತಿದ್ದ ನಿರ್ಣಯಗಳಿಗಳಿಗೆ ಬದ್ಧರಾಗಿರುತ್ತಿದ್ದರು. ಅಷ್ಟೇ ಅಲ್ಲ, ಲೋಹಿಯಾ ಕಾಲದ ಸಮಾಜವಾದಿಯಾದ ಅವರು ಸಮಾಜವಾದಿ ತತ್ವದ ಬಗ್ಗೆ ಎಷ್ಟು ಆಳವಾದ ತಿಳುವಳಿಕೆ ಮತ್ತು ಸ್ಪಷ್ಟತೆ ಹೊಂದಿದ್ದರೆಂದರೆ, ಸಮಾಜವಾದಿ ತತ್ವ ಇತ್ತೀಚಿನ ಜನಪ್ರಿಯ ರಾಜಕಾರಣಕ್ಕೆ ಸಿಕ್ಕಿ ದಿಕ್ಕಾಪಾಲಾಗಿ ಹೋಗಲಾರಂಭಿಸಿದ ಸಂದರ್ಭದಲ್ಲಿ, ಯಾವ ಗೊಂದಲಕ್ಕೂ ಸಿಗದೆ ತಮಗನ್ನಿಸಿದ್ದನ್ನು ನೇರವಾಗಿ ಹೇಳುವ ದಿಟ್ಟತನವನ್ನು ಉಳಿಸಿಕೊಂಡಿದ್ದರು.

ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ ಜಾತಿ ವಿನಾಶದ ಸಮಾಜವಾದಿ ತತ್ವವು ಸಾಮಾಜಿಕ ನ್ಯಾಯ ಚಳುವಳಿಯೆಂಬ ಮೀಸಲಾತಿ ವಿಸ್ತರಣೆಯ ಚಳುವಳಿಯಾಗಿ ಕುಬ್ಜಗೊಂಡು ಜಾತಿ ಸಮಾನತೆಯನ್ನು ಪ್ರತಿಪಾದಿಸತೊಡಗಿದಾಗ, ರಾಮದಾಸ್ ಅದನ್ನು ಕಟುವಾಗಿ ಖಂಡಿಸಿದರು. ಈ ಸಂಬಂಧ ಅವರು ಕರ್ನಾಟಕದಲ್ಲಿ ಇಂತಹ ಸಾಮಾಜಿಕ ನ್ಯಾಯ ಚಳುವಳಿಗೆ ಚಾಲನೆ ನೀಡಿದ ಹಾವನೂರ್ ವರದಿಯ ಉದ್ದೇಶದ ಬಗೆಗೇ ತಮ್ಮ ಭಿನ್ನಾಭಿಪ್ರಾಯವನ್ನು (ಶಿವಮೊಗ್ಗದ 'ಬಹುಮತ ಸಂಘಟನೆ'ಗೆ ನೀಡಿದ ಧ್ವನಿಮುದ್ರಿತ ಸಂದರ್ಶನವೊಂದರಲ್ಲಿ) ದಾಖಲಿಸಲು ಹಿಂಜರಿಯಲಿಲ್ಲ. ಹಾವನೂರ್ ವರದಿಯ ಶಿಫಾರ್ಸುಗಳನ್ನು ಅವರು ಸ್ವಾಗತಿಸಿದರಾದರೂ, ವರದಿ ಜಾತಿ ವಿನಾಶಕ್ಕೆ ಬದಲು ಜಾತಿ ಸಮಾನತೆಯ ಗುರಿಯಿಟ್ಟುಕೊಂಡಿದ್ದುದರ ಬಗೆಗೆ ಅವರ ತೀವ್ರ ಅಸಮಾಧಾನವಿತ್ತು. ಹಾಗೇ ಪ್ರೊ॥ ರವಿವರ್ಮ ಕುಮಾರ್‌ರಂತಹ ಹಾವನೂರ್‌ವಾದಿಗಳು ಜನಸಂಖ್ಯಾಧಾರಿತ ಮೀಸಲಾತಿಯ ಪ್ರಸ್ತಾಪ ಮಾಡಿದಾಗ, ಅದು ಸಾಮಾಜಿಕ ಸ್ಥಗಿತತೆಗೆ ಕಾರಣವಾಗುತ್ತದೆಯೆಂದು ಅದರ ವಿರುದ್ಧ (೨೦೦೨ರಲ್ಲಿ ಚಿತ್ರದುರ್ಗದಲ್ಲಿ ನಡೆದ ದಿ॥ ಬಿ. ಕೃಷ್ಣಪ್ಪ ನೆನಪಿನ ಕಾರ್ಯಕ್ರಮವೊಂದರಲ್ಲಿ) ಎಚ್ಚರಿಕೆ ನೀಡಿದರು. ಇತ್ತೀಚೆಗೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆಂದು ಒತ್ತಾಯಿಸುವ ಆಂದೋಲನ ಆರಂಭವಾದಾಗಲೂ, ರಾಮದಾಸ್ ತಮ್ಮ ಹಲವು ಸಮಾಜವಾದಿ ಗೆಳೆಯರ ಪಕ್ಷಾಂತರದಿಂದ ವಿಚಲಿತರಾಗದೆ, ಅದನ್ನು ವಿರೋಧಿಸಿದರು. ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ಹೋರಾಡಲು ಮಾತೃಭಾಷೆಗಳನ್ನು ಬಲಪಡಿಸಬೇಕಾದುದೂ ಮುಖ್ಯವೆಂದು ಭಾವಿಸಿದ್ದ ಅವರು; ೨೦೦೩ರಲ್ಲಿ ಈ ಸಂಬಂಧ ನಾನು ಬರೆದಿದ್ದ ಕಿರು ಪುಸ್ತಕದ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ, ಶಿಕ್ಷಣದಲ್ಲಿ ಮಾತೃಭಾಷೆಯ ಪ್ರಾಥಮಿಕತೆ ಕುರಿತ ಸಮಾಜವಾದಿ ತತ್ವದ ಬಗೆಗಿನ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದರು.

ಹೀಗೆ ಸಮಾಜವಾದಿ ಚಳುವಳಿ ಕೇವಲ ಹಿಂದುಳಿದ ವರ್ಗಗಳ ಜಾತಿ ರಾಜಕಾರಣವಾಗಿ ಅವನತಿಗೊಳ್ಳುತ್ತಿದ್ದಾಗ, ರಾಮದಾಸ್ ಸಮಾಜವಾದಿ ಚಳುವಳಿ ಅದಕ್ಕಿಂತ ದೊಡ್ಡದು ಎಂಬ ಎಚ್ಚರದೊಂದಿಗೆ ತತ್ಕಾಲೀನ ಬೆಳವಣಿಗೆಗಳ ಬಗ್ಗೆ ಸ್ಪಂದಿಸುತ್ತಿದ್ದರು. ಇತ್ತೀಚೆಗೆ ಅವರು ಪದೇ ಪದೇ ಹೇಳುತ್ತಿದ್ದ ಮಾತೆಂದರೆ, 'ಅಭಿವೃದ್ಧಿ ಎಂಬುದು ಒಂದು ಭ್ರಮೆ' ಎಂಬುದು. (ವಿವರಗಳಿಗಾಗಿ ಎನ್.ಕೆ. ಹನುಮಂತಯ್ಯ ಅವರೊಡನೆಯ ಮಾತುಕತೆಯನ್ನು ನೋಡಿ: 'ಊರುಕೇರಿ' ಪತ್ರಿಕೆ) 'ಚಾರ್ವಾಕ'ರೆನಿಸಿ ಬದುಕಿನ ಭೌತವಾದಿ ಸ್ವರೂಪದಲ್ಲೇ ನಂಬಿಕೆಯಿರಿಸಿದ್ದ ರಾಮದಾಸ್, ಮನುಷ್ಯನ ಸಾಮಾನ್ಯ ಸುಖ– ಸಂತೋಷಗಳ ಬಗ್ಗೆ ವೈರಾಗ್ಯ ಭಾವವನ್ನೇನೂ ತಾಳಿರಲಿಲ್ಲವಾದರೂ; ಜಾಗತೀಕರಣ ಪ್ರತಿಪಾದಿಸಿ ಜಾರಿಗೆ ತರಲಾರಂಭಿಸಿರುವ 'ಅಭಿವೃದ್ಧಿ' ಕುರಿತು ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಪರಿಸರ ಚಳುವಳಿ ಕುರಿತು ವಿಶೇಷ ಆಸಕ್ತಿ ತಾಳಿದ್ದ ಅವರು, ನೆಲ– ನೀರು– ಗಾಳಿ– ಆಕಾಶ– ಪಶು– ಪಕ್ಷಿ– ಗಿಡ– ಮರಗಳನ್ನು ನಾಶ ಮಾಡುತ್ತಾ ಬರುತ್ತಿರುವ 'ಅಭಿವೃದ್ಧಿ' ಬೇಡವೇ ಬೇಡ ಎನ್ನುತ್ತಿದ್ದರು. ಆ ಮೂಲಕ ಅವರು ಈಗ ಸಮಾಜವಾದಿಗಳಿಗೆ ಮರೆತೇಹೋಗಿರುವಂತಿರುವ ಸಮಾಜವಾದದ ಜಾಗತಿಕ ಆಯಾಮದ ಕಡೆ ಪರೋಕ್ಷವಾಗಿಯಾದರೂ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರು. ಕಳೆದ ಮಾರ್ಚ್‌ನಲ್ಲಿ ಚಿತ್ರದುರ್ಗದಲ್ಲಿ 'ಅಭಿರುಚಿ' ವೇದಿಕೆಯಡಿ ಏರ್ಪಡಿಸಲಾಗಿದ್ದ 'ಲೋಹಿಯಾ ನೆನಪು' ಕಾರ್ಯಕ್ರಮದಲ್ಲಿ ರಾಮದಾಸ್ ಮಾತನಾಡಿದ್ದು, ಲೋಹಿಯಾ ಬಗೆಗೂ ಅಲ್ಲ, ಸಮಾಜವಾದದ ಬಗೆಗೂ ಅಲ್ಲ; ಅಭಿವೃದ್ಧಿಯ ಹೆಸರಲ್ಲಿ ನಾಶವಾಗುತ್ತಿರುವ ಪರಿಸರದ ಬಗ್ಗೆ ಮತ್ತು ಈ ಕುರಿತ ಯುವಜನರ ಅನಾಸಕ್ತಿಯ ಬಗೆಗೆ.

ಹಾಗೆ ನೋಡಿದರೆ, ಇಂದು ಸಮಾಜವಾದಿ ಚಳುವಳಿ ಪುನಶ್ಚೇತನಗೊಳ್ಳುವ ಸಾಧ್ಯತೆ ಇದ್ದರೆ, ಅದು ಪರಿಸರದ ಪ್ರಶ್ನೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ತನ್ನ ಸಂಕಥನವನ್ನು ಪುನಾರಚಿಸಿಕೊಳ್ಳುವ ಮೂಲಕ ಮಾತ್ರ. ಇತ್ತೀಚೆಗೆ ಬ್ಯಾಕಾಂಕ್‌ನಲ್ಲಿ ನಡೆದ ಜಾಗತಿಕ ಪರಿಸರ ಸಮ್ಮೇಳನದಲ್ಲಿ ಕ್ಯೂಟೋ ಸಮ್ಮೇಳನದ ಘೋಷಣೆಯನ್ನೇ ಪುನರುಚ್ಛರಿಸುತ್ತಾ, ಭೂಮಿಯನ್ನು ಉಳಿಸಲು ಇನ್ನು ಏಳು ವರ್ಷಗಳು ಮಾತ್ರ ಬಾಕಿಯಿವೆ ಎಂದು ಸ್ವತಃ ವಿಜ್ಞಾನಿಗಳೇ ಕಟು ಎಚ್ಚರಿಕೆ ನೀಡಿದ್ದಾರೆ. ಆದರೂ, ಧರೆಯ ಆತಂಕಕಾರಿ ಬಿಸಿಯೇರಿಕೆಗೆ ಭಾರತ ಮತ್ತು ಚೀನಾದಂತಹ ಅಭಿವೃದ್ಧಿಶೀಲ ದೇಶಗಳ ಹಿಂದುಳಿದ ತಂತ್ರಜ್ಞಾನವೇ ಕಾರಣ ಎಂದು ವಾದಿಸುತ್ತಾ, ತಮ್ಮ ದೇಶದ ಜನರ ಅತಿ ಗ್ರಾಹಕವಾದಿ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಲಿಚ್ಛಿಸದ ಅಮೆರಿಕಾದಂತಹ ಅಭಿವೃದ್ಧಿಗೊಂಡ ಹಠಮಾರಿ ದೇಶಗಳು ಒಂದು ಕಡೆ. ಈ ಬಗೆಗಿನ ವರದಿಗಳೆಲ್ಲ ಉತ್ಪ್ರೇಕ್ಷಿತವೆಂದು ಭಾವಿಸುತ್ತಾ, ಈಗ ತಾನೇ ಅತ್ಯಾಧುನಿಕ ಸುಖ– ಸವಲತ್ತುಗಳ ಪ್ರಪಂಚಕ್ಕೆ ತೆರೆದುಕೊಂಡು ಅವನ್ನು ಸುಲಭವಾಗಿ ಬಿಡಲಾಗದ ಸಂಕಟದಲ್ಲಿರುವ ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಜನಸ್ತೋಮದ ಹಪಾಹಪಿ ಇನ್ನೊಂದು ಕಡೆ. ಹೀಗೆ ಜಗತ್ತು ಜಾಗತೀಕರಣದ ಅತ್ಯುತ್ಸಾಹದಲ್ಲಿ ಅದರ

ಲೌಕಿಕ ಬೆರಗಿಗೆ ಸಿಕ್ಕಿ ಅವಿವೇಕಿಯಂತೆ ವರ್ತಿಸುತ್ತ ಭೂಮಿಯನ್ನೇ ನಾಶ ಮಾಡಹೊರಟಿರುವಾಗ, ಸಮಾಜವಾದ ತನ್ನ ಹಿರಿತನಕ್ಕೆ ತಕ್ಕ ವಿವೇಕದೊಂದಿಗೆ ಜಗತ್ರಕ್ಷಕ ತತ್ವವಾಗಿ ಹೊಸದಾಗಿ ಹೊರಹೊಮ್ಮಬೇಕಿದೆ. ಇದು ಸಮಾಜವಾದದ ಪುನರನ್ವೇಷಣೆ ಕೂಡ.

ಸಮಾಜವಾದಿ ಚಳುವಳಿಯನ್ನು ಭಾರತದಲ್ಲಿ ಕೇವಲ ರಾಷ್ಟ್ರೀಯ ಚೌಕಟ್ಟಿನ ಸಾಮಾಜಿಕ ಚಳುವಳಿಯ ಮಟ್ಟಕ್ಕಷ್ಟೇ ಸೀಮಿತಗೊಳಿಸಿ ಅದರ ಸಾಧ್ಯತೆಗಳೆನ್ನೆಲ್ಲ ಸೂರೆ ಮಾಡಿ ದಿಕ್ಕೆಟ್ಟು ಕೂತಿರುವ ಸಮಾಜವಾದಿಗಳು, ಈಗಲಾದರೂ ಅದರ ಜಾಗತಿಕ ಸ್ವರೂಪದಲ್ಲಿ ಅಡಗಿರುವ ನಿತ್ಯಸತ್ಯದ ಕಡೆ ಗಮನ ಹರಿಸಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಮೂಲಭೂತವಾಗಿ ಹೊಸ ಅಭಿವೃದ್ಧಿ ಮೀಮಾಂಸೆಯನ್ನು ಆಧರಿಸಿದ ಒಂದು ಜಾಗತಿಕ ರಾಜಕೀಯ ಚಳುವಳಿಯೇ ಆಗಿತ್ತು. ಅದನ್ನು ಹಾಗೆ, ಒಂದು ಹೊಸ ಜಾಗತಿಕ ನಾಗರೀಕತೆಯ ಅಸ್ತಿವಾರದಂತೆ ರೂಪಿಸಲೂ ಲೋಹಿಯಾ ಶ್ರಮಿಸಿದ್ದರು. ವೈಜ್ಞಾನಿಕ ಅನ್ವೇಷಣೆಗಳ ನಿರಂತರ ಅನ್ವಯವನ್ನಾಧರಿಸಿದ ತಂತ್ರಜ್ಞಾನ ಸೃಜಿಸುವ ಸದಾ ಏರುತ್ತಾ ಹೋಗುವ ಜೀವನ ಮಟ್ಟವು ತನ್ನ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಅಗತ್ಯಗಳಿಗಾಗಿ ಜಗತ್ತಿನ ಒಂದು ಭಾಗವನ್ನು ಒಂದಲ್ಲ ಒಂದು ರೂಪದಲ್ಲಿ ವಸಾಹತುವನ್ನಾಗಿ ಮಾಡಿಕೊಳ್ಳುವ ಅನಿವಾರ್ಯತೆಯನ್ನುಂಟು ಮಾಡಿ, ಒಟ್ಟಾರೆ ಮಾನವತೆಯ ಮಹೋನ್ನತಿಗೆ ಭಂಗ ತರುವುದೆಂದು ಅವರು ವಿಶ್ಲೇಷಿಸಿದ್ದರು. ಈ ಹಿನ್ನೆಲೆಯಲ್ಲಿ ಇಡೀ ಜಗತ್ತು ಅನುಸರಿಸಬಹುದಾದ ಸಣ್ಣ ಪ್ರಮಾಣದ ತಂತ್ರಜ್ಞಾನದ ಮೂಲಕ ಸಾಧಿಸಬಹುದಾದ ಮಿತಿಗಳುಳ್ಳ ಒಂದು ಸಭ್ಯ-ಸರಳ ಜೀವನ ಮಟ್ಟವನ್ನು ಲೋಹಿಯಾ ಪ್ರತಿಪಾದಿಸಿದ್ದರು. ಆ ಮೂಲಕ ಅವರ ಈ ಜಾಗತಿಕ ದೃಷ್ಟಿಯ ಸಮಾಜವಾದ, ಮನುಷ್ಯನ ಮೂಲಭೂತ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಕುರಿತಂತೆ ಬಂಡವಾಳವಾದ ಹಾಗೂ ಕಮ್ಯುನಿಸಂಗಳೆರಡೂ ಒಡ್ಡಬಹುದಾದ ಅಪಾಯಗಳ ವಿರುದ್ಧ ರಕ್ಷಣೆ ಒದಗಿಸಬಲ್ಲ ಹೊಸ ಜೀವನ ಕ್ರಮದ ಹೊಳಹನ್ನೂ ನೀಡಿತ್ತು.

ಆದರೆ ಚರಿತ್ರೆಯ ಅನಿವಾರ್ಯ ಒತ್ತಡಗಳಿಗೆ ಹಾಗೂ ಪಿತೂರಿಗೆ ಸಿಕ್ಕ ಸಮಾಜವಾದ, ಕಮ್ಯುನಿಸಂ ಜೊತೆಗೇ ಅಪ್ರಸ್ತುತೀಕರಣಕ್ಕೆ ಒಳಗಾದದ್ದು ಮಾತ್ರ ವಿಷಾದಕರ. ಇದಕ್ಕೆ ಭಾರತವೂ ಸೇರಿದಂತೆ ಜಗತ್ತಿನಾದ್ಯಂತದ ಸಮಾಜವಾದಿಗಳು ಬಂಡವಾಳವಾದ ಹಾಗೂ ಕಮ್ಯುನಿಸಂಗಳ ವಿರುದ್ಧ ಹೋರಾಡಿದಷ್ಟು ಬಲವಾಗಿ ಸ್ವಂತ ತಮ್ಮ ತತ್ವವನ್ನು ಕಾರ್ಯಕ್ರಮಗಳ ರೂಪದಲ್ಲಿ ಪ್ರತಿಪಾದಿಸುವಲ್ಲಿ ಸೋತು ಹೋದುದೂ ಕಾರಣವಾಗಿದೆ. ಆದರೆ ಇಂದು ಕಮ್ಯುನಿಸಂ ತನ್ನ ನೆನಪುಗಳ ಮೂಲಕ ಜಗತ್ತನ್ನು ದುಃಸ್ವಪ್ನದಂತೆ ಕಾಡುವಂತಾಗಿ, ಬಂಡವಾಳವಾದವೀಗ ಜಾಗತೀಕರಣದ ರೂಪದಲ್ಲಿ ಭೂಮಿಯನ್ನೇ ತಿಂದು ತೇಗುವ ಅಪಾಯವನ್ನೊಡ್ಡಿರುವಾಗ; ಮಧ್ಯಮ ಮಾರ್ಗವೆನಿಸಿರುವ ಸಮಾಜವಾದ ಒಂದು ಜಾಗತಿಕ ನೈತಿಕ ಶಕ್ತಿಯಾಗಿ ಹೊರಹೊಮ್ಮುವುದಾದರೆ, ಜನ ಅದನ್ನು ನಿಸ್ಸಂದೇಹವಾಗಿ ಸ್ವಾಗತಿಸಿಯಾರು.

ಭಾರತದಲ್ಲಿನ ರೈತರ ಆತ್ಮಹತ್ಯೆಯ ಜ್ವಲಂತ ಸಮಸ್ಯೆಗೆ ಇಂದು ಇಂತಹ ಒಂದು ನೈತಿಕ ಸಾಂತ್ವನದ ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯಗಳು ಎಷ್ಟೇ ದೊಡ್ಡ ದೊಡ್ಡ ಆರ್ಥಿಕ ಪ್ಯಾಕೇಜುಗಳನ್ನು ಪ್ರಕಟಿಸಿದರೂ, ರೈತರ ಆತ್ಮಹತ್ಯೆ ನಿಲ್ಲದಿರುವುದರ ಹಿಂದೆ ಜಾಗತೀಕರಣದ ಅನೈತಿಕತೆಯ ಒಂದು ದೊಡ್ಡ ಮಹಾಭಾರತವೇ ಇದೆಯೆಂಬುದನ್ನು ನಾವು ಮರೆಯಬಾರದು. ಹಾಗಾಗಿಯೇ ನಾನು ಶೂನ್ಯ ಬಂಡವಾಳದ ಕೃಷಿ ಇತ್ಯಾದಿ ಪರ್ಯಾಯ ಕೃಷಿ ಪದ್ಧತಿಗಳನ್ನು ಪ್ರಚುರಪಡಿಸುತ್ತಿರುವ ಸ್ವಾಮಿ ಆನಂದರಂತಹ ಗೆಳೆಯರಿಗೆ, ಅದನ್ನು ರೈತನ ಸಮಗ್ರ ಎಚ್ಚರದ ಭಾಗವಾಗಿ ಒಂದು ರಾಜಕೀಯ ಚಳುವಳಿಯಂತೆಯೇ ನಡೆಸಿಕೊಂಡು ಹೋಗಿ ಎಂದು ಹೇಳುತ್ತಿರುವುದು. ಜಾಗತೀಕರಣ ಇಡೀ ಜಗತ್ತನ್ನು ನಗರೀಕರಣಕ್ಕೊಳಪಡಿಸಿ, ಕೃಷಿ ಸಂಸ್ಕೃತಿ ಆಧಾರಿತ ಗ್ರಾಮ ಬದುಕಿನ ನೆಲೆಗಳನ್ನು ನಾಶಪಡಿಸಹೊರಟಿದೆ. ಈ ನಾಶದ ಒಂದು ಭಾಗವಾಗಿ ರೈತರ ಆತ್ಮಹತ್ಯೆ ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಹೋದಲ್ಲಿ, ರೈತರ ಆತ್ಮಹತ್ಯೆಯನ್ನೂ ತಡೆಯಲಾಗದು ಹಾಗೂ ಅದರ ಮುಂದಿನ ಪರಿಣಾಮವಾಗಿ ಕೃಷಿ ಸಂಸ್ಕೃತಿ ಆಧಾರಿತ ದೇಶಗಳ 'ಆತ್ಮ'ಹತ್ಯೆಯನ್ನೂ– ಬಹುಶಃ ಚೀನಾ ಆಡಳಿತ ಮಾದರಿಯ ಹೊರತಾಗಿ ಇನ್ನಾವ ಆಡಳಿತ ಮಾದರಿಯ ಮೂಲಕವೂ– ತಡೆಯಲಾಗದು.

ಆದುದರಿಂದ 'ಅಭಿವೃದ್ಧಿ' ಕುರಿತಂತೆ ನಾವಿಂದು ಆಮೂಲಾಗ್ರವಾಗಿ ಪುನರಾಲೋಚಿಸುವ ಅಗತ್ಯವಿದೆ. ಅತಿಗೆ ಹೋಗಿ ಹೇಳುವುದಾದರೆ, 'ಅಭಿವೃದ್ಧಿ ಇನ್ನು ಸಾಕು' ಎಂಬ ದಿಟ್ಟ ಪ್ರಣಾಳಿಕೆಯ ಆಧಾರದ ಮೇಲೇ ಸಮಾಜವಾದವಿಂದು ತನ್ನ ಹೋರಾಟವನ್ನು ಆರಂಭಿಸಬೇಕಿದೆ. ಈವರೆಗಿನ 'ಊರ್ಧ್ವ' ಅಭಿವೃದ್ಧಿಯು 'ಅಗಲ'ವಾಗಿ ಹರಡಿಕೊಳ್ಳುವ ವಿವೇಕ ಕಂಡುಕೊಳ್ಳುವವರೆಗೆ, 'ಊರಿನ ಮರ ಕಡಿದು ಮನೆಗೆ ಹವಾ ನಿಯಂತ್ರಕವನ್ನು ಹಾಕಿಸಿಕೊಳ್ಳುವ' ವಿಕ್ಷಿಪ್ತ ಅಭಿವೃದ್ಧಿಗೆ ಸಾಕು ಎಂದು ಹೇಳುವ ಧೈರ್ಯವನ್ನು ಸಮಾಜವಾದ ಸಂಘಟಿಸಿಕೊಳ್ಳಬೇಕಿದೆ. ಲೋಹಿಯಾ ಪ್ರತಿಪಾದಿಸಿದ ಸರಳ– ಸಭ್ಯ ಜೀವನ ಮಟ್ಟದ ಕಾರ್ಯಶೀಲ 'ಮಾದರಿ'ಗಳನ್ನು ಸಮಕಾಲೀನ ಜೀವನದ ಮಟ್ಟಿಗೆ ಅಸಂಗತವೂ, ಅವ್ಯಾವಹಾರಿಕವೂ ಅನ್ನಿಸದ ರೀತಿಯಲ್ಲಿ ನಿರೂಪಿಸಿ ಪ್ರಚಾರ ಮಾಡುವುದೇ, ಸಮಾಜವಾದಿ ಚಳುವಳಿಯ ಸದ್ಯದ ಧರ್ಮವಾಗಬೇಕಿದೆ. ಹಿರಿಯ ಗೆಳೆಯ ರಾಮದಾಸರ ನೆನಪಿನಲ್ಲಿ ಮತ್ತು ನೆಪದಲ್ಲಿ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ನಿಮಗೆಲ್ಲ ವಂದಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

(ಮೈಸೂರಿನ 'ಪ್ರಗತಿಪರ ಸಂಘಟನೆಗಳ ಒಕ್ಕೂಟ'ವು ಇದೇ ಜುಲೈ ಒಂದರಂದು ಏರ್ಪಡಿಸಿದ್ದ 'ಪ್ರೊ॥ ಕೆ.ರಾಮದಾಸ್: ಒಂದು ನೆನಪು' ಕಾರ್ಯಕ್ರಮದಲ್ಲಿನ 'ಚಿಂತನ ಗೋಷ್ಠಿ'ಯಲ್ಲಿ ಆಡಿದ ಮಾತುಗಳು)

ಜುಲೈ ೨೦, ೨೦೦೭

ಇದು ಸಂಪೂರ್ಣ 'ಸಮ್ಮಿಶ್ರ ಲೂಟಿ' ರಾಜಕಾರಣ...

ಬಹುಶಃ ಈ ಅಂಕಣವನ್ನು ನೀವು ಓದುವ ಹೊತ್ತಿಗೆ ನಮ್ಮ ಹೊಸ ರಾಷ್ಟ್ರಪತಿ ಯಾರೆಂದು ಗೊತ್ತಾಗಿರುತ್ತದೆ. ಪ್ರತಿಭಾ ಪಾಟೀಲ್ ಗೆಲ್ಲುವ ಅಭ್ಯರ್ಥಿಯೆಂದು ಸಮೂಹ ಮಾಧ್ಯಮಗಳು ಈಗಾಗಲೇ ಮತಗಳ ಲೆಕ್ಕಾಚಾರ ಹಾಕಿ ಘೋಷಿಸಿವೆ. ಮಾಯಾವತಿಯ ವಿರುದ್ಧ ತಾಜ್ ಹಗರಣದ ಮೊಕದ್ದಮೆ ವಿಚಾರಣೆಗೆ ರಾಜ್ಯಪಾಲರು ಅನುಮತಿ ನಿರಾಕರಿಸುವಂತೆ ನೋಡಿಕೊಳ್ಳುವ ಮೂಲಕ ಬಿ.ಎಸ್.ಪಿ. ಬೆಂಬಲವನ್ನು ಕಾಂಗ್ರೆಸ್ ಈಗಾಗಲೇ ಖಚಿತಪಡಿಸಿಕೊಂಡಿರುವುದರಿಂದ ಮತ್ತು ತೃತೀಯ ರಂಗದ ಪಕ್ಷಗಳು ಈ ಚುನಾವಣೆಯಲ್ಲಿ ಮತ ಚಲಾಯಿಸದೇ ಇರುವ ತೀರ್ಮಾನವನ್ನು ಕೈಗೊಂಡಿರುವುದರಿಂದ. ಕಾಂಗ್ರೆಸ್ ಅಭ್ಯರ್ಥಿ ಪ್ರತಿಭಾ ಪಾಟೀಲ್ ಗೆಲವು ಇನ್ನಷ್ಟು ನಿಚ್ಚಳವಾಗಿರುವಂತೆ ತೋರುತ್ತಿದೆ. ಆದರೆ, ಜಾತಿ ಲೆಕ್ಕಾಚಾರವೂ ಈ ಬಾರಿಯ ಚುನಾವಣೆಯಲ್ಲಿ ಚಾಲನೆಗೊಂಡಿರುವುದರಿಂದ, ಅಮರ್ ಸಿಂಗ್‌ರಂತಹ ಪ್ರಳಯಾಂತಕ ರಾಜಕೀಯ ದಲ್ಲಾಳಿಗಳು ನಟವರ್ ಸಿಂಗ್‌ರಂತಹ ಅತಂತ್ರ ರಾಜಕಾರಣಗಳ ಮೂಲಕ ತೆರೆಮರೆಯಲ್ಲಿ ಶೆಖಾವತ್ ಪರ ಕ್ಷತ್ರಿಯ ರಾಜಕಾರಣ ಮಾಡುತ್ತಿರುವ ಸೂಚನೆಗಳೂ ದೊರಕಿವೆ. ಇದರಿಂದಾಗಿಅಂತಿಮ ಫಲಿತಾಂಶ ಏನೇ ಆದರೂ, ಈವರೆಗೆ ತನ್ನ ಪಾವಿತ್ರ್ಯ ಉಳಿಸಿಕೊಂಡು ಬಂದಿದ್ದ ರಾಷ್ಟ್ರಪತಿ ಚುನಾವಣೆಯೂ ಈ ಬಾರಿ ಮಲಿನಗೊಳ್ಳುವ ಸಾಧ್ಯತೆಯನ್ನು ತೆರೆದಿಟ್ಟಿದೆ. ಜೊತೆಗೆ, ಹಾಲಿ ರಾಷ್ಟ್ರಪತಿ ಕಲಾಂ ಅವರು ಮೊದಲು ತಾವು ಎರಡನೇ ಅವಧಿಗೆ ಅಭ್ಯರ್ಥಿಯಲ್ಲ ಎಂದು ಘೋಷಿಸಿ, ನಂತರ ಗೆಲುವು ಖಚಿತವಾದರೆ ಸ್ಪರ್ಧಿಸಲು ಸಿದ್ಧ ಎಂಬ ಸಮಯಸಾಧಕ ಹೇಳಿಕೆ ನೀಡಿ, ವಾತಾವರಣವನ್ನು ಹದಗೆಡಿಸುವಲ್ಲಿ ತಮ್ಮ ಪಾತ್ರವನ್ನೂ ಸಮರ್ಥವಾಗಿ ನಿರ್ವಹಿಸಿದ್ದಾರೆ! ಹಾಗೆ ನೋಡಿದರೆ, ರಾಷ್ಟ್ರಪತಿ ಸ್ಥಾನಕ್ಕೆ ಈ ಚುನಾವಣೆಗಿಂತ ತುರುಸಿನ ಸ್ಪರ್ಧೆ ಈ ಹಿಂದೆ

ನಡೆದಿದೆಯಾದರೂ– ೧೯೬೭ರಲ್ಲಿ ಝಕೀರ್ ಹುಸೇನರ ವಿರುದ್ಧ ಸುಬ್ಬರಾವ್ ಹಾಗೂ ೧೯೬೯ರಲ್ಲಿ ಸಂಜೀವ ರೆಡ್ಡಿಯವರ ವಿರುದ್ಧ ವಿ.ವಿ. ಗಿರಿ– ಈ ಬಾರಿಯಷ್ಟು ಜಿಗುಪ್ಸೆಕರ ಪ್ರಚಾರ ಎಂದೂ ನಡೆದಿರಲಿಲ್ಲ. ಆಡಳಿತ ಅದಕ್ಷತೆ, ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದಿಂದ ಹಿಡಿದು ವ್ಯಭಿಚಾರದವರೆಗೆ ಅನೇಕ ರೀತಿಯ ಆಪಾದನೆಗಳು ಈ ಪ್ರಚಾರದಲ್ಲಿ ಸೇರಿಕೊಂಡು; ಯಾರೇ ರಾಷ್ಟ್ರಪತಿಯಾಗಿ ಆಯ್ಕೆಯಾಗಲಿ, ಅವರನ್ನು ರಾಷ್ಟ್ರ ಅನುಮಾನದಿಂದ ನೋಡುವ ಪರಿಸ್ಥಿತಿಯನ್ನು ನಮ್ಮ ರಾಜಕೀಯ ಪಕ್ಷಗಳು ಸೃಷ್ಟಿಸಿವೆ.

ಈ ಪರಿಸ್ಥಿತಿಗೆ ಮೂಲ ಕಾರಣ ಕಾಂಗ್ರೆಸ್ ಪಕ್ಷದ ಆಂತರಿಕ ಅಭದ್ರತೆಯ ರಾಜಕಾರಣವೇ ಆಗಿದೆ. ರಾಷ್ಟ್ರಪತಿ ಎನ್ನುವುದು ರಾಷ್ಟ್ರ ಜೀವನದ ಮೂರು ಮುಖ್ಯ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳಲ್ಲದೆ, ರಾಷ್ಟ್ರ ರಕ್ಷಣೆಯ ಹೊಣೆ ಹೊತ್ತಿರುವ ಸೇನೆಯ ಮೂರೂ ಪಡೆಗಳ ಮೇಲೆ ಆಧಿಪತ್ಯ ಹೊಂದಿರುವ ರಾಷ್ಟ್ರದ ಅತ್ಯುನ್ನತ ಸ್ಥಾನ. ಅಧಿಕಾರ ಚಲಾವಣೆಯ ಅಧಿಕಾರಗಳು ಸೀಮಿತವಾಗಿದ್ದರೂ, (ಇದಕ್ಕೆ ಕಾರಣಗಳೂ ಇವೆ) ರಾಷ್ಟ್ರ ಜೀವನವನ್ನು ರಾಜಕೀಯ ಮೇಲಾಟಗಳಿಂದ ರಕ್ಷಿಸಿ ಒಂದು ಸುಸ್ಥಿರ ಸ್ಥಿತಿಯಲ್ಲಿ ಕಾಪಾಡಿಕೊಂಡು ಹೋಗುವ ರಾಜಕೀಯ ಮುತ್ಸದ್ದಿತನದ ಪ್ರತೀಕವಾಗಿ ಈ ಸ್ಥಾನವನ್ನು ಸಂವಿಧಾನದಲ್ಲಿ ಸೃಷ್ಟಿಸಲಾಗಿದೆ. ಅಂತಹ ಸ್ಥಾನಕ್ಕೆ ಅಭ್ಯರ್ಥಿ ಆಯ್ಕೆ ಮಾಡುವಾಗ ಎಷ್ಟು ಜವಾಬ್ದಾರಿ, ಎಚ್ಚರಿಕೆ ಇರಬೇಕು. ಆದರೆ, ಶತಮಾನಕ್ಕೂ ಮೀರಿದ ರಾಜಕೀಯ ಚರಿತ್ರೆ ಇರುವ ಕಾಂಗ್ರೆಸ್, ಈ ಸ್ಥಾನವನ್ನು ರಾಷ್ಟ್ರದ ಹಿತ ಮರೆತು, ಮುಂದಿನ ದಿನಗಳಲ್ಲಿ ತನ್ನ ಅಧಿಕಾರಕ್ಕೆ ಸಂಚಕಾರ ಬರದಂತೆ ಖಚಿತಪಡಿಸಿಕೊಳ್ಳುವ ರೀತಿಯಲ್ಲಷ್ಟೇ ಭರ್ತಿ ಮಾಡಲು ನೋಡಿದೆ.

ಈ ಪಕ್ಷದ ಮೊದಲ ಆಯ್ಕೆ ಆಗಿದ್ದುದು, ಶಿವರಾಜ್ ಪಾಟೀಲ್. ಇವರು ಬೋಫರ್ಸ್ ಹಗರಣದ ಸಂಸದೀಯ ಜಂಟಿ ಸಮಿತಿಯ ಅಧ್ಯಕ್ಷರಾಗಿ, ನಂತರ ಲೋಕಸಭಾ ಅಧ್ಯಕ್ಷರಾಗಿ ನೆಹರೂ ಕುಟುಂಬದ ಕುಡಿಗಳನ್ನು ಅನೇಕ ಸಂಕಷ್ಟಗಳಿಂದ ಪಾರು ಮಾಡಿದವರು. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸೋತರೂ, ಇವರನ್ನು ಸೋನಿಯಾ ಗಾಂಧಿಯವರ ವಿಶೇಷ ಶಿಫಾರ್ಸಿನ ಮೇರೆಗೆ ರಾಜ್ಯಸಭೆಗೆ ಆಯ್ಕೆ ಮಾಡಿ ಆಯಕಟ್ಟಿನ ಗೃಹ ಖಾತೆಯ ಜವಾಬ್ದಾರಿಯನ್ನು ನೀಡಲಾಗಿದೆ! ಕಳೆದೆರೆಡು ಮೂರು ವರ್ಷಗಳಲ್ಲಿ ಅನೇಕ ಭಯೋತ್ಪಾದನೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ಇವರ ಮೇಲೆ ಅದಕ್ಷತೆಯ ಅನೇಕ ಟೀಕೆಗಳು ಹಾಗೂ ಸಚಿವ ಸಂಪುಟದಿಂದ ಕೈ ಬಿಡಬೇಕೆಂಬ ಬೇಡಿಕೆಗಳು ಕೇಳಿ ಬಂದಿದ್ದರೂ ಅಧಿಕಾರದಲ್ಲಿ ಮುಂದುವರಿಸಲಾಗಿದೆ. ಗೊತ್ತಲ್ಲ? ಅದೃಷ್ಟವಶಾತ್ ಇವರ ಅಭ್ಯರ್ಥಿತನವನ್ನು ಕಾಂಗ್ರೆಸ್ ಮೈತ್ರಿಕೂಟದ ಎಡ ಹಾಗೂ ಮಿತ್ರ ಪಕ್ಷಗಳು ಕಟುವಾಗಿ ವಿರೋಧಿಸಿದ್ದರಿಂದಾಗಿ ಕಾಂಗ್ರೆಸ್‌ಗೆ ಇದ್ದಕ್ಕಿದ್ದಂತೆ ಮಹಿಳೆಯರ ಬಗ್ಗೆ ಸಹಾನುಭೂತಿ ಉಕ್ಕಿ ಹರಿದು, ಪ್ರತಿಭಾ ಪಾಟೀಲರನ್ನು ತನ್ನ ಅಭ್ಯರ್ಥಿಯೆಂದು ಘೋಷಿಸಿದೆ!

ಪ್ರತಿಭಾ ಪಾಟೀಲರು ಮಹಿಳೆ ಎಂಬುದಕ್ಕಿಂತ ಹೆಚ್ಚಾಗಿ, ನೆಹರೂ ಕುಟುಂಬದ ಸಂಶಯಾತೀತ ನಿಷ್ಠಾವಂತೆ ಎಂಬುದೇ ಇವರ ಆಯ್ಕೆಗೆ ಮುಖ್ಯ ಕಾರಣವಾಗಿದ್ದಂತೆ ತೋರುತ್ತದೆ. ಏಕೆಂದರೆ, ಇವರಿಗೆ ಮುವ್ವತ್ತು ವರ್ಷಗಳ ಸುದೀರ್ಘ ರಾಜಕೀಯ ಜೀವನದ ಚರಿತ್ರೆಯಿದೆ ಎಂದು ಹೇಳಲಾಗುತ್ತಿದೆಯಾದರೂ, ಇವರು ತಮ್ಮ ಹೆಸರಿನಲ್ಲಲ್ಲದೆ ಇನ್ನೆಲ್ಲೂ ತಮ್ಮ ಪ್ರತಿಭೆಯನ್ನು ಪ್ರಕಾಶಿಸದೆ ಇರುವುದರಿಂದ, ಈ ಅಭ್ಯರ್ಥಿ ಯಾರೆಂದು ರಾಷ್ಟ್ರವೇ ಒಮ್ಮೆ ತನ್ನ ನೆನಪನ್ನು ಝಾಡಿಸಿಕೊಂಡು ನೋಡಿಕೊಳ್ಳಬೇಕಾದ ಪ್ರಮೇಯ ಬಂದಿದೆ! ಈ ದೃಷ್ಟಿಯಿಂದ ಎಡ ಹಾಗೂ ಮಿತ್ರ ಪಕ್ಷಗಳು ಮಹಿಳೆಯನ್ನು ಬೆಂಬಲಿಸುವ 'ಪ್ರಗತಿಪರತೆ'ಯ ಮೋಹಕ್ಕೆ ಒಳಗಾಗಿ, ತಮ್ಮ ತಾತ್ವಿಕ ಸ್ಪಷ್ಟತೆಯನ್ನೇ ಕಳೆದುಕೊಂಡು ರಾಷ್ಟ್ರಕ್ಕೆ ಅನ್ಯಾಯ ಮಾಡಿವೆ ಎಂದೇ ಹೇಳಬೇಕು.

ಪ್ರತಿಭಾ ಪಾಟೀಲರ ವಿರುದ್ಧ ಕೇಳಿ ಬಂದ ಅನೇಕ ಆಪಾದನೆಗಳ ನಂತರವಂತೂ; ಏನೇ ಆಗಲಿ, ಬಿ.ಜೆ.ಪಿ. ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗದ ಬೆಂಬಲ ಪಡೆದ ಹಿರಿಯ ನಾಯಕ ಶೆಖಾವತರೇ ಉತ್ತಮ ಅಭ್ಯರ್ಥಿಯಿರಬಹುದೆಂದು ರಾಷ್ಟ್ರ ಚಿಂತಿಸುತ್ತಿದ್ದಾಗ, ಅವರ ವಿರುದ್ಧವೂ ಕೇಳಿ ಬಂದ ಆಪಾದನೆಗಳು ರಾಷ್ಟ್ರವನ್ನು ಬೆಚ್ಚಿ ಬೀಳಿಸಿವೆ! ಇವರು ಉಪ್ಪಿನ ವ್ಯಾಪಾರಿಯೊಬ್ಬನಿಂದ ಲಂಚ ಪಡೆದು ಸೇವೆಯಿಂದ ಅಮಾನತ್ತುಗೊಂಡ ಪೋಲೀಸ್ ಪೇದೆಯಾಗಿ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದವರು. ದಾಖಲೆಗಳಲ್ಲಿರುವ ಈ ಸಂಗತಿಯ ಜೊತೆಗೆ, ಇವರು ರಾಜಸ್ಥಾನದಲ್ಲಿ ಮಂತ್ರಿ–ಮುಖ್ಯಮಂತ್ರಿಯಾಗಿದ್ದಾಗ ಎಸಗಿದ್ದೆಂದು ಹೇಳಲಾದ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಹಾಗೂ ಲೈಂಗಿಕ ಅಪರಾಧಿಗಳ ರಕ್ಷಣೆ ಮುಂತಾದ ಆಪಾದನೆಗಳು, ಅವುಗಳ ತೀವ್ರತೆ ಹಾಗೂ ವೈವಿಧ್ಯತೆಯಲ್ಲಿ ಪ್ರತಿಭಾ ಪಾಟೀಲರ ಮೇಲಿನ ಆಪಾದನೆಗಳನ್ನು ಮೀರಿಸುವಂತಿವೆ!

ದೇಶಕ್ಕೆ ಇವರಿಬ್ಬರನ್ನು ಬಿಟ್ಟು ಇನ್ನಾರೂ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಗಳು ಸಿಗಲಿಲ್ಲವೇ? ಅಮರ್ತ್ಯ ಸೇನ್? ಗೋಪಾಲ ಗಾಂಧಿ? ಕೊನೆಗೆ ಜ್ಯೋತಿ ಬಸುವಾದರೂ? ಮಹಿಳೆಯೇ ಬೇಕೆಂದಿದ್ದರೆ, ಗುಜರಾತ್‌ನ ಹಿರಿಯ ಗಾಂಧಿವಾದಿ ಇಳಾ ಬೆನ್? ಉಹುಂ, ಇವರ್‍ಯಾರೂ ಇವೊತ್ತಿನ ರಾಜಕೀಯ ವ್ಯವಸ್ಥೆಯ ತಾಳಕ್ಕೆ ಕುಣಿಯುವವರಲ್ಲ. ಇವರೆಲ್ಲ, ತಮ್ಮದೇ ಅನನ್ಯ ಸಾಮರ್ಥ್ಯ ಹೊಂದಿರುವವರು. ಆದರೆ, ಇಂತಹವರನ್ನು ನಿರ್ಣಾಯಕ ಅಧಿಕಾರ ಸ್ಥಾನಗಳ ಹತ್ತಿರಕ್ಕೂ ಸುಳಿಯಗೊಡದಷ್ಟು ಅಧೋಗತಿಗೆ ಇಳಿದಿದೆ ನಮ್ಮ ರಾಷ್ಟ್ರ ರಾಜಕಾರಣ... ಇದಕ್ಕೆ ಪ್ರಚಲಿತ ಎಲ್ಲ ರಾಜಕೀಯ ಪಕ್ಷಗಳ ಕೊಡುಗೆಯೂ ಇದೆ. ಹಾಗಾಗಿ ರಾಷ್ಟ್ರ ಹಾಗೂ ರಾಜ್ಯಗಳಲ್ಲಿರುವುದು ಎಲ್ಲ ಅರ್ಥದಲ್ಲಿಯೂ ಸಮ್ಮಿಶ್ರ ಸರ್ಕಾರಗಳೇ! ಆಡಳಿತದಲ್ಲಿರಲಿ, ವಿರೋಧ ಪಕ್ಷದಲ್ಲಿರಲಿ, ಎಲ್ಲ ರಾಜಕೀಯ ಪಕ್ಷಗಳು ತಂತಮ್ಮ ಯೋಗ್ಯತಾನುಸಾರ ರಾಷ್ಟ್ರ ಜೀವನದ ಅಧೋಗತಿಗೆ ತಮ್ಮ ಪಾಲು ಸಲ್ಲಿಸುತ್ತಿವೆ.

ಕರ್ನಾಟಕವನ್ನು ನೋಡಿ. ನಂದಗುಡಿ ವಿಶೇಷ ಆರ್ಥಿಕ ವಲಯದ ವಿರುದ್ಧ ಕಾಂಗ್ರೆಸ್ಸಿನವರು ಆಂದೋಲನ ಆರಂಭಿಸಿದ್ದಾರೆ. ಆದರೆ, ಈ ವಿಶೇಷ ಆರ್ಥಿಕ ವಲಯದ

ಪ್ರಸ್ತಾವನೆ ಹುಟ್ಟಿದುದೇ, ಮನಮೋಹನ ಸಿಂಗರ ಮೂಲಕ ಕಾಂಗ್ರೆಸ್ ಜಾರಿಗೆ ತಂದ ಹೊಸ ಆರ್ಥಿಕ ನೀತಿಯ ಭಾಗವಾಗಿ. ಅಷ್ಟೇ ಅಲ್ಲ, ನಿರ್ದಿಷ್ಟವಾಗಿ ಈ ನಂದಗುಡಿ ಆರ್ಥಿಕ ವಲಯಕ್ಕೆ ಈಗ ಮಂಜೂರಾತಿ ನೀಡಿರುವುದೂ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವೇ! ಹೀಗಾಗಿ ಕಾಂಗ್ರೆಸ್‌ನವರ ಈ ಆಂದೋಲನ ಅಮಾಯಕ ಜನರನ್ನು ಯಾಮಾರಿಸುವ ಸಮಯಸಾಧಕ ಚಿಲ್ಲರೆ ರಾಜಕಾರಣವಲ್ಲದೆ ಮತ್ತೇನಲ್ಲ. ಈ ಆಂದೋಲನದ ನೇತೃತ್ವ ವಹಿಸಿರುವುದಾದರೂ ಯಾರು? ಬೆಂಗಳೂರಲ್ಲಿ ಮತ್ತು ಸುತ್ತಮುತ್ತ ಅಪಾರ ಭೂಮಿ ಖರೀದಿಸಿ ತಮ್ಮದೇ 'ವಿಶೇಷ ಆರ್ಥಿಕ ವಲಯ'ಗಳನ್ನು ರೂಪಿಸಿಕೊಂಡಿರುವ ಖದೀಮ ರಾಜಕಾರಣಿಗಳು! ರಾಜ್ಯ ಕಾಂಗ್ರೆಸ್ಸಿಗರಿಗೆ ರೈತ ಮಕ್ಕಳ ಬಗ್ಗೆ ನಿಜವಾದ ಕಾಳಜಿ ಇದ್ದರೆ, ವಿಶೇಷ ಆರ್ಥಿಕ ವಲಯ ಯೋಜನೆಯ ಪರಿಕಲ್ಪನೆಯ ವಿರುದ್ಧವೇ ಆಂದೋಲನ ಆರಂಭಿಸುವ ಧೈರ್ಯ ತೋರಬೇಕಿದೆ. ಅದು ಸಮಗ್ರ ಬದಲಾವಣೆಗೆ– ಕಾಂಗ್ರೆಸ್ ಪಕ್ಷದ ರಾಜಕಾರಣವೂ– ಸೇರಿದಂತೆ ನಾಂದಿ ಹಾಡೀತು.

ಆದರೆ, ಇಂತಹ ಸಮಗ್ರ ಬದಲಾವಣೆ ಇವರ್‍ಯಾರಿಗೂ ಬೇಡವಾಗಿದೆ. ಏಕೆಂದರೆ, ಅದು ಇವರ ಬುಡಗಳಿಗೇ ನೀರು ತಿರುಗಿಸಿಬಿಡುತ್ತದೆ! ಹಾಗಾಗಿಯೇ ಇವರು ಬೆಂಗಳೂರು ಭೂಕಬಳಿಕೆ ಕುರಿತು ಸಮಗ್ರ ತನಿಖೆ ನಡೆಸಿರುವ ನಮ್ಮ ನಡುವಿನ ಅಪರೂಪದ ಶಾಸಕ ಎ.ಟಿ. ರಾಮಸ್ವಾಮಿ ಅವರ ನೇತೃತ್ವದ ಸಮಿತಿಯು; ಸಣ್ಣ ಪುಟ್ಟ ಒತ್ತುವರಿ ಮಾಡಿರುವ ಬಡಬಗ್ಗರ ವಿರುದ್ಧ ಕ್ರಮ ಕೈಗೊಳ್ಳುತ್ತಿರುವ ಸರ್ಕಾರ, ಭಾರಿ ಪ್ರಮಾಣದ ಭೂಕಬಳಿಕೆ ಮಾಡಿರುವ ಪ್ರಬಲರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗುತ್ತಿಲ್ಲ ಎಂಬ ಆತಂಕ ವ್ಯಕ್ತ ಪಡಿಸುತ್ತಿದ್ದರೂ, ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ಸಿಗರೂ ಸೇರಿದಂತೆ ಯಾವುದೇ ಪಕ್ಷದ ರಾಜಕಾರಣಿಯೂ ಸಮಿತಿಗೆ ಬೆಂಬಲವಾಗಿ ಬಾಯ್ಬಿಡುತ್ತಿಲ್ಲ... ಹಾಗೇ ಅಧಿಕಾರಶಾಹಿಯ ಭ್ರಷ್ಟಾಚಾರದ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತಿರುವ ಐ.ಎ.ಎಸ್. ಅಧಿಕಾರಿ ವಿಜಯಕುಮಾರ್ ಕುಟುಂಬಕ್ಕೆ ನೈತಿಕ ಬೆಂಬಲದ ಒಂದು ಮಾತೂ ಇವರಿಂದ ಈವರೆಗೆ ಬಂದಿಲ್ಲ. ಇದು ನಿಜವಾದ ಸಮ್ಮಿಶ್ರ ರಾಜಕಾರಣ!

ಇಂತಹ ಸಂಪೂರ್ಣ ಸಮ್ಮಿಶ್ರ ಲೂಟಿ ರಾಜಕಾರಣಕ್ಕೆ ಸುವ್ಯವಸ್ಥಿತ ರೂಪ ನೀಡಲು ಸರ್ವಪಕ್ಷಗಳ ಸಹಯೋಗದೊಂದಿಗೆ ಆಗಾಗ್ಗೆ ವಿಶೇಷ ಪ್ರಯತ್ನಗಳು ನಡೆಯುತ್ತಿರುತ್ತವೆ! ಇತ್ತೀಚಿನ ಪ್ರಯತ್ನವೆಂದರೆ, ಅನಿಲ್ ಲಾಡ್ ಎಂಬ ಗಣಿ ಉದ್ಯಮಿ ಶಾಸಕ ಹೊಸಪೇಟೆ ಬಳಿಯ ತನ್ನ ಹೊಸ ಗುಲಾಬಿ ತೋಟದ ಸಂದರ್ಶನದ ನೆಪದಲ್ಲಿ ಏರ್ಪಡಿಸಲು ಹೊರಟಿದ್ದ– ಆದರೆ ರಾಜಕೀಯ ಅನುಮಾನಾಸ್ಪದತೆಯ ಕಾರಣದಿಂದಾಗಿ ಸದ್ಯಕ್ಕೆ ಮುಂದೂಡಲ್ಪಟ್ಟಿರುವ– ಕೆಲವು ಆಯ್ದ ಶಾಸಕರ ರಿಸಾರ್ಟ್ ವಿಹಾರ. ಈ ವಿಹಾರಕ್ಕಾಗಿ ಪಕ್ಷ ಬೇಧವಿಲ್ಲದೆ ಶಾಸಕರನ್ನು 'ಗುರುತಿಸಿ' ಆಹ್ವಾನಿಸಲಾಗಿತ್ತೆಂಬ ಸಂಗತಿ, ಇದು ಸದ್ಯದ ಲೂಟಿ ವ್ಯವಸ್ಥೆಯನ್ನು ಸರ್ವರ 'ಸಹಕಾರ'ದೊಂದಿಗೆ, ಯಾವುದೇ ಬದಲಾವಣೆಯಿಲ್ಲದೆ ಈಗಿನ ನಾಯಕತ್ವದಲ್ಲೇ ಮುಂದುವರಿಸಲು ನಡೆಸಲಾಗುತ್ತಿರುವ ಪ್ರಯತ್ನ ಎಂಬುದರ ಸ್ಪಷ್ಟ ಸೂಚನೆ ನೀಡುತ್ತದೆ.

ಈ ಶಾಸಕನ ಮಿತಿಯಿಲ್ಲದ ಅಕ್ರಮ ಹಾಗೂ ಬೇನಾಮಿ ಗಣಿಗಾರಿಕೆಯ ವಿವರಗಳು ಮಾಧ್ಯಮಗಳಲ್ಲಿ ಪದೇ ಪದೇ ಪ್ರಚಾರ ಪಡೆಯುತ್ತಿದ್ದರೂ, ಅದು ಎಗ್ಗಿಲ್ಲದೇ ಮುಂದುವರಿಯುತ್ತಿರುವುದಕ್ಕೆ ಕಾರಣ, ಈ 'ಲೂಟಿ ರಾಜಕಾರಣ' ಇತ್ತೀಚೆಗೆ ಹೊಸ ರಾಜಕೀಯ 'ಮೈತ್ರಿ'ಯ ನೆಲೆ ತಲುಪಿದ್ದೇ ಈ ಮೂಲದ ಅಕ್ರಮ ಹಣದಿಂದ ಎಂಬುದೇ ಆಗಿದೆ. ಸದ್ಯದ ಹೊಸ ಸಮ್ಮಿಶ್ರ ಸರ್ಕಾರಕ್ಕೆ ಕಾರಣವಾದ ಗೋವಾ ಹಾಗೂ ಪುಣೆ ರಿಸಾರ್ಟ್ 'ರಾಜಕಾರಣ'ಕ್ಕೆ ಬಂಡವಾಳ ಹೂಡಿದವರಿಗೆ ಲಾಭ ಮಾಡಿಕೊಳ್ಳಲು ಬಿಡುವುದಿಲ್ಲವೆಂದರೆ ಅದು ವ್ಯಾಪಾರ ಧರ್ಮವೆನಿಸೀತೆ?

ಆದರೆ ಎಷ್ಟು ಮತ್ತು ಎಂತಹ ಲಾಭ ಮತ್ತು ಹಣ? ಈ ಹಿಂದೆ ಸರ್ಕಾರಗಳನ್ನು ನಿಯಂತ್ರಿಸುತ್ತಿದ್ದುವೆಂದು ಹೇಳಲಾದ ಕಾಮಗಾರಿ, ಅಬ್ಕಾರಿ ಹಾಗೂ ಶಿಕ್ಷಣ ದಂಧೆಗಳ ಹಣ, ಇದರ ಮುಂದೆ ತೀರಾ ಜುಜುಬಿಯಾಗಿ ಕಾಣುತ್ತಿದೆ. ಹಾಗಾಗಿಯೇ ಕೆಲ ವರ್ಷಗಳ ಹಿಂದಷ್ಟೇ ನಮ್ಮ ನಿಮ್ಮಂತೆ ಸಾಮಾನ್ಯ ಪ್ರಜೆಗಳಾಗಿದ್ದ ಈ ಗಣಿ ಉದ್ಯಮಿಗಳು ಈಗ ವೈಭವೋಪೇತ ಬಂಗಲೆಗಳು, ರಿಸಾರ್ಟ್‌ಗಳು, ಹತ್ತಾರು ಹೆಲಿಕಾಪ್ಟರ್‌ಗಳು ಮತ್ತು ಸುಸಜ್ಜಿತ ವಸತಿ ಬಸ್ಸುಗಳ ಒಡೆಯರಾಗಿ ಯಾರನ್ನು ಬೇಕಾದರೂ, ವಸ್ತುಗಳನ್ನು ಖರೀದಿಸುವಂತೆ ಖರೀದಿಸಲು ಸಾಧ್ಯವಾಗಿರುವುದು. ಹಾಗೇ, ಮುಖ್ಯಮಂತ್ರಿಯ ಕುಟುಂಬದವರು ಒಂದೇ ವಾರದಲ್ಲಿ ಹತ್ತಾರು ಕೋಟಿ ರೂಪಾಯಿಗಳ ಬೆಲೆಯ ಸ್ಥಿರ ಆಸ್ತಿ ಖರೀದಿಸಲು ಮತ್ತು ನಮ್ಮ ಅರಣ್ಯ ಮಂತ್ರಿಗಳು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಅಂತಾರಾಷ್ಟ್ರೀಯ ಅನಾಥಾಶ್ರಮ ಕಟ್ಟುವ 'ಧರ್ಮಾತ್ಮ' ಕಾರ್ಯದಲ್ಲಿ ತೊಡಗಲು ಸಾಧ್ಯವಾಗುವುದು. ಎಲ್ಲಕ್ಕಿಂತ ಮುಖ್ಯವಾಗಿ, ಈ ಸುಲಭ 'ದುಡಿಮೆ'ಗೆ ಸಾರ್ವಜನಿಕ ಮಾನ್ಯತೆ ದೊರೆತು, ಈ ಬಗ್ಗೆ ಯಾವ ವಲಯದಿಂದಲೂ ಪ್ರಶ್ನೆಗಳೇ ಏಳದಂತಾಗುವುದು... ಇದು ಯಾರನ್ನಾದರೂ ಹತಾಶೆಗೊಳಿಸುವಂತಹ ದರಿದ್ರ ರಾಜಕೀಯ ಸ್ಥಿತಿ. ನಕ್ಸಲರು ಹುಟ್ಟುವುದು ಮತ್ತು ಅವರಿಗೆ ಜನರ ಸಹಾನುಭೂತಿ ದೊರಕಲಾರಂಭಿಸುವುದೂ, ಇಂತಹ ತಕ್ಷಣಕ್ಕೆ ಬೆಳಕೇ ಕಾಣದ ಅಸಹಾಯಕ ಸ್ಥಿತಿಯಲ್ಲಿ. ಹಾಗಾದರೆ, ನಕ್ಸಲೀಯರ ಬೆಳವಣಿಗೆಗೆ ಕಾರಣರಾರು? ಅವರನ್ನು ಕೊಲ್ಲುವ ರಾಜಕಾರಣ ಎಷ್ಟು ಸಾಚಾ ಎನಿಸೀತು?

ಆದರೆ ಈ ಜನ ಪ್ರತಿನಿಧಿಗಳು ತಾವೀಗ ಸಕ್ರಿಯವಾಗಿ ಭಾಗವಹಿಸಿ ಪೋಷಿಸುತ್ತಿರುವ ರಾಜಕಾರಣವು ತಮ್ಮ ಪಾಲಿಗೆ ಉತ್ಪತ್ತಿ ಮಾಡಿ ಕೊಡುತ್ತಿರುವ ಅತಿಯಾದ ಹಣದ ಅಜೀರ್ಣದಿಂದಾಗಿಯೋ ಏನೋ, ಯೋಚಿಸುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದಾರೆನಿಸುತ್ತದೆ. ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಮೊಟಕುಗೊಳಿಸಿ ಅವುಗಳಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡು ಅಧಿಕಾರ ವಿಕೇಂದ್ರೀಕರಣದ ಮೂಲೋದ್ದೇಶಗಳನ್ನೇ ನಾಶ ಮಾಡಹೊರಟಿರುವ ತಿದ್ದುಪಡಿ ಮಸೂದೆ ಬಗ್ಗೆ ಈ ಸಂಸ್ಥೆಗಳ ಜನಪ್ರತಿನಿಧಿಗಳು ಹಾಹಾಕಾರವೆಬ್ಬಿಸುತ್ತಿದ್ದರೂ, ಇವರು ಒಂದು ಮಾತೂ ಆಡದಿರುವುದರ ಮರ್ಮವಾದರೂ ಏನು? 'ಆಸುದೇವ...' ಪುಸ್ತಕವನ್ನು ನಿಷೇಧಿಸಬೇಕೆಂದು ಒತ್ತಾಯಿಸಿ

ವಿಧಾನಸಭೆಯಲ್ಲಿ ವೀರಾವೇಶದಿಂದ ಮಾತನಾಡಿದ ಸದಸ್ಯರು, ಈ ಪುಸ್ತಕದಲ್ಲಿ ಕುವೆಂಪು ಹಾಗೂ ಅಂಬೇಡ್ಕರರನ್ನು ಅವಮಾನಿಸಲಾಗಿದೆ ಮತ್ತು ಬಸವಣ್ಣನನ್ನು ಹೀನಾಮಾನವಾಗಿ ಜರಿಯಲಾಗಿದೆ ಎಂಬ ಅಪ್ಪಟ ಸುಳ್ಳುಗಳನ್ನು ಹೇಳಿ ದಕ್ಕಿಸಿಕೊಳ್ಳುವುದಾದರೂ ಹೇಗೆ? ಅಂದರೆ ಈ ಸದಸ್ಯರೂ ಸೇರಿದಂತೆ ಅಲ್ಲಿದ್ದ ಯಾರೂ ಈ ಪುಸ್ತಕವನ್ನು ಓದಿಲ್ಲ! ಈ ಪುಸ್ತಕವನ್ನು ಓದಿದ್ದ ಯಾವ ಶಾಸಕನಾದರೂ ಅಲ್ಲಿದ್ದರೆ, ಇವರ ಸುಳ್ಳುಗಳನ್ನು ಖಂಡಿಸುತ್ತಿದ್ದ. ಆದರೆ, ತಾವ್ಯಾರೂ ಓದದ ಪುಸ್ತಕವನ್ನು ನಿಷೇಧಿಸಲು ಹೊರಟಿದೆ ನಮ್ಮ ಶಾಸಕ ಸಮುದಾಯ! ಪುಸ್ತಕ ಓದಿ ನಿಷೇಧ ಅನಗತ್ಯವೆಂದಿದ್ದ ಗೃಹ ಸಚಿವ ಎಂ.ಪಿ. ಪ್ರಕಾಶರು ಈಗ ಏನು ಹೇಳುತ್ತಾರೋ ತಿಳಿಯದು...

ಪ್ರಕಾಶರಂತಹವರ ಇಂತಹ ಜಾಣ ಮೌನವೇ ಈ ವ್ಯವಸ್ಥೆಯನ್ನು ಈ ದುಃಸ್ಥಿತಿಗೆ ತಂದಿರುವುದು. ನಮ್ಮ ಸಾಂಸ್ಕೃತಿಕ ವಲಯದಲ್ಲಿ ಇಂತಹ 'ಜಾಣ'ರ ಸಂಖ್ಯೆ ಹೆಚ್ಚುತ್ತಿರುವುದೇ ಮೊನ್ನೆ ಚಿತ್ರದುರ್ಗದಲ್ಲಿ 'ಅಭಿರುಚಿ':ಸಾಹಿತ್ಯಿಕ– ಸಾಂಸ್ಕೃತಿಕ ವೇದಿಕೆಯಡಿ 'ಸಮಕಾಲೀನ ಸಾಂಸ್ಕೃತಿಕ ರಾಜಕಾರಣ'ದ ಬಗ್ಗೆ ಏರ್ಪಡಿಸಲಾಗಿದ್ದ ಸಂವಾದ ಗೋಷ್ಠಿಯಲ್ಲಿ 'ಆನುದೇವಾ...' ಕುರಿತು ಮುಕ್ತವಾಗಿ ವ್ಯಕ್ತವಾದ ಟೀಕೆಗಳಿಗೆ ಉತ್ತರ ಕೊಡಲು ಹೊರಟ ನನ್ನ ಅಧ್ಯಕ್ಷ ಭಾಷಣಕ್ಕೆ ಅಲ್ಲಿನ ಇಬ್ಬರು ಸ್ವಯಂಘೋಷಿತ 'ಸಾಂಸ್ಕೃತಿಕ ಯಜಮಾನರು'ಗಳು ಮತ್ತು ಓರ್ವ ಉದಯೋನ್ಮುಖ ರಾಜಕೀಯ ಪುಢಾರಿ ತಡೆಯೊಡ್ಡಲು ಸಾಧ್ಯವಾದದ್ದು. ಈ ಮೂವ್ವರ ಅನಾಗರಿಕ ವರ್ತನೆಯನ್ನು ಅಲ್ಲಿ ಸೇರಿದ್ದ ಮಿಕ್ಕ ೬೦– ೭೦ ಜನರು ಮೂಕ ಪ್ರೇಕ್ಷಕರಂತೆ ನೋಡುತ್ತಾ ಕೂರುವಂತಾದ ಅಸಹಾಯಕತೆಯೇ ನಮ್ಮ ಇಂದಿನ ಸಮಾಜ ಎದುರಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟಿನ ನಿಜ ಮೂಲವಾಗಿದೆ. ಇಲ್ಲದಿದ್ದರೆ, ಕಾರವಾರದಲ್ಲಿ ಗೋವಾ ಕೊಂಕಣಿ ರಾಜ್ಯ ಏಕೀಕರಣ ಮಂಚದ ಸಂಚಾಲಕ ದಂಪತಿಗಳ ಮೇಲೆ ಸಾರ್ವಜನಿಕವಾಗಿ ಮೊಟ್ಟೆ ಎಸೆದು ಹಲ್ಲೆ ಮಾಡಿದ ಕರ್ನಾಟಕ ರಕ್ಷಣಾ ವೇದಿಕೆಯವರಿಗೆ ಸರ್ಕಾರದಿಂದಲೇ ಕಾನೂನು ರಕ್ಷಣೆ ದೊರಕುವಂತಹ ಪರಿಸ್ಥಿತಿ ಏಕೆ ಸೃಷ್ಟಿಯಾಗುತ್ತಿತ್ತು? ಇದನ್ನು ಖಂಡಿಸಿ ಸಾರ್ವಜನಿಕರು ಬರೆದ ಪತ್ರಗಳನ್ನು ಪ್ರಕಟಿಸಲೂ ಕನ್ನಡದ ಪ್ರಮುಖ ದಿನಪತ್ರಿಕೆಯೊಂದು (ಭಯದಿಂದ?) ಹಿಂಜರಿಯುವ ಪರಿಸ್ಥಿತಿ ಏಕುಂಟಾಗುತ್ತಿತ್ತು? ಪುಂಡಾಟಿಕೆಯನ್ನು ನಾವೆಲ್ಲ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವೆಂದು ಅಸಹಾಯಕವಾಗಿ ಒಪ್ಪಿಕೊಂಡಂತಿದೆ. ಅಲ್ಲಾ, ಇಲ್ಲಿಂದ ನಾವು ಮುಂದೆ ಸಾಗುವುದು ಎಲ್ಲಿಗೆ?

ಜುಲೈ ೨೭, ೨೦೦೭

ಬೆಂಗಳೂರೆಂಬ ರಾಕ್ಷಸ ನಗರಿಯೂ, ಭಯೋತ್ಪಾದನೆಯೂ...

ಹನೀಫ್, ಕಫೀಲ್ ಮತ್ತು ಸಬೀಲ್‌ರೆಂಬ ಮೂವ್ವರು ಸೋದರ ಸಂಬಂಧಿಗಳ ಭಯೋತ್ಪಾದನಾ ಸಾಹಸಗಳ ಸುದ್ದಿಯಿಂದ ಕಂಗೆಟ್ಟಿರುವ ಬೆಂಗಳೂರಿನ ಜನತೆ ತನ್ನ ಇತ್ತೀಚಿನ ಜಾಯಮಾನಕ್ಕೆ ತಕ್ಕಂತೆ, 'ವಿಪ್ರೋ'ದ ಮುಖ್ಯಸ್ಥ ಅಜೀಂ ಪ್ರೇಮ್‌ಜಿ ಎಂಬ ಪಾರ್ಸಿ ಉದ್ಯಮಿಯ ಮೂಲಕ ತನ್ನ ಆತಂಕವನ್ನು ವ್ಯಕ್ತಪಡಿಸಿದೆ. ಈ ಪ್ರೇಮ್‌ಜಿ ಪ್ರಕಾರ, ಬೆಂಗಳೂರು ಭಯೋತ್ಪಾದನೆಯ ತಾಣವಾಗುತ್ತಿರುವುದರಿಂದ ಆಗುತ್ತಿರುವ ದೊಡ್ಡ ತೊಂದರೆ ಎಂದರೆ, ತಮ್ಮಂತಹವರೆಲ್ಲ ಸೇರಿ ರೂಪಿಸಿದ್ದ ಬೆಂಗಳೂರೆಂಬ ವಾಣಿಜ್ಯ ಮುದ್ರೆ(Brand)ಗೆ ಧಕ್ಕೆಯೊದಗಿರುವುದು! ಇನ್ನು ಈ ಹೊತ್ತಿಗಾಗಲೇ ಈ ವಿಷಯದಲ್ಲಿ ಬಾಯಿ ಹಾಕಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕಿದ್ದ ಇನ್ಫೋಸಿಸ್‌ನ ನಾರಾಯಣಮೂರ್ತಿಯವರು ಇತ್ತೀಚೆಗೆ ರಾಷ್ಟ್ರಗೀತೆ ಗಾಯನದ ಅಧಿಕ ಪ್ರಸಂಗದ ಮೊಕದ್ದಮೆಯನ್ನು ಕುತ್ತಿಗೆಗೆ ತೂಗು ಹಾಕಿಕೊಂಡಿರುವುದರಿಂದಾಗಿ, ಸದ್ಯಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೆ. ಆದರೆ, ಅವರ ವಕ್ತಾರರು ತಮ್ಮ ಕಂಪನಿಯ ವಿಸ್ತರಣೆ ಇನ್ನು ಪುಣೆಯಲ್ಲಿ ಎಂದು ಹೇಳುವ ಮೂಲಕ ಬೆಂಗಳೂರನ್ನು ಕುರಿತ ತಮ್ಮ ಅಸಮಾಧಾನವನ್ನು ತೋಡಿಕೊಂಡಿದ್ದಾರೆ. ಇದಕ್ಕೆ ಅಭದ್ರತೆಯ ಕಾರಣ ನೀಡಿಲ್ಲವಾದರೂ, ಮೂಲ ಸೌಲಭ್ಯಗಳನ್ನು ಒದಗಿಸುವಲ್ಲಿ ಸರ್ಕಾರದ ವೈಫಲ್ಯವನ್ನು ಅವರು ಮುಂದು ಮಾಡಿದ್ದಾರೆ. ಇನ್ನು ಬಿ.ಟಿ. ರಾಣಿ ಕಿರಣ್ ಮಜ್ಞುಂದಾರ್‌ದೇನೂ ಸುದ್ದಿಯಿಲ್ಲ. ಬಹುಶಃ ಆಕೆ ಅನಂತಮೂರ್ತಿಯವರು ಕೊಡಲಾಗದಂತಹ ಕೊಡುಗೆಯನ್ನು ಬೆಂಗಳೂರಿಗೆ ಕೊಟ್ಟೇ ಬೆಂಗಳೂರು ಬಿಡುವ ನಿರ್ಧಾರ ಮಾಡುವರೆಂಧು ಕಾಣುತ್ತದೆ! ಒಟ್ಟಿನಲ್ಲಿ ಬೆಂಗಳೂರು ತನ್ನ ಬೆಳವಣಿಗೆಯಲ್ಲಿ ಸೋಲುತ್ತಿರುವ ಸೂಚನೆಗಳು ಬರತೊಡಗಿವೆ... ಏಕೆ?

ಬೆಂಗಳೂರೀಗ ಕನ್ನಡದ ರಾಜಧಾನಿಯಾಗಿದ್ದರೆ ಅದು ವಾಟಾಳ್ ನಾಗರಾಜ್ ಮತ್ತು ಕರ್ನಾಟಕ ರಕ್ಷಣಾ ವೇದಿಕೆಯವರಿಗೆ ಮಾತ್ರ, ಇತರರಿಗೆಲ್ಲ ಅದು ಜಗತ್ತಿನ ಎಲ್ಲರಿಗೂ

ಸೇರಿದ ಜಾಗತಿಕ ನಗರ! ಹಾಗಾಗಿ ಬೆಂಗಳೂರೆಂಬುದು ಒಂದು ಜಾಗತಿಕ ವಾಣಿಜ್ಯ ಮುದ್ರೆ. ಈ ಮುದ್ರೆ ಬಿದ್ದದ್ದು ಐ.ಟಿ. ಅಥವಾ ಬಿ.ಟಿ. ಬಂದ ಮೇಲೆ ಎಂಬುದು ನಿಜವಾದರೂ, ಇದರ ಅಚ್ಚು ಸಿದ್ಧವಾಗತೊಡಗಿದ್ದು ದೇವರಾಜ ಅರಸರ ಕಾಲದಲ್ಲಿ ಬಿ.ಟಿ. ಸೋಮಣ್ಣ ಎಂಬುವವರು ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಆರಂಭಿಸಿದ ನಿವೇಶನ ಹಂಚಿಕೆಯ ಅವ್ಯವಸ್ಥೆಯೊಂದಿಗೆ. ನಗರಾಭಿವೃದ್ಧಿ ಎಂದರೆ ಕೇವಲ ಭೌಗೋಳಿಕ ವಿಸ್ತರಣೆ ಎಂಬ ಸರಳಾರ್ಥದಲ್ಲಿ, ಸಿಕ್ಕ ಸಿಕ್ಕವರಿಗೆ ಎಲೆಯಡಿಕೆ ಮಡಿಚಿ ಕೊಟ್ಟಂತೆ ನಿವೇಶನ ಮಂಜೂರು ಮಾಡುವ ಸೋಮಣ್ಣನವರ ಹುಂಬತನದಿಂದಾಗಿ, ಬೆಂಗಳೂರು ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಎಂತಹ ನಗರವಾಗಿ ಬೆಳೆಯಬೇಕೆಂಬ ಕಲ್ಪನೆಯೇ ಅಭಿವೃದ್ಧಿ ಚೌಕಟ್ಟಿನಿಂದ ಮರೆಯಾಗಿಹೋಯಿತು. ಮುಂದೆ ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೆಂದಾದ ಮೇಲಂತೂ, ಇದರ ಅಧ್ಯಕ್ಷತೆ ಎಂದರೆ ಕಾಸು ಮಾಡಿಕೊಳ್ಳುವ ಮತ್ತು ಮಾಡಿಕೊಡುವ ಫಲವತ್ತಾದ ಜಾಗವಾಗಿ ಮಾರ್ಪಾಡಾದ ಕಾರಣ, ಬೆಂಗಳೂರು ಅಭಿವೃದ್ಧಿ ಎಂಬುದು ಒಂದು ಬೃಹತ್ ರಿಯಲ್ ಎಸ್ಟೇಟ್ ದಂಧೆಯಾಗಿ, ಬೆಂಗಳೂರು ನಗರ ಸಂಪೂರ್ಣ ಹೊರಗಿನ ವಾಣಿಜ್ಯ ಶಕ್ತಿಗಳ ವಸಾಹತುವಾಗಿ ರೂಪುಗೊಳ್ಳತೊಡಗಿತು.

ತೊಂಭತ್ತರ ದಶಕದಲ್ಲಿ ಜಾಗತೀಕರಣ ಆರಂಭವಾಗುವ ಮುನ್ನವೇ, ಬೆಂಗಳೂರು ಕೇಂದ್ರವನ್ನು ಕಳೆದುಕೊಂಡ ವೃತ್ತದಂತೆ ಅಸ್ಥಿರವಾಗಿ ಬೆಳೆಯತೊಡಗಿತ್ತು. ಬೆಂಗಳೂರಿನ 'ಪರಿಮಳ' ನಾಶವಾಗಿ ಮೂಲ ಬೆಂಗಳೂರಿಗರೇ ಇಲ್ಲಿ ಅನಾಥರಂತೆ ಓಡಾಡಬೇಕಾದ ಸಾಂಸ್ಕೃತಿಕ ಸ್ಥಿತ್ಯಂತರವೊಂದು ನಡೆಯತೊಡಗಿತ್ತು. ಬಹು ಹಿಂದಿನಿಂದಲೂ, ತೆಲುಗರು, ತಮಿಳರು ಮಾತ್ರವಲ್ಲ, ಮರಾಠರು ಮತ್ತು ಗುಜರಾತಿಗಳು ಸೇರಿದಂತೆ ಅನೇಕ ಜಾತಿ-ಜನಾಂಗಗಳು ಬೆಂಗಳೂರಲ್ಲಿ ನೆಲೆಸಿ, ಕನ್ನಡಿಗರೊಂದಿಗೆ ಸೇರಿ ರೂಪಿಸಿದ ಒಂದು ಸಾಮಾನ್ಯ ಜೀವನ ಕ್ರಮದ ಮೂಲಕ ನಗರಕ್ಕೆ ತನ್ನದೇ ಆದ ಒಂದು ಸಾಂಸ್ಕೃತಿಕ ಪರಿಮಳವನ್ನು ಸೃಷ್ಟಿಸಿದ್ದವು. ಆದರೆ ಎಪ್ಪತ್ತರ ದಶಕದಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಹಣದ ಪ್ರಭಾವ ಹೆಚ್ಚಿದಂತೆ ಬೆಂಗಳೂರಿನ ಈ ಪರಿಮಳ ನಾಶವಾಗತೊಡಗಿತು. ವಿಪರೀತ ಹಣದ ಆಕರ್ಷಣೆಗೆ ಒಳಗಾದ ನಮ್ಮ ಆಡಳಿತಗಾರರು, ನಗರವೊಂದರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ರಸ್ತೆ, ನೀರು, ಚರಂಡಿ, ದೀಪ, ಉದ್ಯಾನಗಳ ಜೊತೆಗೇ ಅದರ ಮೂಲ ಸಂಸ್ಕೃತಿಯ ಸಂರಕ್ಷಣೆಯ ಅಂಶವೂ ಸೇರಿರಬೇಕೆಂಬ ಅರಿವನ್ನೇ ಕಳೆದುಕೊಂಡು, ಹಣದ ಥೈಲಿ ತಂದವರಿಗೆಲ್ಲಾ ಒಂದಲ್ಲ ಒಂದು ನೆಪದಲ್ಲಿ ನಿವೇಶನ- ಭೂಮಿಯನ್ನು ಹಂಚುತ್ತಾ ಹೋಗಿ, ಇಂದು ಬೆಂಗಳೂರನ್ನು ಒಂದು ರಾಕ್ಷಸ ನಗರಿಯನ್ನಾಗಿ ಪರಿವರ್ತಿಸಿದ್ದಾರೆ.

ಬೆಂಗಳೂರು ಹೊರಕ್ಕೆ ಚಾಚಿಕೊಂಡಷ್ಟೂ ಒಳಕ್ಕೆ ಹಿಚುಕಿಕೊಳ್ಳುತ್ತಾ ಹೋಗುತ್ತಿದ್ದರೆ, ಭೌಗೋಳಿಕವಾಗಿ ವಿಸ್ತರಿಸಿಕೊಂಡಷ್ಟೂ ಅದರೊಳಗಿನ ಜನಕ್ಕೆ ಉಸಿರುಗಟ್ಟುತ್ತಾ ಹೋಗುತ್ತಿದ್ದರೆ ಅದಕ್ಕೆ ಕಾರಣ, ಅದರ ಅಸಮರ್ಪಕ ರಸ್ತೆ- ಸಾರಿಗೆ- ನೀರು- ವಿದ್ಯುತ್- ಚರಂಡಿ ಇತ್ಯಾದಿ ವ್ಯವಸ್ಥೆಗಳಿಗಿಂತ ಹೆಚ್ಚಾಗಿ, ಅದರ ಸ್ಥಳೀಯ ಸಂಸ್ಕೃತಿಯ ಅಡಿಗಲ್ಲೇ ಅಲುಗಾಡಿಹೋಗಿರುವುದೇ

ಕಾರಣವಾಗಿದೆ. ಇಂದು ಬೆಂಗಳೂರಿನಲ್ಲಿ ಬೆಂಗಳೂರಿಗನೇ ಅಪರಿಚಿತ– ಅಭದ್ರ! ಅವನ ಭಾಷೆಯಿಂದ ಹಿಡಿದು ಅವನ ಜೀವನ ಕ್ರಮ, ಶೈಲಿ, ಲಯ, ದೃಷ್ಟಿಗಳೆಲ್ಲವೂ ಕಳೆದ ಇಪ್ಪತ್ತು ವರ್ಷಗಳಲ್ಲಿ ಬಂದು ನಗರವನ್ನು ಆಕ್ರಮಿಸಿಕೊಂಡ ಹೊರಗಿನ ಜನಸ್ತೋಮದ ಎದುರು 'ಗುಜರಿ'ಯಾಗಿಹೋದಂತೆ ಕಾಣುತ್ತಿದೆ... ಇದು ಯಾವುದೇ ಜನವಸತಿ ಬೆಳೆಯುವ ರೀತಿಯಲ್ಲ. ಹೊರಗಿನಿಂದ ಬಂದವರು ಮೂಲ ಸಂಸ್ಕೃತಿಯಲ್ಲಿ ಬೆರೆತು ಅದಕ್ಕೆ ಕೊಡುಗೆಗಳನ್ನು ಸಲ್ಲಿಸಿ ಅದನ್ನು ಬೆಳೆಸುವಂತಾಗಬೇಕು. ಅಂತಹುದನ್ನು ವಿಕಾಸ ಎಂದು ಕರೆಯಬಹುದು. ಆದರೆ ಕಳೆದ ಹದಿನೈದು– ಇಪ್ಪತ್ತು ವರ್ಷಗಳಲ್ಲಿ ಬೆಂಗಳೂರಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆದಿರುವುದು ಸಾಂಸ್ಕೃತಿಕ ಆಕ್ರಮಣ. ಇಂದು ಬೆಂಗಳೂರು ಒಂದು ಊರಾಗಿ ಉಳಿದಿಲ್ಲ. ಬದಲಿಗೆ ಹಲವು 'ಸಂಸ್ಕೃತಿ'ಗಳ ಮೇಲಾಟದಲ್ಲಿ ತೊಡಗಿರುವ ಯುದ್ಧಭೂಮಿಯಂತೆ ಕಾಣುತ್ತಿದೆ. ಇದು ನಗರ ಜೀವನದ ಚಲನಶೀಲನಾತ್ಮಕತೆಯ ದೃಷ್ಟಿಯಿಂದ ಅನಪೇಕ್ಷಣೀಯವಲ್ಲವಾದರೂ, ಈ 'ಸಂಸ್ಕೃತಿ'ಗಳು ಮೂಲತಃ ವಾಣಿಜ್ಯೋದ್ದೇಶಗಳ ಸಂಸ್ಕೃತಿಗಳಾಗಿರುವುದರಿಂದ, ಇಂತಹ ಮೇಲಾಟದಲ್ಲಿ ಉದ್ಭವವಾಗುವುದು ಅಮೃತಕ್ಕಿಂತ ವಿಷವೇ ಹೆಚ್ಚು. ಇದು ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನ ಜನಜೀವನ ಎದುರಿಸುತ್ತಿರುವ ಭಯಂಕರ ಸವಾಲುಗಳಿಂದಲೇ ಸ್ಪಷ್ಟವಾಗುತ್ತಿದೆ.

ಬಡ ಹಾಗೂ ಮಧ್ಯಮ ವರ್ಗದವರ ಪಾಲಿಗೆ ಕ್ಷಿಪ್ರ ಗತಿಯಲ್ಲಿ ಏರುತ್ತಿರುವ ಜೀವನ ವೆಚ್ಚ, ಇದ್ದಕ್ಕಿದ್ದಂತೆ ಸೃಷ್ಟಿಯಾಗುತ್ತಿರುವ ಕಣ್ಣು ಕೋರೈಸುವಂತಹ ಅತಿ ಸಮೃದ್ಧಿಯ ದ್ವೀಪಗಳು, ಇವು ಉದ್ದೀಪಿಸುವ 'ದುಡಿಮೆ'ಯ ಅಡ್ಡದಾರಿಗಳು, ಇದರ ಪರಿಣಾಮವಾಗಿ ಆರಂಭವಾಗಿರುವ ವೈವಿಧ್ಯಮಯ, ನವ ನವೀನ ಹಾಗೂ ಕಲ್ಪನಾತೀತ ಅಪರಾಧಗಳು, ಇವಕ್ಕೆಲ್ಲ ನೆಲೆಯೊದಗಿಸುತ್ತಿರುವ ವಿಕೃತ ಮನರಂಜನಾ ತಾಣಗಳು, ಶಾಂತಿ ಸಾಧನೆಯ ವ್ಯಾಪಾರಿ ಕೇಂದ್ರಗಳು, ವ್ಯಕ್ತಿಗಳು ಮತ್ತು ಸಂಸ್ಥೆಗಳು ರೂಪಿಸಿಕೊಳ್ಳುತ್ತಿರುವ ಖಾಸಗಿ ಭದ್ರತಾ ವ್ಯವಸ್ಥೆಗಳು– ಹೀಗೆ, ಬೆಂಗಳೂರು ಕೇಂದ್ರ ಕಳೆದುಕೊಂಡ ಒಂದು'ಸಂಸ್ಕೃತಿ'ಯಂತೆ 'ಅನಾಗರಿಕ'ವಾಗಿ ಬೆಳೆಯತೊಡಗಿದೆ. ಆದರೆ ನಮ್ಮ ಆಡಳಿತಗಾರರು ಇದೇ ಹೊಸ ನಾಗರಿಕ ಜೀವನವೆಂಬಂತೆ, ಇದಕ್ಕೊಂದು ಸುವ್ಯವಸ್ಥಿತ ರೂಪ ಕೊಡಲು 'ಬೃಹತ್ ಬೆಂಗಳೂರು' ಎಂಬ ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದ ಹೊಸ ಯೋಜನೆಯನ್ನು ಪ್ರಕಟಿಸಿದೆ! ಆದರೆ ಬೆಂಗಳೂರಿಗಿಂತ ಪ್ರಾಚೀನವಾದ ಹಾಗೂ ದೊಡ್ಡದಾಗಿ ಬೆಳೆಯುತ್ತಿರುವ ಕೊಲ್ಕತ್ತಾವಾಗಲಿ ಅಥವಾ ಚೆನ್ನೈಯಾಗಲಿ ಹೀಗೆ ತಂತಮ್ಮ ಮೂಲ ಚಹರೆಗಳನ್ನು ಕಳೆದುಕೊಂಡು ದೆವ್ವದಂತಹ ನಗರಗಳಾಗಿ, ಅಲ್ಲಿನ ಜನಜೀವನದ 'ಶೀಲ'ದಲ್ಲಿ ಬಿರುಕು ಮೂಡಿಸಿಲ್ಲ. ಈ ನಗರಗಳ ಅಥವಾ ಬೆಂಗಳೂರಿನ ಜೊತೆ ಸ್ಪರ್ಧಿಸಿ ಸರಿಸಮವಾಗಿ ಬೆಳೆಯುತ್ತಿರುವ ಹೈದರಾಬಾದ್‌ನ ಯಾವ ಮೂಲೆಗೆ ಹೋದರೂ, ಅಲ್ಲಿನ ಸ್ಥಳೀಯತೆಯ ಪರಿಮಳ ಅಲ್ಲಿನ ಜೀವನ ಕ್ರಮಗಳ ವಿವಿಧ ಮಾದರಿಗಳ ಮೂಲಕ ನಿಮ್ಮ ಪಂಚೇದ್ರಿಯಗಳಿಗೆ ರಾಚುತ್ತದೆ.

ಈ ಎಲ್ಲ ಮಾದರಿಗಳಿಗೆ ಮೂಲಾಧಾರ ಅಲ್ಲಿನ ಭಾಷೆ. ಬೆಳವಣಿಗೆಯ ಭಾಗವಾಗಿ ನಗರಕ್ಕೆ ಬಂದ ಹೊಸ ಸಂಸ್ಕೃತಿಗಳು ಈ ಭಾಷೆಯ ಮೂಲಕ ಸ್ಥಳೀಯ ಚಹರೆಗಳನ್ನು ಪಡೆದುಕೊಳ್ಳುತ್ತವೆ. ಇಲ್ಲಿ ಭಾಷೆಯೆಂದರೆ ಕೇವಲ ಶಬ್ದಗುಚ್ಛವಲ್ಲ; ಒಂದು ಸಂಸ್ಕೃತಿ ಸಂವಹನ ಮಾಧ್ಯಮ. ನಿಮ್ಮ ಸಾಹಿತ್ಯ, ನಿಮ್ಮ ಸಂಗೀತ, ನಿಮ್ಮ ಮನರಂಜನೆ, ನಿಮ್ಮ ಹಬ್ಬ ಹರಿದಿನಗಳು, ನಿಮ್ಮ ರಾಜಕಾರಣ ಎಲ್ಲವೂ ಈ ಸಂವಹನಕ್ಕೀಡಾಗಿ ಅದೆಲ್ಲವೂ ನಮ್ಮದು ಕೂಡ ಎನಿಸಿಕೊಳ್ಳುತ್ತದೆ. ಈ ಊರುಗಳಲ್ಲಿ ಎಲ್ಲಿಗೆ ಹೋದರೂ, ಹೊರ ರೂಪಗಳಲ್ಲಿ ವೈವಿಧ್ಯ-ಏರುಪೇರುಗಳು ಕಂಡರೂ ಒಳಗಿನ ಸತ್ವ ಒಂದೇ ಆಗಿರುತ್ತದೆ– ಅದು ಬಂಗಾಳಿ ಸಂಸ್ಕೃತಿ, ತಮಿಳು ಸಂಸ್ಕೃತಿ ಅಥವಾ ಆಂಧ್ರ ಸಂಸ್ಕೃತಿ. ಇದು ಅಲ್ಲಿ ಸಾಧ್ಯವಾಗಿರುವುದು ನಗರಾಭಿವೃದ್ಧಿಯನ್ನು ಸಂಸ್ಕೃತಿ ಸಂರಕ್ಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೈಗೊಂಡಿರುವ ಸ್ಥಳೀಯ ವಿವೇಕದಿಂದಾಗಿ. ಯಾವುದೇ ಲೌಕಿಕ ಅಭಿವೃದ್ಧಿ ಸ್ಥಿರವಾಗಿರುವುದು ಸಾಂಸ್ಕೃತಿಕ ಅಡಿಪಾಯದ ಮೇಲೆ ಎಂಬ ಮುನ್ನೋಟ ಅಲ್ಲಿನ ಸ್ಥಳೀಯರಲ್ಲಿ ಆ ಮೂಲಕ ಅಲ್ಲಿನ ಆಡಳಿತಗಾರರ ಮನದಲ್ಲಿ ಮನೆ ಮಾಡಿರುವುದರಿಂದಾಗಿ. ಆದರೆ ಬೆಂಗಳೂರಿನ ಸುಖದಾಯಕ ಹವಾಮಾನದಿಂದಾಗಿ ಮೈ ಮರೆತುಹೋದಂತಿರುವ ನಮ್ಮ ಜನ ಹಾಗೂ ಆಡಳಿತಗಾರರಿಬ್ಬರೂ, ಬೆಂಗಳೂರನ್ನು ಹೊರಗಿನವರಿಗೆ ದತ್ತು ಕೊಟ್ಟಂತಿದೆ. ಹಾಗಾಗಿಯೇ ಇಂದು ಬೆಂಗಳೂರಲ್ಲಿ ಕನ್ನಡ ಸಂಸ್ಕೃತಿ ಹೋಗಲಿ, ಬೆಂಗಳೂರು ಸಂಸ್ಕೃತಿ ಎಂಬುದೂ ಕಾಣೆಯಾಗಿ; ಸರ್ಕಾರದ ಪರವಾಗಿ 'ಬೆಂಗಳೂರು ಹಬ್ಬ'ವನ್ನು ಆಚರಿಸುವವರು ಅಪ್ಪಟ ಪರದೇಶಿಗಳಂತೆ ಕಾಣುತ್ತಿರುವುದು!

ನನ್ನ ಕಾಲೇಜು ಶಿಕ್ಷಣದ ನಂತರ ಮುವ್ವತ್ತು ವರ್ಷಗಳ ಹಿಂದೆ ಬಿಟ್ಟು ಬಂದ ಮತ್ತು ಆಗಾಗ್ಗೆ ಅನಿವಾರ್ಯವಾದಾಗ ಮಾತ್ರ ಭೇಟಿ ನೀಡುವ ಬೆಂಗಳೂರಿನ ಬಗ್ಗೆ ನಾನು ಇಷ್ಟು ವಿಸ್ತಾರವಾಗಿ ಯೋಚಿಸುವಂತಾದ್ದು, ಮೊನ್ನೆ ಟಿ.ವಿ. ನೋಡುತ್ತಿದ್ದಾಗ ಹನೀಫ್ ಮತ್ತು ಕಫೀಲನ ಮನೆಯವರೆಲ್ಲರೂ– ಆತನ ತಾಯಿಯ ಹರಕು ಮುರುಕು ಕನ್ನಡದ ಹೊರತಾಗಿ– ಕನ್ನಡವೇ ಬಾರದಂತೆ, ಸ್ಥಳೀಯ ಮಾಧ್ಯಮದವರೊಂದಿಗೂ ಉರ್ದು ಅಥವಾ ಇಂಗ್ಲಿಷ್‌ನಲ್ಲೇ ಮಾತನಾಡಿದ್ದನ್ನು ಕಂಡಾಗ. ಇವರಲ್ಲಿ ಬಹುತೇಕರು ನಮ್ಮ ಮಲೆನಾಡಿನ ಮೂಲೆಯ ಹಳ್ಳಿಗಳಲ್ಲಿ ಹುಟ್ಟಿ ಬೆಳೆದವರು. ಆದರೂ ಮನೆಯಲ್ಲಿ ಕನ್ನಡದ ಗಂಧವೇ ಇಲ್ಲವೆಂದರೆ? ಈ ಪ್ರಶ್ನೆಯನ್ನು ನಾನು ಕನ್ನಡಾಭಿಮಾನದ ಪ್ರಶ್ನೆಯಾಗಿ ಖಂಡಿತ ಎತ್ತುತ್ತಿಲ್ಲ. ಅದಕ್ಕೆ ಇದು ಸಂದರ್ಭವೂ ಅಲ್ಲ. ಬದಲಿಗೆ ಹೇಗೆ ಒಂದು ಸಮುದಾಯ ತನ್ನ ಸುತ್ತಲಿನ ಭಾಷೆಯ ಬಗ್ಗೆ ಕುರುಡು ಬೆಳೆಸಿಕೊಂಡು ಇಡಿಯಾದ ಸಮಾಜದೊಂದಿಗೆ ಸಂವಾದವನ್ನೇ ಕಳೆದುಕೊಳ್ಳುತ್ತಾ ಒಂದು ಸಾಂಸ್ಕೃತಿಕ ದ್ವೀಪವಾಗಿ ಉಳಿಯುವ ಮೂಲಕ ತನಗೇ ಗೊತ್ತಿಲ್ಲದಂತೆ ಮೂಲಭೂತವಾದದಲ್ಲಿ ಸೆರೆಯಾಗಬಲ್ಲುದು ಎಂಬುದನ್ನು ಸೂಚಿಸಲು ಮಾತ್ರ. ಹಾಗೇ, ಬೆಂಗಳೂರು ಹೀಗೆ ಒಂದು ಸಾಮಾನ್ಯ ಸಾಂಸ್ಕೃತಿಕ ಚಹರೆಯೇ ಇಲ್ಲದ ನಗರವಾಗಿ ಬೆಳೆಯುವ ಮೂಲಕ ಇಂತಹ ಅನೇಕ ಅಜ್ಞಾತ ಸಾಂಸ್ಕೃತಿಕ ದ್ವೀಪಗಳಿಗೆ

ಸುರಕ್ಷಿತ ನೆಲೆಯೊದಗಿಸುತ್ತಾ, ತನ್ನ ಒಡಲಿನ ತುಂಬಾ ಅದೆಷ್ಟು ಅಸಮಾಧಾನ– ಅತೃಪ್ತಿಗಳ ಆಸ್ಫೋಟನಕಾರಿ ಸಿಡಿಮದ್ದುಗಳನ್ನು ತುಂಬಿಕೊಂಡಿರಬಹುದು ಎಂಬ ಆತಂಕ ವ್ಯಕ್ತಪಡಿಸಲು ಮಾತ್ರ.

ಇಂದು ಬೆಂಗಳೂರು ಮುಸ್ಲಿಂ ಮೂಲಭೂತವಾದಿ ಭಯೋತ್ಪಾದಕರ ಒಂದು ಮುಖ್ಯ ಕೇಂದ್ರವಾಗಿ ಬೆಳೆಯುತ್ತಿದೆ ಎಂಬ ಪ್ರಚಲಿತ ಅನುಮಾನದ ಹಿನ್ನೆಲೆಯಲ್ಲಿ ಹೇಳುವುದಾದರೆ, ಮೊದಲಿಗೆ ಕರ್ನಾಟಕದ ಮುಸ್ಲಿಂ ಸಮುದಾಯ ನಿಸ್ಸಂಕೋಚವಾಗಿ ತನ್ನ ಒಳಗನ್ನೊಮ್ಮೆ ಸಂಪೂರ್ಣವಾಗಿ ಪರಿಶೀಲಿಸಿಕೊಳ್ಳಬೇಕಿದೆ. ಹೊರಗಿನ ಮೂಲಭೂತವಾದಿಗಳ ಪ್ರಚಾರಕ್ಕೆ ಮನಸ್ಸು ಕೊಡುವಂತಹ ದೌರ್ಬಲ್ಯಗಳು ತನ್ನಲ್ಲೇನಿವೆ ಮತ್ತು ಇದ್ದರೆ ಅವಕ್ಕೇನು ಕಾರಣ ಎಂಬುದನ್ನು ಪರಿಶೀಲಿಸಿಕೊಳ್ಳಬೇಕಿದೆ. ಅನೇಕ ಉದಾರವಾದಿ ಮುಸ್ಲಿಂ ಸ್ನೇಹಿತರನ್ನು ಹೊಂದಿರುವ; ಆದರೆ ಇತ್ತೀಚಿನ ಪ್ರಕ್ಷುಬ್ಧ ಕೋಮುವಾದಿ ವಾತಾವರಣದಲ್ಲಿ ಅವರೆಲ್ಲ ಒಂದಿಷ್ಟು ವಿಚಲಿತರೂ, ಖಿನ್ನರೂ ಆಗಿರುವುದನ್ನು ನೋಡುತ್ತಿರುವ ನನಗೆ, ಕರ್ನಾಟಕದ ಮುಸ್ಲಿಮರು ತಮ್ಮ ಮಕ್ಕಳು ಮೂಲಭೂತವಾದಿಗಳ ಪ್ರಭಾವಕ್ಕೆ ಸಿಗದಂತೆ ತಡೆಯಲು ಬಳಸಬಹುದಾದ ಸುಲಭ ಸಾಧನವಾಗಿ ಕಾಣುತ್ತಿರುವುದೆಂದರೆ ಕನ್ನಡ ಭಾಷೆ. ಕರಾವಳಿ (ಹಾಗೂ ಕನ್ನಡವನ್ನೇ ಮನೆಮಾತಾಗುಳ್ಳ ಪಿಂಜಾರರನ್ನು) ಬಿಟ್ಟರೆ, ಕರ್ನಾಟಕದ ಉಳಿದ ಭಾಗಗಳಲ್ಲಿ ಮುಸ್ಲಿಮರಲ್ಲಿ ಬಹುಪಾಲು ಜನ ಕನ್ನಡದಿಂದ ದೂರವೇ ಉಳಿದಿದ್ದಾರೆ. ಶಿವಮೊಗ್ಗದಂತಹ ಅಚ್ಚ ಕನ್ನಡ ಊರಿನಲ್ಲೂ ಕನ್ನಡ ಬಾರದ ಮುಸ್ಲಿಮರಿದ್ದಾರೆಂದರೆ? ಹೀಗಾಗಿಯೇ ಇವರು ಮುಚ್ಚಿಕೊಂಡ ಸಮಾಜಗಳಾಗಿ ತಮ್ಮ ಮಕ್ಕಳಿಗೆ– ಮೊಮ್ಮಕ್ಕಳಿಗೆ ಲಾಡೆನ್ ಎಂದೋ ಸದ್ದಾಂ ಎಂದೋ ಹೆಸರಿಟ್ಟುಕೊಂಡು ಹೆಮ್ಮೆಪಡುವ ಅವಿವೇಕದಲ್ಲಿ ಬಾಳುತ್ತಾ, ಹಿಂದೂ ಕೋಮುವಾದಿಗಳನ್ನು ಕೆರಳಿಸಬಲ್ಲವರಾಗಿದ್ದಾರೆ.

ಈ ಅವಿವೇಕವನ್ನು, ತಮ್ಮದೇ 'ಅಜೆಂಡಾ'ದ ಕಾರಣದಿಂದಾಗಿ ಸಲ್ಲದ ವಿವರಣೆ ನೀಡುತ್ತಾ ಸಮರ್ಥಿಸುವ ಕೆಲವು ಬೇಜವಾಬ್ದಾರಿ 'ಜಾತ್ಯತೀತ' ಗುಂಪುಗಳೂ ನಮ್ಮ ಮಧ್ಯೆ ಇವೆ. ಇವು ಮಾರುವೇಷದ ಮುಸ್ಲಿಂ ಕೋಮುವಾದಿ ಗುಂಪುಗಳ ಸಹಚರಿಗಳಲ್ಲದೆ ಮತ್ತೇನಲ್ಲ ಎಂದು ಅರಿತು ಮುಸ್ಲಿಮರು ಕನ್ನಡ ಕಲಿಯಲು, ಅದರಲ್ಲಿ ಅಭಿವ್ಯಕ್ತಿ ಸಾಧಿಸಲು ಪ್ರಯತ್ನಿಸಬೇಕಿದೆ. ಆ ಮೂಲಕ ತನ್ನಾಚೆಯ ಸಮಾಜದೊಂದಿಗೂ ಸಂವಾದ ಸಾಧ್ಯವಾಗಿ, ಅವರ ದೃಷ್ಟಿ ದಿಗಂತಗಳು ವಿಸ್ತರಿಸಿಕೊಳ್ಳುತ್ತವೆ. ತನ್ನ ಧರ್ಮವನ್ನು ಕೂಡ ತನ್ನದೇ ಕಣ್ಣುಗಳಿಂದ ನೋಡುವ ಧೈರ್ಯ ಮತ್ತು ಸಾಮರ್ಥ್ಯ ಒದಗಿ ಬರುತ್ತದೆ. ರಾಜಕೀಯವಾಗಿ ತನ್ನ ವಿರುದ್ಧವೇ ಇರಬಹುದಾದ ಜಾಗತಿಕ ಇಸ್ಲಾಂ ಜೊತೆಗೆ ಹುಂಬ ಹುಂಬಾಗಿ ಗುರುತಿಸಿಕೊಂಡು, ತಾನಿರುವ ಪ್ರದೇಶದಲ್ಲೇ ವಿಕಾಸಗೊಂಡ ಇಸ್ಲಾಮನ್ನು ಮರೆಯುವ ವಿಸ್ಮೃತಿಗೆ ಒಳಗಾಗುವುದು ತಪ್ಪುತ್ತದೆ.

ಹೀಗಾಗಿ ಕನ್ನಡ ಶಿಕ್ಷಣವೆನ್ನುವುದು ಮುಸ್ಲಿಮರಲ್ಲಿ ಭಯೋತ್ಪಾದನೆಯನ್ನು ಪ್ರಚೋದಿಸುವ ಮೂಲಭೂತವಾದದ ವಿರುದ್ಧ ಒಂದು ಪ್ರತಿರೋಧ ಶಕ್ತಿಯಾಗಿ ಕೆಲಸ

ಮಾಡಬಲ್ಲುದಾಗಿದೆ. ಈ ರೀತಿಯಲ್ಲಿ ಸ್ಥಳೀಯ ಸಂಸ್ಕೃತಿಯೊಂದಿಗೆ ಒಂದಾಗಲೇಬೇಕಾದ ಅನಿವಾರ್ಯತೆಯಿರುವ ಚೆನ್ನೈ ಅಥವಾ ಕೊಲ್ಕೊತ್ತಾದಂತಹ ನಗರಗಳಲ್ಲಿ ಸ್ಥಳೀಯರಿಂದ ಕುಮ್ಮಕ್ಕು ಪಡೆದ ಭಯೋತ್ಪಾದನೆಯ ಚಟುವಟಿಕೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಎಂಬುದನ್ನೂ ನಾವು ಗಮನಿಸಬಹುದಾಗಿದೆ. ಆದುದರಿಂದ ಬೆಂಗಳೂರಲ್ಲಿ ಭಯೋತ್ಪಾದನೆ ವಿರುದ್ಧದ ಕಾರ್ಯಕ್ರಮದಲ್ಲಿ, ಮುಸ್ಲಿಮರೂ ಸೇರಿದಂತೆ ಎಲ್ಲ ಕನ್ನಡೇತರರಿಗೆ ಕನ್ನಡ ಕಲಿಕೆಯನ್ನೂ ಒಂದಂಶವನ್ನಾಗಿ ಅಳವಡಿಸಿಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಾಯ ಹೇರಬೇಕಿದೆ. ಬೆಂಗಳೂರಿನ ಸಾಂಸ್ಕೃತಿಕ ಪುನರುಜ್ಜೀವನ ಇದರೊಂದಿಗೇ ಆರಂಭವಾಗಬೇಕಿದೆ. ಬಹುಶಃ ಇದೊಂದೇ ಬೆಂಗಳೂರು ಹೊರಗಿನ ಭಾರಗಳಿಂದ ಕುಸಿಯದಂತೆ ಅದನ್ನು ಉಳಿಸುವ ಮಾರ್ಗವಾಗಿದೆ.

ಆಗಸ್ಟ್ ೩, ೨೦೦೭

ಸಾಂಸ್ಕೃತಿಕ ನಾಯಕತ್ವ ಕಳೆದುಕೊಂಡಿರುವ ಕರ್ನಾಟಕ

ಅಂತೂ 'ಆನುದೇವಾ...' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ನಿರ್ಧರಿಸಿದೆ. ಸರ್ಕಾರ ತನ್ನ ನಿರ್ಧಾರವನ್ನು ಹೇಳಿದ ಹಿಂದಿನ ಎರಡು- ಮೂರು ದಿನಗಳ ಕಾಲ ಜಾತಿವಾದಿ ಲಿಂಗಾಯತರ ನೇತೃತ್ವದಲ್ಲಿ ನಡೆದ ಅನಾಗರಿಕ ಶೈಲಿಯ ಪ್ರತಿಭಟನೆಗಳನ್ನು (ಅವರು ಹಿಡಿದಿದ್ದ ಭಿತ್ತಿಪತ್ರಗಳ ಭಾಷೆಯನ್ನು ಗಮನಿಸಬೇಕಿತ್ತು) ಹಾಗೂ ಸರ್ಕಾರ ಮತ್ತು ಶಾಸನ ಸಭೆಗಳೊಳಗೇ ಇದ್ದ ಜಾತಿವಾದಿ ಹಾಗೂ ಅಪ್ಪಟ ರಾಜಕೀಯ ಲೆಕ್ಕಾಚಾರವನ್ನೇ ರಾಜಕಾರಣದ ಪರಮ ಗಂತವ್ಯವನ್ನಾಗಿಸಿಕೊಂಡಿರುವ ಜನಪ್ರತಿನಿಧಿಗಳ ಪ್ರತಿಕ್ರಿಯೆಗಳನ್ನು ಗಮನಿಸಿದ ಯಾರಿಗೂ ಸರ್ಕಾರ ಕೈಗೊಳ್ಳಬಹುದಾದ ನಿರ್ಧಾರದ ಬಗ್ಗೆ ಸಂಶಯವಿರಲಿಲ್ಲ. ಪುಸ್ತಕ ಕುರಿತು ವರದಿ ಸಲ್ಲಿಸಲು ತರಾತುರಿಯಲ್ಲಿ ಸಾಹಿತಿಗಳ ಸಮಿತಿಯೊಂದನ್ನು ರಚಿಸಿದ್ದೂ, ಆದರೆ ಅದರ ಸದಸ್ಯರ ವರದಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಸರ್ಕಾರ ತನ್ನ ನಿರ್ಧಾರ ಪ್ರಕಟಿಸಿದ್ದೂ; ಕರ್ನಾಟಕದ ರಾಜಕಾರಣ ತನ್ನೆಲ್ಲಾ ಸಾಂಸ್ಕೃತಿಕ ಬಂಡವಾಳವನ್ನು ಕಳೆದುಕೊಂಡು ದಟ್ಟ ದರಿದ್ರ ಸ್ಥಿತಿ ತಲುಪಿರುವುದನ್ನಷ್ಟೇ ಸೂಚಿಸುತ್ತದೆ.

ಸರ್ಕಾರದ ನಿರ್ಧಾರವೇನೋ ನಿರೀಕ್ಷಿತವೇ. ಆದರೆ ಬಂಜಗೆರೆಯವರ ಪುಸ್ತಕ ವಾಪಸಾತಿಯ ನಿರ್ಧಾರ ಮಾತ್ರ ಸಂಪೂರ್ಣ ಅನಿರೀಕ್ಷಿತ. ಪುಸ್ತಕದ ಮುಟ್ಟುಗೋಲು ಬಹುಪಾಲು ಖಚಿತವೆನ್ನಿಸಿದ ಕೊನೇ ನಿಮಿಷದಲ್ಲಿ- ಸರ್ಕಾರದ ನಿರ್ಧಾರ ಪ್ರಕಟವಾಗುವ ಹಿಂದಿನ ರಾತ್ರಿ- ಅವರು ತಾವು ಪುಸ್ತಕವನ್ನು, ಅದೂ ತಾತ್ಕಾಲಿಕವಾಗಿ ಹಿಂದೆ ತೆಗೆದುಕೊಂಡಿರುವುದಾಗಿ ಪ್ರಕಟಿಸಿದ್ದು ನಿಜವಾಗಿಯೂ ಅರ್ಥವಾಗದ ವಿಷಯವಾಗಿದೆ. ತಮ್ಮ ಪುಸ್ತಕ ಸಾಮಾಜಿಕ ಅಶಾಂತಿಗೆ ಕಾರಣವಾಗಿದ್ದು, ಒಬ್ಬ ಲೇಖಕನ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಮತ್ತು ಮುಂದಿನ ದಿನಗಳಲ್ಲಿ ಪುಸ್ತಕವನ್ನು ತಿದ್ದಿ- ಪರಿಷ್ಕರಿಸಿ ಪ್ರಕಟಿಸುವುದಕ್ಕಾಗಿ ಪುಸ್ತಕವನ್ನು ಹಿಂತೆಗೆದುಕೊಂಡಿದ್ದಾಗಿ ಅವರು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ. ಇದಕ್ಕೆ ಬದಲಾಗಿ ಅವರು ತಾನು ಈ ಪುಸ್ತಕವನ್ನು ಹೀಗೆ ಅವಸರದಲ್ಲಿ

ಬರೆಯಬಾರದಿತ್ತು; ಬರೆದು ತಪ್ಪು ಮಾಡಿದ್ದೇನೆ ಎಂದು ಕ್ಷಮೆ ಕೇಳಿದ್ದರೆ, ಅದು ಕೆಲವರಿಗಾದರೂ ಹೆಚ್ಚು ಪ್ರಾಮಾಣಿಕ ನಿರ್ಧಾರ ಎನಿಸುತ್ತಿತ್ತೇನೋ! ಏಕೆಂದರೆ ಲೇಖಕರಿಗೆ ತಮ್ಮ ಪುಸ್ತಕದ ವಿರುದ್ಧದ ಪ್ರತಿಭಟನೆ ಸಾಮಾಜಿಕ ಅಶಾಂತಿಯಾಗಿ ಕಂಡದ್ದು, ಲೇಖಕನ ಸಾಮಾಜಿಕ ಜವಾಬ್ದಾರಿಯ ನೆನಪೂ ಆಗಿದ್ದು ಹಾಗೂ ಪುಸ್ತಕವನ್ನು ಪರಿಷ್ಕರಿಸಿ ಪ್ರಕಟಿಸುವ ಅಗತ್ಯವೂ ಮನವರಿಕೆಯಾಗಿದ್ದೂ, ಸರ್ಕಾರದ ನಿರ್ಧಾರ ಪ್ರಕಟಣೆಯ ಹಿಂದಿನ ರಾತ್ರಿಯ ವೇಳೆಗಷ್ಟೇ ಎಂದರೆ ಯಾರಾದರೂ ಹೇಗೆ ನಂಬುವುದು?

ಮುಟ್ಟುಗೋಲನ್ನು ತಪ್ಪಿಸಿಕೊಳ್ಳಬಹುದು ಎಂದೋ ಅಥವಾ ಈ ಸಂಬಂಧ ಸರ್ಕಾರದ ಪರವಾಗಿ ಯಾರಾದರೂ ನೀಡಿದ ಆಶ್ವಾಸನೆಗೆ ಪ್ರತಿಯಾಗಿಯೋ ಈ ಕೊನೇ ನಿಮಿಷದ ನಿರ್ಧಾರವನ್ನೇನಾದರೂ ಬಂಜಗೆರೆ ಪ್ರಕಟಿಸಿದ್ದರೆ, ಅವರ ಈವರೆಗಿನ ಬೌದ್ಧಿಕ ಹಾಗೂ ಹೋರಾಟದ ಜೀವನ ಅನುಮಾನಾಸ್ಪದವೇ ಆಗುತ್ತದೆ. ಅಲ್ಲಾ ಜಯಪ್ರಕಾಶ್, ಸಲ್ಲದ ಕಾರಣದ ಮೇಲೆ ಯಾರಾದರೂ ಸಾಮಾಜಿಕ ಅಶಾಂತಿ ಉಂಟು ಮಾಡಿದರೆ, ಅವರನ್ನು ನಿರ್ವಹಿಸುವ ಜವಾಬ್ದಾರಿ ಸರ್ಕಾರದ್ದು. ಅದನ್ನೇಕೆ ನೀವು ಹೊರಲು ಹೋದಿರಿ? ಅಥವಾ ನಿಮ್ಮ ನಿರ್ಧಾರದಿಂದ ಆ ಉಗ್ರ ಹೋರಾಟಗಾರರು ತಮ್ಮ ಪ್ರತಿಭಟನೆಯನ್ನು ನಿಲ್ಲಿಸಿಬಿಡುತ್ತಾರೆಂದು ನಂಬುವಷ್ಟು ನೀವು ಹುಂಬರೋ? ಹಾಗೇನೂ ಅನ್ನಿಸುವುದಿಲ್ಲವಲ್ಲವಲ್ಲ? ಪುಸ್ತಕದಲ್ಲಿ ಅಸಮ್ಮತಾರ್ಹವಾದ್ದು ಇರಬಹುದಾದರೂ, ಆಕ್ಷೇಪಾರ್ಹವಾದದ್ದು ಏನೂ ಇಲ್ಲದಿದ್ದಾಗ ತಾತ್ಕಾಲಿಕ ವಾಪಸಾತಿಯಾದರೂ ಏಕೆ? ಈ ನಿರ್ಧಾರದ ಮೂಲಕ ಜಾತಿವಾದಿ ಗುಂಪುಗಳು ನಡೆಸಿದ ಪ್ರತಿಭಟನೆಗೆ ಈಗ ನೀವೇ ಪರೋಕ್ಷ ಸಮರ್ಥನೆ ಒದಗಿಸಿದ್ದೀರಿ ಹಾಗೂ ಪುಸ್ತಕ ಓದದ ಅಪಾರ ಜನರ ಕಣ್ಣಲ್ಲಿ ಅನುಮಾನಾಸ್ಪರಾಗುವ ಅವಕಾಶವನ್ನು ನೀವೇ ಕಲ್ಪಿಸಿಕೊಂಡಿದ್ದೀರಿ. ಅಷ್ಟೇ ಅಲ್ಲ, ಮುಂದೆ ನ್ಯಾಯಾಲಯದಲ್ಲಿ ಈ ಸಂಬಂಧ ನೀವು ಹೂಡಬಹುದಾದ (ಹಾಗೆಂದು ಭಾವಿಸಿದ್ದೇನೆ) ಮೊಕದ್ದಮೆಯಲ್ಲಿ ಅನಗತ್ಯ ಕಸಿವಿಸಿಯನ್ನು ಅನುಭವಿಸುವ ಪರಿಸ್ಥಿತಿಯನ್ನು ನೀವೇ ತಂದುಕೊಂಡಿದ್ದೀರಿ.

ಹಾಗೆ ನೋಡಿದರೆ, ಇಂದಿನ ರಾಜಕೀಯ ವಾತಾವರಣವೇ ಇಂತಹ ತಿಕ್ಕಲುತನಗಳಿಗೆ, ಆಂದೋಲನಗಳ ನಾಶಕ್ಕೆ ಪ್ರೇರಣೆ ನೀಡುವಂತಿದೆ. ಬುದ್ಧಿಜೀವಿಗಳಿಗೆ, ಹೋರಾಟಗಾರರಿಗೆ ಪ್ರಭುತ್ವದಿಂದ ಹಾಗೂ ಅದರ ದಲ್ಲಾಳಿ ಸಂಸ್ಥೆಗಳಿಂದ ಎಷ್ಟೊಂದು ಆಮಿಷಗಳು, ಆಕರ್ಷಣೆಗಳು! ಮತ್ತು ಆ ಸಂಬಂಧದ ಆತಂಕಗಳು... ಸ್ವದೇಶದ್ದೋ ವಿದೇಶದ್ದೋ ಹಣದ ಹೊಳೆ ಹರಿಸುವ ಅನೇಕ ಯೋಜನೆಗಳು, ಕಾರ್ಯಕ್ರಮಗಳು, ಸ್ವಯಂಸೇವಾ ಸಂಸ್ಥೆಗಳು, ಟ್ರಸ್ಟ್‌ಗಳು, ಅಧಿಕಾರ ಸ್ಥಾನಗಳು, ಪ್ರಶಸ್ತಿಗಳು! ಇವಕ್ಕೆ ಬಲಿಯಾಗದವರೇ ಪಾಪಿಗಳೆನಿಸಿಕೊಳ್ಳುವ ಪರಿಸ್ಥಿತಿ ಈಗ... ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲೂ ಜನ ಸಿನಿಕರಾಗದೆ ಸಮಾನತೆಯ ಆಶಯಗಳಿಗೆ ಅಥವಾ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಧಕ್ಕೆ ಒದಗಿದಾಗಲೆಲ್ಲಾ ಧ್ವನಿ ಎತ್ತುವ ಶಕ್ತಿ ಇನ್ನೂ ಉಳಿಸಿಕೊಂಡಿದ್ದಾರೆ ಎಂದರೆ,

ಬಂಜಗೆರೆಯವರಂತಹ ಹೊಸ ತಲೆಮಾರಿನ ಯುವ ಚಿಂತಕರಿಗೆ ಹಾಗೂ ಹೋರಾಟಗಾರರಿಗೆ ಎಷ್ಟೆಲ್ಲಾ ಜವಾಬ್ದಾರಿ ಇರಬೇಡ! ಇಂತಹ ಜವಾಬ್ದಾರಿ ಬಂಜಗೆರೆಯವರಿಂದ, ಅವರ ಜೊತೆ ನಿಂತವರಿಗಾಗಿ ಕನಿಷ್ಠ ಒಂದು ಪ್ರಾಮಾಣಿಕ ಹಾಗೂ ಸಮಂಜಸ ವಿವರಣೆಯನ್ನು ಬೇಡುತ್ತದೆ.

ಬಂಜಗೆರೆಯವರು ತಮ್ಮ ಈ ಅಸಂಗತ, ಅಸಮರ್ಥನೀಯ ಹಾಗೂ ಕೆಟ್ಟ ಸಂಪ್ರದಾಯದ ನಿರ್ಧಾರದಿಂದ ಯಾವ ಅಪಾಯದಿಂದ ರಕ್ಷಣೆ ಪಡೆದಿದ್ದಾರೋ ಅಥವಾ ಯಾರನ್ನು ರಕ್ಷಿಸಲು ಸಾಧ್ಯವಾಗಿದೆಯೋ ತಿಳಿಯದಾಗಿದೆ. ಆದರೆ 'ಆನುದೇವಾ...' ಪ್ರಕಟವಾದಾಗಿನಿಂದ ಪ್ರತಿಕೂಲ ವಾತಾವರಣದ ನಡುವೆಯೂ ತಾತ್ವಿಕ ಸಹಾನುಭೂತಿಯೊಂದಿಗೆ ಆ ಪುಸ್ತಕದ ಆಶಯದ ಪರ ನಿಂತ ಕರ್ನಾಟಕದ ಒಂದು ದೊಡ್ಡ ಜನಪರ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಗುಂಪಿಗೆ ಅವರು ಆಘಾತ ಉಂಟು ಮಾಡಿದ್ದಾರೆ. ಆ ಮೂಲಕ ದಿನೇ ದಿನೇ ಕುಂದುತ್ತಿರುವ ಜನಪರ ಹೋರಾಟಗಳ ನೈತಿಕ ಸ್ಥೈರ್ಯವನ್ನು ಮತ್ತಷ್ಟು ಕುಂದಿಸಿದ್ದಾರೆ. ಇಂದು ಸರ್ಕಾರದ ಕ್ರಮದ ವಿರುದ್ಧ ಒಂದಷ್ಟು ಜನ ಪ್ರತಿಭಟನೆ ಮಾಡುತ್ತಿದ್ದರೆ, ಅವರು ತಮ್ಮನ್ನು ಉದಾರವಾಗಿ ಕ್ಷಮಿಸಿದ್ದಾರೆ ಅಥವಾ ತಮ್ಮ ನಿರ್ಧಾರದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಒಂದು ತಾತ್ವಿಕತೆಯನ್ನು ಎತ್ತಿ ಹಿಡಿಯಲು ಮುಂದಾಗಿದ್ದಾರಷ್ಟೆ ಎಂಬುದನ್ನು ಜಯಪ್ರಕಾಶ್ ತಿಳಿದರೆ ಒಳ್ಳೆಯದು. ಹಾಗೇ, ಒಮ್ಮೆ ಒಂದು ಅಧ್ಯಯನವನ್ನು ಸಾರ್ವಜನಿಕರ ಅವಗಾಹನೆಗೆ ಒಪ್ಪಿಸಿದ ಮೇಲೆ ಅದರ ಮೇಲಿನ ಹಕ್ಕು ಲೇಖಕನ ಜೊತೆಗೇ ಸಾರ್ವಜನಿಕರಿಗೂ ಸೇರುತ್ತದೆ. ಹೀಗಾಗಿ ಲೇಖಕನೇ ಏಕಪಕ್ಷೀಯವಾಗಿ ಪುಸ್ತಕವನ್ನು ವಾಪಸ್ ಪಡೆಯುವುದೆಂದರೆ, ಅದು ಸಾರ್ವಜನಿಕರ ಪಾಲಿನ ಹಕ್ಕಿಗೆ ಚ್ಯುತಿ ತಂದಂತೆ ಎಂಬುದನ್ನು ಅವರು ಅರಿಯಬೇಕಿದೆ.

ಅದೇನೇ ಇರಲಿ, ಇಷ್ಟೆಲ್ಲ ವಾದ ವಿವಾದ, ಪ್ರತಿಭಟನೆ, ಗೂಂಡಾಗಿರಿ ಹಾಗೂ ಸರ್ಕಾರದ ಅಪ್ರಜಾಸತ್ತಾತ್ಮಕ ಕ್ರಮಗಳು ಜರುಗುತ್ತಿದ್ದರೂ, ನಮ್ಮ ಬೌದ್ಧಿಕ ವಲಯದ ಒಂದು ವರ್ಗದ ಮೌನವನ್ನು ಗಮನಿಸುತ್ತೀದ್ದೀರಾ? ಪುಸ್ತಕವೊಂದನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿ ಪ್ರಬಲವಾದ ಜಾತಿ ಗುಂಪೊಂದು ರಾಜ್ಯಾದ್ಯಂತ ಕಿಚ್ಚು ಹತ್ತಿಸಿ ಅಶಾಂತಿಯ ವಾತಾವರಣ ನಿರ್ಮಾಣ ಮಾಡುವ ಬೆದರಿಕೆ ಒಡ್ಡುತ್ತಿದ್ದಾಗ, ಅದನ್ನು ಸಂಘಟಿತವಾಗಿ ವಿರೋಧಿಸಿ ಸಾರಸ್ವತ ಲೋಕದ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯ ಮೇಲಿನ ಅನುಚಿತ ಹಲ್ಲೆಯನ್ನು ನಾವು ಸುಮ್ಮನೆ ನೋಡುತ್ತಾ ಕೂರುವುದಿಲ್ಲ ಎಂಬ ಸಂದೇಶವೊಂದನ್ನು ಸರ್ಕಾರಕ್ಕೆ ಮುಟ್ಟಿಸುವುದು ತಮ್ಮ ತುರ್ತು ಕರ್ತವ್ಯವೆಂದು ಈ ವರ್ಗಕ್ಕೆ ಅನ್ನಿಸಲೇ ಇಲ್ಲ! ಅಷ್ಟೇ ಅಲ್ಲ, 'ಪ್ರಜಾವಾಣಿ'ಯಂತಹ ಪತ್ರಿಕೆ ಕೂಡ ಮುಟ್ಟುಗೋಲಿನ ನಂತರವೂ ಈ ಬಗ್ಗೆ ತನ್ನ ನಿಲುವನ್ನು ಪ್ರಕಟಿಸಲು ಹಿಂಜರಿದಿದೆ! ಇದರರ್ಥ, ಇಂದು ಕರ್ನಾಟಕಕ್ಕೆ ಒಂದು ವಿಶ್ವಾಸಾರ್ಹ ಬೌದ್ಧಿಕ ಅಥವಾ ಸಾಂಸ್ಕೃತಿಕ ನಾಯಕತ್ವವೇ ಇಲ್ಲವಾಗಿದೆ. ಇದು ದುರಂತ.

ನಮ್ಮ ಕಂಬಾರರನ್ನೇ ನೋಡಿ. ಸದ್ಯಕ್ಕೆ ತಮ್ಮ ಸ್ವಜಾತಿ ಬಂಧುಗಳಿಗೆ ಪರಿಶಿಷ್ಟ ವರ್ಗದ ಮಾನ್ಯತೆ ದೊರಕಿಸಿಕೊಡಲು ವಿಧಾನ ಪರಿಷತ್ತಿನ ಮೂಲಕ ನಡೆಸಿರುವ ಹೋರಾಟದ ಏಕಾಗ್ರತೆಯಲ್ಲಿ ಅವರಿಗೆ ಮಿಕ್ಕಾವ ವಿಷಯಗಳೂ ಮುಖ್ಯವೇ ಅನಿಸಿಲ್ಲ! ಇವರು ಪರಿಷತ್ತಿನ ಸದಸ್ಯರಾಗಿರುವುದು ಕೇವಲ ಜಾತಿ ಪ್ರತಿನಿಧಿಯಾಗಿಯೋ ಅಥವಾ ವಿಶಾಲ ಸಾರಸ್ವತ ಲೋಕದ ಪ್ರತಿನಿಧಿಯಾಗಿಯೋ? ಕಂಬಾರರು, ಇಂದು ನಮ್ಮ ಲೇಖಕ– ಕಲಾವಿದ ವರ್ಗ ಸರ್ಕಾರ ಕೊಡಮಾಡುತ್ತಿರುವ ಸವಲತ್ತುಗಳ ದಾಕ್ಷಿಣ್ಯಕ್ಕೆ ಸಿಕ್ಕಿ ತಮ್ಮ ಧ್ವನಿಯನ್ನೇ ಕಳೆದುಕೊಳ್ಳುವಂತಾಗಿರುವ ದುರಂತಕ್ಕೆ ಎಂತಹ ಪ್ರತಿಭಾವಂತರೂ ಬಲಿಯಾಗಬಲ್ಲರು ಎಂಬುದಕ್ಕೆ ಸಾಕ್ಷಿಯಂತಿದ್ದಾರೆ. ಒಂದನೇ ತರಗತಿಯಿಂದ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರ ಸರಿಯಲ್ಲವೆಂಬ ತಮ್ಮ ಮೂಲ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಕಳೆದ ವರ್ಷದ 'ಆಳ್ವಾಸ್ ನುಡಿಸಿರಿ'ಯ ಅಧ್ಯಕ್ಷತೆ ವಹಿಸಿ ಘೋಷಿಸಿದ್ದ ಕಂಬಾರರು, ಸಂಬಂಧಪಟ್ಟ ಆಜ್ಞೆ ಹೊರಬಿದ್ದ ಮೇಲೂ ಪರಿಷತ್ತಿನಲ್ಲಿ ಈ ಬಗ್ಗೆ ಒಂದೂ ಮಾತಾಡಿದ ದಾಖಲೆಯಿಲ್ಲ! ಈಗ ಸದುದ್ದೇಶದ ವಿಚಾರಶೀಲ ಪುಸ್ತಕವೊಂದನ್ನು ಮುಟ್ಟುಗೋಲು ಹಾಕಿಕೊಂಡಾಗಲೂ, ವಿರೋಧ ಬೇಡ; ತಮ್ಮ ವೈಯುಕ್ತಿಕ ಅನ್ನಿಸಿಕೆಯನ್ನೂ ಪ್ರಕಟಿಸದಷ್ಟು ಎಚ್ಚರಿಕೆ ವಹಿಸಿದ್ದಾರೆಂದರೆ, ಇವರನ್ನು ಸಾರಸ್ವತ ಲೋಕದ ಶಾಸಕ ಪ್ರತಿನಿಧಿಯೆಂದು ಹೇಗೆ ಮಾನ್ಯ ಮಾಡುವುದು? ಕಂಬಾರರೇ ಹೇಳಬೇಕು...

ನಮ್ಮ ಈ ವಿಧಾನ ಪರಿಷತ್ತಿಗೆ ಈಗ ನೂರು ವರ್ಷಗಳ ಸಂಭ್ರಮವಂತೆ. ವಿವಿಧ ಕ್ಷೇತ್ರಗಳ ತಜ್ಞರ, ಪ್ರಾಜ್ಞರ, ಅನುಭವಿಗಳ, ಹಿರಿಯರ ಹಾಗೂ ಬುದ್ಧಿಜೀವಿಗಳ ಸಭೆಯಾಗಿ ಪರಿಕಲ್ಪಿತವಾದ ಇದು ಇಂದು ವಿವಿಧ ಕ್ಷೇತ್ರಗಳ ದಲ್ಲಾಳಿಗಳ, ಅವರ ಚೇಲಾಗಳ ಹಾಗೂ ಜನರ ವಿಶ್ವಾಸ ಕಳೆದುಕೊಂಡ ಧುರೀಣರ ರಾಜಕೀಯ ಪುನರ್ವಸತಿ ಕೇಂದ್ರವಾಗಿ ಹೋಗಿದೆ! ತಮ್ಮ ವಿಶೇಷ ಪ್ರತಿಭೆಗಳ ಕಾರಣದಿಂದಾಗಿ ಈ ಮನೆಯ ಸದಸ್ಯರು ಕೆಳ ಮನೆಯ ಸದಸ್ಯರಿಗಿಂತ ಜನರಿಗೆ ಹೆಚ್ಚು ಪರಿಚಯವಿರಬೇಕು. ಆದರೆ ವಾಸ್ತವವೆಂದರೆ ಇವರಲ್ಲಿ ಬಹುಪಾಲು ಜನರು ಸಾರ್ವಜನಿಕರಿಗೆ ಅಪರಿಚಿತರಾಗಿಯೇ ಉಳಿದಿದ್ದಾರೆ! ಮೇಲ್ಮನೆ ಎನಿಸಿಕೊಂಡಿರುವ ಈ ಮನೆಯ ಯಾವುದೇ ಚರ್ಚೆ ಕೆಳಮನೆಯಲ್ಲಿ ನಡೆಯುವ ಚರ್ಚೆಗಿಂತ ಗುಣಮಟ್ಟದಲ್ಲಿ ಭಿನ್ನವಾಗಿ ಕಂಡಿದೆಯೇ? ಕೆಳಮನೆಗೆ ಮಾರ್ಗದರ್ಶಕವಾಗಿ ಹಾಗೂ ಮಾದರಿಯಾಗಿ ಅಲ್ಲಿನ ಸದಸ್ಯರ ಗೌರವಕ್ಕೆ ಪಾತ್ರವಾಗಿರಬೇಕಾದ ಮೇಲ್ಮನೆ, ಹಲವು ಬಾರಿ ಆ ಮನೆಯಿಂದ ತನ್ನ ರದ್ದತಿಯ ಒತ್ತಾಯವನ್ನು ಎದುರಿಸಬೇಕಾದ ದುಃಸ್ಥಿತಿಗೆ ಈಡಾಗಿದೆ! ಹಾಗಾಗಿಯೇ ಮೊನ್ನೆಯ ಸಂಭ್ರಮಾಚರಣೆಯ ಸಂದರ್ಭದಲ್ಲಿ ರಾಜ್ಯಪಾಲರು ಹಾಗೂ ವಿಧಾನಸಭಾಧ್ಯಕ್ಷರು ತಮ್ಮ ಭಾಷಣಗಳಲ್ಲಿ ಈ ಸದನದ ಘನತೆಯನ್ನು ಪುನಃಸ್ಥಾಪಿಸುವ ಅಗತ್ಯವನ್ನು ಒತ್ತಿ ಹೇಳಿ ಕೆಲವು ಸಲಹೆಗಳನ್ನು ನೀಡುವಂತಾಗಿರುವುದು! ವಿವಿಧ ಕ್ಷೇತ್ರಗಳ ಬುದ್ಧಿಜೀವಿಗಳ ಸದನವಾಗಿರಬೇಕಾದ ಪರಿಷತ್ತಿನ ಇಂದಿನ ಅವನತಿ ನಮ್ಮ ಬುದ್ಧಿಜೀವಿಗಳ ಸಾರ್ವತ್ರಿಕ ಅವನತಿಯ ಪ್ರತೀಕವೂ ಆಗಿದ್ದರೆ ಆಶ್ಚರ್ಯವಿಲ್ಲ.

ಉದಾಹರಣೆಗೆ, ಮೊನ್ನೆ ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ್ದ ಭೈರಪ್ಪನವರ ಕಾದಂಬರಿಯನ್ನಾಧರಿಸಿದ 'ನಾಯಿ ನೆರಳು' ಸಿನೆಮಾ ನೋಡಿ ಗಾಬರಿಯಾದೆ! ಪುನರ್ಜನ್ಮದಲ್ಲಿನ ನಂಬಿಕೆ ಬಗ್ಗೆ ನಾನಿಲ್ಲಿ ಮಾತಾಡುತ್ತಿಲ್ಲ. ಅದನ್ನೊಪ್ಪಿಕೊಂಡು ನೋಡಿದರೂ, ಈ ಚಿತ್ರ ಅಸಂಬದ್ಧವಾಗಿದೆ. ತಲೆ ಬೋಳಿಸಿ ಮನೆಯಲ್ಲಿಟ್ಟುಕೊಂಡ– ಬೆಳೆದ ಮಗಳೊಬ್ಬಳ ತಾಯಿಯೂ ಆದ– ವಿಧವೆ ಸೊಸೆಯನ್ನು, ಆಕೆಯ ಗಂಡನಾಗಿದ್ದ ತನ್ನ ಮಗನೇ ಪುರ್ನಜನ್ಮ ಪಡೆದು ಬಂದವನೆಂದು ಹೇಳಲಾದ ಎಳೆವಯಸ್ಸಿನ ಯುವಕನೊಬ್ಬನಿಗೆ ಸಂತೋಷವಾಗಲೆಂದು ಬಣ್ಣದ ಸೀರೆ ಹಾಗೂ ಚಿನ್ನದ ಆಭರಣಗಳನ್ನು ತೊಟ್ಟುಕೊಳ್ಳುವಂತೆ ಒತ್ತಾಯಿಸುವ ಅತ್ತೆಗೆ; ಈ ಒತ್ತಾಯದ ಫಲವಾಗಿ ಅವಳು ಅವನೊಂದಿಗೆ ಮರು ದಾಂಪತ್ಯ ಆರಂಭಿಸಿದಾಗಷ್ಟೇ ಅದರ ಅಶ್ಲೀಲತೆ ಕಾಣತೊಡಗುತ್ತದೆ! ಶಾಸ್ತ್ರಾಚಾರ ಸಂಪನ್ನನಾದ ಮಾವ ಇದೆಲ್ಲವನ್ನೂ ಸಹಾನುಭೂತಿಯಿಂದ ನೋಡುತ್ತಿರುತ್ತಾನೆ ಮಾತ್ರವಲ್ಲ; ಮೊಮ್ಮಗಳ ಒತ್ತಾಯಕ್ಕೆ ಮಣಿದು, ಪುನರ್ಜನ್ಮಿತ ಮಗನನ್ನು ಮನೆಯಲ್ಲಿಟ್ಟುಕೊಂಡೇ ಆ ಮಗನ ಶ್ರಾದ್ಧವನ್ನೂ ಮಾಡುತ್ತಾನೆ! ಹಾಗಾದರೆ, ಶ್ರಾದ್ಧ ಮಾಡುವುದು ಆತ್ಮಕ್ಕೋ, ದೇಹಕ್ಕೋ? ಆದರೆ, ಇದಾವುದರ ಬಗೆಗೂ ತಲೆ ಕೆಡಿಸಿಕೊಳ್ಳದೇ ಹೋದ ಜಾತಿ ಸಮಾಜ, ಈ ಮರು ದಾಂಪತ್ಯ ಬಸುರಿಗೆ ಕಾರಣವಾದದ್ದು ಗೊತ್ತಾದೊಡನೆ, ಶಾಸ್ತ್ರದ ಚರ್ಚೆ ಶುರು ಮಾಡುತ್ತದೆ! ಇದರ ಆಧಾರದ ಮೇಲೆ ಕಟ್ಟಲ್ಪಡುವ ಹುಡುಗಾಟವೆನ್ನಿಸುವ ನಾಟಕೀಯತೆಯೊಂದಿಗೆ ಕೋರ್ಟು– ಕಛೇರಿ ಎಂದೆಲ್ಲಾ ಅಸಂಬದ್ಧವಾಗಿ ಬೆಳೆಯುವ ಈ ಚಲನಚಿತ್ರ, ಸಹಜವಾಗಿಯೇ ಅಸಂಬದ್ಧ ಕೊನೆ ಕಾಣುತ್ತದೆ.

ಇದು ಗಿರೀಶ್ ಕಾಸರವಳ್ಳಿಯವರ ಇತ್ತೀಚಿನ ಕಲಾ ಕೌಶಲ್ಯ! ತಮ್ಮ ಘನ ಗಂಭೀರ ಹಾಗೂ ಸಂಸ್ಕೃತಿ ಸಂಪನ್ನ ನಿಧಾನ ಗತಿ ಶೈಲಿಯ ಮೂಲಕ ವಸ್ತುವೊಂದರ ತಾಂತ್ರಿಕ ಹಾಗೂ ತಾತ್ವಿಕ ಅಸಂಬದ್ಧತೆಗಳನ್ನೆಲ್ಲ ಮುಚ್ಚಿ ಹಾಕಿಬಿಡಬಹುದು ಎಂದೇನಾದರೂ ಕಾಸರವಳ್ಳಿಯವರು ನಂಬಿದ್ದರೆ, ಅದು ಕಲಾವಿದ ತನಗೆ ತಾನೇ ಮಾಡಿಕೊಳ್ಳಬಹುದಾದ ಮೋಸವಷ್ಟೆ ಇದನ್ನು ಬಹುಶಃ ಅವರು ತಿಳಿಯದವರೇನಲ್ಲ. ಆದರೆ ಗಿರೀಶ್ ತಮ್ಮ ಮಾಧ್ಯಮ ಕೌಶಲ್ಯ ಪ್ರದರ್ಶಿಸಿಲು ಏನೋ ಒಂದು ಸರಕು ಮತ್ತು ಎಂತದೋ ಒಂದು ಹಣಕಾಸಿನ ಮೂಲ ಸಿಕ್ಕರೆ ಸಾಕು ಎನ್ನುವಂತಹ ನೈತಿಕ ದುರವಸ್ಥೆ ತಲುಪಿದ್ದರೆ, ಅದು ಅವರ ಸೃಷ್ಟಿಶೀಲತೆಯ ಸಾವಷ್ಟೆ. ಹಿಂದೆ ಇವರ 'ಘಟಶ್ರಾದ್ಧ' ನೋಡಿ ಬಹುವಾಗಿ ಮೆಚ್ಚಿದ್ದ ನಾನು, ಇತ್ತೀಚೆಗೆ ಇದೇ ಕಥೆಯನ್ನಾಧರಿಸಿದ ಹಿಂದಿ ಚಲನಚಿತ್ರ 'ದೀಕ್ಷಾ'(?) ನೋಡಿ, ನನಗೆ ನಾನೇ ಮೋಸ ಹೋದ ಪರಿ ನೆನೆಸಿಕೊಂಡು ನಾಚಿಕೆಯಾಯಿತು. ಕೂಡಲೇ, ವೈದಿಕರ ಶಾಸ್ತ್ರಾಚಾರಗಳ ಹುಸಿ ಸಾಂಕೇತಿಕತೆಯ ಬೌದ್ಧಿಕ ಉರುಳಿನ ಬಗ್ಗೆ ತೇಜಸ್ವಿ ನೀಡಿದ್ದ ಎಚ್ಚರಿಕೆಯ ಮಾತು ನೆನಪಾಗಿ, ಮೈ ಜುಮ್ಮೆಂದಿತು!

ಆಗಸ್ಟ್ ೧೦, ೨೦೦೭

ಬಂಜಗೆರೆಯವರಿಗೆ ಪ್ರತಿಕ್ರಿಯೆ

ನನ್ನ ಈ ಅಂಕಣಕ್ಕೆ ಗೆಳೆಯ ಬಂಜಗೆರೆಯವರು ಬರೆದಿರುವ ಪ್ರತಿಕ್ರಿಯೆಯನ್ನು ನೋಡಿದೆ. ನನ್ನ ಅಂಕಣ ಅವರಿಗೆ ಹೇಳಿಕೊಳ್ಳಬೇಕಾದ್ದನ್ನೆಲ್ಲ ವಿಸ್ತಾರವಾಗಿ ಹೇಳಿಕೊಳ್ಳಲು ಒಂದು ನೆಪವಾಗಿ ಒದಗಿ ಬಂದಿರುವುದು ಸಂತೋಷದ ವಿಷಯವೇ. 'ನನ್ನ ನಿಲುವುಗಳ ಬಗ್ಗೆ ನಾನೇ ಹೆಚ್ಚು ವಿವರಿಸುತ್ತಾ ಹೋದಂತೆಲ್ಲಾ ಅದು ಆತ್ಮರತಿಯ ರೂಪ ತಳೆಯುವ ಅಪಾಯವನ್ನು ಹೊಂದಿದೆ' ಎಂಬ ಎಚ್ಚರಿಕೆಯಿಂದ ಬರೆದಿದ್ದರೂ, ಅವರು ಈ ಬರಹದ ಮೂಲಕ ತಮ್ಮನ್ನು ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶದಲ್ಲಿ ದುರಂತ ನಾಯಕನಂತೆಯೇ ಪ್ರಸ್ತುತಗೊಳಿಸಿಕೊಂಡಿದ್ದಾರೆ ಎಂಬುದು ಮಾತ್ರ ಎದ್ದು ಕಾಣುವಂತಿದೆ! ಹಾಗೇ, ಅವರು ನೀಡಿರುವ ವಿವರಣೆಗಳಲ್ಲಿ ನನ್ನ ಊಹೆಗೆ ನಿಲುಕದಿದ್ದ ಹೊಸ ಸಂಗತಿಗಳೇನೂ ಇಲ್ಲ.

ಚಿಕವೀರ ರಾಜೇಂದ್ರ, ಧರ್ಮಕಾರಣ, ಮಹಾಚೈತ್ರ ಹಾಗೂ *ಮಾರ್ಗ*– ೨ ಪ್ರಕರಣಗಳ ಸಂದರ್ಭದಲ್ಲೇ ಕರ್ನಾಟಕದ ಸಾಂಸ್ಕೃತಿಕ ವಾತಾವರಣ ಎಷ್ಟು ರೂಕ್ಷವಾಗಿ ಜಾತಿವಾದಿಯಾಗಿದೆ ಎಂಬುದು ಗೊತ್ತಿದ್ದರೂ; ವಿವಾದ ಹುಟ್ಟಿಸಬಹುದೆಂಬ ಅನುಮಾನವಿದ್ದರೂ ಆ ಸಂಗತಿಗಳನ್ನು ಸಮರ್ಪಕ ವಿವರಣೆಗಳಿಲ್ಲದೆ ಪ್ರಕಟಿಸುವ ಅವಸರದ ತೀರ್ಮಾನವನ್ನು ಏಕೆ ಕೈಗೊಳ್ಳಲಾಯಿತು? ಬೇರೆಯವರ ಒತ್ತಡ ಎಂದು ಹೇಳುವುದು ಸಂಶೋಧಕನೊಬ್ಬನ ಹವ್ಯಾಸಿತನ ಮಾತ್ರವೆನಿಸಿಕೊಂಡೀತು. ಅಲ್ಲದೆ, ಯಾರೋ ಒಬ್ಬ ಹಿನ್ನೆಲೆಗೆ ಸರಿದಿದ್ದ ಜಾತಿ ಮುಖಂಡನೊಬ್ಬನಿಗೆ ಪುನಃ ನಾಯಕನಾಗಲು ಸಹಾಯವಾಯಿತೆಂದೋ; ಇನ್ನೊಬ್ಬ ಮುಖಂಡನಿಗೆ ಉನ್ನತ ಪದವಿ ಸಿಗಲು ಪೂರಕ ರಾಜಕೀಯ ವಾತಾವರಣ ನಿರ್ಮಾಣವಾಯಿತೆಂದೋ, ಪುಸ್ತಕವನ್ನು ಹಿಂತೆಗೆದುಕೊಳ್ಳಬೇಕಾಯಿತೆಂದು ಹೇಳುವುದು, ಸಂಶೋಧನಾ ವೃತ್ತಿಗೆ ಮಾಡುವ ಅವಮಾನವಷ್ಟೆ. ಕರ್ನಾಟಕ ಸಂಸ್ಕೃತಿಯ, ಚರಿತ್ರೆಯ ಪುನಾರಚನೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡವರೆಂದು ನಾನು ನಂಬಿದ್ದ ಬಂಜಗೆರೆಯವರು, ಸಮಕಾಲೀನ ಜಾತಿವಾದಿ ರಾಜಕಾರಣದ ಹುದಲಲ್ಲಿ ಸಿಕ್ಕಿಕೊಂಡು ತಮ್ಮ ಸಂಶೋಧನೆಯ ಬದ್ಧತೆಯನ್ನೇ ಅದಕ್ಕೆ ಒತ್ತೆ ಇಡಬಲ್ಲದಾದಷ್ಟು ದುರ್ಬಲರು ಎಂದು ನಾನಾದರೂ ಹೇಗೆ ಭಾವಿಸಲಿ? ಹೋಗಲಿ, ಪುಸ್ತಕವನ್ನು ಹಿಂತೆಗೆದುಕೊಂಡು ಸಾಧಿಸಿದ್ದಾದರೂ ಏನು? ಅವರು ಹೇಳಿಕೊಂಡಂತೆ, ಎರಡು ಅತಿಗಳ ಮಧ್ಯೆ ಇರುವ ಜನಸ್ತೋಮ ತಮ್ಮನ್ನು ಸಹಾನುಭೂತಿಯಿಂದ ಅರಿಯಲು ಸಾಧ್ಯವಾಗಿದೆ ಎಂದು ಅವರೇನಾದರೂ ಭಾವಿಸಿದ್ದರೆ, ಅವರು ತೀರಾ ಮುಗ್ಧರೆಂದೇ ಹೇಳಬೇಕಾಗುತ್ತದೆ.

---

* ಇದು **'ಸಾಂಸ್ಕೃತಿಕ ನಾಯಕತ್ವ ಕಳೆದುಕೊಂಡ ಕರ್ನಾಟಕ'** ಅಂಕಣದಲ್ಲಿನ ಕೆಲವು ಆಕ್ಷೇಪಣೆಗಳಿಗೆ ಬಂಜಗೆರೆಯವರು ನೀಡಿದ ಉತ್ತರಕ್ಕೆ ನನ್ನ ಪ್ರತಿಕ್ರಿಯೆ.

ನಮ್ಮ ಎಲ್ಲ ಸಾಮಾಜಿಕ- ಸಾಂಸ್ಕೃತಿಕ ಹೋರಾಟಗಳು ದೀರ್ಘ ಮುನ್ನೋಟವೇ ಇಲ್ಲದೆ, ಅದಕ್ಕೆ ತಕ್ಕುನಾದ ಮಾನಸಿಕ ಸಂಕಲ್ಪವಿಲ್ಲದೆ, ಬರೀ 'ಒಂದೊತ್ತಿದ್ದರೆ ಒಲೆ ಕಿತ್ತಾಕುವ' ಅಲ್ಪಕಾಲಿಕ ಆವೇಶದಲ್ಲೆ ಕೊನೆಗೊಂಡು, ಪಟ್ಟಭದ್ರರ ಸ್ಥಾನಮಾನ ಮತ್ತಷ್ಟು ಭದ್ರವಾಗುತ್ತಿರುವ ದುರಂತದ ಹಿನ್ನೆಲೆಯಲ್ಲಿ ನಾನು ನನ್ನ ಅಂಕಣದಲ್ಲಿ ಅಷ್ಟು ಕಟುವಾಗಿ ಬರೆಯಬೇಕಾಯಿತು. ಬಂಜಗೆರೆಯವರು ತಪ್ಪು ತಿಳಿಯಲಾರರು ಎಂದು ಭಾವಿಸಿದ್ದೇನೆ. ಅಲ್ಲದೆ, ಬಂಜಗೆರೆಯವರ ಪುಸ್ತಕದ ವಿವಾದದ ಹಿನ್ನೆಲೆಯಲ್ಲಿ ನಮ್ಮ ಸಾಂಸ್ಕೃತಿಕ ಲೋಕ ತೋರಿದ ಪ್ರತಿಕ್ರಿಯೆಯ ಸ್ವರೂಪವನ್ನು ವಿವರಿಸಲು ನಾನು ಲೇಖಕರಿಗೆ, ಬುದ್ಧಿಜೀವಿಗಳಿಗೆ ಆಳುವ ವರ್ಗ ಒಡ್ಡಿರುವ ಆಸೆ- ಆಮಿಷಗಳ ಬಗ್ಗೆ ಮಾಡಿದ ಪ್ರಸ್ತಾಪವನ್ನು, ಅವರು ತಮಗೆ ಅನ್ವಯಿಸಿಕೊಂಡು ನೊಂದುಕೊಳ್ಳುವ ಅಥವಾ ವಿವರಣೆ ನೀಡುವ ಅಗತ್ಯವಿರಲಿಲ್ಲ. ಈ ಸಂದರ್ಭದಲ್ಲಿ ಬಯಲಾದವರು ಬರೀ ಬುದ್ಧಿಜೀವಿಗಳಷ್ಟೇ ಅಲ್ಲ, ನಮ್ಮ ಮಾಧ್ಯಮಗಳೂ- ವಿಶೇಷವಾಗಿ ಈ ವಿಷಯದಲ್ಲಿ ನಮಗೆ ಬೆಂಬಲವಾಗಿ ನಿಲ್ಲಬೇಕಿದ್ದ ಕನ್ನಡದ ಮುಖ್ಯ ಪತ್ರಿಕೆಗಳೂ- ಕೂಡಾ ಎಂಬುದನ್ನು ಬಂಜಗೆರೆಯವರು ನೆನಪಿಡಬೇಕು.

ಇಷ್ಟೆಲ್ಲದರ ನಡುವೆಯೂ, ನನ್ನ ಒಂದು ಪ್ರಶ್ನೆ ಬಂಜಗೆರೆಯವರ ಮುಂದೆ ಹಾಗೇ ಇದೆ: ಪುಸ್ತಕವನ್ನು ಹಿಂತೆಗೆದುಕೊಳ್ಳಲು ನೀವು ಹೇಳಿರುವ ಕಾರಣಗಳ ಚರಿತ್ರೆ ಇದ್ದರೂ, ನಿಮ್ಮ ತೀರ್ಮಾನ ಪ್ರಕಟಿಸಲು ಪುಸ್ತಕದ ಮುಟ್ಟುಗೋಲು ಖಚಿತ ಎಂದು ಗೊತ್ತಾಗುವ ಹಿಂದಿನ ರಾತ್ರಿಯವರೆಗೂ ಏಕೆ ಕಾದಿರಿ?

ಅರವತ್ತರ ಭಾರತದ ಅರಳು ಮರುಳು

ಕಳೆದ ಆಗಸ್ಟ್ ಏಳರಂದು ಎಚ್. ಗಣಪತಿಯಪ್ಪನವರ ೮೪ನೇ ಹುಟ್ಟುಹಬ್ಬ. ಸಾಗರದಲ್ಲಿ ನಡೆದ ಈ ಸಮಾರಂಭದಲ್ಲಿ ಒಬ್ಬ ಅತಿಥಿಯಾಗಿ ಭಾಗವಹಿಸಿದ ಹೆಮ್ಮೆ ನನ್ನದು. ಇದೇ ವೇಳೆಗೆ ತನ್ನ ಅರವತ್ತನೇ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸ್ವತಂತ್ರ ಭಾರತದಲ್ಲಿ, ಇಂತಹ ಮರೆತುಹೋದ– ಮತ್ತು ಒಂದರ್ಥದಲ್ಲಿ ತಮ್ಮನ್ನು ತಾವೇ ಮರೆತುಕೊಂಡಿರುವ– ಮಹಾನುಭಾವರ ಹುಟ್ಟು ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸುವ ಜನ– ಅದೂ ಯುವ ಜನ– ಇನ್ನೂ ಇದ್ದಾರೆ ಎನ್ನುವುದೇ, ಈ ಭಾರತ ಸಾಗುತ್ತಿರುವ ಹಾದಿಯ ಬಗ್ಗೆ ನಾವೆಲ್ಲ ಆಸೆ ಕಳೆದುಕೊಳ್ಳದಿರುವುದಕ್ಕೆ ಕಾರಣವಿರಬಹುದು!

ಅಂದ ಹಾಗೆ, ಯಾರು ಈ ಗಣಪತಿಯಪ್ಪ? ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿನ ಪ್ರಥಮ ಜನಾಂದೋಲನವೆನಿಸಿಕೊಂಡ ಕಾಗೋಡು ಸತ್ಯಾಗ್ರಹದ ರೂವಾರಿ ಇವರು. ಎಪ್ಪತ್ತರ ದಶಕದಲ್ಲಿ ದೇವರಾಜ ಅರಸು ಕಾಲದಲ್ಲಿ ಜಾರಿಗೆ ಬಂದ ನಿಜವಾದ ಭೂ ಸುಧಾರಣಾ ಕಾನೂನುಗಳ ಮೂಲಕ ಉಳುವವನೇ ನೆಲದೊಡೆಯನಾದ ಕ್ರಾಂತಿಗೆ ಈ ಸತ್ಯಾಗ್ರಹ ಭೂಮಿಕೆ ಸಿದ್ಧಪಡಿಸಿತು ಎಂದು ಹೇಳಲಾಗುತ್ತದೆ. ಈಗ ನಿಂತು ರಾಜಕೀಯ ವಿಮರ್ಶೆ ಮಾಡುವವರಿಗೆ ಆ ಸತ್ಯಾಗ್ರಹದ ಅನೇಕ ಮಿತಿಗಳು ಕಾಣಬಹುದು. ಆದರೆ, ಆಗ ನಾಗರಿಕ ಜೀವನದ ಸಂಪರ್ಕವೇ ಇಲ್ಲದ ಆ ಮಲೆನಾಡಿನ ಮೂಲೆಯೊಂದರಲ್ಲಿ. ಭೂ ಮಾಲೀಕರ ದಬ್ಬಾಳಿಕೆಯನ್ನು ಪ್ರಶ್ನಿಸುವ ಪರಿವೆಯೇ ಇಲ್ಲದೆ ಮೂಕ ಪಶುಗಳಂತೆ ದುಡಿದು ಹೀನಾಯ ಸ್ಥಿತಿಯಲ್ಲಿ ಬದುಕುತ್ತಿದ್ದ ಸಮುದಾಯವೊಂದರಲ್ಲಿ, ಸ್ವಾಭಿಮಾನದ ಪ್ರಜ್ಞೆಯನ್ನು ಜಾಗೃತಗೊಳಿಸಿ ತಮ್ಮ ಶೋಷಣೆಯನ್ನು ಪ್ರಶ್ನಿಸುವಂತೆ ಮಾಡಿದ ದೊಡ್ಡ ಜನಶಕ್ತಿ ಗಣಪತಿಯಪ್ಪ. ಗಣಪತಿಯಪ್ಪ ಹೀಗೆ ಮೂಡಿಸಿದ ಎಚ್ಚರವನ್ನೇ ಶಾಂತವೇರಿ ಗೋಪಾಲ ಗೌಡ ಹಾಗೂ ಅವರ ಸಮಾಜವಾದಿ ಪಕ್ಷದ ಕಾರ್ಯಕರ್ತರು ಅಲ್ಲಿ ಒಂದು ಅಭೂತಪೂರ್ವ ಸತ್ಯಾಗ್ರಹವನ್ನಾಗಿ ಮಾರ್ಪಡಿಸಿದ್ದು.

ಶುಭ್ರವಾದ ಖಾದಿ ಕಚ್ಚೆ ಪಂಚೆ, ಜುಬ್ಬಾ, ನೆಹರೂ ಕೋಟು ಮಾತ್ರವಲ್ಲದೆ, ಕಾಂಗ್ರೆಸ್ ಟೊಪ್ಪಿಗೆಯನ್ನೂ ಧರಿಸಿ ಇಂದೂ ನಿರ್ಭಿಡೆಯಿಂದ ಕಾಂಗ್ರೆಸ್ಸಿಗರಾಗಿ ಕಾಣಿಸಿಕೊಳ್ಳುವ ಎಂಭತ್ತನಾಲ್ಕರ ಹರೆಯದ ಈ ಸುಂದರ ಸದೃಢ ಕಾಯದ ಗಣಪತಿಯಪ್ಪನವರನ್ನು ನೋಡಿದಾಗ, ಕಾಂಗ್ರೆಸ್ಸಿನವರನ್ನು ನೋಡಿದಾಗಲೆಲ್ಲ ನೆತ್ತಿಗೆ ಏರುವ ಸಿಟ್ಟು ಸ್ವಲ್ಪ ಇಳಿಯತೊಡಗುತ್ತದೆ. ಹೌದು, ಕಾಂಗ್ರೆಸ್ಸಿನವರು ಹಿಂದೊಮ್ಮೆ ಹೀಗೂ ಗೌರವಾನ್ವಿತರಾಗಿ ಇದ್ದರು ಎಂಬ ನೆನಪು ಆಗತೊಡಗುತ್ತದೆ ಹಾಗೂ ಗಾಂಧಿ ಕಟ್ಟಿದ ಆಂದೋಲನ ಜನರ ವಿಶ್ವಾಸ ಗಳಿಸಿಕೊಂಡದ್ದು ಸುಮ್ಮನಲ್ಲ ಎಂಬ ಅರಿವು ಮೂಡತೊಡಗುತ್ತದೆ! ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ ಸರ್ಕಾರಿ ಸೇವೆಯಿಂದ ಹೊರದೂಡಲ್ಪಟ್ಟು, ಆಗಿನ ಮುಂಬೈ ಪ್ರಾಂತ್ಯದ ಸಿದ್ಧಾಪುರದಿಂದ ಮೈಸೂರು ಪ್ರಾಂತ್ಯದ ಶಿವಮೊಗ್ಗ ಜಿಲ್ಲೆಗೆ ತಲೆ ತಪ್ಪಿಸಿಕೊಂಡು ಬಂದರು ಇಪ್ಪತ್ತರ ಹರೆಯದ ಗಣಪತಿಯಪ್ಪ. ಆಗ ಅವರು ಅರಣ್ಯದಲ್ಲಿ ಹೆಂಡ ಇಳಿಸುವ ಮತ್ತು ಭೂ ಮಾಲೀಕರ ಬಳಿ ಗೇಣಿ ಮಾಡುವ ಕೆಲಸಗಳಿಗೇ ಸೀಮಿತಗೊಂಡಿದ್ದ ಅಲ್ಲಿನ ದೀವರ ಸಮುದಾಯದ ಬಹುಶಃ ಏಕೈಕ ವಿದ್ಯಾವಂತ. ಆ ವಿದ್ಯೆಯೇ ಆತನನ್ನು ಮೇಲ್ಜಾತಿ ಭೂಮಾಲಿಕರ ಪ್ರಭುತ್ವದ ನಡುವೆಯೂ ವಿಚಲಿತನನ್ನಾಗಿ ಮಾಡದೆ, ತನ್ನ ಜಾತಿಯವರನ್ನು; ಜಾತಿ ಹೆಸರು ಬಿಟ್ಟು, 'ಸಾಗರ ತಾಲ್ಲೂಕು ರೈತ ಸಂಘ' ಎಂಬ ಹೆಸರಲ್ಲಿ ಸಂಘಟಿಸಲು ಸಾಧ್ಯವಾದದ್ದು. ಆ ಸಂಘಟನೆಯೊಳಗಿಂದಲೇ ಈಗಿನ ಕಾಗೋಡು ತಿಮ್ಮಪ್ಪ, ಬಂಗಾರಪ್ಪ ಮುಂತಾದ ಅಸ್ಪೃಶ್ಯೇತರ ಕೆಳ ಜಾತಿಗಳ ನಾಯಕತ್ವ– ಅದು ಇಂದು ಇತರ ಜಾತಿಗಳ ನಾಯಕತ್ವಗಳಂತೆಯೇ ಯಾವ ಮಟ್ಟವನ್ನಾದರೂ ಮುಟ್ಟಿರಲಿ– ಮೂಡುವಂತಾದದ್ದು. ಇದರಲ್ಲಿ ಗೋಪಾಲಗೌಡ ಹಾಗೂ ಅವರ ಸಮಾಜವಾದಿ ಚಳುವಳಿಯ ದೊಡ್ಡ ಪಾಲು ಇರುವುದಾದರೂ, ಸ್ವಾತಂತ್ರ್ಯೋತ್ತರ ಭಾರತದ ಸಂಸದೀಯ ರಾಜಕಾರಣದ ಸಾಮಾಜಿಕ ಸ್ವರೂಪವನ್ನು ಬದಲಿಸಿ, ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ನೀಡಿದ ಈ ಪ್ರಯತ್ನದಲ್ಲಿ, ಗಣಪತಿಯಪ್ಪ ಈಗಲೂ ಕಷ್ಟಪಟ್ಟು ಪ್ರತಿನಿಧಿಸುತ್ತಿರುವಂತೆ ತೋರುವ ಗಾಂಧಿ ರಾಜಕಾರಣದ ಪಾತ್ರ ಗಮನಾರ್ಹವಾದದು ಎಂಬುದು ಇಲ್ಲಿ ಪ್ರಸ್ತುತ.

ಹಾಗೆ ನೋಡಿದರೆ, ಗಣಪತಿಯಪ್ಪ ಇಂದು ಗಾಂಧಿ ರಾಜಕಾರಣದ ಅವನತಿಯ ಗುಟ್ಟನ್ನೂ ಹೇಳುವ ರಾಜಕೀಯ ಸಂಕಥನವೊಂದರ ನಾಯಕನಂತೆಯೂ ಇದ್ದಾರೆ! ಅವರ ಮಾತುಗಳನ್ನೀಗ ಕೇಳುತ್ತ ಹೋದರೆ, ಯಾರಿಗೆ ಬೇಕು ಈ ಶುದ್ಧ ಹಸ್ತ, ಸರಳ ಸಭ್ಯ ಬದುಕು– ಅದು ಸಮಕಾಲೀನ ಜೀವನದ ರಾಜಕೀಯ ಸಂಕೀರ್ಣತೆಗಳಿಗೆ ಸ್ಪಂದಿಸದೇ ಹೋಗುವಂತಿದ್ದರೆ ಎನ್ನಿಸಿದರೆ ಆಶ್ಚರ್ಯವಿಲ್ಲ. ಕಾಗೋಡು ಸತ್ಯಾಗ್ರಹದ ನಂತರದಲ್ಲೇ ನಡೆದ ರಾಜ್ಯದ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ಸಾಗರ ವಿಧಾನಸಭಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಗೋಪಾಲಗೌಡರನ್ನು ನಿಲ್ಲಿಸಿ ಗೆಲ್ಲಿಸಿದ ಗಣಪತಿಯಪ್ಪ, ಗೋಪಾಲಗೌಡರು ಎಷ್ಟು ಒತ್ತಾಯಿಸಿದರೂ ಸಮಾಜವಾದಿ ಪಕ್ಷ ಸೇರಲು ನಿರಾಕರಿಸಿ ಸ್ಥಳೀಯ ಕಾಂಗ್ರೆಸ್ ಪುಡಿ ರಾಜಕಾರಣದಲ್ಲೇ ಈವರೆಗೆ ಕಾಲ ಕಳೆದಿದ್ದಾರೆ! ಗೋಪಾಲಗೌಡರೊಮ್ಮೆ ಈ ಬಗ್ಗೆ

ಹತಾಶೆಯಿಂದ 'ನಿಮ್ಮಂತಹವರಿಗೆ ಗುಂಡು ಹಾಕದ ಹೊರತು ಸಮಾಜವಾದಿ ಚಳುವಳಿ ಬೆಳೆಯುವುದಿಲ್ಲ' ಎಂದು ಹಸಿ ಹುಸಿಯಾಗಿ ರೇಗಿದ್ದೂ ಉಂಟಂತೆ! ನನಗೆ ಕುತೂಹಲವಾಗಿ, ಮೊನ್ನೆ ಅವರನ್ನು ನೀವು ಸಮಾಜವಾದಿ ಪಕ್ಷವನ್ನೇಕೆ ಸೇರಲಿಲ್ಲ ಎಂದು ಕೇಳಿದೆ. ಅದಕ್ಕವರು ಬೋಳು ಬೋಳಾಗಿ ನಗುತ್ತಾ, ಕಡಿದಾಳು ಮಂಜಪ್ಪನವರನ್ನು ಬಿಟ್ಟು ಬರಲಾಗಲಿಲ್ಲ ಎಂದರು. ಅವರ ಧ್ವನಿಯಿಂದಲೇ ಇದು ಬರೀ ಸಬೂಬು ಎನ್ನಿಸಿ ನಾನು, 'ನಿಮ್ಮ ಅತಿ ಸಭ್ಯತೆ ಅತಿ ಸಜ್ಜನಿಕತೆಗಳೇ, ಸಮಾಜವಾದಿಗಳ ನೇರ ಮುಖಾಮುಖಿಯ ರಾಜಕಾರಣದಿಂದ ದೂರವಿರುವಂತೆ ಮಾಡಿತು ಅಲ್ಲವೇ?' ಎಂದು ಕೇಳಿದಾಗ ಅವರು ಮತ್ತಷ್ಟು ಬೋಳು ಬೋಳಾಗಿ ನಕ್ಕು; ಮುಖ ಮೇಲೆತ್ತಿ ಬಾಯಿಗೆ ಮುಂಗೈ ಇಳಿಸುವ ಭಂಗಿ ತೋರಿಸುತ್ತಾ, ಸಮಾಜವಾದಿಗಳ ಈ ಅಭ್ಯಾಸ ತಮಗೆ ಸರಿ ಬರಲಿಲ್ಲ ಎಂದು ಮಾರ್ಮಿಕವಾಗಿ ನುಡಿದರು!

ನಿಮಗೆ ಸಮಾಜವಾದಿಗಳಲ್ಲಿ ಆಗ ಅದೊಂದನ್ನು ಬಿಟ್ಟು ಬೇರೇನೂ ಕಾಣಲಿಲ್ಲವೇ ಮತ್ತು ಇಂದು ಈ ಅಭ್ಯಾಸ ಎಷ್ಟು ಕಾಂಗ್ರೆಸ್ಸಿಗರಿಗಿಲ್ಲ ಎಂದೇನೂ ನಾನು ಅವರನ್ನು ಕೇಳಲು ಹೋಗಲಿಲ್ಲ. ಏಕೆಂದರೆ, ಇಂತಹ ಪ್ರಶ್ನೆಗಳೆಲ್ಲ ಜುಜುಬಿ ಎನ್ನಿಸುವಷ್ಟರ ಮಟ್ಟಿಗೆ ಇವೊತ್ತಿನ ರಾಜಕಾರಣ ಗಬ್ಬೆದ್ದು ಹೋಗಿದೆ ಎಂಬುದು ಅವರಿಗೂ ಗೊತ್ತು. ಆದರೆ ಅವರಿಗೆ ಗೊತ್ತಾಗದೇ ಹೋಗಿರುವ ವಿಷಯವೆಂದರೆ, ಇದಕ್ಕೆ ಬರೀ ಸಭ್ಯತೆ– ಸಜ್ಜನಿಕೆಯನ್ನೇ ಸಾರ್ವಜನಿಕ ಜೀವನದ ಮುಖ್ಯ ಗುಣವನ್ನಾಗಿ ಪರಿಗ್ರಹಿಸಿ, ಗಾಂಧಿ ರಾಜಕಾರಣದ ಹಲ್ಲನ್ನೇ ಕಳಚಿಟ್ಟ ತಮ್ಮಂತಹವರ ಅತಿ ಮಡಿವಂತಿಕೆಯ ರಾಜಕಾರಣವೇ ಕಾರಣ ಎಂಬುದು. ಹಾಗಾಗಿಯೇ ಅವರು 'ನಕ್ಸಲೀಯರ ಬಳಿ ನನ್ನನ್ನು ಕರೆದುಕೊಂಡು ಹೋಗಿ; ನಾನು ಅವರ ಮನ ಒಲಿಸುವೆ' ಎಂದು ವೀರಾವೇಶದ ಮಾತಾಡುವರಾದರೂ, 'ಆದರೆ ನಾನು ಅವರೊಂದಿಗೆ ಮಾಡಿಕೊಂಡು ಬರುವ ಒಪ್ಪಂದವನ್ನು ಜಾರಿಗೊಳಿಸುವಂತೆ ಸರ್ಕಾರವನ್ನು ಒಪ್ಪಿಸುವುದು ನಿಮ್ಮ ಜವಾಬ್ದಾರಿ' ಎಂದು ಅಂತಿಮ ಜವಾಬ್ದಾರಿಯನ್ನು ನಮಗೇ ಒಪ್ಪಿಸಿಬಿಡುವಷ್ಟು ಅಸಹಾಯಕರು ಕೂಡ... ಇದೆಲ್ಲ ಅವರಿಗೆ ಸ್ಪಷ್ಟವಾಗುವ ಹೊತ್ತಿಗೆ ಕಾಲ ಮಿಂಚಿತ್ತೆಂದು ಕಾಣುತ್ತದೆ. ಇದನ್ನೇ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮತ್ತೋರ್ವ ಹಿರಿಯ ಸಮಾಜವಾದಿ ಜಿ. ಸದಾಶಿವರಾಯರು 'ಸ್ವಾತಂತ್ರ್ಯ ಹೋರಾಟ ಸರಿಯಾಗಿ ನಡೆದಿದ್ದರೆ, ಕಾಗೋಡು ಹೋರಾಟದ ಅಗತ್ಯವೇ ಇರುತ್ತಿರಲಿಲ್ಲ' ಎಂದು ವಿಶ್ಲೇಷಿಸುವ ಮೂಲಕ ಕಾಂಗ್ರೆಸ್ ಹಾಗೂ ಸಮಾಜವಾದಿಗಳ ನಡುವೆ ಇದ್ದದ್ದು ಸಭ್ಯತೆ– ಸಜ್ಜನಿಕೆಯ ವ್ಯತ್ಯಾಸವಲ್ಲ, ದೃಷ್ಟಿಕೋನದ ವ್ಯತ್ಯಾಸ ಎಂದು ಸೂಚಿಸಿದ್ದುದು.

ಇಂದು ೬೦ನೇ ಸ್ವಾತಂತ್ರ್ಯೋತ್ಸವದ ಸಂದರ್ಭದ ಹೊತ್ತಿಗೆ, ಸ್ವಾತಂತ್ರ್ಯ ಹೋರಾಟವನ್ನು ಬೇರೆ ಬೇರೆ ನೆಲೆಗಳಲ್ಲಿ ಪುನರ್ವಿಶ್ಲೇಷಿಸುವ ಇಂತಹ ಅನೇಕ ಪ್ರಯತ್ನಗಳು ಆರಂಭವಾಗಿವೆ. ಸ್ವತಂತ್ರ ಭಾರತದ ೬೦ ವರ್ಷಗಳ ಬದುಕು ದಲಿತರ ಹಾಗೂ ಇತರ ಅನೇಕ ವಂಚಿತ ವರ್ಗಗಳ ದೃಷ್ಟಿಯಿಂದ ಅಷ್ಟೇನೂ ಆಶಾದಾಯಕವಾಗಿಲ್ಲ ಎಂಬ ವಾಸ್ತವದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಹೆಸರು ಮುಂದೆ ಮಾಡಿಕೊಂಡು ಮತ್ತು ಜಾಗತೀಕರಣ ಉಂಟು

ಮಾಡಿರುವ ಸಾಂಸ್ಕೃತಿಕ ಅಸ್ಮಿತೆಯ ಗೊಂದಲದ ಹಿನ್ನೆಲೆಯಲ್ಲಿ ಸಾವರ್ಕರ್– ಗುರೂಜಿಗಳ ಹೆಸರು ಮುಂದೆ ಮಾಡಿಕೊಂಡು; ಗಾಂಧಿ ರಾಜಕಾರಣವನ್ನು– ಅದರ ತತ್ವ ಹಾಗೂ ಆಶಯಗಳನ್ನು– ಅಪಮೌಲ್ಯೀಕರಿಸುವ ಪ್ರಯತ್ನಗಳೂ ನಡೆಯುತ್ತಿವೆ. ಇದಕ್ಕೆ ಹೊಂದಿಕೊಂಡಂತೆ ನಮ್ಮ ಬೇಜವಾಬ್ದಾರಿ ಮಾಧ್ಯಮ ಪ್ರಪಂಚ, ಕೆಲವು ತಿಂಗಳುಗಳ ಹಿಂದೆ ಸಮರ್ಥನೀಯ ಕಾರಣಗಳಿಗಾಗಿಯೇ ನಡೆದ ಬೃಹತ್ ದಲಿತ ಪ್ರತಿಭಟನೆಗಳಿಂದ ಹಾಗೂ ಈಚಿನ ಮಾಯಾವತಿ ವಿಜಯದಿಂದ ಸ್ಫೂರ್ತಿಗೊಂಡು, ತಮ್ಮ ಎಸ್.ಎಂ.ಎಸ್. ಸಮೀಕ್ಷೆಗಾಗಿ 'ರಾಷ್ಟ್ರದಲ್ಲಿ ಗಾಂಧಿ ವಾರಸುದಾರಿಕೆ ಮುಗಿದು, ಅಂಬೇಡ್ಕರ್ ವಾರಸುದಾರಿಕೆ ಆರಂಭವಾಗಿದೆಯೇ?' ಎಂಬಂತಹ ಪ್ರಶ್ನೆಗಳನ್ನೂ ಕೇಳಲಾರಂಭಿಸಿಬಿಟ್ಟಿವೆ! ಈಗಾಗಲೇ ಗಾಂಧಿ ವಾರಸುದಾರಿಕೆಯ ಜಾಗವನ್ನು, ಸಾವರ್ಕರ್– ಗುರೂಜಿ ವಾರಸುದಾರಿಕೆ ಸದ್ದಿಲ್ಲದೆ ಆಕ್ರಮಿಸಿಕೊಳ್ಳತೊಡಗಿದೆ ಎಂಬ ಪರಿವೆಯೇ ಇಲ್ಲದೆ...

ಇಂತಹ ಅಮಾಯಕ ಅಸೂಕ್ಷ್ಮತೆಯಿಂದಾಗಿಯೇ, ಇಂದು ಸಂಪೂರ್ಣವಾಗಿ ವ್ಯಾಪಾರಿ ಶಕ್ತಿಗಳ ಕೈವಶವಾಗಿರುವ ನಮ್ಮ ಮಾಧ್ಯಮ ಪ್ರಪಂಚ, ಮುಂಬೈ ಸ್ಫೋಟ ಪ್ರಕರಣದಲ್ಲಿ ವಿವಿಧ ವಯೋಮಾನಗಳ ನೂರು ಜನರಿಗೆ ವಿವಿಧ ರೀತಿಯ ಅಪರಾಧಗಳಿಗಾಗಿ ಗಲ್ಲು ಶಿಕ್ಷೆಯಿಂದ ಹಿಡಿದು ಮೂರು ವರ್ಷಗಳ ಕಠಿಣ ಶಿಕ್ಷೆಯವರೆಗೆ ದಂಡನೆ ಪ್ರಕಟಿಸಿದ್ದರೂ, ಸಂಜಯ ದತ್ತನನ್ನು ಮಾತ್ರ ತನ್ನ ವಿಶೇಷ ಗಮನಕ್ಕಾಗಿ ಆರಿಸಿಕೊಂಡಿದೆ. ಆತನ 'ಗಾಂಧಿಗಿರಿ' ಪಾತ್ರವನ್ನು ನೆನಪಿಸಿ ಅನುಕಂಪ ಸೃಷ್ಟಿಸಲು ಆತನನ್ನು 'ಮುನ್ನಾ ಭಾಯಿ' ಎಂದೇ ಕರೆಯುತ್ತಾ; ಆತನಿಗೆ ಕೊಟ್ಟಿರುವ ಆರು ವರ್ಷಗಳ ಕಠಿಣ ಶಿಕ್ಷೆ ಸಮರ್ಥನೀಯವೇ, ಆತ ಸೆರೆಮನೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಏನು ಮಾಡುತ್ತಾನೆ, ಆತನಿಗೆ ನೀಡಲಾಗಿರುವ ಶಿಕ್ಷೆಯ ವಿರುದ್ಧ ಎಂತೆಂತಹ ಜನ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಇತ್ಯಾದಿ ವಿಷಯಗಳ ಬಗ್ಗೆ ಹಗಲೂ ರಾತ್ರಿ ಚರ್ಚೆ– ವರದಿಗಳನ್ನು ನಿರ್ಲಜ್ಜವಾಗಿ ಪ್ರಸ್ತುತ ಪಡಿಸುತ್ತಿದೆ. ಈ ನಿರ್ಲಜ್ಜತನದಿಂದಾಗಿಯೇ ಅದು, ೧೯೮೪ರ ಸಿಖ್ ಹತ್ಯಾಕಾಂಡ, ೧೯೯೨ರ ಬಾಬ್ರಿ ಮಸೀದಿ ಧ್ವಂಸ ಪ್ರಕರಣ ಹಾಗೂ ನಂತರ ನಡೆದ ಮುಂಬೈ ಸ್ಫೋಟ ಪ್ರಕರಣಕ್ಕೆ ಕಾರಣವಾದ ಮುಂಬೈ ಕೋಮುಗಲಭೆಯ ಅಪರಾಧಿಗಳನ್ನು ಕುರಿತಂತೆ ಏನು ಕ್ರಮ ಕೈಗೊಳ್ಳಲಾಗಿದೆ? ಗೋಧ್ರಾ ಹತ್ಯಾಕಾಂಡ ಹಾಗೂ ಆನಂತರದ ಮುಸ್ಲಿಮರ ಮಾರಣ ಹೋಮ ಕಾರ್ಯಕ್ರಮದ ಹಿಂದಿರುವ ನಿಜವಾದ ಅಪರಾಧಿಗಳನ್ನು ಗುರುತಿಸಲು ಏಕಿಷ್ಟು ವಿಳಂಬವಾಗುತ್ತಿದೆ ಎಂಬ ಪ್ರಶ್ನೆಗಳನ್ನು, ೬೦ವರ್ಷಗಳ ಸ್ವಾತಂತ್ರ್ಯಾಚರಣೆಯ ಸಂದರ್ಭದಲ್ಲಿ ನಡೆಸಬೇಕಾದ ಮುಖ್ಯ ಚರ್ಚೆಯ ಕೇಂದ್ರಕ್ಕೆ ತರುವ ನೈತಿಕತೆಯನ್ನೇ ಕಳೆದುಕೊಂಡಿದೆ. ಬದಲಿಗೆ, ಸಂಜಯ ದತ್ತನ ಶಿಕ್ಷೆಯನ್ನು ಪ್ರಶ್ನಾರ್ಹಗೊಳಿಸುತ್ತಿರುವ ಕಾರ್ಯಕ್ರಮಗಳ ಲಜ್ಜೆಗೇಡಿತನವನ್ನು ಮುಚ್ಚಿಕೊಳ್ಳಲೆಂಬಂತಷ್ಟೇ, ಇದನ್ನು ಚರ್ಚೆಯ ಒಂದು ಉಪ ಪ್ರಶ್ನೆಯೆಂಬಂತೆ ಕೇಳಲಾಗುತ್ತಿದೆ!

ಈ ಪ್ರಶ್ನೆ ೬೦ ವರ್ಷಗಳ ಸ್ವತಂತ್ರ ಭಾರತ ತಾನು ಸಾಗಿ ಬಂದಿರುವ ಹಾದಿಯನ್ನೊಮ್ಮೆ ಹಿಂದಿರುಗಿ ನೋಡುವ ಹಾಗೂ ಆ ಮೂಲಕ ಈ ೬೦ ವರ್ಷಗಳ

ಸಾಧನೆಯನ್ನು ಪುನರ್‌ಮೌಲ್ಯೀಕರಣಕ್ಕೊಳಪಡಿಸುವ ದೃಷ್ಟಿಯಿಂದಲಾದರೂ ಮುಖ್ಯವಾಗಬೇಕಿದೆ. ಅನೇಕ ರಾಷ್ಟ್ರೀಯ ಮಾನಸಿಕ ಬಿರುಕುಗಳಿಗೆ, ತಾರತಮ್ಯಗಳಿಗೆ, ಹಿಂಸಾಚಾರಗಳಿಗೆ ಕಾರಣವಾಗಿರುವ ಅಸಮ ನ್ಯಾಯ ವಿತರಣೆಯ ಪ್ರಶ್ನೆ ಇದರಲ್ಲಡಗಿದೆ. ಅನೇಕ ಸಮುದಾಯಗಳಿಂದು ತಾವು ನಿಜವಾಗಿಯೂ ರಾಷ್ಟ್ರೀಯ ಜೀವನದಲ್ಲಿ ಸಮಾನ ಹಕ್ಕುಗಳೊಂದಿಗೆ ಬದುಕುವ ಸ್ಥಿತಿ ಇದೆಯೇ ಎಂದು ಕೇಳಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಿದೆ. ಹಾಗಾಗಿ ಇದು ಭಾರತದ ಭವಿಷ್ಯವನ್ನು ಕುರಿತ ಪ್ರಶ್ನೆಯೂ ಆಗಿದೆ. ಮುಂದೆ ಭಾರತವನ್ನು ಅಂಬೇಡ್ಕರ್ ವಾರಸುದಾರಿಕೆಯಲ್ಲೋ, ಸಾವರ್ಕರ್- ಗುರೂಜಿ ವಾರಸುದಾರಿಕೆಯಲ್ಲೋ ಅಥವಾ ಇವರೆಡರ ಜಾಣ ಸಂಯೋಜನೆಯಂತಿರುವ ಮಾಯಾವತಿ ವಾರಸುದಾರಿಕೆಯಲ್ಲೋ ಕಟ್ಟಹೊರಟಿರುವವರು, ಈವರೆಗೆ ಸ್ವತಂತ್ರ ಭಾರತವನ್ನು ನಿಜವಾಗಿಯೂ ಗಾಂಧಿ ವಾರಸುದಾರಿಕೆಯಲ್ಲಿ ಕಟ್ಟಲಾಯಿತೇ ಎಂಬ ಪ್ರಶ್ನೆಯನ್ನು ದಾಟಿಕೊಂಡೇ ಮನ್ನಡೆಯಬೇಕಾಗಿದೆ. ಸ್ವಾತಂತ್ರ್ಯೋತ್ತರ ಕಾಂಗ್ರೆಸ್ಸಿನ ತಪ್ಪು-ಒಪ್ಪುಗಳನ್ನು ಗಾಂಧಿ ವಾರಸುದಾರಿಕೆಯ ಕೊರಳಿಗೆ ಕಟ್ಟುವವರಿಗೆ, ಗಾಂಧಿ ವಾರಸುದಾರಿಕೆಯೆನ್ನುವುದರ ಅರ್ಥವೇ ತಿಳಿದಿರಲಾರದು. ಏಕೆಂದರೆ, ಒಮ್ಮೆ ನೆಹರೂ ಯುಗ ಆರಂಭವಾದೊಡನೆ ಆಡಳಿತ ವಲಯದಲ್ಲಿ ಗಾಂಧಿ ವಾರಸುದಾರಿಕೆ ಎನ್ನುವುದೇ ಅಸಂಗತವಾಯಿತು. ಇದೊಂದು ರೀತಿಯಲ್ಲಿ, ಗಣಪತಿಯಪ್ಪನವರಂತಹವರ ಅತಿ ಸಭ್ಯತೆ-ಸಜ್ಜನಿಕೆಗಳ ಮೂಲಕ ವ್ಯಕ್ತವಾದ ಗಾಂಧಿವಾದಿಗಳ ಸಾಮೂಹಿಕ ಆತ್ಮಹತ್ಯೆ ಇದ್ದಂತೆ!

ನೆಹರೂ ಎಂಬ ದೇಶೀಯ ಬ್ರಿಟಿಷ್ ವಾರಸುದಾರನ ಕಾಲದಲ್ಲಿ, ಆರ್ಥಿಕ ನೀತಿಗಳ ನೆಲೆಯಲ್ಲಿ ಗಾಂಧಿ ವಾರಸುದಾರಿಕೆಗೆ ತಿಲಾಂಜಲಿ ನೀಡಲಾಯಿತಾದರೆ; ಇಂದಿರಾ ಗಾಂಧಿ ಎಂಬ 'ದುರ್ಗಾ ಮಾತೆ'ಯ ಕಾಲಕ್ಕೆ ಈಶಾನ್ಯ ರಾಜ್ಯಗಳ, ಜಮ್ಮು- ಕಾಶ್ಮೀರ ಹಾಗೂ ಪಂಜಾಬ್ ರಾಜ್ಯಗಳ ಪ್ರಾದೇಶಿಕ ರಾಜಕಾರಣದ ಮೇಲೆ ದಬ್ಬಾಳಿಕೆ ನಡೆಯುವ ಮೂಲಕ ಗಾಂಧಿ ವಾರಸುದಾರಿಕೆಯ ಜಾಗದಲ್ಲಿ ಸಾವರ್ಕರ್- ಗುರೂಜಿ ವಾರಸುದಾರಿಕೆಯನ್ನು ಬೆಳೆಸುವ ಪ್ರವೃತ್ತಿಯನ್ನು ಆರಂಭಿಸಲಾಯಿತೆಂದು ಹೇಳಬಹುದು. ನಂತರ ರಾಜೀವ್ ಗಾಂಧಿ ಎಂಬ ಹುಂಬ ಪ್ರಧಾನಿ ಮಂತ್ರಿಯ ಕಾಲಕ್ಕೆ, ಷಾ ಬಾನು ಪ್ರಕರಣದಲ್ಲಿ ಕಾಂಗ್ರೆಸ್ ಪ್ರದರ್ಶಿಸಿದ ಹಾಗೂ ಬಾಬ್ರಿ ಮಸೀದಿಯ ಆವರಣದಲ್ಲಿನ ವಿವಾದಾಸ್ಪದ ಮಂದಿರದ ಬಾಗಿಲು ತೆಗೆಸಿ ಪೂಜೆಗೆ ಅವಕಾಶ ಮಾಡಿಕೊಟ್ಟ ಅವಕಾಶವಾದಿ ರಾಜಕಾರಣ ಮತ್ತು ನರಸಿಂಹರಾವ್ ಎಂಬ ಚಾಣಾಕ್ಷ ರಾಜಕಾರಣಿಯ ಕಾಲಕ್ಕೆ ಅಲ್ಲಿ ಕರಸೇವೆಗೆ ಅನುಮತಿ ನೀಡಿದ ಸಮಯಸಾಧಕ ರಾಜಕಾರಣವು, ಸಾವರ್ಕರ್-ಗುರೂಜಿ ವಾರಸುದಾರಿಕೆಯ 'ಹಿಂದುತ್ವ'ದ ರಾಜಕಾರಣಕ್ಕೆ ದೊರೆತ ಪರೋಕ್ಷ ಅಂಗೀಕಾರವೇ ಆಗಿತ್ತು. ನಂತರ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಸರ್ಕಾರದ ಮೂಲಕ ಅದಕ್ಕೆ ಅಧಿಕೃತ ಮನ್ನಣೆ ದೊರಕಿತಷ್ಟೆ. ಇಂದು ಸೋನಿಯಾ ಗಾಂಧಿ- ಮನಮೋಹನ ಸಿಂಗರ ಸರ್ಕಾರದ ಆರ್ಥಿಕ ನೀತಿಗಳನ್ನು

ನೋಡಿದರೆ– ಅದು ಕಾಂಗ್ರೆಸ್ ಹೆಸರಿನ ಪಕ್ಷವೊಂದರ ನೇತೃತ್ವದ ಸರ್ಕಾರ ಎಂಬೊಂದು ಕಾರಣಕ್ಕೇ– ಅದನ್ನು ಗಾಂಧಿ ವಾರಸುದಾರಿಕೆಯ ಸರ್ಕಾರ ಎನ್ನಲಾದೀತೆ?

ಹೀಗಾಗಿ ಈ ೬೦ ವರ್ಷಗಳಲ್ಲಿ ವಿಶ್ವಾಸಾರ್ಹತೆ ಕಳೆದುಕೊಂಡಿರುವುದು ಗಾಂಧಿ ವಾರಸುದಾರಿಕೆ ಎಂದು ಹೇಳುವವರು ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ ಎಂದೇ ಹೇಳಬೇಕು. ವಾಸ್ತವಾಗಿ, ಈ ೬೦ ವರ್ಷಗಳಲ್ಲಿ ಗಾಂಧಿ ವಾರಸುದಾರಿಕೆಯನ್ನು ಆರಂಭಿಸುವ ಪ್ರಯತ್ನಗಳು ವಿಫಲವಾಗಿವೆ ಎಂದು ಹೇಳಬೇಕು. ಸಮಾಜವಾದಿ ಚಳುವಳಿ, ಕ್ರೋಢೀಕೃತಗೊಳ್ಳಲಾಗದ ಅದರ ತಾತ್ವಿಕತೆ ಹಾಗೂ ಸಡಿಲ ಸಂಘಟನೆಯ ಕಾರಣಗಳಿಂದ ವಿಫಲವಾದರೆ; ಜೆ.ಪಿ. ಚಳುವಳಿ ಮೂಲಕ ಜನತಾ ಪಕ್ಷದ ರೂಪದಲ್ಲಿ ವ್ಯಕ್ತವಾದ ಗಾಂಧಿವಾದಿ ಸಮಾಜವಾದದ ಪ್ರಯತ್ನ, ಅದರ ತಾತ್ವಿಕ ಹಾಗೂ ಸಂಘಟನಾತ್ಮಕ ಸ್ಥೂಲತೆಯಿಂದಾಗಿಯೇ ಗರ್ಭಪಾತಕ್ಕೊಳಗಾಯಿತು. ನಂತರ ವಿ.ಪಿ. ಸಿಂಗ್ ಬಂಡಾಯದ ಮೂಲಕ ಹುಟ್ಟಿಕೊಂಡ ಜನತಾ ದಳದ ರೂಪದ ಇತ್ತೀಚಿನ– ಹದಿನೈದು ವರ್ಷಗಳ ಹಿಂದಿನ– ಪರ್ಯಾಯ ಕಾಂಗ್ರೆಸ್‌ನ ಪ್ರಯೋಗ; ಒಂದು ಕಡೆ ಭಾಜಪದಿಂದ, ಇನ್ನೊಂದು ಕಡೆ ಕಮ್ಯುನಿಸ್ಟರಿಂದ ಬೆಂಬಲ ಪಡೆದು ಬದುಕುವ ತನ್ನ ಹುಟ್ಟಿನ ದೋಷದಿಂದಾಗಿಯೇ ಕಣ್ಮುಚ್ಚುವಂತಾಯಿತು. ಹೀಗೆ ಗಾಂಧಿ ವಾರಸುದಾರಿಕೆ ಎನ್ನುವುದು, ಈ ೬೦ ವರ್ಷಗಳಲ್ಲಿ ಪ್ರಭುತ್ವದ ಅನಾಚಾರಗಳ ಎದುರು ಜನಶಕ್ತಿಯ ಬಂಡಾಯದ ರೂಪದಲ್ಲಷ್ಟೇ, ಆಗಾಗ್ಗೆ ಅಭಿವ್ಯಕ್ತಗೊಳ್ಳುತ್ತಾ ಬಂದಿದೆ.

ಆದರೆ, ಇಂತಹ ಬಂಡಾಯಗಳ ಮೂಲಕವೇ ಅದು, ಕಳೆದ ೬೦ ವರ್ಷಗಳಲ್ಲಿ ಭಾರತದ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಗಳು ಅನೇಕ ವಕ್ರತೆ– ವಿಕ್ಷಿಪ್ತತೆಗಳ ನಡುವೆಯೂ ಉಳಿದುಕೊಂಡು ಬರಲು ನೆರವಾಗಿದೆ ಎಂಬುದನ್ನೂ ನಾವು ಮರೆಯುವಂತಿಲ್ಲ. ಅಷ್ಟೇ ಅಲ್ಲ. ಕಳೆದ ಹದಿನೈದು ವರ್ಷಗಳ ಅಸಮಾನ ನ್ಯಾಯ ವಿತರಣೆಯ ಕಾರಣಗಳಿಂದಾಗಿ ಈಗ ರಾಷ್ಟ್ರೀಯ ಬದುಕಿನಲ್ಲಿ ಕಾಣಿಸಿಕೊಳ್ಳಲಾರಂಭಿಸಿರುವ ಬಿರುಕುಗಳನ್ನು ಇಂತಹ ಮತ್ತೊಂದು ಜನಶಕ್ತಿಯ ಬಂಡಾಯವನ್ನು ಆಯೋಜಿಸುವ ಮೂಲಕವೇ ಮುಚ್ಚುವುದು ಅನಿವಾರ್ಯವಾಗಿದೆ. ಏಕೆಂದರೆ, ಸದ್ಯಕ್ಕೆ ಮುಖ್ಯವಾಹಿನಿಯ ರಾಜಕೀಯ ಆಡಳಿತ ಮಾದರಿಗಳಿಗೆ ಪರ್ಯಾಯ ಮಾದರಿಗಳೆಂಬಂತೆ ನಮ್ಮ ಕಣ್ಮುಂದೆ ಈಗ ಕಾಣಿಸಿಕೊಂಡಿರುವ ಮಾಯಾವತಿಯವರ ತತ್ವಹೀನ ಜಾತಿ ರಾಜಕಾರಣ ಹಾಗೂ ತೃತೀಯ ಶಕ್ತಿಯೆಂದು ಹೇಳಿಕೊಳ್ಳುವ ಪಕ್ಷಗಳ ಊಳಿಗಮಾನ್ಯ ಕೌಟುಂಬಿಕ ರಾಜಕಾರಣಗಳೆರಡೂ, ಈ ಬಿರುಕುಗಳ ಪ್ರಯೋಜನ ಪಡೆದು ಮೂಡಿದ ಮಾದರಿಗಳೇ ಆಗಿವೆ.

ಹೀಗಾಗಿ ಇಂದು ಗಾಂಧಿ ವಾರಸುದಾರಿಕೆಯ ಸ್ಫೂರ್ತಿಯಿಂದಲೇ ಒಡಮೂಡಿ ಬರಬೇಕಾದ ಜನಶಕ್ತಿಯ ಬಂಡಾಯ, ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಗಣಪತಿಯಪ್ಪನವರಂತಹರನ್ನು ಗುರುತಿಸಿ ಹೆಮ್ಮೆ ಪಡುವ ಸೂಕ್ಷ್ಮತೆ ಉಳಿಸಿಕೊಂಡಿರುವ ಜಾತ್ಯತೀತ ಯುವಜನರ ನೇತೃತ್ವದಲ್ಲೇ ಆರಂಭವಾಗಬೇಕಿದೆ. ಏಕೆಂದರೆ, ಗಣಪತಿಯಪ್ಪ ಹಾಗೂ ಇತ್ತೀಚೆಗೆ ೮೦ ವರ್ಷ ತುಂಬಿದ ಎಚ್.ಎಸ್. ದೊರೆಸ್ವಾಮಿಯವರಂತಹ

ಗಾಂಧಿವಾದಿಗಳು ಕಾಲನ ಒತ್ತಡಗಳಿಗೆ ಸಿಕ್ಕಿ ರಾಜಕೀಯ ಶಕ್ತಿ ಕಳೆದುಕೊಂಡಿದ್ದರೂ, ನೈತಿಕ ಶಕ್ತಿಯ ನಿಧಿಗಳಾಗಿಯೇ ಉಳಿದಿದ್ದಾರೆ. ಗಾಂಧಿ ಮೂಲತಃ ಒಂದು ನೈತಿಕ ಶಕ್ತಿಯಾಗಿಯೇ ಇಂದು ಕ್ರಿಯಾಶೀಲವಾಗಬೇಕಾಗಿರುವ ಅಗತ್ಯದ ಹಿನ್ನೆಲೆಯಲ್ಲಿ ಗಾಂಧಿ ವಾರಸುದಾರಿಕೆ, ರಾಷ್ಟ್ರಾದ್ಯಂತ ಇನ್ನೂ ಅಳಿದುಳಿದಿರುವ ಇಂತಹ ಗಾಂಧಿವಾದಿಗಳ ನೈತಿಕ ಬಲದಿಂದಲೇ ಮತ್ತೆ ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳಬೇಕಿದೆ.

ಈ ೬೦ ವರ್ಷಗಳ ಎಲ್ಲ ರೀತಿಯ ರಾಜಕೀಯ ಪ್ರಯೋಗಗಳ ಅಂತಿಮ ಪರಿಣಾಮವೆಂಬಂತೆ ಮೂಡಿ ನಿಂತಿರುವ ಜಾಗತೀಕರಣವೆಂಬ ನವ ಸಾಮ್ರಾಜ್ಯಶಾಹಿಯಲ್ಲಿ ಅಸಮಾನತೆ ಹಾಗೂ ಅಶ್ಲೀಲತೆಗಳು ಅಂತರ್ಗತವಾಗಿವೆ ಎಂಬ ಸತ್ಯ ಇಂದು ನಿಧಾನವಾಗಿ ಗೋಚರವಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಮುಂದಿನ ದಿನಗಳಲ್ಲಿ ಗಾಂಧಿ ವಾರಸುದಾರಿಕೆ ಒಂದು ಪೂರ್ಣ ಪ್ರಮಾಣದ ರಾಜಕೀಯ ಶಕ್ತಿಯಾಗಿ ತನ್ನ ವಿಶ್ವಾಸಾರ್ಹತೆಯನ್ನು ಸಾಧಿಸಿಕೊಳ್ಳುವ ಎಲ್ಲ ಸಾಧ್ಯತೆಗಳು ತೆರೆದಿವೆ. ಅದು ಈವರೆಗೆ ತಾನು ನಡೆಸಿರುವ ಪ್ರಯೋಗಗಳ ಮೂಲಕ ಸಾಧಿಸಿಕೊಂಡಿರುವ ಎಲ್ಲ ಅನುಸಂಧಾನಗಳ ಸಾಧ್ಯತೆಗಳೊಡನೆ ಪ್ರಕಟಗೊಳ್ಳುವ ಅಗತ್ಯ ಹಾಗೂ ಅನಿವಾರ್ಯತೆ ಉಂಟಾಗಿದೆ. ಈ ದಿಸೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ದೊಡ್ಡ ಕಾರ್ಯಪಡೆಯೇ ರಾಷ್ಟ್ರಾದ್ಯಂತ ಕ್ರಿಯಾಶೀಲವಾಗಿದೆ. ಮೇಧಾ ಪಾಟ್ಕರ್ ಇಂತಹ ಕಾರ್ಯಪಡೆಯ ಸಾಮರ್ಥ್ಯ– ಸಾಧ್ಯತೆಗಳ ಒಂದು ಬಹಿರಂಗ ಪ್ರತೀಕವಷ್ಟೆ. ಆ ಪ್ರತೀಕ ರಾಷ್ಟ್ರಾದ್ಯಂತ ವಿಸ್ತರಿಸಿಕೊಂಡು ಜನಶಕ್ತಿಯ ಒಂದು ಸ್ಫೋಟವನ್ನು ಸಾಧಿಸುವ ದಿನಕ್ಕಾಗಿ ರಾಷ್ಟ್ರ ಕಾಯುತ್ತಿದೆ.

ಆದರೆ, ಇದಕ್ಕಾಗಿ ಸಾಮಾಜಿಕ ವಾತಾವರಣ ಹಾಗೂ ರಾಜಕೀಯ ಭೂಮಿಕೆಯನ್ನು ಸಿದ್ಧಪಡಿಸಬೇಕಾದ ನಮ್ಮ ಮಾಧ್ಯಮಗಳನ್ನು ನೋಡಿ. ಇಪ್ಪತ್ತು ನಾಲ್ಕು ತಾಸುಗಳೂ ಸುದ್ದಿ ಪ್ರದರ್ಶನಗಳ ಆಟಗಳ ಮೂಲಕ ಮೇಲ್ವರ್ಗ ಹಾಗೂ ಮಧ್ಯಮ ವರ್ಗಗಳನ್ನು ಹಾಗೂ ಸಿನೆಮಾ–ಮೆಗಾ ಧಾರಾವಾಹಿ– ಜನಪ್ರಿಯ ಜೀವನ ಶೈಲಿಯ ಸ್ಪರ್ಧೆಗಳ ಮೂಲಕ ಕೆಳ ಮಧ್ಯಮ ಹಾಗೂ ಬಡ ವರ್ಗಗಳನ್ನು ಸೆರೆ ಹಿಡಿದು ಹಾಕಿವೆ. ತಮ್ಮ ಭ್ರಷ್ಟಾಚಾರ ವಿರೋಧಿ ಸಾಹಸಗಳ ಮೂಲಕ ಹಾಗೂ ಅನ್ಯಾಯಕ್ಕೊಳಗಾದವರಿಗೆ ಪರಿಹಾರ ದೊರಕಿಸಿಕೊಡುವ ಸಮಾಜ ಕಲ್ಯಾಣೋದ್ದೇಶದ 'ಇಂಪ್ಯಾಕ್ಟ್' ಕಾರ್ಯಕ್ರಮಗಳ ಮೂಲಕ ಮಿನಿ ಸರ್ಕಾರಗಳಂತೆ ಕಾರ್ಯ ನಿರ್ವಹಿಸುತ್ತಿವೆ. ಈ ಮಾಧ್ಯಮಗಳು, ಜನರ ಪಾಲಿಗೆ ವಾಸ್ತವ ಸತ್ಯಗಳ ಸ್ವಸಂಸ್ಪರ್ಶದ ಅಗತ್ಯವೇ ಇಲ್ಲದಂತೆ ಮಾಡಿ, ಈಗ ಮಾಧ್ಯಮ ಭಾರತವೆಂಬ 'ಮಿಥ್ಯಾ ಭಾರತ'ವೊಂದನ್ನು ಸೃಷ್ಟಿಸಿವೆ. ವಾಸ್ತವ ಚಿತ್ರವೇ ಕಾಣದಂತೆ ಅದರ ಮೇಲೆ ಅದರ ಬಣ್ಣದ ಪ್ರತಿಬಿಂಬವನ್ನು ಸ್ಥಾಪಿಸುವ ಒಂದು ದೊಡ್ಡ ಮಾಯಾ ಬಜ಼ಾರ್ ಇಂದು ಉದ್ಯಮದ ಹೆಸರಲ್ಲಿ ಬೆಳೆದು ನಿಂತಿದೆ! Medium is the Message ಎಂಬ ಆಧುನಿಕ ಮಾಧ್ಯಮ ತಜ್ಞರ ಮಾತು, ಹೀಗೆ ಆಭಾಸಕರ ರೀತಿಯಲ್ಲಿ ನಿಜವಾಗತೊಡಗಿದೆ... ಜಾಗತೀಕರಣಗೊಂಡ ಭಾರತದ ಅಭಿವ್ಯಕ್ತಿ ಸಾಮರ್ಥ್ಯದ ಪ್ರತೀಕವೆನಿಸಿರುವ ನಮ್ಮ ಮಾಧ್ಯಮ ಪ್ರಪಂಚದ ಸ್ಥಿತಿಯಿದು!

ನಮ್ಮಗಳ ಬದುಕೇ ಈಗ ವಾಸ್ತವತೆಯ ಗುರುತ್ವ ಕೇಂದ್ರ ಕಳೆದುಕೊಂಡು ಈ ಮಾಯಾ ಬಝಾರ್‌ನ ಪ್ರತಿವಾಸ್ತವತೆಯ ಸರಕಾಗಿ ಹೋಗಿದೆ. ಹಾಗಾಗಿಯೇ ಇಂದು ಎಲ್ಲೆಲ್ಲೂ ಮಾಧ್ಯಮ ಪ್ರತಿನಿಧಿಗಳ ನೂಕು ನುಗ್ಗಲು. ಸಾರ್ವಜನಿಕ ಸಮಾರಂಭಗಳಿರಲಿ, ಮದುವೆಗಳಂತಹ ಕೌಟುಂಬಿಕ ಸಮಾರಂಭಗಳಲ್ಲೂ, ಬಂದ ಜನ ಸಾಲುಗಟ್ಟಿ ನಿಂತ ಇವರ ಹಿಂಭಾಗಗಳನ್ನಷ್ಟೇ ನೋಡಿ ಹೋಗುವ ದುಸ್ಥಿತಿ!

ಇದು ಅರವತ್ತರ ಭಾರತಕ್ಕೆ ಬಡಿದಿರುವ ಅರಳು ಮರುಳಲ್ಲದೆ ಮತ್ತೇನು?

ಆಗಸ್ಟ್ ೧೭, ೨೦೦೭

ಅವಕಾಶವಾದಿ ರಾಜಕಾರಣಕ್ಕೆ ಅಧಿಕೃತ ಮುದ್ರೆ!

ಅಂದು ಒಂದು ತಿಂಗಳ ಹಿಂದೆ ಚಿತ್ರದುರ್ಗದಲ್ಲಿ 'ಅಭಿರುಚಿ' ಸಾಹಿತ್ಯಿಕ–ಸಾಂಸ್ಕೃತಿಕ ವೇದಿಕೆ 'ಸಾಂಸ್ಕೃತಿಕ ರಾಜಕಾರಣ' ಕುರಿತು ಏರ್ಪಡಿಸಿದ್ದ ತಿಂಗಳ ಸಂವಾದ ಗೋಷ್ಠಿಯಲ್ಲಿ ಬಿ.ಎಸ್.ಪಿ.ಯ ಪುಡಿ ನಾಯಕನೊಬ್ಬ ಸಂವಾದದ ನೆಪದಲ್ಲಿ ವೇದಿಕೆಯೇರಿ, ಸಂಬಂಧವಿಲ್ಲದೆ ಬಂಜಗೆರೆಯವರ 'ಆನುದೇವ...'ವನ್ನು ಖಂಡಿಸಿ ಮಾತಾಡತೊಡಗಿದಾಗಲೇ ನನಗನ್ನಿಸಿತ್ತು, ಬಿ.ಎಸ್.ಪಿ. ಕರ್ನಾಟಕದಲ್ಲಿ ಲಿಂಗಾಯ್ತರ ಓಟಿಗೆ ಏಟು ಹಾಕಿದೆ ಎಂದು. ಅದನ್ನು ಅಂದೇ ನನ್ನ ಪಕ್ಕದಲ್ಲಿ ಕೂತಿದ್ದ ಆ ವೇದಿಕೆಯ ಸಂಚಾಲಕರ ಕಿವಿಯಲ್ಲಿ ಉಸಿರಿದ್ದೆ. ಆ ಪುಡಿ ನಾಯಕ ಎಷ್ಟು ಆವೇಶದಿಂದ ಹಾಗೂ ನಗ್ನ ಜಾತಿ ಪರಿಭಾಷೆಯಲ್ಲಿ ಆ ಪುಸ್ತಕವನ್ನು ಭಂಡತನದಿಂದ ಖಂಡಿಸತೊಡಗಿದನೆಂದರೆ, ಸಭೆಯಲ್ಲಿ ಅಂದು ವಿಶೇಷವಾಗಿ ಹಾಜರಿದ್ದ ಜಾತಿ ಲಿಂಗಾಯ್ತರೂ ನಾಚಿ ನೀರಾದರು! ತಾನು ಬಂಜಗೆರೆಯವರಂತೆ ಗೊಲ್ಲನಾದರೂ, ಅವರು ವಚನಗಳ ವಾಚ್ಯಾರ್ಥವನ್ನಷ್ಟೇ ಆಧರಿಸಿ ಬರೆದಿರುವ ಈ ಪುಸ್ತಕವನ್ನು ಒಪ್ಪುವುದಿಲ್ಲವೆಂಬ ಸಾಹಿತ್ಯಕ ವ್ಯಾಖಾನವನ್ನೂ ನೀಡಿದ ಆತ; ಉತ್ತರ ಪ್ರದೇಶದಲ್ಲಿ ಬಡವರಿಗೆ ಜಮೀನು, ಸಾಲ ಮುಂತಾದ ಏನೆಲ್ಲ ಸೌಲಭ್ಯ ಕಲ್ಪಿಸಿ ಕೊಟ್ಟು ಮಾಯಾವತಿ ಸಾಧಿಸಿರುವ ಚುನಾವಣಾ ವಿಜಯವನ್ನು ಮರೆ ಮಾಚಲೆಂದೇ ಉದ್ದೇಶಪೂರ್ವಕವಾಗಿ 'ಆನುದೇವ..' ಕುರಿತು ಚರ್ಚೆ ಆರಂಭಿಸಲಾಗಿದೆಯೆಂದು ತಿಕ್ಕಲು– ತಿಕ್ಕಲಾಗಿ ವಾದ ಮಾಡತೊಡಗಿದ. ತದ ನಂತರ ಮಾತನಾಡಿದ ಬಿ.ಎಸ್.ಪಿ. ಬುದ್ಧಿಜೀವಿ ನಾಯಕರೊಬ್ಬರು, ತಮ್ಮ ಪ್ರಕಾರ ಭಾರತದ ಇತಿಹಾಸವೆಂದರೆ ಮಾದಿಗರ ಇತಿಹಾಸವೇ ಆಗಿರುವುದರಿಂದಾಗಿ, ಒಂದು ಪಕ್ಷ ಬಂಜಗೆರೆಯವರ ಸಂಶೋಧನೆ ನಿಜವಿದ್ದರೂ, ಅದು ಮಾದಿಗ ಜನಾಂಗದವರಿಗೇನೂ ರೋಮಾಂಚನ ಉಂಟು ಮಾಡಲಾರದೆಂದು ಥಣ್ಣಗೆ ವೈರಾಗ್ಯದ ಧಾಟಿಯಲ್ಲಿ ಮಾತನಾಡಿದಾಗ ನನಗೇನೂ ಆಶ್ಚರ್ಯವಾಗಲಿಲ್ಲ. ಹಾಗಾಗಿ, ಈಗ ಕರ್ನಾಟಕದಲ್ಲಿ

ಬಿ.ಎಸ್.ಪಿ. ಅಧಿಕೃತವಾಗಿ ತಾನು ಬ್ರಾಹ್ಮಣರ ಜೊತೆ ಮುಖ್ಯವಾಗಿ ಲಿಂಗಾಯತರ ಮತಕ್ಕಾಗಿ ಚುನಾವಣಾ ತಂತ್ರ ರೂಪಿಸಲು ಹೊರಟಿರುವುದಾಗಿ ಪ್ರಕಟಿಸಿದಾಗಲೂ, ನನಗೇನೂ ಆಶ್ಚರ್ಯವಾಗಲಿಲ್ಲ. ಆದರೆ ವೋಟಿನ ರಾಜಕಾರಣಕ್ಕಾಗಿ ಎಲ್ಲ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂವಾದಗಳನ್ನೂ ಹೀಗೆ ಹತ್ತಿಕ್ಕಲೆಣಿಸುವ, ಆತ್ಮಸಾಕ್ಷಿಯನ್ನೇ ಕೊಂದುಕೊಂಡ ರೂಕ್ಷ ರಾಜಕಾರಣ ಆರಂಭವಾಗುತ್ತಿರುವ ಬಗ್ಗೆ ವಿಷಾದವಂತೂ ಉಂಟಾಯಿತು.

ಜಾತಿ ವ್ಯವಸ್ಥೆ ಕುರಿತು 'ಮನುವಾದ'ದ ಹೆಸರಲ್ಲಿ ಒಂದು ದೊಡ್ಡ ಸೈದ್ಧಾಂತಿಕ ಹೋರಾಟದೊಂದಿಗೆ ತನ್ನ ರಾಜಕಾರಣವನ್ನು ಆರಂಭಿಸಿದ ಕಾನ್ಶಿರಾಮ್ ನೇತೃತ್ವದ ಬಿ.ಎಸ್.ಪಿ., ಇಂದು ಮಾಯಾವತಿ ನೇತೃತ್ವದಲ್ಲಿ ಒಮ್ಮೆ ಅಧಿಕಾರದ ರುಚಿ ನೋಡಿದೊಡನೆ ಎಲ್ಲ ಸಿದ್ಧಾಂತವನ್ನೂ ಕೈಬಿಟ್ಟು ಅನುಕೂಲಕರ ಜಾತಿ ರಾಜಕಾರಣ ಮಾಡಹೊರಟಿದೆ. ಇದು ಎಲ್ಲ ಜಾತಿಗಳಿಗೂ ಅಧಿಕಾರದಲ್ಲಿ ತಮ್ಮ ಗಾತ್ರಾನುಸಾರ ಪಾಲು ಕೇಳುವ– ಜಾತಿ ವ್ಯವಸ್ಥೆಯನ್ನೊಪ್ಪಿಕೊಂಡ– ತಲೆಕೆಳಗಾದ ಸಾಮಾಜಿಕ ನ್ಯಾಯದ ರಾಜಕಾರಣವೂ ಅಲ್ಲ. ಬದಲಿಗೆ ಇದು, ಚುನಾವಣೆ ಗೆಲ್ಲಬಲ್ಲ ಜಾತಿ ಸಂಯೋಜನೆಯ ತೆಕ್ಕೆಗೆ ಸೇರಬಲ್ಲ ಗಣ್ಯ ಜಾತಿಗಳ ಜಾತಿ ರಾಜಕಾರಣ. ಮಿಕ್ಕೆಲ್ಲ ಪಕ್ಷಗಳೂ, ಮುಂದೆ ತತ್ವ ಹೇಳಿ ಹಿಂದೆ ಜಾತಿ ರಾಜಕಾರಣ ಮಾಡುತ್ತಿದ್ದರೆ, ಬಿ.ಎಸ್.ಪಿ. ತತ್ವದ ಉಸಾಬರಿಯೇ ಬೇಡವೆಂದು ನೇರವಾಗಿ ಜಾತಿ ಲೆಕ್ಕಾಚಾರದ ರಾಜಕಾರಣ ಮಾಡಹೊರಟಿದೆ. ಇತ್ತೀಚಿನ ಉತ್ತರ ಪ್ರದೇಶ ಚುನಾವಣೆಯಲ್ಲಿ ಔಪಚಾರಿಕವಾಗಿಯಾದರೂ ಚುನಾವಣಾ ಪ್ರಣಾಳಿಕೆಯನ್ನೇ ಪ್ರಕಟಿಸದ ಏಕೈಕ ಪಕ್ಷವೆಂದರೆ, ಬಿ.ಎಸ್.ಪಿ.! ಹೀಗೆ ಈ ಪಕ್ಷ ಸಮಕಾಲೀನ ರಾಜಕಾರಣದ ಮಾನ ಮುಚ್ಚಿದ್ದ ಕೊನೆಯ ತುಂಡು ಬಟ್ಟೆಯನ್ನೂ ಕಿತ್ತೆಸೆದಿದೆ– ನಗ್ನ ಅಧಿಕಾರ ರಾಜಕಾರಣಕ್ಕೆ ಮುನ್ನುಡಿ ಬರೆದಿದೆ. ಅಂದರೆ ಇದು ರಾಜಕಾರಣದಲ್ಲಿ ತತ್ವದ ಮಾತಾಡುವುದು ಅನಗತ್ಯವೆಂಬ ಬಹಿರಂಗ ಘೋಷಣೆಯೇ ಆಗಿದೆ. ಸುಮ್ಮನೆ ನೋಡಿದಾಗ ಇದು ಬೇರೆ ಪಕ್ಷಗಳ ಆತ್ಮ ದ್ರೋಹಿ ರಾಜಕಾರಣಕ್ಕೆ ಹೋಲಿಸಿದರೆ, ಒಂದು ರೀತಿಯಲ್ಲಿ ದಿಟ್ಟ ಹಾಗೂ ಪ್ರಾಮಾಣಿಕ ರಾಜಕಾರಣವೆಂದು ತೋರುತ್ತದೆ. ಆದರೆ, ಸ್ವಲ್ಪ ಯೋಚಿಸಿದರೆ ಗೊತ್ತಾಗುತ್ತದೆ, ಇದು ನಮ್ಮ ರಾಜಕಾರಣದ ಅವನತಿಗೆ, ಈವರೆಗೆ ಸ್ವಲ್ಪ ಲಜ್ಜೆಯಿಂದಲಾದರೂ, ಅಪರಾಧಿ ಮನೋಭಾವನೆಯಿಂದಲಾದರೂ ನಡೆಸಲಾಗುತ್ತಿದ್ದ ಅವಕಾಶವಾದಿ ರಾಜಕಾರಣಕ್ಕೆ ಅಧಿಕೃತ ಮುದ್ರೆ ಒತ್ತಿ, ಅದನ್ನು ಅನಿವಾರ್ಯವೆಂದು ಒಪ್ಪಿಸುವ ಅತ್ಯಂತ ಅಪಾಯಕಾರಿ ರಾಜಕಾರಣವೆಂದು. ಯಾವ ತುದಿಯಿಂದ ಯಾವ ತುದಿಗೆ, ಬಿ.ಎಸ್.ಪಿ.ಯ ಈ ರಾಜಕೀಯ ಪಯಣ ಎಂದು ಆಶ್ಚರ್ಯವಾಗುತ್ತದೆ! ಬಿ.ಎಸ್.ಪಿ.ಯನ್ನು ಒಂದು ತಾತ್ವಿಕ ಮುನ್ನೋಟದೊಂದಿಗೆ ಕಟ್ಟತೊಡಗಿದ್ದ ಕಾನ್ಶಿರಾಮ್ ಖಂಡಿತ ಇದನ್ನು ನಿರೀಕ್ಷಿಸಿರಲಾರರು.

ಈ ಹಿಂದೊಮ್ಮೆ, ಇಂದಿನ ಬಿ.ಎಸ್.ಪಿ. ಪ್ರಮುಖ ನಾಯಕರೊಬ್ಬರು ನನ್ನೊಂದಿಗೆ ಮಾತನಾಡುತ್ತಾ, ಈವರೆಗೆ ದಲಿತರು 'ಜಾತಿ ಬಿಡಿ; ದೇಶ ಕಟ್ಟಿ' ಎಂಬ ಘೋಷಣೆಯ ಮೇಲೆ ರಾಜಕಾರಣ ಮಾಡಿ ಸೋತುಹೋಗಿದ್ದಾರೆಂದೂ; ಇನ್ನು ಮುಂದೆ ಅವರ ಘೋಷಣೆ

'ದೇಶ ಬಿಡಿ; ಜಾತಿ ಕಟ್ಟಿ' ಎಂದಾಗಲಿದೆಯೆಂದೂ, ತಾವು ಕರ್ನಾಟಕದಲ್ಲಿ ಕಟ್ಟಹೊರಟಿದ್ದ ಭವಿಷ್ಯದ ಬಿ.ಎಸ್.ಪಿ. ರಾಜಕಾರಣದ ಪರಿಚಯ ಮಾಡಿಕೊಟ್ಟಿದ್ದರು. ಅವರ ಮೊದಲ ಘೋಷಣೆಯ ಸೋಲಿನ ಅನುಭವದ ಮಾತನ್ನು ಅರ್ಧ ಒಪ್ಪಿಕೊಳ್ಳುತ್ತಲೇ, ಆ ಅನುಭವ ಅವರನ್ನು ಮತ್ತಷ್ಟು ವಿವೇಕಿಗಳನ್ನಾಗಿ ಮಾಡದೆ; ಮತ್ತಷ್ಟು ಹತಾಶರನ್ನಾಗಿ ಮಾಡಿದೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಉತ್ತರ ಪ್ರದೇಶದಲ್ಲಿನ ಬಿ.ಎಸ್.ಪಿ.ಯ ವಿಜಯದಿಂದೇನಾದರೂ ಅವರು ಉತ್ಸಾಹಿತರಾಗಿ ಕರ್ನಾಟಕದಲ್ಲಿ ಹೊಸ ಜಾತಿ ಸಮೀಕರಣವನ್ನು ಸಾಧಿಸಲು ನಿರ್ಧರಿಸಿದ್ದರೆ, ಬೇರೆ ಪಕ್ಷಗಳು ಕಿಂಚಿತ್ತಾದರೂ ತಪ್ಪಿತಸ್ಥ ಮನೋಭಾವದಿಂದ ಮಾಡಿ ಗೆಲ್ಲುತ್ತಿದ್ದಾಗ ಯಾವುದನ್ನು ನಾವು ಭ್ರಷ್ಟ ರಾಜಕಾರಣವೆಂದು ಕರೆಯುತ್ತಿದ್ದೆವೋ, ಅಂತಹುದೇ ಭ್ರಷ್ಟ ರಾಜಕಾರಣವನ್ನು ಈಗ ಉತ್ತರ ಪ್ರದೇಶದಲ್ಲಿ ಯಾವುದೇ ಎಗ್ಗಿಲ್ಲದೇ, ಸುಯೋಜಿತವಾಗಿ ಹಾಗೂ ದಕ್ಷವಾಗಿ ಮಾಡಿ ಗೆದ್ದಿರುವುದರ ಸೂಚನೆಯಷ್ಟೇ ಆಗಿದೆ ಎಂಬುದನ್ನು ಅವರು ಅರಿತು ಮುಂದುವರೆಯಬೇಕಾಗುತ್ತದೆ. ಏಕೆಂದರೆ, ಆ ರಾಜಕಾರಣದ ಎಲ್ಲ ದುಷ್ಟ ಶಕ್ತಿಗಳೂ ಇಲ್ಲಿಯೂ ಈ ಚುನಾವಣಾ ಪ್ರಕ್ರಿಯೆಯಲ್ಲಿ ಕೆಲಸ ಮಾಡಿದ್ದು, ಅದು ಈಗಾಗಲೇ ಎಲ್ಲ ಕಡೆ ವರದಿಯಾಗಿದೆ. ತಮ್ಮ ವೈಯುಕ್ತಿಕ ಹೆಸರಿನಲ್ಲಿರುವ ದೆಹಲಿ ಹಾಗೂ ಉತ್ತರ ಪ್ರದೇಶದ ಹಲವು ನಗರಗಳಲ್ಲಿನ ವೈಭವೋಪೇತ ಬಂಗ್ಲೆಗಳು, ಅನೇಕ ಬ್ಯಾಂಕ್ ಖಾತೆಗಳಲ್ಲಿನ ಅಪಾರ ಪ್ರಮಾಣದ ನಗದು ಹಾಗೂ ತಮ್ಮ ಅಭಿಮಾನಿಗಳ ಸಂತೋಷಕ್ಕಾಗಿ ಆಗಾಗ್ಗೆ ಧರಿಸುವ ವೈವಿಧ್ಯಮಯ ವಜ್ರಾಭರಣಗಳ ರೂಪದ ಕೋಟ್ಯಾಂತರ ರೂಪಾಯಿಗಳ ಅಕ್ರಮ ಆಸ್ತಿಯನ್ನು ಮೊನ್ನೆ ಮಾಯಾವತಿಯವರು, ಇದೆಲ್ಲ ತಮ್ಮ ಕಾರ್ಯಕರ್ತರು ಪಕ್ಷದ ಹಿತಕ್ಕಾಗಿ ಹತ್ತು- ನೂರು ರೂಪಾಯಿಗಳ ಪ್ರಮಾಣದಲ್ಲಿ ನೀಡಿದ ಲೆಕ್ಕ ಇಡಲಾಗದ ದೇಣಿಗೆ ಎಂದು ಮುಖ ಹಿಂಡಿಕೊಂಡೇ, ನಿರ್ಭಿಡೆಯಿಂದ ಸಮರ್ಥಿಸಿಕೊಳ್ಳಲಿಲ್ಲವೆ?

ಇದು ಬಿ.ಎಸ್.ಪಿ. ಪಕ್ಷದ ಸದ್ಯದ ಸ್ವರೂಪ. ಅಧಿಕಾರವೊಂದೇ ಅದರ ಗುರಿ. ಆ ಅಧಿಕಾರವೆಲ್ಲವೂ ಅದರೆಲ್ಲ ರೂಪಗಳಲ್ಲೂ ಒಬ್ಬ ವ್ಯಕ್ತಿಯ ಕೈಯಲ್ಲಿ. ಆ ಅಧಿಕಾರವನ್ನು ಹಾಗೆ ಸಗಟಾಗಿ ಒಬ್ಬರಲ್ಲಿ ಕೇಂದ್ರೀಕರಿಸಿರುವುದು ಆ ವ್ಯಕ್ತಿಯ ಮೇಲಿನ ನಂಬಿಕೆಯಿಂದಾಗಿ. ಅಂದರೆ, ಇನ್ನಿತರೆಲ್ಲರ ಮೇಲಿನ ಅಪನಂಬಿಕೆಯಿಂದಾಗಿ! ಇದು ನಮ್ಮ ಅರವತ್ತರ ಇಂಡಿಯಾದ ಪ್ರಜಾಪ್ರಭುತ್ವದ ಸಾಧನೆ! ಏಕೆಂದರೆ, ಇದೆಲ್ಲವೂ ನಡೆದಿರುವುದು ಪ್ರಜಾಪ್ರಭುತ್ವವಾದಿ ಸಂವಿಧಾನದ ನೆರಳಲ್ಲೇ. ಹಾಗಾದರೆ, ನಾವು ಸ್ವಾತಂತ್ರ್ಯದ ಹಾಗೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಾಗುತ್ತಿರುವುದು ಹಿಂದಕ್ಕೋ ಮುಂದಕ್ಕೋ? ಇದಕ್ಕೆ ಉತ್ತರ ಬೇಕಾದರೆ, ಮೊನ್ನೆ ಗಾಂಧಿ ಸತ್ಯಾಗ್ರಹದ ಶತಮಾನೋತ್ಸವದ ಸಂದರ್ಭದಲ್ಲಿ ಗಾಂಧಿ ಹೋರಾಟದ ನೈತಿಕ ಮಹತ್ವವನ್ನೂ, ಸಮಕಾಲೀನ ಪ್ರಸ್ತುತತೆಯನ್ನೂ ಭಾರತೀಯರಿಗೆ ಮನದಟ್ಟು ಮಾಡಿಸಿದ ರಾಷ್ಟ್ರದ ಹಿರಿಯ ನಾಯಕರಾದ ಸೋನಿಯಾ ಗಾಂಧಿಯವರು ತೆರೆಮರೆಯಲ್ಲಿ ನಡೆಸಿದ ರಚನಾತ್ಮಕ ರಾಜಕಾರಣದಲ್ಲಿ ಕಂಡುಕೊಳ್ಳಬಹುದು. ಈ ಹಿರಿಯ

ನಾಯಕರಿಗೆ ಈಚಿನ ರಾಷ್ಟ್ರಪತಿ ಚುನಾವಣೆಯಲ್ಲಿ ತಮ್ಮ ಕನಸಿನ ಭಾರತ ಕಟ್ಟಲು ಅನುಕೂಲಕರವಾದ ಅಭ್ಯರ್ಥಿಯ ಗೆಲುವಿಗಾಗಿ ಮಾಯಾವತಿಯವರ ಬೆಂಬಲದ ಅಗತ್ಯ ಬಿದ್ದು; ಅದಕ್ಕಾಗಿ ಅವರ ವಿರುದ್ಧವಿದ್ದ ತಾಜ್ ಭ್ರಷ್ಟಾಚಾರದ ಹಗರಣದ ವಿಚಾರಣೆಗೆ, ರಾಜ್ಯಪಾಲರ ಅನುಮತಿ ಸಿಗದಂತೆ ನೋಡಿಕೊಳ್ಳಲಾಯಿತಷ್ಟೆ! ತಾನು ಕದ್ದು ಮುಚ್ಚಿ ಮಾಡುತ್ತಿದ್ದುದನ್ನು ಮಾಯಾವತಿ ಧೈರ್ಯವಾಗಿಯೇ ಮಾಡ ಹೊರಟಿರುವುದನ್ನು ಕಾಂಗ್ರೆಸ್ ಮೆಚ್ಚಿಕೊಂಡು ಪುರಸ್ಕರಿಸ ಹೊರಟಿದೆ! ಹಾಗೆ ನೋಡಿದರೆ, ಬಿ.ಎಸ್.ಪಿ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದೋಸ್ತಿ ಮಾಡಿಕೊಳ್ಳದ ಪ್ರಮುಖ ರಾಜಕೀಯ ಪಕ್ಷವೇ ಇಲ್ಲ. ಹಾಗೇ ಅದರಿಂದ ಕೈಕೊಡಲ್ಪಡದಿರುವ ಪಕ್ಷಗಳೂ ಇಲ್ಲ. ಹೀಗೆ ಬಿ.ಎಸ್.ಪಿ. ಈ ೬೦ ವರ್ಷಗಳ ಸ್ವತಂತ್ರ ಭಾರತ ಎಲ್ಲ ವರ್ಗಗಳಿಗೆ ಒದಗಿಸಿದ ರಾಜಕೀಯ ಅವಕಾಶಗಳನ್ನು ಅಂತಿಮವಾಗಿ ಅವಕಾಶವಾದಿ ರಾಜಕಾರಣವನ್ನು ರೂಪಿಸಲು ಬಳಸಿಕೊಂಡ ದುರಂತದ ಆತ್ಯಂತಿಕ ಪ್ರತೀಕದಂತಿದೆ. ಅಷ್ಟೇ ಅಲ್ಲ, ಅಂತಹ ರಾಜಕಾರಣದ ಸ್ಫೂರ್ತಿದಾಯಕ ಯಶಸ್ಸಿನ ಪ್ರತೀಕವೂ ಆಗಿ ನಮ್ಮ ಮುಂದೆ ನಿಂತಿದೆ!

ಆದರೆ ಈ ಯಶಸ್ಸು ಎಲ್ಲ ಕಾಲಕ್ಕೂ ಎಲ್ಲ ರಾಜ್ಯಗಳಲ್ಲೂ ಸಂಭವಿಸುವುದೆಂದು ಹೇಳಲಾಗದು ಎಂಬುದೇ ಈ ಬೆಳವಣಿಗೆಯ ಹಿಂದಿನ ಆಶಾದಾಯಕ ಸಂಗತಿ. ಏಕೆಂದರೆ ರಾಜಕಾರಣವೆಂದರೆ, ಅಂಕಗಣಿತದ ಲೆಕ್ಕಾಚಾರ ಹಾಗೂ ಅದನ್ನಾಧರಿಸಿದ ಜಾಣ ಚುನಾವಣಾ ತಂತ್ರೋಪಾಯಗಳಿಂದಷ್ಟೇ ನಿಯಂತ್ರಿಸಲ್ಪಡುವ ಆಟವಲ್ಲ. ಅದೊಂದು ನಿರಂತರವಾಗಿ ಬದಲಾಗುತ್ತಾ ಹೋಗುವ ಜನಶಕ್ತಿಯ ಮನೋಭಾವನೆಗಳ ಪ್ರಯೋಗಶಾಲೆ. ಅಷ್ಟೇ ಅಲ್ಲ, ಭಿನ್ನ ಭಿನ್ನ ಸಂಸ್ಕೃತಿಗಳಲ್ಲಿ ತನ್ನ ನಿಯಮಗಳನ್ನು ಭಿನ್ನ ಭಿನ್ನವಾಗಿ ಕ್ರಿಯಾಶೀಲಗೊಳಿಸುವ ನಿಗೂಢ ವಿದ್ಯಮಾನ ಕೂಡ. ಕರ್ನಾಟಕದ ಲಿಂಗಾಯತರು ಉತ್ತರ ಪ್ರದೇಶದ ಬ್ರಾಹ್ಮಣರಂತೆ ಬಹುಜನ ಸಮಾಜ ಪಕ್ಷದ ರಾಜಕಾರಣದ ಚೌಕಟ್ಟಿಗೆ ಸಿಗುವ ರಾಜಕೀಯ ಪರಿಸ್ಥಿತಿಯಾಗಲೀ, ಸಾಮಾಜಿಕ ಪರಿಸ್ಥಿತಿಯಾಗಲೀ ಇಲ್ಲಿ ಸದ್ಯಕ್ಕೆ ಇದೆಯೆಂದು ತೋರುವುದಿಲ್ಲ. ಏಕೆಂದರೆ, ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗಿರುವ ಬ್ರಾಹ್ಮಣರು ಉತ್ತರ ಪ್ರದೇಶದಲ್ಲಿ ಬಹುಸಂಖ್ಯೆಯಲ್ಲಿರುವ ಬ್ರಾಹ್ಮಣರಂತೆ ಊಳಿಗಮಾನ್ಯಶಾಹಿ ಹಿನ್ನೆಲೆಯಿಂದ ಬಂದು ಸಮಕಾಲೀನ ರಾಜಕಾರಣದಲ್ಲಿ ಪಾತ್ರ ಕಳೆದುಕೊಂಡ ಅನಾಥ ಸ್ಥಿತಿಯಲ್ಲೇನೂ ಇಲ್ಲ. ಇವರು ಮೂಲತಃ ಪೌರೋಹಿತ್ಯದ ಅಥವಾ ಶಾನುಭೋಗಿಕೆಯ ಮೂಲದವರಾಗಿದ್ದು, ರಾಜಕಾರಣದಲ್ಲಿ ವಿಶೇಷ ಆಸಕ್ತಿಯೇನೂ ಇಲ್ಲದ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಇನ್ನೂ ಮುಖ್ಯವಾದ ಸಂಗತಿಯೆಂದರೆ, ಲಿಂಗಾಯತರು ಭೂಮಾಲೀಕರಾಗಿ ಆಧುನಿಕ ಚರಿತ್ರೆಯಲ್ಲಿ ದಲಿತರೊಂದಿಗೆ ವೈರುಧ್ಯಮಯ ಸಾಮಾಜಿಕವಾಗಿ ಸಂಬಂಧವನ್ನೇ ಹೊಂದಿದ್ದು, ಲೌಕಿಕ ಪ್ರಯೋಜನ ಸಿಗುವುದಿದ್ದರೆ ತಮ್ಮ ಸಾಮಾಜಿಕ ಪ್ರತಿಷ್ಠೆಯನ್ನು ಅಮಾನತ್ತಿನಲ್ಲಿಡಬಲ್ಲ ಬ್ರಾಹ್ಮಣರ 'ಆಧುನಿಕತೆ'ಯನ್ನು ಅವರು ಸದ್ಯಕ್ಕಂತೂ ಮೈಗೂಡಿಸಿಕೊಳ್ಳುವ ಸಾಧ್ಯತೆ ಕಾಣಬರುತ್ತಿಲ್ಲ! ಇಂತಹ ಪರಿಸ್ಥಿತಿಯಲ್ಲಿ, ಸದ್ಯದ ಈ ರಾಜಕೀಯ ಹಾಗೂ ಜಾತಿ ಸಮೀಕರಣಗಳನ್ನು

ಮೀರಿ, ಅವರನ್ನು ಆ ಚೌಕಟ್ಟಿಗೆ ತರುವ ರಾಜಕೀಯ ದಕ್ಷತೆ ಹಾಗೂ ಪ್ರಭಾವ ಬಹುಜನ ಸಮಾಜ ಪಕ್ಷದ ಸ್ಥಳೀಯ ನಾಯಕತ್ವಕ್ಕಿದೆಯೇ ಎಂಬುದು ಸದ್ಯದ ಮುಖ್ಯ ಪ್ರಶ್ನೆ. ಹಾಗೇನಾದರೂ ಅದು, ಅದನ್ನು ಸಾಧಿಸಿ ತೋರುವುದಾದರೆ, ಆ ಹೊತ್ತಿಗೆ ಆ ಪಕ್ಷದ ರಾಜಕೀಯ ಸ್ವರೂಪವೇ ಬದಲಾಗಿರುತ್ತದೆ ಎಂಬುದಂತೂ ನಿಜ! ಹಾಗಾದಲ್ಲಿ, ಅದನ್ನು ಕರ್ನಾಟಕ ರಾಜಕೀಯದಲ್ಲಿನ ಹೊಸ ಶಕೆಯ ಆರಂಭ ಎಂದೇ ಹೇಳಬೇಕಾಗುತ್ತದೆ.

ಅದೇನೇ ಇರಲಿ, ನಾನೀಗ ಕರ್ನಾಟಕದಲ್ಲಿ ಈವರೆಗೆ ಗೆಲ್ಲುವ ಪಕ್ಷವೆಂಬುದರ ಸೂಚನೆಯನ್ನೂ ನೀಡದೆ, ಬರೀ ಇತರರನ್ನು ಸೋಲಿಸುವ ಪಕ್ಷವಾಗಿ ಹೆಸರು ಮಾಡಿರುವ ಬಿ.ಎಸ್.ಪಿ. ಬಗ್ಗೆ ಇಷ್ಟೆಲ್ಲಾ ವಿಸ್ತಾರವಾಗಿ ಯೋಚಿಸುವಂತಾದುದರ ಕಾರಣ, ಸ್ವತಃ ಬಿ.ಎಸ್.ಪಿ.ಯಲ್ಲ; ಬದಲಿಗೆ ರಾಷ್ಟ್ರ ರಾಜಕಾರಣದಲ್ಲಿ ಅದರ ಯಶಸ್ಸು ಸಾಂಕೇತಿಕವಾಗಿಯಾದರೂ ಸೂಚಿಸುತ್ತಿರುವ ನಮ್ಮ ಒಟ್ಟಾರೆ ರಾಜಕಾರಣದ ಬೌದ್ಧಿಕ ದಾರಿದ್ರ್ಯ ಹಾಗೂ ಕಣ್ಣೆದುರೇ ಕಾಣಲಾರಂಭಿಸಿರುವ ಅದರ ಪರಿಣಾಮಗಳು. ನಮ್ಮಲ್ಲೇ 'ಆನುದೇವಾ...' ಪ್ರಕರಣ ಆದ ಮೇಲೆ ಈಗ, ಮೊನ್ನೆ ಹೈದರಾಬಾದ್‌ನಲ್ಲಿ ಬಂಗ್ಲಾ ಲೇಖಕಿ ತಸ್ಲಿಮಾ ನಸ್ರೀನಳ ಪುಸ್ತಕದ ತೆಲುಗು ಅವತರಣಿಕೆಯ ಬಿಡುಗಡೆ ಸಮಾರಂಭದಲ್ಲಿ ನಡೆದಿರುವ ದಾಂಧಲೆ ಹಾಗೂ ಹಲ್ಲೆ ಬಗ್ಗೆ ನಮ್ಮ ಎಲ್ಲ ರಾಜಕೀಯ ಪಕ್ಷಗಳು ವಹಿಸಿರುವ ನಿರ್ಲಜ್ಜ ಮೌನವನ್ನೇ ಗಮನಿಸಿ. ವೋಟಿನ ರಾಜಕಾರಣ ಅವನ್ನು ಷಂಡರನ್ನಾಗಿ ಮಾಡಿದೆ! ಈ ಷಂಢ ರಾಜಕೀಯ ಪಕ್ಷಗಳಿಂದ ನಮ್ಮ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ರಕ್ಷಣೆಯಾಗಬೇಕಿದೆ! ಈ ಎರಡನ್ನೂ ನಮಗೆ ತಂದುಕೊಟ್ಟಿತೆಂದು ಹೇಳಲಾದ ಕಾಂಗ್ರೆಸ್ಸನ್ನು ಪ್ರತಿನಿಧಿಸುವ ಆಂಧ್ರ ಸರ್ಕಾರ ವರ್ತಿಸಿರುವ ರೀತಿ ನೋಡಿ. ಅದು, ಹಲ್ಲೆ ನಡೆಸಿದ ಮತೀಯ ಗುಂಪಿನ ಪುಂಡರ ಮೇಲೆ ಸಾರ್ವಜನಿಕ ಒತ್ತಾಯದ ಮೇಲಾದರೂ ತೆಗೆದುಕೊಳ್ಳಬೇಕಾದ ಕಾನೂನು ಕ್ರಮದ ಪರಿಣಾಮವನ್ನು ಸರಿದೂಗಿಸಲೋ ಎಂಬಂತೆ, ಹಲ್ಲೆಗೊಳಗಾದ ಮಹಿಳೆಯ ವಿರುದ್ಧವೂ ಕೋಮು ಅಶಾಂತಿ ಹುಟ್ಟು ಹಾಕಿದ ಮೊಕದ್ದಮೆ ಹೂಡುವ ವಿಕ್ಷಿಪ್ತ ಸೆಕ್ಯುಲರ್ ರಾಜಕಾರಣವನ್ನು ಪ್ರದರ್ಶಿಸಿದೆ! ಮುಖ್ಯವಾಹಿನಿ ರಾಜಕಾರಣವನ್ನು ಪ್ರತಿನಿಧಿಸುವ ಕಾಂಗ್ರೆಸ್ಸಿನ ಇಂತಹ ವಿಕ್ಷಿಪ್ತ ಸೆಕ್ಯುಲರ್ ರಾಜಕಾರಣದ ಬಲದಿಂದಾಗಿಯೇ, ಎಮ್.ಐ.ಎಮ್. ಎಂಬೊಂದು ಪುಡಿ ಮತೀಯ ಮುಸ್ಲಿಂ ರಾಜಕೀಯ ಪಕ್ಷದ ನಾಯಕರು ಈ ಹಲ್ಲೆಯನ್ನು ಕೈಗೊಂಡು ಅದನ್ನು ಸಮರ್ಥಿಸಿಕೊಂಡಿದ್ದಾರಲ್ಲದೆ, ತಸ್ಲೀಮಾಳ ತಲೆ ಕಡಿಯಲು ಕೊಟ್ಟಿರುವ ಅಂತಾರಾಷ್ಟ್ರೀಯ ಫತ್ವಾವನ್ನು ಪುನರುಚ್ಚರಿಸಿದ್ದಾರೆ. ಆದರೂ ಯಾವ ರಾಜಕೀಯ ಪಕ್ಷವೂ ಈ ಬಗ್ಗೆ ಖಂಡನೆಯನ್ನಿರಲಿ, ದಿಗ್ಭ್ರಮೆಯನ್ನು ವ್ಯಕ್ತ ಪಡಿಸುವ ಧೈರ್ಯ ತೋರಿಲ್ಲ. ಬರೀ ವೋಟಿನ ರಾಜಕಾರಣದ ಯಶಸ್ಸು ನಮ್ಮ ಸಾರ್ವಜನಿಕ ಜೀವನವನ್ನು ಎಷ್ಟು ನೀಚ ಹಾಗೂ ಹೃದಯಹೀನವನ್ನಾಗಿಸಿದೆ ಎಂಬುದಕ್ಕೆ ಇದು ಇತ್ತೀಚಿನ ಉದಾಹರಣೆಯಷ್ಟೆ.

ತಸ್ಲೀಮಾ ತುಂಬಾ ಒಳ್ಳೆಯ ಲೇಖಕಿಯಲ್ಲದಿರಬಹುದು. ಆದರೆ ಆಕೆಯ ಮೇಲಿನ ಈ ಅನಾಗರಿಕ ಹಲ್ಲೆಯ ಬಗ್ಗೆ ಯಾರೇ ಆದರೂ ಮೌನ ವಹಿಸಲು ಅದು ಕಾರಣವಾಗಬಾರದು.

ಆಕೆ ಲೇಖಕಿಯಾಗಿ ಇಸ್ಲಾಂ ಧರ್ಮದ ಬಗ್ಗೆ ಸಾಮಾಜಿಕ ಪ್ರಶ್ನೆಗಳನ್ನೆತ್ತಿದ್ದಾಳೆ. ವಿಶೇಷವಾಗಿ ಸ್ತ್ರೀಯರ ಸ್ಥಾನಮಾನಗಳ ಕುರಿತ ಪ್ರಶ್ನೆಗಳನ್ನು. ಅವಳು ಎತ್ತಿರುವ ಈ ಪ್ರಶ್ನೆಗಳು ಎಷ್ಟು ಪ್ರಸ್ತುತ ಎಂಬುದನ್ನು, ಪ್ರಗತಿಪರ ಸಂಘಟನೆಗಳು ಏರ್ಪಡಿಸುವ ಮಹಿಳಾ ಸಭೆಗಳಿಗೆ ಬುರ್ಖಾಗಳಲ್ಲಿ ಬಂಧಿತರಾಗಿಯೇ ಬರುವ ಮಹಿಳೆಯರು ಹೇಳಿಕೊಳ್ಳುವ ಗೋಳನ್ನು ಕೇಳಿಯೇ ತಿಳಿದುಕೊಳ್ಳಬೇಕು. ಹಾಗಾಗಿ, ಭಾರತದ ಯಾವ ಮುಸ್ಲಿಂ ಬುದ್ಧಿಜೀವಿಯಾಗಲೀ ಹೋರಾಟಗಾರನಾಗಲೀ ತೋರಿಸಲಾಗದ ನಿರ್ಭಯತೆಯೊಂದಿಗೆ ಇಸ್ಲಾಂನ ಆಧುನೀಕರಣಕ್ಕಾಗಿ ಹಠ ತೊಟ್ಟಿರುವಂತೆ ತೋರುವ ಏಷ್ಯಾದ ಈ ದಿಟ್ಟ ಮುಸ್ಲಿಂ ಮಹಿಳೆಗೆ, ಎಲ್ಲ ಧರ್ಮಗಳ ವಿಚಾರವಂತರ ಬೆಂಬಲದ ಅಗತ್ಯವಿದೆ. ಎಲ್ಲ ಧರ್ಮಗಳೂ ಕಾಲ ದೇಶಗಳಿಗೆ ತಕ್ಕಂತೆ ಪರಿವರ್ತನೆಯನ್ನು ಅಳವಡಿಸಿಕೊಂಡಿರುವಾಗ ಇಸ್ಲಾಂ ಏಕೆ ಅಪವಾದವಾಗಿ ಉಳಿದಿದೆ? ಆಗಿರುವ ಪರಿವರ್ತನೆಯನ್ನೂ ಏಕೆ ದಮನ ಮಾಡಲು ಹೊರಟಿದೆ? ಉಳಿದ ಜಗತ್ತಿನೆಲ್ಲ ಕಡೆಯಿಂದ ಕೇಳಿ ಬರುತ್ತಿರುವ ಕೂಗೂ ಸ್ಥೂಲವಾಗಿ ಇದೇ ಆಗಿದೆ. ಆದುದರಿಂದ ತಸ್ಲೀಮಾಳನ್ನು ಅವಳೆಲ್ಲ ಪ್ರಶ್ನೆಗಳ ನೆಲೆಯಲ್ಲಲ್ಲದಿದ್ದರೂ, ನಾವೆಲ್ಲ ಇತರೆಲ್ಲ ಕ್ಷೇತ್ರಗಳಲ್ಲಿ ಒಪ್ಪಿಕೊಂಡಿರುವ ಆಧುನಿಕತೆಯ ಪರಮ ಮೌಲ್ಯವೆನಿಸಿದ ಭಿನ್ನಾಭಿಪ್ರಾಯದ ಮೂಲಕ ಸಂವಾದ ಆರಂಭಿಸುವ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ನೆಲೆಯಲ್ಲಾದರೂ ಬೆಂಬಲಿಸಬೇಕಿದೆ. ಏಕೆಂದರೆ, ಪ್ರಶ್ನೆಗಳನ್ನೆತ್ತುವುದೇ ಅಪರಾಧವೆಂದು ಬಗೆದು, ಅದನ್ನು ಭಯೋತ್ಪಾದನೆಯ ಮೂಲಕ ಹತ್ತಿಕ್ಕುವ ಧರ್ಮ, ನಿಜವಾದ ಧರ್ಮ ಅನ್ನಿಸಿಕೊಳ್ಳಲಾರದು. ಆದರೆ ತನ್ನ ಧರ್ಮವನ್ನೇ ಕಳೆದುಕೊಂಡಿರುವ ಇಂದಿನ ರಾಜಕಾರಣಕ್ಕೆ ಈ ಸತ್ಯದ ಅರಿವಾದರೂ ಹೇಗಾದೀತು?

ಇದು ನಾವೆಲ್ಲ ಇಂದು ಕೇಳಿಕೊಳ್ಳಬೇಕಾದ ಬಹು ಮುಖ್ಯ ರಾಜಕೀಯ ಪ್ರಶ್ನೆಯೆಂದು ನಾನು ಭಾವಿಸಿದ್ದೇನೆ.

ಆಗಸ್ಟ್ ೨೪, ೨೦೦೭

ಜಾಗತೀಕರಣವೂ, ನಾಗರಿಕ ಪರಮಾಣು ಒಪ್ಪಂದವೂ...

ಜಾಗತೀಕರಣವನ್ನು ಬರೀ ಟೀಕಿಸುವುದರಿಂದ ಏನು ಪ್ರಯೋಜನ? ಸರ್ಕಾರಿ ವಲಯದ ವೈಫಲ್ಯದ ಫಲವಾಗಿ, ಜಾಗತೀಕರಣವೆಂಬ ಮದ್ದಾನೆ ಈಗಾಗಲೇ ಭಾರತವನ್ನು ಪ್ರವೇಶಿಸಿಯಾಗಿದೆ. ಅದನ್ನು ಚೀನಾ ಹಾಗೂ ಕೊರಿಯಾಗಳಂತೆ ನಮ್ಮ ಬಡತನದ ವಜೆಗಳನ್ನೆತ್ತಲು ಬಳಸಿಕೊಳ್ಳಬಾರದೇಕೆ? ಇದು, ೩.೮.೦೭ರಂದು ಸಾಗರದಲ್ಲಿ ನಾನು ಎಚ್. ಗಣಪತಿಯಪ್ಪನವರ ೮೧ನೇ ಹುಟ್ಟು ಹಬ್ಬದಾಚರಣೆಯ ಸಂದರ್ಭದಲ್ಲಿ ಆಡಿದ ಮಾತುಗಳಿಗೆ ಸ್ಥಳೀಯ ಕೃಷಿಕರಾದ ಗಿರಿ ಎನ್ನುವವರು, ಸಮಾರಂಭದ ನಂತರ ನನ್ನ ಪ್ರತಿಕ್ರಿಯೆಗಾಗಿ ನೀಡಿದ ಚೀಟಿಯ ಒಕ್ಕಣೆಯ ಸಾರಾಂಶ. ಸ್ವತಃ ಗಿರಿಯವರು ತಾತ್ವಿಕವಾಗಿ ಸಮಾಜವಾದಿ ಹಿನ್ನೆಲೆಯಿಂದ ಬಂದವರಾದರೂ, ಸಮಾಜವಾದ ಹೊಸ ಜಾಗತಿಕ ಸಂದರ್ಭಕ್ಕೆ ತಕ್ಕಂತೆ ತನ್ನ ನೀತಿಯನ್ನು ಪರಿಷ್ಕರಿಸಿಕೊಳ್ಳಬೇಕೆಂದು ಬಯಸುವವರು. ಅವರ ಬಯಕೆಯೇ ನನ್ನ ಬಯಕೆಯೂ ಆಗಿದೆ ಎಂದು ಹೇಳಿದ ನಾನು, ಜಾಗತೀಕರಣವನ್ನು ಕೇವಲ ಒಂದು ಆರ್ಥಿಕ ವಿದ್ಯಮಾನವಾಗಿ, ವಿದೇಶಿ ಬಂಡವಾಳದ ಸಾಗಣೆ ವಾಹನದಂತೆ ನೋಡುವುದು ತಪ್ಪು ಎಂದು ತಿಳಿಸಿದೆ. ಹಾಗೇ ಈ ಸಂದರ್ಭದಲ್ಲಿ ಚೀನಾ ಮತ್ತು ಕೊರಿಯಾಗಳ ಉದಾಹರಣೆಗಳೊಂದಿಗೆ ಯೋಚಿಸುವುದೂ ತಪ್ಪು ಎಂದೆ. ಏಕೆಂದರೆ, ಅಲ್ಲಿನ ಪ್ರಯೋಗಗಳನ್ನು ಆಯಾ ದೇಶಗಳ ರಾಜಕೀಯ ವ್ಯವಸ್ಥೆಯ ಭಾಗವಾಗಿಯೇ ನೋಡಬೇಕಾಗುತ್ತದೆ; ಹಾಗಾಗಿ ಆ ದೇಶಗಳ ಏಕ ಪಕ್ಷ ಪ್ರಜಾಪ್ರಭುತ್ವ(?)ವ್ಯವಸ್ಥೆಯನ್ನು ಒಪ್ಪುವವರು ಮಾತ್ರ ಅಲ್ಲಿನ ಪ್ರಯೋಗಗಳ ಯಶಸ್ಸನ್ನು ಮೆಚ್ಚಬಲ್ಲರು ಎಂದು ವಿವರಿಸಿದೆ.

ಆದರೂ, ಅಷ್ಟೇನೂ ಸಮಾಧಾನಗೊಳ್ಳದ ಗಿರಿಯವರು, ನಮಗೊಂದು ಮಧ್ಯಮ ಮಾರ್ಗದ ಅವಶ್ಯಕತೆ ಇದೆಯೆಂದರು. ನಾನು ಈ ಹಿಂದಿನ ಒಂದು 'ವಾರದ ಒಳನೋಟ'

ಅಂಕಣದಲ್ಲಿ 'ಸೆಕ್ಯುಲರಿಸಂ' ಕುರಿತಂತೆ ಅಂತಹ ಮಧ್ಯಮ ಮಾರ್ಗದ ಅನ್ವೇಷಣೆ ಮಾಡಿರುವುದಾಗಿಯೂ, ಜಾಗತೀಕರಣ ಕುರಿತಂತೆಯೂ ಅಂತಹ ಒಂದು ಮಧ್ಯಮ ಮಾರ್ಗವನ್ನು ಅನ್ವೇಷಿಸುವ ಪ್ರಯತ್ನ ಮಾಡಬೇಕಾಗಿದೆಯೆಂದೂ ಸೂಚಿಸಿದರು. ಅಲ್ಲದೆ, ನಾನು ಸಾಹಿತ್ಯ ವಿಮರ್ಶೆಯ ಜೊತೆಗೆ ರಾಜಕಾರಣದ ಬಗ್ಗೆಯೂ ಬರೆಯುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದ್ದಕ್ಕಿದ್ದಂತೆ 'ವಿಕ್ರಾಂತ ಕರ್ನಾಟಕ'ದ ನನ್ನ ಅಂಕಣದ ಓದುಗರೊಬ್ಬರು ಸಿಕ್ಕ ಖುಷಿಯಲ್ಲಿ ನಾನು, ಜಾಗತೀಕರಣ ಕುರಿತ ನನ್ನ ಬರಹಗಳೆಲ್ಲವೂ ಇಂತಹ ಅನ್ವೇಷಣೆಯ ಪ್ರಯತ್ನಗಳೇ ಆಗಿವೆ ಎಂದು ಹೇಳಿ, ಅವನ್ನು ಓದುವಂತೆ ಕೋರಿ ಅವರೊಂದಿಗಿನ ನನ್ನ ಮಾತುಕತೆಯನ್ನು ಮುಗಿಸಿದೆ.

ನಂತರ ನಾನು ಅಂದು ಸಭೆಯಲ್ಲಿ ಆಡಿದ ಮಾತುಗಳನ್ನು ವಿವರವಾಗಿ ನೆನಪಿಸಿಕೊಂಡೆ. ಗಿರಿಯಂತಹವರು, ನಾನೇಕೆ ಜಾಗತೀಕರಣವನ್ನು ನಿಷ್ಕಾರಣವಾಗಿ ವಿರೋಧಿಸುತ್ತಿದ್ದೇನೆ ಎಂದುಕೊಳ್ಳುವರು ಎಂದು ಯೋಚಿಸಿದೆ. ಬಹುಶಃ ನಾನು ಜಾಗತೀಕರಣವೆಂದರೇನು ಎಂದು ವಿವರಿಸದೆ, ಅದರ ದುಷ್ಪರಿಣಾಮಗಳ ಬಗ್ಗೆ ಮಾತ್ರ ಮಾತಾಡತೊಡಗುವುದು ಈ ತಪ್ಪು ತಿಳುವಳಿಕೆಗೆ ಕಾರಣವಿರಬಹುದು ಎಂದುಕೊಂಡೆ. ಬಹುಶಃ ನನ್ನ ಹಲವು ಬರಹ ಹಾಗೂ ಭಾಷಣಗಳಲ್ಲಿ ಜಾಗತೀಕರಣದ ಸ್ವರೂಪವನ್ನು ವಿವರಿಸಿರುವ ದಟ್ಟ ನೆನಪು ನನ್ನ ಮನಸ್ಸಿನಲ್ಲಿರುವುದರಿಂದ, ಪ್ರತಿ ಭಾಷಣದಲ್ಲೂ ಅದನ್ನು ಪುನರಾವರ್ತಿಸುವುದು ಆಯಾಸವೆನ್ನಿಸಿ, ನಾನು ನೇರವಾಗಿ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ಮಾತನಾಡಲು ಹೋಗುತ್ತೇನೇನೋ! ಆದರೆ, ಆ ದುಷ್ಪರಿಣಾಮಗಳನ್ನು ಹೇಳುವಾಗ, ಸಭೆಯ ಸಂದರ್ಭಕ್ಕೆ ತಕ್ಕಂತೆ ಅದರ ವಿವಿಧ ಆಯಾಮಗಳನ್ನು ಕುರಿತಂತೆ ಮಾತನಾಡುವ ಪ್ರಯತ್ನ ನನ್ನದು.

ಅದೇನೇ ಇರಲಿ, ಗಿರಿಯಂತಹವರು ಜಾಗತೀಕರಣವನ್ನು ಭಾರತದಂತಹ ದೇಶಕ್ಕೆ ಬಯಸದೇ ಬಂದ ಭಾಗ್ಯವೆಂಬಂತೆ ಏಕೆ ಭಾವಿಸುವರು? ಅದನ್ನು ಅವರು ಮದ್ದಾನೆ ಎಂದು ಸರಿಯಾಗಿಯೇ ಕರೆದಿದ್ದಾರೆ. ಆದರೆ ಆ ಮದ್ದಾನೆ ತನ್ನ ಮಾವುತನೊಂದಿಗೇ ಪೂರ್ವ ನಿಯೋಜಿತ ಕಾರ್ಯಕ್ರಮಗಳೊಂದಿಗೆ ಬಂದಿದೆ ಎಂಬುದು ಅವರಿಗೆ ತಿಳಿದಂತಿಲ್ಲ! ಹಾಗಾಗಿಯೇ ಅವರು, ಈ ಮದ್ದಾನೆಯಿಂದ ನಾವೇಕೆ ನಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಬಾರದು ಎಂದು ಕೇಳುತ್ತಾರೆ! ಕುವೆಂಪು ಕುರಿತ ಇತ್ತೀಚಿನ ಬರಹವೊಂದರಲ್ಲಿ ನಾನು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಲೆನಾಡಿಗೆ ಮಿಷನರಿಗಳ ಪ್ರವೇಶವನ್ನು ಕುವೆಂಪು ವರ್ಣಿಸಿರುವ ಒಂದು ಅಧ್ಯಾಯದಲ್ಲೇ, ಕನ್ನಡ ಸಮಾಜದ ಮಟ್ಟಿಗೆ ಜಾಗತೀಕರಣದ ಮೊದಲ ಸೂಚನೆ ದೊರೆತಿದೆ ಎಂದಿದ್ದೇನೆ. ಪೂರ್ವವನ್ನು ಎಲ್ಲ ರೀತಿಯಲ್ಲೂ ಪಶ್ಚಿಮ ಮಾಡುವ ರಾಜಕೀಯ ಪ್ರಯತ್ನದ ಆತ್ಯಂತಿಕ ರೂಪವೇ ಜಾಗತೀಕರಣ. ಕ್ರಿಶ್ಚಿಯನ್ ಧರ್ಮ ಇಲ್ಲಿಗೆ ಒಂದು ಧರ್ಮವಾಗಿ ಮಾತ್ರವಲ್ಲ; ಒಂದು ಜೀವನ ದೃಷ್ಟಿಯಾಗಿ, ಒಂದು ಜೀವನ ಕ್ರಮವಾಗಿ, ಕೀಳರಿಮೆಯನ್ನು ಬಿತ್ತುತ್ತಲೇ ಬಂತು.

ಹಾಗೇ ನಂತರದ ದಿನಗಳಲ್ಲಿ ಅದು, ಈ ಕೀಳರಿಮೆಯನ್ನು ಕಿತ್ತೆಸೆಯುವ ಸಾಧನವಾಗಿ ಆಧುನೀಕರಣದ ಹೆಸರಿನಲ್ಲಿ, ಹೊಸ ವಿಜ್ಞಾನ– ತಂತ್ರಜ್ಞಾನಗಳ ರೂಪದಲ್ಲಿ ವ್ಯಕ್ತವಾಯಿತು. ಇವೆಲ್ಲವೂ ಕಾಲಕ್ರಮದಲ್ಲಿ ಸ್ಥಳೀಯ ಜೀವನ ದೃಷ್ಟಿ, ಕ್ರಮ, ಜ್ಞಾನರೂಪಗಳು ಹಾಗೂ ಕೌಶಲ್ಯಗಳನ್ನು ಅಪ್ರಸ್ತುತಗೊಳಿಸಿ ಸೃಷ್ಟಿಸಿದ 'ರಾಷ್ಟ್ರೀಯ' ಬಿಕ್ಕಟ್ಟು, ಹಣಕಾಸಿನ ಬಂಡವಾಳದ ಕೊರತೆಯ ರೂಪದಲ್ಲಿ ಕಾಣಿಸಿಕೊಂಡಾಗ ಆಧುನೀಕರಣವು ಆರ್ಥಿಕ ಸುಧಾರಣೆ, ಉದಾರೀಕರಣ, ಖಾಸಗೀಕರಣಗಳ ಘೋಷಣೆಗಳೊಂದಿಗೆ ಜಾಗತೀಕರಣ ಎಂಬ ಆಕರ್ಷಕ ಹೊಸ ಹೆಸರಿನೊಂದಿಗೆ ನಮಗೆ ಎದುರಾಗಿದೆ. ಹೀಗಾಗಿ ಜಾಗತೀಕರಣ ಎಂಬುದು ಹೊಸ ವಿದ್ಯಮಾನವೇನೂ ಆಗಿರದೆ, ನಾವು ಕೀಳರಿಮೆಯನ್ನು ನಿವಾರಿಸಿಕೊಳ್ಳಲು ಅಳವಡಿಸಿಕೊಂಡ ಪಶ್ಚಿಮದ ಆಧುನಿಕತೆಯ ಆತ್ಯಂತಿಕ ರೂಪವೇ ಆಗಿದೆ!

ಹಣಕಾಸಿನ ರೂಪದ ಬಂಡವಾಳಕ್ಕಿಂತ ಹೆಚ್ಚಾಗಿ ವಿಶ್ವಾಸದ, ಸಹಕಾರದ, ಹೊಂದಾಣಿಕೆಯ ಸಾಂಸ್ಕೃತಿಕ ಬಂಡವಾಳವನ್ನು ನೆಚ್ಚಿ ಸಾಗಿದ್ದ ನಮ್ಮ ಗ್ರಾಮ ಮೂಲದ instinctಗಳನ್ನಾಧರಿಸಿದ ಮಿತಿಯುಳ್ಳ ಬದುಕಿನ ನಮ್ಮ ಆರ್ಥಿಕತೆಯನ್ನು; ಪಶ್ಚಿಮದ ಭೌತವಾದಿ ನಾಗರೀಕತೆಯ, ಮಿತಿಯಿಲ್ಲದ ಬದುಕಿನ ಆರ್ಥಿಕತೆಯನ್ನಾಗಿ ಪರಿವರ್ತಿಸುವ ಪಶ್ಚಿಮದ ಹುನ್ನಾರವೇ ಇಂದು ಜಾಗತೀಕರಣವೆನಿಸಿದೆ. ನಿಜ, ಗ್ರಾಮ ಮೂಲದ ನಮ್ಮ ಮಿತಿಯುಳ್ಳ ಈ ಬದುಕಿನ ಜೀವನ ದರ್ಶನವನ್ನು ಜಾತಿ ಪದ್ಧತಿ, ವಿಶೇಷವಾಗಿ ಅಸ್ಪೃಶ್ಯತಾ ಆಚರಣೆ ಕಳಂಕಗೊಳಿಸಿತ್ತು. ಆದರೆ ಅದನ್ನು ನಿವಾರಿಸಿಕೊಳ್ಳುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಂದೋಲನವೊಂದು ಗಾಂಧಿ– ಅಂಬೇಡ್ಕರ್– ಲೋಹಿಯಾ ಅನುಸಂಧಾನದ ಮೂಲಕ ಆರಂಭವಾಗಿತ್ತಾದರೂ, ಪಶ್ಚಿಮದ ಆಧುನಿಕ– ಅಂದರೆ ಸ್ಥೂಲವಾಗಿ ಹೊಸ ವೈಜ್ಞಾನಿಕ ಹಾಗೂ ತಂತ್ರಜ್ಞಾನಾಧಾರಿತ– ಜೀವನ ವಿಧಾನದ ಅಳವಡಿಕೆಯೇ ಜಾತಿ ಪದ್ಧತಿ ಸೃಷ್ಟಿಸಿದ್ದ ಸಾಮಾಜಿಕ– ಆರ್ಥಿಕ ವೈರುಧ್ಯಗಳನ್ನು ಸರಿಪಡಿಸುವವೆಂಬ ನಂಬಿಕೆ, ನೆಹರೂ ಪಂಥದ ಸೆಕ್ಯುಲರಿಸಂನ ಪ್ರಭಾವದಿಂದಾಗಿ ಪ್ರಬಲಗೊಂಡಿತು. ಇದರಿಂದಾಗಿ, ಪಶ್ಚಿಮದ ಆಧುನಿಕತೆ ಭಾರತದ ಆರ್ಥಿಕ ಸಮಸ್ಯೆಗಳನ್ನಲ್ಲದೆ, ಸಾಮಾಜಿಕ ವೈರುಧ್ಯಗಳನ್ನೂ ನಿವಾರಿಸುವ ದಿವ್ಯೌಷಧವಾಗಿ ಪರಿಗಣಿತವಾಯಿತು. ಆದರೆ, ಇಷ್ಟೆಲ್ಲದರ ನಂತರವೂ ನಮ್ಮ ಸಮಾಜದಲ್ಲಿ ಜಾತಿ ಸಂಘರ್ಷ ನಿಂತಿದೆಯೇ; ಹೋಗಲಿ, ಕಡಿಮೆಯಾಗಿದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಈ ಎಲ್ಲ ಗೊಂದಲದ ಹಿಂದೆ ಇದ್ದುದು ನಮ್ಮ ಜೀವನ ದೃಷ್ಟಿ ಹಾಗೂ ವಿಧಾನದ ಬಗೆಗಿದ್ದ– ಸ್ಥಗಿತಗೊಂಡಿದ್ದ– ನಮ್ಮ ಆಲೋಚನೆಯ ದಾರಿದ್ರ್ಯ ಹಾಗೂ ಪಶ್ಚಿಮದ ಆಧುನಿಕತೆ ಕುರಿತಂತೆ ಕೀಳರಿಮೆ ತುಂಬಿದ ನಮ್ಮ ಕುತೂಹಲ. ಇದರ ಪರಿಣಾಮವಾಗಿ ಪಶ್ಚಿಮದ ಆಧುನಿಕತೆಯ ವಿರುದ್ಧ ತಮ್ಮದೇ ಕ್ರಾಂತಿಕಾರಿ ಆಲೋಚನೆಗಳ ಮೂಲಕ ಸಮರ ಸಾರಿದ್ದ ಗಾಂಧಿ ಕೂಡ ಕ್ರಮೇಣ ಜನಸಾಮಾನ್ಯರ ಕಣ್ಣಿನಲ್ಲಿ ಅಪ್ರಸ್ತುತರಾಗಿ ಹೋದರು. ಲೋಹಿಯಾ ಹಿಂದೊಮ್ಮೆ ಕಮ್ಯುನಿಸಮ್ಮನ್ನು ಕ್ರಿಶ್ಚಿಯಾನಿಟಿ ನಂತರ ಪಶ್ಚಿಮವು ಏಷ್ಯಾದ ಮೇಲೆ

ಪ್ರಯೋಗಿಸಿರುವ ಅಸ್ತ್ರವೆಂದು ಬಣ್ಣಿಸಿದ್ದರು. ಈಗ ಜಾಗತೀಕರಣವನ್ನೂ ಆ ಪಟ್ಟಿಗೆ ಸೇರಿಸಬಹುದಾಗಿದೆ.

ಹೀಗಾಗಿ ಜಾಗತೀಕರಣವೆಂಬುದು ತನ್ನ ಹೆಚ್ಚುವರಿ ಬಂಡವಾಳದ (ಇದು ಉತ್ಪತ್ತಿಯಾದದ್ದೂ ವಸಾಹತುಶಾಹಿಯಿಂದಾಗಿಯೇ) ಲಾಭದಾಯಕ ಹೂಡಿಕೆಗಾಗಿ ಹೊಸ ಹೊಸ ಮಾರುಕಟ್ಟೆಯನ್ನು ಸೃಷ್ಟಿಸುವ, ಕಂಡುಕೊಳ್ಳುವ ಪಶ್ಚಿಮದ ತಂತ್ರವೇ ಆಗಿದೆ. ನಮ್ಮ ಜೀವನ ದೃಷ್ಟಿಯೇ ತಪ್ಪಾಗಿದೆ, ನಮ್ಮ ಜೀವನ ಕ್ರಮವೇ ಅರ್ಥಹೀನವಾಗಿದೆ ಎಂದು ನಂಬುವ ಹುಂಬರು ಮಾತ್ರ ಜಾಗತೀಕರಣದ ಈ ಆವೃತ್ತಿಯನ್ನು ವರವೆಂದು ಪರಿಗಣಿಸಿಯಾರು. ಹೀಗೆ ಭಾರತೀಯ ಮನಸ್ಸುಗಳಿಗೆ ಅಸಮಾಧಾನದ, ಅತೃಪ್ತಿಯ ಬೆಂಕಿ ಹಚ್ಚಿ ಅದರ ತಳಮಳದಲ್ಲಿ ಮೈಕಾಯಿಸಿಕೊಳ್ಳುವ ಪಶ್ಚಿಮದ ತಂತ್ರವಾಗಿರುವ ಜಾಗತೀಕರಣವನ್ನು ನಿಯಂತ್ರಿಸುವುದು ಹೇಗೆ? ಅದನ್ನು ಗಿರಿಯವರು ಸೂಚಿಸಿರುವಂತೆ ನಮ್ಮ ಆದ್ಯತೆಯ ಕ್ಷೇತ್ರಗಳ ಸುಧಾರಣೆಗಾಗಿ ಬಳಸಿಕೊಳ್ಳುವುದು ಹೇಗೆ? ಅವರು ಬಂಡವಾಳ ತೊಡಗಿಸುವುದೇ, ಷರತ್ತುಗಳ ಮೇಲೆ. ನಾವೂ ಷರತ್ತುಗಳನ್ನು ಹಾಕುತ್ತಿರುವೆವಾದರೂ, ಮೂಲತಃ ಅವರ ಅಭಿವೃದ್ಧಿ ಮಾದರಿಯನ್ನು– ಕೈಗಾರೀಕೀಕರಣ ಮತ್ತು ನಗರೀಕರಣವನ್ನು ಆಧರಿಸಿದ ಗ್ರಾಹಕ ಸಮಾಜವೊಂದನ್ನು ಸೃಷ್ಟಿಸುವುದು– ಒಪ್ಪಿಕೊಂಡೇ, ಆಡಳಿತಾತ್ಮಕ ನೆಲೆಯ ಷರತ್ತುಗಳನ್ನಷ್ಟೇ ಹಾಕುವ ಅವಕಾಶವನ್ನು ನಾವು ಹೊಂದಿದ್ದೇವೆ. ಇದರ ಪರಿಣಾಮಗಳನ್ನು ಎರಡು ಉದಾಹರಣೆಗಳ ಮೂಲಕ ವಿಷದೀಕರಿಸಬಹುದು. ಒಂದು ಅತಿ ಚಿಕ್ಕ ಆದರೆ ಸೂಕ್ಷ್ಮ ಉದಾಹರಣೆ: ಜಾಗತೀಕರಣವು ಉದ್ಯೋಗ ಸೃಷ್ಟಿಯ ಹೆಸರಲ್ಲಿ ದೊಡ್ಡ ಪ್ರಮಾಣದಲ್ಲಿ ತಂದಿರುವ ಕಾಲ್ ಸೆಂಟರ್‌ಗಳಲ್ಲಿ ಭಾರತದ ಭವಿಷ್ಯವನ್ನು ರೂಪಿಸಬೇಕಾದ ನಮ್ಮ ಮಕ್ಕಳು, ತಮ್ಮ ಭಾಷಾ ವೈಖರಿಯನ್ನಷ್ಟೇ ಅಲ್ಲದೆ (ಇದನ್ನು ಬೇಕಾದರೆ, ಒಂದು ಕೌಶಲ್ಯವೆಂದು ಪರಿಗಣಿಸಬಹುದು) ತಮ್ಮ ಹೆಸರುಗಳನ್ನೂ ಬದಲಾಯಿಸಿಕೊಳ್ಳಬೇಕಾದ ಒತ್ತಡದ ಪರಿಣಾಮಗಳಾದರೂ ಎಂತಹುದು? ತಮ್ಮ ಹಗಲುಗಳನ್ನು ಕಳೆದುಕೊಂಡ ಅವರು ಏನಾಗಿದ್ದಾರೆ ಎಂಬ ಬಗ್ಗೆ ನಡೆದಿರುವ ಸಮೀಕ್ಷೆಗಳ ಬಗ್ಗೆ ಯಾರಾದರೂ ತಲೆ ಕೆಡಿಸಿಕೊಂಡಿದ್ದಾರೆಯೇ? ಉದ್ಯೋಗ ಸೃಷ್ಟಿ ಆಗಬೇಕಾಗಿರುವುದು, ರಾಷ್ಟ್ರವನ್ನು ಕಟ್ಟಲೇ ಹೊರತು, ಕೆಡವಲಲ್ಲ ಅಲ್ಲವೇ?

ಇನ್ನೊಂದು ದೊಡ್ಡ ಉದಾಹರಣೆ: ಇತ್ತೀಚೆಗೆ ವಿವಾದಕ್ಕೆ ಸಿಕ್ಕಿ ಕೇಂದ್ರ ಸರ್ಕಾರದ ಅಸ್ತಿತ್ವವನ್ನೇ ಅಲುಗಾಡಿಸುತ್ತಿರುವ ಅಮೆರಿಕಾದೊಡನೆಯ ನಾಗರಿಕ ಪರಮಾಣು ಒಪ್ಪಂದ. ಅದರ ತಾಂತ್ರಿಕ ಅನುಕೂಲಗಳು ಹಾಗೂ ಅನಾನುಕೂಲಗಳು ಏನೇ ಇರಲಿ– ಅದೀಗ ರಾಷ್ಟ್ರಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ– ಅದನ್ನು ಸಮರ್ಥಿಸಲು ನಮ್ಮ ಪ್ರಧಾನಿ ನೀಡಿರುವ ಎರಡು ಕಾರಣಗಳನ್ನು ಗಮನಿಸಿ. ಒಂದು ಈ ಒಪ್ಪಂದವಿಲ್ಲದೆ ನಾವು ಜಾಗತಿಕ ಶಕ್ತಿಯಾಗಲೂ ಸಾಧ್ಯವಿಲ್ಲ. ಎರಡು: ಅಮೆರಿಕಾದ ಈವರೆಗಿನ ಅಧ್ಯಕ್ಷರ ಪೈಕಿ ಬುಷ್‌ರೇ ಭಾರತದ ಬಗ್ಗೆ ಅತ್ಯಂತ ಸ್ನೇಹ ಪ್ರದರ್ಶಿಸಿರುವವರು! ಈ ಎರಡೂ ಎಷ್ಟು ಅನಾಹುತಕಾರಿ

ಸಮರ್ಥನೆಗಳೆಂದರೆ, ನಮ್ಮ ಕುಲಗೆಟ್ಟ ರಾಜಕಾರಣಿಗಳ ಮಧ್ಯೆ ತಮ್ಮ ಶುದ್ಧ ಹಸ್ತ ಹಾಗೂ ಸಭ್ಯ ವರ್ತನೆಯ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಮನಮೋಹನ ಸಿಂಗರು, ಗೊತ್ತಿದ್ದೋ ಗೊತ್ತಿಲ್ಲದೆಯೋ, ಭಾರತದ ಪರ ಅಮೆರಿಕಾದ ಎಂತಹ ದಲ್ಲಾಳಿಯಾಗಿದ್ದಾರೆ ಎಂಬ ಆಘಾತಕಾರಿ ಸಂಗತಿ ಸ್ಪಷ್ಟವಾಗುತ್ತದೆ. ಸಾಮ್ರಾಜ್ಯಶಾಹಿಯ ಜಾಣತನವಿರುವುದೇ ತನ್ನ ಕುಕೃತ್ಯಗಳಿಗಾಗಿ ಇಂತಹವರನ್ನೇ ಆರಿಸುವುದರಲ್ಲಿಯೇ ಏನೋ! ಈ ಪರಮಾಣು ಒಪ್ಪಂದದ ಹಿನ್ನೆಲೆಯಲ್ಲಿ ಜಾಗತಿಕ ಶಕ್ತಿ ಎಂಬುದರ ಅರ್ಥವಾದರೂ ಏನು? ಅಮೆರಿಕಾದಂತಹ 'ದೊಡ್ಡಣ್ಣ'ನಿಗೆ ತಮ್ಮಣ್ಣನಾಗುವುದು ಎಂದೇ? ಇಡೀ ಜಗತ್ತಿನಿಂದ ಹಲವಾರು ಕಾರಣಗಳಿಗಾಗಿ ಹಿಡಿಶಾಪ ಹಾಕಿಸಿಕೊಳ್ಳುತ್ತಿರುವ ಬುಷ್ ನೀಡುತ್ತಿರುವ ಸ್ನೇಹ ಹಸ್ತದ ಹಿಂದಿನ ಉದ್ದೇಶಗಳನ್ನು ನಾವು ಸಂಪೂರ್ಣವಾಗಿ ವಿಶ್ಲೇಷಣೆ ಮಾಡಿದ್ದೇವೆಯೇ? ಮನಮೋಹನ ಸಿಂಗರು ಈ ಒಪ್ಪಂದದ ಮೇಲೆ ತಮ್ಮ ರಾಜಕೀಯ ಜೀವನವನ್ನೇ ಏಕೆ ಪಣವಾಗಿಡಲು ಹೊರಟಿದ್ದಾರೆ? ಈ ಪರಮಾಣು ಒಪ್ಪಂದದ ಹಿಂದೆ ಮಧ್ಯಪ್ರಾಚ್ಯ ಹಾಗೂ ಚೀನಾ ಸೇರಿದಂತೆ ಪೂರ್ವ ಏಷ್ಯಾದ ಮೇಲೆ ರಾಜಕೀಯ ನಿಯಂತ್ರಣ ಸಾಧಿಸಲು ಭಾರತವನ್ನು ತನ್ನ ಒಂದು ಮಿಲಿಟರಿ ಏಜೆಂಟನ್ನಾಗಿ ರೂಪಿಸುವ ದೀರ್ಘಕಾಲಿಕ ತಂತ್ರವಿಲ್ಲವೇ? ಈ ಬೆಳವಣಿಗೆ ಜಾಗತಿಕ ರಾಜಕಾರಣದ ಸದ್ಯದ ಸಮೀಕರಣಗಳ ಮಧ್ಯೆ ಭಾರತವನ್ನು ಯಾವ ಸ್ಥಿತಿಗೆ ದೂಡಬಹುದು? ಅದರ ರಾಜಕೀಯ ಸ್ವಾಯತ್ತತೆ ಎಷ್ಟರ ಮಟ್ಟಿಗೆ ಭಂಗಗೊಳ್ಳಬಹುದು? ಮಾರುಕಟ್ಟೆಯನ್ನು ಝಗಝಗಿಸುವ ವೈವಿಧ್ಯಮಯ ವಸ್ತುಗಳಿಂದ ಸಮೃದ್ಧಗೊಳಿಸಿ, ಮನುಷ್ಯರನ್ನು ಚಪಲಚಿತ್ತರನ್ನಾಗಿ ಮಾಡುವ ಮೂಲಕ ಇಂತಹ ಮುಖ್ಯ ಪ್ರಶ್ನೆಗಳನ್ನೇ ಮರೆಸಿಬಿಡುವ ಜಾಗತೀಕರಣವನ್ನು ಇಡಿಯಾಗಿ ಒಪ್ಪಿಕೊಳ್ಳುವುದು ಸಾಧ್ಯವೇ?

ಹೀಗಾಗಿ ಇಂದು ಮಧ್ಯಮ ಮಾರ್ಗವೆಂದರೆ, ವಿದೇಶಿ ಬಂಡವಾಳ ಎನ್ನುವುದು ಪಡೆಯುವವರ ಅಗತ್ಯದಷ್ಟೇ ಕೊಡುವವರ ಅಗತ್ಯವೂ ಆಗಿದೆ ಎನ್ನುವ ರೀತಿಯಲ್ಲಿ ಅದರ ಮೇಲಿನ ಷರತ್ತುಗಳನ್ನು, ನಮ್ಮ ಅಭಿವೃದ್ಧಿ ನೀತಿಗನುಗುಣವಾಗಿ ರೂಪಿಸುವ ತಾಕತ್ತುಳ್ಳ ದೇಶೀ ಪ್ರಜ್ಞೆಯ ರಾಜಕಾರಣವನ್ನು ಕಟ್ಟುವುದೇ ಆಗಿದೆ. ವಿಶ್ವ ಸಮಾಜವಾದಿ ಚಿಂತಕರ ಒಕ್ಕೂಟ ಆರಂಭಿಸಿರುವ 'ಇನ್ನೊಂದು ಜಗತ್ತು ಸಾಧ್ಯ' ಚಳುವಳಿಯ ವಕ್ತಾರನಾದ ಬೊಲಿವಿಯಾದ ಅಧ್ಯಕ್ಷ ಶಾವೆಜ್ ಹೇಳುವ ಹಾಗೆ, ಇಂದಿನ ಅಗತ್ಯ, ಹಣಕಾಸಿನ ಬಂಡವಾಳದ ಜೊತೆಗೇ ಸಾಂಸ್ಕೃತಿಕ ಬಂಡವಾಳದ ವಿನಿಮಯವನ್ನೂ ಆಧರಿಸಿದ ಜಾಗತೀಕರಣ. ಅಂದರೆ, ನಿಜವಾದ ಜಾಗತೀಕರಣದ ಹಿಂದೆ, ಜಗತ್ತು ಎಲ್ಲ ನೆಲೆಗಳಲ್ಲೂ; ಏಕ ಕೇಂದ್ರಿತವಾಗಿರದೆ, ಬಹುಕೇಂದ್ರಿತವಾಗಬೇಕೆಂಬ ಆಗ್ರಹ ಇರಬೇಕಾಗುತ್ತದೆ. ಇದನ್ನು, ಇಂದಿನ ರಾಜಕಾರಣ ಸಮರ್ಥಿಸುತ್ತಿರುವ ಜಾಗತೀಕರಣದ ಆವೃತ್ತಿಯ ಅನಾಹುತಗಳನ್ನು ಜನರಿಗೆ ಹೇಳುವ ಮೂಲಕವೇ ಆರಂಭಿಸಬೇಕಾಗಿದೆ. ಇದು ಕಷ್ಟದ ದಾರಿ; ಆದರೆ ಅನಿವಾರ್ಯದ ದಾರಿಯೂ ಹೌದು. ಈ ದಾರಿಯಲ್ಲೇ ರಾಜಕಾರಣದ ಪರ್ಯಾಯ

ಮಾದರಿಗಳು ಮೂರ್ತ ರೂಪ ಪಡೆಯುವುವು ಎಂಬ ನಂಬಿಕೆ ನನ್ನದು. ಗಿರಿಯವರಂತಹ ಪ್ರಗತಿಪರ ರೈತರೂ ಜಾಗತೀಕರಣದ ವಿರೋಧವನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವ ಪರಿಸ್ಥಿತಿ ಬಗ್ಗೆ ಚಿಂತಿತನಾಗಿ ಈ ಬಗ್ಗೆ ಇಷ್ಟು ವಿಸ್ತಾರವಾಗಿ ಬರೆಯಬೇಕಾಯಿತಷ್ಟೆ.

ಆಗಸ್ಟ್ ೩೧, ೨೦೦೭

ಅಧಿಕಾರ ಹಸ್ತಾಂತರ : ಮೂರೂ ಬಿಟ್ಟ ಮೂರೂ ಪಕ್ಷಗಳು

ರಾಜ್ಯದ ಅಧಿಕಾರ ಹಸ್ತಾಂತರ ರಾಜಕಾರಣ ತಾರಕಕ್ಕೇರಿದೆ. ಅಧಿಕಾರಕ್ಕೇರುವಾಗ, ಇಪ್ಪತ್ತು ತಿಂಗಳು ನಾನು;ಇನ್ನಿಪ್ಪತ್ತು ತಿಂಗಳು ನೀವು ಮುಖ್ಯಮಂತ್ರಿ ಎಂದು ಸರಳ ಲೆಕ್ಕಾಚಾರದ ರೂಪದಲ್ಲಿದ್ದ ಒಪ್ಪಂದ, ಅದು ಅಧಿಕಾರಕ್ಕೆ ಸಂಬಂಧಿಸಿದ ಒಪ್ಪಂದ ಎಂಬ ಕಾರಣದಿಂದಾಗಿಯೇ, ಅಧಿಕಾರ ಹಸ್ತಾಂತರದ ದಿನ ಹತ್ತಿರವಾಗುತ್ತಿದ್ದಂತೆಯೇ ಒಪ್ಪಂದದ ಎಲ್ಲ ಪಾವಿತ್ರ್ಯವನ್ನೂ ಕಳೆದುಕೊಳ್ಳುತ್ತಿದೆ! ಈ ಒಪ್ಪಂದದ ಬೆಲೆ ಕಳೆಯಲು ನಾಲ್ಕಾರು ತಿಂಗಳುಗಳ ಹಿಂದೆಯೇ ಪ್ರಯತ್ನಗಳು ಆರಂಭವಾದವು. ಉಳ್ಳಾಲದಲ್ಲಿ ಮುಖ್ಯಮಂತ್ರಿಯ ಸಮ್ಮುಖದಲ್ಲಿಯೇ ಇಕ್ಬಾಲ್ ಅನ್ಸಾರಿ ಎಂಬ ಮಂತ್ರಿ, ಮುಂದೆ ಕೂಡ ಕುಮಾರಸ್ವಾಮಿಯವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ– ಅದಕ್ಕೆ ಎಲ್ಲ ಸಿದ್ಧತೆಗಳು ನಡೆದಿವೆ ಎಂದು ಹೇಳುವ ಮೂಲಕ ಈ ಒಪ್ಪಂದದತ್ತ ಮೊದಲ ಕಲ್ಲು ಎಸೆದರು. ಮುಖ್ಯಮಂತ್ರಿ ನಸುಗುನ್ನಿ ತರಹ ಅದನ್ನು ನಗುತ್ತಲೇ ಕೇಳುತ್ತಾ ಕೂತಿದ್ದರು. ಅನ್ಸಾರಿ ಮತ್ತೆ ಅದನ್ನು ಪುನರುಚ್ಚರಿಸಿದಾಗ, ಪತ್ರಕರ್ತರ ಪ್ರಶ್ನೆಗೆ ಮುಖ್ಯಮಂತ್ರಿ, ಇದು ಅನ್ಸಾರಿಯವರ ಚುನಾವಣಾ ತಂತ್ರವಿರಬಹುದು ಎಂದು ಜಾರಿಕೊಂಡರು– ಪಕ್ಷಕ್ಕೊಂದು ತಂತ್ರವಿರದೆ, ಪಕ್ಷದ ಪ್ರತಿ ಸದಸ್ಯನಿಗೂ ಒಂದೊಂದು ತಂತ್ರವಿರುವ ಹಾಗೆ! ನಂತರ ಎಂ.ಪಿ. ವೆಂಕಟೇಶ್ ಎಂಬ ಹುಂಬ ಶಾಸಕ ಕುಮಾರಸ್ವಾಮಿಯವರೇ ಮುಂದಿನ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದು, ಬಿ.ಜೆ.ಪಿ. ಸದಸ್ಯರೂ ಸೇರಿದಂತೆ ಬಹುತೇಕ ಶಾಸಕರ ಇಚ್ಛೆಯಾಗಿದೆ ಎಂಬ ಹೇಳಿಕೆ ಕೊಟ್ಟಾಗಲೂ, ಅದು ಅವರ ವೈಯುಕ್ತಿಕ ಅಭಿಪ್ರಾಯ ಎಂದು ನಸುನಕ್ಕು ಮುಂದೆ ಹೋದರು! ವಿಧಾನಸಭೆಯಲ್ಲೇ ಡಿ.ಟಿ. ಜಯಕುಮಾರ್ ಎಂಬ ಹರಳೆಣ್ಣೆ ಮಂತ್ರಿ, ಯಡಿಯೂರಪ್ಪ

ಮುಖ್ಯಮಂತ್ರಿಯಾಗಲು ಅಸಮರ್ಥರು ಎಂದು ಹೇಳಿ ಈ ಒಪ್ಪಂದದ ಘನತೆಯನ್ನು ಅಧಿಕೃತವಾಗೇ ನಾಶ ಮಾಡಲು ಯತ್ನಿಸಿದಾಗಲೂ, ಮುಖ್ಯಮಂತ್ರಿ ತಮ್ಮ ಆ ಮಂತ್ರಿಗೆ ಛೀಮಾರಿ ಹಾಕುವುದಿರಲಿ, ಅದನ್ನು ಖಂಡಿಸಲೂ ಮುಂದಾಗಲಿಲ್ಲ. ಇದರರ್ಥ ಇಷ್ಟೆ: ಇದೊಂದು ಸುಯೋಜಿತ ಕಾರ್ಯಾಚರಣೆಯಾಗಿದ್ದು, ಅಧಿಕಾರ ಹಸ್ತಾಂತರದ ಹೊತ್ತಿಗೆ, ಜನರ ಕಣ್ಣಲ್ಲಿ ಈ ಒಪ್ಪಂದದ ಮಹತ್ವವನ್ನು ಹಾಳುಮಾಡುವುದಷ್ಟೆ ಇದರ ಉದ್ದೇಶವಾಗಿದೆ.

ಈಗ ಈ ಕಾರ್ಯಾಚರಣೆಯ ನೇತೃತ್ವವನ್ನು ಮುಖ್ಯಮಂತ್ರಿಗಳೇ ವಹಿಸಿಕೊಂಡಿದ್ದಾರೆ! ರೈತರ ಆತ್ಮಹತ್ಯೆ ತಮ್ಮನ್ನು ಕಂಗೆಡಿಸಿದ್ದು, ತಾವು ಅವಧಿಗೆ ಮುನ್ನವೇ ಅಧಿಕಾರ ತ್ಯಾಗ ಮಾಡುವುದಾಗಿ ಹೇಳಿದ್ದ ಈ ಮುಖ್ಯಮಂತ್ರಿಗಳು, ತಮ್ಮ ತಂದೆಯ 'ರೈತರು ನಮ್ಮ ಮಾತು ಕೇಳದೆ ಆತ್ಮಹತ್ಯೆ ಮಾಡಿಕೊಂಡರೆ ಮಾಡಿಕೊಳ್ಳಲಿ, ನೀನು ಅಧಿಕಾರ ಬಿಡದೆ ನಿನ್ನ ಒಳ್ಳೆಯ ಕೆಲಸವನ್ನು ಮುಂದುವರೆಸು' ಎಂಬ ಬಹಿರಂಗ ಆದೇಶ ರೂಪದ ಆಶೀರ್ವಾದವನ್ನು ಪಾಲಿಸಲೆಂಬಂತೆ ಈವರೆಗೂ ಅಧಿಕಾರದಲ್ಲಿ ಮುಂದುವರೆದಿದ್ದಾರೆ. ಅಲ್ಲದೆ, ಮೊದಮೊದಲು, ಅಧಿಕಾರ ಹಸ್ತಾಂತರ ಖಚಿತ– ಅನುಮಾನ ಬೇಡ ಎನ್ನುತ್ತಿದ್ದವರು ನಂತರ ರಾಗ ಬದಲಾಯಿಸಿ, ಅಕ್ಟೋಬರ್ ಮೂರರವರೆಗೆ ಕಾದು ನೋಡಿ ಎಂಬ ಅನಿಶ್ಚಿತತೆಯ ಧ್ವನಿ ಬೆರೆಸತೊಡಗಿದರು. ತದನಂತರ, ಅಧಿಕಾರ ಹಸ್ತಾಂತರವಾದರೂ, ಆ ಸರ್ಕಾರ ಎಷ್ಟು ದಿನ ಉಳಿಯುವುದೋ ಖಚಿತವಿಲ್ಲ ಎನ್ನತೊಡಗಿದರು! ಇತ್ತೀಚಿನ ಅವರ ನುಡಿಮುತ್ತು: ಎರಡೂ ಪಕ್ಷಗಳ ಜಂಟಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಂದಿನ ನಾಯಕತ್ವದ ನಿರ್ಧಾರವಾಗುತ್ತದೆ ಎಂಬುದು. ಮುಖ್ಯಮಂತ್ರಿಯವರ ಈ ಎರಡೂ ಹೇಳಿಕೆಗಳ ಹಿಂದೆ ಎಂತಹ ಬೇಜವಾಬ್ದಾರಿತನ ಹಾಗೂ ಅನೈತಿಕತೆ ಅಡಗಿದೆ ಎಂಬುದನ್ನು ಗಮನಿಸಬೇಕು. ಅಧಿಕಾರ ಹಸ್ತಾಂತರದ ಮುನ್ನವೇ ಮುಂದಿನ ಸರ್ಕಾರದ ಅಭದ್ರತೆಯ ಬಗ್ಗೆ ಅನುಮಾನ ವ್ಯಕ್ತಪಡಿಸುವ ಮೂಲಕ ಅವರು ಸೂಚಿಸುತ್ತಿರುವುದಾದರೂ ಏನು? ನಿಮ್ಮ ನಾಯಕತ್ವದ ಬೆಂಬಲಕ್ಕೆ ನಮ್ಮ ಪಕ್ಷವೇನೂ ಬದ್ಧವಲ್ಲ ಎಂಬ ಸೂಚನೆ ತಾನೇ? ಅಥವಾ ನಿಮ್ಮ ನಾಯಕತ್ವದ ವಿರುದ್ಧ ನನ್ನ ಮತ್ತು ನಿಮ್ಮ ಪಕ್ಷದ ಶಾಸಕರು ಬಂಡೇಳಲಿರುವರೆಂಬ ಬೆದರಿಕೆಯೋ?

ಅಧಿಕಾರ ಹಸ್ತಾಂತರಕ್ಕೆ ಇಂತಹ ಪ್ರತಿಕೂಲ ಪರಿಸ್ಥಿತಿಯ ಸಂಭಾವ್ಯತೆ ಸೃಷ್ಟಿಯಾಗಿರುವುದೂ ತಮ್ಮ ಅಧಿಕಾರಾವಧಿಯ ಕರಾಮತ್ತಿನಿಂದಾಗಿಯೇ ಎಂಬುದು ಮುಖ್ಯಮಂತ್ರಿಗೆ ತಿಳಿಯದ ವಿಷಯವೇನೂ ಅಲ್ಲ. ಏಕೆಂದರೆ, ಇತ್ತೀಚೆಗೆ ತಾನೇ 'ಅನಿವಾರ್ಯ ಕಾರಣ'ಗಳಿಂದಾಗಿ ಅಧಿಕೃತವಾಗಿ ಮುಂದೂಡಲ್ಪಟ್ಟ, ಆದರೆ ಅನಧಿಕೃತವಾಗಿ ಇನ್ನೂ ಚಾಲನೆಯಲ್ಲಿರುವ; ಗಣಿ ಉದ್ಯಮಿ ಹಾಗೂ ಶಾಸಕ ಅನಿಲ್ ಲಾಡ್ ಪಕ್ಷಭೇಧವಿಲ್ಲದೆ ಆಯ್ದಿದ್ದ ಶಾಸಕರ ಹೊಸಪೇಟೆ ರೆಸಾರ್ಟ್ ಪ್ರವಾಸದ ಉದ್ದೇಶವಾದರೂ, ಈ ಕರಾಮತ್ತಿಗೆ ಅಂತಿಮ ರೂಪು ಕೊಡುವುದೇ ಆಗಿತ್ತಲ್ಲವೇ? ತಮ್ಮ ನಾಯಕತ್ವದ ಅಧಿಕಾರಾವಧಿಯುದ್ದಕ್ಕೂ, ಉಪ ಮುಖ್ಯಮಂತ್ರಿ ತಮ್ಮ ಪಕ್ಷದ ಬೆಂಬಲವನ್ನು ಖಚಿತಪಡಿಸಿಕೊಂಡು ಬಂದ ಹಾಗೇ, ಅವರ ಅಧಿಕಾರಾವಧಿಯುದ್ದಕ್ಕೂ ತಮ್ಮ ಪಕ್ಷದ ಬೆಂಬಲವನ್ನೂ ಖಚಿತಪಡಿಸಬೇಕಾದದ್ದು,

ಒಪ್ಪಂದದ ಪ್ರಕಾರ ಈಗಿನ ಮುಖ್ಯಮಂತ್ರಿಯವರ ಒಂದು ನೈತಿಕ ಜವಾಬ್ದಾರಿಯಲ್ಲವೇ? ಹಾಗೇ, ಮುಂದಿನ ನಾಯಕನನ್ನು ಎರಡೂ ಪಕ್ಷಗಳ ಜಂಟಿ ಶಾಸಕಾಂಗ ಸಭೆ ನಿರ್ಧರಿಸುವುದು ಎಂಬ ಮುಖ್ಯಮಂತ್ರಿಯವರ ಹೇಳಿಕೆ, ಸ್ವತಃ ಅವರ ನಾಯಕತ್ವವೇನೂ ಜಂಟಿ ಶಾಸಕಾಂಗ ಸಭೆಯಲ್ಲಿ ನಿರ್ಧರಿತವಾದುದಲ್ಲ ಎಂಬ ಹಿನ್ನೆಲೆಯಲ್ಲಿ ಅನೈತಿಕವೆನಿಸಿಕೊಳ್ಳುತ್ತದೆ. ಒಂದು ಪಕ್ಷ ಯಡಿಯೂರಪ್ಪನವರ ನಾಯಕತ್ವದ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ, ಅದು ವ್ಯಕ್ತವಾಗಬೇಕಾದದ್ದು ಅವರ ಪಕ್ಷದಿಂದಲೇ ಹೊರತು, ಮಿತ್ರನೆಂದು ಆಲಂಗಿಸಿ ಅಧಿಕಾರ ಹಂಚಿಕೊಂಡ ಪಕ್ಷದಿಂದಲ್ಲ. ಜನರ ಈ ಎಲ್ಲ ನೆನಪನ್ನು– ತಿಳುವಳಿಕೆಯನ್ನು, ಭಂಗಗೊಳಿಸುವ ಪ್ರಯತ್ನವೇ ಈ ರಾಜಕೀಯ ಕಾರ್ಯಾಚರಣೆ.

ಹಾಗೆ ನೋಡಿದರೆ, ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಸಾರ್ವಜನಿಕವಾಗಿ ಘೋಷಿತವಾದದ್ದು ಸದರಿ ವ್ಯವಸ್ಥೆಯ ಕೊನೆಯ ಇಪ್ಪತ್ತು ತಿಂಗಳ ಮುಖ್ಯಮಂತ್ರಿ ಯಡಿಯೂರಪ್ಪ ಎಂದು ನಿರ್ದಿಷ್ಟವಾಗಿಯೇ ಹೊರತು, ಮೊದಲ ಇಪ್ಪತ್ತು ತಿಂಗಳ ನಂತರ ಆ ಪಕ್ಷದಲ್ಲಿ ಹೊಸ ನಾಯಕನ ಆಯ್ಕೆ ನಡೆಯುವುದು ಎಂದಲ್ಲ. ಇಷ್ಟಾದರೂ, ಯಡಿಯೂರಪ್ಪ ತಡೆಯಲಾರದೆ ಒಮ್ಮೆ ಬಾಯ್ಬಿಟ್ಟು, ಉಪಮುಖ್ಯಮಂತ್ರಿಯಾಗಿ ಇದೇ ನನ್ನ ಕೊನೇ ಅಧಿವೇಶನ ಎಂದೊಡನೆ ನಮ್ಮ ಮುಖ್ಯಮಂತ್ರಿಗಳು ಅಧಿಕಾರ ಹಸ್ತಾಂತರದ ಬಗ್ಗೆ ಮೇಲೆ ತಿಳಿಸಿದಂತೆ ಬಹಿರಂಗವಾಗಿಯೇ ಗೊಂದಲಕಾರಿ ಹೇಳಿಕೆಗಳನ್ನು ನೀಡಿ, ಒಪ್ಪಂದದ ಪಾವಿತ್ರ್ಯವನ್ನೇ ಹಾಳುಮಾಡಲು ಯತ್ನಿಸಿದರು. ಈಗ ಅದು ಆ ಸ್ಥಾನಕ್ಕೆ ತಕ್ಕುದಾದ ಮಾತಲ್ಲವೆನ್ನಿಸಿ, ಅವಧಿಗೆ ಮೊದಲೇ ಖುರ್ಚಿ ಬಿಡಲು ಸಿದ್ಧನಾದ ಬೈರಾಗಿಯಂತೆ ಅವರು ಮಾತನಾಡತೊಡಗಿದ್ದಾರೆ! ಈ ಹುಸಿ ನೈತಿಕತೆಯ ನಾಟಕ ಈಗಲೂ ಎಷ್ಟು ಹಾಸ್ಯಾಸ್ಪದ ಮಟ್ಟದವರೆಗೆ ಮುಂದುವರೆದಿದೆಯೆಂದರೆ, ತಾವು ಅಧಿಕಾರ ತ್ಯಾಗ ಮಾಡಿದ ಮೇಲೂ ಜನತಾದರ್ಶನ ಹಾಗೂ ಗ್ರಾಮವಾಸ್ತವ್ಯದ ಮೂಲಕ ಬಡವರ ಕಣ್ಣೀರು ಒರೆಸುವ ಕಾರ್ಯಕ್ರಮ ಮುಂದುವರೆಸುವುದಾಗಿ ಕುಮಾರಸ್ವಾಮಿ ಘೋಷಿಸಿಬಿಟ್ಟಿದ್ದಾರೆ! ಹೀಗೆ ಬಡವರ ಕಣ್ಣೀರೊರೆಸುತ್ತಲೇ ಇವರ ಕುಟುಂಬ, ಇವರ ತಂದೆಯೇ ಹಿಂದೊಮ್ಮೆ ತಮ್ಮ ಆಸ್ತಿ ಬಗ್ಗೆ ಹೇಳಿಕೊಂಡಿದ್ದಂತೆ, ನಾಲ್ಕು ಕುರಿಗಳಿಂದ ಆರಂಭಿಸಿ ಇಂದು ಕರ್ನಾಟಕದ ಅತ್ಯಂತ ಶ್ರೀಮಂತ ಕುಟುಂಬಗಳಲ್ಲೊಂದು ಎನಿಸಿಕೊಂಡಿರುವುದು! ಮೊನ್ನೆ ಮತ್ತೆ ಬಾಯಿ ತೆರೆದಿರುವ ಮಂತ್ರಿ ಅನ್ಸಾರಿಯವರೇ ಹೇಳಿಲ್ಲವೇ, ಕುಮಾರಸ್ವಾಮಿಯವರು ಮುಟ್ಟಿದ್ದೆಲ್ಲವೂ ಚಿನ್ನವಾಗತೊಡಗಿದೆ ಎಂದು? ಇವೊತ್ತಿನ ರಾಜಕಾರಣದ ಪರಿಭಾಷೆಯಾದರೂ ಇದೇ ಅಲ್ಲವೇ?

ಅದೇನೇ ಇರಲಿ, ಈ ಕಾರ್ಯಾಚರಣೆ ಮೊನ್ನೆ ತಾನೇ ಇನ್ನೊಂದು ಹಂತವನ್ನು ತಲುಪಿತು. ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮವಾಸ್ತವ್ಯ ಹೂಡಿದ್ದ ಮುಖ್ಯಮಂತ್ರಿಗಳು ಆ ಅಲ್ಪಸಂಖ್ಯಾತರ ಪ್ರದೇಶದ ವಾತಾವರಣದಲ್ಲಿ ಉಳ್ಳಾಲದ ಹೊಡೆತ ನೆನಪಾಗಿ, ಆ ಜನರ ವಿಶೇಷ ಒಲುಮೆ ಗಳಿಸಲೆಂದೋ ಏನೋ, ಬಿ.ಜೆ.ಪಿ.ಯೊಡನೆ ಮೈತ್ರಿ ಮಾಡಿಕೊಂಡ ಪರಿಣಾಮವಾಗಿ ತಮ್ಮ ಪಕ್ಷದ ಜಾತ್ಯತೀತ ನೀತಿಗೆ ಧಕ್ಕೆಯಾಗಿದೆ ಎಂದಿದ್ದಾರೆ. ಅಲ್ಲಿಂದ

ಹಾಸನ– ಅರಸೀಕೆರೆಯೆಡೆಗೆ ಧಾವಿಸಿದ ಅವರು ತಮ್ಮನ್ನು ಈ ವಿಷಯದಲ್ಲಿ ಪೇಚಿಗೆ ಸಿಕ್ಕಿಸಿಲು ಬಂದ ಪತ್ರಕರ್ತರನ್ನು, ತಾವು ಹೇಳಿದ್ದು ಸರಿಯೋ ತಪ್ಪೋ ನೀವೇ ಹೇಳಿ ಎಂದು ಪತ್ರಕರ್ತರನ್ನೇ ಪೇಚಿಗೆ ಸಿಕ್ಕಿಸಿ ತಾವು ಅಲ್ಲಿಂದ ಪಾರಾಗಿದ್ದಾರೆ! ಆದರೆ, ಇದೇ ಮುಖ್ಯಮಂತ್ರಿಗಳು ತಾವು ಅಧಿಕಾರಕ್ಕೇರುವ ಮುನ್ನ ಇದೇ ಪತ್ರಕರ್ತರೆದುರು, ತಾವು ನಿಘಂಟನ್ನೆಲ್ಲಾ ತಡಕಾಡಿದರೂ ಜಾತ್ಯತೀತತೆ ಎಂಬ ಶಬ್ದ ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲವೆಂದೂ, ತಮ್ಮ ಪ್ರಕಾರ ದೇಶ ಕಂಡ ಅತ್ಯುತ್ತಮ ಪ್ರಧಾನಿ ವಾಜಪೇಯಿಯವರೆಂದೂ ಹೇಳುತ್ತಾ ತತ್ವ–ಸಿದ್ಧಾಂತಗಳ ಮಾತನ್ನೆಲ್ಲ ಗೇಲಿ ಮಾಡಿದ್ದನ್ನು ನೆನಪಿಸಿಕೊಂಡಾಗ; ತತ್ವ– ಸಿದ್ಧಾಂತವೆನ್ನುವುದು ಇಂತಹವರ ಕೈಗೆ ಸಿಕ್ಕಿ ಅನುಕೂಲ ರಾಜಕಾರಣಕ್ಕೂ ಹೇಗೆ ದುರುಪಯೋಗವಾಗಬಲ್ಲದು ಎಂದು ಆಶ್ಚರ್ಯವಾಗುತ್ತದೆ. ಅಂದು ಬೊಟ್ಟು ಮಾಡಿ ತೋರಿಸಿದರೂ ಕಣ್ಣಿಗೆ ಬೀಳದ್ದು ಇಂದು ಹೇಗೆ ಕಣ್ಣಿಗೆ ರಾಚತೊಡಗಿದೆ! ಅಲ್ಲದೆ, ಅಂದು ಈ ಸರ್ಕಾರದ ಜವಾಬ್ದಾರಿ ಏನಿದ್ದರೂ ತಮ್ಮದು; ತಮ್ಮ ತಂದೆಗೂ ಇದಕ್ಕೆ ಸಂಬಂಧವಿಲ್ಲವೆಂದು ಹೇಳುತ್ತಿದ್ದ ಮುಖ್ಯಮಂತ್ರಿ ಹಾಗೂ ಅವರ ಸಹಚರರು, ಈಗ ಅಧಿಕಾರ ಹಸ್ತಾಂತರದ ತೀರ್ಮಾನ ಏನಿದ್ದರೂ ದೇವೇಗೌಡರದು ಎನ್ನುತ್ತಿದ್ದಾರೆ!

ನಮ್ಮ ಮುಖ್ಯಮಂತ್ರಿಯವರ ತಂದೆ ಹಾಗೂ ಬಾಯಿ ಬಿಟ್ಟರೆ ಸಾಕು ನೈತಿಕತೆ–ತತ್ವ– ಸಿದ್ಧಾಂತಗಳ ಬಗ್ಗೆ ಕಣ್ಣು ಮೂಗು ಒರೆಸಿಕೊಂಡೇ ಭಾಷಣ ಮಾಡುವ ದೇಶದ ಮಾಜಿ ಪ್ರಧಾನಿ ಈ ದೇವೇಗೌಡರನ್ನು ನೋಡಿ. ತಮ್ಮ ಮಗ 'ತಮಗೆ ತಿಳಿಯದಂತೆಯೇ' ಬಿ.ಜೆ.ಪಿ.ಯೊಂದಿಗೆ ಸಖ್ಯ ಬೆಳೆಸಿ ಸರ್ಕಾರ ರಚನೆಗೆ ಮುಂದಾದಾಗ, 'ಓ ಭೂಮಿಯೇ ನೀನಾದರೂ ಬಾಯಿ ಬಿಟ್ಟು ನನ್ನ ಅವಮಾನವನ್ನು ಅಂತ್ಯಗೊಳಿಸಲಾರೆಯಾ!' ಎಂಬಂತಹ ನಾಟಕೀಯ ಶೈಲಿಯಲ್ಲಿ ದುಃಖಪಟ್ಟಿದ್ದರು. ನಂತರ ತಮ್ಮ ಮಗನನ್ನೂ ಆತನ ಸಹಚರರನ್ನೂ ಪಕ್ಷದಿಂದ ಹೊರಹಾಕಲು ದೆಹಲಿ ಪ್ರಯಾಣ ಕೈಗೊಳ್ಳುವುದಾಗಿ ಪ್ರಕಟಿಸಿ, ಶೋಕಗೃಹ ಪ್ರವೇಶಿಸಿದ್ದ ಅವರು ಅಲ್ಲಿಂದ ಈಚೆಗೆ ಬಂದದ್ದು, ತಮ್ಮ ಮಗ ಮಾಡಿದ್ದೆಲ್ಲವೂ ಪಕ್ಷದ ಹಿತದೃಷ್ಟಿಯಿಂದಲೇ ಎಂಬ ಜ್ಞಾನೋದಯದೊಂದಿಗೆ! ಆದರೆ, ಅವರ ಪಕ್ಷ ಆಗ ಅಧಿಕಾರವೊಂದೇ ಅದನ್ನು ಉಳಿಸುವ ಮಟ್ಟ ತಲುಪಿತ್ತೆಂದು ಹೇಳುವ ಗೋಜಿಗೆ ಮಾತ್ರ ಅವರು ಹೋಗಲಿಲ್ಲ... ಈಗ ಮತ್ತೆ ಅಧಿಕಾರ ಹಸ್ತಾಂತರದ ಗೊಂದಲ ಸೃಷ್ಟಿಸುತ್ತಿರುವುದೂ, ಅವರ ಪಕ್ಷ ಈಗಲೂ ಆ ಮಟ್ಟವನ್ನು ಮೀರಿ ಮೇಲೇರಿಲ್ಲ ಮತ್ತು ತನ್ನ ಮಿತ್ರ ಪಕ್ಷದ ಒಂದು ಭಾಗವನ್ನೂ ತನ್ನ ಈ ಮಟ್ಟಕ್ಕೆ ಇಳಿಸುವಲ್ಲಿ ಯಶಸ್ವಿಯಾಗಿದೆ ಎಂಬುದರ ಸೂಚನೆಯೇ ಆಗಿದೆ ಎಂಬುದು ಅವರಿಗೆ ಗೊತ್ತಿಲ್ಲದೇನಲ್ಲ!

ತಮ್ಮ ಮಗ ಪಕ್ಷದ ಹಿತಕ್ಕಾಗಿ ಆಡಿದ 'ಆಟ'ವನ್ನು ಸಮರ್ಥಿಸಿಕೊಂಡ ಮೇಲೂ, ಸಮಯ ಸಿಕ್ಕಾಗಲೆಲ್ಲ ತತ್ವ– ಸಿದ್ಧಾಂತಗಳ ಮಾತನಾಡುತ್ತಾ ಕಾಲ ಕಳೆಯುತ್ತಿದ್ದ ದೇವೇಗೌಡರು ಈಗ ತಮ್ಮ ಕಿರಿಮಗನಿಗೆ ಹೇಳಿದ ಕಿವಿಮಾತಿನ ವೈಖರಿ ಇದು: 'ಬಿ.ಜೆ.ಪಿ.ಯೊಂದಿಗೆ ಸಖ್ಯ ಮಾಡಿರುವುದಕ್ಕೆ ಜಿಗುಪ್ಸೆ ಏಕೆ ಮಗನೇ? ನಾನೇ ಎರಡು ಬಾರಿ ಅವರ ಸಖ್ಯ ಮಾಡಿ

ಸರ್ಕಾರ ಮಾಡಿದ್ದೇನೆ!' ಹಾಗಾದರೆ, ಮೊದಲಾಗಿ ಕುಮಾರಸ್ವಾಮಿ ಸರ್ಕಾರ ರಚನೆ ಮಾಡಿದಾಗ ಈ ಮಹಾನುಭಾವ ಸುರಿಸಿದ ಕಣ್ಣೀರನ್ನು ಏನೆಂದು ಕರೆಯಬೇಕು? ಹೌದು, ಅಂತಹ ಮಗನಿಗೆ ಇಂತಹ ಅಪ್ಪನೇ ಉದಾಹರಣೆಯಾಗದೆ ಇನ್ನಾರಾದರು? ಆದರೆ ಇಂಥದೆಲ್ಲ 'ನೈತಿಕ' ಧೈರ್ಯದ ಮಾತುಗಳು ಹೊಮ್ಮಿದ್ದಾದರೂ ಯಾವಾಗ? ತಾಳಿ ತಾಳಿ ತಾಳ್ಮೆಗೆಟ್ಟ ಬಿ.ಜೆ.ಪಿ., ಸಚಿವ ಸಂಪುಟದ ಸಭೆಯನ್ನು ಬಹಿಷ್ಕರಿಸುವ ಸೂಚನೆ ನೀಡಿ, ಮೊದಲ ಬಾರಿಗೆ ಸರ್ಕಾರದ ಅಸ್ತಿತ್ವವನ್ನೇ ಅಲುಗಾಡಿಸುವ ಧೈರ್ಯ ತೋರಿದಾಗ!

ಅಧಿಕಾರ ಹಸ್ತಾಂತರದ ನಾಟಕ ಈ ಅಸಹ್ಯ ಮಟ್ಟ ಮುಟ್ಟಲು ಮುಖ್ಯಮಂತ್ರಿ ಮತ್ತು ಅವರ ಪಕ್ಷವೊಂದೇ ಕಾರಣವಲ್ಲ. ಅವರು ಆರಂಭಿಸಿದ ಈ ನಾಟಕದ ಸಂಭಾಷಣೆಗಳ ಅವಮಾನವನ್ನು, ಅಧಿಕಾರ ಕೈತಪ್ಪಿ ಹೋದೀತೆಂಬ ಆತಂಕದಲ್ಲಿ ಬಿ.ಜೆ.ಪಿ. ತನ್ನ ಮೌನ ನಾಟಕದ ಮೂಲಕ ಸಹಿಸಿಕೊಂಡು ಬಂದದ್ದೂ ಕಾರಣವಾಗಿದೆ. ತಾನು ಉಪಮುಖ್ಯಮಂತ್ರಿಯಾಗಿರುವ ಸರ್ಕಾರದ ಮಂತ್ರಿಯೊಬ್ಬ ವಿಧಾನಸಭೆಯಲ್ಲಿ ತನ್ನ ಹೆಸರಿಡಿದು ಹೇಳಿ ಮುಖ್ಯಮಂತ್ರಿಯಾಗಲು ಅಸಮರ್ಥ ಎಂದಾಗಲೂ, ಭಾವಿ ಮುಖ್ಯಮಂತ್ರಿ ಬಾಯಿ ಮುಚ್ಚಿ ಕೂರುತ್ತಾರೆಂದರೆ? ವೈಯುಕ್ತಿಕ ಘನತೆ ಹೋಗಲಿ, ತನ್ನ ಪಕ್ಷದ ಘನತೆ ಉಳಿಸಲಾಗಲಿ, ಅವರಿಂದ ಒಂದು ಪ್ರತಿಕ್ರಿಯೆ ಬೇಡವೇ? ಇವೊತ್ತಿನವರೆಗೂ 'ನನಗೆ ಮುಖ್ಯಮಂತ್ರಿಯ ಮೇಲೆ ವಿಶ್ವಾಸವಿದೆ. ಹಾಗಾಗಿ ಅಧಿಕಾರ ಹಸ್ತಾಂತರ ಖಚಿತ' ಎಂದಷ್ಟೇ ರಾಗ ಹಾಡುತ್ತಿರುವ ಯಡಿಯೂರಪ್ಪನವರಿಗೆ ಮುಖ್ಯಮಂತ್ರಿಯ ರಾಗ ಬೇರಾದೊಡನೆಯಾದರೂ, ತಮ್ಮ ರಾಜಕೀಯ ಹಿರಿತನದ ದೃಷ್ಟಿಯಿಂದಲಾದರೂ, ಆ ಅನೈತಿಕ ಧ್ವನಿಯ ಬಗ್ಗೆ ತಮ್ಮ ಅಸಮಾಧಾನವನ್ನೂ ವ್ಯಕ್ತಪಡಿಸಲಾಗದ ಸ್ಥಿತಿಯನ್ನೇಕೆ ತಲುಪಿದ್ದಾರೆ? ಅವರ ಅಧಿಕಾರದ ಹಸಿವು ಅವರೊಳಗಿನ ರಾಜಕೀಯ ಬೆಂಕಿಯನ್ನು ಆರಿಸಿದೆ ಎಂದೇ ಇದರರ್ಥವಲ್ಲವೆ? ತಮ್ಮದೊಂದೇ ಗಂಡು ಪಕ್ಷವೆಂದು ಹೇಳಿಕೊಳ್ಳುತ್ತಾ, ಒಟ್ಟಾರೆ ಸಮಾಜದ ಹಿತಕ್ಕೆ ವಿರುದ್ಧವಾದ ಅನೇಕ ಗಂಡು ಕೃತ್ಯಗಳೆನ್ನೆಸಗಿದ ವೀರಾವೇಶ ಪ್ರದರ್ಶಿಸಿಕೊಂಡು ಬಂದು, ಅದರ ಆಧಾರದ ಮೇಲೇ ಅಧಿಕಾರದ ಹೊಸ್ತಿಲ ಬಳಿ ಬಂದಿರುವ ಬಿ.ಜೆ.ಪಿ.ಯೇಕೆ ಈಗ ಹೀಗೆ ಅತ್ತ ಗಂಡೂ ಅಲ್ಲದ, ಇತ್ತ ಹೆಣ್ಣೂ ಅಲ್ಲದ ರೀತಿಯಲ್ಲಿ; ಸಾರ್ವಜನಿಕವಾಗಿ ಕರುಣಾಜನಕವಾಗಿ ಕಾಣಿಸಿಕೊಳ್ಳುವ ದುಃಸ್ಥಿತಿಗೆ ಈಡಾಗಿದೆ?

ಶಿಕ್ಷಣ ಖಾತೆಯ ಸಮಾರಂಭ ಶಿಕ್ಷಣಮಂತ್ರಿಯ ಅರಿವಿಲ್ಲದೆಯೇ ಆಯೋಜಿತವಾಗಿ, ಅಲ್ಲಿ ಶಿಕ್ಷಣ ಮಂತ್ರಿಗೆ ಬದಲಾಗಿ ರೇವಣ್ಣನವರು ರಾರಾಜಿಸುವಂತಾದಾಗಲೂ, ಯಾವಾಗಲೂ ಆತ್ಮಗೌರವದ ಬಗ್ಗೆ ಏರುಧ್ವನಿಯಲ್ಲೇ ಮಾತನಾಡುವ ಶಂಕರಮೂರ್ತಿಯವರು ಉಸಿರೇ ಕಳೆದುಕೊಂಡಂತೆ ಸುಮ್ಮನಾಗುವುದರ ಅರ್ಥವಾದರೂ ಏನು? ಇದೊಂದೇ ಪ್ರಸಂಗವಲ್ಲ. ಇತ್ತೀಚಿನ ಬಹುತೇಕ ಎಲ್ಲ ಸಮಾರಂಭಗಳಲ್ಲಿ ರೇವಣ್ಣ ತಮಗೆ ಸಂಬಂಧವಿರಲಿ, ಇಲ್ಲದಿರಲಿ ಅಲ್ಲಿ ಹಾಜರಾಗಿ; ಸಂಬಂಧಪಟ್ಟ ಖಾತೆಯ ಮಂತ್ರಿಯನ್ನೇ ಮೂಲೆಗುಂಪು ಮಾಡಿ. ಮುಖ್ಯ ಸ್ಥಾನದಲ್ಲೋ, ಮುಖ್ಯಮಂತ್ರಿ ಇದ್ದರೆ ಅವರ ಪಕ್ಕದಲ್ಲೋ ಆಸೀನರಾಗುವ

ವ್ಯವಸ್ಥೆಯಾಗಿದೆ! ಇದನ್ನು ಅವರ ಪಕ್ಷದ ಮಂತ್ರಿಗಳು ಹೋಗಲಿ (ಏಕೆಂದರೆ ಅವರೆಲ್ಲ ತಮ್ಮದು ಕುಟುಂಬ ಸೇವಾಸಕ್ತ ಪಕ್ಷವೆಂದು ಹಲವಾರು ಸಂದರ್ಭಗಳಲ್ಲಿ ಸಾಬೀತುಪಡಿಸಿಕೊಂಡಾಗಿದೆ!), ತಮ್ಮ ಪಕ್ಷದ ಮಂತ್ರಿಗಳೂ ಸಹಿಸುವಂತಹ ಪರಿಸ್ಥಿತಿ ಬಿ.ಜೆ.ಪಿ.ಗೇಕೆ ಬಂದಿದೆ? ಕರ್ನಾಟಕದ ರಾಜಕಾರಣ ಮತ್ತು ಆಡಳಿತಗಳೆರಡನ್ನೂ ಒಂದು ಕುಟುಂಬ ಕೇಂದ್ರಕ್ಕೆ ಒಯ್ಯುವ; ಆ ಮೂಲಕ ಪ್ರಜಾಪ್ರಭುತ್ವವನ್ನೇ ಅಣಕವಾಡುವ ಈ ಪ್ರಯತ್ನವನ್ನು ಬಿ.ಜೆ.ಪಿ ಹೇಗೆ ಸಹಿಸುತ್ತದೆ? ಮುಂದೆ ಮುಖ್ಯಮಂತ್ರಿತ್ವ ಸಿಕ್ಕರೂ ಇಂತಹ ವಾತಾವರಣದಲ್ಲಿ ಅದನ್ನು ನಿರ್ವಹಿಸಲು, ಆಡಳಿತದ ಬಿಗಿ ಸಾಧಿಸಲು ಕಷ್ಟವಾಗುತ್ತದೆಂದು ಅದಕ್ಕೆ ಅನ್ನಿಸಿಲ್ಲವೇ?

ತನ್ನ ಪಾಲಿನಿಂದ ನೇಮಿಸಿದ್ದ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರನ್ನು ಏಕಾಏಕಿ ಅಧಿಕಾರದಿಂದ ಕಿತ್ತು ಹಾಕಿದ ಮತ್ತು ತನ್ನ ಪಾಲಿನ ರಾಜ್ಯಸೇವಾ ಆಯೋಗದ ಸದಸ್ಯ ಸ್ಥಾನಕ್ಕೆ ಏಕಪಕ್ಷೀಯವಾಗಿ ತನ್ನ ಅಭ್ಯಥಿಯನ್ನು ತುಂಬಿದ ಮಿತ್ರದ್ರೋಹವನ್ನು ಖಂಡಿಸಲಾಗದ ಬಿ.ಜೆ.ಪಿ.ಯ ರಾಜಕೀಯ ಹೇಡಿತನವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಅರ್ಧ ಮನಸ್ಸಿನ ಸಚಿವ ಸಂಪುಟಸಭೆಯ ಬಹಿಷ್ಕಾರದ ನಂತರ ಉಭಯ ಪಕ್ಷಗಳ ಸಮನ್ವಯ ಸಮಿತಿ ಸಭೆ ಕುರಿತಂತೆ ಮುಖ್ಯಮಂತ್ರಿ ಪ್ರದರ್ಶಿಸಿದ ಉಡಾಫೆಯ ನಡವಳಿಕೆಯಿಂದಲಾದರೂ, ಅದಕ್ಕೆ ಆತ್ಮಗೌರವದ ಪ್ರಜ್ಞೆ ಮೂಡಬೇಡವೇ? ಅಧಿಕಾರಕ್ಕಾಗಿ ಅಂಗಲಾಚುವ ಅಗತ್ಯ ತನಗಿಲ್ಲ; ಅದು ನನ್ನ ಹಕ್ಕು ಎಂದು ಹೇಳುವ ನೈತಿಕ ಧೈರ್ಯವೇಕೆ ಅದಕ್ಕಿಲ್ಲ? ಆಶ್ಚರ್ಯವೆಂದರೆ, ಸಮನ್ವಯ ಸಮಿತಿಯ ಸಭೆಯನ್ನು ಎರಡು ಬಾರಿ ಮುಂದೂಡಿದ ಬಗ್ಗೆ ಮುಖದಲ್ಲಾದರೂ ಬೇಸರ ಮೂಡಿಸಿಕೊಂಡಿದ್ದ ಯಡಿಯೂರಪ್ಪ ಈಗ ನಿಗೂಢವಾಗಿ, ಇಂತಹ ಸಭೆಯ ಅಗತ್ಯ ಸದ್ಯಕ್ಕಿಲ್ಲ ಎನ್ನತೊಡಗಿದ್ದಾರೆ! ಬಿ.ಜೆ.ಪಿ.ಯ ಸದ್ಯದ ನಿಲುವು ಅದಕ್ಕೆ ಒಂದು ಮಟ್ಟದವರೆಗೆ ಮಾತ್ರ ಸಾರ್ವಜನಿಕ ಸಹಾನುಭೂತಿ ದೊರೆಕಿಸಿಕೊಡಲು ಸಹಾಯಕವಾಗಬಹುದು. ಆದರೆ ಒಂದು ಮಟ್ಟ ಮೀರಿದ ಮೇಲೆ (ಈಗಾಗಲೇ ಅದು ಮೀರಿದಂತಿದೆ), ಅದು ಸಾರ್ವಜನಿಕ ತಿರಸ್ಕಾರಕ್ಕೆ, ನಂತರ ಗೇಲಿಗೆ ತಿರುಗುವ ಅಪಾಯವಿದೆ.

ಇನ್ನು ಈ ನಾಟಕದಲ್ಲಿ ಕಾಂಗ್ರೆಸ್ಸಿನ ಪಾತ್ರವಂತೂ ನಮ್ಮ ಹಳೆಯ ಜಾನಪದ–ಪೌರಾಣಿಕ ನಾಟಕಗಳಲ್ಲಿನ ಕುಂಟಿಣಿಯಂತಿದೆ– ಅಧಿಕಾರದ ಅರಮನೆಯ ಯಾವ ಒಳಕೋಣೆಯ ಬಾಗಿಲು ತೆರೆದರೂ ಅಲ್ಲಿ ಹಾಜರ್! ಕಳೆದ ಚುನಾವಣೆಗಳಲ್ಲಿ ಜನತೆಯಿಂದ ಭಾರಿ ಕಪಾಳ ಮೋಕ್ಷಕ್ಕೆ ಒಳಗಾದ ಈ ಪಕ್ಷ ಆತ್ಮಾವಲೋಕನ ಮಾಡಿಕೊಂಡು, ಜನತೆಯ ತೀರ್ಪನ್ನು ಗೌರವಿಸುವ ದೃಷ್ಟಿಯಿಂದಲಾದರೂ ಮರ್ಯಾದೆಯಿಂದ ವಿರೋಧ ಪಕ್ಷವಾಗಿ ಕೂರಬೇಕಿತ್ತು. ಆ ಮೂಲಕ ದೇವೇಗೌಡರ ನಾಟಕ ಕಂಪನಿ ರಾಜಕಾರಣದ (ಆಗಿನ್ನೂ ಕುಟುಂಬ ರಾಜಕಾರಣದ ಸೀನರಿ ತಯಾರಾಗಿರಲಿಲ್ಲ!) ನೀತಿ– ನೈತಿಕತೆಗಳನ್ನೆಲ್ಲ, ಅವರು ಆ ಪರಿಸ್ಥಿತಿಯಲ್ಲಿ ರೂಪಿಸಬಹುದಾಗಿದ್ದ ಹೊಸ ರಾಜಕೀಯ ವರಸೆಗಳ ಹಿನ್ನೆಲೆಯಲ್ಲಿ, ಬಯಲು ಮಾಡುವ ರಾಜಕೀಯ ಚಾತುರ್ಯವನ್ನು ಪ್ರದರ್ಶಿಸಬಹುದಿತ್ತು. ಬದಲಿಗೆ,

ಕೋಮುವಾದಿಗಳಿಗೆ ಅಧಿಕಾರ ಸಿಗುವುದನ್ನು ತಪ್ಪಿಸುವ ನೆಪದಲ್ಲಿ ಇಪ್ಪತ್ತು ತಿಂಗಳು ಇನ್ನೊಬ್ಬರ ಅಧಿಕಾರದ ಬಾಗಿಲು ಕಾಯುತ್ತ ಕೂತು, ಕೊನೆಗೆ ಅಲ್ಲಿಯೂ ಇನ್ನೊಂದು ಕಪಾಳ ಮೋಕ್ಷಕ್ಕೆ ಈಡಾಗಿ ದೇವೇಗೌಡರ ಕೌಟುಂಬಿಕ ರಾಜಕಾರಣಕ್ಕೆ ಒಂದು ಸಮರ್ಥನೆ ಒದಗಿಸುವ ಮೂರ್ಖತನ ತೋರಿತು. ಈಗ ಮತ್ತೆ ಆ ಪಕ್ಷದ ಹಿರಿಯ ನಾಯಕರು, ತಮ್ಮ ಪಕ್ಷದ ಒಂದು ಭಾಗದ ತೀವ್ರ ವಿರೋಧವಿದ್ದರೂ, ಅಧಿಕಾರದ ಬಾಗಿಲು ಮತ್ತೆ ಅರ್ಧ ತೆರೆಯುತ್ತಿದ್ದಂತೆಯೇ, ಆ ಬಾಗಿಲ ಬಳಿಯೂ ಕಂಡೂ ಕಾಣದಂತೆ ಸುಳಿದಾಡತೊಡಗಿದ್ದಾರೆ.

ಅಧಿಕಾರದ ಪಾಲು ಕಳೆದುಕೊಂಡಾಗಿನಿಂದಲೂ, ದೇವೇಗೌಡರನ್ನು ಮತ್ತು ಅವರ ಮಕ್ಕಳ ರಾಜಕಾರಣವನ್ನು ಸಿಕ್ಕಲ್ಲಿ ಟೀಕಿಸುತ್ತಾ ಕಾಲ ಕಳೆದ ಈ ನಾಯಕರು, ಕಳೆದ ಚುನಾವಣೆಯಲ್ಲಿ ಕಳೆದುಕೊಂಡ ಜನಬೆಂಬಲವನ್ನು ಮತ್ತೆ ಗಳಿಸಿಕೊಳ್ಳುವಂತಹ ಒಂದೂ ದೀರ್ಘಕಾಲಿಕ ಆಂದೋಲನದ ರೂಪದ ಕಾರ್ಯಕ್ರಮವನ್ನು ಹಾಕಿಕೊಳ್ಳದೆ, ಅಧಿಕಾರದ ಅವಕಾಶಕ್ಕಾಗಿ ಬಕಪಕ್ಷಿಗಳಂತೆ ಕಾಯುತ್ತಾ ಕೂತಿದ್ದು ಈಗ ದೂರದಲ್ಲಿ ಅಧಿಕಾರದ ಬಾಗಿಲು ತೆರೆಯುತ್ತಿದ್ದಂತೆ ಕೆಮ್ಮಿ ಕ್ಯಾಕರಿಸುತ್ತಾ, ತಮ್ಮ ಶಬ್ದಕೋಶವನ್ನೇ ಪುನಾರಚಿಸಿಕೊಳ್ಳತೊಡಗಿದ್ದಾರೆ! 'ಯಾವುದಕ್ಕೂ ಸಿದ್ಧ. ಹೈಕಮಾಂಡ್ ಆದೇಶಕ್ಕೆ ಬದ್ಧ' ಎಂಬ ಯಾವ ಅರ್ಥಕ್ಕೆ ಬೇಕಾದರೂ ಒಗ್ಗಬಲ್ಲ ಮಂತ್ರವನ್ನು ಹೇಳಿಕೊಳ್ಳುತ್ತಾ ಒಕ್ಕಣ್ಣ ಧ್ಯಾನದಲ್ಲಿ ಕೂತಿದ್ದಾರೆ! ಕೆಲವೊಬ್ಬರಂತೂ, ರಾಜ್ಯದ ರಾಜಕಾರಣದ ಜವಾಬ್ದಾರಿಯನ್ನು ಅನಾದಿ ಕಾಲದಿಂದಲೂ ತಮಿಳ್ನಾಡಿನ ದೆವ್ವ-ದೇವತೆಗಳಿಗೆ ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಸಮ ಸಮವಾಗಿ ಒಪ್ಪಿಸಿ, ಇಲ್ಲಿನ ಪ್ರಜಾತಂತ್ರವನ್ನು ಅಲ್ಲಿನ ಪುರೋಹಿತರ ದಿವ್ಯಶಕ್ತಿಯ ಮೂಲಕ ಪೋಷಿಸುತ್ತಿರುವ ನಮ್ಮ ಹಿರಿಯ ರಾಜಕೀಯ ಮುತ್ಸದ್ದಿ ದೇವೇಗೌಡರ ಹೋಮ- ಹವನ- ಯಜ್ಞ- ಯಾಗ-ತಂತ್ರ- ಮಂತ್ರಗಳೆಲ್ಲದರ ಪ್ರಸಾದದ ಪಾಲನ್ನು, ಅವರು ಕರೆದಲ್ಲೆಲ್ಲಾ ಕದ್ದು ಮುಚ್ಚಿ ಹೋಗಿ ಪಡೆಯುವ ದೈನೇಸಿ ಸ್ಥಿತಿ ತಲುಪಿದ್ದಾರೆ! ಅಂತೂ ಇವರೆಲ್ಲ ಸೇರಿ ಕಾಂಗ್ರೆಸ್ಸನ್ನು ಕರ್ನಾಟಕದಲ್ಲಿ ಸಂಪೂರ್ಣವಾಗಿ ನಾಮಾವಶೇಷ ಮಾಡುವ ಪಣ ತೊಟ್ಟಂತೆ ಕಾಣುತ್ತದೆ...

ಒಂದೊಂದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ನಮ್ಮ ಪ್ರಮುಖ ರಾಜಕಾರಣಿಗಳ 'ಅಧಿಕೃತ' ಅಸ್ತಿ ವಿವರಗಳನ್ನು ನೋಡುತ್ತಿದ್ದಂತೆಯೇ ಗೊತ್ತಾಗುತ್ತದೆ, ರಾಜಕಾರಣ ಸಾರ್ವಜನಿಕ ಸೇವೆಯಾಗಿ ಎಂದೋ ಕೊನೆಯುಸಿರೆಳೆದಿದೆ ಎಂದು. ರಾಜಕಾರಣವೆಂದರೆ ಈಗ ರಾಜ್ಯ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಅವಕಾಶ ಕಲ್ಪಿಸಿಕೊಳ್ಳಲು ಕೋಟ್ಯಾಧೀಶ್ವರರ ನಡುವೆ ನಡೆಯುತ್ತಿರುವ ಕಾಳಗವಾಗಿದೆ. ಈ ಅರ್ಥದಲ್ಲಿ ಈಗ ಇಂತಹ ಕಾಳಗ ನಡೆದಿರುವುದು, ಹಾಸನದ ಹಾಗೂ ಬಳ್ಳಾರಿಯ ಎರಡು ಕುಟುಂಬಗಳ ನಡುವೆ. ಮಿಕ್ಕವರು ಕೊಳ್ಳೆ ಹಂಚಿಕೊಳ್ಳಲು ಸದ್ಯಕ್ಕೆ ತಮಗೆ ಸರಿ ಬಂದ ಕಡೆ ಸೇರಿಕೊಂಡಿದ್ದಾರಷ್ಟೆ. ಮೊನ್ನೆ ಬಳ್ಳಾರಿಯಲ್ಲಿ 'ವರಮಹಾಲಕ್ಷ್ಮಿ' ಹಬ್ಬದ ದಿನವೇ ಅದರ ರಣಕಹಳೆ ಮೊಳಗಿದ್ದು, ಬಲು ಸಾಂಕೇತಿಕವಾಗಿಯೂ, 'ಅರ್ಥ'ಪೂರ್ಣವಾಗಿಯೇ ಇದೆ! ಅಂದು ಸುಷ್ಮಾ ಸ್ವರಾಜ್ ಎಂಬ ಎಲ್ಲ ತತ್ವ- ಸಿದ್ಧಾಂತಗಳ ಸ್ವಯಂಘೋಷಿತ ಅಧಿಷ್ಠಾತ್ರಿ ಹಾಗೂ ಬಿ.ಜೆ.ಪಿ.ಯ ಅಧಿಕೃತ ಮುಖವಾಣಿ, ಪಕ್ಷದಿಂದ

ಅಮಾನತ್ತುಗೊಂಡಿರುವ ಶಾಸಕರೆಂದು ಹೇಳಲಾದ ಜನಾರ್ದನ ರೆಡ್ಡಿ ಆಯೋಜಿಸಿದ್ದ 'ಹಬ್ಬ'ಕ್ಕೆ ಬಂದು, ಅವರ ಪಕ್ಕದಲ್ಲೇ ನಸುನಗುತ್ತಾ ನಿಂತು, ಅಮಾನತ್ತುಗೊಂಡಿರುವ ಶಾಸಕರ ಮಾತು ಪಕ್ಷದ ಮಾತಾಗುವುದಿಲ್ಲ ಎಂದು ಎದುರು ಪಕ್ಷಕ್ಕೆ ಸ್ಪಷ್ಟೀಕರಣ ನೀಡುವ ಎದೆಗಾರಿಕೆ ತೋರಿದ್ದಾರೆ! ಆ ಮೂಲಕ ಇಂದು 'ವರಮಹಾಲಕ್ಷ್ಮಿ' ಎಂದರೆ ಯಾರು, ಯಾವ 'ಮೌಲ್ಯ'ಗಳ ಪ್ರತೀಕವಾಗಿದ್ದಾಳೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ!

ಸದ್ಯದ ಇಷ್ಟೆಲ್ಲ ಆಟಕ್ಕೆ ಕಾರಣ, ಈ ಮೂರೂ ಪಕ್ಷಗಳಿಗೆ ಅಮರಿಕೊಂಡಿರುವ ಚುನಾವಣಾ ಭಯ. ಕದ್ದ ಗಂಟನ್ನೆಲ್ಲ ಹೋದ ಚುನಾವಣೆಯಲ್ಲಿ ವ್ಯಯಿಸಿ ಈಗ ಅದನ್ನು ಚಕ್ರಬಡ್ಡಿಯೊಂದಿಗೆ ಮರುಸಂಪಾದಿಸಿಟ್ಟುಕೊಂಡಿರುವ ವೇಳೆಗೆ, ಮತ್ತೆ ಅದನ್ನು ವ್ಯಯಿಸುವ ದುಸ್ಸಾಹಸವನ್ನೇಕೆ ಆಹ್ವಾನಿಸಿಕೊಳ್ಳಬೇಕು ಎಂಬುದು ಮೂರೂ ಪಕ್ಷಗಳ ಚಿಂತೆ. ಕಾಂಗ್ರೆಸ್– ಜೆ.ಡಿ.ಎಸ್. ಪಕ್ಷಗಳ ನಾಯಕರ ಅಧಿಕೃತ– ಅನಧಿಕೃತ ಆಸ್ತಿ– ಪಾಸ್ತಿಗಳ ವಿವರ ಈಗಾಗಲೇ ಅನೇಕ ವರದಿಗಳ ಮೂಲಕ ಜನಜನಿತವಾಗಿದೆ. ಇನ್ನೇನು ಬಿ.ಜೆ.ಪಿ. ನಾಯಕವರೇಣ್ಯರ ಅಧಿಕೃತ ಆಸ್ತಿ– ಪಾಸ್ತಿಗಳ ವಿವರಗಳು ಪ್ರಕಟವಾಗಲಿದೆ. ಆದರೆ ಕಳೆದ ಒಂದೂವರೆ ವರ್ಷದಲ್ಲಿ ಶಿವಮೊಗ್ಗದಲ್ಲಿ ಸ್ಥಿರಾಸ್ಥಿ ಬೆಲೆ ಏರಿರುವ ಗತಿಯಿಂದಲೇ ಇವರು ಮಾಡಿಕೊಂಡಿರುವ ಗಂಟಿನ ಪ್ರಮಾಣವನ್ನು ಊಹಿಸಬಹುದಾಗಿದೆ! ಹೀಗಾಗಿ ಮೂರೂ ಪಕ್ಷಗಳು ಆದಷ್ಟು ಕಡಿಮೆ ಖರ್ಚಿನಲ್ಲಿ ಅಧಿಕಾರ ಉಳಿಸಿಕೊಳ್ಳಲು ಹಾಗೂ ಗಳಿಸಿಕೊಳ್ಳಲು ಮೂರೂ ಬಿಟ್ಟು ನಿಂತಿವೆ.

ಸೆಪ್ಟಂಬರ್ ೭, ೨೦೦೭

ಬರಲಿರುವ ದುರ್ದಿನಗಳ ಮುನ್ಸೂಚನೆಗಳು...

ಹೋದ ವಾರ ರಾಷ್ಟ್ರದ ಆತ್ಮಸಾಕ್ಷಿಯನ್ನು ಬುಡಸಮೇತ ಅಲುಗಾಡಿಸಿ, ನಮ್ಮ ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದ್ದು, ಬಿಹಾರದ ಭಾಗಲ್ಪುರದಲ್ಲಿ ಸರಗಳ್ಳನೊಬ್ಬನನ್ನು ನಮ್ಮ ಸಮಾಜ ನಡೆಸಿಕೊಂಡ ರೀತಿ. ಅವನನ್ನು ಬೀದಿಯಲ್ಲೇ ಒದ್ದು, ಸಿಕ್ಕದ್ದರಲ್ಲಿ ಬಡಿದು ಅರ್ಧಜೀವ ಮಾಡಿದ್ದಲ್ಲದೆ, ಅರೆಬೆತ್ತಲಾಗಿದ್ದ ಆತನನ್ನು ಪೋಲೀಸನೊಬ್ಬ ತನ್ನ ಮೋಟರ್ ಸೈಕಲ್ಲಿಗೆ ಕಟ್ಟಿಕೊಂಡು ಹಳ್ಳ ಕೊಳ್ಳಗಳ ಆ ಗಲೀಜು ರಸ್ತೆಯಲ್ಲಿ ಎಳೆದುಕೊಂಡು ಹೋದದ್ದನ್ನು ನಾವು ಬಹುತೇಕ ಎಲ್ಲ ಟಿ.ವಿ. ವಾಹಿನಿಗಳಲ್ಲಿ ನೋಡಿದ್ದೇವೆ. ಇದರಲ್ಲಿ ನನ್ನ, ಬಹುಶಃ ನಿಮ್ಮೆಲ್ಲರ ಎದೆ ನಡುಗಿಸಿದ್ದು, ಪೋಲೀಸರ ದೌರ್ಜನ್ಯವಲ್ಲ. ಏಕೆಂದರೆ, ಮೊನ್ನೆ ಮೈಸೂರು ಬಳಿ ಚಾಮಲಾಪುರ ಉಷ್ಣ ಸ್ಥಾವರ ವಿರೋಧಿ ರೈತ ಚಳುವಳಿಕಾರರ ಮೇಲೆ ಪೋಲೀಸರು ಎರಗಿ ನಡೆಸಿದ ಅಮಾನುಷ ಹಲ್ಲೆ, ನಮ್ಮ ಪೋಲೀಸ್ ಪಡೆ ಇಂದು ಹೇಗೆ ತನ್ನೆಲ್ಲ ಸಾಮಾಜಿಕ ವಿವೇಕ ಕಳೆದುಕೊಂಡು ವ್ಯವಸ್ಥೆಯ ಒಂದು ಭಾಗವಾಗಿಹೋಗಿದೆ ಎಂಬುದರ ಸಮೀಪ ದರ್ಶನವೇ ಆಗಿತ್ತು. ಆದುದರಿಂದ ಭಾಗಲ್ಪುರ ಪ್ರಕರಣದಲ್ಲಿ ಎದೆ ಝಲ್ಲೆನಿಸಿದ್ದು, ಪೋಲೀಸರ ವರ್ತನೆಯಲ್ಲ; ಅದನ್ನು ಸುಮ್ಮನೆ ನಿಂತು ನೋಡುತ್ತಿದ್ದ ಹಾಗೂ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ನಮ್ಮ ನಿಮ್ಮಂತವರ ಸಾರ್ವಜನಿಕರ ಕ್ರೌರ್ಯ!

ಒಬ್ಬ ಸಾಮಾನ್ಯ ಬೀದಿ ಬದಿಯ ಬಡ ಕಳ್ಳನ ಬಗ್ಗೆ ಸಾರ್ವಜನಿಕರು ತೋರಿದ ಈ ಕ್ರೌರ್ಯ, ಒಂದು ಹನಿ ಬೆವರು ಸುರಿಸದೆ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿರುವ ನಮ್ಮ ರಾಜಕಾರಣಿಗಳ, ಅಧಿಕಾರಿಗಳ, ಮಧ್ಯವರ್ತಿಗಳ, ಬೇನಾಮಿ ಉದ್ದಿಮೆದಾರರ, ಸುಪಾರಿ ಕೊಲೆಗಾರರ, ಭೂಗತ ಜಗತ್ತಿನ ದೊರೆಗಳ ವಿರುದ್ಧ ಏನೂ ಮಾಡಲಾಗದ ನಮ್ಮ ಅಸಹಾಯಕತೆಯ ವಿಕ್ಷಿಪ್ತ ಅಭಿವ್ಯಕ್ತಿಯೋ ತಿಳಿಯದಾಗಿದೆ... ಇದು ಇಡೀ ಸಮಾಜ ತನ್ನೆಲ್ಲ ಸಂವೇದನೆಯ ಸೂಕ್ಷ್ಮಗಳನ್ನು ಕಳೆದುಕೊಳ್ಳುತ್ತಿರುವ ಸೂಚನೆಯೂ

ಆಗಿದ್ದರೆ ಆಶ್ಚರ್ಯವಿಲ್ಲ. ಹಾಗಿದ್ದಲ್ಲಿ, ರಾಷ್ಟ್ರ ಒಂದು ದೊಡ್ಡ ಸಾಮಾಜಿಕ ದುರಂತದ ಅಂಚಿನಲ್ಲಿದೆಯೆಂದೇ ಹೇಳಬೇಕು!

ಮಾರನೆಯ ದಿನ ಈ ಘಟನೆ ಭಾಗಲ್ಪುರದಲ್ಲಿ ಕೋಮುಗಲಭೆಯಾಗಿ ಪರಿವರ್ತಿತವಾದದ್ದು, ನಂತರ ಆಗ್ರಾದಲ್ಲಿ ಪೋಲೀಸರ ಅಚಾತುರ್ಯದಿಂದಾಗಿ ಸಂಭವಿಸಿದ ರಸ್ತೆ ಆಕಸ್ಮಿಕವೊಂದು ಅಲ್ಲಿನ ಅಲ್ಪಸಂಖ್ಯಾತರನ್ನು ಕೆರಳಿಸಿ ಒಂದೆರಡು ನರಬಲಿಗೆ, ಕೋಟ್ಯಾಂತರ ರೂಪಾಯಿಗಳ ಆಸ್ತಿ– ಪಾಸ್ತಿ ನಷ್ಟಕ್ಕೆ ಹಾಗೂ ನಂತರದಲ್ಲಿ ಕೋಮುಗಲಭೆಗೆ ತಿರುಗಿದ್ದು ಏನನ್ನು ಸೂಚಿಸುತ್ತದೆ? ಇತ್ತೀಚೆಗೆ ತಾನೇ ಹರ್ಯಾಣದಲ್ಲಿ ಯಾತ್ರೆ ಹೊರಟಿದ್ದ ಶಿವಭಕ್ತರಿಬ್ಬರ ಮೇಲೆ ಲಾರಿ ಹರಿದು, ಅದರಿಂದ ಕೆರಳಿದ ಶಿವಭಕ್ತರು ಅಮಾಯಕರ ಹತ್ತಾರು ವಾಹನಗಳಿಗೆ ಬೆಂಕಿ ಹಾಕಿ ಸುಟ್ಟದ್ದಲ್ಲದೆ, ಎರಡು ದಿನಗಳ ಕಾಲ ದೆಹಲಿ– ಜೈಪುರ ರಾಷ್ಟ್ರೀಯ ಹೆದ್ದಾರಿಯನ್ನೇ ರಣರಂಗವನ್ನಾಗಿ ಪರಿವರ್ತಿಸಿದ್ದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಹಾಗೇ ಮೊನ್ನೆ ನಮ್ಮ ಕೋಲಾರದಲ್ಲಿ 'ಅಪರಾಧಿ'ಗಳ ಬಿಡುಗಡೆ ಸಂಬಂಧ ಇದ್ದಕ್ಕಿದ್ದಂತೆ ಸ್ಫೋಟಗೊಂಡ ಕೋಮುಗಲಭೆ ಮತ್ತು ಬೆಳಗಾವಿಯಲ್ಲಿ ಸುಪಾರಿ ಕೊಲೆಗಾರರನ್ನು ಬಂಧಿಸಲಾಗದ ಪೋಲೀಸ್ ವ್ಯವಸ್ಥೆ ವಿರುದ್ಧ ಮಹಿಳೆಯರು ಸ್ವಯಂಸ್ಫೂರ್ತಿಯಿಂದ ಸಂಘಟಿತರಾಗಿ ನಡೆಸಿದ ಅಭೂತಪೂರ್ವ ಪ್ರತಿಭಟನೆಯನ್ನು ಗಮನಿಸಬೇಕು. ಇವೆಲ್ಲ ನೈತಿಕವಾಗಿ ಅವನತಿಗೊಂಡಿರುವ ನಮ್ಮ ಒಟ್ಟಾರೆ ರಾಜಕಾರಣದ ಫಲಗಳೇ ಆಗಿವೆ. ನಮ್ಮ ಹೊಸ ಅಭಿವೃದ್ಧಿ ನೀತಿ ಸೃಷ್ಟಿಸುತ್ತಿರುವ ಸಾಮಾಜಿಕ ಒಡಕಿನ ಪ್ರತೀಕಗಳೇ ಆಗಿವೆ. ಬರಲಿರುವ ದಿನಗಳ ಸಾಮಾಜಿಕ ಅಶಾಂತಿಯ, ಅಭದ್ರತೆಯ ಆತಂಕದ ಮುನ್ಸೂಚನೆಗಳೇ ಆಗಿವೆ.

ಆದರೆ ನಮ್ಮ ರಾಷ್ಟ್ರ ಹಾಗೂ ರಾಜ್ಯ ರಾಜಕಾರಣ ಇದರ ಬಗ್ಗೆ ತಲೆಕೆಡಿಸಿಕೊಳ್ಳದೆ, ಹೇಗೆ ನಿರುಮ್ಮಳವಾಗಿ ತನ್ನ ದಂಧೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ ನೋಡಿ. ನಮ್ಮ ರಾಜ್ಯದ ಅಧಿಕಾರ ಹಸ್ತಾಂತರದ ನಾಟಕವನ್ನೇ ಗಮನಿಸಿ. ಅಪ್ಪ ಇನ್ನೂ ನಿಗೂಢಾರ್ಥಗಳಲ್ಲಿ ಗೊಣಗಾಡುತ್ತಿರುವರಾದರೂ; ಮಗ, ಈ ನಾಟಕದಿಂದಾಗಿ ಜನಾಭಿಪ್ರಾಯ ತನ್ನ ವಿರುದ್ಧ ತಿರುಗಿ ಬೀಳುತ್ತಿದೆ ಎಂದೆನ್ನಿಸಿಯೋ ಏನೋ, ಕೊಟ್ಟ ಮಾತಿಗೆ ತಪ್ಪುವ ಕಳಂಕ ಬೇಡವೆಂಬ ನೈತಿಕ ಕಾರಣ ಕೊಟ್ಟು, ಈಗ ಮತ್ತೆ ಅಧಿಕಾರ ಹಸ್ತಾಂತರ ಖಚಿತ ಎನ್ನತೊಡಗಿದ್ದಾರೆ. ಆದರೆ ಇದು, ತಡವಾಗಿಯಾದರೂ ಜಾಗ್ರತಗೊಂಡ ನೈತಿಕ ಪ್ರಜ್ಞೆಯ ಆಧಾರದ ನಿರ್ಧಾರವೋ ಅಥವಾ ಯಾವನಾದರೂ ತಲೆತಿರುಕ ಜ್ಯೋತಿಷಿಯೊಬ್ಬನ ಕವಡೆಯಾಟವನ್ನು ಆಧರಿಸಿದ ನಿರ್ಧಾರವೋ ಇನ್ನೂ ಸ್ಪಷ್ಟವಾಗಿಲ್ಲ. ಏಕೆಂದರೆ, ಈ ಅಪ್ಪ ಮಕ್ಕಳ ರಾಜಕಾರಣ ರಾಜ್ಯದ ಜನಶಕ್ತಿಯ ಲೆಕ್ಕಾಚಾರಕ್ಕಿಂತ ಆಕಾಶದಲ್ಲಿನ ಗ್ರಹಗತಿಗಳ ಲೆಕ್ಕಾಚಾರವನ್ನು ಹೆಚ್ಚು ಅವಲಂಬಿಸಿರುವಂತೆ ತೋರುತ್ತಿದೆ! ತಮಿಳ್ನಾಡಿನ ನವಗ್ರಹ ದೇವಾಲಯಗಳಲ್ಲಿ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ನಡೆಯುವ ಪೂಜೆ– ಪುನಸ್ಕಾರಗಳಿರಲಿ, ವಿಧಾನಸಭೆಯ ಅಧಿವೇಶನ, ಸಂಪುಟ ಸಭೆಯ ಆರಂಭದ ದಿನ– ಘಳಿಗೆಯಿಂದ ಹಿಡಿದು, ತಾವು ಕೂತ ಆಕಾಶದಲ್ಲಿರುವ ಹೆಲಿಕಾಪ್ಟರ್ ನೆಲ ಮುಟ್ಟಬೇಕಾದ

ಘಳಿಗೆಯನ್ನೂ ರಾಹು ಕಾಲ– ಗುಳಿಕ ಕಾಲಗಳನ್ನು ನೋಡಿ ನಿರ್ಧರಿಸುವಂತಹ ಮೂಢಜನರ ಕೈಗೆ ನಮ್ಮ ಆಡಳಿತ ಸಿಕ್ಕಿ ಹಾಕಿಕೊಂಡಿರುವ ಬಗ್ಗೆ ಕರ್ನಾಟಕದ ಜನತೆ ನಿಜವಾಗಿಯೂ ಚಿಂತೆ ಮಾಡಬೇಕಿದೆ. ಹಾಗಾಗಿ, ಕುಮಾರಸ್ವಾಮಿಯವರ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಅವರ ಸದ್ಯದ ಅಧಿಕಾರ ತ್ಯಾಗ, ಅಕ್ಟೋಬರ್ ಮೂರರವರೆಗೆ ಕಾಯದೆ ಅದಕ್ಕೆ ಮುನ್ನವೇ ಒಂದು ಶುಭ ದಿನದಂದು ಆಗಬೇಕೆಂದು ಆಸ್ಥಾನ ಜ್ಯೋತಿಷಿ ಸೂಚಿಸಿದ್ದರೆ ಆಶ್ಚರ್ಯವಿಲ್ಲ! ಹಾಗಾಗಿಯೇ ಈಗ ಅಧಿಕಾರಾವಧಿಯ ಮುನ್ನವೇ ಅಧಿಕಾರ ತ್ಯಾಗ ಮಾಡುವ 'ದೊಡ್ಡ' ಮಾತು ಕೇಳಿಬರುತ್ತಿದೆ... ಅದೂ, ದಸರಿಘಟ್ಟದ ಚೌಡೇಶ್ವರಿಯು ಕುಮಾರಸ್ವಾಮಿಯವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿ ಎಂದು ಆಶೀರ್ವದಿಸಿ ಕೊಟ್ಟಿರುವ ತೆಂಗಿನಕಾಯನ್ನು ಅವರ ಪಕ್ಷದ ಗೆಣೆಕಾರರು ತಂದೊಪ್ಪಿಸಿದ ಮೇಲೂ ಎಂದರೆ, ಅಧಿಕಾರ ತ್ಯಾಗದ ಯೋಚನೆಯ ಹಿಂದೆ ಎಷ್ಟು ದೊಡ್ಡ ಯೋಜನೆ ಇರಬಹುದು!

ಅದೇನೇ ಇರಲಿ, ಅಧಿಕಾರ ತ್ಯಾಗಕ್ಕಾಗಿ ಎಲ್ಲ ಸಿದ್ಧತೆ ಆರಂಭವಾಗಿದೆ. ಸಿಕ್ಕ ಸಿಕ್ಕ ಕಡೆ ಶಂಕುಸ್ಥಾಪನೆ (ಕೆಲವು ಕಡೆ ಎರಡನೇ ಬಾರಿಗೆ!) ನಡೆಯುತ್ತಿದೆ– ವಿಶೇಷವಾಗಿ ಹಾಸನ, ರಾಮನಗರ, ಮೈಸೂರು, ಶಿವಮೊಗ್ಗಗಳಲ್ಲಿ! ಕೋಟ್ಯಾಂತರ ರೂಪಾಯಿಗಳ ವೆಚ್ಚದ ಕಾರ್ಯಕ್ರಮಗಳನ್ನು (ಒಂದು ಲೆಕ್ಕಾಚಾರದ ಪ್ರಕಾರ ಒಂದು ವಾರದಲ್ಲಿ ಮೂರು ಸಾವಿರ ಕೋಟಿ ರೂಪಾಯಿಗಳ ಮೌಲ್ಯದ ಯೋಜನೆಗಳ ಪ್ರಕಟಣೆ/ಶಂಕುಸ್ಥಾಪನೆಯಾಗಿದೆ!) ಘೋಷಿಸಲಾಗುತ್ತಿದೆ. ಪತ್ರಿಕೆ ಹಾಗೂ ಟಿ.ವಿ. ವಾಹಿನಿಗಳಿಗೆ ಸರ್ಕಾರದ ಸಾಧನೆಗಳ 'ಆಗರ–ಸಾಗರ'ಗಳನ್ನು ಪ್ರಚುರಪಡಿಸುವ ಜಾಹೀರಾತುಗಳ ಸುಗ್ಗಿಯೋ ಸುಗ್ಗಿ! ಗ್ರಾಮ ವಾಸ್ತವ್ಯ ಈಗ ದಿನವಹಿ ಆಧಾರದ ಮೇಲೆ ನಡೆಯಲಾರಂಭಿಸಿದೆ. ನಮ್ಮ ಮುಖ್ಯಮಂತ್ರಿಗಳು ಯಾವಾಗ ಆಲೋಚನೆ ಮಾಡುತ್ತಾರೋ, ಯಾವಾಗ ಆಡಳಿತ ಮಾಡುತ್ತಾರೋ ಎಂದು ಜನತೆ ಆಶ್ಚರ್ಯ ಪಡುವಷ್ಟು ಅವರು ಹಗಲು ರಾತ್ರಿ ಊರೂರು ತಿರುಗುತ್ತಿದ್ದಾರೆ! ಗ್ರಾಮ ವಾಸ್ತವ್ಯಕ್ಕೆ ಬೆಳಗಿನ ಝಾವ ಅವಸರವಸರವಾಗಿ ಬಂದು ಆರತಿ ಎತ್ತಿಸಿಕೊಂಡು, ರಾತ್ರಿಯೆಲ್ಲ ಕಾದು ನಿಂತ ಜನರ ಅಹವಾಲು ಪತ್ರಗಳನ್ನು ಬಾಚಿಕೊಂಡು ಮುಂದಿನ ಶಂಕುಸ್ಥಾಪನೆಗೋ, ಗ್ರಾಮ ವಾಸ್ತವ್ಯಕ್ಕೋ ತೆರಳುತ್ತಿದ್ದಾರೆ! ಅದರ ಮಧ್ಯೆ, ಇಷ್ಟು ವರ್ಷ ಅಧಿಕಾರ ನಡೆಸಿದವರು ಏನೇನು ಮಾಡಿದ್ದಾರೆಂಬುದು ತಮಗೆ ಗೊತ್ತಿದೆ, ಇವರಿಂದ ತಾನೇನೂ ಪಾಠ ಕಲಿಯುವ ಅಗತ್ಯವಿಲ್ಲ ಎಂಬ ದೀರ್ಘ ರಾಜಕಾರಣದ ಅನುಭವವಿರುವಂತೆ ಠೇಂಕಾರದ ಮಾತುಗಳನ್ನಾಡುವ ಆಕ್ರಮಣಕಾರಿ ಶೈಲಿಯ ರಾಜಕಾರಣವನ್ನೂ ಅವರು ಇತ್ತೀಚೆಗೆ ರೂಢಿಸಿಕೊಂಡಿದ್ದಾರೆ.

ಯುವ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯದ ಯೋಜನೆ ಆರಂಭಿಸಿದಾಗ, ಅದು ಆಡಳಿತಗಾರರ ಅನೌಪಚಾರಿಕ ಜನಸಂಪರ್ಕದ ಅತ್ಯುತ್ತಮ ಹಾಗೂ ನವೀನ ಮಾದರಿಯೆಂದು ಎಲ್ಲರ ಗಮನ ಸೆಳೆದಿತ್ತು. ಆದರೆ ಅದು ಒಂದು ಅಧಿಕೃತ ಕಾರ್ಯಕ್ರಮದ ರೂಪ ತಳೆದು, ರಾಜಕೀಯ ಲಾಭ ಪಡೆಯುವ ಪ್ರಚಾರದ ಕಾರ್ಯಕ್ರಮವಾಗತೊಡಗಿದಾಗ ಅದರ ಆಕರ್ಷಣೆ– ನಾವೀನ್ಯತೆಗಳೆಲ್ಲಾ ಅಳಿಸಿಹೋದವು. ಗ್ರಾಮ ವಾಸ್ತವ್ಯವೆಂದರೆ,

ಮುಖ್ಯಮಂತ್ರಿ ತಾವು ಆಳುವ ನಾಡಿನ ಪ್ರಾತಿನಿಧಿಕ ಗ್ರಾಮಗಳು ನಿಜವಾಗಿ ಹೇಗಿವೆ ಎಂಬುದನ್ನು ಕಣ್ಣಾರೆ ಕಂಡು, ಸ್ಥಳೀಯರೊಂದಿಗೆ ಕೂತು ವಿವರವಾಗಿ ಚರ್ಚಿಸಿ, ಅಲ್ಲಿನ ಹಳ್ಳಿಗಾಡಿನ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ತಮ್ಮ ಆಡಳಿತ ನೀತಿಗಳಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಆಧಾರವಾಗುವಂತಹ ಕಾರ್ಯಕ್ರಮವಾಗುತ್ತದೆಂದು ಭಾವಿಸಲಾಗಿತ್ತು. ಆದರೆ ಅದಕ್ಕೆ ಬದಲಾಗಿ ಈಗ ಕಾಣುತ್ತಿರುವುದು, ಆಯ್ದ ಊರಿನಲ್ಲಿ ಮುಂಚೆಯೇ ಅಷ್ಟಿಷ್ಟು ಅಭಿವೃದ್ಧಿ ಕಾಮಗಾರಿ ಮಾಡುವ ಮೂಲಕ ಊರನ್ನು ಅಚ್ಚುಗಟ್ಟುಗೊಳಿಸಿ, ಆಯ್ದ ಮನೆಯಲ್ಲಿ ಮುಖ್ಯಮಂತ್ರಿಗೆಂದೇ ವಿಶೇಷ ಸೌಲಭ್ಯಗಳನ್ನು ನಿರ್ಮಿಸಿ ವಾಸ್ತವ್ಯವನ್ನು ಆಯೋಜಿಸುವ ಕಾರ್ಯಕ್ರಮವಾಗಿದ್ದು, ಇದು ಯೋಜನೆಯ ಮೂಲೋದ್ದೇಶವನ್ನೇ ಹಾಳುಗೆಡಹಿದೆ. ಅಲ್ಲದೆ, ವಾಸ್ತವ್ಯಕ್ಕೆ ಬರುವುದೇ ಬೆಳಗಿನ ಝಾವ. ಉಂಡು, ಎರಡು– ಮೂರು ಗಂಟೆ ಮಲಗಿ ಮುಂದಿನ ಊರಿಗೆ ಎದ್ದು ಹೋಗುವ ಈ ನಾಮಕಾವಸ್ತೆ ಗ್ರಾಮ 'ವಾಸ್ತವ್ಯ'ದಿಂದ, ಉನ್ನತ ರಾಜಕಾರಣಿಗಳ ಮುಖಗಳನ್ನೇ ಕಾಣದ ಆ ಗ್ರಾಮಗಳ ಜನರಲ್ಲಿ ಉಂಟಾಗುವ ಆ ಕ್ಷಣದ ರೋಮಾಂಚನ ಹಾಗೂ ಸಂಭ್ರಮಗಳ ಹೊರತಾಗಿ, ಒಟ್ಟಾರೆ ರಾಜ್ಯದ ಅಭಿವೃದ್ಧಿಗೆ ಏನು ಉಪಯೋಗವಾಗುವುದೋ ಮುಖ್ಯಮಂತ್ರಿಗಳೇ ಹೇಳಬೇಕು. ಹಾಗಾಗಿ, ವಿರೋಧ ಪಕ್ಷದವರು ಗ್ರಾಮ ವಾಸ್ತವ್ಯದ ಬಗ್ಗೆ ಶ್ವೇತಪತ್ರ ಹೊರಡಿಸುವಂತೆ ಕೇಳಿರುವುದು ನ್ಯಾಯೋಚಿತವಾಗಿಯೇ ಇದೆ. ಏಕೆಂದರೆ, ವಿರೋಧ ಪಕ್ಷದವರು ಅದರಿಂದ ಏನಾದರೂ ಕಲಿಯುವಂತಿದ್ದರೆ, ಕಲಿಯುವಂತಾಗಲಿ. ಆದರೆ, ಕುಮಾರಸ್ವಾಮಿಯವರು ಈ ಬಗ್ಗೆ ಉದ್ರಿಕ್ತರಾಗಿ ಪ್ರತಿಕ್ರಿಯಿಸಿರುವುದೇಕೋ ತಿಳಿಯದಾಗಿದೆ.

ಅತ್ತ ಮುಖ್ಯಮಂತ್ರಿ ಅಧಿಕಾರ ತ್ಯಾಗದ ಉದ್ರೇಕದಲ್ಲಿದ್ದರೆ, ಇತ್ತ ಭಾವಿ ಮುಖ್ಯಮಂತ್ರಿ ಅಧಿಕಾರ ನಿರೀಕ್ಷೆಯ ಉದ್ರೇಕದಲ್ಲಿದ್ದಂತೆ ತೋರುತ್ತದೆ! ಅವರು ಮೊನ್ನೆ ಶಿವಮೊಗ್ಗದಲ್ಲಿ, ಗೋಸಮ್ಮೇಳನದ ಖ್ಯಾತಿಯ ರಾಮಚಂದ್ರಾಪುರ ಮಠದವರು ಭೂ ಒತ್ತುವರಿ ಮಾಡಿಕೊಂಡಿದ್ದಾರೆಂದು ಕೆಲವರು ಮಾಡಿರುವ ಆಪಾದನೆ ಬಗ್ಗೆ ಕೆರಳಿ, ಆ ಮಠಕ್ಕೆ ಮತ್ತೆ ೮೫ ಲಕ್ಷ ರೂಪಾಯಿಗಳ ವಿಶೇಷ ಕೊಡುಗೆ ಪ್ರಕಟಿಸಿದ್ದಾರೆ! ಆ ಭೂ ಒತ್ತುವರಿ ಆಪಾದನೆಯನ್ನು ಪರಿಶೀಲಿಸಲು ಹೋದ ತಹಸೀಲ್ದಾರರ ಪೂರ್ವಾಪರಗಳನ್ನು ಅವರ ಗೈರುಹಾಜರಿಯಲ್ಲಿ ಏಕವಚನದಲ್ಲಿ ವಿಚಾರಿಸಿಕೊಂಡು, ಅವರ ಮೇಲೆ ಹರಿಹಾಯ್ದಿದ್ದಾರೆ... ಬರಲಿರುವ ತಮ್ಮ ಮುಖ್ಯಮಂತ್ರಿತ್ವದ ದಿನಗಳು ಹೇಗಿರುತ್ತವೆಂಬುದರ ಸೂಚನೆಯನ್ನೂ ನೀಡಿದ್ದಾರೆ. ಅದೂ, ಅಧಿಕಾರವಿನ್ನೂ ಮಾರು ದೂರವಿರುವಾಗಲೇ! ಆ ದೂರವನ್ನು ಕಡಿಮೆ ಮಾಡಿಕೊಳ್ಳಲು, ತಮ್ಮ ಶಿಕಾರಿಪುರದಲ್ಲಿನ ಮಹಿಳಾ ಅಭಿಮಾನಿಗಳಿಗೆ ತಮ್ಮ ಪರವಾಗಿ ದೇವರಿಗೆ ಒಂದು ಹೂವು ಹೆಚ್ಚು ಹಾಕುವಂತೆ ಮನವಿಯನ್ನೂ ಮಾಡಿದ್ದಾರೆ! ಅಂತೂ ಕರ್ನಾಟಕಕ್ಕೆ ನವಗ್ರಹಗಳ ಹಾಗೂ ಕ್ಷುದ್ರದೇವತೆಗಳ ಕಾಟ ತಪ್ಪಿ,, ಸುವಾಸಿನಿಯರಿಂದ ಸೇವಿಸಲ್ಪಡುವ ಶಿಷ್ಟ ದೇವತೆಗಳ

ಹಾಗೂ ಅವುಗಳ ಈ ಲೋಕದ ಖಜಾಂಚಿಗಳಾದ ಮಠಾಧಿಪತಿಗಳ ಪ್ರಭುತ್ವ ಶುರುವಾಗುತ್ತಿರುವಂತಿದೆ...

ಈ ಮಧ್ಯೆ ಸದ್ಯಕ್ಕೆ ಎಲ್ಲೂ ಸಲ್ಲದಿರುವ ಪಿ.ಜಿ.ಆರ್. ಸಿಂಧ್ಯಾ ಬಾಂಬೊಂದನ್ನು ಸಿಡಿಸಲು ಪ್ರಯತ್ನಿಸಿದ್ದಾರೆ. ಯಡಿಯೂರಪ್ಪ ತಮ್ಮ ಪಕ್ಷದೊಳಗಿನ ಕಾಟ ತಡೆಯಲಾರದೆ, ಒಂದೊಮ್ಮೆ ದೇವೇಗೌಡರ ಪಕ್ಷ ಸೇರಲು ಹೊರಟಿದ್ದರು ಎಂದು ಅವರು ಹೇಳಿರುವ ವಿಚಾರ ಅಷ್ಟೇನೂ ಆಸ್ಫೋಟನಕಾರಿಯಲ್ಲದಿದ್ದರೂ, ಅದು ಸದ್ಯದ ಸಂದರ್ಭದಲ್ಲಿ ಹೊರಡಿಸುವ ರಾಜಕೀಯ ಅರ್ಥ ಬಿ.ಜೆ.ಪಿ.ಯಲ್ಲಿ ಅನೇಕ ತಲ್ಲಣಗಳನ್ನು ಉಂಟು ಮಾಡಬಲ್ಲುದಾಗಿದೆ. ಅಪ್ಪ ಮಕ್ಕಳು ಕಳೆದ ಒಂದೂವರೆ ವರ್ಷದಿಂದ ಬಿ.ಜೆ.ಪಿ.ಯ ಅನೇಕ ಶಾಸಕರನ್ನು 'ಮುದ್ದು' ಮಾಡುತ್ತಾ ಬಂದಿರುವ ರೀತಿ, ಯಡಿಯೂರಪ್ಪನವರ ಕೈಗೆ ಬಂದಂತಿರುವ ಮುಖ್ಯಮಂತ್ರಿ ಗಾದಿಯ ತುತ್ತು ಬಾಯಿಗೆ ಬರುವಂತಾಗುವ ಹೊತ್ತಿಗೆ ಯಾವ ರೂಪ ಪಡೆಯುತ್ತದೋ ಹೇಳಲಾಗದು! ದೇವೇಗೌಡರಾಗಲೇ, ಸ್ಥಳೀಯ ಚುನಾವಣೆಗಳನ್ನು ಎದುರಿಸುವ ನೆಪದಲ್ಲಿ ಮಿರಾಜುದ್ದೀನ್ ಪಟೇಲ್ ಎಂಬ ಅನಾಮಿಕ ನಾಯಕನನ್ನು ತಮ್ಮ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಂದು ಕುಳ್ಳರಿಸಿ, ತಮ್ಮ ಪಂಚೆಗೆ ಸುತ್ತಿದ ಬೆಲ್ಟನ್ನು ಬಿಗಿ ಮಾಡಿಕೊಂಡು ಹೊಸ ರಾಜಕೀಯ ಕಸರತ್ತಿಗೆ ಸಿದ್ಧವಾದಂತಿದೆ. ಈ ಸಂಬಂಧ ಏರ್ಪಾಡಾಗಿದ್ದ ಅಲ್ಪಸಂಖ್ಯಾತರ ಸಭೆಯಲ್ಲಿ ಮಾತನಾಡುತ್ತಾ, ಬಿ.ಜೆ.ಪಿ. ತಲೆ ಮೇಲೆ ತೂಗುಕತ್ತಿ ಆಡುತ್ತಿದೆ ಎಂದಷ್ಟೇ ಹೇಳಿ, ಆ ಕತ್ತಿ ಅಧಿಕಾರದ್ದೋ, ಬಲಿಯದ್ದೋ ಎಂದು ಹೇಳದೆ ಅಷ್ಟಕ್ಕೇ ತಮ್ಮ ಮಾತನ್ನು ಅರ್ಥಪೂರ್ಣವಾಗಿ ನಿಲ್ಲಿಸಿದ್ದಾರೆ. ಈಗ ಆಯ್ಕೆ ಯಡಿಯೂರಪ್ಪನವರ ಮುಂದಿದೆ!

ಸೆಪ್ಟಂಬರ್ ೧೪, ೨೦೦೭

ಎಚ್ಚರ ತಪ್ಪುತ್ತಿರುವ ಮಠಾಧೀಶರೂ, ಬೆಳೆಯುತ್ತಿರುವ ಜಾತಿ ರಾಜಕಾರಣವೂ...

ನಾನು ಬಾಲ್ಯದಿಂದ ಕಂಡ ಹಾಗೂ ತುಮಕೂರಿನ ನನ್ನ ಕೆಲವು ಸ್ನೇಹಿತರು ಏನೆಲ್ಲ ಪ್ರತಿಕೂಲ ಮಾಹಿತಿ ನೀಡಿದರೂ, ನಾನು ಗೌರವವನ್ನು ಕಳೆದುಕೊಳ್ಳದಿದ್ದಷ್ಟು ನನ್ನ ಕಣ್ಣಲ್ಲಿ ದೊಡ್ಡವರಾಗಿದ್ದ ಸಿದ್ಧಗಂಗಾ ಮಠಾಧೀಶರು, ಇತ್ತೀಚೆಗೆ ಶಿವಮೊಗ್ಗದಲ್ಲಿ ತಾಂತ್ರಿಕ ಕಾಲೇಜೊಂದನ್ನು ಉದ್ಘಾಟಿಸಲು ಬಂದು, ಸಮ್ಮಿಶ್ರ ಸರ್ಕಾರವನ್ನು ಹೊಗಳಿ ಹೋದಾಗ ತುಂಬ ಮುಜುಗರವೆನ್ನಿಸಿತು. ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಕುಟುಂಬ ಬೇನಾಮಿಯಾಗಿ ಹಣ ಹೂಡಿ ಆರಂಭಿಸಲಾಗಿರುವುದೆಂದು ಇಲ್ಲಿ ಜನಜನಿತವಾಗಿರುವ, ತಾಂತ್ರಿಕ ಕಾಲೇಜಿನ ಉದ್ಘಾಟನಾ ಸಮಾರಂಭದಲ್ಲಿ ಸ್ವಾಮೀಜಿಯವರಿಗೆ; ಈ ಮಾತುಗಳನ್ನಾಡುವ ಔಚಿತ್ಯದ ಕಡೆಗಷ್ಟೇ ಅಲ್ಲ, ತಾವು ಆಡಿದ ಈ ಮಾತು ಇಂದಿನ ಜಾತಿವಾದಿ ರಾಜಕೀಯ ಸಂದರ್ಭದಲ್ಲಿ ಯಾವ ಯಾವ ಅರ್ಥಗಳನ್ನು ಪಡೆಯಬಹುದು ಎಂಬುದರ ಕಡೆಗೂ ಗಮನವಿರಬೇಕಿತ್ತು ಎಂದು ನನ್ನಂತಹ ಯಾರಿಗಾದರೂ ಅನ್ನಿಸದಿರದು.

ನಾನು ನನ್ನ ಬಾಲ್ಯದಿಂದ ನೋಡಿದಂತೆ, ಸಿದ್ಧಗಂಗಾ ಮಠ ಲಿಂಗಾಯ್ತರ ಮಠವಾದರೂ, ಲಿಂಗಾಯ್ತರದೇ ಮಠ ಎಂದು ಹೇಳುವಂತಿರಲಿಲ್ಲ. ಆದಿ ಚುಂಚನಗಿರಿ ಮಠ ಸ್ಥಾಪನೆಯಾಗುವವರೆಗೂ, ಆ ಮಠವನ್ನು ಲಿಂಗಾಯ್ತರಷ್ಟೇ ಒಕ್ಕಲಿಗರೂ ಪೋಷಿಸಿದರು. ಅಷ್ಟೇ ಅಲ್ಲ, ದಕ್ಷಿಣ ಬಯಲು ಸೀಮೆಯ ಎಲ್ಲ ಜಾತಿಗಳವರೂ ಆ ಮಠಕ್ಕೆ ವಾರ್ಷಿಕವಾಗಿ ತಮ್ಮ ಕೈಲಾದಷ್ಟು ದವಸ– ಧಾನ್ಯ, ಸೌದೆ, ಹಣ ಒದಗಿಸುತ್ತಾ ಬಂದು, ಅದರ ಅಪ್ರತಿಮ ವಿದ್ಯಾಸೇವೆಗೆ ಕಾರಣಕರ್ತರಾದರು. ಮೊದಮೊದಲು ಮಠ ಊಟೋಪಚಾರದ ವಿಷಯಗಳಲ್ಲಿ ಜಾತಿ ಭೇದದ ಟೀಕೆಯನ್ನು ಎದುರಿಸಿತಾದರೂ, ನಂತರ ಕಾಲಕ್ಕೆ ತಕ್ಕಂತೆ ಎಲ್ಲ ಜಾತಿಗಳ ವಿದ್ಯಾರ್ಥಿಗಳಿಗೂ ಸಮಾನ ಅವಕಾಶಗಳನ್ನಲ್ಲದಿದ್ದರೂ, ಸಮಾನ ಅನುಕೂಲಗಳನ್ನೊದಗಿಸುವ ವಿದ್ಯಾಕೇಂದ್ರವಾಗಿ ಬೆಳೆಯಿತು. ನನ್ನ ಬಾಲ್ಯ ಸ್ನೇಹಿತರಲ್ಲಷ್ಟೇ

ಅಲ್ಲ, ನನ್ನ ಶಾಲಾ ಅಧ್ಯಾಪಕರಲ್ಲೂ ಅನೇಕರು ಆ ಮಠದ ಅನ್ನ ಉಂಡವರು. ಇವರಲ್ಲಿ ಬಹುಪಾಲು ಲಿಂಗಾಯ್ತರೇ ಆಗಿದ್ದರೂ, ಅವರೆಂದೂ ಜಾತಿವಾದಿಗಳಾಗಿರಲಿಲ್ಲ. ಸ್ವತಃ ಸ್ವಾಮೀಜಿ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಎಂದೂ ವಚನಗಳನ್ನು ಉದ್ಧರಿಸಿದ ನೆನಪು ನನಗಿಲ್ಲ. ಹೆಚ್ಚಾಗಿ ಅವರದ್ದು ಸ್ವಾಮಿ ವಿವೇಕಾನಂದರ ಉಲ್ಲೇಖಗಳು– ಅದೂ ಇಂಗ್ಲಿಷಿನಲ್ಲಿ! ನಮಗಾಗ ಸ್ವಾಮೀಜಿಯೊಬ್ಬರು ಇಂಗ್ಲಿಷ್ ಮಾತುಗಳನ್ನು ಉಲ್ಲೇಖಿಸುವುದೇ ಬೆರಗಿನ, ರೋಮಾಂಚನದ ಸಂಗತಿ.

ಬಾಲ್ಯದ ಸುಮಾರು ಮುವ್ವತ್ತು ವರ್ಷಗಳ ನಂತರ ಮತ್ತೆ ಅವರನ್ನು ನಾನು ನೋಡಿದಾಗ, ಅವರಾಗಲೇ ವೃದ್ಧಾಪ್ಯ ಪ್ರವೇಶಿಸಿ ಹಣ್ಣಾಗಿದ್ದರು. ನಮ್ಮ ಗೆಳೆಯರ ಆಹ್ವಾನದ ಮೇರೆಗೆ ತುಮಕೂರಿನಲ್ಲಿ ಸ್ವಾಮೀಜಿಯವರ ಸಮ್ಮುಖದಲ್ಲಿ ನನ್ನ ಪತ್ನಿ ಬುದ್ಧನನ್ನು ಕುರಿತ ಪುಸ್ತಕವೊಂದನ್ನು ಬಿಡುಗಡೆ ಮಾಡಿದ ಸಮಾರಂಭದಲ್ಲಿ ನಾನು ಅವರನ್ನು ಮೊದಲ ಬಾರಿಗೆ ಹತ್ತಿರದಿಂದ ಕಂಡು ನಮಸ್ಕರಿಸಿದೆ. ಹೆಚ್ಚಾಗಿ ದಲಿತ ಗೆಳೆಯರೇ ತುಂಬಿದ್ದ ಆ ಸಮಾರಂಭದಲ್ಲಿ ಅವರು, ಅಂಗೂಲಿಮಾಲಾನನ್ನು ಬುದ್ಧ ಪರಿವರ್ತಿಸಿದ ರೀತಿಯನ್ನು ಎಷ್ಟು ಹೃದಯಂಗಮವಾಗಿ ವರ್ಣಿಸಿದರೆಂದರೆ, ಬುದ್ಧನ ಸಮುಸ್ಥಿತಿಯನ್ನು ಒಂದರೆಗಳಿಗೆಯಾದರೂ ಅನುಭವಿಸದ ಮನುಷ್ಯ ಈ ರೀತಿ ಮಾತಾಡಲಾರ ಎಂದು ನನಗನ್ನಿಸಿ, ಸ್ವಾಮೀಜಿ ಕುರಿತ ನನ್ನ ಗೌರವ ಬೇರೆ ನೆಲೆಯನ್ನೇ ತಲುಪಿತು. ವಿದ್ಯಾರ್ಥಿಗಳನ್ನು ಬೆಳಗಿನ ಝಾವಕ್ಕೇ ಎಬ್ಬಿಸಿಕೊಂಡು ಕಾಡಿಗೆ ಹೋಗಿ ಸೌದೆ ತರುವ, ಬಾಲ ವಿದ್ಯಾರ್ಥಿಗಳಿಗೆ ಸ್ವತಃ ತಾವೇ ಸ್ನಾನ ಮಾಡಿಸಿ ಬಟ್ಟೆ ಹಾಕುವ, ಪಾಠ ಹೇಳುವ, ಆಲಸಿ ಹಾಗೂ ತುಂಟ ಹುಡುಗರಿಗೆ ನಿರ್ದಾಕ್ಷಿಣ್ಯವಾಗಿ ಬಡಿದು ಬುದ್ಧಿ ಕಲಿಸುವ ಗುರುವಾಗಿದ್ದ ಈ ಸ್ವಾಮೀಜಿ, ಜ್ಞಾನದಲ್ಲೂ ಉನ್ನತ ಹಂತಕ್ಕೆ ಏರಿದವರಾಗಿದ್ದರು. ಕರ್ಮಯೋಗದ ಮೂಲಕವೇ ಜ್ಞಾನಯೋಗ ಸಾಧಿಸಿದ್ದವರು ಅವರು. ಆದರೆ ಅಂಥವರಿಗೇಕೆ ಈಗ ಈ ಇಳಿವಯಸ್ಸಿನಲ್ಲಿ ರಾಜಕಾರಣಿಗಳನ್ನು ಓಲೈಸಿ ಮಾತನಾಡುವ ಒತ್ತಡ? ಕಾಲ ಧರ್ಮ ಗುರುಗಳನ್ನೂ ಬಿಡದೆ?

ಸ್ವಾಮೀಜಿಗಳು ಆಳುವವರನ್ನು ಒಳ್ಳೆಯ ಕೆಲಸ ಮಾಡಿ ಎಂದು ಆಶೀರ್ವದಿಸುವುದು ಬೇರೆ; ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಎಂದು, ಅದೂ ಕರೆದವರು ಏತಕ್ಕೆ ಮತ್ತು ಎಂತಹ ಕೆಲಸಕ್ಕೆ ಕರೆದಿದ್ದಾರೆ ಎಂಬುದನ್ನರಿಯದಂತೆ, ಅರ್ಹತಾ ಪತ್ರ ನೀಡುವುದು ಬೇರೆ. ಸಾಮಾನ್ಯ ಜನರಿಗೇ ಜಿಗುಪ್ಸೆ ಬರುವಷ್ಟು ವಿಕ್ಷಿಪ್ತಗೊಂಡಿರುವ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಆಳುವವರಿಗೆ ಎಚ್ಚರಿಕೆಯ ಮಾತುಗಳಿಗೆ ಬದಲಾಗಿ ಅರ್ಹತಾ ಪತ್ರ ನೀಡುವುದು, ನನ್ನಂತಹ ಅವರ ಅಭಿಮಾನಿಗಳಿಗೆ ಮುಜುಗರವನ್ನುಂಟು ಮಾಡುವುದಷ್ಟೇ ಅಲ್ಲ; ಅವರ ಈ ವರ್ತನೆ ಹಲವರ ಕಣ್ಣಲ್ಲಿ ಅನುಮಾನಾಸ್ಪದ ಕೂಡಾ ಅನ್ನಿಸಿದರೆ ಆಶ್ಚರ್ಯವಿಲ್ಲ. ಇದಕ್ಕೆ ಪೂರಕವಾಗಿ, ಅಂದಿನ ಸಮಾರಂಭದಲ್ಲಿ ಯಡಿಯೂರಪ್ಪನವರು ಪ್ರಕಟಿಸಿದ ಸ್ವರ್ಣ ತುಲಾಭಾರಕ್ಕೆ, ಸ್ವಾಮೀಜಿ ತಲೆಯಲ್ಲಾಡಿಸಿ ಹೋಗಿದ್ದಾರೆ. ಈಗಾಗಲೇ ಈ ಕಾರ್ಯಕ್ಕಾಗಿ ತಲಾ ಒಂದು ಕೇಜಿ ಚಿನ್ನ ಕೊಡಲೊಪ್ಪಿರುವ ನೂರೊಂದು ಜನರ ಪಟ್ಟಿಯನ್ನು ನಮ್ಮ ಅರ್ಥ ಮಂತ್ರಿಯೂ

ಆದ ಯಡಿಯೂರಪ್ಪನವರು ಸಿದ್ಧಪಡಿಸಿದ್ದಾರಂತೆ... ಇದು ನಿಜವಾದ ವಿಪರ್ಯಾಸ! ಈ ತುಲಾಭಾರವೇನಾದರೂ ಕಾರ್ಯಗತವಾದರೆ, ಸಿದ್ಧಗಂಗಾ ಮಠದ ಸಾಧನೆಗೆ ಮಾಡಲಾಗುವ ಇದಕ್ಕಿಂತ ದೊಡ್ಡ ಅವಮಾನ ಇನ್ನೊಂದಿರಲಾರದು. ಉಳ್ಳವರ ಸಂಪತ್ತಿನ ಈ ಅಶ್ಲೀಲ ಆಡಂಬರದ ಪ್ರದರ್ಶನಕ್ಕೆ ಈ ಶತಾಯುಷಿ ಸ್ವಾಮೀಜಿ ನಿಮಿತ್ತವಾದರೆ, ಶ್ರೀಸಾಮಾನ್ಯನ ಆಸೆ ಭರವಸೆಗಳೊಂದಿಗೆ ಅವರೆಲ್ಲರ ಬೆವರು, ಕಣ್ಣೀರು ಹಾಗೂ ಕಾಣಿಕೆಗಳ ಮೇಲೇ ಕಟ್ಟಿರುವ ಮಹಾನ್ ಸಂಸ್ಥೆಯ ಘನತೆಗೆ ಕುಂದುಂಟು ಮಾಡಿದಂತೆ. ಅವರ ಎಂಭತ್ತು ವರ್ಷಗಳ ಅಪ್ರತಿಮ ಸಾಧನೆಯನ್ನು ಯಾವುದೋ ಒಂದು ದುರ್ಬಲ ಘಳಿಗೆಯಲ್ಲಿ ಯಾರಿಗೋ ಒತ್ತೆ ಇಟ್ಟಂತೆ...

ಅಥವಾ ದೂರದ ಬೆಟ್ಟ ನುಣ್ಣಗೆಂಬಂತೆ, ಈ ಮಠದ ಬಗ್ಗೆ, ಈ ಮಠಾಧೀಶರ ಬಗ್ಗೆ ನನ್ನ ಕಲ್ಪನೆಯೇ ತಪ್ಪಾಗಿದೆಯೋ? ಹಾಗೆಂದು ಯೋಚಿಸಲೂ ನನಗೆ ಕಷ್ಟವಾಗುತ್ತಿದೆ. ಏಕೆಂದರೆ ಈಗಾಗಲೇ ಹಳೆಯ ನೈತಿಕತೆಯ ಬೇರುಗಳು ಅಲ್ಲಾಡುತ್ತಾ ಹೊಸದೊಂದು ನೈತಿಕತೆಯ ಉದಯವಾಗುತ್ತಿರುವಂತೆ ತೋರುತ್ತಿರುವ ಈ ಹೊತ್ತಿನಲ್ಲಿ; ನಮ್ಮ ನಿಲುವುಗಳೆಲ್ಲ ಇತರರಿಗೆ ಭೋಳೆ ಎನಿಸುತ್ತಿದೆಯೇ ಎಂಬ ಶಂಕೆಯ ನಡುವೆಯೇ, ನನ್ನಂಥವರು ಸುತ್ತಮುತ್ತಲ ವಿದ್ಯಮಾನಗಳನ್ನು ಖಂಡನೆಯೊಂದಿಗೇ ಗಮನಿಸಬೇಕಾದ ಹಿಂಸೆಯನ್ನು ಅನುಭವಿಸುತ್ತಿರುವುದರ ಮಧ್ಯೆ ಇಂತಹ ಹಿಂಸೆಗಳು ಮತ್ತೆ ಮತ್ತೆ ಎದುರಾಗುತ್ತಿವೆ. ಮೊನ್ನೆ ಬಳ್ಳಾರಿಯಲ್ಲಿ ಸಾಮೂಹಿಕ ವಿವಾಹದ ಹೆಸರಿನಲ್ಲಿ ನಡೆದ ಗಣಿ ಹಣದ ರಾಜಕೀಯ ವಿಜೃಂಭಣೆಯ ನಡುವೆ ನಾನು ಮೆಚ್ಚಿದ ಇನ್ನೊಬ್ಬ ಸ್ವಾಮೀಜಿ ಕಾಣಿಸಿಕೊಂಡಾಗ ನನಗೆ ಉಸಿರೇ ಕಟ್ಟಿದಂತಾಯಿತು. ಇವರಿಗೇನು ದರ್ದು, ಇಂತಹ ಪರೋಕ್ಷ ರಾಜಕೀಯ ಪ್ರದರ್ಶನಗಳಲ್ಲಿ ಭಾಗವಹಿಸಿ ಆಶೀರ್ವಚನ ನೀಡಲು ಎಂಬುದು ಅರ್ಥವಾಗದ ಹಿಂಸೆಯಿದು. ಇವರೂ ಹೊಸ ನೈತಿಕತೆಯನ್ನು ಇಷ್ಟು ಸುಲಭವಾಗಿ ಒಪ್ಪಿಕೊಂಡುಬಿಟ್ಟರೆ ಎಂಬ ದಿಗ್ಭ್ರಮೆಯ ಹಿಂಸೆಯಿದು. ಬಳ್ಳಾರಿಯ ಸ್ವತಃ ಅವರ ಸಾಮಾನ್ಯ ಭಕ್ತರಿಗೇ ಅಧರ್ಮವಾಗಿ ಕಾಣುತ್ತಿರುವುದು, ಇವರಿಗೆ ಧರ್ಮವಾಗಿ ಕಾಣುತ್ತಿರುವುದರ ರಹಸ್ಯವಾದರೂ ಏನು? ಬಹುಶಃ ಭಕ್ತರಿಗೆ ಸಾಕಲು ತಮ್ಮ ಹೆಂಡತಿ ಮಕ್ಕಳಷ್ಟೇ ಇದ್ದರೆ, ಸ್ವಾಮಿಜಿಗೆ ಸಾಕಬೇಕಾದ ದೊಡ್ಡ ಸಾಮ್ರಾಜ್ಯವೇ ಇರುವುದು ಇದಕ್ಕೆ ಕಾರಣವಿರಬಹುದು!

ಸಂಸಾರ ಬಿಟ್ಟು ಬಂದ ಸ್ವಾಮೀಜಿಗಳೆನಿಸಿಕೊಂಡವರು ಇಂದು ಅತಿ ದೊಡ್ಡ ಸಂಸಾರಗಳ ಒಡೆಯರೇ ಆಗಿದ್ದಾರೆ. ಕೆಲವರಂತೂ ಎರಡೂ ರೀತಿಯ 'ಸಂಸಾರ'ಗಳನ್ನೂ 'ನೇಮ ನಿಷ್ಠೆ'ಗಳೊಂದಿಗೆ ಸರಿದೂಗಿಸಿಕೊಂಡು ಹೋಗುವಷ್ಟು 'ಸಮರ್ಥ'ರಾಗಿದ್ದಾರೆ! ಅನುಮಾನವಿದ್ದರೆ, ಉಡುಪಿಗೊಮ್ಮೆ ಹೋಗಿಬನ್ನಿ! ಇದಕ್ಕೆಲ್ಲ ತಕ್ಕಹಾಗೆ ಈ ಬಾರಿಯ ಕೃಷ್ಣ ಜನ್ಮಾಷ್ಟಮಿಯ ಆಚರಣೆಯ ಸಂದರ್ಭದಲ್ಲಿ ಅಲ್ಲಿನ ಸ್ವಾಮಿಯೊಬ್ಬರು 'ಅನಿಸುತಿದೆ ಏಕೋ ಇಂದು..' ಎಂಬ ಸಿನೆಮಾ ಪ್ರಣಯ ಗೀತೆಗೆ 'ಡ್ರಮ್ಸ್' ಬಾರಿಸಿ ಸಂತೋಷಪಟ್ಟಿದ್ದಾರೆ! ಮುಂದೆ ಇವರು ಇನ್ನೂ ಏನೇನನ್ನು ಮಾಡಿ ಸಂತೋಷಪಡುವ ಕಾಲ ಬರುವುದೋ

ಕಾದು ನೋಡಬೇಕು! ಇದನ್ನೆಲ್ಲ ಭಕ್ತರೂ ಮನರಂಜನೆ ಎಂಬಂತೆ, ಕೀಟಲೆಯ ಜೊತೆಗೋ ಅಥವಾ ಶಾಪ ಹಾಕುತ್ತಲೋ ಜಾತ್ಯಾಭಿಮಾನದ ಒತ್ತಡದಲ್ಲಿ ಒಪ್ಪಿಕೊಳ್ಳತೊಡಗಿದ್ದಾರೆ! ಹೀಗಾಗಿ ಮಠಗಳು ಇಂದು ಸರಳತೆಯ, ಸಭ್ಯತೆಯ ಶ್ರದ್ಧಾ ಕೇಂದ್ರಗಳಾಗದೆ, ಮನರಂಜನೆ– ವ್ಯಾಪಾರ– ವ್ಯವಹಾರಗಳ ದೊಡ್ಡ ಕೇಂದ್ರಗಳೆನಿಸಿಕೊಂಡಿವೆ. ಕೆಲವರದು ದೊಡ್ಡ ವ್ಯವಹಾರ, ಕೆಲವರದು ಚಿಕ್ಕ ವ್ಯವಹಾರ. ದೊಡ್ಡ ವ್ಯವಹಾರವೆಂದರೆ, ವಿದ್ಯಾ ಪ್ರಸಾರದ ಹೆಸರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ವ್ಯವಹಾರ. ಇಂದು ಕರ್ನಾಟಕದ ಅತ್ಯಂತ ಶ್ರೀಮಂತ ಸಂಸ್ಥೆಗಳ ಪಟ್ಟಿ ತಯಾರಿಸಿದರೆ, ಅದರಲ್ಲಿ ಈ ಅನೇಕ ಮಠಗಳು ಸೇರುವುದರಲ್ಲಿ ಅನುಮಾನವಿಲ್ಲ. ಒಂದು ಕಾಲದಲ್ಲಿ ಬಡಬಗ್ಗರ ಮಕ್ಕಳಿಗೆ ಊಟ ವಿದ್ಯೆ ಒದಗಿಸುವ ಆಶ್ರಯಧಾಮಗಳಾಗಿ, ಜ್ಞಾನ ವೈರಾಗ್ಯ ಬೋಧನೆಗಳ ತಾಣವಾಗಿ ಆರಂಭವಾದ ಮಠಗಳು ಇಂದು ಬೃಹತ್ ಉದ್ಯಮ ಸಂಸ್ಥೆಗಳಂತೆ, ಹಣವುಳ್ಳವರ, ದೊಡ್ಡ ವ್ಯಾಪಾರಿಗಳ, ದಲ್ಲಾಳಿಗಳ, ಕಂತ್ರಾಟುದಾರರ, ಭ್ರಷ್ಟ ರಾಜಕಾರಣಿಗಳ, ಜಾತಿವಾದಿ ನಿವೃತ್ತ ಅಧಿಕಾರಿಗಳ ಸಹಕಾರಿ ಸಂಘಗಳಂತಾಗಿವೆ. ಹಾಗೇ ಇವು ಉನ್ನತ ರಾಜಕಾರಣಿಗಳ ಹಾಗೂ ಅತಿ ಶ್ರೀಮಂತರ ಅಕ್ರಮ ಸಂಪತ್ತಿನ ತಂಗುದಾಣಗಳೂ ಆಗಿವೆ ಎಂಬ ಆಪಾದನೆ ಹೊಸದೇನಲ್ಲ.

ಈಗಿನ ಬಹುಳಷ್ಟು ಮಠಗಳು ತಿಂಗಳ ಬಡ್ಡಿಯ ಲೇವಾದೇವಿ ಕೇಂದ್ರಗಳಾಗಿವೆ. ಅದಕ್ಕೆ ಬೇಕಾದ ಸೂಕ್ತ 'ವ್ಯವಸ್ಥೆ'ಯನ್ನೂ ಅವು ಮಾಡಿಕೊಂಡಿವೆ! ಅಸಹಾಯಕರ, ವಿಧವೆಯರ ಸಂಪತ್ತನ್ನು ಜಾಣತನದಿಂದಲೋ, ಬೆದರಿಕೆಯಿಂದಲೋ ಲಪಟಾಯಿಸಿಕೊಂಡ ಎಷ್ಟು ಮಠಗಳಿಲ್ಲ? ಸಣ್ಣ ಮಠಗಳನ್ನು ದೊಡ್ಡ ಮಠಗಳು take over ಮಾಡಿದ ಎಷ್ಟು ಉದಾಹರಣೆಗಳಿಲ್ಲ? ಹೀಗೆ ಇವು, ಇತ್ತೀಚಿನ ಕಾರ್ಪೊರೇಟ್ ವಲಯದ ವ್ಯವಹಾರಗಳಿಗಿಂತ ಯಾವ ರೀತಿ ಕಡಿಮೆ ಇವೆ? ಹಾಗಾಗಿಯೇ ಇಂದಿನ ಮಠಾಧೀಶರಿಗೆ ನಿಜವಾಗಿಯೂ ಒಪ್ಪುವ ಅಭಿದಾನವೆಂದರೆ, ಕಂಪನಿ CEO! ಹೇಗೂ, ಅವು ಧಾರ್ಮಿಕ ಕೇಂದ್ರಗಳಾಗಿ ಎಂದೋ ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿವೆ. ಏಕೆಂದರೆ, ಅವುಗಳಿಂದ ಇತ್ತೀಚಿನ ಇತಿಹಾಸದಲ್ಲಿ ರಾಜ್ಯದ ಜನತೆಯ ಪಾರಮಾರ್ಥಿಕ ದಾಹವನ್ನು ತೀರಿಸಬಲ್ಲ, ನಿಜವಾದ ಜ್ಞಾನಿಯೆಂದು ಕರೆಯಬಹುದಾದ ಒಬ್ಬನೇ ಒಬ್ಬ ವ್ಯಕ್ತಿ ಹೊರಬಂದಿರುವ ಉದಾಹರಣೆಯಿಲ್ಲ. ಹೀಗಿರುವಾಗ ಇವನ್ನು ಧಾರ್ಮಿಕ ಸಂಸ್ಥೆಗಳೆಂದು ಕರೆಯುವುದು ಧರ್ಮಕ್ಕೇ ಮಾಡುವ ಅಪಚಾರವಾಗುತ್ತದೆ. ಜಾತಿ ಸಂಕುಚಿತತೆಯನ್ನು ಪ್ರೋತ್ಸಾಹಿಸುತ್ತಲೇ ಸಾಮಾಜಿಕ ಐಕ್ಯತೆಯನ್ನು ಸದಾ ಒಡೆದಿಟ್ಟುಕೊಂಡೇ ಬರುತ್ತಿರುವ ಈ ಮಠಗಳು, ಇಂದಿನ ಸಮಯಸಾಧಕ ಜಾತಿ ರಾಜಕಾರಣದ breeding centreಗಳಾಗಿವೆ.

ಇದೆಲ್ಲ ಗೊತ್ತಿದ್ದೂ ಜನ ಬಡ– ಶ್ರೀಮಂತರೆನ್ನದೆ, ಮಠಗಳಿಗೆ ಮುಗಿಬೀಳುತ್ತಿದ್ದಾರೆ. ಕೆಲವರು ತಮ್ಮ ಆಸ್ತಿ ಪಾಸ್ತಿಗಳನ್ನು ಇವುಗಳಿಗೆ ಬರೆದು ಕಣ್ಣು ಮುಚ್ಚುತ್ತಿದ್ದಾರೆ! ಇದಕ್ಕೆ ಮುಖ್ಯ ಕಾರಣ, ಜನರಿಗೆ ಬದಲಿ ಮತ್ತು ವಿಶ್ವಾಸಾರ್ಹ ಸಾಮಾಜಿಕ– ಸಾಂಸ್ಕೃತಿಕ ಸಂಘಟನೆಗಳು ಇಲ್ಲದೇ ಹೋಗಿರುವುದು. ಜೊತೆಗೆ, ಜಾತಿ ವ್ಯವಸ್ಥೆ ವಿರೋಧಿ ಆಂದೋಲನ ಮೀಸಲಾತಿ

ಆಂದೋಲನದ ಗೊಂದಲದಲ್ಲಿ ತನ್ನೆಲ್ಲ ತಾತ್ವಿಕತೆಯನ್ನು ಕಳೆದುಕೊಂಡು ಚದುರಿ ಹೋಗಿರುವುದು. ಜಾತಿಗೊಂದು ಮಠ ಮಾಡಿಕೊಟ್ಟು, ಜಾತಿ ವ್ಯವಸ್ಥೆಯ ಹೊಸದೊಂದು ಮಾದರಿಯನ್ನು ಸೃಷ್ಟಿಸುತ್ತಿರುವ ಸ್ವಾಮೀಜಿಯೊಬ್ಬರ ಪ್ರಯತ್ನವನ್ನು 'ಪ್ರಗತಿಪರ' ಎಂದು ಮಾನ್ಯ ಮಾಡುವ ಮಟ್ಟಕ್ಕೆ ನಮ್ಮ 'ಪ್ರಗತಿಪರತೆ' ಮುಟ್ಟಿರುವುದರಿಂದಲೇ, ಮಠಗಳು ರಾಜಕಾಣಿಗಳೊಂದಿಗೆ ಸೇರಿ ಸಮಾಜವನ್ನು ಜಾತಿ ಜಾತಿಗಳಾಗಿ ಒಡೆಯಲು ಈಗ ಧೈರ್ಯವಾಗಿ ನಿಂತಿರುವುದು. ಯಡಿಯೂರಪ್ಪನವರಿಗೆ ಅಧಿಕಾರ ಹಸ್ತಾಂತರಿಸದಿದ್ದರೆ, ರಾಜ್ಯಾದ್ಯಂತ ಹೋರಾಟ ಮಾಡುವುದಾಗಿ ಕೆಲವು ವೀರಶೈವ ಮಠಾಧೀಶರು ಬೆದರಿಸತೊಡಗಿರುವುದು ಸೂಚಿಸುವುದಾದರೂ ಇನ್ನೇನನ್ನು?

ರಾಜಕಾರಣಿಗಳು ಮತ್ತು ಮಠಾಧೀಶರು ಅಕ್ರಮ ಸಂಪತ್ತಿನ ಗುಡ್ಡೆಗಳ ಎಡಬಲ ನಿಂತು ಮಂದಸ್ಮಿತರಾಗಿ ಪತ್ರಿಕೆಗಳಿಗೆ ಫೋಟೊ ಪೋಸು ನೀಡುವಷ್ಟು ಪರಿಸ್ಥಿತಿ ನಿರ್ಲಜ್ಜವಾಗಿದೆ. ಕೆಲವು ಕಡೆಯಂತೂ ನಮ್ಮನ್ನಾಳುವವರು ಈ ಮಠಾಧೀಶರ ಸಿಂಹಾಸನದ ಕೆಳಗೆ ಕುರ್ಚಿ ಹಾಕಿಸಿಕೊಂಡು ಕೂತು ಹಲ್ಲು ಕಿರಿಯುವುದನ್ನು ನೋಡಿದರೆ, ನಮ್ಮ ಸಂವಿಧಾನವೇ ನಮ್ಮನ್ನು ನೋಡಿ ಹಲ್ಲು ಕಿರಿದಂತಾಗುತ್ತದೆ. ಅದರೇನು ಮಾಡುವುದು, ಇಂತಹ ಸಾಮಾಜಿಕ ಹಾಗೂ ಸಾಂವಿಧಾನಿಕ ಅವನತಿಯ ವಿರುದ್ಧದ ಪ್ರತಿಭಟನೆಗೆ ವೇದಿಕೆಗಳಾಗಬೇಕಾದ ನಮ್ಮ ಮಾಧ್ಯಮಗಳೇ ಹೊಸ ಕಾಲದ ಮಠಗಳಾಗಿ ಪರಿವರ್ತಿತವಾಗತೊಡಗಿವೆಯಲ್ಲ? ಮೊನ್ನೆ, ರಾಜಕಾರಣಿಗಳ ಭ್ರಷ್ಟತೆಯನ್ನು ಬಯಲು ಮಾಡುವ ಬಡಾಯಿ ವರದಿಗಳನ್ನು ಪ್ರಕಟಿಸುವ ಕನ್ನಡದ 'ಪ್ರಭೆ'ಯೊಂದು, ಇಂದಿನ ಭ್ರಷ್ಟ ರಾಜಕಾರಣದ ಆಟ– ಪಾಠಗಳಿಗೆ ಅಪಾರ ಹಣ ಪೂರೈಸುತ್ತಿರುವವರೆಂದು ಹೆಸರಾದ ಗಣಿ ಉದ್ಯಮದ ಶಾಸಕರೊಬ್ಬರ ಘನಿತರ ದಾನ– ಧರ್ಮದ ಕಾರ್ಯಗಳನ್ನು ಸ್ತುತಿಸುವ ವಿಶೇಷ ಪುರವಣಿಯನ್ನೇ ಹೊರತಂದು ಕೃತಾರ್ಥವಾಗಿದೆಯಲ್ಲ? ಅಲ್ಲಮ, ಶಬ್ದದ ಲಜ್ಜೆಯ ಬಗ್ಗೆ ಹೇಳಿದ. ಶಬ್ದದ ನಿರ್ಲಜ್ಜೆಯ ಬಗ್ಗೆ ಹೇಳಬೇಕಾದ ಕಾಲವೀಗ ಬಂದಂತಿದೆ!

ಸೆಪ್ಟಂಬರ್ ೨೧, ೨೦೦೭

ಜಾತಿಕೂಪದಲ್ಲೊಂದು ಪ್ರೀತಿಯ ಹೂವು

ಬಿಹಾರದಿಂದ ಮತ್ತೆರಡು ಆಘಾತಕಾರಿ ಸುದ್ದಿಗಳು ಬಂದಿವೆ. ಸರಗಳ್ಳನನ್ನು ಒದ್ದು ಬೈಕ್‌ಗೆ ಕಟ್ಟಿ ಎಳೆದಾಡಿದ ಈ ಜನ ಈಗ ಮುವ್ವರು ಕಳ್ಳರ ಕಣ್ಣುಗಳನ್ನೇ ಕಿತ್ತುಹಾಕಿದ್ದಾರೆ. ಇನ್ನೂ ಹತ್ತು ಜನ ಕಳ್ಳರನ್ನು ಬಡಿದು ಸಾಯಿಸಿದ್ದಾರೆ. ಇವರಿಗೆ ಒಟ್ಟಿಗೇ ಇಷ್ಟು ಜನ ಹೇಗೆ ಸಿಗುತ್ತಾರೋ ತಿಳಿಯದು! ಅದೇನೇ ಇರಲಿ, ಇದನ್ನು ಮಾಡಿದವರು ಶ್ರೀಮಂತರೇನಲ್ಲ; ನನ್ನ ನಿಮ್ಮಂತಹ ಜನಸಾಮಾನ್ಯರೇ. ಸದ್ಯಕ್ಕೆ ರಾಜ್ಯವನ್ನು, ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ, ಇಡೀ ಭಾರತದಲ್ಲಿ ಅತ್ಯುತ್ತಮ ಮುಖ್ಯಮಂತ್ರಿ ಎಂದು ಹೆಸರಾದ ನಿತೀಶ್ ಕುಮಾರ್ ಆಳುತ್ತಿರುವ ಸಮಯದಲ್ಲೂ ಇಂತಹ ವಿಕ್ಷಿಪ್ತ ಘಟನೆಗಳು ನಡೆಯುತ್ತಿವೆ ಎಂದರೆ? ಬಿಹಾರದ ಈ ವಿಕ್ಷಿಪ್ತತೆಯ ರೋಗ ಅಲ್ಲಿನ ಜಾತಿವಾದಿ ಹಾಗೂ ಜಮೀನ್ದಾರಿ ಸಾಮಾಜಿಕ– ಆರ್ಥಿಕ– ಸಾಂಸ್ಕೃತಿಕ ನೆಲದಲ್ಲಿ ಆಳವಾಗಿ ಬೇರೂರಿದೆ. ಲಾಲೂ ಪ್ರಸಾದ್ ಯಾದವ್ ಇದನ್ನು ಬಳಸಿಕೊಂಡು ತಮ್ಮ ಕೌಟುಂಬಿಕ ರಾಜಕಾರಣಕ್ಕೆ ನೆಲೆ ಮಾಡಿಕೊಂಡರಷ್ಟೆ. ಅವರು ಈ ರೋಗದ ಮೂಲೋತ್ಪಾಟನೆಯ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅದರೆಲ್ಲದರ ಪಾಪದ ಫಲವನ್ನು ಈಗ ನಿತೀಶ್ ಹೊರಬೇಕಿದೆ. ದೀರ್ಘಕಾಲಿಕ ಹತಾಶೆಯಲ್ಲಿ ಬೆಂದ ಜನ ವಿಕ್ಷಿಪ್ತರಾಗದೇ ಇನ್ನೇನಾದಾರು? ಅದೂ ಪೋಲೀಸ್ ವ್ಯವಸ್ಥೆ ಪೂರ್ತಿ ಭ್ರಷ್ಟವಾಗಿ, ಉಳ್ಳವರೊಂದಿಗೆ ಶಾಮೀಲಾಗಿರುವಾಗ? ಮೊನ್ನೆ ಸರಗಳ್ಳನ ಮೇಲೆ ನಡೆದ ದೌರ್ಜನ್ಯದ ಬಗೆಗೆ ಅಲ್ಲಿನ ಪೋಲೀಸ್ ಮೊದಮೊದಲು ಪ್ರತಿಕ್ರಿಯಿಸಿದ್ದು, ಅಂತಹುದೇನೂ ನಡೆದಿಲ್ಲ ಎಂಬ ಉಡಾಫೆಯೊಂದಿಗೇ! ಯಾವುದೇ ವೈಯುಕ್ತಿಕ ದೌರ್ಬಲ್ಯಗಳಿಲ್ಲದ, ಪರಿಶುದ್ಧ ವ್ಯಕ್ತಿತ್ವದ ನಿತೀಶ್ ಕುಮಾರ್‌ಗೆ (ಇಂತಹವರಿಗೆ ಬಿ.ಜೆ.ಪಿ.ಯೇ ಮಿತ್ರ ಪಕ್ಷವಾಗಬೇಕಾಗಿ ಬಂದಿರುವುದು ಇಂದಿನ ರಾಜಕಾರಣದ ದುರಂತವಾಗಿದೆ!) ಇದೆಲ್ಲವೂ ತಮ್ಮ ಆಳ್ವಿಕೆಯನ್ನು ಕುರಿತಂತೆ ಎಚ್ಚರಿಕೆಯ ಗಂಟೆಗಳಾಗಬೇಕು. ಏಕೆಂದರೆ ಅವರು, ಮೆಗಾ ಅಭಿವೃದ್ಧಿಯ ಜಾಗತೀಕರಣದ ಈ ದಿನಗಳಲ್ಲೂ ಕೇರಳದ ಮುಖ್ಯಮಂತ್ರಿ ಅಚ್ಯುತಾನಂದನ್‌ರಂತೆ ಜನಸಾಮಾನ್ಯರ ಕಷ್ಟ– ಸುಖಗಳೊಂದಿಗೆ ಗುರುತಿಸಿಕೊಳ್ಳಬಯಸುವ ಅಪರೂಪದ ರಾಜಕಾರಣಿ.

ಬಿಹಾರ ವಿಚಿತ್ರ ರಾಜ್ಯ! ಅದು ಬುದ್ಧನ, ಅಶೋಕನ ನಾಡು. ಇತ್ತೀಚಿನ ಇತಿಹಾಸದ ಏಕೈಕ ಜನನಾಯಕ ಜಯಪ್ರಕಾಶ್ ನಾರಾಯಣ್ ಬದುಕಿ ಬಾಳಿದ ರಾಜ್ಯವಿದು. ಇದು, ಸಾಮಾನ್ಯ ಕ್ಷೌರಿಕ ಕುಟುಂಬದಿಂದ ಬಂದು ಕೊನೆವರೆಗೂ ಅದೇ ಸಾಮಾನ್ಯ ಸ್ಥಿತಿಯಲ್ಲಿ ಬದುಕಿದ ಕರ್ಪೂರಿ ಠಾಕೂರ್ ಎಂಬ ಸಮಾಜವಾದಿ ಮುಖ್ಯಮಂತ್ರಿಯಾಗಿದ್ದ ರಾಜ್ಯವೂ ಹೌದು. ಹಾಗೇ ಈ ಹಿಂದಿನ ಚುನಾವಣೆಯಲ್ಲಿ ಝಾಡಮಾಲಿ ಮಹಿಳೆಯೊಬ್ಬರನ್ನು ಸಂಸತ್ತಿಗೆ ಆರಿಸಿ ಕಳಿಸಿದ್ದ ರಾಜ್ಯ ಕೂಡಾ! ರಾಷ್ಟ್ರದ ಮೊಟ್ಟಮೊದಲ ಕಾಂಗ್ರೆಸ್ಸೇತರ ಸರ್ಕಾರಕ್ಕೆ ಕಾರಣವಾದ 'ಸಂಪೂರ್ಣ ಕ್ರಾಂತಿ' ಆಂದೋಲನಕ್ಕೆ ಭೂಮಿಕೆ ಒದಗಿಸಿದ್ದು ಈ ರಾಜ್ಯವೇ. ಹಾಗೆ ನೋಡಿದರೆ, ಬಿಹಾರ ಮಗಧ ಸಾಮ್ರಾಜ್ಯದ ಕಾಲದಿಂದಲೂ ಸದಾ ವಿವಿಧ ಅವಧಿಗಳ ಏಳು– ಬೀಳುಗಳಲ್ಲಿ ಮಗ್ನವಾಗಿರುವ ಅಶಾಂತ ರಾಜ್ಯ. ಇಂತಹ ನಿರಂತರ ಅಶಾಂತಿಯ ನಡುವೆಯೇ ಚಿರ ಶಾಂತಿಯ ಅನ್ವೇಷಣೆಯ ಒತ್ತಡ ಮೂಡುವುದೇನೋ– ಬುದ್ಧನಿಗೆ ಆದಂತೆ! ಹಾಗೇ ಅನ್ನಿಸುತ್ತದೆ, ಈ ರಾಜ್ಯದ ದಶರಥ್ ಮಾಂಝಿ ಎಂಬ ಕರ್ಮಯೋಗಿಯೊಬ್ಬನ ಕಥೆ ಕೇಳಿದಾಗ.

ಗಯಾ ಜಿಲ್ಲೆಯ ಗೇಲೌರ್ ಎಂಬ ಕುಗ್ರಾಮದ ಕೃಷಿ ಕೂಲಿಕಾರನಾದ ಮಾಂಝಿ ಸತತವಾಗಿ ೨೩ವರ್ಷಗಳ ಕಾಲ ಗುಡ್ಡವೊಂದನ್ನು ಏಕಾಕಿಯಾಗಿ ಕಡಿದು, ತನ್ನೂರಿನ ರೋಗಿಗಳನ್ನು ಸುಲಭವಾಗಿ ಪಕ್ಕದ ವಜ಼ೀರ್‌ಗಂಜ್‌ನಲ್ಲಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸಾಧ್ಯವಾಗುವಂತಹ ರಸ್ತೆಯೊಂದನ್ನು ನಿರ್ಮಿಸಿದ್ದಾನೆ! ಕಾಯಿಲೆಯಾದ ತನ್ನ ಹೆಂಡತಿ ಫಾಲ್ಗುಣಿ ದೇವಿಯನ್ನು ಗುಡ್ಡ ಅಡ್ಡವಿದ್ದ ಕಾರಣದಿಂದಾಗಿ ಸಕಾಲದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಸಾಧ್ಯವಾಗದೆ ಕಳೆದುಕೊಂಡ ದುಃಖ ಆತನಲ್ಲಿ ಹೆಪ್ಪುಗಟ್ಟಿ, ಆತನಿಂದ ಈ ಕೆಲಸ ಮಾಡಿಸಿದೆ! ೩೬೦ ಅಡಿ ಉದ್ದ, ೩೫ ಅಡಿ ಅಗಲ ಹಾಗೂ ೨೫ ಅಡಿ ಎತ್ತರದ ಹೆಬ್ಬಂಡೆಯನ್ನು ಮಾಂಝಿ ತನ್ನ ಸುತ್ತಲಿನ ಜನರ ಟೀಕೆ, ಕಟಕಿ, ವ್ಯಂಗ್ಯದ ಮಾತುಗಳ ನಡುವೆಯೇ ಏಕಾಗ್ರತೆ ಉಳಿಸಿಕೊಂಡು ಒಬ್ಬನೇ ನಿಂತು ಕಡಿದು ಹಾಕಿದ್ದಾನೆ ಎಂದರೆ, ಅದು ಯಾವ ತಪಸ್ಸಿಗೆ ಕಡಿಮೆ ಹೇಳಿ? ಇದರಿಂದಾಗಿ ೧೯ ಕಿ.ಮೀ. ದೂರವಿದ್ದ ವಜ಼ೀರ್‌ಗಂಜ್ ಈಗ ಕೇವಲ ಒಂದು ಗಂಟೆಯ ಪ್ರಯಾಣದ ೬ ಕಿ.ಮೀ.ನಷ್ಟು ಹತ್ತಿರವಾಗಿದೆ. ಆದರೆ, ಈತನ ಕೆಲಸವನ್ನು ಇನ್ನಷ್ಟು ಸಾರ್ಥಕಗೊಳಿಸುವಂತೆ, ಈ ದಾರಿಯನ್ನು ನಾಗರಿಕ ವಾಹನಗಳು ಓಡಾಡುವಂತಹ ಪಕ್ಕಾ ರಸ್ತೆಯನ್ನಾಗಿ ಪರಿವರ್ತಿಸಲು ನೀಡಲಾದ ಅರ್ಜಿಗಳು ಲಾಲೂ ಮತ್ತು ಅವರ ಪತ್ನಿ ರಾಬ್ರಿದೇವಿ ಆಳ್ವಿಕೆಗಳ ಕಾಲದಲ್ಲಿ ನಿಷ್ಫಲಗೊಂಡವು. ಛಲ ಬಿಡದ ಮಾಂಝಿ, ಹೊಸ ಮುಖ್ಯಮಂತ್ರಿ ನಿತೀಶ್ ಕುಮಾರರ ಜನತಾ ದರ್ಶನ ಕಾರ್ಯಕ್ರಮಕ್ಕೆ ಹೋಗಿ ಅರ್ಜಿ ಸಲ್ಲಿಸಿದ. ಮಾಂಝಿಯ ಸಾಹಸವನ್ನು ತಿಳಿದು ಬೆರಗಾದ ಮುಖ್ಯಮಂತ್ರಿ, ಆತನನ್ನು ತಮ್ಮ ಕುರ್ಚಿಯಲ್ಲಿ ಕುಳ್ಳಿರಿಸಿ ಗೌರವಿಸಿದ್ದಲ್ಲದೆ, ವೃದ್ಧಾಪ್ಯದ ಅಸ್ವಸ್ಥತೆಗೆ ಒಳಗಾಗಿದ್ದ ಆ ಹಿರಿಯನನ್ನು ದೆಹಲಿಯ ಅಖಿಲ ಭಾರತ ವೈದ್ಯಕೀಯ ಸಂಸ್ಥೆಗೆ ದಾಖಲು ಮಾಡಿಸಿ ಅದರ ಖರ್ಚನ್ನೆಲ್ಲ ರಾಜ್ಯ ಸರ್ಕಾರ ನೋಡಿಕೊಳ್ಳುವ ವ್ಯವಸ್ಥೆ ಮಾಡಿದರು. ಮಾಂಝಿ ಈಗಿಲ್ಲ. ಆತನ ಹೆಸರಿನಲ್ಲಿ

ನಿತೀಶ್ ಸರ್ಕಾರ ಪಕ್ಕಾ ರಸ್ತೆ ನಿರ್ಮಾಣವನ್ನಷ್ಟೇ ಅಲ್ಲ, ಗೇಲೌರ್‌ನಲ್ಲಿ ಆಸ್ಪತ್ರೆಯೊಂದನ್ನು ನಿರ್ಮಿಸಲೂ ನಿರ್ಧರಿಸಿದೆ. ಇಲಿ ತಿಂದು ಬದುಕುವ ಮುಸಾಹರ್ ಜಾತಿಗೆ ಸೇರಿದ ದಶರಥ್ ಮಾಂಝಿ, ಈಗ ಸ್ಥಳೀಯರ ಬಾಯಲ್ಲಿ ದಶರಥ್ 'ಬಾಬಾ' ಆಗಿ ನೆಲೆಗೊಂಡಿದ್ದಾನೆ!

ಈ ಸಂಗತಿಯನ್ನು ಹೇಳಿದ್ದು, ಸದಾ ಅವಹೇಳನಕ್ಕೇ ಒಳಗಾಗುವ ಬಿಹಾರದ ಚಿತ್ರವನ್ನು ಪೂರ್ಣಗೊಳಿಸಲು. ಮನುಷ್ಯ ನಿರ್ಮಿಸುವ ಕೊಚ್ಚೆಯ ಪಕ್ಕದಲ್ಲೇ, ಪ್ರಕೃತಿ ತಿಳಿನೀರಿನ ಬುಗ್ಗೆಯನ್ನು ಚಿಮ್ಮಿಸಬಲ್ಲುದೆಂದು ಸೂಚಿಸಲು. ಎಂತಹ ಪ್ರಾಣಾಂತಿಕ ಆಘಾತಗಳ ನಡುವೆಯೂ ಮಾನವತೆ ಎಂಬುದು ದಮನಗೊಳ್ಳದೆ ವ್ಯಕ್ತಗೊಳ್ಳಬಹುದಾದ ವಿವಿಧ ರೂಪಗಳ ಬಗೆಗಿನ ನನ್ನ ಬೆರಗನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು. ಬಿಹಾರವನ್ನು ಒಂದು ಜಾತಿಕೂಪ ಎಂದು ಕರೆದು ಹೀಯಾಳಿಸುವವರಿದ್ದಾರೆ. ಆದರೆ ಈ ಜಾತಿಕೂಪದಲ್ಲಿ ಇಂತಹ ಹೂವುಗಳು ಆಗಾಗಲಾದರೂ ಅರಳುತ್ತಿರುತ್ತವೆ. ಆದರೆ ಸಮೃದ್ಧ ರಾಜ್ಯವೆಂದು ಅಧಿಕೃತವಾಗಿ ಘೋಷಿಸಲ್ಪಟ್ಟ ಹಾಗೂ ಬಹು ಜನರಿಂದ ಹಿಂದೂ ಧರ್ಮದ ಸುಧಾರಿತ ರೂಪವೆಂದು ಪರಿಗಣಿಸಲ್ಪಟ್ಟ ಆರ್ಯ ಸಮಾಜದ ದೀಕ್ಷೆಯನ್ನೂ ಪಡೆದಿರುವ ಹರ್ಯಾಣ ರಾಜ್ಯವನ್ನು ನೋಡಿ. ಅಥವಾ ಅದರ ಅಕ್ಕ ಪಕ್ಕದ ಪಶ್ಚಿಮ ಉತ್ತರ ಪ್ರದೇಶ ಮತ್ತು ಪೂರ್ವ ರಾಜಸ್ಥಾನವನ್ನು ನೋಡಿ. ಇಲ್ಲಿ ಸತ್ತ ಎಮ್ಮೆಗಳ ಚರ್ಮ ಸುಲಿದ ದಲಿತರನ್ನು ಜೀವಂತ ಸುಡಲಾಗುತ್ತದೆ. ಜಾತಿ ಬಿಟ್ಟು ಮದುವೆಯಾದ ಪ್ರೇಮಿಗಳಿಗೆ ಅಲ್ಲಿನ ಜಾತಿ ಪಂಚಾಯ್ತಿಗಳು ನೇಣು ಶಿಕ್ಷೆ ವಿಧಿಸುತ್ತವೆ. ಮಗಳು ಜಾತಿ ಹೊರಗೆ ಮದುವೆಯಾದಳೆಂದು ಪಂಚಾಯ್ತಿ ಬಹಿಷ್ಕಾರಕ್ಕೆ ಹೆದರಿ ತಂದೆ ತಾಯಿ ಸೋದರರೇ ಸೇರಿ ಅವಳನ್ನು ಕೊಲ್ಲುತ್ತಾರೆ. ಸಗೋತ್ರ ವಿವಾಹದ ಫಲವೆಂದು ತಂದೆ ತಾಯಿಗಳಿಂದಲೇ ಮಗುವನ್ನು ಜಾತಿ ಪಂಚಾಯ್ತಿ ಕಿತ್ತುಕೊಳ್ಳುತ್ತದೆ. ಇತ್ತೀಚೆಗೆ ದಲಿತ ಕುಟುಂಬವೊಂದು ತನ್ನ ಮಾತು ಕೇಳದ ದಲಿತ ಮಹಿಳೆಯನ್ನು ಬೆತ್ತಲೆ ಮೆರವಣಿಗೆ ಮಾಡಿದೆ. ಕ್ಷತ್ರಿಯರಿಂದ ಸತಿ ದೇವಸ್ಥಾನಗಳ ನಿರ್ಮಾಣ ಮತ್ತು ಅಲ್ಲಿ ಸತಿ ಪದ್ಧತಿಯ ಧಾರ್ಮಿಕ ವೈಭವೀಕರಣದ ಆಚರಣೆಗಳು ನಡೆಯುತ್ತಲೇ ಇದೆ. ಇದೆಲ್ಲದರ ವಿರುದ್ಧ ಅಲ್ಲಿ ಯಾರಿಂದಲೂ– ಎಲ್ಲ ರೀತಿಯ ಶೋಷಣೆಗಳ ವಿರುದ್ಧವೂ ಗುಟುರು ಹಾಕುವ ಕ್ರಾಂತಿಕಾರಿ ರಾಜಕೀಯ ಪಕ್ಷಗಳೂ ಸೇರಿದಂತೆ– ಸೊಲ್ಲೇ ಇಲ್ಲ. ಹೊರಗಿನಿಂದ ಮಾಧ್ಯಮಗಳು ಗಲಾಟೆ ಮಾಡಿದಾಗಲೇ ಪೋಲೀಸು, ನ್ಯಾಯಾಂಗಗಳ ಮಧ್ಯ ಪ್ರವೇಶ ಅಲ್ಲಿ. ಆದರೂ ಅವು ಮುಂದುವರೆದ ರಾಜ್ಯಗಳು ಮತ್ತು ಬಿಹಾರ ಮಾತ್ರ ಸದಾ ಹಿಂದುಳಿದ ಅನಾಗರಿಕ ರಾಜ್ಯ! ಇದು ನಮ್ಮ ನಾಗರಿಕತೆ– ಅನಾಗರಿಕತೆಗಳ ಕಲ್ಪನೆ!!

ವಿಜ್ಞಾನ– ತಂತ್ರಜ್ಞಾನಗಳನ್ನು ಆಧರಿಸಿದ ಆಧುನಿಕ ನಾಗರೀಕತೆ ನಮ್ಮನ್ನು ಪ್ರಭಾವಿಸಿರುವುದು ನಮ್ಮ ಬದುಕಿನ ಹೊರಕವಚದ ನೆಲೆಯಲ್ಲಿ ಮಾತ್ರವೆಂದು ತೋರುತ್ತದೆ. ಜಾತಿ ಎಂಬುದು ಸುಳ್ಳು ಮತ್ತು ಮೋಸ ಎಂದು ಅನೇಕ ದೃಷ್ಟಾಂತಗಳ ಮೂಲಕ (ನಮ್ಮ ಕಾಲದ ದೊಡ್ಡ ಉದಾಹರಣೆ, ಡಾ॥ ಅಂಬೇಡ್ಕರರೇ ಆಗಿದ್ದಾರೆ) ಸಾಬೀತಾಗಿದ್ದರೂ, ಅದು ನಮ್ಮ ಬಹುಸಂಖ್ಯಾತ ಜನರ ಮನಸ್ಸಿನಿಂದ ತೊಲಗಿಲ್ಲ. ಆದರೂ ನಮ್ಮನ್ನು ನಾವು ಆಧುನಿಕರು

ಎಂದು ಕರೆದುಕೊಳ್ಳುತ್ತೇವೆ! ಜಾತಿಯು ಸಾಮಾಜಿಕ ಶ್ರೇಣೀಕರಣವಾಗಿ, ಸಾಂಸ್ಕೃತಿಕ ಪ್ರತ್ಯೇಕತೆಯಾಗಿ, ಮಾನಸಿಕ ಪ್ರವೃತ್ತಿಯಾಗಿ, ಕೊನೆಗೆ ಮಾನವ ಶಾಸ್ತ್ರೀಯ ಲಕ್ಷಣವಾಗಿಯೂ ನಮ್ಮನ್ನು ಒಂದು ಸಮಾಜವಾಗಿ ಹಲವು ನೆಲೆಗಳಲ್ಲಿ ಒಡೆದಿಟ್ಟಿದೆ. ಇದರಿಂದ ಆಗುತ್ತಿರುವ ರಾಷ್ಟ್ರೀಯ ಹಾನಿ ಹಲವು ಆಯಾಮಗಳದ್ದು– ಭ್ರಷ್ಟಾಚಾರ, ಅದಕ್ಷತೆ, ಪ್ರತಿಭಾ ಪಲಾಯನಗಳಿಂದಾಗುತ್ತಿರುವ ಹಾನಿಗಿಂತ ಬಹು ಹೆಚ್ಚಿನದು; ರಾಷ್ಟ್ರದ್ರೋಹಕ್ಕೆ ಸಮನಾದದ್ದು. ಹಾಗಾಗಿಯೇ, ಇದೆಲ್ಲವನ್ನು ಪರಿಗಣಿಸಿಯೇ ರಚನಾತ್ಮಕ ರಾಜಕಾರಣ ತನ್ನ ತಾತ್ವಿಕತೆಯನ್ನು ಕಟ್ಟಿಕೊಳ್ಳಬೇಕೆಂಬುದು, ಮುಖ್ಯವಾಗಿ ಸಮಾಜವಾದಿಗಳ ವಾದವಾಗಿತ್ತು. ಆದರೆ ವರ್ಗವಾದಿಗಳಾದ ಕಮ್ಯುನಿಸ್ಟರು ತಂತ್ರಜ್ಞಾನ ಜಾತಿಯನ್ನು ದುರ್ಬಲಗೊಳಿಸಿ ನಾಶ ಮಾಡುತ್ತದೆ ಎಂದು ನಂಬಿಯೇ ಈವರೆಗೆ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಈ ಚಳುವಳಿಯ ಬಹುತೇಕ ನಾಯಕರೆಲ್ಲ ಜಾತಿ ವ್ಯವಸ್ಥೆಯ ಲಾಭ ಪಡೆದ ಮತ್ತು ಅದರ ಆಘಾತ– ಅವಮಾನಗಳನ್ನು ಅನುಭವಿಸದಿದ್ದ ಮೇಲ್ಜಾತಿಗಳಿಗೇ ಸೇರಿದ್ದುದೂ, ಈ ಅರ್ಥ ಕುರುಡಿಗೆ ಕಾರಣವಾಗಿರಬಹುದು. ಅಲ್ಲದೆ ಮಾರ್ಕ್ಸ್‌ವಾದದ ತರ್ಕವನ್ನು ಅರ್ಥ ಮಾಡಿಕೊಳ್ಳಲು ಅಮೂರ್ತ ಚಿಂತನೆಯ ಬಲವೂ ಬೇಕಾಗಿತ್ತಾದ್ದರಿಂದ, ಮೊದಲಲ್ಲಿ ಹೆಚ್ಚಾಗಿ ಈ ಕೌಶಲ್ಯ ಪಡೆದ ಬ್ರಾಹ್ಮಣರೇ ಕಮ್ಯುನಿಸ್ಟ್ ತತ್ವಕ್ಕೆ ಆಕರ್ಷಿತರಾಗಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಕರ್ನಾಟಕದ್ದೇ ಉದಾಹರಣೆ ಕೊಡುವುದಾದರೆ, ಇತ್ತೀಚಿನವರೆಗೆ CPI ಎಂದರೆ Communist party of Iyengars ಎಂದೂ, CPM ಎಂದರೆ Communist party of Madhvas ಎಂದೂ ತಮಾಷೆ ಮಾಡುವಷ್ಟು ಅವು ಜಾತಿನಿಷ್ಠ ಗುಂಪುಗಳಾಗಿದ್ದವು! ನಮ್ಮ ಸರ್ವೋದಯ ಚಳುವಳಿ ಪೂರ್ಣವಾಗಿ ಅಯ್ಯಂಗಾರ್‍ರುಗಳ ಚಳುವಳಿ ಆಗಿದ್ದಂತೆ! ಸರ್ವೋದಯದ ಅಯ್ಯಂಗಾರ್‍ರುಗಳಿಗೆ ಜಾತಿ ಕೆಟ್ಟದು, ನಮ್ಮ ಪೂರ್ವಿಕರು ಅನ್ಯಾಯ ಮಾಡುತ್ತ ಬಂದಿದ್ದಾರೆ ಎಂಬ ಅರಿವಾದರೂ ಇತ್ತು. ಹಾಗಾಗಿಯೇ ಅವರಲ್ಲಿ ಬಹುಜನರು ತಮ್ಮ ಮಿತಿಗಳಲ್ಲೇ ಹಲವು ಬಗೆಯ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಕಮ್ಯುನಿಸ್ಟರಾದರೋ ತಾವು ರೂಪಿಸುವ ವರ್ಗ ಹೋರಾಟದಲ್ಲಿ ಜಾತಿ ಸುಟ್ಟು ಭಸ್ಮವಾಗುವುದೆಂದು ಭಾವಿಸಿ, ಯಾವುದೇ ಎಗ್ಗಿಲ್ಲದೆ ಮೇಲ್ಜಾತಿ ನಾಯಕತ್ವದಲ್ಲೇ ತಮ್ಮ ಪಕ್ಷವನ್ನು ಕಟ್ಟುತ್ತಾ ಹೋದರು. ದಕ್ಷಿಣದಲ್ಲಿ ಆ ಪಕ್ಷಕ್ಕೆ ದೊರೆತ ಎ.ಕೆ. ಗೋಪಾಲನ್ ಅಥವಾ ಪಿ. ಸುಂದರಯ್ಯನವರಂತಹ ಶೂದ್ರ ನಾಯಕತ್ವವೂ, ೧೯೩೦ರ ದಶಕದಲ್ಲಿ ಮಾರ್ಕ್ಸ್‌ವಾದದ ಅಮಲಲ್ಲಿದ್ದ ಜೆ.ಪಿ.ಯವರನ್ನು ಯಾಮಾರಿಸಿ, 'ಐಕ್ಯರಂಗ' ಎಂಬ ನಾಟಕದ ಮೂಲಕ ಸಮಾಜವಾದಿ ಪಕ್ಷದಿಂದ ಹಾರಿಸಿಕೊಂಡು ಬಂದುದೇ ಆಗಿತ್ತು. ಆದರೆ ಅದು ಪ್ರಬಲವಿದ್ದ ಪೂರ್ವ ಭಾರತದಲ್ಲಿ ಈಗಲೂ ಬ್ರಾಹ್ಮಣರು ಹಾಗೂ ಕಾಯಸ್ಥರದೇ ಕಾರುಬಾರು. ಬುಡಕಟ್ಟು ರಾಜ್ಯವಾದ ತ್ರಿಪುರದಲ್ಲಿಯೂ ಇತ್ತೀಚಿನವರೆಗೆ ಮುಖ್ಯಮಂತ್ರಿ ಬ್ರಾಹ್ಮಣರೇ ಆಗಿದ್ದರೆಂದರೆ?

ಹಾಗಾಗಿಯೇ, ೭೦ರ ದಶಕದಲ್ಲಿ ಪಕ್ಷದೊಳಗಿನ ಕೆಳಜಾತಿಗಳ ಬಂಡಾಯವೇ ಆಗಿ ಮಾರ್ಕ್ಸಿಸ್ಟ್– ಲೆನಿನಿಸ್ಟ್ ಪಕ್ಷದ ಹೆಸರಲ್ಲಿ ನಕ್ಸಲೈಟ್ ಚಳುವಳಿ ಆರಂಭವಾದಾಗ, ಬಂಗಾಳ ಹಾಗೂ ಕೇರಳಗಳಲ್ಲಿ ಕಮ್ಯುನಿಸ್ಟ್ ಸರ್ಕಾರಗಳೇ ಅದನ್ನು ದಮನ ಮಾಡಿದವು. ನಂಬೂದರಿಪಾದರ ನಂತರ ಕೇರಳದಲ್ಲಿ ಮೂಡಿದ ಶೂದ್ರ ನಾಯಕತ್ವವೂ, ಗೌರಿ ಅಮ್ಮರಂತಹ ದಲಿತ ಜಾತಿಯ ಹಿರಿಯ ನಾಯಕಿಯನ್ನು ಮುಖ್ಯಮಂತ್ರಿ ಮಾಡಲು ನಿರಾಕರಿಸಿತು. ಪೋಲೀಸರ ಲಾಠಿಗಳಿಗೇನಾದರೂ ಸಂತಾನ ಶಕ್ತಿಯಿದ್ದರೆ, ನಾನು ಹತ್ತಾರು ಬಾರಿ ಗರ್ಭ ಧರಿಸಬೇಕಿತ್ತು ಎಂದು ತಾವು ಪಕ್ಷ ಕಟ್ಟಲು ನಡೆಸಿದ ಹೋರಾಟದಲ್ಲಿ ಅನುಭವಿಸಿದ ಅಮಾನುಷ ಕ್ರೌರ್ಯಗಳನ್ನು ಮಾರ್ಮಿಕವಾಗಿ ಹೇಳಿಕೊಂಡಿರುವ ಗೌರಿ, ಪಕ್ಷದ ಶಿಸ್ತಿನ ಹೆಸರಲ್ಲಿ ನೀಡಿದ ಕಿರುಕುಳ ತಾಳಲಾರದೆ ಪಕ್ಷ ಬಿಡಬೇಕಾಯಿತು. ಇಂದು ಕೇರಳದಲ್ಲಿ ಯಾವ ರಾಜ್ಯದಲ್ಲೂ ಇರದಷ್ಟು ಜಾತಿ ಆಧಾರಿತ ಪಕ್ಷಗಳಿದ್ದರೆ ಹಾಗೂ ಅವುಗಳ ಜಾತಿವಾದಿ ರಾಜಕಾರಣವನ್ನೊಪ್ಪಿಕೊಂಡೇ ಕಮ್ಯುನಿಸ್ಟರು ಅಧಿಕಾರ ನಡೆಸುವಂತಾಗಿದ್ದರೆ, ಅದಕ್ಕೆ ಜಾತಿ ವ್ಯವಸ್ಥೆ ಕುರಿತ ಕಮ್ಯುನಿಸ್ಟರ 'ಶಿಸ್ತುಬದ್ಧ' ಕುರುಡೇ ಕಾರಣವಾಗಿದೆ! ಆದರೆ ಈಚಿನ ವರ್ಷಗಳಲ್ಲಿ ಅವರಿಗೆ ಈ ತಪ್ಪಿನ ಅರಿವಾದಂತಿದೆ. ಅವರು ಈಗ ಹಿಂದುಳಿದ ಜಾತಿಗಳಿಗೂ ಮೀಸಲಾತಿ ವ್ಯಾಪ್ತಿಯನ್ನು ವಿಸ್ತರಿಸುವುದರ ಪ್ರಬಲ ಪ್ರತಿಪಾದಕರಾಗಿ ಪರಿವರ್ತಿತರಾಗಿದ್ದಾರೆ!

ಎರಡು ವಾರಗಳ ಹಿಂದೆ ರೇಷ್ಮೆಯವರು ಕಮ್ಯುನಿಸ್ಟ್ ಪಕ್ಷಗಳ ನಾಯಕತ್ವದ ಜಾತಿ ಸ್ವರೂಪದ ಬಗ್ಗೆ ಬರೆದಾಗ, ನಾನು ಅದನ್ನು ಇದೆಲ್ಲ ಗೊತ್ತಿಲ್ಲದೆಯೇ ಟೀಕಿಸಲಿಲ್ಲ! ಆದರೆ ನನ್ನ ಟೀಕೆ, ರೇಷ್ಮೆಯವರು ಕಮ್ಯುನಿಸ್ಟರ ಅಂಡಿನ ಮೇಲೆ ಹೊಡೆದು ಅವರ ಹಲ್ಲುಗಳನ್ನು ಉದುರಿಸಲು ಹೊರಟಿರುವ ವಿಚಿತ್ರ ಪ್ರಯತ್ನದ ಬಗೆಗಷ್ಟೆ! ನಿಮಗೆ ಪರಮಾಣು ಒಪ್ಪಂದ ಕುರಿತ ಕಮ್ಯುನಿಸ್ಟರ ನಿಲುವು ತಪ್ಪೆನಿಸಿದ್ದರೆ, ಏಕೆ ತಪ್ಪು ಎಂದು ಹೇಳಿ ಆ ನೆಲೆಯಲ್ಲಿ ಅವರನ್ನು ಖಂಡಿಸಿ. ಅದು ಬಿಟ್ಟು ಇದಕ್ಕೆ ಸಂಬಂಧವಿಲ್ಲದ ಜಾತಿ ಪ್ರಶ್ನೆಯನ್ನೆತ್ತಿಕೊಂಡು ಟೀಕಿಸಹೊರಡುವುದು ಅಸಂಗತವೆನಿಸುವುದಲ್ಲವೇ? ಏನೂ ಕಾರಣ ಸಿಗದವರು ಜಾತಿ ಎತ್ತಿಕೊಂಡರು ಎಂದೆನ್ನಿಸುವ ಹಾಗಾಗಿ, ಟೀಕೆ ಕೂಡಾ ವಿಶ್ವಾಸಾರ್ಹತೆ ಕಳೆದುಕೊಳ್ಳುವುದಲ್ಲವೇ? ಜೊತೆಗೆ, ನಾವು ರಾಜಕೀಯ ವಿಶ್ಲೇಷಕರೆನ್ನಿಸಿಕೊಂಡವರು ಇನ್ನೆರೆಡು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು ಎಂದು ನನಗನ್ನಿಸುತ್ತದೆ. ಇಂದಿನ ರಾಜಕೀಯ ಸಂದರ್ಭದಲ್ಲಿ ಸ್ವಲ್ಪವಾದರೂ ರಾಜಕೀಯ ಮರ್ಯಾದೆ ಉಳಿಸಿಕೊಂಡಿರುವವರು, ಭ್ರಷ್ಟತೆಯ ಕಳಂಕವಿಲ್ಲದವರು ಹಾಗೂ ಇದ್ದುದರಲ್ಲಿ ಒಂದು ತಾತ್ವಿಕತೆಗೆ ಬದ್ಧವಾಗಿ– ಕೆಲವೊಮ್ಮೆ ಅದೆಷ್ಟೋ ಹಳತಾಗಿದೆ ಎನ್ನಿಸಿದರೂ ಮತ್ತು ನಂದಿಗ್ರಾಮದಲ್ಲಿನ ಉಲ್ಟಾ ಪ್ರಯತ್ನದ ಹೊರತಾಗಿಯೂ– ರಾಜಕಾರಣ ಮಾಡುವ ಪ್ರಾಮಾಣಿಕ ಯತ್ನವನ್ನು ಮುಂದುವರೆಸಿರುವವರು ಕಮ್ಯುನಿಸ್ಟರು ಮಾತ್ರವಲ್ಲವೇ? ಈ ಕಾರಣಗಳಿಂದಲಾದರೂ ನಾವು ಅವರನ್ನು ಟೀಕಿಸುವಾಗ ಇನ್ನಷ್ಟು ಎಚ್ಚರ ಹಾಗೂ ಜವಾಬ್ದಾರಿ ಅಗತ್ಯವಲ್ಲವೇ?

ಸೆಪ್ಟೆಂಬರ್ ೨೮, ೨೦೦೭

ಕನ್ನಡ ಸಾಹಿತ್ಯದ ಚಿನ್ನದ ಪುಟಗಳು

ಇದೊಂದು ವಿನೂತನ ಪ್ರಯೋಗ. 'ವಿಕ್ರಾಂತ ಕರ್ನಾಟಕ'ದ ಈ ಸಂಚಿಕೆಯಿಂದ ಆರಂಭವಾಗಿರುವ ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಹತ್ತು ಅತ್ಯುತ್ತಮಗಳನ್ನು ಆಯುವ 'ಸುವರ್ಣ ಕರ್ನಾಟಕದ ಸುವರ್ಣ ಪುಟಗಳು' ಲೇಖನ ಮಾಲೆಗೆ ಸುವರ್ಣ ಕರ್ನಾಟಕಾಚರಣೆ ಒಂದು ನೆಪವಷ್ಟೆ. ವಿಪುಲವಾಗಿ ಬೆಳೆದಿರುವ ಹೊಸಗನ್ನಡ ಸಾಹಿತ್ಯದಿಂದ ಹೀಗೆ ಹತ್ತತ್ತನ್ನು ಆಯ್ಕೆ ಮಾಡುವುದು ಕಷ್ಟದ ಕೆಲಸವೇ ಸರಿ. ಇದು ಅನಗತ್ಯದ ಕೆಲಸ ಎನ್ನುವವರೂ ಇದ್ದಾರೆ. ಅಷ್ಟೇ ಏಕೆ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಲೇಖನ ಮಾಲೆಯ ಮೊದಲ ಲೇಖನಕ್ಕಾಗಿ ಹತ್ತು ಅತ್ಯುತ್ತಮ ಪದ್ಯಗಳನ್ನು ಆಯ್ಕೆ ಮಾಡಿರುವ ಕನ್ನಡದ ಹತ್ತು ಅತ್ಯುತ್ತಮ ವಿಮರ್ಶನ ಪ್ರತಿಭೆಗಳಲ್ಲಿ ಒಬ್ಬರಾದ (ಖಂಡಿತ ನಾನು ಈ ಮೂಲಕ ಈ ಲೇಖನ ಮಾಲೆಯ ಹತ್ತು ಅತ್ಯುತ್ತಮ ವಿಮರ್ಶೆಗಳ ಆಯ್ಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ!) ರಾಜೇಂದ್ರ ಚೆನ್ನಿಯವರು ಆತಂಕಪಟ್ಟಿರುವಂತೆ, ಇದನ್ನು ಹೊಸ ಮಾಧ್ಯಮ ಸಂಸ್ಕೃತಿಯ 'ಟಾಪ್ ಟೆನ್' ವಾಣಿಜ್ಯ ಮಾದರಿಯು ಸಾಹಿತ್ಯವನ್ನೂ ಪ್ರವೇಶಿಸಿರುವುದಕ್ಕೆ ಸಾಕ್ಷಿಯಾಗಿ ನೋಡುವವರಿದ್ದರೆ ಆಶ್ಚರ್ಯವಿಲ್ಲ! ಹಾಗೇ ಈ ಲೇಖನ ಮಾಲೆಯ ಇನ್ನೊರ್ವ ಲೇಖಕರು ಅನುಮಾನಿಸಿರುವಂತೆ, ಇದೊಂದು ಉದ್ಧಟತನದ ಕೆಲಸವೆಂದು ಭಾವಿಸುವವರೂ ಇರಬಹುದು. ಆದರೆ ಇದು ಎಸ್.ಎಂ.ಎಸ್. ಅಥವಾ ಟಿ.ಆರ್.ಪಿ. ಆಧಾರಿತ ಆಯ್ಕೆಯಾಗಿರದೆ, ಸಂಬಂಧಪಟ್ಟ ಕ್ಷೇತ್ರಗಳ ಪರಿಣತರು ಮಾಡಿರುವ ಆಯ್ಕೆಯಾಗಿರುವುದರಿಂದ; ಇಲ್ಲಿ ಮಾಡಲಾಗಿರುವ ಆಯ್ಕೆ ಅಂತಿಮ ಅಥವಾ ಆತ್ಯಂತಿಕ ಎಂದು ತಪ್ಪಾಗಿ ಭಾವಿಸಿ ಭಯಪಡುವವರಷ್ಟೇ, ಈ ಪ್ರಯೋಗವನ್ನು ಮೆಚ್ಚದೇ ಹೋಗಬಹುದು ಎಂಬುದು ನನ್ನ ಭಾವನೆ!

ಕರ್ನಾಟಕದ ಬಂಗಾರದ ಹಬ್ಬದ ಸಂದರ್ಭದಲ್ಲಿ ಕನ್ನಡ ಸಾಹಿತ್ಯವನ್ನೊಮ್ಮೆ ತಿರುಗಿ ನೋಡುವ ನಮ್ಮ ಪ್ರಯತ್ನ ವಿನೂತನವಾಗಿರಲಿ, ಈವರೆಗೆ ಅನುಸರಿಸಲಾಗಿರುವ

ಸಮೀಕ್ಷಾತ್ಮಕ ಪ್ರಯೋಗಗಳಿಂದ ವಿಭಿನ್ನವಾಗಿರಲಿ ಎಂಬ ಆಶಯದಿಂದ ನಾನು ಈ 'ಅತ್ಯುತ್ತಮ ಹತ್ತು' ಆಯ್ಕೆಗಳ ವಿಧಾನವನ್ನು ರೂಪಿಸಿಕೊಂಡದ್ದು. ಇದು ಕೂಡಾ ಒಂದು ಕಾಲಘಟ್ಟದ ಸಾಹಿತ್ಯದ ಮೌಲ್ಯಮಾಪನದ ಒಂದು ವಿಶ್ವಾಸಾರ್ಹ ಮಾನದಂಡ ಆಗಬಹುದು ಎಂಬುದು, ಈ ಲೇಖನ ಮಾಲೆಯನ್ನು ಓದುತ್ತಾ ಹೋದಂತೆ ಓದುಗರಿಗೆ ಮನವರಿಕೆಯಾಗಬಹುದು. ನಮ್ಮ ಪರಿಣತರು ತಮ್ಮ ಆಯ್ಕೆಗಳನ್ನು ಸಮರ್ಥಿಸುವ ಟಿಪ್ಪಣಿಗಳನ್ನೂ ಬರೆಯುತ್ತಿರುವುದರಿಂದ; ಇದು ಶುದ್ಧ ಲೆಕ್ಕಾಚಾರದಲ್ಲಿ ಕಳೆದ ಐವತ್ತು ವರ್ಷಗಳದ್ದಲ್ಲದಿದ್ದರೂ, ಆಧುನಿಕವೆಂದು ಕರೆಯಬಹುದಾದ ಕನ್ನಡ ಸಾಹಿತ್ಯದ ಪರೋಕ್ಷ ವಿಮರ್ಶೆಯೂ ಆಗುವುದನ್ನು ಓದುಗರು ಗಮನಿಸಬಹುದು. ಇಂತಹ ವಿಶಿಷ್ಟ ಹಾಗೂ ಅಸಾಂಪ್ರದಾಯಿಕ ಆಯ್ಕೆ ವಿಧಾನದಲ್ಲೇ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಈವರೆಗೆ ಕಾಣದಂತಹ ಒಳನೋಟಗಳೂ ಮೂಡಿ ಬರಬಹುದೆಂಬ ನಿರೀಕ್ಷೆ ನಮ್ಮದು. ರಾಜೇಂದ್ರ ಚೆನ್ನಿಯವರ ಲೇಖನದಿಂದಲೇ ಈ ಒಳನೋಟಗಳ ಸರಮಾಲೆ ಆರಂಭವಾದಂತಿದೆ.

ಹಾಗೇ ವಿವಾದಗಳ ಸರಮಾಲೆಯೂ ಆರಂಭವಾಗಿರಬಹುದು! ಕನ್ನಡದ ಹತ್ತು ಅತ್ಯುತ್ತಮ ಪದ್ಯಗಳಲ್ಲಿ ಜಿ.ಎಸ್.ಎಸ್., ಕಣವಿ, ತಿರುಮಲೇಶ್ ಹೋಗಲಿ, ಕುವೆಂಪು, ಪು.ತಿ.ನ., ಕೆ.ಎಸ್.ನ.ರ ಪದ್ಯಗಳೂ ಇಲ್ಲ ಎಂದರೆ? ಆದರೆ ನಿಜವಾದ ವಿಮರ್ಶೆಯ ಜಾಯಮಾನವೇ ಹಾಗೆ. ಅದು ಜನಪ್ರಿಯ ಗ್ರಹಿಕೆಗಳ ದಾಕ್ಷಿಣ್ಯಕ್ಕೆ ಸಿಕ್ಕದೆ, ತನ್ನದೇ ತಿಳುವಳಿಕೆಯ ಆತ್ಮವಿಶ್ವಾಸದೊಂದಿಗೆ ಸಾಹಿತ್ಯ ಲೋಕದ ನಿಜಗಳನ್ನು ಸಾಧಿಸುತ್ತಾ ಹೋಗುತ್ತದೆ. ಪ್ರತಿಭೆಯ ಈ ದಿಟ್ಟತನವೇ ಸಾಹಿತ್ಯ ಪ್ರವಚನಕ್ಕೂ, ಸಾಹಿತ್ಯ ವಿಮರ್ಶೆಗೂ ಇರುವ ಮುಖ್ಯ ವ್ಯತ್ಯಾಸ. ಅದು ಸ್ಥಾಪಿತ ಅಭಿಪ್ರಾಯಗಳನ್ನು ಪ್ರಶ್ನೆ ಮಾಡುತ್ತಲೇ, ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೂಲಕ ಸಾಹಿತ್ಯ ಅಧ್ಯಯನದ ದಿಗಂತಗಳನ್ನು ವಿಸ್ತರಿಸುತ್ತಾ ಹೋಗುತ್ತದೆ. ನೀವು ಒಪ್ಪಬಹುದು, ಬಿಡಬಹುದು; ವಿಮರ್ಶೆ ತನ್ನ ದಾರಿಯನ್ನು ತಾನೇ ಕಂಡುಕೊಂಡು ಆ ದಾರಿಯ ಅನುಭವದ ಬೆಳಕಲ್ಲಿ ಕೃತಿಯ ಮೌಲ್ಯಮಾಪನ ಮಾಡುತ್ತ, ಕೃತಿಯನ್ನು ಬೆಳಸುತ್ತ ಹೋಗುತ್ತದೆ.

ವಿಮರ್ಶೆಗೆ ಕೃತಿಗೆ ಹೊರತಾದ ಸ್ವಾಯತ್ತತೆ ಎಂಬುದಿದೆಯೇ ಎಂಬುದು ಬಹು ಚರ್ಚಿತ ಪ್ರಶ್ನೆ. ಆದರೆ, ವಿಮರ್ಶೆ ಕೃತಿ ವಿಮರ್ಶೆಯಾಗಷ್ಟೇ ಅಲ್ಲ; ಒಂದು ಕಾಲ ಸಂದರ್ಭದ ಸಮಷ್ಠಿ ವಿಮರ್ಶೆಯೂ ಆಗಿ, ಮನುಷ್ಯ ಪ್ರಜ್ಞೆಯ ಆಯಾಮಗಳನ್ನು ವಿಸ್ತರಿಸುತ್ತಾ ಹೋಗುವ ಮೂಲಕವೇ ಕೃತಿಯ ಅರ್ಥ ಸಂಪತ್ತನ್ನು ಅನ್ವೇಷಿಸುವ ಪ್ರಯತ್ನವೂ ಆಗುತ್ತಿರುವುದನ್ನು ನಾವು ಆಧುನಿಕ ಸಾಹಿತ್ಯ ವಿಮರ್ಶೆಯುದ್ದಕ್ಕೂ ಗಮನಿಸುತ್ತಿದ್ದೇವೆ. ಹೀಗಾಗಿ ಯಾವುದೇ ಒಂದು ಸಾಹಿತ್ಯ ಪ್ರಕಾರದಲ್ಲಿ ಹತ್ತು ಅತ್ಯುತ್ತಮಗಳನ್ನು ಆಯುವಾಗ, ಲೇಖಕರು ಮುಖ್ಯವಾಗದೆ, ಆಯಾ ಪ್ರಕಾರದ ಒಟ್ಟಾರೆ ಸಾಹಿತ್ಯವೇ ವಿಮರ್ಶೆಯ ಕೇಂದ್ರ ಕಳಕಳಿಯಾಗುತ್ತದೆ. ಉದಾಹರಣೆಗೆ, ಕಾವ್ಯ ಕುರಿತಂತೆ ಚೆನ್ನಿಯವರನ್ನು ಕನ್ನಡದ ಅತ್ಯುತ್ತಮ ಹತ್ತು ಕವನಗಳಿಗೆ ಬದಲಾಗಿ ಕವಿಗಳನ್ನು ಆಯಿರಿ ಎಂದು ಹೇಳಿದ್ದರೆ, ಅದು ಅವರಲ್ಲಿ ಬೇರೆಯೇ ವಿಮರ್ಶಾ

ತರಂಗಗಳನ್ನೆಬ್ಬಿಸಿ ಅವರ ಪಟ್ಟಿಯೇ ಬೇರೆಯಾಗುತ್ತಿತ್ತೇನೋ! ಅಥವಾ ಕನ್ನಡ ಕಾವ್ಯದ ಎಲ್ಲ ಪಂಥಗಳನ್ನೂ ಪ್ರತಿನಿಧಿಸುವಂತಹ ಹತ್ತು ಅತ್ಯುತ್ತಮ ಪದ್ಯಗಳನ್ನು ಆರಿಸಿರಿ ಎಂದು ಹೇಳಿದ್ದರೂ (ಅದನ್ನು ಚೆನ್ನಿ ಮಾಡುತ್ತಿದ್ದರೋ ಇಲ್ಲವೋ ತಿಳಿಯದು!), ಪಟ್ಟಿ ಸಂಪೂರ್ಣ ಭಿನ್ನವಾಗಿರುತ್ತಿತ್ತು. ಅಷ್ಟೇ ಅಲ್ಲ, ಚೆನ್ನಿಯವರನ್ನು ಬಿಟ್ಟು ಬೇರೆಯವರು ಈ ಆಯ್ಕೆ ಮಾಡಿದ್ದಲ್ಲಿ, ಪಟ್ಟಿ ಬೇರೆಯಾಗಿಯೇ ಇರುತ್ತಿತ್ತು ಎಂಬುದನ್ನು ನಾನು ಪ್ರಾಯೋಗಿಕವಾಗಿಯೇ ಕಂಡುಕೊಂಡೆ. ನಾನು ಸುಮ್ಮನೆ, ಇತರ ಒಂದಿಬ್ಬರು ವಿಮರ್ಶಕ ಮಿತ್ರರಿಗೆ ಅವರ ಹತ್ತನ್ನು ಆಯಲು ಹೇಳಿದೆ. ಅವರು ಸಿದ್ಧ ಪಡಿಸಿದ ಪಟ್ಟಿಗಳಲ್ಲಿ ಚೆನ್ನಿಯವರ ಪಟ್ಟಿಯ ಅರ್ಧಕ್ಕರ್ಧ ಹೆಸರುಗಳು ಮಾಯವಾಗಿದ್ದವು!

ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸಾಹಿತ್ಯ ವಿಮರ್ಶೆ ಎಷ್ಟೇ ತಾತ್ವಿಕವಾಗಿ ಬೆಳೆಯುತ್ತಿದ್ದರೂ, ಅದರಲ್ಲಿ ವ್ಯಕ್ತಿನಿಷ್ಠ ನೋಟವೂ ಒಂದು ಪ್ರಧಾನ ಆಯಾಮವಾಗಿ ಕ್ರಿಯಾಶೀಲವಾಗಿರುತ್ತದೆ ಎಂಬುದನ್ನು ನಾವು ಅಲ್ಲಗೆಳೆಯಲಾಗುವುದಿಲ್ಲ ಎಂಬುದನ್ನು ಸೂಚಿಸಲು. ಏಕೆಂದರೆ, ಸಾಹಿತ್ಯ ಅಧ್ಯಯನವೆಂಬುದೇ ಒಂದು ರೀತಿಯಲ್ಲಿ ಮಾನವನ ಅಂತರಂಗದ ಚೈತನ್ಯಶೀಲತೆಯ ಒಂದು ಅಧ್ಯಯನವೂ ಆಗಿರುವುದರಿಂದ, ವಿಮರ್ಶಕನೂ ಒಬ್ಬ ವ್ಯಕ್ತಿಯಾಗಿ ಅದಕ್ಕೆ ಒಂದು ವೈಯುಕ್ತಿಕ ನೆಲೆಯಲ್ಲೂ ಪ್ರತಿಕ್ರಿಯಿಸುತ್ತಲೇ, ತನ್ನ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುತ್ತಿರುತ್ತಾನೆ. ಆದರೆ ಆ ವಿಮರ್ಶಕನ ವೈಯುಕ್ತಿಕತೆ ಎಷ್ಟರ ಮಟ್ಟಿಗೆ ಸಾಹಿತ್ಯದ ಆಂತರಿಕ ಸ್ವಾಯತ್ತತೆಗೆ ಭಂಗ ಬಾರದಂತೆ ಅದನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದೆ ಎಂಬುದರ ಮೇಲೆ ವಿಮರ್ಶೆಯ ಗುಣಮಟ್ಟ ನಿರ್ಧರಿತವಾಗುತ್ತದೆ. ಚೆನ್ನಿ ಈ ದೃಷ್ಟಿಯಿಂದ, ಗಂಭೀರವಾಗಿ ಬರೆಯಲು ಕೂತಾಗಲೆಲ್ಲ ನಮ್ಮ ಶ್ರೇಷ್ಠ ವಿಮರ್ಶಕರಲ್ಲಿ ಒಬ್ಬರೆನಿಸಿಕೊಂಡಿರುತ್ತಾರೆ.

ಸದ್ಯದ ತಮ್ಮ ಆಯ್ಕೆಯನ್ನು ಚೆನ್ನಿಯವರು ಗಂಭೀರ ಅಧ್ಯಯನ, ವಿವೇಚನೆ ಹಾಗೂ ಔಚಿತ್ಯ ಪ್ರಜ್ಞೆಗಳೊಂದಿಗೆ ಮಾಡಿದ್ದಾರೆಂದು ನಾನು ನಂಬಿದ್ದೇನೆ. ಏಕೆಂದರೆ ಅವರು ಆಯ್ದಿರುವ ಹತ್ತೂ ಪದ್ಯಗಳು, ಈವರೆಗಿನ ಕನ್ನಡ ವಿಮರ್ಶೆ ಒಂದಲ್ಲ ಒಂದು ಕಾಲಘಟ್ಟದಲ್ಲಿ ಒಂದಲ್ಲ ಒಂದು ಕಾರಣಕ್ಕೆ ಶ್ರೇಷ್ಠವೆಂದು ಗುರುತಿಸಿದ ಪದ್ಯಗಳೇ ಆಗಿವೆ. ಚೆನ್ನಿಯವರ ಈ ಪಟ್ಟಿಯಲ್ಲಿ shocking ಎನ್ನುವುದು ಏನಾದರೂ ಇದ್ದರೆ, ಅಂತಹ shock ಇಂದು ಕನ್ನಡ ಸಾಹಿತ್ಯಕ್ಕೆ ಅಗತ್ಯವಾಗಿತ್ತೆಂದೇ ನಾನು ಭಾವಿಸಿದ್ದೇನೆ. ಸಾಮಾಜಿಕ ನ್ಯಾಯ, ಲಿಂಗ ನ್ಯಾಯ, ಪ್ರಾದೇಶಿಕ ನ್ಯಾಯಗಳ ಹೆಸರಲ್ಲಿ ಸಾಹಿತ್ಯ ಲೋಕದ ಪುಢಾರಿಗಳು ರಾಜಕೀಯ ಪುಢಾರಿಗಳ ಸಹಕಾರದೊಂದಿಗೆ ಎಲ್ಲ ಅನ್ಯಾಯಗಳನ್ನು ನಡೆಸಿ, ಸಾಹಿತ್ಯವನ್ನು ವೋಟ್ ಬ್ಯಾಂಕ್ ರಾಜಕಾರಣಕ್ಕೆ ಬಳಸಬಹುದಾದ ಸರಕನ್ನಾಗಿ ಮಾರ್ಪಡಿಸಿದ್ದಾರೆ.

ಇದರ ಇತ್ತೀಚಿನ ಉದಾಹರಣೆ, ರಾಜ್ಯ ಸರ್ಕಾರ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಲು ಮುಂದಾಗಿರುವುದು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸರ್ಕಾರ ತುಳು, ಕೊಂಕಣಿ ಹಾಗೂ ಕೊಡವ ಸಾಹಿತ್ಯ ಅಕಾಡೆಮಿಗಳನ್ನು ಸ್ಥಾಪಿಸಲು ಹೊರಟಾಗ ದೊಡ್ಡ

ವಿವಾದವೇ ಉಂಟಾಯಿತು. ಏಕೆಂದರೆ, ಸರ್ಕಾರದ ಈ ನಿರ್ಧಾರ ಯಾವುದೇ ಭಾಷಾ ಜನಸಮುದಾಯದ ಬೇಡಿಕೆಯನ್ನಾಧರಿಸಿರಲಿಲ್ಲ. ಮೂಲತಃ ಅದು ಆಗ ಅಧಿಕಾರ ರಾಜಕಾರಣದ ನಡುಮಧ್ಯೆ ಇದ್ದ ವೀರಪ್ಪ ಮೊಯ್ಲಿಯವರ ಚುನಾವಣಾ ಕ್ಷೇತ್ರದ ವೋಟ್ ಬ್ಯಾಂಕ್ ರಾಜಕಾರಣವೇ ಆಗಿತ್ತು. ಆಗ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಜಿ.ಎಸ್. ಶಿವರುದ್ರಪ್ಪನವರು, ರಾಜ್ಯ ಸಾಹಿತ್ಯ ಅಕಾಡೆಮಿಯು ಕನ್ನಡ ಸಾಹಿತ್ಯ ಅಕಾಡೆಮಿಯಾಗಿರದೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಆಗಿರುವುದರಿಂದ: ಅವರ ಆಶ್ರಯದಲ್ಲೇ, ಕನ್ನಡ ಸಾಹಿತ್ಯದ ಜೊತೆಯಲ್ಲೇ, ಕನ್ನಡದ ಇತರ ಜೊತೆಗಾರ ಭಾಷೆಗಳ ಸಾಹಿತ್ಯ ಪೋಷಣೆ ನಡೆಯುವುದು ಅವುಗಳ ಗುಣಮಟ್ಟದ ದೃಷ್ಟಿಯಿಂದ ಕೂಡಾ ಒಳ್ಳೆಯದು ಎಂಬ ಸದ್ಭಾವನೆಯಿಂದ, ಈ ಅಕಾಡೆಮಿಗಳ ಸ್ಥಾಪನೆಯನ್ನು ವಿರೋಧಿಸಿದ್ದರು. ಆ ಹೊತ್ತಿಗಾಗಲೇ ಜಿ.ಎಸ್.ಎಸ್. ಯಾರ ಶಿಫಾರ್ಸೂ ಇಲ್ಲದೆ, ತುಳು ಭಾಷೆಯ ಉತ್ತಮ ಕೃತಿಗಳು ಪ್ರಕಟವಾದಲ್ಲಿ, ಅವುಗಳಿಗೂ ಅಕಾಡೆಮಿ ಬಹುಮಾನಗಳನ್ನು ನೀಡುವ ಯೋಜನೆಯನ್ನು ಆರಂಭಿಸಿದ್ದರು. ಆದರೂ, ಅವರನ್ನು ಹಾಗೂ ಅವರೊಂದಿಗೆ ಸಹಮತ ಹೊಂದಿದ್ದವರನ್ನು ಭಾಷಾ ಸಂಕುಚಿತವಾದಿಗಳೆಂದು, ಇಂದು ಬ್ಯಾರಿ ಸಾಹಿತ್ಯ ಅಕಾಡೆಮಿ ಸ್ಥಾಪನೆಯನ್ನು ಬಹುಮುಖಿ ಸಂಸ್ಕೃತಿ ಪೋಷಣೆಯ ಹೆಸರಲ್ಲಿ ಸಮರ್ಥಿಸುತ್ತಿರುವ ಪ್ರಗತಿಪರೇಶ್ವರರೇ ಖಂಡಿಸಿದ್ದರು.

ಆದರೆ ಒಂದು ಅಕಾಡೆಮಿಯ ಅಗತ್ಯವೇಳುವಂತಹ ಮೌಲಿಕ ಸಾಹಿತ್ಯ ನಿರ್ಮಾಣ ಮಾಡುವ ಸೃಷ್ಟಿಶೀಲ ಶಕ್ತಿಯನ್ನು– ಅದರ ಜೊತೆಗೇ ಅದಕ್ಕೆ ಓದಿನ ಮನ್ನಣೆ ನೀಡುವಂತಹ ಜನಸ್ತೋಮವನ್ನೂ– ಒಂದು ಭಾಷೆ ತನ್ನ ಸ್ವಂತ ಶಕ್ತಿಯಿಂದ ರೂಢಿಸಿಕೊಳ್ಳುವ ಮುನ್ನವೇ ಅದಕ್ಕೊಂದು ಅಕಾಡೆಮಿ ವ್ಯವಸ್ಥೆ ಒದಗಿಸುವುದು ಅಕಾಡೆಮಿಯ ಪರಿಕಲ್ಪನೆಯ ಘನತೆಗಷ್ಟೇ ಅಲ್ಲ, ಸಾಹಿತ್ಯದ ಪರಿಕಲ್ಪನೆಯ ಘನತೆಗೂ ಕುಂದುಂಟು ಮಾಡುವಂತಹ ಅಗ್ಗದ ಕ್ರಮವಾಗುವುದಿಲ್ಲವೇ? ಈ ಅಕಾಡೆಮಿಗಳಿಂದಾಗಿ ಈಗ ತುಳು, ಕೊಂಕಣಿ, ಕೊಡವ ಭಾಷೆಗಳಲ್ಲಿ ಎಂತಹ ಸಾಹಿತ್ಯ ಸೃಷ್ಟಿಯಾಗುತ್ತಿದೆ, ಇದಕ್ಕೆ ಎಷ್ಟು ಓದುಗ ವರ್ಗ ಸೃಷ್ಟಿಯಾಗಿದೆ ಹಾಗೂ ಕ್ರಮೇಣ ಎಂತಹ ಸಾಹಿತಿಗಳಿಗೆ ಮನ್ನಣೆ ನೀಡಬೇಕಾಗಿದೆ ಎಂಬುದನ್ನು ಈ ಭಾಷಾ ಸಮುದಾಯಗಳ ಸಾರಸ್ವತ ಲೋಕದ ಜನರೇ ದಿಟ್ಟವಾಗಿ ಹೇಳಬೇಕಿದೆ. ಇದಕ್ಕೆ ಬದಲಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲೇ ಈ ಭಾಷೆಗಳ ಸಾಹಿತಿಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಿ, ಆಯಾ ಭಾಷೆಗಳಲ್ಲಿ ಗಮನಾರ್ಹ ಕೃತಿಗಳು ಪ್ರಕಟವಾದಾಗ ಒಂದು ತೌಲನಿಕ ಚರ್ಚೆಯ ನೆಲೆಯಲ್ಲಿ ಅದರ ಮೌಲ್ಯಮಾಪನ ಮಾಡಿ, ಅವಕ್ಕೆ ಸೂಕ್ತ ಮನ್ನಣೆ ನೀಡುವುದರ ಮೂಲಕ ಆ ಭಾಷಾ ಸಾಹಿತ್ಯಗಳನ್ನು ಇನ್ನಷ್ಟು ಮೌಲಿಕವಾಗಿ ಬೆಳೆಸಬಹುದಿತ್ತಲ್ಲವೇ? ಇನ್ನು ಬ್ಯಾರಿ ಭಾಷೆಯಲ್ಲಿ ಯಾವ ಲಿಪಿಯೊಂದಿಗೆ ಎಂತಹ ಮತ್ತು ಎಷ್ಟು ಸಾಹಿತ್ಯ ಬರುತ್ತಿದೆ ಹಾಗೂ ಅದಕ್ಕೆಂತಹ ಓದುಗ ವರ್ಗವಿದೆ ಎಂಬುದರ ಒಂದು ಸಮೀಕ್ಷೆಯನ್ನೂ ಮಾಡದೆ, ರಾಜಕೀಯ ಒತ್ತಡಕ್ಕೆ ಮಣಿದು ಅದಕ್ಕೊಂದು ಅಕಾಡೆಮಿ

ಸ್ಥಾಪಿಸುವುದನ್ನು ಈಗ ಕನ್ನಡದಲ್ಲಿ ಅತ್ಯುತ್ತಮ ಸಾಹಿತ್ಯ ನಿರ್ಮಿಸುತ್ತಿರುವ ನಮ್ಮ ಬ್ಯಾರಿ ಗೆಳೆಯರು ಹೇಗೆ ಸ್ವಾಗತಿಸುವರೋ ಕಾದು ನೋಡಬೇಕಾಗಿದೆ!

ಹೀಗಾಗಿ, ಇಂತಹ ದಟ್ಟ ಅಸಾಹಿತ್ಯಿಕ ವಾತಾವರಣದಲ್ಲಿ, ಸಾಹಿತ್ಯದಿಂದ ಸಾಹಿತ್ಯದ ಪರಿಮಳದ ಹೊರತಾಗಿ ಇನ್ನೆಲ್ಲಾ 'ಪರಿಮಳ'ಗಳು ಹೊಮ್ಮುವುದು ಸಹಜವೇ ಆಗಿದೆ. ಮಾನವ ಸಹಜ ಸಾಹಿತ್ಯಾಭಿವ್ಯಕ್ತಿಗೆ ತೆರೆದುಕೊಂಡ ಎಷ್ಟೋ ಎಳೆಯರು ಈ 'ಪರಿಮಳ'ಗಳಿಂದ ವಿಚಲಿತರಾಗಿರುವುದೂ ಉಂಟು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಚೆನ್ನಿಯವರು ಸಾಹಿತ್ಯದ ಮೂಲ ಸೆಲೆಗಳಿಗೇ ಕೈ ಹಾಕಿ ಹುಟ್ಟಿಸಿರುವ ಈ shock, ಸದ್ಯದ ಕನ್ನಡ ಸಾಹಿತ್ಯ ಸಂದರ್ಭಕ್ಕೆ ಕೆಟ್ಟದ್ದಕ್ಕಿಂತ ಒಳ್ಳೆಯದನ್ನೇ ಮಾಡುವುದು ಎಂದು ನಾವು ನಂಬಿದ್ದೇವೆ. ಹಾಗೇ ಈ ಲೇಖನ ಮಾಲೆಯ ಮುಂದಿನ ಲೇಖನಗಳು ಕೂಡಾ ಇನ್ನಷ್ಟು ಆಶ್ಚರ್ಯಗಳು ಹಾಗೂ ಕಂಪನಗಳೊಂದಿಗೆ ಮೂಡಿ ಬಂದು, ಕನ್ನಡ ಸಾಹಿತ್ಯ ಲೋಕದ ತತ್ಕಾಲೀನ ಕೊಳೆಗಳನ್ನು ತೊಳೆಯುತ್ತದೆ ಎಂದು ನಾವು ನಿರೀಕ್ಷಿಸಿದ್ದೇವೆ. ಈ ದೃಷ್ಟಿಯಿಂದ ನಮ್ಮ ಈ ಪ್ರಯತ್ನ ಕನ್ನಡ ಸಾಹಿತ್ಯ ಲೋಕದ ಪುನರನಾವರಣದ ಒಂದು ಪ್ರಾಮಾಣಿಕ ಪ್ರಯತ್ನವೇ ಆಗಿದೆ ಎಂಬುದನ್ನು ನಮ್ಮ ಓದುಗರೂ ಒಪ್ಪುತ್ತಾರೆಂಬುದು ನಮ್ಮ ಭಾವನೆ. ಇದಕ್ಕಿಂತ ಹೆಚ್ಚಾಗಿ, ಇದು ನಮ್ಮ ಓದುಗರನ್ನು ಒಳ್ಳೆಯ ಸಾಹಿತ್ಯದ ಓದಿನ ಕಡೆ ಪ್ರೇರೇಪಿಸಿದರೆ, ನಮ್ಮ ಈ ಪ್ರಯತ್ನ ಸಾರ್ಥಕ.

ಸಾಹಿತ್ಯ ಪಂಡಿತರು– ಪರಿಣತಷ್ಟೇ ಅಲ್ಲ, ಸಾಮಾನ್ಯ ಓದುಗರೂ ನಮ್ಮ ಆಯ್ಕೆಗಳನ್ನು ಕುರಿತು ದಿಟ್ಟವಾಗಿ ಆದರೆ ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ಪ್ರತಿಕ್ರಿಯಿಸುವ ಮೂಲಕ ಈ ಒಟ್ಟಾರೆ ಚರ್ಚೆಯಲ್ಲಿ ಭಾಗವಹಿಸಲು ಕೋರುತ್ತೇವೆ.

ಅಕ್ಟೋಬರ್ ೫, ೨೦೦೭

ಇತಿಹಾಸ, ಪುರಾಣ ಹಾಗೂ ಅಶ್ಲೀಲ ರಾಜಕಾರಣ

ಇಪ್ಪತ್ತು– ಇಪ್ಪತ್ತು ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಪಂದ್ಯದ ದಿನ ಕೌಟುಂಬಿಕ ಸಮಾರಂಭವೊಂದಕ್ಕಾಗಿ ಹಾಸನಕ್ಕೆ ಹೋಗಿದ್ದ ನಾನು ಶಿವಮೊಗ್ಗಕ್ಕೆ ವಾಪಸಾಗುತ್ತಿದ್ದೆ. ಕ್ರಿಕೆಟ್ ಅಭಿಮಾನಿಯಾದ ನನಗೆ ಇಪ್ಪತ್ತು– ಇಪ್ಪತ್ತು ಕ್ರಿಕೆಟ್ ಬಗ್ಗೆ ಅಷ್ಟೇನೂ ಉತ್ಸಾಹವಿಲ್ಲದಿದ್ದರೂ, ಭಾರತ ಅಂತಿಮ ಪಂದ್ಯ ಆಡುವ ಸಡಗರದ ಹಿನ್ನೆಲೆಯಲ್ಲಿ ಪಂದ್ಯವನ್ನು ನೋಡಲಾಗದ ಬೇಸರ ಪ್ರಯಾಣದುದ್ದಕ್ಕೂ ಕಾಡುತ್ತಿತ್ತು. ದಾರಿ ಮಧ್ಯೆ ಭದ್ರಾವತಿಯಲ್ಲಿ, ನಮ್ಮೊಡನೆ ಹಾಸನಕ್ಕೆ ಬಂದಿದ್ದ ನಮ್ಮ ಗೆಳೆಯರೊಬ್ಬರ ಪತ್ನಿಯನ್ನು ಇಳಿಸಲು ಅವರ ಮನೆ ಬಳಿ ಹೋದಾಗ, ಪಂದ್ಯದ ಕೊನೇ ಓವರ್ ಆರಂಭವಾಗಿತ್ತು. ಬೀದಿ ತುಂಬ ಘನ ಮೌನ. ಮನೆಯೊಳಗೆ ಕಾಲಿಡುತ್ತಿದ್ದಂತೆ, ಹಾಹಾಕಾರ! ಜೊಗೀಂದರ್ ಶರ್ಮನ ಮೊದಲನೇ ಚೆಂಡಿನಲ್ಲೇ ಮಿಸ್‌ಬಿನ್– ಉಲ್– ಹಕ್ ಸಿಕ್ಸರ್ ಎತ್ತಿದ್ದ. ನನ್ನ ಸ್ನೇಹಿತರ ಮಗ ಕುಸಿದು ಕೂತ. ಮುಂದಿನ ಚೆಂಡನ್ನು ಹಕ್ 'ಅಶ್ರಫುಲ್' ಮಾಡಲು ಹೋಗಿ ಶ್ರೀಶಾಂತ್‌ಗೆ ಕ್ಯಾಚಿತ್ತಾಗ, ನಮ್ಮ ಹುಡುಗನ ಹುಚ್ಚು ನರ್ತನ ಸ್ಫೋಟಿಸಿತು! ನನಗೂ ಸಂತೋಷದ ಉನ್ಮಾದ! ಮನೆಯ ಹೊರಗಿಂದ ಪಟಾಕಿಗಳ ಕಿವಿಗಡಚಿಕ್ಕುವ ಸದ್ದು. ಅದರ ಹಿಂದೆಯೇ 'ಬೋಲೋ ಭಾರತ್ ಮಾತಾಕಿ ಜೈ' ಎಂಬ ಘೋಷಣೆಗಳ ಅಬ್ಬರ. ಯಾರದೀ ಅಬ್ಬರವೆಂದು ಹೊರಗೆ ಬಂದು ನೋಡಿದರೆ, ಆ ಬೀದಿಯ ಚಿನ್ನ– ಬೆಳ್ಳಿ ಅಂಗಡಿಗಳ ಕೆಲಸಗಾರರು ಘೋಷಣೆ ಕೂಗುತ್ತಾ ಹುಚ್ಚೆದ್ದು ಕುಣಿಯುತ್ತಿದ್ದಾರೆ!

ಈ ಹಿಂದೆ ಭಾರತ ಗೆದ್ದಾಗ ಪಟಾಕಿಗಳ ಸದ್ದು ಕೇಳುತ್ತಿತ್ತಷ್ಟೆ. 'ಭಾರತ ಮಾತಾಕಿ ಜೈ'ನಂತಹ ಘೋಷಣೆಗಳು ಅಷ್ಟಾಗಿ ಕೇಳಿ ಬಂದಿರಲಿಲ್ಲ. ಇದೇನು ಹೀಗೆ ಎಂದು ಗೆಳೆಯರ ಮನೆಯವರನ್ನು ಕೇಳಿದೆ. ಅವರು ಮೆಲುದನಿಯಲ್ಲಿ, ಎದುರಿಗೆ ಮೂರ್ನಾಲ್ಕು ಮುಸ್ಲಿಮರ ಮನೆಯಿದೆ ಎಂದರು. ನನಗೆ ಗೆಲುವಿನ ಸಂತೋಷ, ಉನ್ಮಾದಗಳೆಲ್ಲ ಇಳಿದುಹೋದವು.

ಸಂತೋಷವನ್ನೂ ವಿಕ್ಷಿಪ್ತಗೊಳಿಸುವ ವಾತಾವರಣ ಸೃಷ್ಟಿಯಾಗಿರುವ ಬೇಸರದಲ್ಲಿ ಕಾರ್ ಹತ್ತಿ ಶಿವಮೊಗ್ಗಕ್ಕೆ ಹೊರಟೆ... ಶಿವಮೊಗ್ಗ ನಗರವನ್ನು ಪ್ರವೇಶಿಸುತ್ತಿದ್ದಂತೆ, ರಸ್ತೆಗಳಲ್ಲಿ ಪಟಾಕಿ, ಹೂ– ಕುಂಡಗಳ ಸಂಭ್ರಮ! ಗೋಪಿ ವೃತ್ತದಲ್ಲಿ ಪಡ್ಡೆ ಹುಡುಗರ ನರ್ತನ... ಮಾರನೆಯ ದಿನದ ಹಿಂದೂ ಮಹಾಸಭಾದ ಗಣಪತಿ ವಿಸರ್ಜನೆಯ ತಯ್ಯಾರಿ ಇಂದೇ ಆರಂಭವಾದಂತಿತ್ತು. ಸಂಘ ಪರಿವಾರದವರಿಂದ, ಇನ್ನರೆಡು ದಿನಗಳಲ್ಲಿ ನಡೆಯಬೇಕಿದ್ದ ನಗರ ಸಭೆ ಚುನಾವಣೆಗೆ ಈ ಗೆಲುವನ್ನು ಬಳಸಿಕೊಳ್ಳುವ ಪ್ರಯತ್ನವೋ ಎಂಬಂತೆ, ನರ್ತನ ಮಾಡುತ್ತಿದ್ದ ಹಲವಾರು ಹುಡುಗರ ತಲೆಗಳ ಸುತ್ತ ಕೇಸರಿ ಪಟ್ಟಿ ಎದ್ದು ಕಾಣುವಂತಿತ್ತು. ಮುಂದೆ ಮನೆ ಕಡೆ ಹೊರಟರೆ, ಕೇಸರಿ ಪಟ್ಟಿ ಕಟ್ಟಿಕೊಂಡ ಇನ್ನೊಂದು ಗುಂಪು ಜೈಕಾರ ಹಾಕುತ್ತಾ ಎದುರಾಯಿತು. ಅವರು 'ಭಾರತ್ ಮಾತಾಕಿ ಜೈ' ಎಂದಷ್ಟೇ ಕೂಗುತ್ತಿರಲಿಲ್ಲ. 'ಹಿಂದೂಸ್ತಾನ್ ಜ಼ಿಂದಾಬಾದ್, ಪಾಕಿಸ್ತಾನ್ ಮುರ್ದಾಬಾದ್' ಎಂದೂ ಕೂಗುತ್ತಿದ್ದರು! ನನಗೆ ಆಶ್ಚರ್ಯವೂ, ಜಿಗುಪ್ಸೆಯೂ ಒಟ್ಟಿಗೇ ಉಂಟಾದವು. ಇದೇನು ಕ್ರೀಡೆಯೋ, ಯುದ್ಧವೋ; ಅಂತಿಮ ಪಂದ್ಯ ಪಾಕಿಸ್ತಾನದ ವಿರುದ್ಧವಾಗಿರದಿದ್ದರೆ, ನಿಜವಾಗಿ ಇಷ್ಟೆಲ್ಲ ಬೀದಿ ಸಂಭ್ರಮ– ಘೋಷಣೆಗಳು ಇರುತ್ತಿದ್ದವೇ ಎಂದು ಯೋಚಿಸುತ್ತ ಖಿನ್ನನಾಗಿ ಮನೆ ಸೇರಿದೆ.

ಅಲ್ಲಿ ಅವಸರದಲ್ಲಿ ಟಿ.ವಿ. ಹಾಕಿದರೆ, ಪಾಕಿಸ್ತಾನದ ನಾಯಕ ಷೋಯಬ್ ಮಲ್ಲಿಕ್ ತನ್ನ ತಂಡ ಸೋತಿದ್ದಕ್ಕಾಗಿ ಇಡೀ ಜಗತ್ತಿನ ಮುಸ್ಲಿಮರ ಕ್ಷಮೆ ಕೋರುತ್ತಿದ್ದ ದೃಶ್ಯ ಪುನಃಪ್ರಸಾರವಾಗುತ್ತಿತ್ತು! ಮಲ್ಲಿಕ್‌ನ ಮುಟ್ಠಾಳತನ ನೋಡಿ ತಲೆ ತಿರುಗಿದಂತಾಯಿತು. ಸುಮ್ಮನೆ ಹೋಗಿ ಮಲಗಿಕೊಂಡೆ. ನಿದ್ದೆ ಹತ್ತಲಿಲ್ಲ. ಭಾರತದಲ್ಲಿನ ಕೋಮುವಾದಿ ರಾಜಕಾರಣವನ್ನು ನಾವು ಚರ್ಚಿಸಿದಾಗಲೆಲ್ಲ, ಖಂಡನೆಗೊಳಗಾಗುವುದು ಹಿಂದೂ ಕೋಮುವಾದವೇ. ಆದರೆ, ಈಗ ಕಾಣಬರುತ್ತಿರುವ ಹಿಂದೂ ಕೋಮುವಾದಕ್ಕೆ ಸ್ವತಂತ್ರ ಅಸ್ತಿತ್ವ ಇದೆಯೇ? ಶೋಯಬ್ ಪ್ರಕರಣ ಸ್ಪಷ್ಟವಾಗಿ ಸೂಚಿಸುತ್ತಿರುವಂತೆ, ಭಾರತದಲ್ಲಿನ ಕೋಮುವಾದವನ್ನು ಇಡೀ ಭಾರತೀಯ ಉಪಖಂಡದ ಕೋಮುವಾದದ ಭಾಗವಾಗಿಯೇ– ಇತ್ತೀಚಿನ ದಿನಗಳಲ್ಲಂತೂ, ಅಮೆರಿಕಾದ ಕ್ರಿಶ್ಚಿಯನ್ನರ ನವ ಸಂಪ್ರದಾಯವಾದವೂ (Neo conservatism) ಸೇರಿದಂತೆ, ಜಾಗತಿಕ ಕೋಮುವಾದದ ನೆಲೆಯಲ್ಲಿಯೇ– ಗ್ರಹಿಸಬೇಕೇ ಹೊರತು, ಬಿಡಿಯಾಗಿ ನೋಡಲಾಗದಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಅದು ನಮ್ಮನ್ನು ಈಗ ಕೆಲವರು ವಾದಿಸುತ್ತಿರುವಂತೆ, ಭಾರತದಲ್ಲಿ ಹಿಂದೂಗಳದ್ದು (ಸಾಮಾಜಿಕವಾಗಿ ಅಪಾಯಕಾರಿಯಾದ) ಕೋಮುವಾದವಾದರೆ, ಮುಸ್ಲಿಮರದ್ದು (ಅವರ ಧರ್ಮಕ್ಕಷ್ಟೇ ಸಂಬಂಧಪಟ್ಟ) ಮೂಲಭೂತವಾದವಷ್ಟೆ ಎಂಬ ಶುದ್ಧ ತರ್ಕದ ತಪ್ಪು ತೀರ್ಮಾನಗಳಿಗೆ ಒಯ್ಯುತ್ತದೆ.

ನಮ್ಮ ಬಹಳಷ್ಟು ಎಡಪಂಥೀಯರಿಗೆ, ವಾಸ್ತವಕ್ಕಿಂತ ತಮ್ಮ ಎಡಪಂಥೀಯತೆಯೇ ಮುಖ್ಯವಾಗಿ, ಅವರು ತಮ್ಮ ಶುದ್ಧ ತರ್ಕಾಚಾರಗಳಲ್ಲಿ ಮುಳುಗಿ ಹೋಗಿದ್ದಾರೆ. ಇದರಿಂದಾಗಿ ಜನ ಸಾಮಾನ್ಯರ ಬಹಳಷ್ಟು ಮಂದಿಯ ಕಣ್ಣಿನಲ್ಲಿ ಅವರು 'ಕಳ್ಳ'ರೂ, 'ಸುಳ್ಳ'ರೂ ಆಗಿ

ಕಾಣತೊಡಗಿದ್ದಾರೆ. ಹಾಗಾಗಿಯೇ, ಆದ್ವಾನಿ ಮತ್ತು ಅವರ ಬಳಗ ತನ್ನ ಕೋಮುವಾದವನ್ನು ಸಮರ್ಥಿಸಿಕೊಳ್ಳಲು, 'ಖೋಟಾ ಸೆಕ್ಯುಲಿಸ್ಟರು' ಎಂಬ ಪದ ಪ್ರಯೋಗ ಮಾಡಿದಾಗಿನಿಂದ, ಅದು ಈ ದೇಶದ ರಾಜಕೀಯ ಚರ್ಚೆಯ ಬಹು ವಿಶ್ವಾಸಾರ್ಹ ಪದಪ್ರಯೋಗವಾಗಿ ಬಳಕೆಯಾಗುತ್ತಿದೆ. ನನ್ನ ಎಡಪಂಥೀಯ ಗೆಳೆಯರು ಒಪ್ಪಲಿ, ಬಿಡಲಿ; ಕೋಮುವಾದಿ ರಾಜಕಾರಣ ಭಾರತದ ರಾಜಕಾರಣದಲ್ಲಿ ಅಧಿಕೃತ ಸ್ಥಾನಮಾನ ಗಳಿಸಿಕೊಳ್ಳುತ್ತಿರುವ ಇತ್ತೀಚಿನ ದಿನಗಳಲ್ಲಿ ಎಚ್ಚೆತ್ತುಕೊಂಡಂತೆ ಅವರು, ತಾವು ಖೋಟಾ ಸೆಕ್ಯುಲರಿಸ್ಟರಲ್ಲವೆಂದು ಸಾಬೀತು ಮಾಡಲು ಪ್ರಜ್ಞಾಪೂರ್ವಕವಾದ ಪ್ರಾಮಾಣಿಕ ಹಾಗೂ ಗಂಭೀರ ಪ್ರಯತ್ನಗಳನ್ನಾರಂಭಿಸಿದ್ದಾರೆ. ಇದೊಂದು ಶುಭ ಸೂಚನೆ! ಇದರಿಂದಲಾದರೂ ಕೋಮುವಾದ ಕುರಿತ ಚರ್ಚೆ ಒಂದು ಸಮತೋಲನಕ್ಕೆ ಬಂದು, ಕೋಮುವಾದಿ ವಿರೋಧಿ ರಾಜಕಾರಣಕ್ಕೆ ಇನ್ನಷ್ಟು ಬಲ ಬರಲಿ ಎಂದು ನಾವು ಆಶಿಸಬಹುದಾಗಿದೆ.

ಏಕೆಂದರೆ, ಇಂದು ಬಹು ಚರ್ಚಿತವಾಗುತ್ತಿರುವ, ಕೆಲವೆಡೆ ರಾಜಕೀಯ 'ಘರ್ಷಣೆ'ಗಳಿಗೆ ಕಾರಣವಾಗುತ್ತಿರುವ 'ರಾಮಸೇತು' ವಿವಾದ ಕೋಮುವಾದಿ ರಾಜಕಾರಣಕ್ಕೆ ಎಡೆ ಮಾಡಿಕೊಡುತ್ತಿರುವ ಪರಿಯನ್ನೇ ಗಮನಿಸಿ. ಇನ್ನೇನು ಭಾರತೀಯ ರಾಜಕಾರಣದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದೇನೆಂದುಕೊಳ್ಳುವ ಹೊತ್ತಿಗೆ ಅಧಿಕಾರ ಕಳೆದುಕೊಂಡ ದಿಗ್ಭ್ರಮೆಯಿಂದ ಈಗ ತಾನೇ ಹೊರಬಂದು, ಮತ್ತೆ 'ವಿಶ್ವಾಸಾರ್ಹತೆ' ಗಳಿಸಿಕೊಳ್ಳಲು ಭಾರತೀಯ ಜನತಾ ಪಕ್ಷ ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದಾಗ, ಅದರ ನೆರವಿಗೆ ಬಂದಂತೆ ಕಾಂಗ್ರೆಸ್ ರಾಮಸೇತು ವಿವಾದದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಸಂಪೂರ್ಣ ಅವಿವೇಕದ್ದು ಎನಿಸುವ ಅಫಿಡಿವಿಟ್ ಸಲ್ಲಿಸಿತು. ರಾಮಾಯಣಕ್ಕಾಗಲೀ, ರಾಮನಿಗಾಗಲೀ, ಐತಿಹಾಸಿಕ ಅಸ್ತಿತ್ವವಿಲ್ಲ ಎಂಬ ವಾದ 'ಶಾಸ್ತ್ರೀಯ' ಚರ್ಚೆಯ ವೇದಿಕೆಗಳಲ್ಲಿ ಸಂಗತವಾಗಬಹುದಾದರೂ, ಜನ ಸಾಮಾನ್ಯರ ಭಾವನಾತ್ಮಕ ನೆಲೆಯಲ್ಲಿ ಅದು ಋಣಾತ್ಮಕ ಪರಿಣಾಮಗಳನ್ನಷ್ಟೇ ಉಂಟುಮಾಡುವಂತಹುದು. ರಾಮಾಯಣ ಮಹಾಭಾರತಗಳು ಭಾರತದ ಸುಪ್ತ ಮನಸ್ಸನ್ನು ಹೊಕ್ಕು, ಅನೇಕ 'ಮೌಲ್ಯ'ಗಳನ್ನು ನಿರ್ಮಿಸಿದೆ. ಅವುಗಳನ್ನು ಪ್ರಶ್ನಿಸುವುದೂ ಸೇರಿದಂತೆ, ಅವುಗಳೊಡನೆ ಸಂವಾದಿಸುವಾಗ ತರ್ಕ ಶುದ್ಧತೆಯೊಂದೇ ಸಾಲದಾಗುತ್ತದೆ. ಲೋಹಿಯಾ ಹೇಳಿದಂತೆ, ರಾಮ– ಕೃಷ್ಣ– ಶಿವರು ಭಾರತೀಯ ಮನಸ್ಸಿನಲ್ಲಿ ಮತ ಧರ್ಮಗಳನ್ನು ಮೀರಿದ ಆಂತರಂಗಿಕ ಮೂರ್ತಿಗಳಾಗಿ ನಮ್ಮ ಸಂಸ್ಕೃತಿಯನ್ನು ಸೇರಿಹೋಗಿದ್ದಾರೆ.

ಕಾಂಗ್ರೆಸ್ ತನಗೆ ಗೊತ್ತಿಲ್ಲದೇ ಆದ ತಪ್ಪನ್ನು ಬೇಷರತ್ತಾಗಿ ಒಪ್ಪಿಕೊಂಡು, ಅಫಿಡವಿಟ್ಟನ್ನು ಹಿಂತೆಗೆದುಕೊಳ್ಳುವ ಮೂಲಕ ಸಂಘ ಪರಿವಾರದವರ ಆಟಾಟೋಪಕ್ಕೆ ಕಡಿವಾಣ ಹಾಕಿತಾದರೂ, ಕರುಣಾನಿಧಿಯವರು ರಾಮನ ಬಗ್ಗೆ 'ಆತ ಸೇತುವೆ ಕಟ್ಟಲು ಯಾವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿದ್ದ?' ಎಂಬ ಅಗ್ಗದ ಪ್ರಶ್ನೆಯನ್ನು ಕೇಳುತ್ತಾ; ಇದರಿಂದ ಪ್ರಚೋದಿತರಾದ ಸಂಘ ಪರಿವಾರಿಗಳನ್ನು, 'ರಾಮನೊಬ್ಬ ಕುಡುಕ' ಎಂದು ಹೇಳಿ ಕೆಣಕುತ್ತ, ಹಳೆಯ ದ್ರಾವಿಡ ಚಳುವಳಿಯ 'ರಾಮ ವಿರೋಧಿ' ಕಾರ್ಯಕ್ರಮಗಳ

ದಿನಗಳಿಗೆ ಹಿಂದಿರುಗುವ ಪ್ರಯತ್ನ ಮಾಡಿದ್ದಾರೆ. ರಾಮನ ಗುಣಾವಗುಣಗಳ ಬಗ್ಗೆ ಕಾವ್ಯಾಧಾರಿತವಾಗಿಯೇ ಮಾತನಾಡಹೊರಟರೆ, ಕರುಣಾನಿಧಿಗಿಂತ ಕಟುವಾಗಿ ರಾಮನ ವಿರುದ್ಧ ಮಾತನಾಡಲು ಸಾಕಷ್ಟು ಪುರಾವೆಗಳು ಸಿಗುತ್ತವೆ. ಭಾರತೀಯ ಪರಂಪರೆ ಬಗ್ಗೆ ವಸ್ತುನಿಷ್ಠ ವಿಮರ್ಶೆ ಮಾಡಬಲ್ಲವರಾಗಿದ್ದ ನಮ್ಮ ಎ.ಎನ್. ಮೂರ್ತಿರಾಯರಂಥ ಸುಸಂಸ್ಕೃತರೇ ವಾಲ್ಮೀಕಿಯ ರಾಮನ ಬಗ್ಗೆ ಜಿಗುಪ್ಸೆ ಪಟ್ಟುಕೊಂಡು, ಭವಭೂತಿ ಸೃಷ್ಟಿಸಿದ ರಾಮನಿಲ್ಲದಿದ್ದರೆ ರಾಮ ನಮ್ಮ ನೆನಪಿಗೂ ಅರ್ಹನಾಗುತ್ತಿರಲಿಲ್ಲ ಎಂದಿದ್ದಾರೆಂದರೆ? ಆದರೆ ಕರುಣಾನಿಧಿ ಮಾತನಾಡುತ್ತಿರುವುದೇ ಬೇರೆ ನೆಲೆಯಲ್ಲಿ. ಆರ್ಯ- ದ್ರಾವಿಡ ಜನಾಂಗೀಯ ವೈಮನಸ್ಯದ ನೆನಪನ್ನು ಕೆಣಕುವ ಅಗ್ಗದ ರಾಜಕಾರಣದ ನೆಲೆಯಲ್ಲಿ.

ರಾಮನನ್ನು ಕುಡುಕನೆಂದು (ಕುಡುಕತನಕ್ಕಲ್ಲದಿದ್ದರೂ, ಸುರಾಪಾನ ಹಾಗೂ ಗೋಮಾಂಸ ಭಕ್ಷಣೆಗೆ ಸಂಬಂಧಿಸಿದಂತೆ ವಾಲ್ಮೀಕಿ ರಾಮಾಯಣದಲ್ಲೇ ಸಾಕಷ್ಟು ಸಾಕ್ಷ್ಯಗಳಿವೆಯಾದರೂ) ಇಂದಿನ ನೈತಿಕ ನೆಲೆಯಲ್ಲಿ ಮೌಲ್ಯೀಕರಿಸಲು ಹೊರಟಿರುವ; ಇತ್ತೀಚಿನವರೆಗೆ ಸಂಘ ಪರಿವಾರಿಗಳ ಜೊತೆಗೇ ಕುಳಿತು ಲಾಭಾಧಾರಿತ ರಾಜಕಾರಣ ಮಾಡಿದ ಕರುಣಾನಿಧಿಗೆ ಯಾವ ನೈತಿಕ ನೆಲೆ ಇದೆ? ಸರಳ ಜೀವಿಗಳೂ, ಜನಪರ ಹೋರಾಟಗಾರರೂ, ಪ್ರಜಾಪ್ರಭುತ್ವವಾದಿಗಳೂ ಆಗಿದ್ದ ಪೆರಿಯಾರರೋ, ಅಣ್ಣಾದುರೈಗಳೋ ಈ ಟೀಕೆಯ ಮಾತುಗಳನ್ನಾಡಿದ್ದರೆ, ಅದಕ್ಕೊಂದು ಪ್ರಸ್ತುತತೆ, ಅರ್ಥ, ಸಾಂದರ್ಭಿಕತೆ ಇರುತ್ತಿತ್ತು, ಇತ್ತು ಕೂಡ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ, ನಿರ್ಲಜ್ಜ ಕುಟುಂಬ ರಾಜಕಾರಣ ಹಾಗೂ ಆ ಮೂಲಕ ಗಳಿಸಿರುವ ಅಪಾರ ಪ್ರಮಾಣದ ಆಸ್ತಿಯ ಅಡಿಗೆ ಸಿಕ್ಕಿಸಿ ಅಣಕಕ್ಕೀಡು ಮಾಡುತ್ತಿರುವ ಕರುಣಾನಿಧಿ ಈ ಮಾತುಗಳನ್ನು ಆಡಿದರೆ, ಅದು ನೈತಿಕ ದಿವಾಳಿತನದ ಪ್ರತೀಕ ಮಾತ್ರವಾದೀತು!

ಇಂತಹ ಸಮಯಸಾಧಕ ರಾಜಕಾರಣದಿಂದಾಗಿ, ಸಂಶೋಧಕರ, ವಿಧ್ವಾಂಸರ, ತಂತ್ರಜ್ಞರ ನೆಲೆಯಲ್ಲಿ ತೀರ್ಮಾನವಾಗಬೇಕಾದ ವಿಷಯಗಳು ಅನಗತ್ಯವಾಗಿ ಬೀದಿ ಬದಿಯ ಜನರ ಬೇಜವಾಬ್ದಾರಿ ಚರ್ಚೆಗೆ, ಭಾವೋನ್ಮಾದಕ್ಕೆ ಕಾರಣವಾಗಿ ವಿಕಾರಗೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹದಿನೈದು ವರ್ಷಗಳ ಹಿಂದಿನ ರಥಯಾತ್ರೆಯ ಸಮಯದಲ್ಲಿ ಅದ್ವಾನಿ ಸೇರಿದಂತೆ ಅನೇಕ ಬಿ.ಜೆ.ಪಿ. ನಾಯಕರು ಕಿರೀಟ ಇಟ್ಟುಕೊಂಡು ಬಾಣ ಬಿಡುವ ದೃಶ್ಯ ನೋಡಿ ಜಿಗುಪ್ಸೆಗೊಂಡಿದ್ದ ನನಗೆ, ಮೊನ್ನೆ ಟಿ.ವಿ.ವಾಹಿನಿಯೊಂದು ರಾಮಸೇತು ವಿವಾದ ಕುರಿತ ಸುದ್ದಿ ಪ್ರಸಾರದ ಮಧ್ಯೆ ಸೋನಿಯಾ ಗಾಂಧಿಯವರೂ (ಬಹುಶಃ ರಾಮಲೀಲಾ ಸಂದರ್ಭದಲ್ಲಿ) ಕಿರೀಟ ಇಟ್ಟುಕೊಂಡು ಹಲ್ಕಿರಿಯುತ್ತಾ ಬಾಣ ಬಿಡುತ್ತಿರುವ ದೃಶ್ಯ ತೋರಿಸಿದಾಗ ಇನ್ನಷ್ಟು ಜಿಗುಪ್ಸೆಯಾಯಿತು. ರಾಮಾಯಣದ ನಾಟಕಗಳನ್ನು ನೋಡಿ ಪಟ್ಟ ಸಂತೋಷವೆಲ್ಲ, ಇಂತಹ ದೃಶ್ಯಗಳನ್ನು ನೋಡಿದಾಗ ಕದಡಿಹೋಗುತ್ತದೆ.

ರಾಮಾಯಣ ಒಂದು ಆದಿ ಹಾಡುಗಬ್ಬವಾಗಿದ್ದು, ವಾಲ್ಮೀಕಿ ಅದನ್ನು ಸಂಗ್ರಹಿಸಿ, ಸಂಪಾದಿಸಿ, ಕ್ರಿ.ಪೂ. ೪೦೦ರಿಂದ ೨೦೦ರ ಮಧ್ಯೆ ೧೨ ಸಾವಿರ ಶ್ಲೋಕಗಳ ರೂಪದಲ್ಲಿ

ರಚಿಸಿದನೆಂದು ಇತಿಹಾಸಕಾರರು ಹೇಳುತ್ತಾರೆ. ಆದರೆ, ವಾಲ್ಮೀಕಿ ರಾಮಾಯಣ ಕೂಡ ಕಾಲಾನುಕ್ರಮದಲ್ಲಿ ಪ್ರಕ್ಷಿಪ್ತಗೊಂಡು, ವಾಲ್ಮೀಕಿಯ ಸಾಹಿತ್ಯ ಶೈಲಿ ಹಾಗೂ ಕಥಾ ದೃಷ್ಟಿಗೆ ಹೊಂದದ ಬಾಲಕಾಂಡ ಹಾಗೂ ಉತ್ತರಕಾಂಡ ನಂತರ ಸೇರಿಕೊಂಡಿವೆ ಎಂಬ ಪ್ರತೀತಿಯೂ ಇದೆ. ಜೊತೆಯಲ್ಲೇ ಅನೇಕ ಭಾಷೆ ಹಾಗೂ ಸಂಸ್ಕೃತಿಗಳಲ್ಲಿ ರಾಮಾಯಣದ ಅನೇಕ ಆವೃತ್ತಿಗಳು ರಚಿತಗೊಳ್ಳುತ್ತಾ, ಮೌಖಿಕ ಪರಂಪರೆಗೆ ಸೇರಿಕೊಳ್ಳುತ್ತಾ ಬಂದಿವೆ. ಇವುಗಳಲ್ಲಿ ರಾಮ– ಸೀತೆ– ಲಕ್ಷ್ಮಣ– ರಾವಣರ ಸಂಬಂಧಗಳು ಹಾಗೂ ಇವರ ಪಾತ್ರ ನಿರೂಪಣೆಗಳು ವೈವಿಧ್ಯಮಯ ನೆಲೆಯಲ್ಲಿ ಇವೆ. ಮುಖ್ಯವಾಗಿ ರಾಮಾಯಣ ಕಥೆಯ ಈ ಆವರ್ತನದ ಕೇಂದ್ರ ಸೀತೆಯಾಗಿದ್ದು, ರಾಮ– ರಾವಣ– ಲಕ್ಷ್ಮಣರ ಪಾತ್ರಗಳ ಶೀಲ ಈ ಕೇಂದ್ರ ಪಾತ್ರದ ಸುತ್ತಲೇ ನಿರೂಪಣೆಗೊಳ್ಳುವುದನ್ನು ನಾವು ಈ ವಿವಿಧ ರಾಮಾಯಣಗಳಲ್ಲಿ ನೋಡಬಹುದು. ಇಂತಹ ಹಲವು ರಾಮಾಯಣಗಳಲ್ಲಿ ರಾಮ– ಲಕ್ಷ್ಮಣ– ಸೀತೆಯರು ಸೋದರ– ಸೋದರಿಯರಾಗಿ, ಸೀತೆ ರಾವಣನ ಮಗಳಾಗಿ, ಲಕ್ಷ್ಮಣ– ಸೀತೆ ಗಂಡ– ಹೆಂಡತಿಯಾಗಿ ನಿರೂಪಿತವಾಗಿದ್ದಾರೆಯಷ್ಟೇ ಅಲ್ಲ; ಲಂಕೆ ಪ್ರಚಲಿತ ನಂಬಿಕೆಗೆ ವಿರುದ್ಧವಾಗಿ, ಮಧ್ಯಭಾರತದಲ್ಲಿ ಸರೋವರಗಳಿಂದ ಆವೃತವಾಗಿದ್ದ ಗೊಂಡಸ್ತಾನವೇ ಆಗಿತ್ತು ಎಂದು ಬಲವಾಗಿ ಸೂಚಿಸುವ ವರ್ಣನೆಗಳೂ ಕಂಡುಬರುತ್ತವೆ.

ಸ್ವತಃ ವಾಲ್ಮೀಕಿ ರಾಮಾಯಣದಲ್ಲೇ ಅನೇಕ ಪ್ರಸಂಗಗಳಲ್ಲಿ– ನಿರ್ಣಾಯಕವಾಗಿ ಅಗ್ನಿಪ್ರವೇಶ ಪ್ರಸಂಗದಲ್ಲಿ– ಸೀತೆಯ ಬಗ್ಗೆ ಕಟು ನಿರ್ಲಕ್ಷದಿಂದಷ್ಟೇ ಅಲ್ಲ, ಇಂದಿನ ನೈತಿಕತೆಯ ನೆಲೆಯಲ್ಲೂ ಅಸಭ್ಯಕರವೆನಿಸುವಷ್ಟು ಮಾತುಗಳನ್ನಾಡಿ; ತನ್ನ ವೈಯುಕ್ತಿಕ 'ಮರ್ಯಾದೆ'ಯ ಮುಂದೆ, ದಾಂಪತ್ಯವೂ ಸೇರಿದಂತೆ ಮಿಕ್ಕೆಲ್ಲ ಮೌಲ್ಯಗಳೂ ತಿರಸ್ಕಾರ್ಹವೆಂಬಂತೆ ವರ್ತಿಸುವ ರಾಮ ಚಿತ್ರಿತನಾಗಿದ್ದಾನೆ. ಹಾಗೆ ನೋಡಿದರೆ, ಇತಿಹಾಸದ ಏಳುಬೀಳುಗಳಲ್ಲಿ ರಾಮನ ವೈದಿಕೀಕರಣ ಸಂಪೂರ್ಣವಾಗಿ; ಹದಿನೈದನೇ ಶತಮಾನದ ತುಳಸಿ ರಾಮಾಯಣದ ಹೊತ್ತಿಗಷ್ಟೇ ರಾಮಾಯಣ ಸಂಪೂರ್ಣ ರಾಮಮಯವಾಗಿ, ದೈವತ್ವ ಆರೋಪಿಸಿಕೊಂಡ 'ಮರ್ಯಾದಾ ಪುರುಷೋತ್ತಮ' ಸೃಷ್ಟಿಯಾದದ್ದು. ಹೀಗಾಗಿ ರಾಮಾಯಣವು ವಿವಿಧ ಆವೃತ್ತಿಗಳ ಮೂಲಕ ತನ್ನ ಐತಿಹಾಸಿಕತೆಯನ್ನು ಕಳೆದುಕೊಂಡು ಪುರಾಣವಾಗಿ ಮಾರ್ಪಾಡಾಗಿ, ಇತಿಹಾಸದ ಸಂಸ್ಕೃತೀಕರಣದ ಪ್ರಕ್ರಿಯೆಯ ಮೂಲಕ ಒಂದು ಧಾರ್ಮಿಕ ಗ್ರಂಥದ ಮಾನ್ಯತೆ ಪಡೆದುಕೊಂಡಿದೆ. ಇದರ ಮುಂದುವರಿಕೆಯಾಗಿಯೇ, ವಾಲ್ಮೀಕಿ ರಾಮಾಯಣದ ಆಧುನಿಕ ಭಾಷಾನುವಾದಗಳೂ ತುಳಸೀ ರಾಮಾಯಣದ ಹಾದಿ ಹಿಡಿದು (ಉದಾಹರಣೆಗೆ ಕನ್ನಡದಲ್ಲಿ ಡಿವಿಜಿ, ರಂಗನಾಥ ಶರ್ಮ, ಶ್ರೀನಿವಾಸ ಅಯ್ಯಂಗಾರ್‌ರ ಅನುವಾದಗಳು) ರಾಮನ ಮರ್ಯಾದೆಯನ್ನು ಕಾಪಾಡಲು ಹೋಗಿ, ಅನುವಾದ ಮರ್ಯಾದೆಯನ್ನೇ ಉಲ್ಲಂಘಿಸಿವೆ!

ರಾಮನನ್ನು ಈ ದೇಶದ ಸಾಂಸ್ಕೃತಿಕ ನಾಯಕ ಎಂದೆಲ್ಲ ಬಿಂಬಿಸಿ ವೋಟಿನ ರಾಜಕಾರಣ ಮಾಡುತ್ತಿರುವ ಸಂಘ ಪರಿವಾರಕ್ಕೆ ರಾಮಾಯಣದ ಈ ಚರಿತ್ರೆಯೇ

ಗೊತ್ತಿದ್ದಂತಿಲ್ಲ. ಹಾಗಾಗಿಯೇ ಅದೀಗ, ತಾನೇ ಆರಂಭಿಸಿದ 'ರಾಮಸೇತು' ಯೋಜನೆಯನ್ನು ವಿರೋಧಿಸುವ ವಿತಂಡವಾದ ಮಂಡಿಸುತ್ತಿದೆ. ರಾಮಾಯಣ ಭಾರತೀಯ ಮನಸ್ಸಿನ ಅವಿಭಾಜ್ಯ ಅಂಗವಾಗಿದೆ ನಿಜ;ಆದರೆ ಈಗಾಗಲೇ ವಿವರಿಸಿರುವಂತೆ ಏಕರೂಪಿಯಾಗಲ್ಲ. ಭಾರತದಲ್ಲಷ್ಟೇ ಅಲ್ಲ, ದಕ್ಷಿಣ ಏಷ್ಯಾದ ತುಂಬಾ ಪ್ರಚಲಿತವಿರುವ ರಾಮಾಯಣ ಅಭಿವ್ಯಕ್ತಿಗೊಂಡಿರುವುದು ನೂರಾರು ಸಾಂಸ್ಕೃತಿಕ, ಧಾರ್ಮಿಕ ಆವೃತ್ತಿಗಳಲ್ಲಿ. ಸಂಘ ಪರಿವಾರ ಇಂದು ತನ್ನ ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು, ಭಾರತದ ಬಹುಮುಖಿ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದ ಈ ನೂರಾರು ಆವೃತ್ತಿಗಳನ್ನು ಏಕಮುಖಿ ಸಂಸ್ಕೃತಿ ಮಾದರಿಗೆ ಅಳವಡಿಸಿದ ಪಥ್ಯದಂತಿರುವ ತುಳಸೀ ರಾಮಾಯಣವನ್ನು. ಹಾಗಾಗಿ ಕಾಲಾನುಕ್ರಮದಲ್ಲಿ ಕೆಲಸ ಮಾಡಿದ ಏಕಮುಖಿ ಸಂಸ್ಕೃತಿ ಸ್ಥಾಪನೆಯ ರಾಜಕೀಯ ಹುನ್ನಾರಗಳೇ ಇಂದು ಸಂಘ ಪರಿವಾರದವರ ಪಾಲಿಗೆ 'ಸಾಂಸ್ಕೃತಿಕ ರಾಷ್ಟ್ರೀಯತೆಯ' ರಾಜಕಾರಣವಾಗಿ ಮಾರ್ಪಟ್ಟಿದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಇಂದು 'ರಾಮಸೇತು' ಬಗ್ಗೆ ಚರ್ಚಿಸುವುದೆಂದರೆ, ಸಂಸ್ಕೃತೀಕರಣವೆಂಬ ಧಾರ್ಮಿಕ ರಾಜಕಾರಣದ ಬಗ್ಗೆ ಚರ್ಚಿಸುವುದೇ ಆಗಿದೆ, ನಿಜ. ಆದರೆ ಈ ಚರ್ಚೆಯನ್ನು ಸಾಂಸ್ಕೃತಿಕ ಸಮೀಪೀಕರಣಕ್ಕಾಗಿ (ಉದಾ: ಕುವೆಂಪು ಅವರ ಶ್ರೀರಾಮಾಯಣ ದರ್ಶನ) ಬಳಸದೆ, ಎರಡೂ ಪಕ್ಷಗಳು ತತ್ಕಾಲೀನ ರಾಜಕೀಯ ಲಾಭಕ್ಕಾಗಿ ಬಳಸುತ್ತಿರುವುದನ್ನು ನೋಡಿದರೆ, ನಾವಿನ್ನೂ ಮಾನಸಿಕವಾಗಿ ಪುರಾಣ ಕಾಲದಿಂದೀಚೆಗೆ ಬಂದಿಲ್ಲ ಎನಿಸುತ್ತದೆ. ವ್ಯಾವಹಾರಿಕವಾಗಿ ರಾಮಸೇತು ಯೋಜನೆ ದೇಶಕ್ಕೆ ಪ್ರಯೋಜನಕಾರಿ ಎನಿಸಿದರೆ, ಜನಸಾಮಾನ್ಯರ ಭಾವನಾತ್ಮಕತೆಯನ್ನು ವೃಥಾ ಕೆರಳಿಸದೆ ಹಾಗೂ ಸಾಗರದ ಜೀವ- ಪರಿಸರವನ್ನು ಭಂಗಗೊಳಿಸದೆ ಅದನ್ನು ಕೈಗೆತ್ತಿಕೊಳ್ಳುವುದು ಒಳ್ಳೆಯದು. ಏಕೆಂದರೆ, ರಾಮಸೇತು ಎಂದು ನಂಬಲಾಗಿರುವ ಸಂರಚನೆ ಮಾನವ ನಿರ್ಮಿತವಾಗಿರದೆ, ಪ್ರಾಕೃತಿಕವಾಗಿ ಸೃಷ್ಟಿಯಾಗಿರುವ ಮರಳು ದಿಬ್ಬಗಳಾಗಿವೆ ಎಂಬುದನ್ನು, ಈಗಾಗಲೇ ರಾಮಸೇತುವಾದಿಗಳ ಸರ್ಕಾರವೇ ಪ್ರಾಯೋಜಿಸಿದ ವೈಜ್ಞಾನಿಕ ಅಧ್ಯಯನಗಳು ಹೇಳುತ್ತಿವೆ!

ಆದರೆ ನಮ್ಮ ರಾಜಕಾರಣ ವಿಜ್ಞಾನ, ವಿಚಾರ, ನೈತಿಕತೆ ಯಾವುದನ್ನೂ ಲೆಕ್ಕಿಸದೆ, ನಿರ್ಭಿಡವಾಗಿ ಹಾಗೂ ನಗ್ನವಾಗಿ ಅವಕಾಶವಾದಿಯಾಗತೊಡಗಿದೆ. ಕರ್ನಾಟಕದ ರಾಜಕಾರಣವನ್ನೇ ನೋಡಿ. ಅಕ್ಟೋಬರ್ ೨ರಂದು ಅಧಿಕಾರ ಹಸ್ತಾಂತರ ಖಚಿತ ಎಂದೇ ಕೊನೇ ದಿನದವರೆಗೂ ಹೇಳಿಕೊಂಡು ಬರುತ್ತಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿಯವರು, ಆ ದಿನ ಹತ್ತಿರವಾಗುತ್ತಿದ್ದಂತೆ ಅಂದೇ ಹಸ್ತಾಂತರವಾಗಬೇಕೆಂಬ ಕಾನೂನಿಲ್ಲ ಎನ್ನತೊಡಗಿದರು. ದೋಸ್ತಿ ಪಕ್ಷದ ಸಚಿವರು ರಾಜೀನಾಮೆ ನೀಡಿದೊಡನೆ ಜನತೆಗಾಗಿ ತಾನು ವಚನ ಭ್ರಷ್ಟನಾಗಲೂ ಸಿದ್ಧ ಎನ್ನತೊಡಗಿದ್ದಾರೆ... ಕನಾಟಕದ ಬಹುಪಾಲು ಜನ- ಅವರೆಲ್ಲರೂ ಬಿಜೆಪಿ ಪರವಿಲ್ಲದಿದ್ದರೂ- ಅಧಿಕಾರ ಹಸ್ತಾಂತರ ಮಾಡುವುದು ಜೆ.ಡಿ.(ಎಸ್)ನ ನೈತಿಕ ಜವಾಬ್ದಾರಿ ಎಂದು ಹಲವು ವೇದಿಕೆಗಳ ಮೂಲಕ ಹೇಳುತ್ತಿದ್ದರೆ, ಇವರು ಅದೇ ಜನತೆಯ ಹೆಸರಲ್ಲಿ ವಚನ ಭ್ರಷ್ಟತೆಯನ್ನು ಒಂದು ಆದರ್ಶದ ವಿಷಯವನ್ನಾಗಿ ಮಾಡಲು ವೀರಾವೇಶದಿಂದ

ಹೊರಟಿದ್ದಾರೆ! ನೈತಿಕತೆ ಎನ್ನುವುದು ಇದಕ್ಕಿಂತ ವಿಕ್ಷಿಪ್ತಗೊಳ್ಳಲಾರದು. ವಿನಾಶ ಕಾಲೇ ವಿಪರೀತ ಬುದ್ಧಿ!

ತನ್ನ ನಾಯಕತ್ವದಲ್ಲಷ್ಟೇ ಕರ್ನಾಟಕ ಅಭಿವೃದ್ಧಿ ಕಂಡಿತೆಂಬ ಭ್ರಮೆಯಲ್ಲಿ ಕುಮಾರಸ್ವಾಮಿ ತಮ್ಮನ್ನು ತಾನೇ ಅಟ್ಟಕ್ಕೇರಿಸಿಕೊಂಡು ಜನತೆಯ ಕಣ್ಣಲ್ಲಿ 'ಖಳ'ರೆನ್ನಿಸಿಕೊಳ್ಳುತ್ತಿದ್ದಾರೆ. ಹಾಗೇ, ಐವತ್ತು ವರ್ಷಗಳ ಕರ್ನಾಟಕ ರಾಜಕಾರಣದಲ್ಲಿ ಐದು ವರ್ಷಗಳ ರಾಜಕೀಯ ಅನುಭವವೂ ಇಲ್ಲದ ಇವರು, ರಾಜ್ಯದ ಈವರೆಗಿನ ಅಭಿವೃದ್ಧಿಯಲ್ಲಿ ತಮ್ಮ ಸರ್ಕಾರದ ೨೦ ತಿಂಗಳುಗಳ ಅವಧಿಯ ಪಾಲು ತೀರಾ ನಗಣ್ಯ ಎಂಬುದನ್ನು ಅರಿಯದೆ ಹಾಗೂ ಸಮ್ಮಿಶ್ರ ಸರ್ಕಾರದ ಧರ್ಮವನ್ನೇ ಮರೆತು; ಈ ಸರ್ಕಾರ ಏನಾದರೂ ಗಣನೀಯ ಸಾಧನೆ ಮಾಡಿದ್ದರೆ, ಅದಕ್ಕೆಲ್ಲ ತಾನೇ ಕಾರಣನೆಂದು ಹೇಳಿಕೊಳ್ಳುವ ಮೂಲಕ ಆತ್ಮಘಾತುಕ ರಾಜಕಾರಣಕ್ಕೂ ಇಳಿದಿದ್ದಾರೆ! ಹಾಗೆ ನೋಡಿದರೆ, ಇವರ ಸಚಿವ ಸಂಪುಟ ಬಹುಶಃ ಕರ್ನಾಟಕ ಕಂಡ ಅತ್ಯಂತ ಕಳಪೆ, ಅದಕ್ಷ ಹಾಗೂ ಭ್ರಷ್ಟ ಸಂಪುಟವಾಗಿದೆ. ಶೀಲವೇ ಇಲ್ಲದ ಪ್ರಗತಿಯನ್ನು ಪ್ರಗತಿಯೆಂದು ಕರೆಯಲಾದೀತೆ?

ದುಃಖದ ಸಂಗತಿಯೆಂದರೆ, ಜೆ.ಡಿ.(ಎಸ್) ಪಕ್ಷದಲ್ಲಿ ಅದರ ನಾಯಕತ್ವಕ್ಕೆ ನೀವು ಮಾಡುತ್ತಿರುವುದು ತಪ್ಪು, ದ್ರೋಹ, ಅನೈತಿಕ ಹಾಗೂ ಜನ ಇದನ್ನು ಒಪ್ಪುವುದಿಲ್ಲ ಎಂದು ಹೇಳುವವರು ಒಬ್ಬರೂ ಇಲ್ಲವಾದಂತಾಗಿರುವುದು, ಹಾಗಾಗಿಯೇ, ಈಗ ಅದೊಂದು ನೈತಿಕವಾಗಿ ದಿವಾಳಿ ಎದ್ದ ಪಕ್ಷ ಎನಿಸಿಕೊಂಡಿರುವುದು. ಅದರ ವರಿಷ್ಠ ನಾಯಕ ದೇವೇಗೌಡರ ಕಪಟ ನಾಟಕ ಸೂತ್ರಧಾರತ್ವದ ಬಗ್ಗೆ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ಹೇಳಿದಷ್ಟೂ, ಹೇಳಿದವರ ನಾಲಗೆ ಮಲಿನಗೊಳ್ಳುವಷ್ಟು ಅವರು ಅಂಡ– ಭಂಡ ರಾಜಕಾರಣಕ್ಕೆ ಇನ್ನೊಂದು ಹೆಸರಾಗಿದ್ದಾರೆ. (ಬಹುಶಃ ಇದೆಲ್ಲದರ 'ತಯ್ಯಾರಿ'ಗಾಗಿಯೇ ಅವರು ಆಗಾಗ್ಗೆ ತಮಿಳ್ನಾಡಿನ ನವಗ್ರಹ ದೇವಸ್ಥಾನಗಳಿಗೆ ಭೇಟಿ ನೀಡುತ್ತಾರೆಂದು ಕಾಣುತ್ತದೆ!) ಆದರೆ ಎಂ.ಪಿ. ಪ್ರಕಾಶ್, ಡಿ. ಮಂಜುನಾಥ್‌ರಂತಹ ಹಿರಿಯ ನಾಯಕರ ಸ್ಥಿತಿ ನೋಡಿ. ಬಿಜೆಪಿಯೊಂದಿಗೆ ಅಧಿಕಾರ ಹಂಚಿಕೊಂಡಾಗ, ಆ ಪಕ್ಷವನ್ನು ಕೋಮುವಾದಿ ಎಂದು ಕರೆಯಲಾಗದು ಎಂದು ತಮ್ಮ ಅಪಾರ ರಾಜಕೀಯ ಅನುಭವದ ಆಧಾರದ ಮೇಲೆ ತೀರ್ಪು ನೀಡಿದ್ದ ಪ್ರಕಾಶರು ಈಗ, ಬಿಜೆಪಿ ಹಿಂಸೆ ಹರಡುವ ಪಕ್ಷ ಎಂದು ಆರೋಪಿಸುತ್ತಿದ್ದಾರೆ. ಇದು ನೈತಿಕ ದಿವಾಳಿತನದ ಪರಾಕಾಷ್ಠೆಯ ರಾಜಕಾರಣವಲ್ಲದೆ ಮತ್ತೇನಲ್ಲ. ಇನ್ನು ಮುದಿ ಮಂಜುನಾಥರೋ, ಬಹುಕಾಲ ಸಚಿವ ಸಂಪುಟದಿಂದ ಹೊರಗಿದ್ದು ಆರ್ಥಿಕವಾಗಿ ಹೈರಾಣಾಗಿ, ಆದಷ್ಟು ಬೇಗ ಅಧಿಕಾರ ಸ್ಥಾನ ಪಡೆಯುವ ತರಾತುರಿಯಲ್ಲಿರುವ ಕಾರಣ, ಮೌನವಾಗಿರುವುದು ಲೇಸೆಂದು ಬಗೆದಿದ್ದಾರೆ ಎಂದೆನಿಸುತ್ತದೆ!

ಇನ್ನು ಅಸಂಬದ್ಧವನ್ನೇ ವ್ಯಾಕರಣಬದ್ಧವಾಗಿ ಮಾತನಾಡಿ ಅದಕ್ಕೆ ದೇವೇಗೌಡರಂತಹ ರಾಜಕೀಯ ಪಂಡಿತರಿಂದ ಮಾನ್ಯತೆ ದೊರಕಿಸಿಕೊಟ್ಟಿರುವ ವೈ.ಎಸ್.ವಿ. ದತ್ತ ಎಂಬ 'ಭಾಷಾ ತಜ್ಞ', ಬಿಜೆಪಿಯೊಂದಿಗೆ ಮೈತ್ರಿ ಮುರಿದುಕೊಳ್ಳುವ ಮೂಲಕ ತಮ್ಮ

ಪಕ್ಷ ಪಾಪ ಪರಿಹಾರ ಮಾಡಿಕೊಳ್ಳುತ್ತಿದೆ ಎಂದಿದ್ದಾರೆ. ಅಧಿಕಾರ ಹಸ್ತಾಂತರದ ಕೊನೆ ದಿನದವರೆಗೆ ಪಾಪವೆನಿಸದಿದ್ದದ್ದು, ಈಗ ಪಾಪವೆನ್ನಿಸತೊಡಗಿದ್ದರೆ ಇವರ 'ಪಾಪ ಪ್ರಜ್ಞೆ' ಎಷ್ಟು 'ಸಡಿಲ'ವಾಗಿಹೋಗಿರಬೇಕು! ತಮ್ಮ ಉಪಮುಖ್ಯಮಂತ್ರಿಯನ್ನು ತಮ್ಮ ಪಕ್ಷದವರೇ ಆದ ಸಚಿವರೊಬ್ಬರು ತಮ್ಮೆದುರಿನಲ್ಲೇ ವಿಧಾನ ಸಭೆಯಲ್ಲಿ ಅಸಮರ್ಥ, ಮುಖ್ಯಮಂತ್ರಿಯಾಗಲು ಯೋಗ್ಯರಲ್ಲ ಎಂದಾಗ, ಕುಮಾರಸ್ವಾಮಿಯವರಲ್ಲಿ ಇಲ್ಲದೇ ಹೋದ 'ರಾಜಕೀಯ ಮರ್ಯಾದೆ'ಯ ಪ್ರಜ್ಞೆ ಬಳ್ಳಾರಿಯಲ್ಲಿ ಬಿಜೆಪಿ ಸಚಿವರೊಬ್ಬರು ತಮ್ಮ ಮೇಲೆ ಕೊಲೆ ಆರೋಪ (ಅದನ್ನವರು ಹಿಂತೆಗೆದುಕೊಂಡು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಮೇಲೂ) ಮಾಡಿದೊಡನೆ ಜಾಗ್ರತವಾಗುತ್ತದೆ! ಜನಾರ್ದನ ರೆಡ್ಡಿಯ ೧೫೦ ಕೋಟಿ ರೂಪಾಯಿಗಳ ಲಂಚ ಆರೋಪ ಕಾಡತೊಡಗುತ್ತದೆ. ಆಟದ ನಿಯಮಗಳ ಬಗೆಗೆ ಗೌರವವೇ ಇಲ್ಲದೆ, ತನ್ನ ಅನುಕೂಲಕ್ಕೆ ತಕ್ಕಂತೆ ಅವನ್ನು ಬದಲಾಯಿಸಿಕೊಂಡು 'ಆಟ'ವಾಡಲೆಣಿಸುವ ಭಂಡರ ರಾಜಕಾರಣವಿದು. ಕರ್ನಾಟಕದ ರಾಜಕಾರಣ ಹಿಂದೆಂದೂ ಇಷ್ಟು ಅಶ್ಲೀಲವಾಗಿರಲಿಕ್ಕಿಲ್ಲ.

ಇದಕ್ಕೆ ಎಲ್ಲ ಪಕ್ಷಗಳ ಕೊಡುಗೆ ಇದೆ ಎಂಬುದೇ ಈ ಸಂದರ್ಭದ ನಿಜವಾದ ದುರಂತ. ಬಿಜೆಪಿಯಂತೂ ತನ್ನ ಅಧಿಕಾರದ ಹಪಾಹಪಿಯಲ್ಲಿ, ಜೆ.ಡಿ.(ಎಸ್) ತಾನು ಅಧಿಕಾರ ಹಂಚಿಕೊಂಡಿದ್ದ ಕಾಂಗ್ರೆಸ್ಸಿನ ಮುಖ್ಯಮಂತ್ರಿಯನ್ನು ಆಟ ಆಡಿಸುತ್ತಿದ್ದ ಪರಿ ಹಾಗೂ ಅಂದಿನ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ತಹಬಂದಿಗೆ ತರಲು ತನ್ನ ಮೊದಲ ಮೈತ್ರಿಯನ್ನು ಮುರಿದುಕೊಂಡ ರೀತಿಯನ್ನು ಗಮನಿಸಿಯೂ, ಆ ಪಕ್ಷದೊಂದಿಗೆ ಅದರ ಷರತ್ತುಗಳ ಮೇಲೇ ದೋಸ್ತಿ ಮಾಡಿಕೊಂಡಿತು. ಅತಿ ದೊಡ್ಡ ಶಾಸಕಾಂಗ ಪಕ್ಷವನ್ನು ಹೊಂದಿದ್ದೂ ಸರ್ಕಾರದಲ್ಲಿ ಕಿರಿಯ ಪಾಲುದಾರನಾಗಿ ಸೇರಿಕೊಂಡಿತು. ಇದೆಲ್ಲದಕ್ಕೆ ಹುಂಬತನವಷ್ಟೇ ಕಾರಣವಲ್ಲ. ಅದು ಅಪ್ಪಟ ಅವಕಾಶವಾದಿ ರಾಜಕಾರಣ ಕೂಡಾ. ಅದರ ಫಲವನ್ನು ಈಗ ಬಿಜೆಪಿ ಅನುಭವಿಸುತ್ತಿದೆ. ಹಾಗೇ, ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯ ಸೋಲು ಅನುಭವಿಸಿ ಜನತೆಯಿಂದ ತಿರಸ್ಕೃತವಾದ ಕಾಂಗ್ರೆಸ್, ವಿರೋಧ ಪಕ್ಷವಾಗಿ ಕೂರುವ ರಾಜಕೀಯ ವಿವೇಕವನ್ನಾಗಲೀ, ಮರ್ಯಾದೆಯನ್ನಾಗಲೀ ತೋರಲಿಲ್ಲ. ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವ ನೆಪದಲ್ಲಿ ಅದು ಜೆ.ಡಿ.(ಎಸ್)ನೊಂದಿಗೆ ಮೈತ್ರಿ ಮಾಡಿಕೊಂಡು ಆತ್ಮ ಗೌರವವೇ ಇಲ್ಲದೆ, ಅತ್ಯಂತ ಅಪಮಾನಕಾರಿ ರೀತಿಯಲ್ಲಿ ಅಧಿಕಾರ ನಡೆಸಿ, ತನ್ನ ಅಳಿದುಳಿದಿದ್ದ ವಿಶ್ವಾಸಾರ್ಹತೆಯನ್ನೂ ಕಳೆದುಕೊಂಡಿತು. ಆ ಮೂಲಕ ಕರ್ನಾಟಕದಲ್ಲಿ ಸಾಮಂತಶಾಹಿ ಕುಟುಂಬ ರಾಜಕಾರಣ ಹಾಗೂ ಸಂಕುಚಿತ ಕೋಮುವಾದಿ ರಾಜಕಾರಣಗಳಿಗೆ ಪರ್ಯಾಯವೇ ಇಲ್ಲದಂತೆ ಮಾಡಿತು.

ಇದೆಲ್ಲದರ ಹೊಣೆಯನ್ನು ಸಿದ್ಧರಾಮಯ್ಯನವರೇ ಹೊರಬೇಕಿದೆ. ಅವರು ತಮ್ಮ ಆಲಸಿ, ಬೇಜವಾಬ್ದಾರಿ ಹಾಗೂ ಸುಲಭ ರಾಜಕಾರಣದ ಮೂಲಕ ಕರ್ನಾಟಕದ ರಾಜಕೀಯ ಇತಿಹಾಸ ತಮಗೆ ನೀಡಿದ ಪಾತ್ರವನ್ನು ಧೈರ್ಯದಿಂದ, ವಿವೇಕದಿಂದ ನಿರ್ವಹಿಸದೇ

ಹೋಗಿ, ಇಂದಿನ ಈ ರಾಜಕೀಯ ದುಃಸ್ಥಿತಿಗೆ ಕಾರಣರಾಗಿದ್ದಾರೆ. ಹಾಗಾಗಿಯೇ ಇಂದು ರಾಜಕೀಯವಾಗಿ ಹೆಚ್ಚು ನಷ್ಟಕ್ಕೊಳಗಾಗಿರುವವರು ಹಾಗೂ ಹೆಚ್ಚು ಅನಾಥರಾಗಿರುವವರು ಅವರೇ ಆಗಿದ್ದಾರೆ. ಇದೆಲ್ಲದರ ಫಲವೆಂದರೆ, ಕರ್ನಾಟಕದ ಇಂದಿನ ಇಡೀ ರಾಜಕಾರಣ ಬಿಜೆಪಿ ಕೇಂದ್ರಿತವಾಗುತ್ತಿದ್ದು, ಅದರ ಲಾಭವನ್ನು ಮುಂದಿನ ದಿನಗಳಲ್ಲಿ ಬಿಜೆಪಿಯೇ ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ದುರದೃಷ್ಟಕರ.

* * *

ಈ ಬರಹವನ್ನು ಬರೆದು ಮುಗಿಸುವ ಹೊತ್ತಿಗೆ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ರಾಜ್ಯಪಾಲರು ಶಿಫಾರ್ಸು ಮಾಡಿರುವ ಸುದ್ದಿ ಬಂದಿದೆ. ಇದಕ್ಕೆ ಮುನ್ನ ಸೃಷ್ಟಿಯಾಗಿದ್ದ ಗೊಂದಲದ ಹಿನ್ನೆಲೆಯಲ್ಲಿ ಸದ್ಯಕ್ಕೆ ರಾಜ್ಯಪಾಲರಿಗೆ ಬಹುಶಃ ಇದನ್ನು ಬಿಟ್ಟು ಬೇರೆ ಪರ್ಯಾಯವಿರಲಿಲ್ಲವೇನೋ! ಜೊತೆಗೆ, ರಾಜ್ಯಪಾಲರು ತಮ್ಮ ಈ ನಿರ್ಧಾರದ ಮೂಲಕ ಕರ್ನಾಟಕದ ರಾಜಕಾರಣ ಈವರೆಗೆ ಕಂಡುದನ್ನು ಮೀರಿಸುವಂತಹ ಅಸಹ್ಯಕರ ಹಂತ ಮುಟ್ಟುವುದನ್ನು ತಪ್ಪಿಸಿದ್ದಾರೆಂದು ಕಾಣುತ್ತದೆ. ಏಕೆಂದರೆ, ಜೆ.ಡಿ.(ಎಸ್) ಹಾಗೂ ಬಿಜೆಪಿ ಪಕ್ಷಗಳ ಮುಖಂಡರಿಬ್ಬರೂ ಒಂದೆರಡು ದಿನಗಳಿಂದ ಮಾಡಿದ್ದ ವಾಂತಿಗಳನ್ನು ತಾವೇ ವಾಪಸ್ ಬಾಚಿ ತಿನ್ನುವ ಕೆಲಸಕ್ಕೆ ಸಿದ್ಧವಾಗುತ್ತಿದ್ದ ಸುದ್ದಿಗಳು ಬಂದಿದ್ದವು. ಇದನ್ನು ರಾಜಕಾರಣದಲ್ಲಿ ಎಲ್ಲವೂ ಸಾಧ್ಯ ಎಂಬ ಮಾತಿನ ಆಶ್ರಯದಲ್ಲಿ ಸಮರ್ಥಿಸಿಕೊಳ್ಳಲಾಯಿತು. ಈ ಎಲ್ಲವೂ ಸಾಧ್ಯ ಎನ್ನುವುದರಲ್ಲಿ ನಿಜವಾಗಿ ಎಲ್ಲವೂ ಸೇರಿದೆ: ಸುಳ್ಳು, ಮೋಸ, ದಗಾ, ತಟವಟ, ಬ್ಲಾಕ್‌ಮೇಲ್, ನಿರ್ಲಜ್ಜೆ, ತಾಯ್ಗಂ... ಇತ್ಯಾದಿ ಎಲ್ಲವೂ! ಹೀಗಾಗಿ ರಾಜಕಾರಣವನ್ನು ಆದಷ್ಟು ಬೇಗ ನಾಗರಿಕ ಅಪರಾಧ ಸಂಹಿತೆಯಡಿಯಲ್ಲಿ ವರ್ಗೀಕರಿಸಿ, ಅದನ್ನೊಂದು ಕ್ರಿಮಿನಲ್ ಚಟುವಟಿಕೆಯೆಂದು ಪರಿಗಣಿಸಬೇಕೆಂದು ಜನತೆ ಒತ್ತಾಯಿಸತೊಡಗಿದರೆ ಆಶ್ಚರ್ಯವಿಲ್ಲ! ಬಹುಶಃ ಕುಮಾರಸ್ವಾಮಿಯವರ ವಿರುದ್ಧವಿರುವ ೧೫೦ ಕೋಟಿ ರೂಪಾಯಿಗಳ ಗಣಿ ಲಂಚ ಹಗರಣ ಸರ್ವೋನ್ನತ ನ್ಯಾಯಾಲಯದಲ್ಲಿ ವಿಚಾರಣೆಗೆ ಬರಲಿರುವ ಆತಂಕದ ಹಿನ್ನೆಲೆಯಲ್ಲಿ, ಬಿಜೆಪಿಯನ್ನು ಬೆದರಿಸಿ ಮಣಿಸುವ ತನ್ನ ಕೊನೆಯ ಪ್ರಯತ್ನವೂ ವಿಫಲವಾದ ನಂತರ ಸ್ವತಃ ಜೆ.ಡಿ.(ಎಸ್) ತಾನೇ ಬಿಜೆಪಿಗೆ ಮಣಿಯಲು ಸಿದ್ಧತೆ ನಡೆಸಿತ್ತೆಂದು ತೋರುತ್ತದೆ.

ಅಧಿಕಾರವನ್ನು ಬಿಜೆಪಿಗೆ ವಹಿಸಿ ಕೊಡುವ ಅದರ ಈ ಸಲಹೆ, ಈವರೆಗೆ ಯೋಜನಾಬದ್ಧವಾಗಿ ಕಟ್ಟಲಾಗಿದ್ದ ಕುಮಾರಸ್ವಾಮಿಯವರ ಬಿಂಬವನ್ನು ದೀರ್ಘಕಾಲಿಕ ರಾಜಕಾರಣದ ದೃಷ್ಟಿಯಿಂದ ರಕ್ಷಿಸಿಕೊಳ್ಳುವ ಹಾಗೂ ದಿನೇ ದಿನೇ ಹೆಚ್ಚುತ್ತಿದ್ದ ಜನರ ಸಹಾನುಭೂತಿಯಿಂದಾಗಿ ಹೊಸ ಪ್ರಕಾಶ ಪಡೆಯುತ್ತಿದ್ದ ಯಡಿಯೂರಪ್ಪನವರ ಬಿಂಬವನ್ನು ಮಂಕುಗೊಳಿಸುವ ಅಪ್ಪ- ಮಕ್ಕಳ ಮತ್ತೊಂದು ರಾಜಕೀಯ ನಾಟಕವೂ ಆಗಿದ್ದಲ್ಲಿ ಆಶ್ಚರ್ಯವಿಲ್ಲ.(ಯಡಿಯೂರಪ್ಪನವರೂ ಈ ಬಲೆಗೆ ಬಿದ್ದು ತಮ್ಮ ಧರ್ಮಯುದ್ಧವನ್ನು ತುಮಕೂರಿನಲ್ಲಿ ಅರ್ಧಕ್ಕೇ ಬಿಟ್ಟು ಬೆಂಗಳೂರಿಗೆ ಓಡೋಡಿ ಬಂದಿದ್ದರಲ್ಲ!)

ಕುಮಾರಸ್ವಾಮಿಯವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡ ರೀತಿ ಹಾಗೂ ಈ ಇಡೀ ಅಧಿಕಾರ ಹಸ್ತಾಂತರ ನಾಟಕದ ಎಲ್ಲ ಅಸಹ್ಯಗಳನ್ನೂ, ತಪ್ಪು- ಒಪ್ಪುಗಳನ್ನೂ ವಿಧಿಯಾಟದ ಮಡಿಲಿಗೆ ಹಾಕಿ ತಮ್ಮನ್ನು ದುರಂತ ನಾಯಕನಂತೆ ಬಿಂಬಿಸಿಕೊಂಡ ರೀತಿ ಇಂತಹ ರಾಜಕೀಯ ನಾಟಕದ ರಚನೆಯನ್ನು ಪುಷ್ಟೀಕರಿಸುವಂತೆಯೇ ಇತ್ತು!

ಅಕ್ಟೋಬರ್ ೧೨- ೧೮, ೨೦೦೭

ಮರಳಿ ಬರಲಿದೆ ಸಮಾಜವಾದ !*

ಪುಸ್ತಕದ ಈ ಶೀರ್ಷಿಕೆಯೇ ಕೆಲವರಿಗೆ ವಿನೋದವನ್ನುಂಟು ಮಾಡಬಹುದು. ಸಮಾಜವಾದದ ಕಾಲದಿಂದ ಬಹು ದೂರ ಸಾಗಿ ಬಂದು ಆ ದಿನಗಳ ಕಷ್ಟ ಕಾರ್ಪಣ್ಯಗಳ ಬಗೆಗೆ ಜನ ನಿಟ್ಟುಸಿರು ಬಿಡುತ್ತಿರುವಾಗ, ಈಗ ಮತ್ತೆ ಸಮಾಜವಾದ ಮರಳಿ ಬರಲಿದೆ ಎನ್ನಲು ಎಷ್ಟು ಧೈರ್ಯ ಬೇಕು ಎಂದು ಇಂತಹವರು ಆಶ್ಚರ್ಯವನ್ನೂ ಪಡಬಹುದು! ಆದರೆ ಸಮಾಜವಾದದ ಸೋಲನ್ನು ಘೋಷಿಸುತ್ತ ನಮ್ಮನ್ನು ಆವರಿಸುತ್ತ ಬಂದ ಜಾಗತೀಕರಣದ ಪರಿಣಾಮಗಳು ಕ್ರಮೇಣ ಅನಾವರಣಗೊಳ್ಳುತ್ತ ಹೋಗುತ್ತಿರುವ ಹಾಗೆ, 'ಲೈಸೆನ್ಸ್- ಪರ್ಮಿಟ್ ರಾಜ್ಯ'ಕ್ಕೆ ಬದಲಿಯಾಗಿ ಮುಕ್ತ ಸ್ಪರ್ಧೆಯ ಆರ್ಥಿಕತೆಯನ್ನು ಸ್ವಾಗತಿಸಿದವರ ಮಧ್ಯದಿಂದಲೇ ನಿಧಾನವಾಗಿ ಜಾಗತೀಕರಣ ಉಂಟು ಮಾಡುತ್ತಿರುವ ಸಾಮಾಜಿಕ ಅನಾಹುತಗಳ ಬಗ್ಗೆ ಆತಂಕದ, ಎಚ್ಚರಿಕೆಯ ಮಾತುಗಳು ಕೇಳಿ ಬರುತ್ತಿವೆ. ಜಾಗತೀಕರಣ, ಸ್ಥಗಿತಗೊಂಡ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ದೃಷ್ಟಿಯಿಂದ ಮುಂದುವರಿದ ದೇಶಗಳು (ಗುಂಪು- ೮ರ ರಾಷ್ಟ್ರಗಳು) ಅಂತಾರಾಷ್ಟ್ರೀಯ ವ್ಯಾಪಾರದ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಿಕೊಳ್ಳಲು ನಡೆಸಿದ ಒಂದು ಜಾಗತಿಕ ಯೋಜನೆಯಾಗಿದ್ದು; ಇದರ ಭಾಗವಾಗಿಯೇ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೂಲಕ ಹರಿಸುತ್ತಿರುವ ಹಣದ ಹೊಳೆ, ಈ ಯೋಜನೆಗೆ ಅನುಕೂಲ ಪರಿಸ್ಥಿತಿ ನಿರ್ಮಾಣ ಮಾಡಿಕೊಳ್ಳುವ ಹುನ್ನಾರ ಮಾತ್ರವಾಗಿದೆ ಎಂಬ ಅರಿವು ಈಗ ಕೆಲವರಲ್ಲಾದರೂ ಉಂಟಾಗ ತೊಡಗಿದೆ.

---

* ಇದು ಪ್ರಸ್ತುತ ಲೇಖಕರ **ಮರಳಿ ಬರಲಿದೆ ಸಮಾಜವಾದ!** ಪುಸ್ತಕದ ಲೇಖಕನ ಮಾತುಗಳಿಂದ ಆಯ್ದ ಭಾಗಗಳು.

ಹಾಗಾಗಿಯೇ, ಜಾಗತೀಕರಣದ ಆರ್ಥಿಕ ನೀತಿಯನ್ನು ತುಂಬು ಉತ್ಸಾಹದಿಂದ ಜಾರಿಗೆ ತಂದ ನಮ್ಮ ಆಡಳಿತಗಾರರು ಚುನಾವಣೆಗಳಲ್ಲಿ ತಿರಸ್ಕೃತಗೊಂಡ ನಂತರ, 'ಮಾನವೀಯ ಮುಖ'ದ ಜಾಗತೀಕರಣದ ಮಾತುಗಳನ್ನಾಡತೊಡಗಿದ್ದಾರೆ! 'ಸಾಮಾನ್ಯ ಮನುಷ್ಯ'ನ ಒಳಿತನ್ನು ಗಮನದಲ್ಲಿಟ್ಟುಕೊಂಡು 'ಅಭಿವೃದ್ಧಿ'ಯನ್ನು ಸಾಧಿಸುವ ಸಾಮಾಜಿಕ ಎಚ್ಚರವನ್ನು ತಮ್ಮ ಆಡಳಿತದಲ್ಲಿ ಸಾಧಿಸಿಕೊಳ್ಳುವ ಒಲವು ತೋರಿದ್ದಾರೆ. ಹಾಗೇ, ಜಾಗತೀಕರಣದ ಹತ್ತು ವರ್ಷಗಳು ಉಂಟು ಮಾಡಿದ ಆರ್ಥಿಕ ಅಶ್ಲೀಲತೆ, ಆಡಂಬರಗಳ ದ್ವೀಪಗಳ ಬಗ್ಗೆ ಜಿಗುಪ್ಸೆ ವ್ಯಕ್ತಪಡಿಸುತ್ತಿದ್ದಾರೆ. ಲಕ್ಷಾಂತರ ಜನ ರೈತರ ಆತ್ಮಹತ್ಯೆ, ಆದಿವಾಸಿ ಜನರ ಬೃಹತ್ ಪ್ರಮಾಣದ ನಿರ್ವಸತೀಕರಣ ಹಾಗೂ ಬಡತನ ಮತ್ತು ಶ್ರೀಮಂತಿಕೆಗಳ ನಡುವೆ ಹೆಚ್ಚುತ್ತಿರುವ ಅಂತರದ ಸಮಸ್ಯೆಗಳಿಗೆ ತಮ್ಮ ಅಭಿವೃದ್ಧಿ ನೀತಿಯಲ್ಲಿ ಪರಿಹಾರ ಕಾಣದೆ ಕಂಗಾಲಾಗಿದ್ದಾರೆ. ಹೆಚ್ಚುತ್ತಿರುವ ಸಾಮಾಜಿಕ ಅಶಾಂತಿ ಹಾಗೂ ಅಪರಾಧಗಳ ವೈವಿಧ್ಯತೆಯಿಂದ ಆತಂಕಗೊಂಡಿದ್ದಾರೆ. ಆದರೂ, ಅಭಿವೃದ್ಧಿಯ ಬೇರೆ ದಾರಿಯೇ ಇಲ್ಲದವರಂತೆ, ಈ ಸಮಸ್ಯೆಗಳಿಗೆ ಹಲವು ರೀತಿಯ ಪ್ಯಾಕೇಜ್‌ಗಳ ಪ್ರಕಟಣೆ, ವಿಶೇಷ ಕರ್ತವ್ಯ– ದಳಗಳ ರಚನೆ ಮುಂತಾದ ತಾತ್ಕಾಲಿಕ ಉಪಶಮನ ಕ್ರಮಗಳನ್ನು ಕೈಗೊಂಡು, ವಿದೇಶಿ ಬಂಡವಾಳ ಆಧಾರಿತ 'ಅಭಿವೃದ್ಧಿ' ಕಲ್ಪನೆಯನ್ನು ನೆಚ್ಚಿಕೊಂಡೇ ಮುಂದುವರೆದಿದ್ದಾರೆ. ಬಹುಪಾಲು ಜನ ಕೂಡಾ ಈ ತಾತ್ಕಾಲಿಕ ಉಪಶಮನ ಕ್ರಮಗಳಿಂದ ತೃಪ್ತಗೊಂಡವರಂತೆ, ಈಗ ಕೆಲವರಿಗಷ್ಟೆ ಲಭ್ಯವಾಗುತ್ತಿರುವ ಜಾಗತೀಕರಣದ 'ಅನುಕೂಲ'ಗಳು ತಮ್ಮ ಕಡೆಗೂ ಹರಿದು ಬರುವ ದಿನಗಳು ದೂರವಿಲ್ಲ ಎಂಬ ನಿರೀಕ್ಷೆಯಲ್ಲಿ ಕಾಯುತ್ತಿರುವಂತೆ ತೋರುತ್ತದೆ. ಆದರೆ ಈ ನಿರೀಕ್ಷೆ ಸುಳ್ಳಾಗುವ ಎಲ್ಲ ಲಕ್ಷಣಗಳೂ ಕಾಣತೊಡಗಿವೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪರ್ಯಾಯ ಅಭಿವೃದ್ಧಿ ನೀತಿ ಹಾಗೂ ಮಾದರಿಗಳ ಅನ್ವೇಷಣೆ, ದೇಶದಲ್ಲಿ ಈಗ ಹೆಚ್ಚು ತುರ್ತಿನಿಂದ ನಡೆದಿದೆ. ಕೆಲವು, ಜನಾಂದೋಲನ ರೂಪದಲ್ಲಿ ನಡೆದಿದ್ದರೆ; ಮತ್ತೆ ಕೆಲವು ತಾತ್ವಿಕ ಪುನರನ್ವೇಷಣೆಯ ರೂಪದಲ್ಲಿ ನಡೆದಿವೆ. ಹಾಗೆ ನೋಡಿದರೆ; ಜಾಗತಿಕ ಮಟ್ಟದಲ್ಲಿಯೇ, ಜಾಗತೀಕರಣ ಉಂಟು ಮಾಡುತ್ತಿರುವ ಅಸಮ ಅಭಿವೃದ್ಧಿ, ಅಶ್ಲೀಲ ಗ್ರಾಹಕವಾದ, ಜನಾಂಗೀಯ ದ್ವೇಷ, ದುರಾಕ್ರಮಣದ ರಾಜಕಾರಣ ಹಾಗೂ ಜೀವ ಪರಿಸರದ ವಿನಾಶ ಮುಂತಾದ ಅನಾಹುತಗಳ ವಿರುದ್ಧ ಎಚ್ಚರಿಸುವ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನವೊಂದು ಆರಂಭವಾಗಿದೆ. ಹಿಂದುಳಿದ ಮತ್ತು ಮುಂದುವರಿದ ದೇಶಗಳೆಂಬ ಭೇದ ಭಾವಗಳಿಲ್ಲದೆ ಜಗತ್ತಿನ ಎಲ್ಲ ದೇಶಗಳ ಜನರೂ ಈ ಆಂದೋಲನದಲ್ಲಿ ಪಾಲ್ಗೊಂಡು ಪರ್ಯಾಯ ಅಭಿವೃದ್ಧಿ ನೀತಿ– ಮಾದರಿಗಳ ಚರ್ಚೆಯಲ್ಲಿ ತೊಡಗಿದ್ದಾರೆ. ಹೀಗೆ 'ವಿಶ್ವ ಸಾಮಾಜಿಕ ವೇದಿಕೆ' ಎಂಬ ಹೊಸ ಅಂತಾರಾಷ್ಟ್ರೀಯ ವೇದಿಕೆಯಡಿ ಸಮಾಜವಾದ ಕುರಿತಂತೆ ಪುನರಾಲೋಚನೆ ಆರಂಭವಾಗಿದೆ.

ಅಂದ ಮಾತ್ರಕ್ಕೆ ಇದು ಹಳೆಯ ಸಮಾಜದ ಪುನರಾಗಮನದ ಪ್ರಯತ್ನಗಳೆಂದು ಯಾರಾದರೂ ಭಾವಿಸಿದರೆ ತಪ್ಪು. ಬದಲಾಗಿ ಸಮಾಜವಾದ ಮುನ್ನೋಡಿದ್ದ ಶಾಂತಿಯುತ ಸಹಬಾಳ್ವೆಯ ಅಭಿವೃದ್ಧಿ ಮಾದರಿಗಳ ವೈಫಲ್ಯವನ್ನು ವಿಶ್ಲೇಷಿಸಿ, ಈವರೆಗಿನ ಅನುಭವಗಳ ಬೆಳಕಿನಲ್ಲಿ ಅದರ ಕೊರತೆಗಳನ್ನು ತುಂಬುವ ಮೂಲಕ; ಅದನ್ನು ಇಂದಿನ ಬದುಕಿನ ಸವಾಲುಗಳನ್ನು ಎದುರಿಸಲು ಹೇಗೆ ಸಿದ್ಧಗೊಳಿಸಬಹುದು ಎಂಬುದರ ಪರಿಶೀಲನೆಯ ಪ್ರಯತ್ನವಿದು. ಈ ದೃಷ್ಟಿಯಿಂದ ಮಾರ್ಕ್ಸ್‌ವಾದಿ ಆರ್ಥಿಕ ಸಮಾಜವಾದಕ್ಕಿಂತ ಭಿನ್ನವಾಗಿ, ಗಾಂಧೀಜಿಯ ಅಹಿಂಸಾತ್ಮಕ ಸಾಮಾಜಿಕ ದರ್ಶನದ ಆಧಾರದ ಮೇಲೆ ಕಟ್ಟಿಕೊಂಡ ಭಾರತೀಯ ಸಮಾಜವಾದ ಪ್ರತಿಪಾದಿಸಿದ ಮಧ್ಯಮ ಮಾರ್ಗದ ಜೀವನ ದೃಷ್ಟಿಯ ಅಭಿವೃದ್ಧಿ ಮಾದರಿಗಳ ಬಗ್ಗೆ ಇಂದು ಚರ್ಚೆ ಹೆಚ್ಚು ಅರ್ಥಪೂರ್ಣವೆನಿಸೀತು– ವಿಶೇಷವಾಗಿ, ಇಂದಿನ ಭಾರತೀಯ ಸಂದರ್ಭದಲ್ಲಿ. ಏಕೆಂದರೆ ಜಗತ್ತು ತಿರಸ್ಕರಿಸುವ ಆರ್ಥಿಕ ಸಮಾಜವಾದಕ್ಕೆ ಪರ್ಯಾಯವಾಗಿ ರೂಪಿತವಾಗಿದ್ದ ಈ 'ಸಾಂಸ್ಕೃತಿಕ' ಸಮಾಜವಾದ, ಇಂದು ಜಾಗತೀಕರಣ ಉಂಟು ಮಾಡುತ್ತಿರುವ ಎಲ್ಲ ಅನಾಹುತಗಳನ್ನು ಮುನ್ನೋಡಿಯೇ ತನ್ನ ತಾತ್ವಿಕತೆಯನ್ನು, ಅಭಿವೃದ್ಧಿ ಮಾದರಿಯನ್ನು ರೂಪಿಸಿಕೊಂಡಿತ್ತು. ಆದರೆ ಚರಿತ್ರೆಯ ಆಕಸ್ಮಿಕಗಳ, ಜನಪ್ರಿಯ ರಾಜಕಾರಣದ ಆಕರ್ಷಣೆಗಳ ಹಾಗೂ ನಾಯಕರ ವೈಯುಕ್ತಿಕ ದೌರ್ಬಲ್ಯಗಳ ಕಾರಣಗಳಿಂದಾಗಿ ಈ ಆಂದೋಲನ ಜನಮನದಲ್ಲಿ ಭದ್ರವಾಗಿ ಬೇರು ಬಿಡಲಿಲ್ಲ.

ಅಂದಿನ ನೆಹರೂ ಕೇಂದ್ರಿತ ರಾಜಕಾರಣದ ವಿರುದ್ಧ ಬಂಡೆದ್ದ ಈ ಸಮಾಜವಾದಿ ಆಂದೋಲನ, ಲೋಹಿಯಾ ನೇತೃತ್ವದಲ್ಲಿ ಒಂದು ಸೃಜನಶೀಲ ವೈಚಾರಿಕ ಆಂದೋಲನವಾಗಿ ಮಾತ್ರ ಯಶಸ್ವಿಯಾಗಿ, ಅವರ ಅಕಾಲಿಕ ಮರಣದಿಂದಾಗಿ ತನ್ನ ಕಾರ್ಯಶೀಲತೆಯನ್ನು ಸಾಬೀತುಪಡಿಸುವಲ್ಲಿ ಸೋತುಹೋಯಿತು. ಆದರೆ ಇಂದು ಸಮಾಜವಾದವೆಂದರೆ ನೆಹರೂರಿಂದ ಹಿಡಿದು ಇಂದಿರಾಗಾಂಧಿಯವರ ಆಡಳಿತ ಕಾಲದವರೆಗೆ ಜಾರಿಯಲ್ಲಿದ್ದ ಮಿಶ್ರ ಅರ್ಥವ್ಯವಸ್ಥೆಯ ಎಡಬಿಡಂಗಿ ಸಮಾಜವಾದವೇ ಎಂದಾಗಿ, ಅದರ ವೈಫಲ್ಯವನ್ನು ಇಡಿಯಾಗಿ ಭಾರತೀಯ ಸಮಾಜವಾದಿ ಚಳುವಳಿಯ ತಲೆಯ ಮೇಲೆ ಹೊರಿಸಲಾಗುತ್ತಿದೆ. ಭಾರತದಲ್ಲಿ ನೆಹರೂ ಪ್ರಯೋಗ ಮಾಡಿದ ಮತ್ತು ಇಂದಿರಾಗಾಂಧಿಯವರು ಮುಂದುವರಿಸಿದ ಸಮಾಜವಾದವೇ ಬೇರೆ ಎಂಬ ರಾಜಕೀಯ ಅರಿವಿಲ್ಲದೆಯೇ, ಸಮಾಜವಾದವನ್ನು ಕುರುಡು ಕುರುಡಾಗಿ ಲೈಸೆನ್ಸ್– ಪರ್ಮಿಟ್ ರಾಜ್ಯ ಎಂದು ಕರೆಯಲಾಗುತ್ತಿದೆ. ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ ನಾರಾಯಣ ಹಾಗೂ ಡಾ. ರಾಮಮನೋಹರ ಲೋಹಿಯಾ ರೂಪಿಸಿದ ಸಮಾಜವಾದವು ಮಾರ್ಕ್ಸ್‌ವಾದಿ ಸಮಾಜವಾದ ಹಾಗೂ ಬ್ರಿಟನ್ನಿನ ಲೇಬರ್ ಪಕ್ಷದ ಸಮಾಜವಾದಕ್ಕಿಂತ (ಅಥವಾ ಪಶ್ಚಿಮ ಯೂರೋಪಿನ 'ಕಲ್ಯಾಣ ರಾಜ್ಯ' ಮಾದರಿಯ ಸಮಾಜವಾದಕ್ಕಿಂತ) ತೀರಾ ಭಿನ್ನವಾಗಿದ್ದು, ಲೌಕಿಕ ಹಾಗೂ ಅಧ್ಯಾತ್ಮಿಕ ನೆಲೆಗಳೆರಡರಲ್ಲೂ ಮನುಷ್ಯನನ್ನು ರೂಪಿಸುವಂತಹ ರಾಜಕಾರಣವನ್ನು ನೆಮ್ಮಿಕೊಂಡಿದ್ದಾಗಿತ್ತು. ಹಾಗಾಗಿ ಇಂದು ಸಾಂಸ್ಕೃತಿಕ ಸಮಾಜವಾದದ ಪುನರನ್ವೇಷಣೆ ಅತ್ಯಗತ್ಯವಾಗಿದೆ. ಈ ದೃಷ್ಟಿಯಿಂದ

ಲೋಹಿಯಾರ 'ಕಾಲದ ಜೊತೆ ಹೆಜ್ಜೆ ಹಾಕುವಾಗ ನಾನು ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿರುವೆನೇನೋ.... ಆದರೆ ಒಂದಲ್ಲ ಒಂದು ದಿನ ದೇಶ ನನ್ನ ಮಾತನ್ನು ಕೇಳಲೇಬೇಕಾಗುತ್ತದೆ....!' ಎಂಬ ಮಾತು ಇಲ್ಲಿ ಅರ್ಥಪೂರ್ಣವಾಗಿ ಅನುರಣಿಸುತ್ತದೆ.

ಹಾಗಾಗಿ, 'ಮರಳಿ ಬರಲಿದೆ ಸಮಾಜವಾದ!' ಎಂಬ ಈ ಪುಸ್ತಕದ ಶೀರ್ಷಿಕೆ ಹೊಸ ಅರ್ಥ(Value)ವನ್ನೇ ಪಡೆಯುತ್ತದಲ್ಲದೆ, ಹೊಸ ರಾಜಕೀಯ ಸಂದರ್ಭ(Perspective)ವನ್ನು ಸೃಷ್ಟಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಇಲ್ಲಿನ ಲೇಖನಗಳು ಈ ಹೊಸ ಅರ್ಥವನ್ನು, ಹೊಸ ರಾಜಕೀಯ ಸಂದರ್ಭವನ್ನು ಸ್ಪಷ್ಟಪಡಿಸುವ, ವಿಷದೀಕರಿಸುವ ಪ್ರಯತ್ನಗಳನ್ನು ಮಾಡುತ್ತವೆ. ಆ ಮೂಲಕ ಈ ಪುಸ್ತಕ ಸಮಾಜವಾದಿ ಚಳುವಳಿಯ ವಸ್ತುನಿಷ್ಠ ವಿಮರ್ಶೆ ಮಾಡುವುದಲ್ಲದೆ, ಸಮಾಜವಾದಿಗಳ ವೈಯುಕ್ತಿಕ ಹಾಗೂ ರಾಜಕೀಯ ವರ್ತನೆಗಳನ್ನು ಕಟು ವಿಮರ್ಶೆಗೆ ಒಳಪಡಿಸುತ್ತದೆ. ಹಾಗೇ ಈ ವಿಮರ್ಶೆಯನ್ನು ಆಧಾರವಾಗಿಟ್ಟುಕೊಂಡು, ವರ್ತಮಾನದ ಸವಾಲುಗಳನ್ನು ಎದುರಿಸುತ್ತಾ ಹೊಸ ಸಮಾಜವಾದವನ್ನು ಕಟ್ಟಲು ಅಗತ್ಯವಾದ ವೈಚಾರಿಕ ಆಕೃತಿಗಳ ಹೊಳಹು ನೀಡಲು ಯತ್ನಿಸುತ್ತದೆ. ಹಾಗಾಗಿಯೇ ಇಲ್ಲಿನ ಲೇಖನಗಳನ್ನು ಸಮಕಾಲೀನ ಸಮಾಜವಾದಿ ಚಿಂತನೆಗಳು ಎಂದು ಕರೆಯಲಾಗಿದೆ. 'ಲೋಹಿಯಾ ಸಮಾಜವಾದ : ಮುಂದೇನು?' ಎಂಬ ಲೇಖನವನ್ನು ಪುಸ್ತಕದ ಒಟ್ಟಾರೆ ಪರಿಣಾಮದ ಕ್ರೋಢೀಕರಣದ ದೃಷ್ಟಿಯಿಂದ ಕೊನೆಯಲ್ಲಿ ಪ್ರಸ್ತುತಪಡಿಸಲಾಗಿದೆಯಾದರೂ, ಅದು ಪುಸ್ತಕದುದ್ದಕ್ಕೂ ಲಾಳಿಯಾಡುತ್ತಾ ಎಲ್ಲ ಲೇಖನಗಳಿಂದ ನೂಲು ಪಡೆದು, ಹೊಸ ಸಮಾಜವಾದದ ನೇಯ್ಗೆಗೆ ಪ್ರಯತ್ನಿಸುವುದನ್ನು ಓದುಗರು ಗಮನಿಸಬಹುದು. ಹಿಂದೂ ಮತ್ತು ಬೌದ್ಧ ಧರ್ಮಗಳ ನಡುವಣ ಸಂಬಂಧವನ್ನು ಕುರಿತ ಇಲ್ಲಿನ ಲೇಖನ ಪ್ರಸ್ತುತವಾಗುವುದೇ ಈ ನೆಲೆಯಲ್ಲಿ.

ಇಂದು ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ ಎಂಬುದಿಲ್ಲ. ಆದರೆ ಸಮಾಜವಾದಿ ಚಳುವಳಿಯ ದಟ್ಟ ಸ್ಮೃತಿ ಇದೆ. ಅದರಿಂದ ಸ್ಫೂರ್ತಿ ಪಡೆದೇ, ಅದರ ಮೇಲೆ ಆಸೆ ಇಟ್ಟೇ ಇಲ್ಲಿನ ಲೇಖನಗಳನ್ನು ಬರೆಯಲಾಗಿದೆ. ಇಂದಿನ ಜಾಗತೀಕರಣದ ಇಕ್ಕಟ್ಟಿನ ಸಂದರ್ಭದಲ್ಲಿ ಸಮಾಜವಾದಿ ಚಳುವಳಿ ಯಾವುದಾದರೊಂದು ರೂಪದಲ್ಲಿ ಚಿಗುರೊಡೆಯಲೇಬೇಕು ಎಂಬ ನಂಬಿಕೆ ಈ ಪುಸ್ತಕದ ಪ್ರಕಟಣೆಗೆ ಕಾರಣವಾಗಿದೆ. ಕಾವೇರಿ ಚಳುವಳಿ ಹಾಗೂ ಕನ್ನಡ ಕಟ್ಟುವ ಕಾಯಕ ಕುರಿತ ಇಲ್ಲಿನ ಎರಡು ಲೇಖನಗಳು ಭಾರತೀಯ ಸಮಾಜವಾದದ ಎರಡು ಮುಖ್ಯ ಆಧಾರಸ್ತಂಭಗಳಾದ ರಾಜಕೀಯ ಅಧಿಕಾರದ ವಿಕೇಂದ್ರೀಕರಣ ಹಾಗೂ ಭಾರತೀಯ ಭಾಷಾ ಆಂದೋಲನವನ್ನು ಗಮನದಲ್ಲಿಟ್ಟುಕೊಂಡು ಈ ಸಂಗ್ರಹದಲ್ಲಿ ಅಳವಡಿಸಿಕೊಳ್ಳಲಾಗಿದೆ. ನನ್ನ ನಾಲ್ಕು ಹಳೆಯ ಲೇಖನಗಳನ್ನು ಇಲ್ಲಿ ಸೇರಿಸಿಕೊಂಡಿರುವುದೂ ಈ ದೃಷ್ಟಿಯಿಂದಲೇ– ಭಾರತೀಯ ಸಮಾಜವಾದದ ಸಮಗ್ರ ಸಂಶ್ಲೇಷಣೆಗಾಗಿ. ಕೊನೆಯಲ್ಲಿ ನೀಡಲಾಗಿರುವ ಪ್ರಶ್ನೋತ್ತರ ರೂಪದ ಎರಡು ಅನುಬಂಧಗಳು ಈ ಸಂಶ್ಲೇಷಣೆಗೆ ಪೂರಕವಾಗಿವೆ ಎಂದುಕೊಂಡಿದ್ದೇನೆ. ಹಾಗೂ, ಇಲ್ಲಿನ ಲೇಖನಗಳನ್ನು

ಬೇರೆ ಬೇರೆ ಸಂದರ್ಭಗಳಲ್ಲಿ ಬರೆದವಾದ್ದರಿಂದ ಕೆಲವು ವಿಷಯಗಳು ಅಲ್ಲಲ್ಲಿ ಪುನರಾವರ್ತನೆ ಆಗಿದ್ದರೆ, ಓದುಗರ ಕ್ಷಮೆ ಇರಲಿ.

ಅಕ್ಟೋಬರ್ ೧೨- ೧೯, ೨೦೦೭

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು !

ಕಳೆದ ಭಾನುವಾರ ಶಿವಮೊಗ್ಗದಲ್ಲಿ ಯು.ಆರ್.ಅನಂತಮೂರ್ತಿಯವರು ನನ್ನ 'ಮರಳಿ ಬರಲಿದೆ ಸಮಾಜವಾದ!' ಪುಸ್ತಕವನ್ನು ಬಿಡುಗಡೆ ಮಾಡುತ್ತಾ, ಇಂದಿನ ಸಂದರ್ಭಕ್ಕೆ ಮುಖ್ಯವೆನಿಸುವ ಅನೇಕ ಮಾತುಗಳನ್ನಾಡಿದರು. ಸಮಾಜವಾದ ಕುರಿತಂತೆ ಹೊಸದೆನ್ನುವಂತಹ ಒಳನೋಟಗಳನ್ನು ನೀಡಿದರು. ಇಂದಿನ ರಾಷ್ಟ್ರ ಮತ್ತು ರಾಜ್ಯ ರಾಜಕಾರಣ ಕುರಿತಂತೆ ತಮ್ಮದೇ ವೈಯುಕ್ತಿಕ ಅಭಿಪ್ರಾಯಗಳನ್ನು ದಾಖಲಿಸಿದರು. ಬೆಂಗಳೂರಿನಲ್ಲಿ ಕೌಟುಂಬಿಕವಾದ ತುರ್ತು ಕೆಲಸವಿರುವುದರಿಂದ ಆದಷ್ಟು ಬೇಗ ಸಮಾರಂಭದಿಂದ ತಮ್ಮನ್ನು ಕಳಿಸಿಕೊಡಬೇಕೆಂದು ಹೇಳಿದ್ದ ಅವರು; ಸಮಾರಂಭಕ್ಕೆ ಬಂದಿದ್ದ ಜನಸಮೂಹವನ್ನು ನೋಡಿ, ಈ ಜನಸಮೂಹದ ಮಧ್ಯೆ ಬೆರೆತಿದ್ದ ತಮ್ಮ ಓರಿಗೆಯ ಅನೇಕ ಸಮಾಜವಾದಿ ಮಿತ್ರರ ಎದುರಿನಲ್ಲಿ ವಿನೀತರಾದಂತೆ, ಕಾಲ ಮರೆತು ಸಮಾರಂಭ ಮುಗಿಯುವವರೆಗೂ ಕೂತರು! ತಮ್ಮ ಭಾಷಣದ ನಂತರವೂ ಎದ್ದು ಬಂದು ಇತರರ ಮಾತುಗಳಿಗೆ ಪ್ರತಿಕ್ರಿಯಿಸುವ ಸಡಗರ ತೋರಿದರು... ಒಂದೆರಡು ತಿಂಗಳುಗಳ ಹಿಂದೆ 'ಆವರಣ' ಹಗರಣದ ಸಂದರ್ಭದಲ್ಲಿ ತಮ್ಮ ಮೇಲೆ ನಡೆದಿದ್ದ 'ಆಕ್ರಮಣ'ದ ಬಗ್ಗೆ ನನ್ನೊಡನೆ ಮಾತಾಡುತ್ತಾ, 'ನನಗೆ ೭೫ ವರ್ಷ ಎಂಬುದು ನೆನಪಿರಲಿ ನಾಗಭೂಷಣ; ಇದನ್ನೆಲ್ಲ ಸಹಿಸುವುದು ಕಷ್ಟ...' ಎಂದು ಖಿನ್ನರಾಗಿ ಹೇಳಿದ್ದ ಅನಂತಮೂರ್ತಿ ಇವರೇನಾ ಎಂದು ಆಶ್ಚರ್ಯಪಡುವಷ್ಟು ಉತ್ಸಾಹ– ಆಸಕ್ತಿಗಳಿಂದ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು– ಅದೂ ಹಿಂದಿನ ಸಂಜೆಯವರೆಗೆ ಹೆಗ್ಗೋಡಿನಲ್ಲಿ ಒಂದು ವಾರದ 'ನೀನಾಸಂ' ಸಾಂಸ್ಕೃತಿಕ ಶಿಬಿರದ ನಿರ್ದೇಶಕತ್ವ ವಹಿಸಿದ ಬಳಲಿಕೆಯ ನಂತರವೂ!

ಅವರ ಮಾತುಗಳನ್ನು ಕೇಳಲು ಬಂದಿದ್ದ ಜನಸಮೂಹ ಕೂಡ ಕಥೆ– ಉಪಕಥೆ– ದೃಷ್ಟಾಂತ– ನೆನಪು– ಉಲ್ಲೇಖಗಳನ್ನು ಹದವಾಗಿ ಬೆರೆಸಿ ಅವರು ಮಾಡಿದ ಭಾಷಣದ ಮೋಡಿಗೊಳಗಾದಂತೆ ಅಲುಗಾಡದೆ ಕೂತಿತ್ತು. ರಾಜೇಂದ್ರ ಚೆನ್ನಿಯವರು ತಮ್ಮ ನಂತರದ

ಪ್ರತಿಕ್ರಿಯೆಯಲ್ಲಿ ಇದನ್ನು ಉಪನಿಷತ್ (ಗುರುವಿನ ಹತ್ತಿರವೇ ಕೂತು ಕೇಳುವ) ಶೈಲಿಯ ವಿಚಾರ ಮಂಡನೆ ಎಂದದ್ದು ಸ್ವಲ್ಪ ಅತಿಯಾಯಿತೆನಿಸಿದರೂ, ಅನಂತಮೂರ್ತಿಯವರು ಅಂದಿನ ಆ ಲೋಹಿಯಾ– ನೆಹರೂ ಕಾಲದ ರಾಜಕಾರಣ ಹಾಗೂ ಇಂದಿನ ಈ ದೇವೇಗೌಡ– ಯಡಿಯೂರಪ್ಪ ರಾಜಕಾರಣದ ಮಧ್ಯೆ ಕಳೆದುಹೋಗಿರುವ ಮೌಲ್ಯಪ್ರಜ್ಞೆ ಹಾಗೂ ರಾಜಕೀಯ ಕೌಶಲ್ಯಗಳ ವಿವೇಚನೆ ಮಾಡುತ್ತಾ, ಸಮಕಾಲೀನ ರಾಜಕಾರಣದ ಭಿತ್ತಿಯಲ್ಲಿ ಹೊಸ ಸಮಾಜವಾದದ ಚಿತ್ರ ಬಿಡಿಸಿದ ರೀತಿ ತಲೆ ತೂಗುವಂತಿತ್ತು. ಮುಖ್ಯವಾಗಿ ಸಮಯ ಪ್ರಜ್ಞೆಯ ರಾಜಕೀಯ ಹಾಗೂ ಸಮಯಸಾಧಕ ರಾಜಕೀಯಗಳ ನಡುವಣ ವ್ಯತ್ಯಾಸಗಳನ್ನು ಸೋದಾಹರಣವಾಗಿ ವಿಷದೀಕರಿಸುವ ಮೂಲಕ ಇಂದಿನ ರಾಜಕೀಯವನ್ನು ಗ್ರಹಿಸುವ, ಮೌಲ್ಯಮಾಪನ ಮಾಡುವ ಬಗೆಯನ್ನು ಅವರು ತಮ್ಮದೇ ಸೃಜನಶೀಲ ವಿಚಾರ ಮಂಡನೆಯ ಶೈಲಿಯಲ್ಲಿ ವಿವರಿಸಿದರು. ಲೋಹಿಯಾರ ಆಗಿನ ನೆಹರೂ ವಿರೋಧ ಹಾಗೂ ಕಾಂಗ್ರೆಸ್ಸೇತರವಾದ ಸಮಯಪ್ರಜ್ಞೆಯ ಉದಾಹರಣೆಗಳಾದರೆ, ದೇವೇಗೌಡರ ಈಗಿನ ಜಾತ್ಯತೀತತೆಯ ಹುಯಿಲು ಸಮಯಸಾಧಕ ರಾಜಕಾರಣದ ಉದಾಹರಣೆಗಳೆಂದರು. ತಮ್ಮ ಗೆಳೆಯ ಜಾರ್ಜ್ ಫರ್ನಾಂಡೀಸ್ ಇಂತಹುದೇ ಸಮಯಸಾಧಕ ರಾಜಕಾರಣ ಮಾಡಿ ಸಮಾಜವಾದದ ವಿಶ್ವಾಸಾರ್ಹತೆಯನ್ನು ಹಾಳುಗೆಡಹಿದ್ದನ್ನು ಹೇಳಲು ಅವರು ಮರೆಯಲಿಲ್ಲ.

ನನ್ನನ್ನು ಕಷಾಯ ಗುಣವುಳ್ಳ ಬರವಣಿಗೆಯ ರಾಜಕೀಯ ವಿಶ್ಲೇಷಕ ಎಂದು ಎಂದಿನ ತಮ್ಮ ಸಹಜ ಶೈಲಿಯಲ್ಲಿ ಬೆನ್ನು ತಟ್ಟಿದ ಅನಂತಮೂರ್ತಿಯವರು, ನನ್ನ ಬರವಣಿಗೆಯ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದು ಒಂದೆರಡು ಸಲಹೆಗಳನ್ನೂ ನೀಡಿದರು. ಒಂದು ಘಟನೆಯ ವಿಶ್ಲೇಷಣೆ ಮಾಡುವಾಗ ಸ್ವತಃ ನಾನು ಆ ಘಟನೆಯ ಮಧ್ಯೆ ಇದ್ದರೆ ಹೇಗೆ ವರ್ತಿಸುತ್ತಿದ್ದೆ ಎಂದು ಯೋಚಿಸಿ ಬರೆಯಬೇಕೆಂದು ಅವರು ಸೂಚಿಸಿದರು. ಬಹುಶಃ ಈ ಹಿಂದೆ ಒಂದೆರಡು ಬಾರಿ ನನ್ನ ಬರಹಗಳಲ್ಲಿ/ ಪ್ರತಿಕ್ರಿಯೆಗಳಲ್ಲಿ ಅವರ ಕೆಲವು ವಿರೋಧಾಭಾಸದ ವರ್ತನೆಗಳನ್ನು/ ಹೇಳಿಕೆಗಳನ್ನು ಟೀಕಿಸಿದ್ದುದು ಅವರ ಮನಸ್ಸಿನಲ್ಲಿ ಇದ್ದಿತೆಂದು ಕಾಣುತ್ತದೆ. ಹಾಗೇ ಅವರು ಸಮಯ ಪ್ರಜ್ಞೆ– ಸಮಯಸಾಧಕತೆಯ ವ್ಯತ್ಯಾಸಗಳ ಬಗ್ಗೆ ಆಡಿದ ಮಾತೂ, ಬದಲಾಗಬೇಕಾದ ನನ್ನ ಬರವಣಿಗೆಯ ಕ್ರಮದ ಸಂಬಂಧ ನೀಡಿದ ಸಲಹೆಯ ವಿಷದೀಕರಣವೇ ಆಗಿತ್ತೆಂದು ಕಾಣುತ್ತದೆ. ಏಕೆಂದರೆ, ಅವರು ಅದರ ಪ್ರಸ್ತಾಪ ಮಾಡಿದ್ದೇ, ಎರಡು ವರ್ಷಗಳ ಹಿಂದೆ 'ಅಹಿಂದ' ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ನಾನು ಅಹಿಂದದ ರಾಜಕಾರಣ ಹೇಗೆ ತತ್ವಕೇಂದ್ರಿತವಾಗದೆ, ವ್ಯಕ್ತಿಕೇಂದ್ರಿತವಾಗುತ್ತಿದೆ ಎಂದು ವಿವರಿಸಿ ಭಾಷಣ ಮಾಡಿದ ನಂತರ ಅಲ್ಲಿ ನನ್ನೊಡನೆ ಆಡಿದ್ದ ಒಂದು ಮಾತನ್ನು ಇಲ್ಲಿ ಈಗ ಪುನರುಚ್ಚರಿಸುವ ಮೂಲಕ!

ಅದು ಪಟ್ಟಭದ್ರರ ಕುಟಿಲ ರಾಜಕಾರಣವನ್ನು ಸೂಚ್ಯವಾಗಿ ತಿಳಿಸಲು ಗೋಪಾಲ ಗೌಡರು ಆಡಿದರೆಂದು ಹೇಳಲಾದ ಮಾತು: 'ಭೂಮಿಯನ್ನು ಹಂಚಿಕೊಳ್ಳುವ ಮುನ್ನ

ಆಕಾಶ ಹಂಚಿಕೊಂಡು ಮುಗಿಸೋಣ'! ಈ ಮೂಲಕ ನನಗೆ ಅನಂತಮೂರ್ತಿಯವರು ಸ್ಪಷ್ಟವಾಗಿ ನೀಡಿದ ಸೂಚನೆಯೆಂದರೆ, ತತ್ವಾದರ್ಶಗಳ ಪ್ರಜ್ಞೆಗಿಂತ ಮುಖ್ಯವಾದುದು ವಾಸ್ತವ ಪ್ರಜ್ಞೆ. ಇದು ನನಗೆ ತಿಳಿಯದ ಸತ್ಯವೇನಲ್ಲ. ಹಾಗೆಂದು ಹೇಳುತ್ತಲೇ ಅವರು ನನಗೆ ಈ ಸಲಹೆ ನೀಡಿದರು! ಆದರೆ ಆದರ್ಶ ಹಾಗೂ ವಾಸ್ತವಗಳ ನಡುವಣ ಸಂಬಂಧ ಕುರಿತಂತೆ ನನ್ನ ಹಾಗೂ ಅನಂತಮೂರ್ತಿಯವರ ಅರಿವು ಬೇರೆ ಬೇರೆ ನೆಲೆಗಳಿಗೆ ಸೇರಿದವೆಂದು ಕಾಣುತ್ತದೆ. ಹಾಗಾಗಿ, ಅವರ ಭಾಷಣ ಮುಗಿದ ನಂತರ ನನಗೆ ಪ್ರತಿಕ್ರಿಯಿಸುವುದು ಅಗತ್ಯವೆನಿಸಿ, ನಾನು ಈ ಮಾತುಗಳನ್ನು ಹೇಳಲೇಬೇಕಾಯಿತು: ವಾಸ್ತವ ಪ್ರಜ್ಞೆ ಎನ್ನುವುದು ಸಮಯ ಪ್ರಜ್ಞೆ ಹಾಗೂ ಸಮಯಸಾಧಕತನಗಳ ನಡುವಣ ಗೆರೆ ಅಳಿಸಿಹೋಗುವಷ್ಟು ಅಸ್ಪಷ್ಟವಾದಾಗ, ಸನ್ನಿವೇಶವನ್ನು ಸ್ಪಷ್ಟಪಡಿಸುವುದು ತತ್ವಾದರ್ಶಗಳೇ. ಹಾಗೆ ನೋಡಿದರೆ, ಅವನ್ನು ಮರೆತ ವಾಸ್ತವ ಪ್ರಜ್ಞೆ ಎಂಬುದೇ ಇರಲಾರದು. ವಿಶೇಷವಾಗಿ, ಹಲವು ಆಕರ್ಷಣೆಗಳ ಈ ಆಧುನಿಕ ಕಾಲದಲ್ಲಿ. ಹೀಗಾಗಿ ಇಂದು ಆಕಾಶ ಪ್ರಜ್ಞೆ ಇಲ್ಲದ ಮನುಷ್ಯ ಮೃಗ ಮಾತ್ರ ಆಗುತ್ತಾನೆ. ಭೂಮಿ ಗ್ರಹಿಕೆಗೆ ಸಿಗುವುದೂ ಆಕಾಶದ ಸಾಪೇಕ್ಷದಲ್ಲೇ. ಹಾಗೇ, ವಾಸ್ತವವೆಂಬುದು ಗ್ರಹಿಕೆಗೆ ಸಿಗುವುದೂ ಕೆಲವು ನಂಬಿಕೆಗಳ– ತತ್ವಾದರ್ಶಗಳ– ಆಧಾರದಲ್ಲೇ.

ಆದರೂ ಅನಂತಮೂರ್ತಿಯವರು ನನಗೆ ಹೀಗೆ ಸಲಹೆ ನೀಡಿದ್ದು ನನ್ನಲ್ಲೇನೂ ಆಶ್ಚರ್ಯವನ್ನುಂಟು ಮಾಡಲಿಲ್ಲ. ಏಕೆಂದರೆ, ಅವರು ಪಕ್ಕಾ ವಾಸ್ತವವಾದಿ ಎಂಬುದು ನನಗೆ ಹೊಸ ವಿಷಯವೇನಾಗಿರಲಿಲ್ಲ! ಸ್ವತಃ ಅವರಿಗೆ ಅದನ್ನು ಈಗ್ಗೆ ಒಂದೆರಡು ತಿಂಗಳುಗಳ ಹಿಂದೆ ಪರೋಕ್ಷವಾಗಿ ಹೇಳಿಯೂ ಇದ್ದೆ. ಅವರ ಪುಸ್ತಕವೊಂದನ್ನು ನಾನು ಮಾಸ ಪತ್ರಿಕೆಯೊಂದಕ್ಕಾಗಿ ವಿಮರ್ಶಿಸಿದ ಪರಿ ಅವರಿಗೆ ಇಷ್ಟವಾಗದಿದ್ದುದನ್ನು ಯಾವುದೋ ಮಾತಿನ ಮಧ್ಯೆ ಅವರು ಪ್ರಸ್ತಾಪಿಸಿದಾಗ ನಾನು ಹೇಳಿದ್ದು ಇದು: 'ನೀವು ಹೇಳಬೇಕಾದ ಮಾತನ್ನು ಹೇಳಬೇಕಾದವರಿಗೆ ಹೇಳಬೇಕಾದಾಗ ಹೇಳದಿರುವುದೇ, ನಿಮ್ಮ ದೊಡ್ಡ ದೌರ್ಬಲ್ಯ. ನಿಮ್ಮ ದಾಕ್ಷಿಣ್ಯ ನಿಮ್ಮ ಪ್ರತಿಭೆಗೆ ಕುಂದು ತಂದಿದೆ.' ಅದಕ್ಕವರು ತಮ್ಮ ದಾಕ್ಷಿಣ್ಯವೇನಿದ್ದರೂ, ವ್ಯಕ್ತಿಗಳಿಗೆ ಸಂಬಂಧಿಸಿದಂತೆಯೇ ಹೊರತು ವಿಚಾರಗಳಿಗೆ ಸಂಬಂಧಿಸಿದಂತೆ ಅಲ್ಲ ಎಂದೇನೋ ಹೇಳಿದರು. ಆದರೆ ವಿಚಾರಗಳು ಹೊಮ್ಮುವುದೂ ವ್ಯಕ್ತಿಗಳ ಮೂಲಕವೇ ಅಲ್ಲವೇ ಎಂದು ಹೇಳಬೇಕೆನಿಸಿದರೂ, ನನ್ನ ಮಾತು ವೃಥಾ ವಾದವಾಗಿ ಬೆಳಯಬಾರದೆಂದು ಸುಮ್ಮನಾದೆ.

ವಿಚಾರವೇನೇ ಇರಲಿ, ಮನುಷ್ಯ ಮುಖ್ಯ ಎಂಬ ಅನಂತಮೂರ್ತಿಯವರ ಮಾತನ್ನು ಒಪ್ಪಬೇಕಾದದ್ದೇ. ಆದರೆ, ಮನುಷ್ಯನ ಬಗ್ಗೆ ಗೌರವವಿಟ್ಟುಕೊಂಡೇ, ಆತನ ವಿಚಾರಗಳು, ಕೃತ್ಯಗಳು ಕೆಟ್ಟವು ಎಂದು ಅನ್ನಿಸಿದಾಗ ಆ ಬಗ್ಗೆ ಮಾತಾಡಲು ಇರುವ ತೊಂದರೆಂಯಾದರೂ ಏನು– ಅದೂ ಸಾರ್ವಜನಿಕ ಬುದ್ಧಿಜೀವಿ ಎಂದು ಕರೆಸಿಕೊಳ್ಳುವಾತನಿಗೆ? ನನ್ನನ್ನು ಸಮಾಜವಾದಿ ಚಿಂತನೆಯ ಒಳಗಿನ ಟೀಕಾಕಾರ (Critical insider) ಎಂದು ಕರೆದ ಅನಂತಮೂರ್ತಿಯವರು, ಆಳುವವರು ನಮ್ಮವರೇ ಆಗಿದ್ದಾಗ

ಅವರಿಗೆ ಇಂತಹ ಟೀಕಾಕಾರರು ಹೇಳಬೇಕಾದುದನ್ನು ಕಿವಿಯಲ್ಲಾದರೂ ಹೇಳಬೇಕು ಎಂದು ಸೂಚಿಸಿದರು. ತಮ್ಮ ಪ್ರಿಯ ಮಿತ್ರ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ತಾವು ಅನೇಕ ಬಾರಿ ಇಂತಹ ಕಿವಿಮಾತುಗಳನ್ನು ಹೇಳಿದ್ದಾಗಿಯೂ; ಅವರು ಅದನ್ನು ಕೇಳಿದ್ದಾಗಿಯೂ ಅನಂತಮೂರ್ತಿ ಹೇಳಿದರು. ಆದರೂ, ನಮ್ಮ ಇತ್ತೀಚಿನ ರಾಜಕಾರಣಿಗಳ ಪೈಕಿ ಅತ್ಯಂತ ಪ್ರತಿಭಾಶಾಲಿಯಾಗಿದ್ದ ಪಟೇಲರು ಆಡಳಿತಗಾರನಾಗಿ ಮಾತ್ರ ಸಾರ್ವಜನಿಕರ ಕಣ್ಣಲ್ಲಿ ವಿದೂಷಕನಿಗಿಂತ ಕಡೆಯಾದದ್ದು ಏಕೋ ಎಂಬುದನ್ನು ಅನಂತಮೂರ್ತಿಯವರೇ ವಿವರಿಸಬೇಕು.

ಹಾಗೆ ನೋಡಿದರೆ ಅನಂತಮೂರ್ತಿಯವರು 'ಪ್ರಭುತ್ವ'ದೊಂದಿಗೆ ಮುಖಾಮುಖಿಯಾದದ್ದು ಕಡಿಮೆ ಎಂದೇ ಹೇಳಬೇಕು. ಅವರು ಯಾವಾಗಲೂ ಪ್ರಭುತ್ವದೊಂದಿಗೆ ಮೃದುವಾಗಿರುವವರೇ. ಉದಾಹರಣೆಗೆ, ಈಗ ಕೋಮುವಾದಿಗಳ ವಿರುದ್ಧ ಅವರು ಮಾತನಾಡುತ್ತಿರುವ ವರಸೆಯನ್ನು ಇದೇ ಕೋಮುವಾದಿಗಳು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಆಡುತ್ತಿದ್ದ ಮಾತಿನ ವರಸೆಗೆ ಹೋಲಿಸಿ ನೋಡಿ. ಅಥವಾ ಅವರೇ ನೋಡಿಕೊಳ್ಳಲಿ. ಅಕ್ಷರಶಃ ನರಹತ್ಯೆಗಿಳಿದಿದ್ದ ನರೇಂದ್ರ ಮೋದಿ ಬಗ್ಗೆ ಆ ದಿನಗಳಲ್ಲಿ ಕೇಳಿದ ಪ್ರಶ್ನೆಗೆ ಅನಂತಮೂರ್ತಿಯವರು ಕೊಟ್ಟ ಜಾಣ ಉತ್ತರ: 'ನರೇಂದ್ರ ಮೋದಿ ಹಾಗೂ ಲಾಲೂ ಪ್ರಸಾದ್ ಯಾದವರ ರಾಜಕಾರಣ ಖಂಡನೀಯ'. ತತ್ವದ ಜೊತೆಯಲ್ಲೇ ಹೆಜ್ಜೆ ಹಾಕುವ ವಾಸ್ತವ ಪ್ರಜ್ಞೆಅಂದರೆ ಇದೇ ಇರಬೇಕು! ಅದೇನೇ ಇರಲಿ, ಮೊನ್ನಿನ ಸಮಾರಂಭದಲ್ಲಿ ಅವರ ವಾಸ್ತವ ಪ್ರಜ್ಞೆಯ ಇನ್ನೊಂದು ದುಃಖಕರ ಮುಖದ ಪರಿಚಯವೂ ಆಯಿತು. ಅವರು ಜೆ.ಡಿ(ಎಸ್)ನ ಕೆಟ್ಟತನಗಳ ಬಗ್ಗೆ ಜಿಗುಪ್ಸೆಯಿಂದ ಮಾತನಾಡಿದ ಉಸಿರಿನಲ್ಲೇ, ಅದು ಕಾಂಗ್ರೆಸ್ಸಿನೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡು ಬಿಜೆಪಿಯನ್ನು ಸೋಲಿಸಬೇಕೆಂದು ಸೂಚಿಸಿದರು. ಸದ್ಯದ ರಾಜಕೀಯ ಪರಿಸ್ಥಿತಿಗೆ ಇದೊಂದೇ ಪರ್ಯಾಯವೇ? ಅದು ಹಾಗಿದ್ದರೂ, ಅದನ್ನು ಈಗಲೇ ಅನಂತಮೂರ್ತಿಯವರು ಸೂಚಿಸುವುದರ ತುರ್ತಾದರೂ ಏನು? ಅವರಿಗೆ ಈ ಮೂರೂ ಪಕ್ಷಗಳು ಪ್ರತಿನಿಧಿಸುವ ರಾಜಕೀಯ ಸಂಸ್ಕೃತಿಯಿಂದ ಇನ್ನೂ ಆಯಾಸವೇ ಆಗಿಲ್ಲವೇ? ಅವರ ಮನಸ್ಸು ಈ ರೂಕ್ಷ ರಾಜಕೀಯ ವಾಸ್ತವದಾಚೆಗೆ ಚಲಿಸಲೇಕೆ ನಿರಾಕರಿಸುತ್ತಿದೆ? ಹೊಸ ರಾಜಕೀಯ ಸಂಸ್ಕೃತಿಯನ್ನು ಕಟ್ಟಬೇಕಾದ ಅಗತ್ಯದ ಪ್ರಸ್ತಾಪವೂ ಅವರಿಂದ ಬರಲಿಲ್ಲವೆಂದರೆ? ವಾಸ್ತವ ಪ್ರಜ್ಞೆ ಎಂಬುದು ಇಷ್ಟೊಂದು 'ವಾಸ್ತವವಾದಿ'ಯಾಗಿರಬಾರದು...

ಅಂದಿನ ಸಮಾರಂಭದಲ್ಲಿ ನನ್ನ ಪುಸ್ತಕದ ಮೇಲೇ 'ಎಲ್ಲ ಜಗಳ ಮೀರಿ' ಎಂದು ಪ್ರೀತಿಯಿಂದ ಬರೆದು ಸಹಿ ಹಾಕಿ ಕೊಟ್ಟಿರುವ ಅನಂತಮೂರ್ತಿಯವರು, ನನ್ನೆಲ್ಲ ಈ ಮಾತುಗಳನ್ನು ಈ ತಕ್ಷಣಕ್ಕಲ್ಲದಿದ್ದರೂ, ಕ್ರಮೇಣ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುತ್ತಾರೆಂದು ನಂಬಿದ್ದೇನೆ. ಏಕೆಂದರೆ, ಅವರದು ಮೂಲತಃ ಉದಾರವಾದ, ವಿಸ್ತಾರವಾದ, ಸ್ಪಂದನಶೀಲ ಮನಸ್ಸು. ಸದ್ಯಕ್ಕೆ ಅವರೇ ಕನ್ನಡದ ಅತ್ಯಂತ ಎತ್ತರದ ವಿಚಾರಶೀಲ

ಮನಸ್ಸು ಕೂಡಾ. (ಇಷ್ಟೇ ಎತ್ತರದ ಇನ್ನೊಂದು ಮನಸ್ಸು, ಬಹುಕಾಲದಿಂದ ಮೈಸೂರಿನಲ್ಲಿ ಆ ಎತ್ತರದಲ್ಲೇ ಸುಸ್ತಾಗಿ ಮಲಗಿಬಿಟ್ಟಿದೆ!) ಇದೇ ಸಮಾರಂಭದಲ್ಲಿ ತೆರೆದುಕೊಂಡ; ಹಿಂದೂ ಕೋಮುವಾದಿಗಳ ಕೋಮುವಾದ ಸೆಕ್ಯುಲರ್ ಉದ್ದೇಶಗಳಿಂದ (ಅಂದರೆ ಲೌಕಿಕ ಪ್ರಗತಿಗಾಗಿ) ಪ್ರೇರಿತವಾಗಿದ್ದರೆ, ಇದಕ್ಕೆ ತದ್ವಿರುದ್ಧವಾಗಿ ಮುಸ್ಲಿಂ ಕೋಮುವಾದ ತನ್ನ ಮೂರ್ಖತನದಲ್ಲಿ ಪ್ರಗತಿಗೆ ವಿರುದ್ಧವಾಗಿ ನಿಂತಿದೆಯೆನ್ನುವ ಅವರ ಒಳನೋಟ, ಅನಂತಮೂರ್ತಿಯವರ ಪ್ರತಿಭೆಗೆ ಮಾತ್ರ ದಕ್ಕುವಂತಹದ್ದು. ಇದು ಒಂದು ದೊಡ್ಡ ಚರ್ಚೆಯನ್ನೇ ಉಂಟು ಮಾಡುವಷ್ಟು ಸಂಕೀರ್ಣವಾದ ಒಳನೋಟ. ಅವರು ಪ್ರಸ್ತಾಪಿಸಿದ ಸಾವರ್ಕರ್‌ರಿಂದ ಹಿಡಿದು ಅರುಣ್ ಜೈಟ್ಲಿಯವರವರಗಿನ ಕೋಮುವಾದ ಪ್ರೇರಿತವಾಗಿರುವುದೇ ಮುಸ್ಲಿಮರ ಮತಸಂಪ್ರದಾಯಿಕತೆಯ ಖಂಡನೆಯಾಗಿಯೇ? ಮುಸ್ಲಿಂ ಸಂಸ್ಕೃತಿಯ ವಿರೋಧವಿರುವುದು ನಿಜವಾಗಿಯೂ ಪ್ರಗತಿಗೋ ಅಥವಾ ತಮ್ಮ ಸಂಸ್ಕೃತಿಗೆ ಒಗ್ಗದ ಪ್ರಗತಿಗೆ ಮಾತ್ರವೋ? ಮುಂತಾದ ಪ್ರಶ್ನೆಗಳಿಗೆ ಅವಕಾಶವಿರುವ ಈ ಚರ್ಚೆ, ಇಂದಿನ ಪ್ರಗತಿ ರಾಜಕಾರಣ ಕುರಿತಂತೇ ಒಂದು ಜಿಜ್ಞಾಸೆಯನ್ನು ಹುಟ್ಟು ಹಾಕಬಲ್ಲುದು. ಏಕೆಂದರೆ, ಸ್ವತಃ ಅನಂತಮೂರ್ತಿಯವರೇ ಈ ಸಮಾರಂಭದಲ್ಲಿ 'ಪ್ರಗತಿ ಬೇಡ' ಎಂಬುದು ನಮ್ಮ ಸದ್ಯದ ಘೋಷಣೆಯಾಗಬೇಕು ಎಂದರಲ್ಲ?

ವಾಸ್ತವವಾಗಿ ಇದು ನನ್ನ ಘೋಷಣೆಯೂ ಹೌದು !ಕೆ.ರಾಮದಾಸ್‌ರ ಶ್ರದ್ಧಾಂಜಲಿ ಸಭೆಯಲ್ಲಿ ನಾನು ಮಾತನಾಡುತ್ತಾ, '... 'ಅಭಿವೃದ್ಧಿ' ಕುರಿತಂತೆ ನಾವಿಂದು ಆಮೂಲಾಗ್ರವಾಗಿ ಪುನರಾಲೋಚಿಸುವ ಅಗತ್ಯವಿದೆ. ಅತಿಗೆ ಹೋಗಿ ಹೇಳುವುದಾದರೆ, 'ಅಭಿವೃದ್ಧಿ ಇನ್ನು ಸಾಕು' ಎಂಬ ಪ್ರಣಾಳಿಕೆಯ ಆಧಾರದ ಮೇಲೇ ಸಮಾಜವಾದವಿಂದು ತನ್ನ ಹೋರಾಟವನ್ನು ಆರಂಭಿಸಬೇಕಿದೆ.' ಎಂದು ಹೇಳಿದ್ದೆ. (ನೋಡಿ:'ವಾರದ ಒಳನೋಟ': ವಿಕ್ರಾಂತ ಕರ್ನಾಟಕ: ೨೦.೭.೨೦೦೭). ವಿವರಗಳಲ್ಲಿನ ವ್ಯತ್ಯಾಸಗಳೇನೇ ಇರಲಿ, ಅನಂತಮೂರ್ತಿಯವರಂತಹ ಹಿರಿಯ ಸಮಾಜವಾದಿ ಹಾಗೂ ನನ್ನಂತಹ ಕಿರಿಯ ಸಮಾಜವಾದಿ ಇಬ್ಬರೂ ಹೀಗೆ ಒಂದೇ ಹೊತ್ತಿಗೆ ಒಂದೇ ತಾತ್ವಿಕ ತೀರ್ಮಾನಕ್ಕೆ ಬಂದಿರುವುದು, ಸಮಾಜವಾದ ಇಷ್ಟೆಲ್ಲ ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ತನ್ನ ಕೇಂದ್ರ ಕಳೆದುಕೊಂಡಿಲ್ಲ ಹಾಗೂ ಅದು ಮರಳಿ ಬರಲೇಬೇಕು ಎಂಬುದನ್ನು ಸೂಚಿಸುತ್ತದೆ ಎಂದು ನಾನು ನಂಬಿದ್ದೇನೆ. ಇದೇ ಸಮಾರಂಭದಲ್ಲಿ ಸಂಕ್ಷಿಪ್ತವಾಗಿಯಾದರೂ, ಅದ್ಭುತವಾಗಿ ಮಾತನಾಡಿದ ಡಾ॥ ರಾಜೇಂದ್ರ ಚೆನ್ನಿಯವರು ಹೇಳಿದ ಹಾಗೆ, ಸಮಾಜವಾದದ ಶಕ್ತಿ ಇರುವುದೇ ಅದರ ಕನಸುಗಾರಿಕೆ (utopia)ಯಲ್ಲಿ. ಇಂದಿನ 'ಪ್ರಗತಿ'ಶೀಲ ಮಾರುಕಟ್ಟೆಕೇಂದ್ರಿತ ಜಗತ್ತಿನ ಮಧ್ಯೆ ಕಳೆದು ಹೋಗಿರುವ ಈ ಕನಸುಗಾರಿಕೆಯನ್ನು ಮರಳಿ ತರುವ ಆಶಯವೇ, 'ಮರಳಿ ಬರಲಿದೆ ಸಮಾಜವಾದ!' ಎಂಬ ಭರವಸೆಯ ಹಿಂದಿನ ಶಕ್ತಿಯೂ ಆಗಿದೆ!

ಅಕ್ಟೋಬರ್ ೨೬– ನವೆಂಬರ್ ೨, ೨೦೦೭

ಗಾಂಧಿ ಚರಿತ್ರೆ...

ಸ್ವತಂತ್ರ ಭಾರತದ ೭೦ನೇ ವರ್ಷಾಚರಣೆಯ ಸಂದರ್ಭದಲ್ಲಿ ರಾಷ್ಟ್ರಪಿತರೆನಿಸಿದ ಗಾಂಧೀಜಿಯನ್ನು ಆ ಪದವಿಯಿಂದ ಇಳಿಸಲು ಅನೇಕ ವಲಯಗಳಿಂದ ಪ್ರಯತ್ನಗಳು ಆರಂಭವಾಗಿರುವಂತೆ ತೋರುತ್ತದೆ. ಗಾಂಧಿ ಹತರಾದದ್ದೇ. ತಮ್ಮ ಹಿಂದೂ ಧರ್ಮವನ್ನೂ, ಹಿಂದೂ ರಾಷ್ಟ್ರವನ್ನೂ ಮುಸ್ಲಿಮರಿಂದ ಕಾಪಾಡಬಯಸಿದ ಮೇಲ್ಜಾತಿ ಹಿತಾಸಕ್ತಿಗಳ ಪ್ರತಿನಿಧಿಯಿಂದ ಎಂಬುದು ಸತ್ಯವಾದರೂ; ಅವರನ್ನು ಮೇಲ್ಜಾತಿ ಹಿತಾಸಕ್ತಿಗಳ ಪ್ರತಿನಿಧಿಯೆಂದೂ. ಮೇಲ್ಜಾತಿಯವರ ಹಿಡಿತದಲ್ಲಿದ್ದ ಮಾಧ್ಯಮಗಳ ಮೂಲಕವೇ ಮಹಾತ್ಮ ಹಾಗೂ ರಾಷ್ಟ್ರಪಿತ ಎಂಬ ಪದವಿಗಳನ್ನು ಪಡೆದು ರಾಷ್ಟ್ರದ ಬಹುಪಾಲು ಜನತೆಗೆ ಮೋಸ ಮಾಡಿದವರೆಂದೂ ಬಿಂಬಿಸುವ 'ಸಂಶೋಧನೆ'ಗಳು ಇತ್ತೀಚೆಗೆ ಆರಂಭವಾಗಿವೆ. ಗಾಂಧಿಯನ್ನು ಕೊಂದವರು ಈಗ ಗಾಂಧಿ ಪ್ರತಿಮೆಯ ಬಳಿಯಿಂದಲೇ ತಮ್ಮ ರಾಜಕೀಯ ಆಂದೋಲನಗಳನ್ನು ಆರಂಭಿಸತೊಡಗಬೇಕಾದ ಪರಿಸ್ಥಿತಿ ಉಂಟಾಗಿರುವಾಗ, ಈವರೆಗೆ ಗಾಂಧಿ ವಿರುದ್ಧ ಬರೀ ಆಪಾದನೆಗಳನ್ನು ಮಾಡುತ್ತಿದ್ದ ಜನವೀಗ ಚರಿತ್ರೆಯ ಬಗ್ಗೆ ಹೊಸ ಬೆಳಕು ಚೆಲ್ಲುವ ಪ್ರಯತ್ನಗಳೆಂದು ಹೇಳಿಕೊಂಡು ಈ ಸಂಶೋಧನೆಗಳನ್ನು ಮಂಡಿಸುತ್ತಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದ ಗಾಂಧಿ– ಅಂಬೇಡ್ಕರ್ ಮುಖಾಮುಖಿಯನ್ನು ತಮ್ಮದೇ ಆಕರಗಳು ಹಾಗೂ ವಾದಗಳ ಆಧಾರದ ಮೇಲೆ ಪುನರ್ನಿರೂಪಿಸುತ್ತಿರುವ ಈ ಸಂಶೋಧಕರು. ಗಾಂಧಿಯನ್ನು ಚರಿತ್ರೆಯ ಖಳನಾಯಕನಂತೆ ಚಿತ್ರಿಸುವ ಪ್ರಯತ್ನವೊಂದನ್ನು ನಡೆಸಿದ್ದಾರೆ. ಇದರ ಜೊತೆಗೆ ಈಗ ಗಾಂಧಿ ಒಬ್ಬ ನಿರ್ದಯಿ ಹಾಗೂ ಬೇಜವಾಬ್ದಾರಿ ತಂದೆಯೆಂದು ನಿರೂಪಿಸುವ ನಾಟಕಗಳೂ, ಚಲನಚಿತ್ರಗಳೂ, ಬರಹಗಳೂ ಬರತೊಡಗಿವೆ. ಗಾಂಧಿ ವ್ಯಕ್ತಿತ್ವದ ಬೃಹತ್ ಭಿತ್ತಿಯ ಹಿನ್ನೆಲೆಯಲ್ಲಿ ಇದೆಲ್ಲ ನಿರಾಕರಿಸಹೊರಡುವುದು ಹಾಸ್ಯಾಸ್ಪದ ಪ್ರಯತ್ನವಾದೀತಾದರೂ, ಇದೆಲ್ಲದರ ಹಿಂದೆ ಒಂದು ಸಂಘಟಿತ

ಪ್ರಯತ್ನವಿರಬಹುದೇ ಎಂಬ ಅನುಮಾನ ಹುಟ್ಟಿಸುವಷ್ಟರ ಮಟ್ಟಿಗೆ ಇದೆಲ್ಲವೂ ಒಟ್ಟಿಗೇ ಆರಂಭವಾಗಿರುವ ಬಗ್ಗೆ ಆಶ್ಚರ್ಯವನ್ನಂತೂ ವ್ಯಕ್ತಪಡಿಸಬಹುದಾಗಿದೆ!

ಈ ಎಲ್ಲದರ ಮಧ್ಯೆ ಗಾಂಧಿಯವರ ಮೊಮ್ಮಗ ಹಾಗೂ ಪ. ಬಂಗಾಳದ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ತಮ್ಮ ತಾತನ ಸಮಗ್ರ ಸಾಹಿತ್ಯವನ್ನೊಮ್ಮೆ ಅವಲೋಕಿಸಿ, ಅವುಗಳಿಂದಾಯ್ದ ಉಲ್ಲೇಖಗಳ ಆಧಾರದ ಮೇಲೇ ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪುಸ್ತಕ ರೂಪದ ಪ್ರಯತ್ನವೊಂದನ್ನು ಮಾಡಿದ್ದಾರೆ. ಆ ಪುಸ್ತಕದ (The Oxford India Gandhi: Essential Writings) ಕೆಲವು ಭಾಗಗಳನ್ನು 'ಔಟ್‌ಲುಕ್' ಪತ್ರಿಕೆ ತನ್ನ ಇತ್ತೀಚಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿದೆ. ಅಲ್ಲಿಂದ ಕೆಲವನ್ನು ಆಯ್ದು ಇಲ್ಲಿ ಅನುವಾದಿಸಿ ಕೊಡುತ್ತಿದ್ದೇನೆ. ಇದರ ಮೂಲಕ ಗಾಂಧಿ ವಿರುದ್ಧ ಈಗ ಆರಂಭವಾಗುತ್ತಿರುವಂತೆ ತೋರುವ ಅಪಪ್ರಚಾರಕ್ಕೆ ಉತ್ತರ ಕೊಡುವ ಅನುಚಿತ ಪ್ರಯತ್ನವನ್ನಂತೂ ನಾನು ಮಾಡುತ್ತಿಲ್ಲ. ಬದಲಿಗೆ, ಬದುಕಿನ ಸಣ್ಣ- ಸಾಮಾನ್ಯ ವಿವರಗಳಲ್ಲೇ ಗಾಂಧಿ ನಿಜವಾಗಿ ಏನಾಗಿದ್ದರು ಎಂಬುದು ವ್ಯಕ್ತವಾಗಿರುವ ರೀತಿ ನೀತಿಗಳನ್ನು ನಿಮ್ಮೊಂದಿಗೆ ಅರ್ಥ ಮಾಡಿಕೊಳ್ಳಲು ಪ್ರಯತಿಸುತ್ತಿದ್ದೇನೆ. ಹಾಗೇ, ಅಧೋಗತಿ ಮುಟ್ಟಿರುವ ಇಂದಿನ ಕರ್ನಾಟಕದ ರಾಜಕೀಯ ಹಿನ್ನೆಲೆಯಲ್ಲಿಯೂ- ಇದನ್ನು ಆ ಆಧೋಗತಿ ಮುಟ್ಟಿರುವ ರಾಜಕಾರಣಿಗಳು ಯಾರೂ ಓದಲಾರರೆಂಬ ಅನುಮಾನವಿದ್ದರೂ- ಈ ಪುನರ್ಮನನದ ಪ್ರಯತ್ನ ಪ್ರಸ್ತುತವೆನಿಸಿಕೊಳ್ಳಬಹುದು.

*

ದರ್ಬಾನ್, ೧೮೯೮:

ಮನೆಯನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ಕಟ್ಟಲಾಗಿತ್ತು. ಶೌಚದ ನೀರು ಹೊರ ಹೋಗಲು ದಾರಿಯೇ ಇಲ್ಲವಾಗಿತ್ತು. ಹಾಗಾಗಿ ಪ್ರತಿಯೊಂದು ಕೊಠಡಿಯಲ್ಲೂ ಒಂದು ಮಲದ ಮಡಕೆ ಇಡಲಾಗಿತ್ತು. ಇವುಗಳನ್ನು ತೊಳೆಯುವ ಕೆಲಸವನ್ನು ಸೇವಕರಿಗೆ ಅಥವಾ ಭಂಗಿಗಳಿಗೆ ಬಿಡದೆ, ನಾವೇ ಮಾಡಿಕೊಳ್ಳುತ್ತಿದ್ದೆವು. ಬಹಳ ದಿನಗಳಿಂದ ಮನೆಯಲ್ಲೇ ಇದ್ದು ನಮ್ಮವರೇ ಆದವರು ತಂತಮ್ಮ ಮಡಕೆಗಳನ್ನು ತಾವೇ ಸ್ವಚ್ಛಗೊಳಿಸಿಕೊಳ್ಳುತ್ತಿದ್ದರು. ಆದರೆ ಹೊಸದಾಗಿ ಬಂದ ಕ್ರಿಶ್ಚಿಯನ್ ಗೆಳೆಯರೊಬ್ಬರ ಮಲಗುವ ಕೋಣೆಯನ್ನು ಸ್ವಚ್ಛಗೊಳಿಸುವುದು ನಮ್ಮದೇ ಕರ್ತವ್ಯವಾಗಿತ್ತು. ಇತರರ ಮಲದ ಮಡಕೆಗಳನ್ನು ಸ್ವಚ್ಛಗೊಳಿಸಲು ಅಷ್ಟೇನೂ ಹಿಂಜರಿಯದಿದ್ದ ನನ್ನ ಪತ್ನಿಗೆ ಈ ಅನ್ಯಮತದ ಪಂಚಮನ ಮಡಕೆಯನ್ನು ಸ್ವಚ್ಛಗೊಳಿಸುವುದು ತನಗೆ ಆಗದ ಕೆಲಸವಾಗಿ ಕಂಡಿತು. ತಾನು ಮಾಡುವುದಿರಲಿ, ನಾನು ಮಾಡುವುದೂ ಆಕೆಗೆ ಸಹ್ಯವಾಗಲಿಲ್ಲ. ಕೊನೆಗೆ ಆಕೆಯೇ ಅಂದು ನನ್ನನ್ನು ಶಪಿಸುತ್ತಾ, ದುಃಖದಿಂದ ಕೆಂಪಾದ ಕಣ್ಣುಗಳಿಂದ ಅಶ್ರುಧಾರೆ ಹರಿಸುತ್ತಾ ಕೈಯಲ್ಲಿ ಮಡಕೆ ಹಿಡಿದು ಏಣಿ ಇಳಿಯುತ್ತಿದ್ದ ದೃಶ್ಯ ಇನ್ನೂ ನನಗೆ ಕಣ್ಣಿಗೆ ಕಟ್ಟಿದಂತಿದೆ.

ಆಕೆ ಮಡಕೆಯನ್ನು ಹಿಡಿದು ಹೊರಟಿರುವುದರಷ್ಟರಿಂದಲೇ ನನಗೆ ಸಮಾಧಾನವೆಂಬುದೇನೂ ಉಂಟಾಗಲಿಲ್ಲ. ಆಕೆ ಅದನ್ನು ಸಂತೋಷದಿಂದ ಮಾಡಬೇಕೆಂದು ನಾನು ಬಯಸಿದ್ದೆ. ಹಾಗಾಗಿ ನಾನು ದನಿ ಎತ್ತರಿಸಿ ಕೂಗಿ ಹೇಳಿದೆ: 'ಈ ತಲೆಹರಟೆಯನ್ನು ನನ್ನ ಮನೆಯಲ್ಲಿ ಸಹಿಸಲಾರೆ'.

ನನ್ನೀ ಮಾತುಗಳು ಆಕೆಯನ್ನು ಬಾಣದಂತೆ ಚುಚ್ಚಿದವು. ಅವಳು ನನ್ನತ್ತ ತಿರುಗಿ ಕಿರುಚಿ ಹೇಳಿದಳು: 'ನಿಮ್ಮ ಮನೆಯನ್ನು ನೀವೇ ಇಟ್ಟುಕೊಳ್ಳಿ. ನಾನು ಹೋಗುವೆ'. ನನ್ನ ಮೈ ಮೇಲಿನ ಪ್ರಜ್ಞೆ ಹಾರಿಹೋಯಿತು. ನನ್ನಲ್ಲಿ ಕರುಣೆ ಎಂಬುದು ಬತ್ತಿಹೋಯಿತು. ನಾನು ಅವಳ ಕೈ ಹಿಡಿದು, ಆ ಅಸಹಾಯಕ ಹೆಂಗಸನ್ನು ಹೊರದಬ್ಬಲು ಏಣಿಯ ಎದುರಿಗಿದ್ದ ಬಾಗಿಲ ಕಡೆ ಧಾವಿಸಿದೆ. ಅವಳ ಕೆನ್ನೆಗಳ ಮೇಲೆ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿತ್ತು. ಆಕೆ ನನ್ನತ್ತ ಮತ್ತೆ ಕಿರುಚಿ ಹೇಳಿದಳು: 'ನಿಮಗೆ ನಾಚಿಕೆಯಾಗುವುದಿಲ್ಲವೇ? ಎಲ್ಲಿಗೆ ಹೋಗಲಿ ನಾನು? ಯಾರಿದ್ದಾರೆ ನನ್ನವರೆಂಬುವರು ಇಲ್ಲಿ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಿಮ್ಮ ಎಲ್ಲ ದುಂಡಾವರ್ತಿಗಳನ್ನು ಸಹಿಸಿಕೊಳ್ಳಬೇಕೇ? ಮೊದಲು ಬಾಗಿಲು ಹಾಕಿ. ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳುವುದನ್ನು ಕಲಿಯಿರಿ.'

ನಾನು ಏನೂ ಆಗದವನಂತೆ ದಿಟ್ಟನಾಗಿ ನಿಂತಿದ್ದರೂ, ಒಳಗೆ ನಿಜವಾಗಿಯೂ ನಾಚಿಕೆ ಆರಂಭವಾಗಿತ್ತು. ಬಾಗಿಲು ಮುಚ್ಚಿದೆ. ನನ್ನ ಹೆಂಡತಿ ನನ್ನನ್ನು ಬಿಟ್ಟು ಇರಲಾರದವಳಾದರೆ, ನಾನೂ ಅವಳನ್ನು ಬಿಟ್ಟು ಇರಲಾರೆ.

ಕಲ್ಕತ್ತಾ, ಡಿಸೆಂಬರ್, ೧೯೦೧– ೦೨

ಕಾಂಗ್ರೆಸ್ ಅಧಿವೇಶನ ಆರಂಭವಾಗಲು ಇನ್ನೂ ಎರಡು ದಿನಗಳು ಬಾಕಿ ಇದ್ದವು. ಸ್ವಲ್ಪ ಅನುಭವ ಗಳಿಸಲು ನಾನು ಕಾಂಗ್ರೆಸ್ ಕಛೇರಿಯಲ್ಲಿ ಸೇವೆ ಸಲ್ಲಿಸಲು ನಿಶ್ಚಯಿಸಿದ್ದೆ. ಬಾಬು ಭೂಪೇಂದ್ರನಾಥ ಬಸು ಹಾಗೂ ಸಾರ್ಜೆಂಟ್ ಘೋಷಾಲ್ ಕಾರ್ಯದರ್ಶಿಗಳಾಗಿದ್ದರು. ನಾನು ಭೂಪೇನ್ ಬಾಬು ಬಳಿ ಹೋಗಿ ನನ್ನ ಉದ್ದೇಶವನ್ನು ತಿಳಿಸಿದೆ. ಅವರು ನನ್ನನ್ನೊಮ್ಮೆ ನೋಡಿ, "ನನ್ನ ಬಳಿ ಕೆಲಸವಿಲ್ಲ. ಬಹುಶಃ ಘೋಷಾಲ್ ಬಾಬು ನಿಮಗೆ ಸ್ವಲ್ಪ ಕೆಲಸ ಕೊಡಬಹುದು. ಅವರನ್ನು ಕಾಣಿರಿ" ಎಂದರು. ನಾನು ಅವರ ಬಳಿಗೆ ಹೋದೆ. ಅವರು ನನ್ನನ್ನು ಮೇಲಿನಿಂದ ಕೆಳಗಿನವರೆಗೆ ಒಮ್ಮೆ ನೋಡಿ ಮುಗುಳ್ನಗುತ್ತಾ, 'ನಿಮಗೆ ನಾನು ಗುಮಾಸ್ತ ಮಾಡುವಂತಹ ಕೆಲಸ ಕೊಡಬಲ್ಲೆ. ಮಾಡುವಿರಾ?' ಎಂದು ಕೇಳಿದರು.

ನಾನು, "ಖಂಡಿತ. ನನ್ನ ಕೈಯಿಂದ ಆಗದ ಕೆಲಸದ ಹೊರತಾಗಿ ಯಾವ ಕೆಲಸವನ್ನಾದರೂ ಮಾಡಲೆಂದೇ ನಾನಿಲ್ಲಿ ಬಂದಿರುವೆ" ಎಂದೆ.

.....ಸಾ॥ ಘೋಷಾಲ್ ತಮ್ಮ ಅಂಗಿಯ ಗುಂಡಿಗಳನ್ನು ತಮ್ಮ ಸೇವಕನಿಂದ ಹಾಕಿಸಿಕೊಳ್ಳುತ್ತಿದ್ದರು. ಹಿರಿಯರ ಬಗೆಗೆ ನನಗೆ ಯಾವಾಗಲೂ ಗೌರವವಿದ್ದುದರಿಂದ,

ನಾನು ಆ ಸೇವಕನ ಕೆಲಸ ಮಾಡುವುದಾಗಿ ಹೇಳಿದೆ. ನನಗೆ ಅದು ಇಷ್ಟದ ಕೆಲಸವೂ ಆಗಿತ್ತು. ಇದು ಗೊತ್ತಾದ ಮೇಲೆ ಅವರು ನನ್ನಿಂದ ಇಂತಹ ಅನೇಕ ವೈಯುಕ್ತಿಕ ಸೇವೆಗಳನ್ನು ಪಡೆಯಲು ಹಿಂಜರಿಯಲಿಲ್ಲ. ಬದಲಾಗಿ ಸಂತೋಷಪಟ್ಟರು. ತಮ್ಮ ಗುಂಡಿ ಹಾಕಲು ಹೇಳುತ್ತಾ ಅವರು, "ನೋಡಿ, ಕಾಂಗ್ರೆಸ್ ಕಾರ್ಯದರ್ಶಿಗೆ ತನ್ನ ಅಂಗಿಯ ಗುಂಡಿಗಳನ್ನು ಹಾಕಿಕೊಳ್ಳಲೂ ಪುರುಸೊತ್ತಿಲ್ಲದಾಗಿದೆ. ಯಾವಾಗ ನೋಡಿದರೂ ಏನಾದರೂ ಕೆಲಸವಿರುತ್ತದೆ" ಎನ್ನುತ್ತಿದ್ದರು. ಸಾ॥ ಘೋಷಾಲರ ಈ ಭೋಳೆತನ ನನ್ನಲ್ಲಿ ಕೊಂಚ ನಗು ಉಕ್ಕಿಸುತ್ತಿತ್ತಾದರೂ, ಈ ತರಹದ ಸೇವೆ ಪಡೆಯುತ್ತಿದ್ದ ಕಾರಣದಿಂದಾಗಿ ಅವರ ಬಗ್ಗೆ ನನಗೆ ಬೇಸರವೇನೂ ಆಗಲಿಲ್ಲ.

ಕಾಶಿ, ಫೆಬ್ರವರಿ, ೧೯೦೨

ನಾನು ದರ್ಶನಕ್ಕಾಗಿ ಕಾಶಿ ವಿಶ್ವನಾಥ ಮಂದಿರಕ್ಕೆ ಹೋಗಿದ್ದೆ.... ದಕ್ಷಿಣೆ ಕೊಡಲು ಮನಸ್ಸಿಲ್ಲದಿದ್ದರೂ, ಮೂರು ಕಾಸು ತಟ್ಟೆಗೆ ಹಾಕಿದೆ. ಪಂಡನಿಗೆ ಸಿಟ್ಟು ಬಂದು ಅದನ್ನು ನನ್ನತ್ತ ಎಸೆದುಬಿಟ್ಟ. ಅಲ್ಲದೆ, 'ನನಗೆ ನೀನು ಮಾಡಿದ ಅವಮಾನ ನಿನ್ನನ್ನು ನೇರವಾಗಿ ನರಕಕ್ಕೇ ಒಯ್ಯುತ್ತದೆ' ಎಂದು ಶಪಿಸಿದ. ಇದನ್ನು ಮನಸ್ಸಿಗೆ ಹಚ್ಚಿಕೊಳ್ಳದ ನಾನು, 'ನನ್ನ ವಿಧಿ ಹೇಗೇ ಇರಲಿ ಮಹಾರಾಜ್, ನೀವು ಬಳಸುತ್ತಿರುವ ಭಾಷೆ ನಿಮಗೆ ಶೋಭಿಸುವುದಿಲ್ಲ' ಎನ್ನುತ್ತಾ, 'ನಿಮಗೆ ಇಷ್ಟವಾದರೆ ಈ ಮೂರು ಕಾಸು ತೆಗೆದುಕೊಳ್ಳಿ. ಇಲ್ಲದೇ ಹೋದರೆ, ಅದನ್ನೂ ನೀವು ಕಳೆದುಕೊಳ್ಳುತ್ತೀರಿ' ಎಂದು ಎಚ್ಚರಿಸಿದೆ.

'ಇಲ್ಲಿಂದ ಮೊದಲು ತೊಲಗು. ನಿನ್ನ ಮೂರು ಕಾಸು ಯಾವನಿಗೆ ಬೇಕು!' ಎಂದು ಕೂಗಿದ ಪಂಡ ನನ್ನ ಮೇಲೆ ಕೆಟ್ಟ ಬೈಗುಳಗಳ ಸುರಿಮಳೆಯನ್ನೇ ಕರೆದ.

ನಾನು ಅವನು ಎಸೆದಿದ್ದ ಮೂರು ಕಾಸನ್ನು ಎತ್ತಿಕೊಂಡು, 'ಬ್ರಾಹ್ಮಣನಿಗೆ ಆದ ನಷ್ಟ ನನಗಾದ ಉಳಿತಾಯ...' ಎಂದು ಉಲ್ಲಾಸದಿಂದ ನನ್ನ ದಾರಿ ಹಿಡಿದೆ.

ಜೋಹಾನ್ಸ್‌ಬರ್ಗ್, ಫೆಬ್ರುವರಿ ೨, ೧೯೦೮

ಮಿಲಿ ಗ್ರಹಾಂ ಪೊಲಾಕ್: ಅವನಿಗೆ ಏನು ಬೇಕಂತೆ? ಏನಾದರು ವಿಶೇಷ?

ಮೋಹನದಾಸ ಕರಮಚಂದ ಗಾಂಧಿ: ಹೌದು, ಅವನು ನನ್ನನ್ನು ಕೊಲ್ಲಬಯಸಿದ್ದ.

ಪೊ: ಕೊಲ್ಲುವುದು? ನಿನ್ನನ್ನು ಕೊಲ್ಲುವುದು? ಭಯಂಕರ! ಅವನಿಗೇನಾದರೂ ಹುಚ್ಚು ಹಿಡಿದಿದೆಯೇ?

ಗಾ: ಇಲ್ಲ, ನಾನು ನಮ್ಮ ಜನತೆಗೆ ಸಂಬಂಧಪಟ್ಟಂತೆ ದೇಶದ್ರೋಹದ ಕೆಲಸ ಮಾಡುತ್ತಿದ್ದೇನೆ ಹಾಗೂ ಸರ್ಕಾರದಲ್ಲಿ ತಲೆ ಹಾಕಿ ಅವರ ವಿರುದ್ಧವೇ ಕೆಲಸ ಮಾಡುತ್ತ ಅವರ ಸ್ನೇಹಿತನಂತೆ, ನಾಯಕನಂತೆ ನಟಿಸುತ್ತಿದ್ದೇನೆ ಎಂದು ಅವನು ಭಾವಿಸಿದ್ದಾನೆ.

ಪೊ: ಅದೇನೇ ಇರಲಿ, ಅದು ದುಷ್ಟತನ ಹಾಗೂ ಭಯಾನಕ. ಅಂತಹ ಮನುಷ್ಯನನ್ನು ಹಾಗೇ ಬಿಡುವುದು ಕ್ಷೇಮವಲ್ಲ. ಆತನನ್ನು ಬಂಧಿಸಬೇಕು. ಅವನನ್ನು ಹಾಗೇ ಹೋಗಲು ಏಕೆ ಬಿಟ್ಟೆ? ಆತ ನಿಜವಾಗಿಯೂ ಹುಚ್ಚನೇ ಇರಬೇಕು.

ಗಾ: ಇಲ್ಲ, ಆತ ಹುಚ್ಚನಲ್ಲ. ತಪ್ಪು ತಿಳುವಳಿಕೆಯವನಷ್ಟೆ. ನೀನೇ ನೋಡಿದೆಯಲ್ಲಾ. ನಾನು ಅವನೊಂದಿಗೆ ಮಾತನಾಡಿದ ಮೇಲೆ ನನ್ನ ಮೇಲೆ ಬಳಸಲು ಇಟ್ಟುಕೊಂಡಿದ್ದ ಚೂರಿಯನ್ನು ನನಗೇ ಕೊಟ್ಟುಬಿಟ್ಟ.

ಪೊ: ಕತ್ತಲಲ್ಲಿ ಅವನು ನಿನ್ನನ್ನು ಇರಿದೇಬಿಡುತ್ತಿದ್ದನೇನೋ, ನಾನು....

ಗಾ: ಈ ಬಗ್ಗೆ ಇಷ್ಟೊಂದು ತಲೆ ಕೆಡಿಸಿಕೊಳ್ಳಬೇಡ. ಅವನು ನನ್ನನ್ನು ಕೊಲ್ಲಬಹುದೆಂದುಕೊಂಡಿದ್ದ. ಆದರೆ, ಅವನಿಗೆ ಆ ಧೈರ್ಯವಿರಲಿಲ್ಲ. ನಾನು ಅವನು ತಿಳಿದಷ್ಟು ಕೆಟ್ಟವನಾಗಿದ್ದರೆ, ನಾನು ನಿಜವಾಗಿಯೂ ಸಾವಿಗೆ ಅರ್ಹನೇ. ಈಗ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಇದು ಮುಗಿದ ಅಧ್ಯಾಯ. ಆ ಮನುಷ್ಯ ನನ್ನ ಮೇಲೆ ಮತ್ತೆ ಆಕ್ರಮಣ ಮಾಡಲಾರನೆಂದೆನಿಸುತ್ತದೆ. ಅವನನ್ನು ದಸ್ತಗಿರಿ ಮಾಡಿಸಲು ನಾನೇನಾದರೂ ಯತ್ನಿಸಿದ್ದರೆ, ಅವನನ್ನು ನನ್ನ ಶತ್ರುವನ್ನಾಗಿ ಮಾಡಿಕೊಳ್ಳುತ್ತಿದ್ದೆನಷ್ಟೆ. ಆದರೆ, ಈಗವನು ನನ್ನ ಸ್ನೇಹಿತನಾಗಿದ್ದಾನೆ.

ಜೊಹಾನ್ಸ್‌ಬರ್ಗ್, ಮೇ ೧೮, ೧೯೧೧ (ಭಗನ್ ಲಾಲ್‌ಗೆ ಪತ್ರವೊಂದರಲ್ಲಿ)

ಅವನು(ಹರಿಲಾಲ್) ಸೋಮವಾರ ಸಂಜೆ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆಲ್ಲವನ್ನೂ ಹೊರಹಾಕಿದ. ಆತನ ಪ್ರಕಾರ ನಾನು ಎಲ್ಲ ನಾಲ್ಕು ಮಕ್ಕಳನ್ನೂ ಲೆಕ್ಕಕ್ಕೇ ಇಟ್ಟಿಲ್ಲದ ಹಾಗೆ; ಅವರ ಯಾವುದೇ ಆಶೋತ್ತರಗಳಿಗೂ ಬೆಲೆ ಕೊಡದೆ, ನಿರ್ದಯಿಯಾಗಿ ದಮನ ಮಾಡಿಟ್ಟಿದ್ದೇನೆ. ಆತ ಈ ಆಪಾದನೆಗಳನ್ನು ಸಂಕೋಚದಿಂದಲೇ, ಆದರೆ ಅತ್ಯಂತ ವಿನೀತನಾಗಿ ಮಾಡಿದ. ಈ ಸಂದರ್ಭದಲ್ಲಿ ಆತನ ಮನಸ್ಸಿನಲ್ಲಿ ಹಣದ ವಿಷಯ ಇರಲೇ ಇಲ್ಲ. ಆವನ ಮಾತುಗಳೆಲ್ಲವೂ ನನ್ನ ಸಾಮಾನ್ಯ ವರ್ತನೆಯ ಬಗ್ಗೆಯೇ ಇತ್ತು. ಇತರ ತಂದೆಯರಂತೆ ನಾನು ನನ್ನ ಮಕ್ಕಳ ಬಗ್ಗೆ ಒಂದು ಒಳ್ಳೆಯ ಮಾತಾಡಿರಲಿಲ್ಲ, ಅವರಿಗಾಗಿ ವಿಶೇಷವಾದುದೇನನ್ನೂ ಮಾಡಿರಲಿಲ್ಲ ಹಾಗೂ ಅವರು ಮತ್ತು ಅವರಮ್ಮ ನನ್ನ ಆದ್ಯತೆಯಲ್ಲಿ ಕೊನೆಯವರಾಗಿದ್ದರು ಎಂಬುದು ಅವನ ಆರೋಪವಾಗಿತ್ತು.

ಫೀನಿಕ್ಸ್, ಮೇ ೧೯೧೩

ದೇವದಾಸ್ ತಾನಿನ್ನು ಕದಿಯುವುದಿಲ್ಲ ಎಂದು ವಚನ ನೀಡಿದ್ದರೂ, ಇನಾಂಡ ಜಲಪಾತದ ಬಳಿ ಕದ್ದ ಸಿಹಿ ನಿಂಬೆಗಳನ್ನು ತಿಂದುಬಿಟ್ಟಿದ್ದ. ಸಿಕ್ಕಿ ಬಿದ್ದಾಗ, ತುಂಬ ಜಾಣನಂತೆ, ಬುದ್ಧಿವಂತಿಕೆಯಿಂದ ಮಾತಾಡತೊಡಗಿದ. ಇದು ನನಗೆ ನೋವನ್ನುಂಟುಮಾಡಿತು. ಆತ ನೀಡಿದ ನೆಪವಂತೂ ನನ್ನನ್ನು ಘಾಸಿಗೊಳಿಸಿತು. ನಾನು ಯಾವಾಗಲೂ ಅವನನ್ನು

ಹೊಡೆಯುತ್ತೀನೇನೋ ಎಂಬಂತೆ, ಆತ ನನ್ನಿಂದ ಏಟು ಬೀಳುವುದೆಂದು ತನ್ನ ತಪ್ಪನ್ನು ಹೇಳಿಕೊಳ್ಳಲಿಲ್ಲವೆಂದು ನುಡಿದ. ಸರಿ, ನಾನು ಅವನಿಗೆ ಬುದ್ಧಿ ಕಲಿಸಲು ನನ್ನ ಕಪಾಳಕ್ಕೇ ಹೊಡೆದುಕೊಳ್ಳಲು ನಿರ್ಧರಿಸಿ ನಾಲ್ಕಾರು ಏಟು ಹಾಕಿಕೊಂಡಾಗ ನನ್ನ ಬಗ್ಗೆಯೇ ನನಗೆ ಎಷ್ಟು ದುಃಖವಾಯಿತೆಂದರೆ, ನನಗೆ ಜೋರಾಗಿ ಅಳುವೇ ಬಂದುಬಿಟ್ಟಿತು.

ಆಗಸ್ಟ್ ೧೦, ೧೯೨೦ (ಕಲ್ಲೆನ್‌ಬ್ಯಾಕ್‌ಗೆ ಪತ್ರ)

.... ನಾನೀಗ ನನ್ನೊಡನೆ ಆಗಾಗ್ಗೆ ಪ್ರಯಾಣ ಮಾಡುವ ಮಹಿಳೆಯೊಬ್ಬಳೊಂದಿಗೆ ಆತ್ಮೀಯ ಸಂಪರ್ಕದಲ್ಲಿದ್ದೇನೆ. ನಮ್ಮ ಸಂಬಂಧ ವ್ಯಾಖ್ಯಾನವನ್ನು ಮೀರಿದ್ದು. ನಾನು ಆಕೆಯನ್ನು ನನ್ನ ಅಧ್ಯಾತ್ಮಿಕ ಪತ್ನಿ ಎಂದು ಕರೆಯುತ್ತೇನೆ. ನನ್ನ ಸ್ನೇಹಿತನೊಬ್ಬ ಇದನ್ನು ಬೌದ್ಧಿಕ ವಿವಾಹ ಎಂದು ಕರೆದಿದ್ದಾನೆ. ನೀನು ಒಮ್ಮೆ ಆಕೆಯನ್ನು ನೋಡಬೇಕೆಂಬುದು ನನ್ನ ಆಸೆ. ಅವಳ ಆಶ್ರಯದಲ್ಲೇ ನಾನು ಪಂಜಾಬ್‌ನ ಲಾಹೋರ್‌ನಲ್ಲಿ ಹಲವು ತಿಂಗಳುಗಳನ್ನು ಕಳೆದಿದ್ದೇನೆ. 'ಬಾ' ಆಶ್ರಮದಲ್ಲಿದ್ದಾಳೆ. ಆಕೆಗೆ ಸಾಕಷ್ಟು ವಯಸ್ಸಾಗಿದೆ; ಆದರೆ ಎಂದಿನಂತೆ ದಿಟ್ಟವಾಗಿಯೇ ಇದ್ದಾಳೆ. ಆಕೆ ನಿನಗೆ ತಿಳಿದಿರುವಂತೆ ತನ್ನ ದೌರ್ಬಲ್ಯ ಹಾಗೂ ಸದ್ಗುಣಗಳ, ಅದೇ ಹೆಂಗಸೇ. ಮಣಿಲಾಲ್ ಮತ್ತು ರಾಮದಾಸ್ ಫೀನಿಕ್ಸ್‌ನಲ್ಲಿದ್ದು ಇಂಡಿಯನ್ ಒಪೀನಿಯನ್ ನೋಡಿಕೊಳ್ಳುತ್ತಿದ್ದಾರೆ. ಹರಿಲಾಲ್ ಕಲ್ಕತ್ತಾದಲ್ಲಿದ್ದು ತನ್ನ ವ್ಯಾಪಾರ ನೋಡಿಕೊಳ್ಳುತ್ತಿದ್ದಾನೆ. ಅವನ ಹೆಂಡತಿ ಹೋಗಿಬಿಟ್ಟಳು. 'ಬಾ' ಅವನ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾಳೆ.

ಏಪ್ರಿಲ್ ೩೦, ೧೯೨೦ (ಶ್ರೀಮತಿ ಜಿನ್ನಾಗೆ ಪತ್ರದಲ್ಲಿ)

ಶ್ರೀಯುತ ಜಿನ್ನಾಗೆ ನನ್ನ ನೆನಪು ತಿಳಿಸಿ ಹಾಗೂ ಅವರನ್ನು ಹಿಂದೂಸ್ಥಾನಿ ಅಥವಾ ಗುಜರಾತಿ ಕಲಿಯಲು ಪುಸಲಾಯಿಸಿ. ನಾನು ನಿಮ್ಮ ಸ್ಥಾನದಲ್ಲಿದ್ದಿದ್ದರೆ, ಈ ಹೊತ್ತಿಗೆ ಅವರೊಂದಿಗೆ ಗುಜರಾತಿ ಅಥವಾ ಹಿಂದೂಸ್ಥಾನಿಯಲ್ಲಿ ಮಾತನಾಡಲಾರಂಭಿಸುತ್ತಿದ್ದೆ. ಇದರಿಂದಾಗಿ ನೀವು ನಿಮ್ಮ ಇಂಗ್ಲಿಷ್‌ನ್ನು ಮರೆಯುವ ಅಥವಾ ನಿಮ್ಮ ನಡುವೆ ತಪ್ಪು ತಿಳುವಳಿಕೆ ಮೂಡುವ ಅಪಾಯವೇನೂ ಇರಲಾರದು. ಹೌದು ತಾನೇ?

ಇದನ್ನು ನೀವು ಮಾಡುವಿರಾ? ನೀವು ನನ್ನ ಬಗ್ಗೆ ಇಟ್ಟುಕೊಂಡಿರುವ ಪ್ರೀತಿಯ ಸಲುವಾಗಿಯಾದರೂ ಮಾಡಿ ಎಂದು ಕೇಳುವೆ.

ಪೂನಾ, ಆಗಸ್ಟ್ ೨೩, ೧೯೩೩

ಗಾಂಧಿ: ಆನಂದ್, ಈ ಸಂದಿಗ್ಧದಲ್ಲಿ ನಾನೇನು ಮಾಡಬಹುದೆಂದು ನಿನಗನ್ನಿಸುತ್ತದೆ? ನನ್ನನ್ನು ಸಾಯಲು ಬಿಡುತ್ತಾರೆಂದು ಭಾವಿಸಿದ್ದೆ. ಹಾಗೆ ನೋಡಿದರೆ,

ಅಂತಹ ಸಂದರ್ಭಕ್ಕೆ ನಾನು ಪೂರ್ಣವಾಗಿ ಸಿದ್ಧನಾಗಿದ್ದೆ ಕೂಡ. ಹಾಗಾಗಿಯೇ, ನನ್ನ ಬಿಡುಗಡೆಯ ಹಿಂದಿನ ಒಂದು ದಿನವಷ್ಟೇ ನಾನು ನನ್ನೆಲ್ಲಾ ಸಣ್ಣ ಪುಟ್ಟ ವೈಯುಕ್ತಿಕ ವಸ್ತುಗಳನ್ನು ಆಸ್ಪತ್ರೆಯ ದಾದಿಯರಿಗೆ ಹಾಗೂ ಸಹಾಯಕರಿಗೆ ಕೊಟ್ಟುಬಿಟ್ಟಿದ್ದೆ. ಉಪವಾಸ ಮಾಡಿ ತಂದುಕೊಳ್ಳುವ ನನ್ನ ಸಾವನ್ನು ಜನ ಹೇಗೆ ತೆಗೆದುಕೊಳ್ಳುತ್ತಿದ್ದರೋ ತಿಳಿಯದು.

ಆನಂದ್ ಹಿಂಗೋರಣಿ: ಏಕೆ, ಅದು ಅತ್ಯಂತ ಧೀರೋದಾತ್ತ ಸಾವಾಗಿರುತ್ತಿತ್ತು ಬಾಪು.

ಗಾ: ಛೇ! ಅಸಹ್ಯ. ಅದನ್ನು, ಉಪವಾಸ ಮಾಡಿ ಸಾಯುವುದನ್ನು, ನೀನು ಧೀರೋದಾತ್ತ ಸಾವೆಂದು ಪರಿಗಣಿಸುವೆಯ? ಅದರಲ್ಲಿ ಧೀರತೆ ಎಲ್ಲಿಂದ ಬಂತು? ಆದರೆ ನನ್ನ ಜಾತಕದಲ್ಲಿ ನಾನು ಧೀರನ ಸಾವನ್ನು ಅಪ್ಪುವೆನೆಂದು ಬರೆದಿದೆ ಎಂಬುದು ನಿನಗೆ ಗೊತ್ತಾ?

ಆ: ಆದರೆ ಬಾಪು, ಈ ಉಪವಾಸದ ಸಾವೂ ಧೀರೋದಾತ್ತ ಸಾವೇ. ಉದ್ದೇಶಪೂರ್ವಕವಾಗಿ ಅಂಗುಲ ಅಂಗುಲವಾಗಿ ಸಾವನ್ನು ಎದುರುಗೊಳ್ಳುವುದೇನೂ ಸುಲಭದ ಕೆಲಸವಲ್ಲ.

ಗಾ: ಇಲ್ಲ, ನನಗೆ ಹಾಗೆನ್ನಿಸುವುದಿಲ್ಲ. ನನ್ನ ಸಾವು ನೇಣುಗಂಬದ ಮೇಲೆ ಅಥವಾ ಗುಂಡಿನೆದುರಿಗೇ ಘಟಿಸುವಂತಹುದು. ಅದು ನಿಜವಾಗಿ ಧೀರೋದಾತ್ತ ಸಾವು; ಉಪವಾಸ ಮಾಡುತ್ತಾ ಹಾಸಿಗೆಯಲ್ಲಿ ಸಾಯುವುದಲ್ಲ.

ಜೈನ ಮಂದಿರ, ಮದ್ರಾಸ್, ಡಿಸೆಂಬರ್ ೨೨, ೧೯೩೩

ಈಗ ನಾನು ನನ್ನ ದಂಧೆ ಆರಂಭಿಸುತ್ತಿದ್ದೇನೆ. ನೀವು ದೂರದೂರದ ಸ್ಥಳಗಳಿಗೆ ಹೋಗಿ ಜನರನ್ನು ಲೂಟಿ ಮಾಡಿ ಗಂಟು ಮಾಡಿಕೊಳ್ಳುತ್ತೀರಾ. ನಾನೀಗ ನಿಮ್ಮನ್ನು ಲೂಟಿ ಮಾಡಲು ಹೊರಟಿರುವೆ.

ಪ್ರೇಕ್ಷಕರು ಈ ಹೇಳಿಕೆಯನ್ನು ನಗುತ್ತಾ, ಘೋಷಣೆ ಕೂಗುತ್ತಾ ಸ್ವಾಗತಿಸಿದರು. ದಂತದ ಕರಂಡವೊಂದನ್ನು ಹರಾಜಿಗಿಡುತ್ತಾ, 'ಇದಕ್ಕೆಷ್ಟು ಕೊಡುವಿರಿ?' ಎಂದು ಗಾಂಧಿ ಕೇಳಿದರು.

ಸುಮಾರು ೧೫ ರೂಪಾಯಿ ಬೆಲೆ ಬಾಳುವ ಆ ಕರಂಡಕ್ಕೆ ಮೊದಲ ಸವಾಲಿನಲ್ಲಿ ರಾಮನಾಥ ಗೋಯಂಕಾ ೧೦೧ ರೂಪಾಯಿಗಳನ್ನು ಕೂಗಿದರು.

'ಮುಂದೆ ಬನ್ನಿ. ಇಲ್ಲಿ ಸೇರಿರುವ ಗುಜರಾತಿಗಳಿಗೆ ೧೦೧ ರೂಪಾಯಿ ಏನೇನೂ ಅಲ್ಲ!' ಮುಂದಿನ ಕೂಗು ೨೦೧ ರೂಪಾಯಿಗಳಿಗೇರಿತು.

ಹಾಗಾದರೆ ಕೊಟ್ಟುಬಿಡಲಾ... ಒಂದು ಬಾರಿ... ಎರಡು ಬಾರಿ... ಮೂರನೇ ಬಾರಿ ಎಂದು ನಾನು ಹೇಳುವುದಿಲ್ಲ... ಇನ್ನೂ ಕಾಲ ಮಿಂಚಿಲ್ಲ... ಒಂದೆರಡು ನೂರು ನಿಮಗೆ ಏನೇನೂ ಅಲ್ಲ....

(ಹರಾಜು ಮುಗಿದು ಗಾಂಧಿ ವೇದಿಕೆಯ ಕೆಳಗೆ ಇಳಿಯುತ್ತಿದ್ದಂತೆ ಒಬ್ಬ ಹುಡುಗ ಅವರ ಬಳಿ ಓಡೋಡಿ ಬರುತ್ತಾನೆ)

ಹುಡುಗ: ನಿಮ್ಮ ಸಹಿ ಬೇಕು... ದಯವಿಟ್ಟು ಹಾಕಿ ಕೊಡಿ.

ಗಾ: ನೀನೇನು ಕೊಡುವೆ? ನನಗೆ ರೂಪಾಯಿ ಬೇಕು.

ಹು: ಒಂದು ರೂಪಾಯಿ ಕೊಡುವೆ.

ಗಾ: *(ಅವನ ಕಿವಿಯ ಮುರಗಳನ್ನು ನೋಡುತ್ತಾ, ಮುಟ್ಟುತ್ತಾ)* ಏನು ಇವು?

ಹು: ನೀವು ಅವುಗಳನ್ನು ತೆಗೆದುಕೊಳ್ಳಬಹುದು.

ಗಾ: ನಿನ್ನ ತಂದೆಯ ಅನುಮತಿ ಇದೆಯಾ?

ಹು: ಅವನ್ನು ನಿಮಗೆ ಕೊಡಲು ಅವರ ಅಭ್ಯಂತರವೇನೂ ಇರಲಾರದು.

ಗಾ: ನಿನಗೆ ಇಷ್ಟೊಂದು ಸ್ವಾತಂತ್ರ್ಯ ಇದೆಯಲ್ಲ! *(ಮುರಗಳನ್ನು ಬಿಚ್ಚಿಕೊಂಡು)* ನಿನಗಿದು ಅಗತ್ಯವಿಲ್ಲ. ಇನ್ನು ಮುಂದೆಯೂ ಮುರಗಳನ್ನು ಹಾಕಿಕೊಳ್ಳಬೇಡ. ಹೊಸವಕ್ಕಾಗಿ ನಿನ್ನ ತಂದೆಯನ್ನು ಕೇಳಬೇಡ. *(ಸಹಿ ಹಾಕಿಕೊಡುತ್ತಾ)* ನಿನ್ನ ಹೆಸರೇನು ಮರಿ?

ಹು: ಬಿ.ವಿ. ತಮ್ಮಪ್ಪ.

ಗಾ: ಎಷ್ಟು ವಯಸ್ಸು ನಿನಗೆ?

ಹು: ಹದಿಮೂರು

ಗಾ: ಓ! ಹದಿಮೂರನೇ ವಯಸ್ಸಿಗೇ ನಿನಗೆ ಸ್ವಾತಂತ್ರ್ಯ ದಕ್ಕಿದೆ. ನನಗೆ ಆ ಸೌಭಾಗ್ಯವಿರಲಿಲ್ಲ!

ಕರಾಚಿ, ಜುಲೈ ೧೦, ೧೯೩೪

....ಡಾ॥ ಅಂಬೇಡ್ಕರರು ನಮ್ಮಲ್ಲಿ ಹಲವರು ನಾಚಿಕೆ ಪಡುವಷ್ಟು ಬುದ್ಧಿವಂತರು ಹಾಗೂ ಜಾಣರು. ತಮ್ಮ ಚುರುಕಾದ ಬುದ್ಧಿಯಿಂದ ಅವರು ಹಲವು ಜನರ ಹೃದಯವನ್ನು ಮುಟ್ಟಿದ್ದಾರೆ. ಅವರ ತ್ಯಾಗ ತುಂಬ ದೊಡ್ಡದು. ಅವರು ಯಾವಾಗಲೂ ತಮ್ಮ ಕೆಲಸದಲ್ಲಿ ಮಗ್ನರು. ಅವರು ಸರಳ ಜೀವನ ನಡೆಸುವರು. ಅವರು ತಿಂಗಳಿಗೆ ಒಂದೆರಡು ಸಾವಿರ ರೂಪಾಯಿಗಳನ್ನಾದರೂ ಸಂಪಾದಿಸಬಲ್ಲವರು. ಅವರು ಈರೋಪಿಗೆ ಹೋಗಿ ನೆಲಸಲು ಕೂಡ ಸಾಧ್ಯ. ಆದರೆ ಅವರಿಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲ. ಅವರಿಗೆ ಹರಿಜನರ ಕ್ಷೇಮಾಭ್ಯುಯದ್ದೇ ಚಿಂತೆ. ಆದರೆ ಇಂದು ಸಮಾಜದಲ್ಲಿ ಇಂತಹ ಮನುಷ್ಯನ ಸ್ಥಾನಮಾನವಾದರೂ ಏನು? 'ನಾನು ವಿಧಾನ ಸಭೆ ಅಧಿವೇಶನಕ್ಕೆಂದು ಪೂನಾಗೆ ಹೋದಾಗ, ಇತರರೆಲ್ಲ ಅವರ ಸ್ನೇಹಿತರ ಮನೆಗಳಲ್ಲಿ ತಂಗಿ ತಮ್ಮ ದಿನಭತ್ಯೆಯನ್ನು ಉಳಿಸಿಕೊಳ್ಳುವವರೆ, ನಾನು ಹೋಟೆಲಿನಲ್ಲಿ ತಂಗಿ ಆ ಇಡೀ ೧೦ ರೂಪಾಯಿಗಳನ್ನು ಖರ್ಚು ಮಾಡಿಕೊಳ್ಳಬೇಕಾಗಿದೆ. ನನ್ನನ್ನು ಒಬ್ಬ ಸಹೋದ್ಯೋಗಿಯೆಂದಾಗಲೀ, ಸ್ನೇಹಿತನೆಂದಾಗಲೀ

ಒಪ್ಪಿಕೊಳ್ಳುವ ಒಂದು ಹಿಂದೂ ಕುಟುಂಬವೂ ಪೂನಾದಲ್ಲಿ ಇಲ್ಲ' ಎಂದು ಅವರು ಹೇಳುತ್ತಾರೆ. ಯಾರ ಅವಮಾನವಿದು?

ಬಾಂಬೆ, ಜನವರಿ ೧೯೩೬

ನನ್ನ ಜೀವನದ ಅತ್ಯಂತ ಕರಾಳ ದಿನ ನಾನು ಬಾಂಬೆಯಲ್ಲಿದ್ದಾಗ ಸಂಭವಿಸಿತು.... ಅದು ನನ್ನ ಕಾಮುಕತೆ ಇದ್ದಕ್ಕಿದ್ದಂತೆ ಕೆರಳಿದ ಸಮಯ. ನಾನು ಮಲಗಿದ್ದಾಗ, ನನಗೆ ಒಬ್ಬ ಹೆಂಗಸನ್ನು ನೋಡಬೇಕೆನಿಸಿತು. ಸುಮಾರು ನಲವತ್ತು ವರ್ಷಗಳ ಕಾಲ ದೇಹದ ಬಯಕೆಯನ್ನು ಗೆಲ್ಲುವ ಪ್ರಯತ್ನದಲ್ಲಿದ್ದ ಮನುಷ್ಯನಿಗೆ ಇಂತಹ ಭಯಾನಕ ಅನುಭವವಾದಾಗ ತುಂಬಾ ಹಿಂಸೆಯಾಗಲೇಬೇಕು. ಅಂತಿಮವಾಗಿ ನಾನು ಈ ಭಾವನೆಯನ್ನು ಗೆದ್ದೆನಾದರೂ, ನನ್ನ ಜೀವನದ ಅತ್ಯಂತ ನಾಚಿಕೆಗೇಡಿನ ಘಳಿಗೆಯೊಂದಿಗೆ ಮುಖಾಮುಖಿಯಾಗಿದ್ದೆ ಹಾಗೂ ನಾನೇನಾದರೂ ಆಗ ಸೋತುಹೋಗಿದ್ದರೆ, ಅದು ನನ್ನನ್ನು ನಿರ್ನಾಮ ಮಾಡುತ್ತಿತ್ತು.

ನವೆಂಬರ್ ೧೬, ೨೦೦೭

ನಂದಿಗ್ರಾಮ : ಹೊಸ ರಾಷ್ಟ್ರೀಯ ಹೋರಾಟಕ್ಕೆ ನಾಂದಿ ?

ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಮಲೇಷಿಯಾದ ಕೈಗಾರಿಕಾ ಸಂಸ್ಥೆಯೊಂದಕ್ಕೆ ರಾಸಾಯನಿಕ ಕೈಗಾರಿಕೆಗಳ ವಸಾಹತುವೊಂದನ್ನು ಸ್ಥಾಪಿಸಲು ರಾಜ್ಯ ಸರ್ಕಾರ ವಿಶೇಷ ಆರ್ಥಿಕ ವಲಯವೊಂದನ್ನು ಒದಗಿಸಿಕೊಡಲು ನಡೆಸಿರುವ ಪ್ರಯತ್ನಗಳನ್ನು, ಅಲ್ಲಿನ ರೈತರು ಈ ಆರ್ಥಿಕ ವಲಯಕ್ಕೆ ತಮ್ಮ ಕೃಷಿಭೂಮಿಯನ್ನು ಬಿಟ್ಟುಕೊಡಲು ನಿರಾಕರಿಸುತ್ತಿರುವ ಮೂಲಕ ವಿಫಲಗೊಳಿಸುತ್ತಿರುವುದೇ ಈ ಸತತ ಹಿಂಸಾಚಾರಕ್ಕೆ ಕಾರಣವಾಗಿವೆ. ಕಳೆದ ಮಾರ್ಚ್‌ನಲ್ಲಿ ಪೋಲೀಸ್ ಗೋಲೀಬಾರ್‌ನಲ್ಲಿ ಸತ್ತ ೧೫-೨೦ ಜನರಿಂದ ಆರಂಭವಾದಂತೆ, ಈವರೆಗೆ ಇಲ್ಲಿ ಮತ್ತೆ ಮತ್ತೆ ಭುಗಿಲೇಳುತ್ತಿರುವ ಹಿಂಸಾಚಾರದಲ್ಲಿ ನೂರಕ್ಕೂ ಹೆಚ್ಚು ಜನ ಸತ್ತಿರಬಹುದೆಂದು ಒಂದು ಅಂದಾಜು. ಪ್ರತಿ ಬಾರಿಯ ಹಿಂಸಾಚಾರದಲ್ಲೂ ಅಲ್ಲಿನ ಸರ್ಕಾರದ ನೇತೃತ್ವ ವಹಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಪೋಲೀಸರ ವೇಷ ಧರಿಸಿ ಅಥವಾ ಪೋಲೀಸರ ಸಹಕಾರದಿಂದ ಈ ಹಿಂಸಾಚಾರ ನಡೆಸುತ್ತಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡುತ್ತಿದ್ದರೆ, ಈ ಬಾರಿ ಪಕ್ಷದ ಕಾರ್ಯಕರ್ತರೇ ಪ್ರತ್ಯಕ್ಷವಾಗಿ ಹಾಗೂ ನೇರವಾಗಿ ಯಾವುದೇ ಎಗ್ಗಿಲ್ಲದೆ, ಬಂದೂಕು- ಬಾಂಬುಗಳಿಂದ ಸಜ್ಜಾಗಿ ನಂದಿಗ್ರಾಮವನ್ನು ಸರ್ಕಾರದ ಉದ್ದೇಶಕ್ಕೆ ವಿರುದ್ಧವಿರುವ ಶಕ್ತಿಗಳಿಂದ ಮುಕ್ತಗೊಳಿಸುವ 'ಸ್ವಚ್ಛತಾ ಕಾರ್ಯಕ್ರಮ'ವನ್ನು ಆರಂಭಿಸಿದ್ದಾರೆಂದು ಹೇಳಲಾಗುತ್ತಿದೆ. ಇದನ್ನು ಪ್ರತಿಭಟಿಸಲು ಅಲ್ಲಿಗೆ ಧಾವಿಸಿದ ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್ ಸೇರಿದಂತೆ ಮಾನವ ಹಕ್ಕು ಆಂದೋಲನದ ಹಲವು ಕಾರ್ಯಕರ್ತರ ಮೇಲೆ ಇವರು ಹಲ್ಲೆ ನಡೆಸಿದ್ದಾರೆ. ಇತ್ತೀಚಿನ ವರದಿಗಳ ಪ್ರಕಾರ ಈ ಕಾರ್ಯಕ್ರಮ ಸದ್ಯಕ್ಕೆ ಯಶಸ್ವಿಯೂ ಆಗಿದೆ. ಆದರೆ ಈ ಮಧ್ಯೆ ಹತ್ತಾರು ಹೆಣಗಳು

ಬಿದ್ದಿವೆ. ನೂರಾರು ಜನ ಪ್ರಾಣಾಂತಿಕವಾಗಿ ಗಾಯಗೊಂಡಿದ್ದಾರೆ. ಅನೇಕ ರೈತ ಕುಟುಂಬಗಳು ಊರನ್ನೇ ತ್ಯಜಿಸಿವೆ. ಮತ್ತೆ ಹಿಂಸಾಚಾರ ಭುಗಿಲೇಳುವ ಎಲ್ಲ ಸಾಧ್ಯತೆಗಳಿವೆ.

ಇದನ್ನೆಲ್ಲ ನೋಡಿ ಇಡೀ ಬಂಗಾಳ ಬೆಚ್ಚಿ ಬಿದ್ದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಜನರ ಪಕ್ಷವೆಂದು ಕಳೆದ ಮುವ್ವತ್ತು ವರ್ಷಗಳಿಂದಲೂ ಸತತವಾಗಿ ಗೆಲ್ಲಿಸುತ್ತಾ ಬಂದಿದ್ದ ರಾಜ್ಯದ ಜನ ಈಗ ಪಕ್ಷದ ವಿರುದ್ಧ, ಅದರ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದೆ. ಪ್ರಥಮ ಬಾರಿಗೆ ರಾಜ್ಯದಲ್ಲಿ ಈ ಪಕ್ಷದ ನೇತೃತ್ವದ ಎಡರಂಗದ ಭೂಮಿ ನೀತಿಯ ವಿರುದ್ಧ ಕರೆ ಕೊಡಲಾಗಿದ್ದ ಬಂದ್‌ಗೆ ಜನರ ಪ್ರತಿಕ್ರಿಯೆ ಅಭೂತಪೂರ್ವವಾಗಿದೆ. ಕೊಲ್ಕೊತ್ತಾ ಮಹಾನಗರದ ಜನವಂತೂ ಸಂಪೂರ್ಣ ಬಂದ್ ಆಚರಿಸುವ ಮೂಲಕ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಈವರೆಗೆ ಎಡರಂಗದ ಸರ್ಕಾರಕ್ಕೆ ತನ್ನ ಬೆಂಬಲದ ಮೂಲಕ ಅದಕ್ಕೊಂದು ಘನತೆ ಒದಗಿಸಿದ್ದ ಅಲ್ಲಿನ 'ಭದ್ರಲೋಕ' (ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗಗಳ ಬುದ್ಧಿಜೀವಿ ಲೋಕ) ಸರ್ಕಾರ, ಪಕ್ಷದ ಸದ್ಯದ ಹಠಮಾರಿತನ, ಕ್ರೌರ್ಯ ಹಾಗೂ ಉದ್ಧಟತನಗಳ ವಿರುದ್ಧ ತಿರುಗಿ ಬಿದ್ದು ಬೀದಿಗಿಳಿದಿದ್ದಾರೆ. ಪಕ್ಷವನ್ನು ಜನರ ವಿರುದ್ಧ ಹಿಂಸೆಯೆಸಗಿ ಅವರನ್ನು ಹತ್ತಿಕ್ಕಲು ಒಂದು ಅಸ್ತ್ರವನ್ನಾಗಿ ಬಳಸಲು ಹೇಸದ ಸರ್ಕಾರ, ತಾತ್ವಿಕವಾಗಿ ಅಧೋಗತಿಯನ್ನು ಮುಟ್ಟಿದೆ ಎಂದು ಅವರು ತೀರ್ಮಾನಿಸದಂತಿದೆ. ಹೀಗಾಗಿ ಎಡರಂಗದಲ್ಲಿ ಬಿರುಕಗಳು ಕಾಣಿಸಕೊಳ್ಳತೊಡಗಿವೆ. ಸಿಪಿಐ ಸರ್ಕಾರದ ಉದ್ಧಟತನವನ್ನು ಖಂಡಿಸಿದ್ದರೆ, ಆರ್‌ಎಸ್‌ಪಿ ಸರ್ಕಾರದಿಂದ ಹೊರಬರುವ ಆಲೋಚನೆಯಲ್ಲಿದೆ.

ಇದೆಲ್ಲ ಏಕಾಯಿತು? ಹೇಗಾಯಿತು? ರಾಜ್ಯದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಜಿ ಮಾರ್ಕ್ಸ್‌ವಾದಿ ಪಕ್ಷವನ್ನು ಹೊಸ ತಾತ್ವಿಕ ದಿಕ್ಕಿನೆಡೆಗೆ ಒಯ್ಯುವ ಉತ್ಸಾಹದಲ್ಲಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಎಲ್ಲರ ನಿರೀಕ್ಷೆಗಳ ವಿರುದ್ಧ ಅವರಿಗೆ ಜನತೆ ಮೂರನೇ ಎರಡರಷ್ಟು ಬಹುಮತ ನೀಡಿ ಬೆಂಬಲಿಸಿತು. ಇದರಿಂದ ಉತ್ತೇಜಿತರಾಗಿರುವ ಭಟ್ಟಾಚಾರ್ಜಿ ರಾಜ್ಯದಲ್ಲಿ ಅಭಿವೃದ್ಧಿಯ ಹೊಸ ಶಕೆ ಆರಂಭಿಸಿ ಬಂಗಾಳದ ಮಟ್ಟಿಗಾದರೂ ಯುಗಪುರುಷನೆನಿಸಿಕೊಳ್ಳುವ ಹಂಬಲದಲ್ಲಿದ್ದಂತಿದೆ. ಹಳೆಯ ಮಾರ್ಕ್ಸ್‌ವಾದಿ ತಾತ್ವಿಕ ನಿಲುವುಗಳನ್ನು ನಂಬಿ ಕೂತರೆ ಅದು ಸಾಧ್ಯವಿಲ್ಲ ಎಂಬುದೂ ಅವರಿಗೀಗ ಮನವರಿಕೆಯಾಗಿದೆ: ಖಾಸಗಿ ಬಂಡವಾಳ ಕುರಿತ ಮಾರ್ಕ್ಸ್‌ವಾದಿ ನಿಲುವು, ಬದಲಾದ ಜಾಗತಿಕ ಸಂದರ್ಭದಲ್ಲಿ ಅವ್ಯಾವಹಾರಿಕ ಎಂದು ಅವರಿಗನ್ನಿಸಿಬಿಟ್ಟಿದೆ. ಆದರೆ ಇವರಿಗನ್ನಿಸಿದ್ದು ಪಕ್ಷದ ಎಲ್ಲರಿಗೂ ಅನ್ನಿಸಿಲ್ಲ! ಅನ್ನಿಸಿದವರು ಹೇಳಿಕೊಳ್ಳುವಂತಿಲ್ಲ. ಏಕೆಂದರೆ, ಇದನ್ನೊಮ್ಮೆ ಒಪ್ಪಿಕೊಂಡುಬಿಟ್ಟರೆ, ಪಕ್ಷದ ತಾತ್ವಿಕ ಅಸ್ತಿವಾರವೇ ಅಲುಗಾಡಿ, ಅದರ ಇತಿಹಾಸ–ಪುರಾಣಗಳೆಲ್ಲವನ್ನೂ ಅಲ್ಲಗೆಳೆಯಬೇಕಾಗುತ್ತದೆ. ಪಕ್ಷದ ಅಸ್ತಿತ್ವವನ್ನೇ ನಿರಚನಗೊಳಿಸಿ ಪಕ್ಷವನ್ನು ಹೊಸದಾಗಿ 'ರಚಿಸ'ಬೇಕಾಗುತ್ತದೆ!. ಆದರೆ ಸದ್ಯದ ಭಾರತೀಯ ರಾಜಕೀಯ ಸಂದರ್ಭದಲ್ಲಿ ಇದು ಒಂದು ದುಸ್ಸಾಹಸವಾಗಿ ಪಕ್ಷದ ನಾಯಕರಿಗೆ ಕಂಡಿದೆ. ಏಕೆಂದರೆ, ಆಗ ಪಕ್ಷದ ತಾತ್ವಿಕ ಭಿನ್ನತೆಯೇ, ಅದು ಈವರೆಗೆ ಹಾಗೂ ಹೀಗೂ ಕಾಪಾಡಿಕೊಂಡು

ಬಂದಿರುವ ಕ್ರಾಂತಿಕಾರಕತೆಯು ಬಿಂಬವೇ ಅಳಿಸಿಹೋಗಿ ಅದರ ಅಸ್ತಿತ್ವವೇ ಅನುಮಾನಾಸ್ಪದವಾಗುತ್ತದೆ. ಈ ತೊಳಲಾಟದಲ್ಲಿರುವ ಪಕ್ಷ ತಾತ್ವಿಕವಾಗಿ ಕವಲು ದಾರಿಯಲ್ಲಿದ್ದು, ತನ್ನ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗೊಂದಲಕ್ಕೆ ಸಿಕ್ಕಿದೆ. ಇದೇ ಪಕ್ಷದ ಕೇರಳದ ಮುಖ್ಯಮಂತ್ರಿ ಅಚ್ಯುತಾನಂದನ್ ಹಳೆಯ ತಾತ್ವಿಕತೆಯನ್ನೇ ಎತ್ತಿ ಹಿಡಿಯುತ್ತಾ, ಪಕ್ಷದ ರಾಜ್ಯಾಧ್ಯಕ್ಷರ ವಿರುದ್ಧವೇ ಸಮರ ಸಾರಿದ್ದಾರೆ. ಅವರೀಗ 'ಅಭಿವೃದ್ಧಿ'ಯ ಹೊಸ ಏಜೆಂಟರಾಗಿರುವ ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಪಕ್ಷ ಹೊಂದಿರುವ ಸಖ್ಯವನ್ನು ಎತ್ತಿ ತೋರಿಸಿದ್ದಕ್ಕಾಗಿ ಸ್ವಲ್ಪ ಕಾಲದ ಹಿಂದೆಯಷ್ಟೇ ಅಶಿಸ್ತಿನ ಆಪಾದನೆ ಎದುರಿಸಿ, ಪಕ್ಷದ ನೀತಿ ನಿರೂಪಣಾ ವೇದಿಕೆಯಾದ ಪಾಲಿಟ್ ಬ್ಯೂರೋದಿಂದಲೇ ಉಚ್ಚಾಟನೆಯ ಶಿಕ್ಷೆ ಅನುಭವಿಸಬೇಕಾಯಿತು!

ಆದರೆ ಬುದ್ಧಿಜೀವಿ ಎನಿಸಿಕೊಂಡಿರುವ ಬುದ್ಧದೇವರಿಗೆ ಹೊಸ ತಾತ್ವಿಕ ದರ್ಶನವಾದಂತಿದೆ. ಮನುಷ್ಯ ನಾಗರೀಕತೆ ಈಗ ನಿರ್ಣಾಯಕವಾಗಿ ಕೃಷಿ ಸಂಸ್ಕೃತಿ ಘಟ್ಟದಿಂದ ಕೈಗಾರಿಕಾ ಸಂಸ್ಕೃತಿ ಘಟ್ಟಕ್ಕೆ ಹಾದು ಹೋಗುತ್ತಿರುವಂತೆ ಅವರಿಗೆ ಕಾಣಿಸತೊಡಗಿದೆ. ಇದು ಇತಿಹಾದ ಅನಿವಾರ್ಯ ಚಲನೆ. ಇದನ್ನು ಒಪ್ಪಿಕೊಳ್ಳದೇ ಹೋದರೆ ರಾಜ್ಯ, ರಾಷ್ಟ್ರ ಹಿಂದೆ ಬಿದ್ದುಹೋಗುತ್ತವೆ; ಜನತೆ ಉದ್ಯೋಗಗಳಿಲ್ಲದೆ ಸಂಕಷ್ಟಕ್ಕೀಡಾಗುತ್ತಾರೆ ಎಂದು ಅವರು ಭಾವಿಸತೊಡಗಿದ್ದಾರೆ. ಇದು ಜಾಗತೀಕರಣವಾದಿಗಳು ಕಳೆದೆರಡು– ಮೂರು ದಶಕಗಳಿಂದಲೂ ಹೇಳಿಕೊಂಡು ಬರುತ್ತಿರುವ 'ಸತ್ಯ' ಎಂಬುದನ್ನರಿಯದೆ ಅವರು, ಇದು ಸ್ವತಃ ತಾನೇ ಈಗಷ್ಟೇ ಕಂಡುಕೊಂಡ ಸತ್ಯವೆಂಬಂತೆ ಅದನ್ನು ಅನುಷ್ಠಾನಗೊಳಿಸಲು ಅವತಾರ ಪುರುಷನ ಆತ್ಮವಿಶ್ವಾಸದೊಂದಿಗೆ ಹಠ ತೊಟ್ಟು ನಿಂತಿದ್ದಾರೆ. ಅವರ ಈ ನಿಲುವಿನಲ್ಲಿ ಸಾಮಾನ್ಯವಾಗಿ ಫ್ಯಾಸಿಸ್ಟ್‌ರಲ್ಲಿ ಕಾಣುವ ಸರ್ವಜ್ಞತೆಯ ಅಹಂಕಾರ ಎದ್ದು ಕಾಣುತ್ತಿದೆ. ನಂದಿಗ್ರಾಮ ವಿಶೇಷ ಆರ್ಥಿಕ ವಲಯದ ವಿರುದ್ಧ ಹೋರಾಟವನ್ನು ಜನತೆಯ ಹೋರಾಟವೆಂದು ಪರಿಗಣಿಸದೆ; ರಾಜ್ಯದ ಕೈಗಾರಿಕಾಭಿವೃದ್ಧಿಯನ್ನು ಸಹಿಸದ (ಏಕೆ?) ನಕ್ಸಲೈಟರು, ತೃಣಮೂಲ ಕಾಂಗ್ರೆಸ್ಸಿಗರು ಸೇರಿದಂತೆ ತಮ್ಮ ರಾಜಕೀಯ ಶತ್ರುಗಳು ನಡೆಸಿರುವ ಪಿತೂರಿ ಎಂದು ನಂಬಿ ಅದನ್ನು ಹೊಸಕಿಹಾಕಲು ಕಟಿಬದ್ಧರಾಗಿ ನಿಂತಿರುವ ಬುದ್ಧದೇವ, ತಮ್ಮ ಈ ಉದ್ಧಟತನದಿಂದಾಗಿ ಪ. ಬಂಗಾಳದಲ್ಲಿ ಎಡರಂಗದ ನಿರಂತರ ಆಡಳಿತ ದಾಖಲೆಯನ್ನು ಕೊನೆಗಾಣಿಸುವುದರಲ್ಲಿ ಯಶಸ್ವಿಯಾದರೂ ಆಶ್ಚರ್ಯವಿಲ್ಲ. ಅದು ಪಕ್ಷದ ಹಿತದೃಷ್ಟಿಯಿಂದಲೂ, ರಾಷ್ಟ್ರದ ಹಿತದೃಷ್ಟಿಯಿಂದಲೂ ಒಳ್ಳೆಯದೇ.

ಯಾಕೆ ಒಳ್ಳೆಯದು ಎಂದರೆ, ಈ ತಳಮಳದಲ್ಲಿ ಮಾರ್ಕ್ಸ್‌ವಾದಿ ಪಕ್ಷಕ್ಕೆ ತನ್ನ ತಾತ್ವಿಕತೆಯನ್ನು ಇಡಿಯಾಗಿ ಪುನರ್‌ಪರಿಶೀಲಿಕೊಳ್ಳುವ ಅವಕಾಶ ಒದಗುತ್ತದೆ. ಸೋವಿಯತ್ ಒಕ್ಕೂಟದ ಪತನವಾದ ನಂತರ ಜಗತ್ತನ್ನು ಅಮೆರಿಕಾ– ಚೀನಾ ಎಂಬ ಎರಡು ಧೃವಗಳ ಜಗತ್ತನ್ನಾಗಿ ನೋಡುವ ಭ್ರಮೆಗೆ ಸಿಲುಕಿ ತನ್ನ ನಿಲುವುಗಳನ್ನು ರೂಪಿಸಿಕೊಳ್ಳುತ್ತಾ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವ ಈ ಪಕ್ಷ, ತಾತ್ವಿಕವಾಗಿ ದಿವಾಳಿಯ ಅಂಚಿನಲ್ಲಿದ್ದಂತೆ ತೋರುತ್ತಿದೆ.

ಭಾರತದ ರಾಜಕಾರಣದಲ್ಲಿ ತಮ್ಮ ನಾಯಕರ ಸರಳ ಬದುಕು ಹಾಗೂ ತನ್ನದೇ ತಾತ್ವಿಕ ಬದ್ಧತೆಗಳಿಂದಾಗಿ, ಬಂಡವಾಳಶಾಹಿಗಳ ಅಂತಿಮ ವಿಜಯಯಾತ್ರೆಯಂತಿರುವ ಜಾಗತೀಕರಣದ ವಿರುದ್ಧ ಸಮರ ಸಾರಬಲ್ಲ ನೈತಿಕ ಸಾಮರ್ಥ್ಯವಿರುವ ಏಕೈಕ ರಾಜಕೀಯ ಪಕ್ಷವಾಗಿ ಕಂಡಿರುವ ಈ ಪಕ್ಷ; ಮೂರು ದಶಕಗಳ ನಿರಂತರ ಆಡಳಿತ ಸುಖದಿಂದಾಗಿ ತಾತ್ವಿಕ ಜಡತೆಗೆ ಈಡಾದಂತೆ ತೋರುತ್ತಿದೆ. ಇದರ ನಾಯಕರ ಮನಸ್ಸುಗಳು ತುಕ್ಕು ಹಿಡಿದಿವೆ. ಇದು ಜ್ಯೋತಿ ಬಸು ಎಂಬ ಮಧ್ಯಮ ವರ್ಗಗಳ ಅಭಿರುಚಿಯ ಸುಲಭ ಆಡಳಿತಗಾರನ ಕಾಲಕ್ಕೇ ಆರಂಭವಾಯಿತೆಂದು ಹೇಳಲಾಗುತ್ತದೆ. ಇದರಿಂದಾಗಿ ಜಾಗತೀಕರಣದ ಸಂಕೀರ್ಣ ಪರಿಣಾಮಗಳನ್ನು ಅದರೆಲ್ಲ ಆಳಗಳಲ್ಲಿ ಅರಿಯುವ ಅಧ್ಯಯನಶೀಲತೆಯನ್ನೂ, ಸಾಮಾನ್ಯ ಜನತೆಯ ನಾಡಿಮಿಡಿತವನ್ನು ಅರಿಯುವ ಸೂಕ್ಷ್ಮತೆಯನ್ನೂ ಅವರು ಕಳೆದುಕೊಂಡಂತೆ ತೋರುತ್ತದೆ. ಹಾಗಾಗಿಯೇ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ರಾಷ್ಟ್ರಮಟ್ಟದಲ್ಲಿ ತಾತ್ವಿಕವಾಗಿ ವಿರೋಧಿಸುತ್ತಲೂ, ತಾವು ಆಳುತ್ತಿರುವ ರಾಜ್ಯಗಳಲ್ಲಿ ಅದನ್ನು ಬೆಂಬಲಿಸುವ ದ್ವಂದ್ವಕ್ಕೆ ಸಿಕ್ಕಿದ್ದಾರೆ.

ಬುದ್ಧದೇವ ಭಟ್ಟಾಚಾರ್ಜಿ ಸೇರಿದಂತೆ ಈ ಪಕ್ಷದ ನಾಯಕರಿಗೆ ಕೈಗಾರಿಕೀಕರಣವೆಂದರೆ, ಮಾರ್ಕ್ಸ್ ಪರಿಕಲ್ಪಿಸಿದ್ದ ಐರೋಪ್ಯ ಸಂದರ್ಭದ ಕೈಗಾರಿಕೀಕರಣವೇ ಆಗಿದೆ. ಹಾಗೇ ಕೃಷಿ ಅಥವಾ ಗ್ರಾಮ ಸಂಸ್ಕೃತಿ ಎಂದರೆ ಮಾರ್ಕ್ಸ್ ಕಲ್ಪಿಸಿಕೊಟ್ಟ ಮೌಢ್ಯ–ಮುಟ್ಠಾಳತನಗಳ ಆಡೊಂಬಲವೇ ಆಗಿರುವಂತೆ ತೋರುತ್ತದೆ. ಜಗತ್ತಿನ ಮಾರ್ಕ್ಸ್‌ವಾದಿಗಳು ತಮ್ಮ ಮಣ್ಣಿಗನುಗುಣವಾಗಿ ಮಾರ್ಕ್ಸ್‌ವಾದವನ್ನು ಬೆಳೆಸಿದ್ದರೆ, (ಉದಾ: ಈರೋಪ್ ಹಾಗೂ ಲ್ಯಾಟಿನ್ ಅಮೆರಿಕಾದ ಚಿಂತಕರು, ಹೋರಾಟಗಾರರು) ಭಾರತದ ಮಾರ್ಕ್ಸ್‌ವಾದಿಗಳು ಮಾರ್ಕ್ಸ್‌ನ ಐರೋಪ್ಯ ನೋಟ ಕ್ರಮದಲ್ಲೇ ಇನ್ನೂ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದ್ದಾರೆ. ಹೀಗಾಗಿಯೇ, ಇವರ ಮಾರ್ಕ್ಸ್‌ವಾದದಲ್ಲಿ ಸ್ಟಾಲಿನ್‌ನ ಕ್ರೌರ್ಯದ ಸುಳಿವೂ ಈಗ ಕಾಣತೊಡಗಿದೆ. ಹಾಗೆ ನೋಡಿದರೆ, ಲೋಹಿಯಾ ಹೇಳಿದ ಹಾಗೆ, ಮಾರ್ಕ್ಸ್‌ವಾದಿಗಳಿಗೂ ಅವರ ಪ್ರತಿದ್ವಂದಿಗಳಾದ ಬಂಡವಾಳಶಾಹಿಗಳಿಗೂ ಅಂತಹ ವ್ಯತ್ಯಾಸವೇನಿಲ್ಲ. ಇಬ್ಬರೂ ಬೃಹತ್ ಬಂಡವಾಳದ ಆಧುನಿಕ ಕೈಗಾರಿಕೆಗಳ ಆರಾಧಕರು. ಜಗಳ ಏನಿದ್ದರೂ ಬಂಡವಾಳದ ಸ್ವರೂಪಕ್ಕೆ ಸಂಬಂಧಿಸಿದ್ದಷ್ಟೇ. ಈ ಜಗಳವೂ ಈಗ ಪರಿಹಾರವಾಗಿದೆ: ಚೀನಾವೇ ಈಗ ಆಕರ್ಷಕ ಮಾದರಿಯಾಗಿ ಕಂಡು, ವಿದೇಶಿ ಖಾಸಗಿ ಬಂಡವಾಳವನ್ನು ಭಾರತದ ಕಮ್ಯುನಿಸ್ಟರು ಒಪ್ಪಿಕೊಳ್ಳತೊಡಗಿದ್ದಾರೆ. ಆದರೆ ಚೀನಾದ ಕಮ್ಯುನಿಸ್ಟ್ ಆಡಳಿತಗಾರರಿಗಿರುವ ಸರ್ವಾಧಿಕಾರ ಬಲ ಭಾರತದ ಕಮ್ಯುನಿಸ್ಟರಿಗಿಲ್ಲ, ಇದೂ ಕಮ್ಯುನಿಸಮ್ಮೇ ಎಂದು ಹೇಳಿ ಜನತೆಯ ಬಾಯಿ ಮುಚ್ಚಿಸಲು!

ಬಹುಶಃ ಕಮ್ಯುನಿಸ್ಟ್ ಚಳುವಳಿ ತನ್ನ ಅತ್ಯುತ್ತಮ ದಿನಗಳಲ್ಲಿ ಜನತೆಯ ಮನದಲ್ಲಿ ಬಿತ್ತಿದ್ದ ಜನಪರ ನಂಬಿಕೆಗಳೇ ಇಂದು ನಂದಿಗ್ರಾಮದಲ್ಲಿ ವಿಶೇಷ ಆರ್ಥಿಕ ವಲಯದ ವಿರುದ್ಧ ಜನ ಪ್ರತಿಭಟಿಸಲು ಪ್ರೇರಣೆ ನೀಡಿವೆ! ಜನ ಈಗ ಪಕ್ಷವನ್ನು ಮೀರಿ ಬೆಳೆದಿದ್ದಾರೆ.

ಅಂತಹ ಅನಿವಾರ್ಯತೆಯೂ ಈಗ ಉಂಟಾಗಿದೆ. ನೆಲದ ವಾಸನೆ ಬಲ್ಲ ಈ ಜನ, ತತ್ವಕ್ಕೂ ನೆಲದ ವಾಸನೆಗೂ ಸಂಬಂಧವೇ ಕಡಿದು ಹೋಗುತ್ತಿರುವ ಇಂದಿನ ಈ ರಾಜಕಾರಣದ ವಿರುದ್ಧ ಸಹಜವಾಗಿಯೇ ಸಿಡಿದೆದ್ದಿದ್ದಾರೆ. ಭಾರತದ ಹೃದಯವಿರುವುದು ಗ್ರಾಮಗಳಲ್ಲಿ ಎಂಬ ಗಾಂಧೀಜಿ ಅರಿವು ಈಗ ಈ ತೆರನಾಗಿ ಕಮ್ಯುನಿಸ್ಟ್ ನೆಲದಲ್ಲಿ ಸ್ಫೋಟಗೊಳ್ಳುತ್ತಿರುವುದು ಭಾರತದಲ್ಲಿ ಆರಂಭವಾಗಬೇಕಿರುವ ಹೊಸ ರಾಜಕಾರಣದ ದೃಷ್ಟಿಯಿಂದ ತುಂಬಾ ಅರ್ಥಪೂರ್ಣವೇ ಆಗಿದೆ. ಭೂಮಿಯಿಂದ ಹಣ ಬೆಳೆದುಕೊಳ್ಳುವುದನ್ನು ನೋಡಿ ಹೇಗೋ ಸಹಿಸಿಕೊಂಡಿದ್ದ ಭಾರತದ ಜನತೆ, ಈಗ ಭೂಮಿಯನ್ನೇ ಹಣವನ್ನಾಗಿ ಮಾಡಿಕೊಂಡು 'ತಾಯ್ತನ'ದ ಅದರ ಮೂಲ ಪಾವಿತ್ರ್ಯವನ್ನೇ ನಾಶ ಮಾಡಹೊರಟಿರುವ ತಾಯ್ಗಂಡತನದ ವಿರುದ್ಧ ಸೆಟೆದೆದ್ದು, ನಿರ್ಣಾಯಕ ಯುದ್ಧಕ್ಕೆ ಸಿದ್ಧವಾಗುತ್ತಿರುವಂತೆ ತೋರುತ್ತಿದೆ. ಹಾಗಾಗಿ ಇದು ಕೇವಲ ಒಂದು ಸರ್ಕಾರದ ವಿರುದ್ಧ ಅಥವಾ ಒಂದು ರಾಜಕೀಯ ನಿಲುವಿನ ವಿರುದ್ಧ ಆರಂಭವಾಗಿರುವ ಯುದ್ಧವಾಗಿರಲಾರದು. ಇದು ಜಾಗತೀಕರಣವೆಂಬ ಅಶ್ಲೀಲ ಮತ್ತು ಅಪವಿತ್ರ ಪ್ರಗತಿಪರತೆಯ ವಿರುದ್ಧದ ಯುದ್ಧದ ಸಾಂಕೇತಿಕ ಆರಂಭವೂ ಆಗಿರಬಹುದು.

ಏಕೆಂದರೆ, ಇಂದು ಬಂಗಾಳ ಮಾಡಿದ್ದನ್ನು ಭಾರತ ನಾಳೆ ಮಾಡುತ್ತದೆ ಎಂಬ ಹಳೆಯ ಮಾತೊಂದಿದೆ. ಬಂಗಾಳದ ಇಬ್ಭಾಗವೇ ಭಾರತ ರಾಷ್ಟ್ರೀಯ ಹೋರಾಟಕ್ಕೆ ದೊಡ್ಡ ಪ್ರೇರಣೆ ನೀಡಿತೆಂಬುದನ್ನು ನಾವು ಮರೆಯಬಾರದು. ಹಾಗೇ ಭಾಷಾ ರಾಷ್ಟ್ರೀಯತೆಗಳನ್ನೂ ಪುನರುಜ್ಜೀವನಗೊಳಿಸಿತು ಎಂಬುದನ್ನೂ. ಬಂಗಾಳ ಸದಾ ಇಂತಹ ಮೂಲ ಸತ್ಯಗಳ ಹುಡುಕಾಟದಲ್ಲಿರುವ ಮಣ್ಣು. ಅದೀಗ ಯಾವ ಮೂಲ ಸತ್ಯದ ಹುಡುಕಾಟದಲ್ಲಿರಬಹುದು? ಗುಜರಾತ್‌ನಲ್ಲಿ ಮಣ್ಣಾಗಿ ಹೋಗಿರುವ ಗಾಂಧಿ ಸತ್ಯ ಬಂಗಾಳದ ಮಣ್ಣಿನಲ್ಲಿ ಚಿಗುರೊಡೆಯಬಹುದೇ? ಕಾದು ನೋಡಬೇಕು.

ನವೆಂಬರ್ ೨೩, ೨೦೦೭

ಇದು ದೈವ ಭಕ್ತಿಯಲ್ಲ, ದೆವ್ವ ಭಕ್ತಿ !

ಜೆಡಿಎಸ್ ತನ್ನ ನಿರ್ಲಜ್ಜ ರಾಜಕಾರಣವನ್ನು ಮತ್ತೊಮ್ಮೆ ಪ್ರದರ್ಶಿಸಿ, ಕರ್ನಾಟಕದ ರಾಜಕಾರಣವನ್ನು ರಸಾತಳ ಪಾತಾಳಕ್ಕೆ ಮುಟ್ಟಿಸಿದೆ. ತನ್ನಷ್ಟೇ ಅಧಿಕಾರದಾಹಿಯಾದ ರಾಜ್ಯ ಬಿಜೆಪಿಯನ್ನು ಹೆದರಿಸಿ, ಬೆದರಿಸಿ, ಅದರಲ್ಲಿ ವಿಫಲವಾಗಿ; ಕೊನೆಗೆ ತಾನೇ ಶರಣಾದಂತೆ ನಟಿಸಿ ಅದನ್ನು ಬಲೆಗೆ ಬೀಳಿಸಿಕೊಂಡ ಜೆಡಿಎಸ್, ನಂತರ ತನ್ನ ಷರತ್ತುಗಳ ಮೂಲಕ ಕೊಲ್ಲಲು ವಿಫಲವಾಗಿ ಈಗ ಸ್ವತಃ ತಾನೇ ಕರ್ನಾಟಕದ ಸಾಮಾನ್ಯ ಜನರ ಕಣ್ಣಲ್ಲಿ ಹೀನಾಯವಾಗಿ ಕೊಲ್ಲಲ್ಪಟ್ಟಿದೆ!

ಮೊದಲು ಬೇಷರತ್ ಬೆಂಬಲ ವ್ಯಕ್ತಪಡಿಸಿ, ನಂತರ ಷರತ್ತುಗಳ ಮೂಲಕ ಯಡಿಯೂರಪ್ಪ ನೇತೃತ್ವದ ಸರ್ಕಾರವನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಳ್ಳಹೊರಟ ದೇವೇಗೌಡ– ಕುಮಾರಸ್ವಾಮಿ ಎಂಬ ನಟ ಭಯಂಕರ ಜೋಡಿಯ ಆಟವನ್ನು ಬಿಜೆಪಿಯ ರಾಷ್ಟ್ರೀಯ ನಾಯಕತ್ವ ತನ್ನ ಪ್ರಬುದ್ಧ ರಾಜಕೀಯ ನಿಲುವಿನ ಮೂಲಕ ವಿಫಲಗೊಳಿಸಿದೆ. ಹೀಗಾಗಿ ಮುಖ್ಯಮಂತ್ರಿ ಆಗುವ ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ತಮ್ಮ ಮೈಮೇಲಿನ ಒಂದೊಂದೇ ಬಟ್ಟೆಯನ್ನು ಕಳಚಿ ಹಾಕಿಕೊಳ್ಳತೊಡಗಿದ್ದ ಯಡಿಯೂರಪ್ಪನವರ ಪುಟಗೋಸಿಯಾದರೂ ಈಗ ಮೈಮೇಲೆ ಉಳಿದಂತಾಗಿದೆ.

ದೇವೇಗೌಡರ ಕುಟಿಲ ರಾಜಕಾರಣವನ್ನು ಬಲ್ಲ ಕರ್ನಾಟಕದ ಜನತೆ ಯಡಿಯೂರಪ್ಪನವರ ಸರ್ಕಾರ ಅನತಿ ಕಾಲದಲ್ಲೇ ಪತನಗೊಳ್ಳುವುದು ಖಚಿತವೆಂದು ಊಹಿಸಿದ್ದರಾದರೂ, ಅದು ಇಷ್ಟು ಕ್ಷಿಪ್ರವಾಗಿ ಪತನಗೊಳ್ಳುವುದೆಂದು ನಿರೀಕ್ಷಿಸಿರಲಿಲ್ಲ. ಏನೆ ಆಗಲಿ, ಇದರಿಂದ ಕರ್ನಾಟಕಕ್ಕೆ ಒಂದಂತೂ ಒಳ್ಳೆಯದಾಗಿದೆ. ಯಡಿಯೂರಪ್ಪ ಹಾಗೂ ಕುಮಾರಸ್ವಾಮಿ ಅವರ ರಾಜಕಾರಣದ ಬಗ್ಗೆ ಇದ್ದ ಭ್ರಮೆಯೆಲ್ಲ ಕಳಚಿಹೋಗಿದೆ. ಈ ಹಿನ್ನೆಲೆಯಲ್ಲಿ ಯಡಿಯೂರಪ್ಪನವರ ಸರ್ಕಾರ ಪತನವಾಗುವ ಮುನ್ನ ಬರೆದ ಈ ಅಂಕಣ ಅಷ್ಟಾಗಿ ಬದಲಾವಣೆಯನ್ನು ಬೇಡುವುದಿಲ್ಲ ಎಂದು ನಾನು ಭಾವಿಸಿದ್ದೇನೆ.

* * *

ಜೆಡಿಎಸ್ ಎಂಬ ಪಕ್ಷ ಸರ್ವನಾಶವಾಗಲಿ ಎಂದು ಪ್ರಾರ್ಥಿಸಿ ಎಂದು ತಮ್ಮ ಬೆಂಬಲಿಗರಿಗೆ ಕರೆ ನೀಡಿದ್ದ ಹಾಗೂ ಸೂರ್ಯ ಚಂದ್ರರಿರುವವರೆಗೂ ದೇವೇಗೌಡರ ಕುಟುಂಬದ ಮನೆ ಹೊಸ್ತಿಲು ತುಳಿಯುವುದಿಲ್ಲ ಎಂದು ವೀರ ಪ್ರತಿಜ್ಞೆಮಾಡಿದ್ದ ಬಿ.ಎಸ್. ಯಡಿಯೂರಪ್ಪ ಎಂಬ ಕುಂಕುಮಧಾರಿ ಧರ್ಮ ದುರಂಧರರು, ಈ ಮಾತುಗಳನ್ನಾಡಿದ ಹದಿನೈದೇ ದಿನಗಳ ಅಂತರದಲ್ಲಿ ಮರಣಾನಂದದಲ್ಲಿ ಅದೇ ಪಕ್ಷದ ನಾಯಕವರೇಣ್ಯರ ಕೈಕುಲುಕುತ್ತಾ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ್ದಾರೆ! ಬಿಜೆಪಿ ಎಂಬುದು ಒಂದು ಬೆಂಕಿ ಹಚ್ಚುವ ಪಕ್ಷವೆಂದೂ, ಅದು ಕರ್ನಾಟಕವನ್ನು ಗುಜರಾತ್ ಮಾಡುವ ಪ್ರಯೋಗಕ್ಕೆ ಎಲ್ಲ ಸಿದ್ಧತೆ ಮಾಡಿಕೊಂಡಿದೆಯೆಂದೂ ಮತ್ತು ಅದರ ನಾಯಕ ಯಡಿಯೂರಪ್ಪ ರಾಜ್ಯ ಕಂಡ ಅತ್ಯಂತ ಕೆಟ್ಟ ಹಣಕಾಸು ಮಂತ್ರಿಯೆಂದೂ; ಹಾಗಾಗಿ ಅದರೊಂದಿಗೆ ಮೈತ್ರಿ ಮುರಿದುಕೊಳ್ಳುವ ಮೂಲಕ ತಾನು ಪಾಪ ಪರಿಹಾರ ಮಾಡಿಕೊಳ್ಳುತ್ತಿರುವುದಾಗಿ ಹೇಳಿಕೊಂಡಿದ್ದ ಜೆಡಿಎಸ್, ಈಗ ಅದೇ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಬೇಷರತ್ ಬೆಂಬಲ ವ್ಯಕ್ತಪಡಿಸಿದೆ! ನಂತರದಲ್ಲಿ ದೇವೇಗೌಡರು ಎಂದಿನಂತೆ, ಹತ್ತೋ ಹನ್ನೆರಡೋ ಅಂಶಗಳ ಕ್ಯಾತೆ ತೆಗೆದಿರುವುದು ಬೇರೆ ವಿಷಯ.

ಹಿಂದಿನ ಮೈತ್ರಿ ಮುರಿದು ಬಿದ್ದ ಒಂದೆರಡು ದಿನಗಳಲ್ಲೇ ಕುಮಾರಸ್ವಾಮಿ ಸಣ್ಣಗೆ ಕಣ್ಣು ಹೊಡೆದ ತಕ್ಷಣವೇ, ಅಧಿಕಾರ ಕಳೆದುಕೊಂಡಿದ್ದರ ದುಃಖವನ್ನು ತನ್ನ ಜನಕ್ಕೆ ಎದೆ ಬಡಿದುಕೊಂಡು ಹೇಳಿಕೊಳ್ಳುವ ಧರ್ಮಯಾತ್ರೆ ಎಂಬ ಕರ್ಮಯಾತ್ರೆಯಲ್ಲಿದ್ದ ಯಡಿಯೂರಪ್ಪ; ತುಮಕೂರಿನಲ್ಲಿ ದೇವೇಗೌಡರ ಕುಟುಂಬಕ್ಕೆ ಹಿಡಿಶಾಪ ಹಾಕುತ್ತಿದ್ದುದನ್ನು ಅರ್ಧಕ್ಕೇ ನಿಲ್ಲಿಸಿ ಓಡಿ ಬಂದಾಗಲೇ, ದೇವೇಗೌಡರ ಪಕ್ಷದ ನಾಯಕರನೇಕರಿಗೆ ಹಾಗೂ ಅದಕ್ಕಿಂತ ಮುಖ್ಯವಾಗಿ ರಾಜ್ಯದ ಜನತೆಗೆ ಯಡಿಯೂರಪ್ಪನವರ ಅಧಿಕಾರದ ಹಪಾಹಪಿ ಎಷ್ಟು ತೀವ್ರವಾಗಿದೆ ಎಂಬುದರ ಮನವರಿಕೆಯಾಗಿತ್ತು. ಹಾಗಾಗಿಯೇ, ಈಗ ಕುಮಾರಸ್ವಾಮಿಯವರಿಗೆ ತಮ್ಮ ವಚನ ಭ್ರಷ್ಟತೆಯನ್ನು ತಮ್ಮೆಲ್ಲ ಮಾತಿನ ಕಸರತ್ತುಗಳ ಹೊರತಾಗಿಯೂ ಜನ ಮನ್ನಿಸಿಲ್ಲ ಹಾಗೂ ಅಧಿಕಾರವಿಲ್ಲದೆ ತಮ್ಮ ಪಕ್ಷದ ಶಾಸಕರು ಅವರೆಲ್ಲ ವೈಯುಕ್ತಿಕ ನಿಷ್ಠೆ ಪ್ರದರ್ಶನದ ಹೊರತಾಗಿಯೂ ತಮ್ಮ ಬಳಿ ಉಳಿಯಲಾರರು ಎಂಬುದು ಅರಿವಾಗಿದೆ. ಹಾಗಾಗಿಯೇ, ತಾವು ಈವರೆಗೆ ಸಾರ್ವಜನಿಕರೆದುರಿಗೆ ಮಾಡಿದ ವಾಂತಿಯನ್ನು ತಾವೇ ಬಾಚಿ ತಿಂದುಕೊಂಡಂತೆ ಯಡಿಯೂರಪ್ಪನವರಿಗೆ ಮರುಮೈತ್ರಿಯ ಸಂದೇಶ ಕಳಿಸಿದ್ದಾರೆ. ಒಡನೆಯೇ ಯಡಿಯೂರಪ್ಪನವರೂ ಅಷ್ಟೇ ನಿರ್ಲಜ್ಜೆಯಿಂದ ಹಾಗೂ ನಿಸ್ಸಂಕೋಚವಾಗಿ ತಮ್ಮ ವಾಂತಿಯನ್ನೆಲ್ಲಾ ತಾವೇ ತಿರುಗಿ ಬಾಚಿ ತಿಂದುಕೊಂಡು, ಅದೇ ಬಾಯಲ್ಲಿ ದೇವರ ಹೆಸರಿನಲ್ಲಿ ಮತ್ತು ರಾಜ್ಯದ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಇವರು ನಂಬಿಕೊಂಡಿರುವ ದೇವರ ಬಗ್ಗೆ ಜನತೆಯು ಅನುಕಂಪವಿದೆ. ಇನ್ನು ಜೆಡಿಎಸ್‌ನವರೋ, ಬಾಯೊರಿಸಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡು ಪ್ರಮಾಣವಚನಕ್ಕೆ ಹಾಜರಾಗುವ ನಿರೀಕ್ಷೆ ಇದೆ!

ಯಡಿಯೂರಪ್ಪ, ಪ್ರಮಾಣವಚನಕ್ಕೆ ಮುಂಚೆ, ಕೈಗೆ ಬಂದ ತುತ್ತು ಬಾಯಿಗೆಲ್ಲಿ ಬರುವುದಿಲ್ಲವೋ ಎಂಬ ಆತಂಕದಿಂದ ರಾಜ್ಯ– ರಾಷ್ಟ್ರದ ಕಂಡ ಕಂಡ ದೇವರುಗಳಿಗೆಲ್ಲ ಪೂಜೆ– ಹರಕೆ ಸಲ್ಲಿಸುತ್ತಾ, ಕಂಡ ಕಂಡ ಮಠಾಧೀಶರುಗಳ ಕಾಲಿಗೆ ಬೀಳುತ್ತಾ; ಪುರೋಹಿತರು ಹೇಳಿದ ಯಜ್ಞ– ಯಾಗಾದಿಗಳೆನ್ನೆಲ್ಲ ಮಾಡುತ್ತಾ, ಜನತೆ ತಾವು ಯಾವ ಕಾಲದಲ್ಲಿ ಬದುಕಿದ್ದೇವೆ ಎಂದು ಆಶ್ಚರ್ಯಪಡುವ ರೀತಿಯಲ್ಲಿ ಮತ್ತು ಮಟ್ಟದಲ್ಲಿ ತಮ್ಮ ಪರಮ ಮೌಢ್ಯವನ್ನೂ, ಆತ್ಮವಿಶ್ವಾಸದ ಅತೀವ ಕೊರತೆಯನ್ನೂ ಪ್ರದರ್ಶಿಸಿದ್ದಾರೆ. ಈ ಮಧ್ಯೆ ತಮ್ಮ ಹೆಸರನ್ನೂ ಬದಲಾಯಿಸಿಕೊಂಡಿದ್ದಾರೆ! ಇಷ್ಟು ಸಾಲದೆಂಬಂತೆ ಪ್ರಮಾಣವಚನದ ಹಿಂದಿನ ದಿನ ರಾಜ ಮಹಾರಾಜರ ಪಟ್ಟಾಭಿಷೇಕದ ಶೈಲಿಯಲ್ಲಿ ಸೂರ್ಯನಾರಾಯಣ ಯಾಗವನ್ನು ಏರ್ಪಡಿಸಿಕೊಂಡಿದ್ದಾರೆ. ಪ್ರಮಾಣವಚನ ಸ್ವೀಕಾರದ ನಂತರ ಮುಖ್ಯಮಂತ್ರಿ ಅಧಿಕೃತ ಕಛೇರಿಯಲ್ಲಿ ಮತ್ತೊಂದು ಯಾಗ ಬೇರೆ ಮಾಡಿಸಿಕೊಂಡಿದ್ದಾರೆ! ರಾಮರಾಜ್ಯ ಸ್ಥಾಪನೆಯೆಂದರೆ ರಾಮನ ಕಾಲಕ್ಕೆ ಹಿಂದಿರುಗುವುದು ಎಂದು ಇವರು ತಿಳಿದಿರುವಂತಿದೆ! ಇಂತಹ ಬುದ್ಧಿಗೆಟ್ಟವರ ಕೈಗೆ ಸಿಕ್ಕಿರುವ ಆಡಳಿತ, ಕರ್ನಾಟಕವನ್ನು ಎಲ್ಲಿಗೆ ಕೊಂಡೊಯ್ಯುವುದೋ ಕಾದುನೋಡಬೇಕು– ಆಡಳಿತ ಮಾಡಲು ದೇವೇಗೌಡ ಮತ್ತು ಅವರ ಮಕ್ಕಳು ಬಿಟ್ಟರೆ!

ಏಕೆಂದರೆ, ಯಡಿಯೂರಪ್ಪ ಮಾತಾಡುವಾಗಲೆಲ್ಲ ಐದೂವರೆ ಕೋಟಿ ಕನ್ನಡಿಗರನ್ನು ಉಲ್ಲೇಖಿಸುವರಾದರೂ, ಇವರಿಗೆ ನಿಜವಾಗಿ ನಂಬಿಕೆ ಇರುವುದು ಈ ಐದೂವರೆ ಕೋಟಿ ಜನತೆಯ ಮೇಲಲ್ಲ; ತಮ್ಮ ಮೂಢ ಮನಸ್ಸು ಭಯ– ಆತಂಕಗಳಲ್ಲಿ ಹಾಗೂ ಅಧಿಕಾರದ ಹಪಾಹಪಿಯಲ್ಲಿ ವಿಭ್ರಾಂತವಾಗಿ ಸೃಷ್ಟಿಸಿಕೊಂಡಿರುವ ಐದೂವರೆ ಕೋಟಿ ದೇವತೆಗಳಲ್ಲಿ ಎಂಬುದನ್ನು ಈ ಮೂಲಕ ಸಾಬೀತುಪಡಿಸಿದ್ದಾರೆ. ಹಾಗಾಗಿಯೇ, ಜೆಡಿಎಸ್‌ನವರು ಇವರ ಏಕಪಕ್ಷೀಯ ಅಧಿಕಾರ ಚಲಾವಣೆ ಬಗ್ಗೆ ಒಂದು ಗುಟುರು ಹಾಕಿದೊಡನೆ, ಅವರು ಮಂತ್ರಿ ಮಂಡಲ ಸೇರುವವರೆಗೂ ತಾವು ಮಠ– ಮಂದಿರಗಳಿಗೆ ಭೇಟಿ ಕೊಡುತ್ತಾ ಕಾಲ ಹಾಕುವೆನೆಂಬ ಭಂಡ ಹೇಳಿಕೆಯನ್ನು ಸಾರ್ವಜನಿಕವಾಗಿ ನೀಡುವ ಸ್ಥಿತಿಯನ್ನು ಈಗಾಗಲೇ ತಲುಪಿದ್ದಾರೆ! ಜನತೆ ಇದಾವುದಕ್ಕೂ ಪ್ರತಿಕ್ರಿಯಿಸಲಾರದಷ್ಟು, ತಮ್ಮ 'ಆಟ'ಗಳನ್ನು ನೋಡಿ ಕಂಗೆಟ್ಟುಹೋಗಿದ್ದಾರೆ ಎಂಬುದೂ ಇವರಿಗೆ ಗೊತ್ತಾಗಿ ಹೋದಂತಿದೆ. ಹೀಗಾಗಿಯೇ, ಕರ್ನಾಟಕದ ರಾಜಕಾರಣ ಇಷ್ಟು ತಳಮಟ್ಟವನ್ನು ಹಿಂದೆಂದೂ ಮುಟ್ಟಿರಲಿಲ್ಲವೆಂದು ರಾಷ್ಟ್ರೀಯ ಮಾಧ್ಯಮಗಳೂ ಬರೆಯುವಂತಾಗಿದೆ. ಇಲ್ಲಿ ಯಾರೇ ಆಡುವ ಮಾತಿಗೆ ಯಾವ ಅರ್ಥವೂ ಇಲ್ಲದ, ಬೆಲೆಯೂ ಇಲ್ಲದ, ನಿಯಂತ್ರಣವೂ ಇಲ್ಲದ; ಅಪ್ಪಟ ಅಪ್ರಾಮಾಣಿಕತೆಯೇ ಪ್ರಜಾಪ್ರಭುತ್ವದ ಹೆಗ್ಗುರುತಾಗಿರುವ ದುರಂತ ಸ್ಥಿತಿಯಿದು.

ಇದಕ್ಕೆಲ್ಲ ಈ ಎರಡು ಪಕ್ಷಗಳನ್ನಷ್ಟೇ ದೂಷಿಸುವಂತಿಲ್ಲ. ಈ ಸಂದರ್ಭದಲ್ಲಿನ ಕಾಂಗ್ರೆಸ್ ವರ್ತನೆ ಪ್ರಜಾಪ್ರಭುತ್ವಕ್ಕೆ ಘನತೆ ತರುವಂತೇನೂ ಇರಲಿಲ್ಲ. ಅಮಾನತ್ತಿನಲ್ಲಿಡಲ್ಪಟ್ಟಿದ್ದ ವಿಧಾನಸಭೆಯಲ್ಲಿ ತನ್ನ ಪರವಾಗಿ ಬಹುಮತ ಸೃಷ್ಟಿಸಿಕೊಳ್ಳಲು ಅದು ಆಡಿದ ತೆರೆಮರೆಯ

ಆಟವೇ ಈ ಎಲ್ಲ ಹೊಲಸು ರಾಜಕಾರಣಕ್ಕೆ ಕಾರಣವಾದದ್ದು. ಈ ದಿನಗಳಲ್ಲಿ ಮಹಾರಾಷ್ಟ್ರದ ರಾಜ್ಯಪಾಲರು ಬೆಂಗಳೂರಿಗೆ ಬಂದು ಮೊಕ್ಕಾಂ ಮಾಡಿದ್ದು ವಿಶ್ರಾಂತಿಗೆಂದು ಯಾರಾದರೂ ಹೇಳಿದರೆ, ಅದನ್ನು ನಂಬುವವರು ಮಹಾ ಮೂರ್ಖರೇ ಆಗಿರಬೇಕು. ಆ ಮೂರ್ಖರಲ್ಲಿ ದೇವೇಗೌಡರಂತೂ ಸೇರಿರಲಾರರು. ಈ ಸರಳ ತಿಳುವಳಿಕೆಯೂ ಇಲ್ಲದಂತೆ, ಪ್ರಕಾಶರ ಮುಖ್ಯಮಂತ್ರಿತ್ವದ ಕನಸನ್ನು ಭಂಗಗೊಳಿಸಿ ತನ್ನ ಸರ್ಕಾರ ರಚಿಸಲು ಹುನ್ನಾರ ನಡೆಸಿದ್ದ ಕಾಂಗ್ರೆಸ್, ದೇವೇಗೌಡರು ಹಾಗೂ ಅವರ ಮಕ್ಕಳು ಅಷ್ಟು ವೇಗದೊಂದಿಗೆ ನಿರ್ಲಜ್ಜ ರಾಜಕಾರಣಕ್ಕೆ ಮುಂದಾಗುವರೆಂದು ಊಹಿಸಲಾಗದೇ ಹೋದದ್ದು ಸಹಜವೇ ಆಗಿದೆ. ಸಿದ್ಧರಾಮಯ್ಯ ಕಾಂಗ್ರೆಸ್ ಒಳಹೊಕ್ಕ ಮೇಲೂ, ದೇವೇಗೌಡ ಕೇಂದ್ರಿತ ರಾಜಕಾರಣವನ್ನೇ ಮಾಡುತ್ತಿರುವುದು, ಇದಕ್ಕಾಗಿ ಡಿ.ಕೆ. ಶಿವಕುಮಾರರಂತಹವರ ಜೊತೆಗೆ ಸೇರಬೇಕಾಗಿ ಬಂದಿರುವುದು ಅವರ ರಾಜಕೀಯ ಜೀವನವನ್ನು ಕುರಿತ ಎಲ್ಲ ವಿಶ್ವಾಸವೂ ಕದಡಿ ಹೋಗುವಂತೆ ಮಾಡಿದೆ. ಇದೇ ಇಂದು ರಾಜ್ಯ ರಾಜಕಾರಣ ಈ ಜಿಗುಪ್ಸೆಕರ ಮುಟ್ಟಲು ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಹೋದ ಮೇಲೆ ಕರ್ನಾಟಕ ಅದೇ ಹಳೆಯ ಎಣ್ಣೆ ಮುಖಗಳನ್ನು ನೋಡಲು ನಿರಾಕರಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಕೃಷ್ಣಭೈರೇಗೌಡರ ನೇಮಕವೊಂದೇ ಸದ್ಯಕ್ಕೆ ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಆಶಾದಾಯಕ ಸಂಗತಿಯಾಗಿರುವಂತೆ ಕಾಣುತ್ತಿದೆ.

ಇತ್ತ ಎಂ.ಪಿ. ಪ್ರಕಾಶರನ್ನೇ ನೋಡಿ. ತಮ್ಮೆಲ್ಲರ ಒತ್ತಡ ಹಾಗೂ ಅಪಪ್ರಚಾರಗಳಿಂದ ಬಿಜೆಪಿ ಬಗ್ಗಿ, ಮುಖ್ಯಮಂತ್ರಿತ್ವವನ್ನು ಜೆಡಿಎಸ್ ಪಕ್ಷವೇ ಮುಂದುವರೆಸಿಕೊಂಡು ಹೋಗಲು ಒಪ್ಪಬಹುದೇನೋ ಎನ್ನುವ ಆಸೆ ಇರುವವರೆಗೂ ದೇವೇಗೌಡರ ಹಾಗೂ ಅವರ ಮಕ್ಕಳ ಗಾಯನಕ್ಕೆ ಪಕ್ಕವಾದ್ಯ ಒದಗಿಸುವುದರಲ್ಲೇ ಇವರು ತೃಪ್ತರಾಗಿದ್ದರು. ಆ ಆಸೆ ಇಂಗಿದೊಡನೆ ಮುಖ್ಯಮಂತ್ರಿತ್ವದ ಕನಸನ್ನೂ, ಧೈರ್ಯವನ್ನೂ ತಮ್ಮ ರಾಜಕೀಯ ಜೀವನದಲ್ಲಿ ಮೊದಲ ಬಾರಿಗೆ ಆವಾಹಿಸಿಕೊಂಡು ಕಾಂಗ್ರೆಸ್ಸಿನೊಡನೆ ಸಂಧಾನ ಆರಂಭಿಸಿದರು. ಈ ಪ್ರಯತ್ನದ ಅರ್ಧದಲ್ಲಿದ್ದಾಗ, ದೇವೇಗೌಡ ಹಾಗೂ ಅವರ ಮಕ್ಕಳಿಗೆ ಆತಂಕವಾಗಿ ತಲೆ ಮೇಲೆ ಸರಿಯಾಗಿ ಮೊಟಕಿದೊಡನೆ, ಅವಮಾನಿತರಾದಂತೆ; ಮರುಮೈತ್ರಿ ಕಾನೂನುಬಾಹಿರ, ಅನೈತಿಕ ಎಂದು ಸಾರಿದರು. ರಾಜ್ಯಪಾಲರಿಗೆ ಈ ಸಂಬಂಧ ಆಕ್ಷೇಪಣಾ ಪತ್ರವನ್ನೂ ನೀಡಿದರು. ಮಾಧ್ಯಮ ಮಿತ್ರರು ಕಟ್ಟತೊಡಗಿದ್ದ 'ಕಥೆ'ಗೆ ತಕ್ಕಂತೆ ಮಾತನಾಡುತ್ತಾ, ಅವರಿಂದ ಸಜ್ಜನ, ಮರ್ಯಾದಸ್ಥ, ವಿಚಾರಶೀಲ ಎಂದೂ ಕರೆಸಿಕೊಂಡರು. ಈಗ ನೋಡಿದರೆ ಇವರು ಮರು ಮೈತ್ರಿಯ ಸರ್ಕಾರ ರಚನೆಯಲ್ಲಿ ಜಾತ್ಯತೀತ ಜನತಾ ದಳದ ಶಾಸಕಾಂಗ ಪಕ್ಷದ ಹಿರಿಯ ಮಾರ್ಗದರ್ಶಕರಾಗಿ ಕಂಗೊಳಿಸುತ್ತಿದ್ದಾರೆ! ಶ್ರೀಮಾನ್ ಪ್ರಕಾಶ್ ಉಪಮುಖ್ಯಮಂತ್ರಿಯಾಗಿಯೋ, ಗೃಹ ಅಥವಾ ಹಣಕಾಸು ಮಂತ್ರಿಯಾಗಿಯೋ ಅಧಿಕಾರವನ್ನೂ ಸ್ವೀಕರಿಸಿದರೂ ಆಶ್ಚರ್ಯವೇನಿಲ್ಲ... ದೇವೇಗೌಡ, ಕುಮಾರಸ್ವಾಮಿ ಮತ್ತು

ಸ್ವತಃ ಯಡಿಯೂರಪ್ಪ ಕೇಜಿಗಟ್ಟಲೆ ಬೆಣ್ಣೆ ಹಚ್ಚಿ ಮಾಡಲಾಗದ್ದನ್ನು, ಕೊಳದ ಮಠದ ಸ್ವಾಮಿ ಏನನ್ನು ಬಳಸಿ ಈ ಪರಿವರ್ತನೆಯನ್ನು ಸಾಧ್ಯ ಮಾಡಿದ್ದಾರೋ ತಿಳಿಯದು!

ಜಾತಿವಾದವೇ ಅಸಹ್ಯ. ಸಮಾಜವಾದಿಗಳೆನಿಸಿಕೊಂಡವರ ಜಾತಿವಾದವಂತೂ ಇನ್ನೂ ಹೆಚ್ಚು ಅಸಹ್ಯ. ಆದರೆ ಈ ಜಾತಿವಾದವೂ, ಅಧಿಕಾರದ ಮೋಹಿನಿ ಹತ್ತಿರ ಬಂದಂತೆ ನೈತಿಕತೆ ಹಾಗೂ ಕಾನೂನು ಪ್ರಜ್ಞೆಗಳ ಜೊತೆಗೆ ಕರಗಿ ಹೋಗುವಂತಹುದು ಎಂಬುದೂ ಈಗ ಸಾಬೀತಾಗಿದೆ. ಸಮಾಜವಾದಿ ಪ್ರಕಾಶರ 'ನೈತಿಕತೆ'ಗೆ ಬರೇ ಲಿಂಗಾಯ್ತ ಶಾಸಕರಿಂದಲೇ ದೊರೆತ ಬೆಂಬಲವೂ ಕುಮಾರಸ್ವಾಮಿಯವರ ಸ್ಥಿತಿ ಸುಧಾರಿಸುತ್ತಿದ್ದಂತೆ ಕರಗಿ ನೀರಾಗಿ ಹೋಗುತ್ತಿದ್ದಂತೆ, ಆ ನೈತಿಕತೆಯೂ ಕರಗಿ ನೀರಾಗಿ ಹೋದಂತಿದೆ! ಇದೆಲ್ಲದರ ಮಧ್ಯೆ, ಇದಾವುದರ ಪರಿವೆಯೂ ಇಲ್ಲದಂತೆ ಮಹಿಮಾ ಪಟೇಲ್ ಎಂಬ ಕಲ್ಕಿ ಗಿರಾಕಿ ಸ್ವತಃ ದೇವರಂತೆ ಮಾತನಾಡುತ್ತಾ, ತಲಕಾವೇರಿಗೆ ಹೋಗಿ ತಮ್ಮದೊಂದು ಪಕ್ಷವನ್ನು ಉದ್ಘಾಟಿಸಿಕೊಂಡಿರುವುದನ್ನು ಸದ್ಯದ ಪರಿಸ್ಥಿತಿಯಲ್ಲಿ ಏನೆಂದು ಕರೆಯಬೇಕೋ ತಿಳಿಯದಾಗಿದೆ!

ದೊಡ್ಡ ನಾಟಕದ ಭಾಗವಾಗಿ ನಡೆಯುತ್ತಿರುವ ಈ ಎಲ್ಲ ಸಣ್ಣ ನಾಟಕಗಳನ್ನೂ, ದೊಡ್ಡ ನಾಟಕವನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ನೋಡುವುದು ಒಳ್ಳೆಯದು. ಅನಂತಕುಮಾರ್ ಸೋನಿಯಾ ಗಾಂಧಿಯವರನ್ನು ನಕಲಿ ಗಾಂಧಿ ಎಂದು ಕರೆದುದಕ್ಕೆ ಡಿ.ಕೆ. ಶಿವಕುಮಾರ್, ಇದ್ದುದನ್ನು ಇದ್ದಂತೆ ಹೇಳಿದರೆ ಎದ್ದು ಬಂದು ಎದೆಗೊದ್ದನಂತೆ ಎಂಬಂತೆ, ಬೀದಿಯಲ್ಲೇ ಅನಂತಕುಮಾರರ ಬಟ್ಟೆ ಬಿಚ್ಚುವಂತೆ ಕರೆ ನೀಡಿದ್ದಾರೆ. ಆ ಮೂಲಕ ಅವರು ಅನಂತಕುಮಾರರ ಮಾತನ್ನು ಪರೋಕ್ಷವಾಗಿ ಸಮರ್ಥಿಸಿದ್ದಾರೆ! ಏಕೆಂದರೆ, ನಕಲಿ ಗಾಂಧಿಯ ಭಕ್ತರಾದವರು ಮಾತ್ರ ಇಂತಹ ಕರೆ ಕೊಡಬಲ್ಲರು. ಸೋನಿಯಾ ಗಾಂಧಿ ನಕಲಿ ಗಾಂಧಿಯಲ್ಲದಿರಬಹುದು, ಅಸಲಿ ಗಾಂಧಿಯಂತೂ ಅಲ್ಲ ಅಲ್ಲವೇ? ಬಹುಶಃ ಡಿಕೆಶಿ ಅವರಿಗೆ ಸೋನಿಯಾ ಗಾಂಧಿಯವರ ಹೆಸರಿನಲ್ಲಿರುವ ಗಾಂಧಿ ಅವರ ಪತಿ ರಾಜೀವ್ ಗಾಂಧಿಯವರ ಅಪ್ಪ ಫಿರೋಜ್ ಗಾಂಧಿಯಿಂದ ಬಂದುದು ಎಂಬುದು ತಿಳಿದಿರಲಾರದು. ಇಂದಿರಾ ಪ್ರಿಯದರ್ಶಿನಿ, ಇಂದಿರಾ ಗಾಂಧಿಯಾದದ್ದೂ ಹಾಗೇ ಎಂಬುದೂ!

ನಿಜವಾದ ಗಾಂಧಿ ಮಾರ್ಗವನ್ನು ಎಂದೋ ಬಿಟ್ಟ ಕಾಂಗ್ರೆಸ್ಸಿಗರಿಗೆ, ತಮ್ಮ ಸದ್ಯದ ನಾಯಕರ ಹೆಸರಿನಲ್ಲಿರುವ ಗಾಂಧಿಯನ್ನಾದರೂ ರಕ್ಷಿಸಿಕೊಳ್ಳುವ ತವಕ ಸಹಜವಾದುದೇ! ಈ ಮಟ್ಟದ ಗಾಂಧಿವಾದದಿಂದಾಗಿಯೇ ಇಂದಿನ ಕಾಂಗ್ರೆಸ್ಸಿಗರು, ಬಿಜೆಪಿಯವರು ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ಮಾಡಿ ಅದರ ಪಾವಿತ್ರ್ಯ ಹಾಳುಮಾಡಿದರೆಂದು ಅದರ ಶುದ್ಧೀಕರಣಕ್ಕೆ ಮುಂದಾಗುವ ಮೂರ್ಖತನ ಪ್ರದರ್ಶಿಸಿರುವುದು. ಬಿಜೆಪಿಯವರೂ ಗಾಂಧಿಯನ್ನು ಒಪ್ಪಿಕೊಳ್ಳಲಾರಂಭಿಸಿದ್ದರೆ, ಅದನ್ನು ಸ್ವಾಗತಿಸಿ ಕಾದು ನೋಡುವ ಬದಲು, ಪ್ರತಿಮೆ ತೊಳೆದು ಶುದ್ಧೀಕರಣಕ್ಕೆ ಕೈಹಾಕಿದುದು ಕಾಂಗ್ರೆಸ್ಸಿನ ಬಿಜೇಪೀಕರಣವೇ ಸರಿ! ನಾವು ಒಬ್ಬರನ್ನು ದ್ವೇಷಿಸುತ್ತಾ, ದ್ವೇಷಿಸುತ್ತಾ ಅವರಂತೆಯೇ ಆಗಿಬಿಡುತ್ತೇವಂತೆ. ಯೋಚನೆ

ಮಾಡುವುದನ್ನೇ ನಿಲ್ಲಿಸಿರುವಂತೆ ತೋರುವ ಕಾಂಗ್ರೆಸ್ ಇಂತಹ ಅಪಾಯವನ್ನು ಎದುರಿಸುತ್ತಿದೆ. ಕಾಂಗ್ರೆಸ್‌ನಲ್ಲಿ ಇಂತಹ ದುರ್ವರ್ತನೆಗಳ ವಿರುದ್ಧ ಎಚ್ಚರಿಕೆ ಕೊಡುವ ನೈತಿಕ ಧೈರ್ಯ ಉಳಿಸಿಕೊಂಡಿರುವವರು ಯಾರೂ ಇಲ್ಲದಿರುವುದೇ, ಆ ಪಕ್ಷದ ಇಂದಿನ ದುಃಸ್ಥಿತಿಗೆ ಕಾರಣವಾಗಿದ್ದರಲ್ಲಿ ಆಶ್ಚರ್ಯವಿಲ್ಲ.

ಇನ್ನು ಮಂತ್ರಿ ಮಂಡಲದ ಕಸರತ್ತು ಆರಂಭವಾಗುತ್ತಿದ್ದಂತೆ, ಜೆಡಿಎಸ್‌ನ ಶಾಸಕರು ತಮ್ಮ ವರಿಷ್ಠ ನಾಯಕರಲ್ಲಿ ಮಂಡಿಸಿರುವ ಬೇಡಿಕೆ ನೋಡಿ: ಈ ಹಿಂದೆ ಮಂತ್ರಿಗಳಾದವರನ್ನು ಬಿಟ್ಟು ಈಗ ಹೊಸಬರಿಗೆ ಅವಕಾಶ ಕೊಡಬೇಕಂತೆ. ಈ ಪಕ್ಷದ ಯೋಗ್ಯತೆಗೆ ತಕ್ಕಂತೆಯೇ ಇದೆ ಈ ಬೇಡಿಕೆ... ಇವರ ಪ್ರಕಾರ ಅಧಿಕಾರವಿರುವುದೇ ದೇವೇಗೌಡರು ಮತ್ತು ಅವರ ಮಕ್ಕಳಿಗೆ ಒಂದು ಪಾಲನ್ನು ಮೀಸಲಿಟ್ಟು, ಉಳಿದುದನ್ನು ಎಲ್ಲರೂ ಸಮನಾಗಿ ಹಂಚಿಕೊಂಡು ತಿನ್ನಲು! ರಾಜಕೀಯ ಮುನ್ನೋಟ, ಜಾಣ್ಮೆ, ದಕ್ಷತೆ, ಅನುಭವ ಯಾವುದೂ ಲೆಕ್ಕಕ್ಕೆ ಬೇಡ. ಏಕೆಂದರೆ, ಇವರ ಪ್ರಕಾರ ಅಧಿಕಾರವಿರುವುದೇ ಅದರಿಂದ ದೊರಕುವ 'ಲಾಭ'ಗಳನ್ನು ತಾವು ಮತ್ತು ತಮ್ಮವರು ತಿಂದು ಅನುಭವಿಸಲು. ಹಾಗೆ ತಿಂದು ಅನುಭವಿಸುವಾಗ ಬಾಯಿಂದ ಉದುರಿ ಬಿದ್ದುದು ಜನ ಸೇವೆಗೆ! ಇಲ್ಲದಿದ್ದರೆ ಇವರೆಲ್ಲ ಹೀಗೆ ದಕ್ಷತೆ, ಮುನ್ನೋಟ, ಅನುಭವಗಳ ಅಗತ್ಯದ ಪರಿವೆಯೇ ಇಲ್ಲದೆ; ಅವರು ಸಾಕಷ್ಟು ತಿಂದಿದ್ದಾರೆ ನಮಗೂ ಅವಕಾಶ ಕೊಡಿ ಎಂಬಂತೆ, ಹೀಗೆ ಸಾರಾ ಸಗಟಾದ ಬೇಡಿಕೆ ಇಡುತ್ತಿರಲಿಲ್ಲ. ಅಥವಾ ಇಂತಹ ಅಪದ್ಧಕ್ಕೆ ಕಾರಣವಾಗಿರುವುದು, ಚೆನ್ನಿಗಪ್ಪನೇ ಮಂತ್ರಿಯಾಗುವುದಾದರೆ, ನಾವ್ಯಾಕೆ ಆಗಬಾರದು ಎಂಬ ತರ್ಕವೋ?

ದೇವೇಗೌಡರೇ ಉತ್ತರಿಸಬೇಕು!

ನವೆಂಬರ್ ೩೦, ೨೦೦೭

ಪ್ರಗತಿಯ ಇನ್ನೊಂದು ಹೆಸರು ಹಿಂಸೆ ?

ಉತ್ತರ ಪ್ರದೇಶದಲ್ಲಿ ಮತ್ತೆ ಹಿಂಸೆ ತಾಂಡವವಾಡಿದೆ. ಈ ಬಾರಿ ರಾಜ್ಯದ ಮೂರು ಮುಖ್ಯ ಕೇಂದ್ರಗಳ ನ್ಯಾಯಾಲಯಗಳ ಆವರಣಗಳಲ್ಲಿಯೇ ಉಗ್ರರು ತಮ್ಮ ಪ್ರತಾಪ ಮೆರೆದಿದ್ದಾರೆ. ಲಕ್ನೊ, ವಾರಾಣಾಸಿ ಹಾಗೂ ಫೈಜ಼ಾಬಾದ್ ನಗರಗಳಲ್ಲಿ ಸರಿ ಸುಮಾರು ಒಂದೇ ವೇಳೆಗೆ ಸಂಭವಿಸಿದ ಸೈಕಲ್ ಬಾಂಬ್ ಸ್ಫೋಟಗಳಲ್ಲಿ ೧೫ ಜನ ಸತ್ತಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಎಂದಿನಂತೆ ವಿಚಾರಣೆ ಆರಂಭವಾಗಿದೆ. ಶಂಕಿತರ ಅಂದಾಜು ಚಿತ್ರಗಳನ್ನು ಬಿಡುಗಡೆ ಮಾಡಲಾಗಿದೆ. ಕೇಂದ್ರ ಗೃಹ ಮಂತ್ರಿ ಎಂದಿನ ಶೈಲಿಯಲ್ಲಿ ಉಗ್ರರನ್ನು ಮಟ್ಟ ಹಾಕುವ ಮಾತುಗಳನ್ನು ಪುನರುಚ್ಚರಿಸಿದ್ದಾರೆ. ಮತ್ತೆ ಎಂದಿನಂತೆ ಗುಪ್ತಚರ ವಿಭಾಗದ ವೈಫಲ್ಯದ ಮಾತುಗಳನ್ನಾಡಲಾಗುತ್ತಿದೆ. ಮತ್ತೂ ಎಂದಿನಂತೆ, ಮೂರೂ ನಗರಗಳು ಸಾಮಾನ್ಯ ಸ್ಥಿತಿಗೆ ಮರಳಿ ಜನಜೀವನ ಎಂದಿನಂತೆ ಸಾಗಿದೆ!

ಮತ್ತೆ ಎಲ್ಲವೂ ಮರೆತು ಹೋಗುತ್ತದೆ– ಮತ್ತೊಂದು ಸ್ಫೋಟ ಸಂಭವಿಸುವವರೆಗೆ. ಆಧುನಿಕ ಬದುಕು ಹಿಂಸೆಯನ್ನು ತನ್ನ ಅನಿವಾರ್ಯ ಹಾಗೂ ಅವಿಭಾಜ್ಯ ಅಂಗವೆಂದು ಒಪ್ಪಿಕೊಂಡಂತೆ ತೋರುತ್ತಿದೆ. ರಾಷ್ಟ್ರ ಈ ಹಿಂಸೆಯನ್ನು ಹೆಚ್ಚೆಚ್ಚು ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕವೇ ಎದುರಿಸುವ ತೀರ್ಮಾನಕ್ಕೆ ಬಂದಂತಿದೆ. ಏಕೆಂದರೆ, ಈ ಇತ್ತೀಚಿನ ಸ್ಫೋಟಗಳ ಬಗೆಗೆ ನಮ್ಮ ಆಡಳಿತ, ಪೋಲೀಸು ಹಾಗೂ ಮಾಧ್ಯಮದವರು ಚರ್ಚಿಸುತ್ತಿರುವ ರೀತಿ ನೋಡಿ. ಈ ಸ್ಫೋಟದ ಹಿಂದಿನ ಉದ್ದೇಶವೇನು? ಅವರ ಗುರಿ ನ್ಯಾಯಾಲಯಗಳೇ ಏಕಾಗಿತ್ತು? ಕಳೆದ ವಾರ ಸಿಕ್ಕಿಹಾಕಿಕೊಂಡ ಇಬ್ಬರು ಉಗ್ರಗಾಮಿಗಳನ್ನು ವಕೀಲರು ಥಳಿಸಿದ್ದೇ ಇದಕ್ಕೆ ಕಾರಣವೇ? ಇಂತಹ ಪುಡಿ ಪ್ರಶ್ನೆಗಳ ಮೂಲಕ ಇವರು ಈ ಹಿಂಸಾಚಾರವನ್ನು ಅರ್ಥ ಮಾಡಿಕೊಳ್ಳಲು ಹೊರಟಿದ್ದಾರೆ. ಆದರೆ ಕಳೆದ ೨೦ ವರ್ಷಗಳಲ್ಲಿ ಭಾರತದಾದ್ಯಂತ ನಿರಂತರವಾಗಿ – ವಿಶೇಷವಾಗಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಉತ್ತರ ಪ್ರದೇಶದಲ್ಲಿ ಪದೇ ಪದೇ ಸಂಭವಿಸುತ್ತಿರುವ– ಈ ಆಸ್ಫೋಟಗಳ ಹಿಂದಿನ ಮೂಲ

ಕಾರಣವೇನು ಎಂಬುದರ ವಿಶ್ಲೇಷಣೆಯ ಗೋಜಿಗೇ ಹೋಗದೆ, ಪ್ರತಿ ಆಸ್ಫೋಟನೆಯ ಹಿಂದಿನ ತಂತ್ರಜ್ಞಾನವನ್ನು ಅರಿಯುವ ಪ್ರಯತ್ನ ಮಾಡುತ್ತಾ: ಆ ಪ್ರಯತ್ನ ಪೂರ್ಣಗೊಳ್ಳುವ ಮುನ್ನವೇ, ಅದಕ್ಕೂ ಮುಂದುವರೆದ ತಂತ್ರಜ್ಞಾನವನ್ನಾಧರಿಸಿದ ಇನ್ನೊಂದು ಸ್ಫೋಟವನ್ನು ಎದುರಿಸುವ ಅಸಹಾಯಕತೆಯಲ್ಲಿ ರಾಷ್ಟ್ರ ಸಿಕ್ಕಿ ಹಾಕಿಕೊಂಡಿದೆ.

ಕಳೆದೆರಡು ವರ್ಷಗಳ ಹಿಂದೆ ಮುಂಬೈನ ರೈಲುಗಳಲ್ಲಿ ಸಂಭವಿಸಿದ ಭಯಂಕರ ಬಾಂಬ್ ಸ್ಫೋಟದ ಸುಳಿವು ಇನ್ನೂ ಸಿಕ್ಕಿಲ್ಲ. ಹೀಗೇ ಅದೆಷ್ಟೋ ಉಗ್ರರ ಹಿಂಸಾಚಾರ ಪ್ರಕರಣಗಳು ತನಿಖೆಗೆ ಸಿಗದೆ ಮರೆತೇಹೋಗಿವೆ. ಪ್ರತಿ ಬಾರಿಯೂ ಗುಪ್ತಚರ ವಿಭಾಗದ ವೈಫಲ್ಯವನ್ನೋ, ಗುಪ್ತಚರ ವಿಭಾಗದ ಮಾಹಿತಿಯನ್ನು ಸ್ಥಳೀಯ ಆಡಳಿತ ನಿರ್ಲಕ್ಷಿಸಿದ್ದನ್ನೋ, ಸಂಬಂಧಿಸಿದ ಸರ್ಕಾರಗಳು ತಮ್ಮ ರಕ್ಷಣೆಗೆ ತಕ್ಷಣದ ನೆಪಗಳನ್ನಾಗಿ ಬಳಸಿಕೊಳ್ಳುತ್ತಿದೆ. ಉದಾಹರಣೆಗೆ ಇತ್ತೀಚಿನ ಸ್ಫೋಟಗಳ ಬಗ್ಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ಹೇಳಿದ್ದನ್ನು ನೋಡಿ. ಇದು ಕೇಂದ್ರ ಗುಪ್ತಚರ ದಳದ ವೈಫಲ್ಯವಂತೆ. ಆಯಿತು. ಆದರೆ ಇವರ ರಾಜ್ಯ ಗುಪ್ತಚರ ದಳ ಏನು ಮಾಡುತ್ತಿತ್ತು? ನಮ್ಮ ಎಲ್ಲ ಸಂಸ್ಥೆಗಳೂ ತಮ್ಮ ವೃತ್ತಿಪರತೆಯನ್ನು ಕಳೆದುಕೊಂಡಿವೆ. ಬಡ್ತಿ, ಮೀಸಲಾತಿ, ಸಂಬಳ– ಸಾರಿಗೆ, ನಿರ್ದಿಷ್ಟ ಸ್ಥಳ ಅಥವಾ ಸ್ಥಾನಗಳಿಗೆ ವರ್ಗಾವಣೆ, ಮೇಲಧಿಕಾರಿಗಳ ಓಲೈಕೆ, ಸೋದರ ಇಲಾಖೆಗಳೊಡನೆ ಪ್ರಚಾರಕ್ಕಾಗಿ ಪೈಪೋಟಿ ಇತ್ಯಾದಿಗಳಲ್ಲೇ ಅವು ಮುಳುಗಿ ಹೋಗಿ, ತಮ್ಮ ಮೂಲ ಕರ್ತವ್ಯಗಳನ್ನೇ ಅವು ಮರೆತಿವೆ. ಇದು ನಮ್ಮ ಸೇನೆಯಿಂದ ಹಿಡಿದು ಗ್ರಾಮಾಂತರ ಪೋಲೀಸ್ ಠಾಣೆಯವರೆಗೆ ಹಬ್ಬಿರುವ ರೋಗ.

ಹಿಂದೆ ಒಮ್ಮೆ ನಾನು ಪೋಲೀಸ್ ವರಿಷ್ಠಾಧಿಕಾರಿಯೊಬ್ಬರನ್ನು ಆಕಾಶವಾಣಿಗಾಗಿ ಮಾತನಾಡಿಸಿದಾಗ, ಅವರು ನಮ್ಮ ಪೋಲೀಸ್ ವ್ಯವಸ್ಥೆಯ ಮುಖ್ಯ ದೌರ್ಬಲ್ಯವೆಂದರೆ, ಅದನ್ನು ವಸಾಹತುಶಾಹಿ ಮಾನಸಿಕತೆಯಲ್ಲೇ ಪೇದೆ ಕೇಂದ್ರಿತವಾಗಿ ಮುಂದುವರೆಸಿಕೊಂಡು ಬಂದಿರುವುದೇ ಆಗಿದೆ ಎಂದಿದ್ದರು. ಅಂದರೆ ನಮ್ಮ ಇಡೀ ಪೋಲೀಸ್ ವ್ಯವಸ್ಥೆ ಮುಖ್ಯವಾಗಿ ದೈಹಿಕ ಬಲದ ಮೇಲೇ ನಿಂತಿದೆ. ಬೇರೆ ದೇಶಗಳಲ್ಲಿ ಅದು ಅಧಿಕಾರಿ ಕೇಂದ್ರಿತ. ಅಂದರೆ ಅಲ್ಲಿ, ಕೌಶಲ್ಯ, ಬುದ್ಧಿಮತ್ತೆ, ಸಾರ್ವಜನಿಕ ಸಂಪರ್ಕ ಪ್ರತಿಭೆಗೆ ಪ್ರಾಧಾನ್ಯ. ನಮ್ಮ ಪೇದೆಗಳ ಆಯ್ಕೆಯೇ ಈಗ ಹೆಚ್ಚಾಗಿ ಹಣ ಹಾಗೂ ಪ್ರಭಾವದ ಮೇಲೇ ನಡೆಯುವುದು. ಅವರನ್ನು ಮಾನವ ಸಂಪನ್ಮೂಲಗಳನ್ನಾಗಿ ಬೆಳೆಸುವಂತಹ ತರಬೇತಿಗಳು ಇಲ್ಲವೇ ಇಲ್ಲ. ಅವರನ್ನು ಪಶು ಬಲವನ್ನಾಗಿ ಬೆಳೆಸುವುದಷ್ಟೇ ಮೇಲಿನ ಅಧಿಕಾರಿಗಳಿಗೆ ಹಾಗೂ ಆಡಳಿತಗಾರರಿಗೆ ಬೇಕಾಗಿದ್ದು, ತಮ್ಮ ಸಮಸ್ಯೆಗಳಿಗೆಲ್ಲ ಅವರನ್ನು ಆ ಸ್ಥಿತಿಯಲ್ಲಿ ಬಳಸಿ ಕ್ಷಿಪ್ರ ಪರಿಹಾರ ಕಂಡುಕೊಳ್ಳುವ ಸುಲಭ ದಾರಿಯನ್ನು ಅವರು ಕಂಡುಕೊಂಡಿದ್ದಾರೆ. ಇದರ ಮಧ್ಯೆಯೇ, ಅವರೂ ಜನರನ್ನು ಕಾಯುತ್ತಾ, ಕಾಡುತ್ತಾ, ಅಷ್ಟೂ ಇಷ್ಟೂ ಹಣ ಮಾಡಿಕೊಂಡು ಮೇಲಿಂದ ಕೆಳಗಿನವರೆಗೆ ಹಂಚಿಕೊಳ್ಳುತ್ತಾ ಕಾಲ ದೂಡುತ್ತಿದ್ದಾರೆ. ಹೀಗಾಗಿ ಜನಸಾಮಾನ್ಯರ ಕಣ್ಣಲ್ಲಿ ಪೋಲೀಸರೆಂದರೆ ಅನುಮಾನಾಸ್ಪದ ವ್ಯಕ್ತಿತ್ವಗಳಾಗಿ ತಮ್ಮೆಲ್ಲ ಘನತೆ ಕಳೆದುಕೊಂಡಿದ್ದಾರೆ.

ಹೀಗೆ ದದ್ದು ಬಿದ್ದು ಹೋದ ಪೇದೆಗಳನ್ನಾಧರಿಸಿದ ವ್ಯವಸ್ಥೆಯಿಂದ ಯಾವ ಸೂಕ್ಷ್ಮ, ನಿಸ್ಪೃಹ, ಕೌಶಲ್ಯಪೂರ್ಣ ಕೆಲಸ ಸಾಧ್ಯ? ನಮ್ಮ ಗುಪ್ತಚರ ವ್ಯವಸ್ಥೆಯ ಕಾಲಾಳುಗಳೂ ಇವರೇ. ಯಾವುದೇ ಸುಸಂಗತ ರಾಜಕೀಯ ಪರಿಜ್ಞಾನವೇ ಇಲ್ಲದ ಇವರು ಕೊಡುವ ಪ್ರಾಥಮಿಕ ಮಾಹಿತಿಯನ್ನು ಆಧರಿಸಿಯೇ ಗುಪ್ತಚರ ಇಲಾಖೆಯ ಮೇಲಿನ ಹಂತ ಕ್ರಿಯಾಶೀಲವಾಗುವುದು ಎಂದರೆ, ಈ ರಾಷ್ಟ್ರ ಇನ್ನೂ ಇಷ್ಟು ನೆಮ್ಮದಿಯಿಂದಿರುವುದನ್ನು ಪವಾಡವೆಂದೇ ಭಾವಿಸಬೇಕಾಗುತ್ತದೆ! ಈಚೆಗೆ ತೀರ್ಪು ಪ್ರಕಟವಾದ ಮುಂಬೈ ಸರಣಿ ಸ್ಫೋಟ ಪ್ರಕರಣದಲ್ಲಿ ಅಪರಾಧಿಗಳೆಂದು (ಆರ್‌ಡಿಎಕ್ಸ್ ಸಾಗಿಸಿಕೊಡುವುದರಲ್ಲಿ ನೆರವಾಗಿದ್ದಕ್ಕಾಗಿ) ಸಾಬೀತಾದವರಲ್ಲಿ ಪೋಲೀಸರೂ ಸೇರಿದ್ದರು ಎಂದರೆ ಏನು ಹೇಳುವುದು? ರಾಜಸ್ಥಾನದ ಉನ್ನತ ಪೋಲೀಸ್ ಅಧಿಕಾರಿ ಮೊಹಂತಿ, ವಿದೇಶಿ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರವೆಸಗಿದ ಆಪಾದನೆ ಎದುರಿಸುತ್ತಿದ್ದ ತನ್ನ ಮಗನನ್ನು ವಿಚಾರಣೆಗೆ ಮುನ್ನವೇ ನಕಲಿ ಪಾಸ್‌ಪೋರ್ಟ್ ಮೇಲೆ ವಿದೇಶಕ್ಕೆ ಸಾಗಿಸಿದ್ದಾನೆ ಎಂದರೆ? ಇದಾದ ಮೇಲೂ ಆತ ತನ್ನ ಸ್ಥಾನದಲ್ಲಿ ಮುಂದುವರೆಯಲು ಸಾಧ್ಯ ಎಂದರೆ? ಸಾರ್ವಜನಿಕ ಒತ್ತಡ ಹೆಚ್ಚಿ ಬಂಧನದ 'ಸಿದ್ಧತೆ' ಆರಂಭವಾಗುತ್ತಿದ್ದಂತೆ ಆತನೇ ನಾಪತ್ತೆಯಾಗಿದ್ದಾನೆ ಎಂದರೆ? ಅಪರಾಧಿ ಮಗನನ್ನು ಅಪ್ಪ ರಕ್ಷಿಸಿದರೆ, ಅಪ್ಪನನ್ನು ಸರ್ಕಾರ ರಕ್ಷಿಸುತ್ತದೆ. ಇದೊಂದು ಸಣ್ಣ ಉದಾಹರಣೆಯಷ್ಟೆ. ಕೊಲೆ ಆಪಾದಿತರಿಂದ ಅಪಾರ ಹಣವನ್ನೋ, ಆಸ್ತಿಯನ್ನೋ ಪಡೆದು ಕೊಲೆಗಳನ್ನೇ ಮುಚ್ಚಿಹಾಕಿರುವ ಪೋಲೀಸರೆಷ್ಟಿಲ್ಲ ನಮ್ಮಲ್ಲಿ? ಬುಡದಿಂದ ತುದಿವರೆಗೂ ರೋಗ ಹಬ್ಬಿಸಿಕೊಂಡಿರುವ ಇಲಾಖೆ ತನ್ನ ವೃತ್ತಿಶೀಲತೆಯನ್ನಾದರೂ ಕಾಪಾಡಿಕೊಳ್ಳಲು ಹೇಗೆ ಸಾಧ್ಯ? ದೇಶದ ಆಂತರಿಕ ಭದ್ರತೆಯನ್ನು ಕಾಪಾಡಲು ಹೇಗೆ ಸಾಧ್ಯ? ಈ ಪ್ರಶ್ನೆಯೇಕೆ ನಮ್ಮನ್ನು ಕಾಡುತ್ತಿಲ್ಲ?

ಈ ಬಿಕ್ಕಟ್ಟನ್ನು ಬಹು ಮುನ್ನವೇ ಮನಗಂಡಿದ್ದ ದೂರದೃಷ್ಟಿಯ ಆಡಳಿತಗಾರ ಧರ್ಮವೀರ ಪೋಲೀಸ್ ವ್ಯವಸ್ಥೆಯ ಸುಧಾರಣೆಗಾಗಿ ಒಂದು ಸಮಗ್ರ ವರದಿಯನ್ನೇ ಸಿದ್ಧಪಡಿಸಿಕೊಟ್ಟಿದ್ದರು. ಮೂರು ದಶಕಗಳ ನಂತರವೂ ಅದು ಇನ್ನೂ ವಿವಿಧ ಹಂತಗಳ ಅಧ್ಯಯನ, ಪರಿಶೀಲನೆಗಳಲ್ಲೇ ಧೂಳು ತಿನ್ನುತ್ತಾ ಕೂತಿದೆ. ಇದು ನಮ್ಮ ಗೃಹಾಡಳಿತ. ಇಂತಹ ಅಸೂಕ್ಷ್ಮ ಆಂತರಿಕ ಆಡಳಿತ ವ್ಯವಸ್ಥೆ ವರ್ಷಾನುಗಟ್ಟಲೆ ಮುಂದುವರೆದಿರುವಾಗ, ಅಳಿದುಳಿದಿರುವ ಕೆಲವೇ ನಿಸ್ಪೃಹ ಹಾಗೂ ದಕ್ಷ ಪೋಲೀಸರಾದರೂ ಏನು ಮಾಡಿಯಾರು? ಯಾರಿಗೆ, ಯಾವುದಕ್ಕೆ, ಎಲ್ಲಿ ಎಷ್ಟು, ಎಂತಹ ಭದ್ರತೆ ಒದಗಿಸಿಯಾರು? ಸ್ಥಳ ಹಾಗೂ ಕಾಲಗಳ ಯಾವುದೇ ನಿರೀಕ್ಷೆಗೂ ಸಿಗದೆ ಸಂಭವಿಸುತ್ತಿರುವ ವಿವಿಧ ರೀತಿಯ ಹಿಂಸಾಚಾರಗಳನ್ನು, ಸ್ಫೋಟಗಳನ್ನು ಭದ್ರತೆಯ ಕ್ರಮಗಳ ಮೂಲಕ ಎದುರಿಸಲು ಸಾಧ್ಯವೇ? ಇಡೀ ದೇಶವನ್ನೇ ಭದ್ರತಾ ಕೋಟೆಯನ್ನಾಗಿ ಪರಿವರ್ತಿಸಲು ಸಾಧ್ಯವೇ? ಹಿಂಸೆಯ ತಂತ್ರಜ್ಞಾನ ಭದ್ರತೆಯ ತಂತ್ರಜ್ಞಾನಕ್ಕಿಂತ ಯಾವಾಗಲೂ ಒಂದು ಹೆಜ್ಜೆ ಮುಂದಿರುತ್ತದೆ ಎಂಬುದು

ಪದೇ ಪದೇ ಸಾಬೀತಾಗುತ್ತಿದ್ದರೂ ಭಯೋತ್ಪದಾನೆಯನ್ನು ಎದುರಿಸಲು ನಾವೇಕೆ ಇದೇ ದಾರಿಯಲ್ಲಿ ಮುಂದುವರೆಯುತ್ತಿದ್ದೇವೆ?

ಈಗ ನಾವು ಉತ್ತರಿಸಕೊಳ್ಳಬೇಕಾದ ಮೊದಲ ಪ್ರಶ್ನೆ: ಭಾರತವೇಕೆ ಹೀಗೆ ಈ ಉಗ್ರರ ಹಿಂಸೆಗೆ ಸಿಕ್ಕಿದೆ? ಇದರ ಬೀಜ ಭಾರತದ ವಿಭಜನೆಗೆ ಕಾರಣವಾದ ದುಷ್ಟ ರಾಜಕೀಯದಲ್ಲೇ ಇದ್ದು; ಈಚೆಗೆ ಸರಿಯಾದ ಸಂದರ್ಭ ಒದಗಿ ಬಂದು, ಒಂದು ದೊಡ್ಡ ವಿಷವೃಕ್ಷವಾಗಿ ಬೆಳೆದಿದೆಯಷ್ಟೆ ಎಂಬುದನ್ನು ನಾವು ಮೊದಲು ಅರಿಯಬೇಕು. ಷೇಕ್ ಅಬ್ದುಲ್ಲಾರೊಡನೆಯ ಸಂಧಾನದ ಮೂಲಕ ಕಾಶ್ಮೀರದ ಸಮಸ್ಯೆಯನ್ನು ಒಂದು ತಹಬಂದಿಗೆ ತರಲಾಗಿತ್ತಾದರೂ, ೮೦ರ ದಶಕದಲ್ಲಿ ಇಂದಿರಾ ಗಾಂಧಿಯವರ ಮಹಾತ್ವಾಕಾಂಕ್ಷೆಯ ರಾಜಕಾರಣದಿಂದಾಗಿ ಅಲ್ಲಿನ ಸ್ಥಳೀಯ ರಾಜಕಾರಣದಲ್ಲಿ ಕಾಂಗ್ರೆಸ್ ಮೂಗು ತೂರಿಸಿ ಜನರನ್ನು ಸಿಟ್ಟಿಗೆಬ್ಬಿಸಿದ್ದೇ ಕಾಶ್ಮೀರ ಸಮಸ್ಯೆ ಭುಗಿಲೇಳಲು ಕಾರಣವಾಯಿತು. ನಂತರ ನಡೆದ ಬಹುತೇಕ ಚುನಾವಣೆಗಳು ಮೋಸದಿಂದ ಕೂಡಿ, ಕಾಶ್ಮೀರದ ಜನತೆಗೆ ಭಾರತದ ಪ್ರಜಾಪ್ರಭುತ್ವದ ಬಗೆಗಿನ ನಂಬಿಕೆಯೇ ಕಳೆದುಹೋಗಿ ಅಶಾಂತಿ ಆರಂಭವಾಯಿತು. ಅದನ್ನು ಗಡಿಯಾಚೆಯ ತಂಟೆಕೋರರರೂ, ಜಾಗತಿಕ ಮುಸ್ಲಿಂ ಮೂಲಭೂತವಾದಿ ಉಗ್ರರೂ ಬಳಸಿಕೊಳ್ಳುತ್ತಾ ಬಂದು, ಇಂದು ಈ ಆಸ್ಫೋಟನಾಕಾರಿ ಸ್ಥಿತಿ ಮುಟ್ಟಿದೆ.

ಈಶಾನ್ಯ ರಾಜ್ಯಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಹಿಂಸಾಚಾರಕ್ಕೂ ಭಾರತದ ಈ ಕೇಂದ್ರೀಕೃತ ರಾಜಕಾರಣದ ಕೆಟ್ಟ ವರಸೆಯೇ ಕಾರಣವಾಗಿದೆ. ಉತ್ತರ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದ ದಿನವೇ ಗೌಹಾತಿಯಲ್ಲಿ ಆದಿವಾಸಿ ಹಾಗೂ ನಗರವಾಸಿಗಳ ನಡುವೆ ನಡೆದ ಹಿಂಸಾಚಾರವನ್ನೇ ಗಮನಿಸಿ. ಅತ್ಯಂತ ಬರ್ಬರ ರೀತಿಯ ಹಿಂಸಾಚಾರವದು. ತಮಗೆ ಬುಡಕಟ್ಟು ಜನಾಂಗದ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿ ಮೆರವಣಿಗೆ ಹೊರಟಿದ್ದ ಆದಿವಾಸಿಗಳು ತಮ್ಮ ಮೂಲ ಆಯುಧಗಳೊಡನೆ ನಗರವಾಸಿಗಳ ಮನೆಗಳಿಗೆ, ಅಂಗಡಿಗಳಿಗೆ ನುಗ್ಗಿ ಲೂಟಿ, ಹಿಂಸಾಚಾರಗಳನ್ನು ನಡೆಸಿದ್ದರೆ, ಇದರಿಂದ ಕ್ರುದ್ಧರಾದ ನಗರವಾಸಿಗಳು ಆದಿವಾಸಿಗಳನ್ನು ಬೀದಿಗಳಲ್ಲೇ ಸಿಕ್ಕ ಸಿಕ್ಕ ಆಯುಧಗಳಿಂದ ಹೊಡೆದು ಸಾಯಿಸಿದರು. ಹತ್ತಾರು ಹೆಣಗಳುರುಳಿದವು. ಯಾರು ಹೇಳಿದರು, ನಮ್ಮ ಆದಿವಾಸಿಗಳು ಇನ್ನೂ ಮುಗ್ಧರೆಂದು? ಯಾರು ಹೇಳಿದರು ನಮ್ಮ ನಗರವಾಸಿಗಳು ಸುಸಂಸ್ಕೃತರೆಂದು? ನಾವು ಈವರೆಗೆ ನಮ್ಮ ರಾಜಕಾರಣವನ್ನು ಹೇಗೆ ಕಟ್ಟಿಕೊಂಡು ಬಂದಿದ್ದೇವೆಂದರೆ, ಅದು ಹುಟ್ಟಿಸುವ 'ಅಭಿವೃದ್ಧಿ'ಯ ಹಪಾಹಪಿ ಎಲ್ಲರ ಎಲ್ಲ ರೀತಿಯ ಮುಗ್ಧತೆಗಳನ್ನೂ, ಸಂಸ್ಕೃತಿಗಳನ್ನೂ ನಾಶ ಮಾಡಿಬಿಟ್ಟಿದೆ. ಎಲ್ಲರ ಮೂಲ ಅಸ್ಮಿತೆಗಳೂ, ಬೇರುಗಳೂ ಕಳಚಿಕೊಳ್ಳತೊಡಗಿ, ಇಡೀ ಜನಸ್ತೋಮವೇ ಅಸ್ತಿತ್ವದ ಅಭದ್ರತೆಯ ರೋಗಕ್ಕೆ ತುತ್ತಾಗತೊಡಗಿದೆ. ಪ್ರಗತಿಗೆ ಇನ್ನೊಂದು ಹೆಸರು ಹಿಂಸೆ ಎಂಬಂತಾಗಿದೆ!

ಹೀಗಾಗಿಯೇ ಇಂದು ಬಂಗಾಳದ ಮಾರ್ಕ್ಸ್‌ವಾದಿ ಸರ್ಕಾರವೂ ತಸ್ಲೀಮಾಳನ್ನು ರಕ್ಷಿಸಿಟ್ಟುಕೊಳ್ಳಲು ಸಾಧ್ಯವಾಗದಾಗಿದೆ. ಆ ಹೆಂಗಸು ಕೊಲ್ಕೊತ್ತಾದಿಂದ ಹೊರಟು, ದೇಶವೆಲ್ಲಾ

ಅಲೆದು ಈಗ ತಾತ್ಕಾಲಿಕವಾಗಿ ದೆಹಲಿಯಲ್ಲಿ ನೆಲೆಸುವಂತಾಗಿದೆ. ಬಂಗಾಳದಲ್ಲಿ ಎಂದೂ ಕಾಣದ ಮುಸ್ಲಿಂ ಮೂಲಭೂತವಾದಿಗಳ ಅಬ್ಬರ ಇಂದು ಕಾಣತೊಡಗಿದೆ. ಅದಕ್ಕೆ ಬುದ್ಧದೇವ ಭಟ್ಟಾಚಾರ್ಜಿ ಹೆದರಿಹೋಗಿದ್ದಾರೆ! ಅವರಿಗೀಗ ಅಲ್ಪಸಂಖ್ಯಾತರ ಮತ ಕಳೆದುಕೊಳ್ಳುವ ಭಯ. ಇಲ್ಲದಿದ್ದರೆ ನಂದಿಗ್ರಾಮದಲ್ಲಿ ರೈತರ ಹೋರಾಟವನ್ನು ಅಡಗಿಸಲು ಯತ್ನಿಸಿದ ಇವರಿಗೆ ಈ ಮುಸ್ಲಿಂ ರಾಕ್ಷಸರ ಅಟ್ಟಹಾಸವನ್ನು ಅಡಗಿಸಲು ಕಷ್ಟವಾಗುತ್ತಿತ್ತೇ? ಇಡೀ ಭಾರತವೀಗ, ಕಳೆದ ಐವತ್ತು ವರ್ಷಗಳಿಂದ ತಾನು ಆಚರಿಸಿಕೊಂಡು ಬಂದ 'ವೈಜ್ಞಾನಿಕ' ಸೆಕ್ಯುಲರಿಸಂನ ಪಾಪದ ಫಲವನ್ನು ಉಣ್ಣತೊಡಗಿದೆ. ಇಂತಹ ಜನದೂರವಾದ ಸೆಕ್ಯುಲರ್ ಪರಂಪರೆಯನ್ನು ಪ್ರತಿಪಾದಿಸಿಕೊಂಡು ಬಂದ ರಾಷ್ಟ್ರ ಇಂದು ಹಿಂದೂ ಕೋಮುವಾದಿಗಳ ಕೆಲವು ಸರಳ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗದ ಸ್ಥಿತಿ ಮುಟ್ಟಿರುವುದು ಸಹಜವೇ ಆಗಿದೆ. ಅದಕ್ಕಿಂತ ಮುಖ್ಯವಾಗಿ, ವಿದೇಶಿ ಉಗ್ರಗಾಮಿಗಳ ಬೆಂಬಲದೊಂದಿಗೆ ರಾಕ್ಷಸ ರೂಪ ತಾಳುತ್ತಿರುವ ದೇಶೀ ಇಸ್ಲಾಂ ಪುರೋಹಿತಶಾಹಿಯ ಅಟ್ಟಹಾಸವನ್ನು ಅಡಗಿಸುವ ದಾರಿಯೇ ತೋಚದಾಗಿದೆ. ಭಾರತ ಎಂದೂ ಇಷ್ಟು, ಹೀಗೆ ಅತಂತ್ರವಾಗಿರಲಿಲ್ಲ.

ಇಸ್ಲಾಂ– ಬಹುಶಃ ಅದರ ಸೂಫಿ ಆವೃತ್ತಿಯ ಹೊರತಾಗಿ– ಎಂದೂ ಅಹಿಂಸೆಯನ್ನು, ಪ್ರಜಾಪ್ರಭುತ್ವ ಪದ್ಧತಿಯನ್ನು ಮನುಷ್ಯ ನಾಗರೀಕತೆಯ ಪರಮ ಮೌಲ್ಯಗಳಾಗಿ ಒಪ್ಪಿಕೊಂಡಂತಿಲ್ಲ. ಹಾಗಾಗಿಯೇ ಇಂದು ಜಗತ್ತಿನ ಬಹುತೇಕ ಮುಸ್ಲಿಂ ರಾಷ್ಟ್ರಗಳು ರಾಜ ಪ್ರಭುತ್ವ ಅಥವಾ ಸರ್ವಾಧಿಕಾರಿಗಳ ಕೈ ಕೆಳಗೇ ಇವೆ. ಪ್ರಜಾಪ್ರಭುತ್ವದ ಹೆಸರು ಹೇಳಿಕೊಳ್ಳಬಲ್ಲ ತುರ್ಕಿ, ಮಲೇಷಿಯಾ ಹಾಗೂ ಇಂಡೋನೇಷ್ಯಾದಂತಹ ಎರಡು ಮೂರು ರಾಷ್ಟ್ರಗಳೂ ಇಂದು ಮುಸ್ಲಿಂ ಉಗ್ರರ ಹಿಂಸಾಚಾರವನ್ನು ಎದುರಿಸುತ್ತಲೇ ಇವೆ. ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಪರಂಪರೆಯುಳ್ಳ ಪಾಕಿಸ್ಥಾನ (ಹಾಗೂ ಬಂಗ್ಲಾ ದೇಶ) ಕಳೆದ ಐವತ್ತು ವರ್ಷಗಳಲ್ಲಿ ಪ್ರಜಾಪ್ರಭುತ್ವದ ಅನೇಕ ಪ್ರಯೋಗಗಳನ್ನು ನಡೆಸಿ ಮತ್ತೆ ಮತ್ತೆ ಸೋತಿವೆ. ಇಂದೂ ಅಂತಹ ಮತ್ತೊಂದು ಪ್ರಯೋಗಕ್ಕೆ ಸಿದ್ಧವಾಗುತ್ತಿದ್ದಂತೆ ದೊಡ್ಡ ಬಿಕ್ಕಟ್ಟಿಗೆ ಸಿಕ್ಕಿವೆ. ಈ ಎರಡು ದೇಶಗಳ ಮೂಲಭೂತವಾದಿ ಸಂಘಟನೆಗಳೇ ಇಂದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೂ, ನಮ್ಮ ಸೆಕ್ಯುಲರ್ ನಂಬಿಕೆಯನ್ನೂ ಹಾಳುಗೆಡಹಲು ಪ್ರಯತ್ನಿಸುತ್ತಿರುವುದು. ಇದಕ್ಕೆ ಬಹುಶಃ ಮೂಲ ಕಾರಣ, ಇಸ್ಲಾಂ 'ರಾಷ್ಟ್ರ ಪ್ರಭುತ್ವ' (Nation State) ಎಂಬ ಆಧುನಿಕ ರಾಜಕೀಯ ಪರಿಕಲ್ಪನೆಯನ್ನು ಒಪ್ಪದಿರುವುದು. ಅದು ತನ್ನನ್ನೇ 'ಉಮ್ಮಾ' ಎಂಬ ಪರಿಕಲ್ಪನೆಯಡಿ ಒಂದು ರಾಷ್ಟ್ರ ಎಂದು ಕರೆದುಕೊಳ್ಳಬಯಸುತ್ತದೆ. ಅಂದರೆ, ಜಾಗತಿಕವಾಗಿ ಮುಸ್ಲಿಮರದ್ದೇ ಒಂದು 'ರಾಷ್ಟ್ರ'ವಿದೆ. ಅವರ ಮೂಲ ಬದ್ಧತೆ ಅದರ ಸಂವಿಧಾನಕ್ಕೆ– 'ಷರಿಯತ್'ಗೆ. ಹಾಗಾಗಿಯೇ SIMIಗೆ (ಭಾರತದ ಮುಸ್ಲಿಂ ವಿದ್ಯಾರ್ಥಿ ಆಂದೋಲನ) 'ನಮ್ಮ ರಾಷ್ಟ್ರ ಭಾರತವಲ್ಲ; ಇಸ್ಲಾಂ' ಎಂದು ಬಹಿರಂಗ ಘೋಷಣೆ ಮಾಡಿಕೊಂಡೇ ತನ್ನ ಕಾರ್ಯಕ್ರಮಗಳನ್ನು ಸಂಘಟಿಸಲು ಸಾಧ್ಯವಾಗುತ್ತಿದ್ದುದು.

ದುರಂತವೆಂದರೆ, ಈ ಮಧ್ಯಕಾಲೀನ ಕಲ್ಪನೆ ಹಾಗೂ ನಂಬಿಕೆಗಳನ್ನು ಪರಿಷ್ಕರಿಸುವ ಎಲ್ಲ ಪ್ರಯತ್ನಗಳೂ ಬಹುಜನರ ಮಟ್ಟಿಗೆ ವಿಫಲಗೊಂಡಿವೆ.

ಇದಕ್ಕೆಲ್ಲ ಮುಖ್ಯ ಕಾರಣ, ನಮ್ಮ ರಾಷ್ಟ್ರೀಯ ನಾಯಕರು ಪ್ರಜಾಪ್ರಭುತ್ವ ಹಾಗೂ ಧರ್ಮನಿರಪೇಕ್ಷೆಯ ಆಧಾರಗಳ ಮೇಲೆ ಕಟ್ಟಿ ಹೊರಟ ಹೊಸ ಭಾರತದಲ್ಲಿ, ಇಸ್ಲಾಮನ್ನು ಪ್ರಜಾಪ್ರಭುತ್ವೀಕರಣಕ್ಕೊಳಪಡಿಸುವ ಗಂಭೀರ ಹಾಗೂ ವ್ಯವಸ್ಥಿತ ಪ್ರಯತ್ನಗಳನ್ನು ಮಾಡದಿದ್ದುದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮುಸ್ಲಿಮರ ಚೇಲಾ ನಾಯಕತ್ವವನ್ನಷ್ಟೇ ಬೆಳೆಸಿದ ಕಾಂಗ್ರೆಸ್, ಮುಸ್ಲಿಮರು ರಾಷ್ಟ್ರಜೀವನದ ಮುಖ್ಯವಾಹಿನಿಯೊಂದಿಗೆ ಬೆರೆಯಬಲ್ಲ ಅವಕಾಶಗಳನ್ನೇ ಒದಗಿಸಿಕೊಡಲಿಲ್ಲ. ಸರ್ಕಾರಿ ಕಛೇರಿಗಳಲ್ಲಿ, ವಿವಿಧ ಅಧಿಕಾರ ಸ್ಥಾನಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಅವರಿಗೆ ಸಹಜ ಸೂಕ್ತ ಪ್ರಾತಿನಿಧ್ಯ ನೀಡುವುದು ಒಂದು ನೆಲೆಯ ಕ್ರಮವಾದರೆ, ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು ಇನ್ನೊಂದು ನೆಲೆಯ ಕ್ರಮವಾಗಿರಬೇಕಿತ್ತು. ನಮ್ಮ ಸಂವಿಧಾನದ ಮುಖ್ಯ ನಿರ್ದೇಶಕ ತತ್ವಗಳಲ್ಲಿ ಒಂದಾದ ಸಾಮಾನ್ಯ ನಾಗರಿಕ ಸಂಹಿತೆಯ ಜಾರಿಯ ಪ್ರಯತ್ನವಿರಲಿ, ಆ ಬಗ್ಗೆ ಒಂದು ಗಂಭೀರ ಚರ್ಚೆಯನ್ನು ಆರಂಭಿಸುವ ಪ್ರಯತ್ನವನ್ನೂ ನಮಗೆ ಮಾಡಲಾಗಲಿಲ್ಲವೆಂದರೆ, ನಾವೆಂತಹ ತಲೆಕೆಳಗಾದ ಸೆಕ್ಯುಲರಿಸಂನ ಪಂಜರದಲ್ಲಿ ಸಿಕ್ಕಿಹಾಕಿಕೊಂಡಿರಬಹುದು ಯೋಚಿಸಿ! ಮಹಾರಾಷ್ಟ್ರದ ಹಮೀದ್ ದಳವಾಯಿ ಹಾಗೂ ಅಸ್ಘರಾಲಿ ಇಂಜಿನಿಯರ್ ಕುಟುಂಬ ಮತ್ತು ಸೈಯ್ಯದ್ ನಕ್ವಿಯವರಂತಹ ಕೆಲವು ಬೆರಳೆಣಿಕೆಯ ಪ್ರಗತಿಪರರ ಹೊರತಾಗಿ, ಭಾರತದ ಯಾವ ಬುದ್ಧಿಜೀವಿ ಮುಸ್ಲಿಮನಾಗಲೀ ಸಂಘಟನೆಯಾಗಲೀ ತನ್ನ ಮತವನ್ನು ಮೀರಿ ನಿಂತು ಇಸ್ಲಾಂನ ಪ್ರಜಾಪ್ರಭುತ್ವೀಕರಣಕ್ಕಾಗಿ ಸಂಘಟಿತ ದನಿ ಎತ್ತಿಲ್ಲ. ಏಕೆ?

ಇದರಿಂದಾಗಿ ಇಂದು ಭಾರತದಾದ್ಯಂತ ಮುಸ್ಲಿಂ ಉಗ್ರಗಾಮಿತ್ವದ ಕೇಂದ್ರಗಳು ಚಿಗುರೊಡೆಯುತ್ತಿವೆ. ಆಸರೆಯಿಲ್ಲದ, ಮಾರ್ಗದರ್ಶನವಿಲ್ಲದ ಮುಸ್ಲಿಂ ಯುವಕರು ಮತೀಯ ಮತ್ತಿಗೆ ಸಿಕ್ಕಿ ತಮ್ಮ ಧರ್ಮ ಅಪಾಯದಲ್ಲಿದೆಯೆಂದೋ ಅಥವಾ ಸಂಪರ್ಕಕ್ಕೆ ಬಂದ ವಿದೇಶಿ ಉಗ್ರಗಾಮಿ ಸಂಸ್ಥೆಗಳ ಏಜೆಂಟರ ಆಮಿಷಗಳಿಗೆ ಬಲಿಯಾಗಿಯೋ, ರಾಷ್ಟ್ರಾದ್ಯಂತ ಸಂಭವಿಸುತ್ತಿರುವ ರಕ್ತಪಾತಕ್ಕೆ ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ. ಜನಸಾಮಾನ್ಯರ ಕಣ್ಣಲ್ಲಿ ಭಾರತೀಯ ಮುಸ್ಲಿಂ ಸಮಾಜವೇ ಇಂದು ಅನುಮಾನಾಸ್ಪದತೆಗೆ ಈಡಾಗಿದ್ದರೆ, ಅದಕ್ಕೆ ಈ ಪ್ರವೃತ್ತಿಯನ್ನು ತಡೆಯಲು ಆ ಸಮಾಜದ ಒಳಗಿಂದಾಗಲೀ, ಹೊರಗಿಂದಾಗಲೀ ಯಾವುದೇ ಸಂಘಟಿತ ಪ್ರಯತ್ನಗಳು ಆಗದಿರುವುದೇ ಕಾರಣವಾಗಿದೆ. ಒಳಗಿನ ಪ್ರಯತ್ನ ಲೇಖಕರು, ಬುದ್ಧಿಜೀವಿಗಳು ಹಾಗೂ ಸಮಾಜಸೇವಕರ ಕಡೆಯಿಂದ ಆಗಬೇಕಿದ್ದರೆ, ಹೊರಗಿನ ಪ್ರಯತ್ನ ಸರ್ಕಾರದ ಕಡೆಯಿಂದ ಆಗಬೇಕಿದೆ. ಈ ಹಿಂದೆ– ಸ್ವಾತಂತ್ರ್ಯ ಸಾಧನೆಯ ಆಸುಪಾಸಿನ ಕಾಲದಲ್ಲಿ– ನಡೆದ ಹರಿಜನೋದ್ಧಾರ ಆಂದೋಲನದಂತೆ ಈಗ ತುರ್ತಾಗಿ ಮುಸ್ಲಿಮೋದ್ಧಾರ ಆಂದೋಲನವೊಂದನ್ನು ಆರಂಭವಾಗಬೇಕಿದೆ. ಸಚಾರ್ ಸಮಿತಿಯ ವರದಿಯ ಅನುಷ್ಠಾನವು ಇದಕ್ಕೊಂದು ಒಳ್ಳೆಯ ಆರಂಭವನ್ನೊದಗಿಸಬಹುದು.

ಇದು ಆಗದ ಹೊರತು, ಪ್ರತಿ ಸ್ಫೋಟವಾದಾಗಲೂ ಪರಿಹಾರ ಘೋಷಿಸುವುದು, ತನಿಖೆ ಕೈಗೊಳ್ಳುವುದು, ವರ್ಷಗಟ್ಟಲೆ ವಿಚಾರಣೆ ನಡೆಸಿ ಯಾರಿಗೋ ಒಂದಷ್ಟು ಜನಕ್ಕೆ ಶಿಕ್ಷೆ ವಿಧಿಸುವುದು ಇತ್ಯಾದಿ ಔಪಚಾರಿಕ ಆಡಳಿತ ಕ್ರಮಗಳಿಂದ ಯಾವುದೇ ಪ್ರಯೋಜನವಾಗದು. ಮೂಲಭೂತ ಚಿಂತನೆಯನ್ನಾಧರಿಸಿದ ಒಳ್ಳೆಯ ರಾಜಕಾರಣ ಮಾತ್ರ ಕೋಮುವಾದ ಮೂಲಭೂತವಾದಗಳೆರಡಕ್ಕೂ ಉತ್ತರವಾಗಬಲ್ಲುದು.

ಡಿಸೆಂಬರ್ ೭, ೨೦೦೭

ಕನ್ನಡ ಸಾಹಿತ್ಯ ಸಮ್ಮೇಳನವಲ್ಲ, ಕನ್ನಡ ಜನ ಸಮ್ಮೇಳನ !

ಕನ್ನಡಿಗರ ಸ್ವಾಭಿಮಾನ ಮತ್ತೊಮ್ಮೆ ಪ್ರದರ್ಶನವಾಗಿದೆ– ಮೊನ್ನೆ ನಡೆದ ಕರ್ನಾಟಕ ರಕ್ಷಣಾ ವೇದಿಕೆಯ ಬೃಹತ್ ಸಮಾವೇಶದಲ್ಲಿ! ಜೈಕಾರ ಹಾಕುವ ಜನಜಂಗುಳಿ, ಕನ್ನಡ ಧ್ವಜಗಳ ಹಾರಾಟ, ಜನಪದ ಕಲಾವಿದರ ಕುಣಿತ, ಸಿನೆಮಾ ನಟ ನಟಿಯರ ಹಾಜರಾತಿ, ಮಠಾಧೀಶರ ಹಾಗೂ ಕೆಲವು ವೃತ್ತಿಪರ ಭಾಷಣಕಾರರ ಧೀರ ಕರೆಗಳು, ಒಂದಷ್ಟು ಸನ್ಮಾನಗಳು, ನಿರ್ಣಯಗಳು– ಇವೇ ಸ್ವಾಭಿಮಾನದ ಪ್ರದರ್ಶನ ಎನ್ನುವುದಾದರೆ, ಹಣವಿದ್ದ ಯಾರಾದರೂ ಇದನ್ನೊಂದು ದಂಧೆಯನ್ನಾಗಿ ಮಾಡಿಕೊಂಡು ಇನ್ನೂ ದೊಡ್ಡ ಪ್ರದರ್ಶನಗಳನ್ನು ನಡೆಸಬಹುದು. ಕರ್ನಾಟಕದ ಹೆಚ್ಚೂ ಕಡಿಮೆ ಎಲ್ಲ ಊರುಗಳಲ್ಲೂ ಶಾಖೆಗಳನ್ನು ಹೊಂದುವಷ್ಟು ಹಾಗೂ ಆಗಾಗ್ಗೆ ಕನ್ನಡಕ್ಕೆ ಸಂಬಂಧಿಸಿದಂತಷ್ಟೇ ಅಲ್ಲ, ವಿವಿಧ ಸಾಮಾಜಿಕ ಕಾರಣಗಳಿಗೂ ಪ್ರದರ್ಶನಗಳನ್ನು ನಡೆಸುವಷ್ಟು 'ಸಂಪದ್ಭರಿತ'ವಾಗಿರುವ ಈ ವೇದಿಕೆ, ಕನ್ನಡವನ್ನು ಬೆಳೆಸುವ ಕೆಲಸಕ್ಕಿಂತ ಹೆಚ್ಚಾಗಿ 'ಇತರರ ಆಕ್ರಮಣ'ದಿಂದ ಕನ್ನಡವನ್ನು ರಕ್ಷಿಸುವ ಕೆಲಸಕ್ಕೇ ತನ್ನನ್ನು ತೆತ್ತುಕೊಂಡಂತಿದೆ! ಕನ್ನಡಿಗರಿಂದಲೇ ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಮೌನದಿಂದಿರುವ ಈ ವೇದಿಕೆಗೆ, ಅನ್ಯಭಾಷಿಕರ ಭಾಷಾಭಿಮಾನವೇ ಸಮಸ್ಯೆಯಾದಂತಿದೆ!

ಕನ್ನಡ ಆಡಳಿತ ಭಾಷೆಯಾಗಲು ಒತ್ತಾಯ ಮಾಡದ, ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ದನಿ ಎತ್ತದ, ಕನ್ನಡ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸರ್ಕಾರದ ಕ್ರಮದ ವಿರುದ್ಧ ಪ್ರತಿಭಟಿಸದ; ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಟಿಕೆಟ್‌ನಿಂದಲೇ ಕನ್ನಡ ಕಳೆದು ಹೋದ, ಕೇಂದ್ರ ಸರ್ಕಾರ ರೈಲ್ವೇ ಟಿಕೆಟ್‌ನಿಂದ ಕನ್ನಡವನ್ನು ಹಿಂತೆಗೆದುಕೊಂಡ ಬಗೆಗೆ ಸಾಂಕೇತಿಕ ಪ್ರತಿಭಟನೆ ನಡೆಸಿ ಸುಮ್ಮನಾದ ಈ ವೇದಿಕೆಗೆ, ಕನ್ನಡ ಅಭಿಮಾನದ ಪ್ರದರ್ಶನವೆಂದರೆ ಅನ್ಯಭಾಷಿಕರ ಭಾಷಾಭಿಮಾನ ಪ್ರದರ್ಶನದ ಹಕ್ಕನ್ನು ಪ್ರಜಾಪ್ರಭುತ್ವ ವಿರೋಧಿ ವಿಧಾನಗಳ ಮೂಲಕ ಹತ್ತಿಕ್ಕುವ ಪೌರುಷವೇ ಆಗಿದೆ. ನಾವು ಕನ್ನಡಿಗರು,

ಕನ್ನಡವನ್ನು ಎಲ್ಲ ಹಂತಗಳಲ್ಲಿ ಆಡಳಿತ ಭಾಷೆಯನ್ನಾಗಿ, ಶಿಕ್ಷಣ ಮಾಧ್ಯಮವನ್ನಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಗಣಕ ಯಂತ್ರಗಳ ಭಾಷೆಯನ್ನಾಗಿ ಬೆಳೆಸಿ ಬಳಸದ ಹೊರತು; ಕನ್ನಡ ಸ್ವಾಭಿಮಾನದ ಹೆಸರಲ್ಲಿ ಎಂತಹುದೇ ಬೃಹತ್ ಪ್ರದರ್ಶನ ನಡೆಸಿದರೂ, ರಾಜ್ಯದ ಅನ್ಯಭಾಷಿಕರ ಭಾಷಾಭಿಮಾನದ ವಿರುದ್ಧ ಎಂತಹ ದಾಳಿ ನಡೆಸಿದರೂ, ಕನ್ನಡ ಉಳಿಯುವುದಿಲ್ಲ ಎಂಬ ಪ್ರಾಥಮಿಕ ಅರಿವೇ ಇವರಿಗೆ ಇಲ್ಲವಾಗಿದೆ. ದಿನೇ ದಿನೇ ಕನ್ನಡಿಗರೇ ಕನ್ನಡವನ್ನು ಒಂದೊಂದೇ ಕ್ಷೇತ್ರದಿಂದ ಕೈಬಿಡುತ್ತಿರುವುದರ ಹಿಂದಿನ ಕಾರಣಗಳಾದರೂ ಏನು ಎಂಬ ಆತ್ಮನಿರೀಕ್ಷಣೆಯ ಪ್ರಶ್ನೆಯನ್ನೂ ಹಾಕಿಕೊಳ್ಳಲಾಗದಷ್ಟು ಸ್ವಯಂವ್ಯಸನಕ್ಕೀಡಾಗಿರುವ ಈ (ಹಾಗೂ ಇತರ ಸಂಘಟನೆಗಳನ್ನೊಳಗೊಂಡ) ಕನ್ನಡ ಚಳುವಳಿ, ಕನ್ನಡಕ್ಕೆ ಸಂಬಂಧಿಸಿದಂತೆ ಶಾಸ್ತ್ರೀಯ ಭಾಷಾ ಸ್ಥಾನಮಾನದಂತಹ ಬರೀ ತೊಗಟೆಯ ವಿಷಯಗಳನ್ನಷ್ಟೇ ಹಿಡಿದು ಕೂಗಾಡುತ್ತಿರುವುದು ಅದರ ಮನಸ್ಸು ಇನ್ನೂ ಮಧ್ಯಯುಗೀನತೆಯಲ್ಲೇ ಸಿಕ್ಕಿಹಾಕಿಕೊಂಡಿರುವುದನ್ನು ತೋರಿಸುತ್ತದಷ್ಟೆ. ಕನ್ನಡಿಗರೇ ಆತ್ಮತಃ ಕನ್ನಡೇತರರಾಗುತ್ತಿರುವಾಗ ಕನ್ನಡದ ರಕ್ಷಣೆ ಯಾರಿಗಾಗಿ, ಯಾರಿಂದ?

ಈ ವಿಷಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಗಂಭೀರವಾಗಿ ಯೋಚಿಸಿದಂತಿಲ್ಲ. ಅದೂ ಆಗಾಗ್ಗೆ ಈ ತೊಗಟೆ ಚಳುವಳಿಕಾರರ ಜೊತೆಗೇ ಗುರುತಿಸಿಕೊಳ್ಳುವಷ್ಟರ ಮಟ್ಟಿಗೆ ಅಸಹಾಯಕವಾಗಿದೆ, ದುರ್ಬಲವಾಗಿದೆ! ವರ್ಷಕ್ಕೊಮ್ಮೆ ನಡೆಸುವ ಸಾಹಿತ್ಯ ಸಮ್ಮೇಳನಗಳ ಹೊರತಾಗಿ ಅದರಿಂದ ಕನ್ನಡದ ಕೆಲಸವೆಂದು ಕರೆಯಬಹುದಾದ ಯಾವ ಕೆಲಸವೂ ನಡೆಯುತ್ತಿಲ್ಲ. ಅದರ ಸ್ಥಳೀಯ ಶಾಖೆಗಳಂತೂ, ಆಡಳಿತ ಮಾಧ್ಯಮ, ಶಿಕ್ಷಣ ಮಾಧ್ಯಮ, ಗಣಕ ಮಾಧ್ಯಮದಂತಹ ಪ್ರಾಣದಾಯಿ ವಿಷಯಗಳ ಪರಿವೆಯೇ ಇಲ್ಲದಂತೆ, ದತ್ತಿ ಉಪನ್ಯಾಸ, ವಸಂತೋತ್ಸವ, ಸಾಹಿತ್ಯ ಹುಣ್ಣಿಮೆಗಳಂತಹ ಸ್ಥಳೀಯ ಪುಢಾರಿಗಳನ್ನು ಒಲೈಸುವ ಪುಡಿ ಕಾರ್ಯಕ್ರಮಗಳನ್ನಷ್ಟೇ ಹಾಕಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಸಾರಿಕೊಳ್ಳಲು ಯತ್ನಿಸುತ್ತಿವೆ. ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ಕ್ರಮದ ವಿರುದ್ದ ದೊಡ್ಡ ಗುಟುರು ಹಾಕಿದ ಸಾಹಿತ್ಯ ಪರಿಷತ್ತು ನಂತರ ಮಾಡಿದ್ದಾದರೂ ಏನು?

ಈಗ ಸಾಹಿತ್ಯ ಪರಿಷತ್ತು ಉಡುಪಿಯಲ್ಲಿ ಮತ್ತೊಂದು ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆ ನಡೆಸಿದೆ. ಇದಕ್ಕೆ ಪ್ರತಿಯಾಗಿ ಕೆಲವು ಸ್ಥಳೀಯರು 'ಸೌಹಾರ್ದ ಸಾಹಿತ್ಯ ಸಮ್ಮೇಳನ' ನಡೆಸಲು ಹೊರಟಿದ್ದಾರೆ. ಅಂದರೆ ಪರಿಷತ್ತಿನ ಸಮ್ಮೇಳನದಲ್ಲಿ ಸೌಹಾರ್ದದ ಕೊರತೆ ಇದೆ ಎಂದೆ? ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳ ವಿರುದ್ಧ ಸಮ್ಮೇಳನ ನಡೆಸುತ್ತಿರುವುದು ಇದು ಮೊದಲ ಸಲವೇನಲ್ಲ. ಮೊದಲ ಬಂಡಾಯ ಸಮ್ಮೇಳನದ ಪೌರೋಹಿತ್ಯ ವಹಿಸಿದ್ದವರೇ ಇಂದು ಪರಿಷತ್ತಿನ ಪೌರೋಹಿತ್ಯ ವಹಿಸಿದ್ದರೂ, ಈ ಬಂಡಾಯದ ಹಾವಳಿ ನಿಂತಿಲ್ಲವೆಂದರೆ, ಪರಿಷತ್ತಿನ ಮೂಲ ಸ್ವರೂಪದಲ್ಲೇ ಏನೋ ಐಬಿದೆ ಎಂದೇ ಅರ್ಥ. ಬದಲಾದ ಕಾಲ ಸಂದರ್ಭಕ್ಕೆ ತನ್ನನ್ನು ಒಗ್ಗಿಸಿಕೊಳ್ಳಲು ನಿರಾಕರಿಸುವಂತಹ ಮೂಲ ಜಡತೆ ಅದರಲ್ಲಿದ್ದಂತಿದೆ.

ಈಚಿನ ವರ್ಷಗಳಲ್ಲಿ ಇದರ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆ, ಅದರಲ್ಲಿ ನಡೆಯುವ ವಿವಿಧ ರೀತಿಯ ಚಿತಾವಣೆಗಳನ್ನು ಗಮನಿಸಿದವರಾರಿಗೂ ಪರಿಷತ್ತಿನ ಪದಾಧಿಕಾರಿಗಳ ಬಗ್ಗೆ ಗೌರವ ಮೂಡಲಾರದು.

ಆದರೂ ಇದು ನಡೆಸುವ ಸಮ್ಮೇಳನಗಳಿಗೆ ಜನ ಮುಗಿಬೀಳುತ್ತಾರೆ. ಕಾರಣ ಅದನ್ನು ಒಂದು ಜನಜಾತ್ರೆಯಂತೆಯೇ ಏರ್ಪಡಿಸಲಾಗುತ್ತಿದೆ. ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳ ಧನಸಹಾಯ ಪಡೆದು ಏರ್ಪಾಡಾಗುವ ಈ ವಾರ್ಷಿಕ ಸಾಹಿತ್ಯ ಜಾತ್ರೆ ಬಹುಶಃ ಕರ್ನಾಟಕಕ್ಕೇ ವಿಶಿಷ್ಟವಾದದ್ದು. ಬೇರೆ ಯಾವ ರಾಜ್ಯದಲ್ಲೂ ಸಾಹಿತ್ಯದ ಹೆಸರಲ್ಲಿ ಈ ಪ್ರಮಾಣದಲ್ಲಿ ಜನ ಸೇರುವುದಿಲ್ಲ. ಸೇರಿದರೆ ಸಾಹಿತಿಗಳಷ್ಟೇ ಸೇರುವುದು. ಆದರೆ ನಮ್ಮ ಸಾಹಿತ್ಯ ಸಮ್ಮೇಳನಗಳಿಗೆ ಸಾಹಿತಿಗಳಿಗಿಂತ ಸಾರ್ವಜನಿಕರೇ ಹೆಚ್ಚು ಸೇರುವುದು! ಅದೂ ಲಕ್ಷ ಲಕ್ಷಗಟ್ಟಲೆ! ಸರ್ಕಾರಿ ನೌಕರರಿಗೆ 'ರಜೆ' ಸೌಲಭ್ಯವನ್ನೂ ಒದಗಿಸುವುದರಿಂದ ಬಹುಜನಕ್ಕೆ ಇದು ವಾರ್ಷಿಕ ಸಾಂಸ್ಕೃತಿಕ ವಿಹಾರಯಾತ್ರೆಯೂ ಹೌದು. ನಾಲ್ಕಾರು ವರ್ಷಗಳ ಹಿಂದೆ ತುಮಕೂರು ಸಾಹಿತ್ಯ ಸಮ್ಮೇಳನಕ್ಕಾಗಿ ಸರ್ಕಾರಿ ನೌಕರರಿಂದ ದೇಣಿಗೆ ಪಡೆದದ್ದೇ ತಪ್ಪಾದಂತೆ, ಅವರ ದೂರದೂರಿನ ಬಂಧು- ಬಾಂಧವರೂ ಸಮ್ಮೇಳನಕ್ಕೆ ಮುಗಿಬಿದ್ದು ಊಟ- ತಿಂಡಿಗಳ ವ್ಯವಸ್ಥೆಯನ್ನೇ ಅಸ್ತವ್ಯಸ್ತಗೊಳಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಸಾಹಿತ್ಯ ಸಮ್ಮೇಳನದ ನಿಜವಾದ ಆಕರ್ಷಣೆ ಎಂದರೆ ಊಟ ತಿಂಡಿಗಳೇ! ಸಮ್ಮೇಳನದ ಸಾಹಿತ್ಯ ಕಾರ್ಯಕ್ರಮಗಳಿಗಿಂತ ಮುಂಚೆ ಪ್ರಚಾರ ಸಿಗುವುದು ಸಮ್ಮೇಳನದ ವಿಶಿಷ್ಟ ಭಕ್ಷ್ಯ ಭೋಜ್ಯಗಳಿಗೇ! ಹಾಗಾಗಿಯೇ, ನಾಲಿಗೆ ರುಚಿಯ ಮುದುಕ ಮುದುಕಿಯರು ಸುಲಭ ದರದಲ್ಲಿ ಭಕ್ಷ್ಯ ಭೋಜ್ಯಗಳನ್ನು ಸವಿಯುವ ದೃಷ್ಟಿಯಿಂದ ನೂರಾರು ಮೈಲಿಗಳ ದೂರದಿಂದ ಸಮ್ಮೇಳನಕ್ಕಿಂತ ಒಂದೆರಡು ದಿನ ಮುಂಚೆಯೇ ಹಾಜರಾಗಿ ಊಟ- ವಸತಿಗಳಿಗಾಗಿ ಸ್ಥಳೀಯ ಸಂಘಟಕರನ್ನು ಕಾಡುವುದು ಪ್ರತಿ ಸಮ್ಮೇಳನದಲ್ಲೂ ಸಾಮಾನ್ಯ ದೃಶ್ಯ! ಹೋದ ಬಾರಿಯ ಶಿವಮೊಗ್ಗ ಸಮ್ಮೇಳನ ನಮ್ಮ ಹಿರಿಯ ಜಾನಪದ ತಜ್ಞ ಮುದೇನೂರು ಸಂಗಣ್ಣ ಅವರ ಮಾತುಗಳಲ್ಲೇ ಹೇಳುವುದಾದರೆ, 'ದೆವ್ವನಂತಹ ಸಮ್ಮೇಳನ'! ಆ ಜನ, ಆ ಧೂಳು, ಆ ವಿವಾದ, ಆ ಹೊಡೆದಾಟ, ಆ ಪೋಲೀಸು, ಆ ಊಟ, ಅದಕ್ಕಾಗಿ ಆ ಉದ್ದನೆ ಸರತಿ ಸಾಲು, ನಿದ್ದೆಯಲ್ಲಿದ್ದ ಜನರಿಗೆ ತೊಂದರೆ ಕೊಡುತ್ತ ಬೆಳಗಿನ ಜಾವದವರೆಗೆ ನಡೆದ ಆ ಬುರ್ನಾಸು ಕವಿಗೋಷ್ಠಿ, ಪುಸ್ತಕ ಹಾಗೂ ಬಟ್ಟೆಯಂಗಡಿಗಳಲ್ಲಿ ನಡೆದ ವ್ಯಾಪಾರ ಹಾಗೂ ಕಳ್ಳತನ! ಹೀಗೆ ಎಲ್ಲ ವಿಷಯಗಳಲ್ಲೂ ದಾಖಲೆ ನಿರ್ಮಿಸಿದ ಸಮ್ಮೇಳನವದು. ಇಲ್ಲಿ ಯಾರಿಗೂ ವಿಚಾರ ಮುಖ್ಯವಿರಲಿಲ್ಲ. ಸದ್ದು- ಗದ್ದಲ- ಸಡಗರ- ಸಂಭ್ರಮ ಮುಖ್ಯ. ಊಟ- ನಿದ್ದೆ- ವಿಚಾರ- ಗದ್ದಲ- ಜಗಳ- ವ್ಯಾಪಾರ- ಕಳ್ಳತನ ಒಟ್ಟಿಗೇ ನಡೆಯುವ ಇಲ್ಲಿ ಯಾರೋ ಭಾಷಣ ಮಾಡುತ್ತಿರುತ್ತಾರೆ, ಯಾರದೋ ಪುಸ್ತಕ ಬಿಡುಗಡೆಯಾಗುತ್ತಿರುತ್ತದೆ, ಯಾರಿಗೋ ಸನ್ಮಾನ ನಡೆದಿರುತ್ತದೆ, ಯಾರೋ ನಿರ್ಣಯ ಓದುತ್ತಿರುತ್ತಾರೆ, ಯಾರೋ ಚಪ್ಪಾಳೆ ತಟ್ಟಿ ಅನುಮೋದಿಸುತ್ತಿರುತ್ತಾರೆ, ಯಾರೋ ಸಮಾರೋಪ ಭಾಷಣ ಮಾಡುತ್ತಿರುತ್ತಾರೆ.

ಜನ ಸುಮ್ಮನೆ ನಿದ್ದೆಗಣ್ಣಿನಲ್ಲೋ ಬೆರಗುಗಣ್ಣಿನಲ್ಲೋ ನೋಡುತ್ತಿರುತ್ತಾರೆ. ಎಚ್ಚರ ಕಾಪಾಡಿಕೊಳ್ಳಲು ಆಗಾಗ್ಗೆ ತಾವೂ ಚಪ್ಪಾಳೆ ತಟ್ಟುತ್ತಿರುತ್ತಾರೆ.

ಹೀಗಾಗಿ ಸಾಹಿತ್ಯ ಸಮ್ಮೇಳನವೆಂದರೆ, ಜನ ಸಾಮಾನ್ಯರೂ ಆಯಾಸವಿಲ್ಲದೇ ಆನಂದಿಸಬಲ್ಲ ಒಂದು ಯಶಸ್ವಿ ಅಸಂಗತ ನಾಟಕವಿದ್ದಂತೆ. ಆದರೂ ನನ್ನಂತಹವರು ಇಷ್ಟಪಟ್ಟು ಸಾಹಿತ್ಯ ಸಮ್ಮೇಳನಕ್ಕೆ ಹೋಗುತ್ತೇವೆ. ಜೀವನದಲ್ಲಿ ಆಗಾಗ್ಗೆ ಇಂತಹ ಅಸಂಗತ ಸಂಭ್ರಮ– ಸಂತೋಷಗಳು ಅಗತ್ಯವಾದ್ದರಿಂದ. ಅಲ್ಲಿ ಕರ್ನಾಟಕದ ವೈವಿಧ್ಯಮಯ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ರೂಪಗಳು ಎದುರಾಗುತ್ತವೆ. ಅಲ್ಲಿ ತಮ್ಮ ಪುಸ್ತಕ, ಔಷಧಿ, ಬಟ್ಟೆ ಇತ್ಯಾದಿಗಳನ್ನು ಮಾರಾಟ ಮಾಡಲು ಬರುವ ಜನರನ್ನು ಗಮನಿಸುವುದೇ ಒಂದು ಮೋಜಿನ ಸಂಗತಿ. ಇನ್ನು ವಿಚಾರಗಳಿಗೆ, ವಿವಾದಗಳಿಗೆ, ಕಾವ್ಯಕ್ಕೆ, ಪುಸ್ತಕಗಳಿಗೆ ಜನಸ್ತೋಮ ಪ್ರತಿಕ್ರಿಯಿಸುವ ರೀತಿ– ನೀತಿಗಳನ್ನು ನೋಡುವುದೇ ಇನ್ನೊಂದು ಮೋಜು! ಬಹುದಿನಗಳಿಂದ ಕಾಣದ ಸ್ನೇಹಿತರನ್ನು ಕಾಣಲು, ನಮ್ಮೂರಿನಲ್ಲಿ ಸಿಗದ ಪುಸ್ತಕ ಕೊಳ್ಳಲು, ಎಲ್ಲೋ ಓದಿ ಮೆಚ್ಚಿದ್ದ ಲೇಖಕರ ಮುಖ ದರ್ಶನ ಮಾಡಲು– ಸಾಧ್ಯವಾದರೆ ಮಾತಾಡಿಸಲು, ಸಹನೆ ಹಾಗೂ ತ್ರಾಣ ಇದ್ದರೆ ಸುಲಭ ದರದಲ್ಲಿ ಭಕ್ಷ್ಯ ಭೋಜ್ಯ ಸವಿಯಲು– ಹೀಗೆ ವಿವಿಧ ಉದ್ದೇಶಗಳಿಂದ ಜನ ಬರುತ್ತಾರೆ. ಹಾಗೆ ನೋಡಿದರೆ ಇದನ್ನು ಕನ್ನಡ ಸಾಹಿತ್ಯ ಸಮ್ಮೇಳನವೆಂದು ಕರೆಯುವುದು ಉಚಿತವಾಗಲಾರದು. ಇದು ಕರ್ನಾಟಕ ಜನ ಸಮ್ಮೇಳನ. ಇದನ್ನು ಹಾಗೆಂದು ಭಾವಿಸಿ ಹೋಗುವುದೇ ಒಳ್ಳೆಯದು. ಹಾಗೇ ಪರಿಷತ್ತು ಇದನ್ನು ಆ ಭಾವನೆಯಿಂದಲೇ ಸಂಘಟಿಸಿದರೆ ಇನ್ನೂ ಒಳ್ಳೆಯದು. ಇಲ್ಲಿನ ಸಾಹಿತ್ಯ– ಸಂಸ್ಕೃತಿ ಚರ್ಚೆಗಳಿಂದ ಯಾರಿಗಾದರೂ ಪ್ರಯೋಜನವಾದ; ಹಾಗೇ ಇದರ ನಿರ್ಣಯಗಳು ಜಾರಿಯಾದ ಸಂಗತಿ ಇನ್ನೂ ಬೆಳಕಿಗೆ ಬರಬೇಕಿದೆ

ಪರಿಸ್ಥಿತಿ ಹೀಗಿರುವಾಗ, ಕೆಲವು ಗೆಳೆಯರು ಉಡುಪಿಯಲ್ಲಿ ಪ್ರತಿ ಸಮ್ಮೇಳನವೊಂದನ್ನು ಏಕೆ ಮಾಡಹೊರಟಿರುವರೋ ತಿಳಿಯದು! ಸ್ಥಳೀಯ ಸಂಘಟಕರು ಒಂದು ರಾಜಕೀಯ ನಿಲುವಿಗೆ ಬದ್ಧರಾದವರೆಂದೇ? ಹಾಗಾದರೆ, ಪ್ರತಿ ಸಮ್ಮೇಳನ ಮಾಡ ಹೊರಟಿರುವವರು? ಇವರು ಪರಿಷತ್ತಿನ ಸಮ್ಮೇಳನಕ್ಕೆ ಸಲ್ಲದ ರಾಜಕೀಯ ಹಾಗೂ ಸಾಂಸ್ಕೃತಿಕ ಮಹತ್ವ ಕೊಟ್ಟು ತಾವೂ ಮಹತ್ವ ಪಡೆಯಲು ಹೊರಟಂತಿದೆ! ಹಾಗೆ ನೋಡಿದರೆ, ಈ ಪ್ರತಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ಮಹನೀಯರ ಸಾಹಿತ್ಯಿಕ ಮಹತ್ವವಾದರೂ ಏನು? ಇಂತಹ ಅಸಾಹಿತ್ಯಕ ನೆಲೆಯ ಸವಾಲಿನಿಂದ ಸಾಹಿತ್ಯ ಸಮ್ಮೇಳನದ ಗುಣಮಟ್ಟವನ್ನು ಸುಧಾರಿಸಲು ಸಾಧ್ಯವೇ? ಅಥವಾ ಇವರ ಉದ್ದೇಶವೇ ಬೇರೆ ಏನಾದರೂ ಇದೆಯೇ? ಕಾದು ನೋಡಬೇಕು. ಆದರೆ ಕರ್ನಾಟಕದ ಈ ವಿಶಿಷ್ಟ ಜನಜಾತ್ರೆ, ಸಮ್ಮೇಳನದಿಂದ ಸಮ್ಮೇಳನಕ್ಕೆ ರಾಜಕೀಯ ಮೇಲಾಟದ ವೇದಿಕೆಯಾಗಿ ಪರಿವರ್ತಿತವಾಗುತ್ತಿರುವುದು ಮಾತ್ರ ದುರದೃಷ್ಟಕರ.

ಡಿಸೆಂಬರ್ ೧೪, ೨೦೦೭

ನರೇಂದ್ರ ಮೋದಿ ಎಂಬ ರಾಷ್ಟ್ರೀಯ ಸವಾಲು !

ಈ ವಾರವೆಲ್ಲ ನರೇಂದ್ರ ಮೋದಿಯದೇ ರಾಷ್ಟ್ರೀಯ ಸುದ್ದಿ. ಈವರೆಗೆ ಈ ಬಾರಿಯ ವಿಧಾನಸಭಾ ಚುನಾವಣೆಗಳಲ್ಲಿ, ತಾವು ಸಾಧಿಸಿರುವ 'ಅಭಿವೃದ್ಧಿ'ಯ ಹೆಸರಲ್ಲಿ ಮತ ಯಾಚಿಸುತ್ತಿದ್ದ ಮೋದಿ, ತಮ್ಮ ರಾಜಕೀಯ 'ಪರಿಸ್ಥಿತಿ' ತಾವು ಊಹಿಸಿದ್ದಕ್ಕಿಂತ ಜಟಿಲಗೊಳ್ಳುತ್ತಿದೆ ಎಂಬ ಅನುಮಾನ ಆರಂಭವಾಗುತ್ತಿದ್ದಂತೆ; ಭಯೋತ್ಪಾದನೆ, ರಾಷ್ಟ್ರ ರಕ್ಷಣೆ ಹಾಗೂ ಧರ್ಮರಕ್ಷಣೆಗಳ ಹೆಸರಲ್ಲಿ ಮತೀಯತೆಯನ್ನು ಪ್ರಚೋದಿಸುವ ಅಸಾಂವಿಧಾನಿಕ ಕೆಲಸಕ್ಕೆ ಕೈ ಹಾಕಿದ್ದಾರೆ.

ಸೊಹ್ರಾಬುದ್ದೀನ್ ಶೇಖ್ ಎಂಬ ಕಳ್ಳಸಾಗಣೆ ಆಪಾದಿತನನ್ನು, ಆತ ಮೋದಿಯನ್ನು ಕೊಲ್ಲಲೆಣಿಸಿದ್ದ ಎಂಬ ಅನುಮಾನದ ಮೇಲೆ 'ಪೋಲೀಸ್ ಹುಸಿ ಘರ್ಷಣೆ'ಯೊಂದರಲ್ಲಿ ಕೊಲೆ ಮಾಡಲಾಗಿದೆ ಎಂಬ ಮೊಕದ್ದಮೆ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿರುವಾಗಲೇ ಮೋದಿ; 'ಆ ಭಯೋತ್ಪಾದಕನನ್ನು ಕೊಲ್ಲದೆ ಇನ್ನೇನು ಮಾಡಬೇಕಿತ್ತು?' ಎಂಬರ್ಥದ ಪ್ರಶ್ನೋತ್ತರವನ್ನು ತನ್ನ ಚುನಾವಣಾ ಪ್ರಚಾರ ಸಭೆಯಲ್ಲಿ ನಡೆಸಿ, ಜನರಲ್ಲಿ ತೀವ್ರವಾಗಿ ಕೋಮು ಭಾವನೆಯನ್ನು ಕೆರಳಿಸುವ ಕೆಲಸ ಮಾಡಿದ್ದಾರೆ. ಇದು, ಕಾನೂನು ಪಾಲನೆಯನ್ನು ಸಂವಿಧಾನದ ನಿಯಮಗಳ ಪ್ರಕಾರವೇ ನಿರ್ವಹಿಸುವುದಾಗಿ ಪ್ರಮಾಣವಚನ ಸ್ವೀಕರಿಸಿದ ಯಾವುದೇ ವ್ಯಕ್ತಿ, ಅಪ್ಪಿ ತಪ್ಪಿ ಕೂಡಾ ಮಾಡಬಾರದ ಹೀನ ಅಪರಾಧ. ಈ ಬಗ್ಗೆ ಈಗಾಗಲೇ ಮಾಧ್ಯಮಗಳಲ್ಲಿ ಬಿಸಿ ಬಿಸಿ ಚರ್ಚೆ ಶುರುವಾಗಿದೆ. ಮಾನವ ಹಕ್ಕು ಚಳುವಳಿಗಾರರು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ಇಂತಹ ರಾಜಕೀಯ ಅಪರಾಧಗಳ ವಿರುದ್ಧ ಸದಾ ನ್ಯಾಯಾಂಗ ಹೋರಾಟ ನಡೆಸುತ್ತಿದ್ದ ತಮ್ಮ ತಂದೆ ಶಾಂತಿಭೂಷಣರ ಸತ್ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ನ್ಯಾಯವಾದಿ ಪ್ರಶಾಂತ್ ಭೂಷಣ್, ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು

ಸಿದ್ಧತೆ ನಡೆಸಿದ್ದಾರೆ. ಎಲ್ಲಕ್ಕಿಂತ ಮುಖ್ಯವೆಂದರೆ, ಸೊಹ್ರಾಬುದ್ದೀನ್ ಮೊಕದ್ದಮೆಯಲ್ಲಿ ಗುಜರಾತ್ ಪೋಲೀಸರ ಪರವಾಗಿ ವಾದಿಸಲು ಗುಜರಾತ್ ಸರ್ಕಾರದಿಂದ ನೇಮಕವಾಗಿದ್ದ ಸುಪ್ರಸಿದ್ಧ ವಕೀಲ ಕೆ.ಟಿ. ತುಳಸಿ, ಮೋದಿಯ ಕೋಮುವಾದಿ ರಾಜಕಾರಣವನ್ನು ಖಂಡಿಸಿ ತಾವು ಈ ಮೊಕದ್ದಮೆಯಿಂದ ಹಿಂದೆ ಸರಿಯುವುದಾಗಿ ಪ್ರಕಟಿಸಿದ್ದಾರೆ.

ಆಶ್ಚರ್ಯವೆಂದರೆ, ಇಷ್ಟೆಲ್ಲ ಮುಜುಗರಗಳ ನಡುವೆಯೂ ಬಿಜೆಪಿಯ ರಾಷ್ಟ್ರೀಯ ನಾಯಕರು ಮೋದಿಯ ಬೆಂಬಲಕ್ಕೆ ನಿಂತಿದ್ದಾರೆ! ಸೋನಿಯಾ ಗಾಂಧಿ ಮೋದಿಯನ್ನು ಓರ್ವ 'ಮರಣದ ವರ್ತಕ' (ಅಂದರೆ, ಕೊಲೆಯ ವ್ಯಾಪಾರಿ) ಎಂದು ತಮ್ಮ ಗುಜರಾತ್ ಚುನಾವಣಾ ಭಾಷಣಗಳಲ್ಲಿ ವರ್ಣಿಸಿ ಪ್ರಚೋದಿಸಿದ್ದಾರೆ ಎಂದು ವಾದಿಸುತ್ತಾ, ಮೋದಿಯ ಮಾತುಗಳನ್ನು ಸಮರ್ಥಿಸಿಕೊಂಡಿದ್ದಾರೆ. ಮೋದಿ ಕೂಡಾ ಚುನಾವಣಾ ಆಯೋಗ ನೀಡಿದ ನೋಟೀಸಿಗೆ ಇದೇ ಲಹರಿಯಲ್ಲಿ ಉತ್ತರಿಸಿದ್ದಾರೆ. ಇಲ್ಲಿ ಮುಖ್ಯವಾದ ಇನ್ನೊಂದು ವಿಷಯವೆಂದರೆ, ಬಿಜೆಪಿ ನಾಯಕರು ಚುನಾವಣಾ ಆಯೋಗಕ್ಕೆ ನಿಷ್ಪಕ್ಷಪಾತವಾಗಿ ವರ್ತಿಸಬೇಕೆಂದು ಬಹಿರಂಗವಾಗಿಯೇ ಸೂಚಿಸುತ್ತಾ, ಪ್ರಚೋದನಾತ್ಮಕ ಭಾಷಣಕ್ಕಾಗಿ ಸೋನಿಯಾ ಗಾಂಧಿಯವರಿಗೂ ನೋಟೀಸ್ ನೀಡಬೇಕೆಂದು ಆಗ್ರಹಿಸಿರುವುದು. ಇದು ಇಡೀ ಪ್ರಕರಣದ ಗುರುತ್ವ ಕೇಂದ್ರವನ್ನೇ ಬದಲಿಸುವ ಹುನ್ನಾರವಲ್ಲದೆ ಮತ್ತೇನಲ್ಲ. ಇದು, ಪ್ರಜಾಪ್ರಭುತ್ವದ ಸೌಲಭ್ಯಗಳನ್ನು ಬಳಸಿಕೊಂಡೇ ಅದರ ಮೂಲ ನೆಲೆಗಳನ್ನು ನಾಶ ಮಾಡ ಹೊರಟಿರುವ ಪ್ರಯತ್ನವೊಂದನ್ನು ಮುಚ್ಚಿ ಹಾಕಲೆಂದೇ ಹುಟ್ಟು ಹಾಕಿರುವ ಗೊಂದಲವಾಗಿದೆ. ಈ ದೃಷ್ಟಿಯಿಂದ ಈಗಾಗಲೇ ಬಿಜೆಪಿ ನಾಯಕ ಯಶವಂತ ಸಿನ್ಹಾ 'ಚುನಾವಣಾ ಆಯೋಗದ ಮೇಲಿನ ಒತ್ತಡ ಯಶಸ್ವಿಯಾಗಿದೆ!' ಎಂದು ಹೇಳಿಕೊಂಡಿರುವುದು ಸಹಜವೇ ಆಗಿದೆ. ಏಕೆಂದರೆ, ಆಯೋಗ ಸೋನಿಯಾ ಗಾಂಧಿಯವರಿಗೂ, ಕಾಂಗ್ರೆಸ್ ಪರವಾಗಿ ಗುಜರಾತ್ ಚುನಾವಣಾ ಪ್ರಚಾರದ ಸಂಚಾಲಕರಾಗಿರುವ ದಿಗ್ವಿಜಯ ಸಿಂಗರಿಗೂ ನೋಟೀಸ್ ಜಾರಿ ಮಾಡಿದೆ!

ಪ್ರಜಾಪ್ರಭುತ್ವವೊಂದರಲ್ಲಿ ಸಾಂವಿಧಾನಿಕ ಸಂಸ್ಥೆಗಳ ಕಾರ್ಯವೈಖರಿಯನ್ನು ಬೀದಿ ರಾಜಕಾರಣದ ಮೂಲಕ ಬಹಿರಂಗವಾಗಿ ಖಂಡಿಸುತ್ತಾ, ಜನತೆಯ ಕಣ್ಣಲ್ಲಿ ಅವುಗಳ ವಿಶ್ವಾಸಾರ್ಹತೆಯನ್ನು ಅನುಮಾನಾಸ್ಪದಗೊಳಿಸುವುದು ಎಲ್ಲ ಫ್ಯಾಸಿಸ್ಟ್ ಶಕ್ತಿಗಳ ತಂತ್ರವಾಗಿದೆ. ಭಯೋತ್ಪಾದಕರ ಕ್ಷಮಾದಾನ ಮನವಿಯನ್ನು ಪರಿಶೀಲನೆಗೆತ್ತಿಕೊಳ್ಳುವುದು, ಭಯೋತ್ಪಾದಕರಿಗೆ ಕೆಳ ನ್ಯಾಯಾಲಯಗಳು ನೀಡುವ ಶಿಕ್ಷೆಗೆ ಉನ್ನತ ನ್ಯಾಯಾಲಯಗಳು ತಡೆ ನೀಡುವುದು, ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವುದು ಇತ್ಯಾದಿ ಸಾಂವಿಧಾನಿಕ ಕ್ರಮಗಳು ತನ್ನ ರಾಜಕೀಯ ಹಿತಾಸಕ್ತಿಗೆ ವಿರುದ್ಧವಾಗಿ ಕಂಡಾಗಲೆಲ್ಲ, ಅವಕ್ಕೆ ಕಾರಣವಾದ ರಾಷ್ಟ್ರಪತಿ ಸ್ಥಾನ, ನ್ಯಾಯಾಲಯಗಳು ಅಥವಾ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಟೀಕೆ ಮಾಡುವ ಮೂಲಕ ಬಿಜೆಪಿ ಪ್ರಜಾಪ್ರಭುತ್ವದ ಉದಾರ ನೆಲೆಗಳನ್ನು

ನಾಶ ಮಾಡಹೊರಟಿದೆ. ತನ್ನ ಸರ್ವಜ್ಞ ಹಾಗೂ ಸರ್ವಶ್ರೇಷ್ಠತೆಯ ಗರ್ವದ ಅಮಲಿನಲ್ಲಿ, ದೇಶದಲ್ಲಿ ಈಗಾಗಲೇ ಹತ್ತಿ ಉರಿಯುತ್ತಿರುವ ಕೋಮು ಬೆಂಕಿಗೆ ತನ್ನ ರಾಜಕೀಯ ಯಶಸ್ಸಿಗಾಗಿ ತುಪ್ಪ ಸುರಿಯುವ ರಾಷ್ಟ್ರವಿರೋಧಿ ಕೆಲಸಕ್ಕೆ ಕೈಹಾಕುತ್ತಿದೆ, ಈ ರಾಷ್ಟ್ರೀಯವಾದಿ ಪಕ್ಷ! ಆಶ್ಚರ್ಯವೆಂದರೆ, ಗುಜರಾತ್ ರಾಜ್ಯದ ಬಿಜೆಪಿ ನಾಯಕರಿಗೆ ಕಾಣುತ್ತಿರುವ ಸತ್ಯ ಈ ರಾಷ್ಟ್ರೀಯ ನಾಯಕರಿಗೆ ಕಾಣದೇ ಹೋಗಿದೆ. ರಾಷ್ಟ್ರೀಯತೆ ಜನಾಧಾರಿತವಾಗಿರದೆ ನೆಲಾಧಾರಿತವಾಗಿದ್ದಾಗ ಉಂಟಾಗುವ ಸಹಜ ಅಪಾಯವಿದು.

ಇಂದು ಗುಜರಾತ್‌ನಲ್ಲಿ ನರೇಂದ್ರ ಮೋದಿ ಬಿಜೆಪಿಯ ಸಾರ್ವಭೌಮ ನಾಯಕ. ಯಾವ ಅರ್ಥದಲ್ಲಿ ಎಂದರೆ, ಮಿಕ್ಕೆಲ್ಲ ನಾಯಕರೂ ಅವರನ್ನು ತೊರೆದು ಹೋಗಿದ್ದಾರೆ! ಕಳೆದು ಚುನಾವಣೆಗಳಲ್ಲಿ ಬಿಜೆಪಿಗೆ ಬೆಂಬಲವಾಗಿ ನಿಂತು ಅದರ ಅಭೂತಪೂರ್ವ ಯಶಸ್ಸಿಗಾಗಿ ಕಾರಣವಾಗಿದ್ದ ಆರೆಸ್ಸೆಸ್ ಹಾಗೂ ಪ್ರವೀಣ್ ತೊಗಾಡಿಯಾ ನೇತೃತ್ವದ ವಿಶ್ವ ಹಿಂದೂ ಪರಿಷತ್ ಮೋದಿಯ ಕಾರ್ಯವೈಖರಿಯಿಂದ ಜಿಗುಪ್ಸೆಗೊಂಡು ಈ ಬಾರಿ ಮೋದಿ ಸೋಲಿಗೆ ಕಂಕಣಬದ್ಧವಾಗಿವೆ. ರಾಜ್ಯದಲ್ಲಿ ರೈತರ ನಿರಂತರ ಆತ್ಮಹತ್ಯೆಗಳಿಂದ ಕಂಗೆಟ್ಟಿರುವ ಬಿಜೆಪಿಯ ಕಿಸಾನ್ ಮೋರ್ಚಾ ಕೂಡಾ ಮೋದಿಯದು ನಗರ ಕೇಂದ್ರಿತ ಅಭಿವೃದ್ಧಿ ಎಂದು ಅಸಮಾಧಾನಗೊಂಡು ಆತನ ವಿರುದ್ಧ ತಿರುಗಿ ಬಿದ್ದಿದೆ. ಮೋದಿಯನ್ನು ರಾಜಕೀಯವಾಗಿ ಪೋಷಿಸಿ ಪ್ರೋತ್ಸಾಹಿಸಿದ್ದ ರಾಜ್ಯದ ಮಾಜಿ ಮುಖ್ಯಮಂತ್ರಿ ಸುರೇಶ್ ಮೆಹ್ತಾ ಆತನ ಹಾವಳಿಯನ್ನು ತಡೆಯಲಾಗದೆ ಪಕ್ಷವನ್ನೇ ಬಿಟ್ಟು ಹೋಗಿದ್ದಾರೆ. ಇನ್ನು ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳಸಿ ಅಧಿಕಾರಕ್ಕೆ ತಂದ ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಕೇಶುಭಾಯಿ ಪಟೇಲ್ ಮೋದಿ ವಿರುದ್ಧ ಬಹಿರಂಗ ಬಂಡಾಯ ಸಾರಿದ್ದಾರೆ. ಗೋಧ್ರಾ ನಂತರದ ಹತ್ಯಾಕಾಂಡದ ಸಂದರ್ಭದಲ್ಲಿ ಮೋದಿಯನ್ನು ಬೆಂಬಲಿಸಿ ಕಟ್ಟಾ ಹಿಂದೂವಾದಿ ಎಂದು ಹೆಸರಾಗಿದ್ದ ಆಗಿನ ಗೃಹ ಮಂತ್ರಿ ಗೋವರ್ಧನ್ ಝಡಪಾಡಿಯಾ ಇಂದು ಮೋದಿಯ ಸರ್ವನಾಶವೇ ತಮ್ಮ ಗುರಿ ಎಂದು ಘೋಷಿಸಿದ್ದಾರೆ. ಗುಜರಾತ್ ಕಂಡ ಸಾಮೂಹಿಕ ನರಹತ್ಯೆ, ಮೋದಿಯ ಪೂರ್ವನಿಯೋಜಿತ ರಾಜಕೀಯ ಕಾರ್ಯಕ್ರಮವಾಗಿತ್ತು ಎಂಬುದನ್ನು ಆಗಿನ ಕಂದಾಯ ಮಂತ್ರಿ ಹರೇನ್ ಪಾಂಡ್ಯ, ತಾವು ಬಾಲ್ಯದಿಂದಲೂ ಮುಗ್ಧವಾಗಿ ನಂಬಿಕೊಂಡು ಬಂದಿದ್ದ ಹಿಂದೂ ರಾಷ್ಟ್ರೀಯವಾದಿ ರಾಜಕಾರಣದ ಪ್ರಭಾವದಿಂದಾಗಿ ಸ್ವಲ್ಪ ಕಾಲ ಮುಚ್ಚಿಟ್ಟಿದ್ದರು. ಆದರೆ, ಮಾನವೀಯ ಸಂವೇದನೆಯ ಒತ್ತಡವನ್ನು ಹತ್ತಿಕ್ಕಿಕೊಳ್ಳಲಾಗದೆ ಅದನ್ನು ಗುಪ್ತವಾಗಿ ಕೆಲವರಲ್ಲಿ ಬಿಚ್ಚಿಟ್ಟಿದ್ದರ ಪರಿಣಾಮವಾಗಿ,ಇನ್ನೂ ಪೂರ್ಣವಾಗಿ ಬಿಡಿಸಲಾಗದ ರಹಸ್ಯ ರೀತಿಯಲ್ಲಿ ಅವರು ಕೊಲೆಯಾದರು. ನಂತರ ಶುರುವಾದ ಸಣ್ಣ ತಳಮಳ ಇಂದು ಬಿಜೆಪಿಯೊಳಗೆ ಮೋದಿ ವಿರೋಧಿಯಾದ ದೊಡ್ಡ ಅಲೆಯಾಗಿ ಮಾರ್ಪಟ್ಟಿದೆ. ಆದರೂ ಮೋದಿ ಗೆಲ್ಲುವ ಅವಕಾಶವೇ ಹೆಚ್ಚಿದೆ ಎಂದರೆ, ಆತನ 'ಮಹಿಮೆ' ಎಂತಹುದಿರಬೇಕು! ಅದಕ್ಕೂ ಮುಖ್ಯವಾಗಿ, ಆ ರಾಜ್ಯದಲ್ಲಿ ಏಕೈಕ ಪ್ರತಿಪಕ್ಷವಾದ ಕಾಂಗ್ರೆಸ್ ಯಾವ ಸ್ಥಿತಿಯಲ್ಲಿರಬಹುದು!

ಮೋದಿ ಸೊಹ್ರಾಬುದ್ದೀನ್ ಮರಣವನ್ನು ಕುರಿತ ತಮ್ಮ ಇತ್ತೀಚಿನ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ರೀತಿ ನೋಡಿ: 'ಹಾಗಾದರೆ ನಾನು ಭಯೋತ್ಪಾದನೆಯನ್ನು ಕುರಿತು ಮಾತನಾಡಲೇಬಾರದೇ? ಒಂದು ರಾಜ್ಯದ ಮುಖ್ಯಮಂತ್ರಿಯಾದ ಕಾರಣಕ್ಕೆ ರಾಷ್ಟ್ರದ ಭದ್ರತೆ ಬಗ್ಗೆ ಕಳಕಳಿಯೇ ಇರಬಾರದೆಂದೇ? ಭಯೋತ್ಪಾದನೆ ಎಂದೊಡನೆ ಏಕೆ ಅಲ್ಪಸಂಖ್ಯಾತರೇ ನೆನಪಾಗಬೇಕು? ಈವರೆಗೆ ಅಭಿವೃದ್ಧಿಯ ಆಧಾರದ ಮೇಲೇ ಮತ ಯಾಚಿಸುತ್ತಿದ್ದ ನಾನು ಸೋನಿಯಾ ಗಾಂಧಿ ಭಾಷಣಕ್ಕೆ ಉತ್ತರ ಕೊಡುವುದು ಅನಿವಾರ್ಯವಾಗಿ ಹಾಗೆ ಮಾತನಾಡಿದೆನಷ್ಟೆ! ಅವರನ್ನು ಬಿಟ್ಟರೆ ಈ ರಾಜ್ಯದಲ್ಲಿ ಪ್ರತಿಪಕ್ಷದವರು ಎಂದು ಕರೆಯಬಹುದಾದವರೇ ಇಲ್ಲವಲ್ಲ!' ಕಾನೂನು ಪ್ರಭುತ್ವದ ಬಗ್ಗೆ ಕಿಂಚಿತ್ತೂ ಗೌರವವಿಲ್ಲದೆ ಕೊಲೆಯೊಂದನ್ನು ನಿರ್ಲಜ್ಜವಾಗಿ ಸಮರ್ಥಿಸಿಕೊಳ್ಳುತ್ತಾ ಆಡಿದ ಅಪರಾಧ ಸಮಾನವಾದ ಮಾತನ್ನು ಮರೆಸುವ ಈ ಹುಸಿ ಆವೇಶದ ದೇಶಪ್ರೇಮದ ಮಾತುಗಳು, ಕಳೆದ ಹತ್ತು ವರ್ಷಗಳಿಂದ ಒಂದು ನಿರ್ದಿಷ್ಟ ಮಾನಸಿಕತೆಗೆ ಒಗ್ಗಿ ಹೋಗಿರುವ ಜನಸ್ತೋಮವನ್ನು ಸುಲಭವಾಗಿ ಮರುಳು ಮಾಡಬಲ್ಲವಂಥವಾಗಿವೆ. ಮೋದಿಯ ಮಹಾನ್ ಪ್ರತಿಭೆ ಎಂದರೆ, ಇಂತಹ ವಾಕ್‌ಶಕ್ತಿಯೇ ಆಗಿದೆ. ಯಾವುದೇ ಜಾತಿಗೆ ಸೇರಿದ್ದರೂ, ಯಾವುದೇ ವೃತ್ತಿಯಲ್ಲಿದ್ದರೂ ಮೂಲತಃ ವ್ಯಾಪಾರಿ ಮನೋಭಾವದ ಜನಸಮುದಾಯವಾದ ಗುಜರಾತಿಗಳು, ಸಹಜವಾಗಿಯೇ ಸಂಪ್ರದಾಯವಾದಿಗಳು ಹಾಗೂ ರಾಜಕೀಯವಾಗಿ ಬಲಪಂಥೀಯರು. ಈ ಪಾರಂಪರಿಕ ಸಂಪ್ರದಾಯವಾದಕ್ಕೂ, ರಾಜಕೀಯ ಬಲಪಂಥೀಯತೆಗೂ ತನ್ನದೇ ಆದ ಒಂದು ಘನತೆಯಿದೆ; ಚೆಲುವೂ ಇದೆ. ಆದರೆ ಈ ಬಲಪಂಥೀಯ ಸಂಪ್ರದಾಯವಾದವನ್ನು ನರೇಂದ್ರ ಮೋದಿ ತಮ್ಮ ಮಾತಿನ ಮೋಡಿಯಿಂದ ಒಂದು ರಾಕ್ಷಸ ಶಕ್ತಿಯಾಗಿ ಪರಿವರ್ತಿಸಿದ್ದಾರೆ.

ದಕ್ಷಿಣ ಏಷ್ಯಾದಲ್ಲೇ ಅತಿ ವೇಗವಾಗಿ ಮುಂದುವರೆಯುತ್ತಿರುವ ಪ್ರದೇಶವೆಂದು ಹೇಳಲಾದ ಗುಜರಾತ್‌ನಲ್ಲಿ ರೈತರು, ಆದಿವಾಸಿಗಳು ಲೆಕ್ಕಕ್ಕೇ ಇಲ್ಲವಾದಂತಾಗಿದ್ದಾರೆ. ಬಂಡವಾಳದಾರರನ್ನೂ, ಅವರ ಹೊಸ ಚೇಲಾಗಳಾದ ಮಧ್ಯಮ ವರ್ಗದವರನ್ನೂ ಖುಷಿಪಡಿಸುವ ಕೈಗಾರಿಕೀಕರಣವನ್ನು ಅಲ್ಲಿ 'ಅಭಿವೃದ್ಧಿ' ಎಂದು ಪ್ರತಿಬಿಂಬಿಸಲಾಗುತ್ತಿದೆ. ಹಾಗಾಗಿಯೇ, ವಿದೇಶಗಳಲ್ಲಿರುವ ಗುಜರಾತಿಗಳೂ ಅಂತರ್ಜಾಲದ ಮೂಲಕ ಮೋದಿ ಪರವಾಗಿ ಚುನಾವಣಾ ಪ್ರಚಾರಕ್ಕೆ ಮುಂದಾಗಿದ್ದಾರೆ. ಮೋದಿ ನಾಯಕತ್ವದಲ್ಲಿ ಗುಜರಾತ್ ಪ್ರಗತಿಪಥದಲ್ಲಿದೆ ಎಂದರೆ ಅಲ್ಲಿನ ಪಾರಂಪರಿಕ ಪಟ್ಟಭದ್ರರಿಗೆ ಅಂತಾರಾಷ್ಟ್ರೀಯ ಮಟ್ಟದ ಲಾಭವೂ, ಸುಖ ಸೌಲಭ್ಯಗಳು ಒದಗುತ್ತಿವೆ ಎಂದಷ್ಟೇ ಅರ್ಥ. ಆದರೆ ಸ್ವತಃ ಮೋದಿ ಒಂದು ನಗಣ್ಯ ಹಾಗೂ ವಂಚಿತ ಜಾತಿಯಿಂದ ಬಂದವರು ಎಂಬುದು ಒಂದು ದೊಡ್ಡ ವಿಪರ್ಯಾಸ. ಕೋಮು ರಾಜಕಾರಣದ ನಿಜವಾದ ಅಪಾಯವಿರುವುದು ಇಲ್ಲೇ. ಅದು ವರ್ತಮಾನದ ಸಾಮಾಜಿಕ ವೈರುಧ್ಯಗಳನ್ನು ಅಪ್ರಸ್ತುತಗೊಳಿಸಿ, ರಾಜಕಾರಣದ ಸಹಜ

ಗತಿಶೀಲತೆಗೇ ತಡೆಯೊಡ್ಡುವುದು ಮತ್ತು ಆ ಮೂಲಕ ರಾಜಕಾರಣದ ಅರ್ಥವನ್ನೇ ವಿಕೃತಗೊಳಿಸುವುದು.

ಇಷ್ಟೆಲ್ಲ ಆದರೂ ಮೋದಿ ಗೆಲ್ಲುವ ಸಂಭವವೇ ಹೆಚ್ಚೆಂದು ಏಕೆ ಹೇಳಲಾಗುತ್ತಿದೆ? ಏಕೆಂದರೆ, ಅಲ್ಲಿ ಮುಖ್ಯವಾಗಿ, ಪ್ರತಿಪಕ್ಷವೆಂಬುದೇ ಇಲ್ಲವಾಗಿದೆ! ಅರ್ಥಾತ್, ಸ್ಥಳೀಯ ಸತ್ಯಗಳನ್ನು ಅರಗಿಸಿಕೊಂಡು ಮೋದಿಗೆ ತಾತ್ವಿಕವಾಗಿ ಹಾಗೂ ಸಂಘಟನಾತ್ಮಕವಾಗಿ ಸವಾಲೊಡ್ಡುವ ನಾಯಕತ್ವವೇ ಇಲ್ಲವಾಗಿದೆ. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಗಳೇ ಅಲ್ಲಿನ ಚುನಾವಣಾ ಪ್ರಚಾರದ ಮುಂದಾಳುಗಳಾಗಬೇಕಿದೆ ಎಂದರೆ, ಪಕ್ಷದ ಸ್ಥಳಿಯ ನಾಯಕತ್ವ, ಮೋದಿ ಸಾರ್ವಭೌಮತ್ವದೆದುರು ಎಷ್ಟು ಕಂಗೆಟ್ಟು ಹೋಗಿರಬೇಕು! ಮೋದಿಯ ಹಿಂದೂ ಕೋಮುವಾದಿ ರಾಜಕಾರಣದ ಬಗ್ಗೆ ಮಾತನಾಡಿದರೆ, ಹಿಂದೂಗಳೆಲ್ಲ ತಮ್ಮ ಪಕ್ಷದ ಕೈಬಿಟ್ಟು ಹೋಗುತ್ತಾರೆ ಎಂಬ ಆತಂಕದಿಂದ ಅದರ ಬಗ್ಗೆ ಮಾತಾಡಲೇ ಹಿಂಜರಿಯುವ ಕಾಂಗ್ರೆಸ್ ತಾನು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ನೇತೃತ್ವ ವಹಿಸಿದ್ದ ಪಕ್ಷ ಎಂದು ಹೇಳಿಕೊಳ್ಳುವ ನೈತಿಕ ಹಕ್ಕನ್ನೇ ಕಳೆದುಕೊಂಡಿದೆ. ಹೀಗಾಗಿಯೇ ಸೋನಿಯಾ ಗಾಂಧಿ ಮತ್ತಿತರ ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ಪರವೇ ಆಗಲಿ, ಬಿಜೆಪಿ ವಿರುದ್ಧವೇ ಆಗಲಿ ಮಾತನಾಡಲಾಗದೆ ಮೋದಿ ವಿರುದ್ಧ ಮಾತನಾಡುವ ದುಃಸ್ಥಿತಿಗೆ ಈಡಾಗಿರುವುದು. ಹೀಗಾಗಿ, ಇಂದು ಗುಜರಾತ್ ಒಂದು ದೊಡ್ಡ ನೈತಿಕ ಬಿಕ್ಕಟ್ಟಿನಲ್ಲಿದೆ.

ಈ ಚುನಾವಣೆಗಳಲ್ಲಿ ಮೋದಿ ಗೆದ್ದರೆ ಆಧುನಿಕ ಭಾರತಕ್ಕೆ ಸೋಲಾದಂತೆ. ಅದು ಬಹು ದಿನಗಳ ಕಾಲ ರಾಷ್ಟ್ರವನ್ನು ಕಾಡುವ ದೊಡ್ಡ ಸವಾಲಾಗುತ್ತದೆ. ಹೀಗಾಗಿ ಚುನಾವಣಾ ಆಯೋಗ ಬಿಜೆಪಿ ರಾಷ್ಟ್ರೀಯ ನಾಯಕತ್ವದ ಒತ್ತಡದಿಂದ ವಿಚಲಿತವಾಗದೆ, ನರೇಂದ್ರ ಮೋದಿ ನಮ್ಮ ಸಂವಿಧಾನದ ಪರಮ ಮೌಲ್ಯಗಳೆನಿಸಿರುವ ಪ್ರಜಾಪ್ರಭುತ್ವ ಹಾಗೂ ಧರ್ಮನಿರಪೇಕ್ಷತೆಗಳ ಹಾದಿ ಬಿಟ್ಟು ನಡೆಯುವವರಿಗೆ ಉಗ್ರ ಹಾಗೂ ಉಜ್ವಲ ಉದಾಹರಣೆಯಾಗದಂತೆ ಎಚ್ಚರಿಕೆ ನೀಡುವ ಸಾಂವಿಧಾನಿಕ ಶಿಸ್ತಿನ ಕ್ರಮ ಕೈಗೊಳ್ಳುವುದು ಅದರ ಸಾಂವಿಧಾನಿಕ ಧರ್ಮವೂ, ಕರ್ತವ್ಯವೂ ಆಗಿದೆ.

ಡಿಸೆಂಬರ್ ೨೧, ೨೦೦೭

ಹುಚ್ಚು ಹೊಳೆಯಲ್ಲಿ ತೇಲುತ್ತಾ ಮುಳುಗುತ್ತಾ...

ಗೆಳೆಯ ಸುಗತಾ ಶ್ರೀನಿವಾಸರಾಜು ಬರೆದ 'ಬೆಂಗಳೂರೇಕೆ ಐ.ಟಿ. ಸಂಸ್ಕೃತಿಯನ್ನು ದ್ವೇಷಿಸುತ್ತದೆ?' ಎಂಬ ವರದಿಯೊಂದು ಹೋದ ವಾರದ 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ವರದಿಯಲ್ಲಿ ಮಾತಾಡಿರುವ ಬೆಂಗಳೂರಿನ ಹಿರಿಯ ನಾಗರೀಕರ ಹಾಗೂ ಅನ್ಯ ವೃತ್ತಿಗಳ ಜನರ ಅಭಿಪ್ರಾಯಗಳಲ್ಲಿ ಹೊಸದೇನಿಲ್ಲವಾದರೂ, ನಮ್ಮ ವಿವೇಕವನ್ನು ಉಳಿಸಿಕೊಂಡು ಜಾಗತೀಕರಣದ ಲಾಭ– ಪ್ರಯೋಜನಗಳನ್ನು ಪಡೆಯಲು ಮುಂದಾಗಬಾರದೇಕೆ ಎಂದು ಪ್ರಶ್ನಿಸುತ್ತಿರುವವರಿಗೆ ಇವುಗಳಲ್ಲಿ ಕೆಲವು ಉತ್ತರಗಳೂ, ಸೂಚನೆಗಳೂ ಇವೆ. ಮುಖ್ಯ ಸೂಚನೆ ಎಂದರೆ, ಒಂದು ಮಿತಿಯನ್ನು ಮೀರಿದ ಹಣದ ಹರಿವು ಎಲ್ಲ ವಿವೇಕವನ್ನೂ ಕೊಚ್ಚಿಕೊಂಡು ಹೋಗಬಲ್ಲುದು ಎಂಬುದು. ಬೆಂಗಳೂರಿನ ಇಂದಿನ ದೊಡ್ಡ ಸಮಸ್ಯೆ ಎಂದರೆ, ಕೆಲವರಿಗೆ ತಮ್ಮ ಬಳಿ ಇದ್ದಕ್ಕಿದ್ದಂತೆ ಬಂದಿರುವ ಅಪಾರ ಹಣವನ್ನು ಹೇಗೆ ಖರ್ಚು ಮಾಡಬೇಕೆಂದು ಗೊತ್ತಾಗದ ದಿಗ್ಭ್ರಮೆಯಲ್ಲಿ ಎಲ್ಲ ವಿವೇಕ ಕಳೆದುಕೊಂಡಿರುವುದೇ ಆಗಿದೆ. ಇವರು 'ಔಟ್‌ಲುಕ್' ವರದಿ ಹೇಳುವಂತೆ, ಬರೀ ಐ.ಟಿ. ಜನರಲ್ಲ. ಬೆಂಗಳೂರಿನ ಐ.ಟಿ.– ಬಿ.ಟಿ. ಆಸ್ಫೋಟದಿಂದ ಪ್ರಯೋಜನ ಪಡೆದುಕೊಂಡಿರುವ ಇತರೆಷ್ಟೋ ವೃತ್ತಿಗಳವರು ಇವರಲ್ಲಿ ಸೇರಿದ್ದಾರೆ. ಉದಾಹರಣೆಗೆ ಭೂ– ವ್ಯವಹಾರ ಮಾಡುವವರು, ಕಟ್ಟಡ ಗುತ್ತಿಗೆದಾರರು, ಷೇರು ದಲ್ಲಾಳಿಗಳು, ಹೊಟೆಲ್– ರೆಸಾರ್ಟ್‌ದಾರರು, ಮನರಂಜನೆ ಹಾಗೂ 'ಅಧ್ಯಾತ್ಮಿಕತೆ'ಯ ಉದ್ಯಮದವರು ಇತ್ಯಾದಿ.

ಇವರೆಲ್ಲ ಸೇರಿ ಕಳೆದ ಐವತ್ತು ವರ್ಷಗಳಲ್ಲಿ ಬೆಂಗಳೂರನ್ನು ಸರಳ ಸುಂದರ ನಗರವನ್ನಾಗಿ ಸಂರಕ್ಷಿಸಿಕೊಂಡು ಬಂದಿದ್ದ ಬಡವರು ಮತ್ತು ಮಧ್ಯಮ ವರ್ಗದವರು ಇಂದು ಇಲ್ಲಿ ಮರ್ಯಾದೆಯಿಂದ ಬಾಳಲಾಗದ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ.

ಮರ್ಯಾದೆಯಿಂದ ಬಾಳುವುದು ಎನ್ನುವುದನ್ನು ಕೇವಲ ಜೀವನ ಮಟ್ಟದ ಮಾತನ್ನಾಗಿ ಮಾತ್ರವಲ್ಲ, ಜೀವನ ಶೈಲಿಯ ಮಾತನ್ನಾಗಿಯೂ ಅರ್ಥ ಮಾಡಿಕೊಳ್ಳಬೇಕಿದೆ. ಕಳೆದ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಬೆಂಗಳೂರು ಒಂದೇ ರಾತ್ರಿಯಲ್ಲಿ ಕುಡಿದದ್ದು ೧೫ ಕೋಟಿ ರೂಪಾಯಿಗಳ ಮದ್ಯವನ್ನು (ರಾಜ್ಯದ ಉಳಿದ ಭಾಗ ಬಳಸಿದ್ದು ೧೦ ಕೋಟಿ ರೂಪಾಯಿಗಳ ಬೆಲೆಯ ಮದ್ಯವನ್ನು!) ಎಂದರೆ, ಬೆಂಗಳೂರು ಒಂದು ಸಂಸ್ಕೃತಿಯಾಗಿ ಎಂತಹ ಮತ್ತಿನಲ್ಲಿರಬೇಕು! ಈ ಮತ್ತಿನಲ್ಲಿ 'ವಿವೇಕ'ವೆಂಬ ಶಬ್ದವೇ ಅರ್ಥಾಂತರಕ್ಕೊಳಗಾಗಿದ್ದರೂ ಸಾಕು!

ಐ.ಟಿ. ಸಂಬಂಧಿತ ಉದ್ಯಮಗಳ ಪಾಳಿ ಕೆಲಸದ ಮಹಿಳೆಯರು ಒಂದಲ್ಲ ಒಂದು ರೀತಿಯಲ್ಲಿ ಸದಾ ಪ್ರಾಣ ಭಯದಿಂದ ಕೆಲಸ ಮಾಡುವಂತಾಗಿರುವುದು– ಇತ್ತೀಚಿನ ದಿನಗಳಲ್ಲಿ ಕೊಲೆಗೆ ಈಡಾಗುತ್ತಿರುವುದೂ– ಆ ಉದ್ಯಮದ ಸ್ವರೂಪವೇ ಪ್ರೇರೇಪಿಸುವ ಜೀವನ ಶೈಲಿಯಿಂದ ಉದ್ಭವಿಸಿರುವ ಅಪಾಯವಾಗಿದೆ ಎಂದು ಅವರ ಜೀವನ 'ಶೈಲಿ'ಗಳನ್ನು ಹತ್ತಿರದಿಂದ ಕಂಡವರ ಅಭಿಪ್ರಾಯವಾಗಿದೆ. ಇಂದು ಮೂಲ ಬೆಂಗಳೂರಿಗರು ಈ ಹೊಸ 'ಸಾಹುಕಾರ'ರನ್ನು ದ್ವೇಷಿಸಲು ಮುಖ್ಯ ಕಾರಣ; ಅವರು ಬೆಂಗಳೂರಿಗೆ ನಿಜವಾಗಿ ಏನನ್ನೂ ಕೊಡದೆ, ತಮ್ಮ ಜೀವನ ಶೈಲಿಗಳ ಒತ್ತಡಗಳು ಹಾಗೂ ಬೇಡಿಕೆಗಳ ಮೂಲಕ ಅದನ್ನು ನಾಶ ಮಾಡತೊಡಗಿರುವುದು. ಭೌತಿಕವಾಗಿ ಹಾಗೂ ಆತ್ಮಿಕವಾಗಿ– ಈ ಎರಡೂ ನೆಲೆಗಳಲ್ಲಿ. ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ಇತ್ತೀಚೆಗೆ ಹೇಳಿರುವವರು ಭಾರತದ ಅತ್ಯಂತ ಶ್ರೇಷ್ಠ ವಿಜ್ಞಾನಿ ಎನಿಸಿರುವ ಡಾ॥ ಸಿ.ಎನ್.ಆರ್.ರಾವ್ ಅವರು. ಅವರು 'ಔಟ್‌ಲುಕ್'ಗಾಗಿ ಸುಗತಾ ಅವರಿಗೆ ಹೇಳಿರುವ ಮಾತುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡುತ್ತಿರುವೆ:

'ನಾನೊಬ್ಬ ನಿಜವಾದ ಬೆಂಗಳೂರಿಗ. ಬಸವನಗುಡಿಯಲ್ಲಿ ಹುಟ್ಟಿ ಬೆಳೆದವನು. ಬೆಂಗಳೂರಿನ ದೊಡ್ಡ ಗುಣ ಎಂದರೆ, ಇಲ್ಲಿ ಸರಳ ಸಂತೋಷಕ್ಕೆ ಅವಕಾಶವಿತ್ತು. ವಿದ್ಯಾರ್ಥಿ ಭವನದಲ್ಲಿ ಒಂದು ಮಸಾಲೆ ದೋಸೆ ತಿಂದು ಕಾಫಿ ಕುಡಿದರೆ ಅದೇ ಒಂದು ದೊಡ್ಡ ಸಂತೋಷ. ಈಗ ಆ ಸಂತೋಷ ಬೆಂಗಳೂರಲ್ಲಿ ಕಾಣೆಯಾಗಿದೆ. ಈಗ ಇದೊಂದು ಭಯಂಕರ ನಗರವಾಗಿ ಬೆಳೆದಿದೆ. ಐ.ಟಿ. ಸ್ಫೋಟದ ಮುನ್ನ ಇಲ್ಲಿ ಕಾವ್ಯ ಹಾಗೂ ಸಂಗೀತ ಹೆಚ್ಚಿರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಈ ನಗರ ಕೊಳೆತು ನಾರುತ್ತಿದೆ– ಐ.ಟಿ. ಕೈಗಾರಿಕೆಯವರು ತಂದು ಒಟ್ಟುತ್ತಿರುವ ಬೌದ್ಧಿಕ ಕಸವೂ ಸೇರಿದಂತೆ, ಎಲ್ಲ ತರದ ಕಸ– ಕೊಳೆ ಊರು ತುಂಬಾ ಬಿದ್ದಿದೆ; ವಾತಾವರಣವನ್ನು ಮಲಿನಗೊಳಿಸಿದೆ.

ಬೆಂಗಳೂರು ಒಂದು ಬೌದ್ಧಿಕ ನಗರವಾಗಿತ್ತು. ಇದನ್ನು ತೋಟಗಳ ನಗರ ಎಂದು ಕರೆಯಲಾಗುತ್ತಿತ್ತಾದರೂ, ಭಾರತದ ಇತರ ನಗರಗಳಿಗಿಂತ ಇಲ್ಲಿ ಹೆಚ್ಚು ವಿಜ್ಞಾನವಿತ್ತು. ಈಗ ಯಾರೂ ಈ ಬಗ್ಗೆ ಮಾತಾಡುವುದಿಲ್ಲ. ಇದು ಈಗ ಐ.ಟಿ. ನಗರ. ನಮ್ಮ ಹೆಚ್ಚೆಚ್ಚು ಯುವಜನರಿಗೆ ಒಳ್ಳೊಳ್ಳೆಯ ಸಂಬಳ ಸಿಗುವಂತಾಗುವುದು ಸಂತೋಷದ ವಿಷಯವೇ. ಆದರೆ ಅದು ಇತರ ವೃತ್ತಿಗಳ ಪ್ರಾಣವನ್ನೇ ಹೀರುವಂತಾಗಬಾರದು. ಕ್ಷಿಪ್ರ ಹಣದ ಹಿಂದೆ

ಬಿದ್ದ ಬಹಳಷ್ಟು ಬುದ್ಧಿವಂತ ಯುವಜನರು ತಮ್ಮ ಬೌದ್ಧಿಕತೆಯ ಬಹು ಕಡಿಮೆ ಮಟ್ಟದ ವೃತ್ತಿಗಳಲ್ಲಿ, ಸಂಬಳದ ಮೇಲಿನ ಕೂಲಿಗಳಂತೆ ಕೆಲಸ ಮಾಡುತ್ತಿದ್ದಾರೆ. ಇದು ವಕ್ರ ಬೆಳವಣಿಗೆ. ಇದರಿಂದ ರಾಷ್ಟ್ರಕ್ಕೂ ಒಳ್ಳೆಯದಾಗದು. ಸಮಾಜದಲ್ಲಿ ಎಲ್ಲ ರೀತಿಯ ಸೃಜನ ಶಕ್ತಿಗಳ ಸಮತೋಲನವಿರಬೇಕು– ಒಳ್ಳೆಯ ಕವಿಗಳಿರಬೇಕು, ಒಳ್ಳೆಯ ಅರ್ಥಶಾಸ್ತ್ರಜ್ಞರಿರಬೇಕು, ಒಳ್ಳೆಯ ಇತಿಹಾಸಕಾರರಿರಬೇಕು, ಅತ್ಯುತ್ತಮ ವಿಜ್ಞಾನಿಗಳೂ, ಎಂಜಿನಿಯರ್‌ಗಳೂ ಇರಬೇಕು. ಐ.ಟಿ.ಯಲ್ಲಿ ಜಗತ್ತಿನಲ್ಲೇ ಅಪೂರ್ವ ಸಾಧನೆ ಮಾಡಿರುವುದಾಗಿ ಹೇಳಿಕೊಳ್ಳುವ ನಮ್ಮ ದೇಶದಲ್ಲಿ, ಕಂಪ್ಯೂಟರ್ ವಿಜ್ಞಾನ ಕ್ಷೇತ್ರದಲ್ಲಿ ಏಕೆ ವರ್ಷಕ್ಕೆ ಕೇವಲ ೨೫ ಪಿ.ಎಚ್.ಡಿ.ಗಳು ಮಾತ್ರ ಸಾಧ್ಯವಾಗುತ್ತಿದೆ? ಇದಕ್ಕೆ ಉತ್ತರ ಕೊಡುವರಾರು?

ಕೆಲವರಿಗೆ ಅಪಾರ ಹಣ ತಂದು ಕೊಟ್ಟಿರುವುದರ ಹೊರತಾಗಿ ಐ.ಟಿ. ಇಲ್ಲಿ ಏನು ಸಾಧಿಸಿದೆ? ತನ್ನದೇ ಆದ ಒಂದು ಉತ್ತಮ ಗುಣಮಟ್ಟದ ವಿಶ್ವವಿದ್ಯಾಲಯವೊಂದನ್ನು ಕಟ್ಟಲು ಸಾಧ್ಯವಾಗಿದೆಯಾ ಅದಕ್ಕೆ? ನಮ್ಮ ಈ ಸಮಾಜ; ಈ ನಗರದ ಮಾತ್ರವಲ್ಲ, ಇಡೀ ಭಾರತದ ಭವಿಷ್ಯವನ್ನು, ನಮ್ಮ ಮೌಲ್ಯ ವ್ಯವಸ್ಥೆಯನ್ನು ವಿಕೃತಗೊಳಿಸುತ್ತಿರುವ ಅನುಕರಣೆಯ ಮೂರ್ತಿಗಳನ್ನೂ, ಉದಾಹರಣೆಗಳನ್ನೂ ನಿರ್ಮಿಸುತ್ತಿದೆ. ನಮ್ಮ ಜನಕ್ಕೆ ಜ್ಞಾನ– ವಿಜ್ಞಾನಗಳ ಬಗ್ಗೆ ಗೌರವವೇ ಹೋಗಿಬಿಟ್ಟಿದೆ. ಹಣ ಹಾಗೂ ವಾಣಿಜ್ಯದ್ದೇ ಸಾಮ್ರಾಜ್ಯವೀಗ. ಐ.ಟಿ. ನಮ್ಮ ಆಧಾರ ಮೌಲ್ಯಗಳನ್ನೇ ನಾಶ ಮಾಡಹೊರಡುವುದಾದರೆ, ಬೆಂಗಳೂರಿಗೂ, ಐ.ಟಿ.ಗೂ ಒಟ್ಟಿಗೇ ಬೆಂಕಿ ಹಾಕಬಹುದು.'

ಸಿ.ಎನ್.ಆರ್. ರಾವ್ ಅವರ ಈ ಸಾತ್ವಿಕ ಕೋಪ, ಸದ್ಯದ ಬೆಂಗಳೂರನ್ನು ಕುರಿತಾದದ್ದಾದರೂ; ಬೆಂಗಳೂರು ಐ.ಟಿ. ಲೋಕ ಪ್ರತಿನಿಧಿಸುವ ಕೆಳ ಮಟ್ಟದ ಬೌದ್ಧಿಕತೆಯೊಂದಿಗೆ ಬಹು ಮೇಲ್ಮಟ್ಟದ ಜೀವನ ಶೈಲಿ ಸಾಧ್ಯವಾಗಿ, ಅದಕ್ಕೊಂದು 'ಗೌರವಾನ್ವಿತತೆ' ಒದಗಿಸಿರುವ ಹೊಸ ಜೀವನ ಸಂಸ್ಕೃತಿಯನ್ನು ಕುರಿತಾದದ್ದೂ ಆಗಿದೆ ಎಂಬುದನ್ನೂ ನಾವು ಗಮನಿಸಬೇಕು. ದಿನೇ ದಿನೇ ಬಹು ಜನಪ್ರಿಯವಾಗುತ್ತಿರುವ– ಅಂದರೆ ಈ 'ಗೌರವಾನ್ವಿತತೆ'ಗೆ ಪಾತ್ರವಾಗುವ ಹಂಬಲ ಇಟ್ಟುಕೊಂಡವರ– ಈ 'ಕು'ಸಂಸ್ಕೃತಿ ಉಂಟು ಮಾಡುತ್ತಿರುವ ಸಾಮಾಜಿಕ ಒತ್ತಡಗಳನ್ನು ಯಾರೂ ಅಷ್ಟು ಗಂಭೀರವಾಗಿ ಗಮನಿಸಿದಂತಿಲ್ಲ: ಮಕ್ಕಳು ಪೋಷಕರ ನಿರೀಕ್ಷೆ ಮುಟ್ಟಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿವೆ; ಹದಿಹರೆಯಕ್ಕೂ ಕಾಲಿಡದ ಹುಡುಗರು ಸುಪಾರಿ ಪಡೆದು ಕೊಲೆಗಳಿಗೆ ಕೈ ಹಾಕತೊಡಗಿದ್ದಾರೆ, ಉನ್ನತ ಮಟ್ಟದ ಶಾಲೆಗಳಲ್ಲಿ ಮಕ್ಕಳು ತಮ್ಮ ಬಾಲ ಜಗಳಗಳನ್ನು ಅಪ್ಪನ ಪಿಸ್ತೂಲನ್ನು ಬಳಸಿ ಪರಿಹರಿಸಕೊಳ್ಳತೊಡಗಿದ್ದಾರೆ; ಮಕ್ಕಳಿಗೆ ಉದಾಹರಣೆಗಳಾಗಬೇಕಾಗಿರುವ ಉಪಾಧ್ಯಾಯರುಗಳೇ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಬದಲಾಯಿಸುವುದನ್ನು ಒಂದು ದಂಧೆ ಮಾಡಕೊಳ್ಳತೊಡಗಿದ್ದಾರೆ; ವಿಶ್ವವಿದ್ಯಾಲಯಗಳ ಪ್ರಶ್ನೆ ಪತ್ರಿಕೆಗಳು ಯಾವುದೇ ಅಡೆತಡೆ ಇಲ್ಲದೆ ಒಂದಾದರ ಮೇಲೊಂದರಂತೆ ಬಯಲಾಗುತ್ತಲೇ ಇವೆ; ಕಣ್ಣೆದುರಿಗೇ ನೂರಾರು ಕಾರ್ಮಿಕರನ್ನೂ, ಯಂತ್ರಗಳನ್ನೂ ಬಳಸಿಕೊಂಡು ಸಾವಿರಾರು ಎಕರೆ

ಭೂಮಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ, ಪ್ರಭುತ್ವಕ್ಕೆ ಅದನ್ನು ಗಮನಿಸಲಾಗದಂತಹ ಕುರುಡು ಉಂಟಾಗಿದೆ; ಸರ್ಕಾರಿ ಖಜಾನೆಯನ್ನು ಲೂಟಿ ಹೊಡೆದು ಮೂಟೆಗಟ್ಟಲೆ ಹಣ ಸಂಗ್ರಹಿಸಿಟ್ಟುಕೊಂಡು, ಆದರೆ ಕಿಂಚಿತ್ತೂ ಸಂಕೋಚವಿಲ್ಲದೆ ರಾಷ್ಟ್ರ ನಿರ್ಮಾಣದ ಮೌಲ್ಯಗಳ ಬಗ್ಗೆ ಮಾತಾಡುವ ರಾಜಕಾರಣಿಗಳು; ಹಾಗೂ ಅದಕ್ಕಿಂತ ಮುಖ್ಯವಾಗಿ, ಎಲ್ಲ ಗೊತ್ತಿದ್ದೂ ಅವರ ಮಾತುಗಳಿಗೆ ಮೆಚ್ಚುಗೆಯಿಂದ ಚಪ್ಪಾಳೆ ತಟ್ಟುವ– ಆತ್ಮಸಾಕ್ಷಿ ಕಳೆದುಕೊಂಡ– ಮಹಾ ಘಾತುಕ ಜನಸ್ತೋಮವೊಂದು ಇಂದು ದೊಡ್ಡದಾಗಿ ಎದ್ದು ನಿಂತಿದೆ.

ಹೀಗೆ ಇಡೀ ವ್ಯವಸ್ಥೆ ಕುಸಿದು ಅರಾಜಕವಾಗುವ ಶೀಲ ಶಿಥಿಲತೆಯ ಭಯಾನಕ ಉದಾಹರಣೆಗಳು ಒಂದೊಂದೇ ಬೆಳಕಿಗೆ ಬರತೊಡಗಿದ್ದರೂ, ನಾವು– ಸಾಮಾನ್ಯ ಜನ– ಇದೆಲ್ಲ ಎಲ್ಲ ಕಾಲದಲ್ಲೂ ಇರುವಂತಹುದೇ ಎಂದು ಈ ಬಗ್ಗೆ ಒಂಚೂರೂ ವಿಚಲಿತರಾಗದೆ; ಲೋಕಾಭಿರಾಮವಾಗಿ, ಹೊಸ ಭೋಗವಾದದ ಏಣಿ ಹತ್ತಿ ಆಕಾಶ ಮುಟ್ಟುವ ರೋಮಾಂಚನದ ನಮ್ಮ ಅವಕಾಶಕ್ಕಾಗಿ ಸರತಿ ಸಾಲಿನಲ್ಲಿ ಕಾದು ನಿಂತಿದ್ದೇವೆ. ಅಷ್ಟು ಅಪ್ಯಾಯಮಾನವಾಗಿದೆ, ಅಮಲಿನಿಂದ ಕೂಡಿದೆ ಈ ಹೊಸ ಗ್ರಾಹಕ 'ಮಾಲ್' ಜಗತ್ತು. ಇಲ್ಲದಿದ್ದರೆ– ಎಲ್ಲ ದೇಶಗಳು ತಂತಮ್ಮ ಉತ್ಪಾದನಾ ಹಾಗೂ ಬಳಕೆದಾರಿಕೆಯ ಪದ್ಧತಿ ಹಾಗೂ ವಿನ್ಯಾಸಗಳನ್ನು ಬದಲಿಸಿಕೊಂಡು ವಿಷಕಾರಿ ಇಂಗಾಲದ ಅನಿಲಗಳ ವಿಸರ್ಜನೆಯನ್ನು ಕ್ರಮೇಣ ಶೇ.೨೫ರಿಂದ ೪೫ರಷ್ಟು ಕಡಿಮೆ ಮಾಡಿಕೊಳ್ಳದಿದ್ದಲ್ಲಿ, ಇನ್ನು ಕೆಲವೇ ವರ್ಷಗಳಲ್ಲಿ ಅರ್ಧ ಜಗತ್ತು ಪ್ರವಾಹಗಳಿಗೆ ಸಿಕ್ಕಿ ಮುಳುಗುವುದು; ಹಾಗೆ ಮುಳಗದೆ ಉಳಿದ ಇನ್ನರ್ಧ ಜಗತ್ತು ಬೆಂದು ಉಸಿರು ಕಟ್ಟಿ ಸಾಯುವುದು ಎಂಬ ಪರಿಸರ ವಿಜ್ಞಾನಿಗಳ ಕಟು ಎಚ್ಚರಿಕೆಯ ಬಗ್ಗೆ– ಮೊನ್ನೆ ಬಾಲಿಯಲ್ಲಿ ಮುಕ್ತಾಯಗೊಂಡ ಹವಾಮಾನ ಬದಲಾವಣೆ ಕುರಿತ ವಿಶ್ವ ಸಮ್ಮೇಳನ ಅಷ್ಟು ಲಘುವಾದ ನಡಾವಳಿಯನ್ನೇಕೆ ಅಳವಡಿಸಿಕೊಳ್ಳುತ್ತಿತ್ತು?

ಭಾರತವೇನೋ, ಸ್ವಚ್ಛ ತಂತ್ರಜ್ಞಾನದ ವರ್ಗಾವಣೆಯ ಆಗ್ರಹದ ತನ್ನ ನಿಲುವು ಯಶಸ್ವಿಯಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಕ್ಯೋಟೋ ಒಪ್ಪಂದದಂತೆ ಯಾವ ದೇಶವೂ ವಿಷಕಾರಿ ವಿಸರ್ಜನೆಯ ತನ್ನ ಗುರಿಗಳನ್ನು ಮುಟ್ಟಲಾಗದಿರುವ ಮತ್ತು ಸದ್ಯದ ಅತಿ ಗ್ರಾಹಕವಾದಿ ಹಾಗೂ ಅಪಾರ ಕಸೋತ್ಪತ್ತಿಯ ಹೊಸ ಜೀವನ ಶೈಲಿಯ ಹರಿಕಾರನಾದ ಅಮೆರಿಕಾದ ಮೇಲೆ ಮಾಲಿನ್ಯ ತಡೆಯ ನಿರ್ದಿಷ್ಟ ಗುರಿಗಳನ್ನು ಒಪ್ಪಿಕೊಳ್ಳುವಂತೆ ಒತ್ತಡ ಹೇರಲಾಗದಿರುವ ದೌರ್ಬಲ್ಯ– ಅಸಹಾಯಕತೆಗಳೊಂದಿಗೆ ಈ ಸಮ್ಮೇಳನ ಮುಕ್ತಾಯಗೊಂಡಿದೆ. ೨೦೦೯ರ ಕೋಪನ್ ಹೇಗನ್ ಸಮ್ಮೇಳನದ ಹೊತ್ತಿಗೆ ಎಲ್ಲ ದೇಶಗಳೂ ಒಪ್ಪುವಂತಹ ನಿರ್ದಿಷ್ಟ ಗುರಿಗಳ ಒಪ್ಪಂದವನ್ನು ಸಿದ್ಧಪಡಿಸುವ ಆಶಯವನ್ನಷ್ಟೆ ಇದು ವ್ಯಕ್ತಪಡಿಸಿದೆ! ಜಗತ್ ವಿನಾಶಕವಾದ ಈ ದೌರ್ಬಲ್ಯಗಳಿಗೆ ಮುಖ್ಯ ಕಾರಣ, ಪ್ರತಿ ದೇಶವೂ ಹೊಸ ಕೈಗಾರಿಕೀಕರಣದ ಸ್ಪರ್ಧೆಯಲ್ಲಿದ್ದು, ಯಾವ ದೇಶಕ್ಕೂ ತನ್ನ 'ಪ್ರಗತಿ'ಯ ನೆಲೆಗಳನ್ನು ಬದಲಾಯಿಸಿಕೊಳ್ಳಬೇಕೆಂಬ ಅರಿವೇ ಉಂಟಾಗದಂತಹ ಹೊಸ ಜೀವನ ಶೈಲಿಯ ಅಮಲಿನಲ್ಲಿರುವುದು. ಹೀಗಾಗಿ ಜಗತ್ತಿನ 'ಅಮೆರಿಕನ್ನೀಕರಣ'ವೆಂಬ ಜಾಗತೀಕರಣ ಪ್ರಕ್ರಿಯೆ,

ಒಂದು ಜಾಗತಿಕ ರಾಜಕೀಯ ಕಾರ್ಯಕ್ರಮವಾಗಿ ಎಗ್ಗಿಲ್ಲದೆ ಸಾಗಿದೆ. ಬೆಂಗಳೂರೂ, ನಾವೂ, ನಮ್ಮ ಮಕ್ಕಳೂ ನಮ್ಮದೇ ರೀತಿಯ ಪ್ರತಿರೋಧಗಳ ನಡುವೆಯೂ ಇದಕ್ಕೆ ಹೊರತಾಗಲಾರದ ಪರಿಸ್ಥಿತಿಗೆ ಸಿಕ್ಕಿ ಬಿದ್ದಿದ್ದೇವೆ. ಇದರ ಮಧ್ಯೆ ವಿವೇಕವನ್ನು ಹುಡುಕುವುದು ಕುರುಕ್ಷೇತ್ರದ ಮಧ್ಯೆ ಧರ್ಮವನ್ನು ಹುಡುಕಿದಂತೆಯೇ ಸರಿ. ಆದರೂ ಧರ್ಮ ಉಳಿದು ಕಾಣಿಸಿಕೊಳ್ಳಲೇಬೇಕಲ್ಲ! ಉಳಿಯದಿದ್ದರೆ ಅದು ಧರ್ಮವಾದರೂ ಹೇಗಾದೀತು?

ಬಹುಶಃ ಈ ಆಸೆಯಲ್ಲೇ, ಈ ನಿರೀಕ್ಷೆಯಲ್ಲೇ ಸಿ.ಎನ್.ಆರ್. ರಾವ್ ಹಾಗೂ ಅವರಂತೆ ಯೋಚಿಸುವ ಜನ ಇನ್ನೂ ಭರವಸೆಯಿಂದ ಬದುಕಿರುವುದು!

ಡಿಸೆಂಬರ್ ೨೮, ೨೦೦೭

ಇಂದೂ ಇರುವ ಗಾಂಧಿ !

ಕೆಲವು ವಾರಗಳ ಹಿಂದೆ, ಗಾಂಧಿ ಬರವಣಿಗೆಯಿಂದಲೇ ಆಯ್ದ ಪ್ರಸಂಗಗಳ ಮೂಲಕ ಗಾಂಧಿ ವ್ಯಕ್ತಿತ್ವವನ್ನು ಪರಿಚಯಿಸುವ; ಗಾಂಧಿ ಮೊಮ್ಮಗ ಗೋಪಾಲ ಕೃಷ್ಣ ಗಾಂಧಿ ಅವರ The Oxford India Gandhi: Essential writings ಪುಸ್ತಕದಿಂದ ಏಳೆಂಟು ಪ್ರಸಂಗಗಳನ್ನು ಈ ಅಂಕಣದಲ್ಲೇ 'ಗಾಂಧಿ ಚರಿತ್ರೆ' ಎಂಬ ಶೀರ್ಷಿಕೆಯಡಿ ಅನುವಾದಿಸಿ ಕೊಟ್ಟಿದ್ದೆ. ಅದಕ್ಕೆ ಹಿನ್ನೆಲೆಯಾಗಿ, ಇತ್ತೀಚೆಗೆ ಗಾಂಧಿಯನ್ನು ಉದ್ದೇಶಪೂರ್ವಕವಾಗಿ ಟೀಕಿಸುವ, ಖಂಡಿಸುವ, ಅವಹೇಳನ ಮಾಡುವ ಸಾಹಿತ್ಯ ಈಗ ನಿಯಮಿತವೆಂಬಂತೆ ಹೊರಬರುತ್ತಿರುವುದರ ಬಗ್ಗೆಯೂ ಪ್ರಸ್ತಾಪಿಸಿದ್ದೆ. ಇಂತಹ ಸಾಹಿತ್ಯ, ಜಗತ್ತಿನಾದ್ಯಂತ ಇಂದು ಗಾಂಧಿ ಕುರಿತಂತೆ ಆಸಕ್ತಿ ಮತ್ತು ಕುತೂಹಲ ಹೆಚ್ಚುತ್ತಿರುವುದಕ್ಕೆ ಪ್ರತಿಕ್ರಿಯೆಯೂ ಆಗಿರಬಹುದು. ಬಹುಶಃ ಕಳೆದ ಶತಮಾನದಲ್ಲಿ ಗಾಂಧಿ ಬಗೆಗೆ ಆದಷ್ಟು ಚರ್ಚೆ ಇನ್ನಾವ ನಾಯಕನ ಬಗ್ಗೆಯೂ ಆದಂತಿಲ್ಲ. ಇದಕ್ಕೆ ಕಾರಣ, ಗಾಂಧಿ ಚಿಂತನೆಯ ಆಳ. ಅಗೆದಷ್ಟೂ ಅರ್ಥ ಹೆಚ್ಚುತ್ತಾ ಹೋಗುವಂತಹ ಆಳವದು.

ಇದು ಇತ್ತೀಚೆಗೆ ತೀವ್ರವಾಗಿ ನನಗೆ ಅನ್ನಿಸಿದ್ದು, ಉಡುಪಿಯ ಮಹಾತ್ಮ ಗಾಂಧಿ ಮೆಮೊರಿಯಲ್ ಕಾಲೇಜಿನಲ್ಲಿ ೨೦೦೭ರ ಫೆಬ್ರುವರಿಯಲ್ಲಿ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆಗೊಂಡ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದ ಭಾಷಣಗಳು, ಯು.ಆರ್. ಅನಂತಮೂರ್ತಿಯವರ ಉದ್ಘಾಟನಾ ಭಾಷಣದ 'ಇಂದೂ ಇರುವ ಗಾಂಧಿ' ಎಂಬ ಅರ್ಥಪೂರ್ಣ ಶೀರ್ಷಿಕೆಯೊಂದಿಗೆ ಸಂಪಾದಿತವಾಗಿ ಬಂದಿರುವ ಪುಸ್ತಕವನ್ನು ಓದುತ್ತಿದ್ದಾಗ. ಅಂದು ಉದ್ಘಾಟನೆಯಾದ ಗಾಂಧಿ ಅಧ್ಯಯನ ಕೇಂದ್ರ ಪ್ರಕಟಿಸಿರುವ (ಇದನ್ನು ಬಿಟ್ಟು ಈ ಕೇಂದ್ರ ಈವರೆಗೆ ಏನನ್ನು ಮಾಡಿದೆಯೋ ತಿಳಿಯದು!) ಈ ಪುಸ್ತಕವನ್ನು ಗೆಳೆಯ ಜಯಪ್ರಕಾಶ ಮಾವಿನಕುಳಿ ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಅನಂತಮೂರ್ತಿಯವರ

ಉದ್ಘಾಟನಾ ಭಾಷಣಕ್ಕೆ ಜಿ.ಕೆ. ಗೋವಿಂದರಾಯರ ಪ್ರತಿಕ್ರಿಯೆ, ಎಂ.ವಿ. ಕಾಮತರ ಗಾಂಧಿ ಯುಗದ ನೆನಪುಗಳು ಹಾಗೂ ಕೆ.ಕೆ. ಪೈ ಅವರ ಅಧ್ಯಕ್ಷ ಭಾಷಣಗಳಲ್ಲದೆ, ಗಾಂಧೀವಾದದ 'ಮೂಲಭೂತ' ಪುಸ್ತಕವೆಂದು ಪರಿಗಣಿತವಾಗಿರುವ 'ಹಿಂದ್ ಸ್ವರಾಜ್' ಕುರಿತಂತೆ ಪಟ್ಟಾಭಿರಾಮ ಸೋಮಯಾಜಿ, ಜೆ.ಎಸ್. ಸದಾನಂದ, ರಾಜಾರಾಮ ತೋಳ್ಪಾಡಿ, ಎಂ.ಎಸ್. ಆಶಾದೇವಿ ಹಾಗೂ ಪಿ.ಎಲ್. ಧರ್ಮ ಅವರು ಭಾಗವಹಿಸಿರುವ ಕುತೂಹಲಕಾರಿ ಚರ್ಚೆಯನ್ನೂ ಈ ಪುಸ್ತಕ ಒಳಗೊಂಡಿದೆ.

ಎಂ.ವಿ. ಕಾಮತರ ಇಂಗ್ಲಿಷ್ ಭಾಷಣವನ್ನು ಕನ್ನಡಕ್ಕೆ ತಂದು ಪ್ರಕಟಿಸಬಹುದಿತ್ತು ಎಂಬೊಂದು ಕೊರತೆಯನ್ನು ಬಿಟ್ಟರೆ, ಈ ಪುಸ್ತಕ ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಯ ಅವಿಭಾಜ್ಯತೆ ಕುರಿತಂತೆ ಅನೇಕ ಒಳನೋಟಗಳನ್ನು ಒದಗಿಸುತ್ತಾ, ಒಂದು ಸಣ್ಣ 'ಗಾಂಧಿ ಪುರಾಣ'ವನ್ನು ಸೃಷ್ಟಿಸುವಷ್ಟು ಸ್ಪಂದನಶೀಲವಾಗಿದೆ. ಆದರೆ ಗಾಂಧಿ ಕುರಿತ ೮೮ ಪುಟಗಳ ಈ ಪುಸ್ತಕವನ್ನು ೯೦ ರೂಪಾಯಿಗಳ ದುಬಾರಿ ಬೆಲೆಯಲ್ಲಿ ಸಿದ್ಧಪಡಿಸಿರುವುದು ಮಾತ್ರ ದೊಡ್ಡ ವಿಪರ್ಯಾಸ! ಉಡುಪಿ– ಮಣಿಪಾಲ– ಪೈಗಳೆಂದರೆ ಇದೇ ಏನೋ... ಇರಲಿ, ಈ ಪುಸ್ತಕದ ಬಗ್ಗೆ ಇನ್ನು ಹೆಚ್ಚು ಬರೆಯುವುದಕ್ಕಿಂತ ಇದರ ಕೆಲವು ಭಾಗಗಳನ್ನು ಆಯ್ದು (ಅವುಗಳಲ್ಲಿ ಎರಡನ್ನು ಅನುವಾದಿಸಿ) ಕೊಡುವುದು ಹೆಚ್ಚು ಅರ್ಥಪೂರ್ಣವೆನಿಸೀತು.

ಅದಕ್ಕೆ ಮೊದಲು, ಯು.ಆರ್. ಅನಂತಮೂರ್ತಿಯವರು ತಮ್ಮ 'ಋಜುವಾತು' ಪುಸ್ತಕದ ಒಂದು ಲೇಖನದಲ್ಲಿ ಪ್ರಸ್ತಾಪಿಸಿರುವ ಒಂದು ಕುತೂಹಲಕಾರಿ ಮಾತುಕತೆಯನ್ನು ಪೀಠಿಕೆಯಾಗಿ ಉಲ್ಲೇಖಿಸುವ ಮನಸ್ಸಾಗುತ್ತಿದೆ: "ಒಮ್ಮೆ ಕೆಲವು ದಲಿತ ಸ್ನೇಹಿತರು ಕವಿ ಪುತಿನ ಅವರನ್ನು ನೋಡಲು ಹೋಗಿದ್ದರಂತೆ. ಹಣೆಯ ಮೇಲೆ ನಾಮ ಹಾಕಿ ನಿತ್ಯ ತಪ್ಪದೆ ಜಪ ಮಾಡುತ್ತಿದ್ದ ಈ ಶ್ರೀವೈಷ್ಣವ ಕವಿ ಪ್ರೀತಿ ತುಂಬಿದ್ದ ಹೃದಯದ ಮನುಷ್ಯ. ಅವರು 'ನೀವು ಗಾಂಧಿಯನ್ನು ಯಾಕೆ ಬೈಯುತ್ತೀರಿ?' ಅಂತ ದಲಿತರನ್ನು ಕೇಳಿದರಂತೆ. ದಲಿತರು ತಮ್ಮ ಕಾರಣಗಳನ್ನೆಲ್ಲ ಪಟ್ಟಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪುತಿನ, 'ಮಹಾತ್ಮ ಗಾಂಧಿ ಈ ದೇಶದಲ್ಲಿ ಹುಟ್ಟದೇ ಇದ್ದಿದ್ದರೆ, ಈ ಜಾಗದಲ್ಲಿ ಕೂತು ನಿಮ್ಮ ಜತೆ ಮಾತಾಡುವ ಸಾಧ್ಯತೆಯೇ ನನಗೆ ಇರುತ್ತಿರಲಿಲ್ಲ' ಎಂದರಂತೆ."

*

ಇನ್ನು, 'ಇಂದೂ ಇರುವ ಗಾಂಧಿ' ಪುಸ್ತಕದಲ್ಲಿನ ಅನಂತಮೂರ್ತಿಯವರ ಉದ್ಘಾಟನಾ ಭಾಷಣದ ಒಂದು ತುಣುಕು:

"ಒಮ್ಮೆ ಅಮೆರಿಕನ್ ಜರ್ನಲಿಸ್ಟ್ ಬಂದು ಗಾಂಧಿಯನ್ನು 'What is your agenda?' ಅಂತ ಕೇಳುತ್ತಾನೆ. ಏನು ಹೇಳಬೇಕು ಗಾಂಧಿ– 'ರಾಷ್ಟ್ರದಲ್ಲಿ ರಾಜಕೀಯ ಸ್ಥಿತ್ಯಂತರ ನನ್ನ ಅಜೆಂಡಾ' ಅಂತ ಹೇಳಬೇಕು. ಅವನ ಆಶ್ಚರ್ಯಕ್ಕೆ ಗಾಂಧಿ ಅದನ್ನು ಹೇಳುವುದೇ ಇಲ್ಲ. 'My agenda are three. ಮೊದಲನೆಯದು ಹಿಂದೂ ಮುಸ್ಲಿಂ ಯೂನಿಟಿ, ಎರಡನೆಯದು removal of untouchability, ಮೂರನೆಯದು 'ಸ್ವದೇಶಿ'.

ನಾಲ್ಕನೆಯದು ಯಾವುದು? ಅವರು ಹೇಳುವುದೇ ಇಲ್ಲ. ಯಾಕೆಂದರೆ, ಇವು ಮೂರೂ ಈಡೇರಿದರೆ ಬ್ರಿಟಿಷರಿಗೆ ಇಲ್ಲಿ ಇರುವ ಅಗತ್ಯವೇ ಇಲ್ಲ."

*

ಅನಂತಮೂರ್ತಿಯವರ ಭಾಷಣಕ್ಕೆ ಪ್ರತಿಕ್ರಿಯಿಸುತ್ತಾ ಪ್ರೊ॥ಜಿ.ಕೆ. ಗೋವಿಂದರಾಯರು ಆಡಿರುವ ಈ ಮಾತುಗಳೂ ಇಲ್ಲಿ ಉಲ್ಲೇಖನಾರ್ಹ:

"ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿದ್ದಂತಹ unequal societyಯಲ್ಲಿ equality ಸಾಧಿಸುವುದು ಎಂತಹ ಭಯಂಕರ ಕೆಲಸ ಅನ್ನುವುದು ಇಬ್ಬರಿಗೂ ಗೊತ್ತಿತ್ತು. ಸಮುದ್ರದಿಂದ ಒಂದು ಹಿಡಿ ಉಪ್ಪು ತೆಗೆದು ಗಾಂಧಿ ಬ್ರಿಟಿಷರಿಗೆ ಹಾಕಿದ ಸವಾಲು. ಮಹರ್ ಸರೋವರದಿಂದ ಒಂದು ಬೊಗಸೆ ನೀರನ್ನು ಎತ್ತಿದ ಅಂಬೇಡ್ಕರ್ ಈ ಇಡೀ ಹಿಂದೂ ಸಮಾಜಕ್ಕೆ ಹಾಕಿದ ಸವಾಲು. ಎರಡೂ ಸಮಾನ. ಅದ್ಭುತ ಅದು. ಪ್ರಚೋದನೆ ನೀಡಿ ನಾಲ್ಕು ಮೇಲ್ಜಾತಿಯವರಿಗೆ ತಲೆ ಒಡೆಯಿರೋ ಅಂದಿಬಿಡಬಹುದಿತ್ತು. ಅದರ ಬದಲು ಯಾವ ಸರೋವರಕ್ಕೆ ನಮಗೆ ಪ್ರವೇಶವಿಲ್ಲವೋ ಅಲ್ಲಿಗೆ ಹೋಗಿ ನನ್ನ ಪ್ರತಿಭಟನೆ ವ್ಯಕ್ತಪಡಿಸುತ್ತೇನೆ ಅನ್ನುವುದು ನಿರಂತರವಾಗಿ ನಡೆಯುವ ಮಾನಸಿಕ ಕ್ರಾಂತಿ. Living revolution. ಅದಕ್ಕೆ ದೇಶದ ಭವಿಷ್ಯವನ್ನು ರೂಪಿಸುವಾಗ ನಮ್ಮ ಮನಸ್ಸಿನಲ್ಲಿ ಉಳಿಯುವ ಎರಡು ಹೆಸರು ಗಾಂಧಿ ಮತ್ತು ಅಂಬೇಡ್ಕರ್, ನಂತರ ಲೋಹಿಯಾ.

*

ಇದೇ ಪುಸ್ತಕದಲ್ಲಿರುವ ಎಂ.ವಿ. ಕಾಮತರ ಒಂದು ನೆನಪು ಹಾಗೂ ಅವರು ನಿರೂಪಿಸಿರುವ ಗಾಂಧೀಜಿ ಬದುಕಿನ ಒಂದು ಘಟನೆ:

"೧೯೩೦ರಲ್ಲಿ ಗಾಂಧಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ಕಾಲ. ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಸತ್ಯಾಗ್ರಹಿಯಾಗಿದ್ದ ಉಪನ್ಯಾಸಕನೊಬ್ಬನಿದ್ದ. ಒಂದು ಸಂಜೆ ಆತ ತನ್ನಂತಹ ಹಲವು ಸತ್ಯಾಗ್ರಹಿಗಳ ಜೊತೆಯಲ್ಲಿ ಒಂದು ಕೈಯಲ್ಲಿ ಉಪ್ಪು ಮತ್ತೊಂದು ಕೈಯಲ್ಲಿ ಕಾಂಗ್ರೆಸ್ ಧ್ವಜ ಹಿಡಿದು ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತಾ ನಡೆದಿದ್ದ. ಆತನನ್ನು ತಡೆದ ಪೋಲಿಸರು ಕೈಗಳಲ್ಲಿದ್ದುದನ್ನು ಬಿಸಾಕುವಂತೆ ಆಗ್ರಹಿಸಿದರು. ಆತ ನಿರಾಕರಿಸಿದ. ಪೋಲೀಸರು ಆತನ ಎರಡೂ ಕೈಗಳನ್ನು ಲಾಠಿಗಳಿಂದ ಹೇಗೆ ಚಚ್ಚಿ ಹಾಕಿದರೆಂದರೆ ಅವನ ಎರಡೂ ಕೈಗಳು ಬರೀ ಮಾಂಸದ ಮುದ್ದೆಯಾಗಿ ಹೋದವು. ಆತ ಪ್ರಜ್ಞೆ ತಪ್ಪಿ ರಸ್ತೆಯ ಮೇಲೆ ಕುಸಿದು ಬಿದ್ದಾಗಲೂ ಆತನ ಕೈಗಳು ಉಪ್ಪು ಮತ್ತು ಧ್ವಜವನ್ನು ಬಲವಾಗಿ ಹಿಡಿದೇ ಇದ್ದವು.

.....ಒಂದು ದಶಕದ ನಂತರ ೧೯೪೨ರಲ್ಲಿ ಗಾಂಧೀಜಿ 'ಭಾರತ ಬಿಟ್ಟು ತೊಲಗಿ' ಚಳುವಳಿಗೆ ಕರೆ ಕೊಟ್ಟರು. ಆಗಲೂ ಈ ಉಪನ್ಯಾಸಕ ಇದರಲ್ಲಿ ಭಾಗವಹಿಸಿದ. ಈ ಸಂದರ್ಭದಲ್ಲಿ ಪೋಲೀಸರು ಆತನ ಕಾಲುಗಳನ್ನು ಅಕ್ಷರಶಃ ಮುರಿದು ಹಾಕಿದರು. ಆಗಲೂ ಆತ 'ಮಹಾತ್ಮ ಗಾಂಧಿ ಕಿ ಜೈ! ಇನ್ಕ್ವಿಲಾಬ್ ಜಿಂದಾಬಾದ್' ಎಂದು ಕೂಗುತ್ತಲೇ ಇದ್ದ.

ಎಷ್ಟೋ ವರ್ಷಗಳ ನಂತರ ನಾನು ೧೯೯೦ರಲ್ಲಿ ನನ್ನ ಅಂಕಣ ಬರಹವೊಂದರಲ್ಲಿ ಇದನ್ನೆಲ್ಲ ನೆನಪು ಮಾಡಿಕೊಂಡು ಬರೆದಿದ್ದೆ. ಮಾರನೆಯ ದಿನ ನನಗೊಂದು ದೂರವಾಣಿ ಕರೆ ಬಂತು. ನಾನು ಯಾರ ಬಗ್ಗೆ ಬರೆದಿದ್ದನೋ ಆತನ ಕರೆ ಅದು. ಆತ ತಾನು ಬಂದು ನನ್ನನ್ನು ಭೇಟಿ ಮಾಡಬಹುದೇ ಎಂದು ಕೇಳಿದ. ನನಗೋ ರೋಮಾಂಚನ! ಮಾರನೆಯ ಸಂಜೆ ೫ ಘಂಟೆಗೆ ಬರಲು ಹೇಳಿದೆ ಹಾಗೂ ಆ ನನ್ನ ಅತಿಥಿಯನ್ನು ಸ್ವಾಗತಿಸಲು ನನ್ನ ಗೆಳೆಯರಿಗೆಲ್ಲ ಹೇಳಿ ವ್ಯಾಪಕ ಸಿದ್ಧತೆ ನಡೆಸಿದೆ. ಮಾರನೆಯ ದಿನ ಸಂಜೆ ನಾನು ನನ್ನ ಅತಿಥಿಯನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಮಹಡಿಯಲ್ಲಿದ್ದ ನನ್ನ ಮನೆಯಲ್ಲಿ ಕುತೂಹಲದಿಂದ ಕಾಯುತ್ತಿದ್ದಾಗ ಕರೆಗಂಟೆಯ ಶಬ್ದವಾಯಿತು. ಬಾಗಿಲು ತೆಗೆದರೆ, ಮಹಿಳೆಯೊಬ್ಬರು ಬಾಗಿಲಲ್ಲಿ ನಿಂತಿದ್ದರು. ಅವರು 'ಕಾಮತರೆ, ದಯವಿಟ್ಟು ಕೆಳಗೆ ಬರುವಿರಾ? ನಿಮ್ಮ ಧೀರ ಅತಿಥಿ ಕೆಳಗೆ ಕಾಯುತ್ತಿದ್ದಾರೆ' ಎಂದರು. ನಾನು ಗಾಬರಿಯಾಗಿ 'ಅವರಿಗೆ ಮೇಲೆ ಬರಲು ಸಾಧ್ಯವಿಲ್ಲವೇ?' ಎಂದು ಕೇಳಿದೆ. ಅದಕ್ಕೆ ಆಕೆ 'ಕ್ಷಮಿಸಿ. ಅವರಿಗೆ ಮೆಟ್ಟಿಲು ಹತ್ತುವುದಿರಲಿ, ಏನನ್ನೂ ಆಧಾರವಾಗಿ ಹಿಡಿದುಕೊಳ್ಳಲೂ ಸಾಧ್ಯವಾಗುವುದಿಲ್ಲ. ಅವರು ಸರ್ಕಾರಿ ಅಂಬುಲೆನ್ಸ್‌ನಲ್ಲಿ ಗಾಲಿ ಕುರ್ಚಿಯಲ್ಲಿ ಕೂತು ನಿಮ್ಮನ್ನು ಕಾಣಲು ಬಂದಿದ್ದಾರೆ' ಎಂದರು.

ನಾನು ನನ್ನ ಬಾಲ್ಯ ಕಾಲದ ನಾಯಕನನ್ನು ಈಗ ಕಣ್ಣಾರೆ ಮತ್ತೆ ನೋಡಲು ದಡ ದಡನೆ ಮೆಟ್ಟಿಲಿಳಿದು ಹೋದೆ. ಮಹಿಳೆ ಹೇಳಿದ್ದು ನಿಜ. ನನ್ನ ನಾಯಕ ಒಂದಿಷ್ಟೂ ಚಲನೆ ಸಾಧ್ಯವಾಗದ ಸ್ಥಿತಿಯಲ್ಲಿದ್ದ. ಆತ. 'ಕಾಮತರೇ, ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ಮೇಲೆ ಬರಲಾರೆ. ಆರು ದಶಕಗಳ ಹಿಂದೆ ನಾನು ಮಾಡಿದ್ದನ್ನು ನೆನಪಿಸಿಕೊಂಡು ನೀವು ಬರೆದಿದ್ದುದಕ್ಕಾಗಿ ನಿಮಗೆ ಕೃತಜ್ಞತೆ ಹೇಳಲಷ್ಟೇ ಬಂದದ್ದು ನಾನು. ನಿಮ್ಮ ಈ ಬರವಣಿಗೆಗಿಂತ ದೊಡ್ಡ ಗೌರವ ನನಗೆ ಇನ್ನಾವುದಿದೆ? ನನಗಿನ್ನೇನೂ ಬೇಡ' ಎಂದು ಹೊರಟೇಬಿಟ್ಟರು. ನಾನು ಕಣ್ಣೀರಿನಿಂದ ಒದ್ದೆಯಾಗಿ ನಿಂತಿದ್ದೆ."

ಗಾಂಧಿ ಯುಗವೆಂದರೆ ಇದು!

ಕಾಮತರು ಗಾಂಧಿ ಬದುಕಿನಿಂದ ಉಲ್ಲೇಖಿಸಿರುವ ಘಟನೆ ಎಂದರೆ:

"ಗಾಂಧಿ ದ. ಆಫ್ರಿಕಾದಲ್ಲಿದ್ದಾಗ ಅಲ್ಲಿನ ಭಾರತೀಯರ ನಾಗರಿಕ ಹಕ್ಕುಗಳಿಗಾಗಿ ದೊಡ್ಡ ಹೋರಾಟವನ್ನೇ ಕೈಗೆತ್ತಿಕೊಂಡಿದ್ದರು. ಆ ಸಂದರ್ಭದಲ್ಲಿ ದ. ಆಫ್ರಿಕಾದ ಆಗಿನ ಮುಖ್ಯಸ್ಥ ಜ॥ ಸ್ಮಟ್ಸ್ ಅವರನ್ನು ಭೇಟಿಯಾಗಬೇಕಾದ ಸಂದರ್ಭವೊಂದರಲ್ಲಿ ಅವರು 'ನಿಮ್ಮ ಸರ್ಕಾರದ ವಿರುದ್ಧ ಹೋರಾಡಿಯೇ ತೀರುತ್ತೇನೆ' ಎಂದು ಸ್ಪಷ್ಟ ನಿರ್ಧಾರದ, ಆದರೆ ಪ್ರಶಾಂತ ಧ್ವನಿಯಲ್ಲಿ ಹೇಳಿದಾಗ, ಜ॥ ಸ್ಮಟ್ಸ್ 'ಇದನ್ನು ಹೇಳಲು ಇಲ್ಲಿಗೆ ಬಂದಿರಾ?' ಎಂದು ಸಿಟ್ಟು ಮತ್ತು ಗಾಬರಿಗಳಲ್ಲಿ ಕೇಳಿದರು. ಗಾಂಧಿ ಅದಕ್ಕೆ ಉತ್ತರ ಕೊಡುವ ಮುನ್ನವೇ, ಅವರಿಗೆ ಪರೋಕ್ಷವಾಗಿ ಇನ್ನು ನೀವು ಹೋಗಬಹುದು ಎನ್ನುವುದನ್ನು ಸೂಚಿಸುವಂತೆ ಜ॥ ಸ್ಮಟ್ಸ್, 'ಇನ್ನೇನಾದರೂ ಇದೆಯಾ ನೀವು ಹೇಳುವುದು?' ಎಂದರು. 'ಹೌದು ' ಎಂದ

ಗಾಂಧಿ ಅವರಿಗೆ ಹೇಳಿದ್ದು: 'ಈ ಹೋರಾಟದಲ್ಲಿ ಗೆಲ್ಲುವುದು ನಾನೇ!' ಕುತೂಹಲ ಚಕಿತರಾದ ಸ್ಮಟ್ಸ್, 'ಅದು ಹೇಗೆ ಸಾಧ್ಯ?' ಎಂದು ವಿಚಾರಿಸಿಕೊಳ್ಳಲು ಯತ್ನಿಸಿದರು. ತಕ್ಷಣವೇ ಗಾಂಧಿ ಉತ್ತರಿಸಿದರು: 'ನಿಮ್ಮ ಸಹಾಯದಿಂದ!' ಗಾಂಧಿ ಮಾತ್ರ ಇಂತಹ ಉತ್ತರ ಕೊಡಬಲ್ಲವರಾಗಿದ್ದರು."

ಅದೇನೇ ಇರಲಿ, ಗಾಂಧಿ ಮಾತಿನಿಂದ ಜ॥ ಸ್ಮಟ್ಸ್ ಮೂರ್ಛೆ ಹೋಗುವುದೊಂದು ಬಾಕಿ ಇತ್ತೇನೋ!

*

ಇನ್ನು ಕೊನೆಯದಾಗಿ, ಇದೇ ಪುಸ್ತಕದಲ್ಲಿನ 'ಹಿಂದ್ ಸ್ವರಾಜ್' ಕುರಿತ ಚರ್ಚೆಯಲ್ಲಿ ಪಟ್ಟಾಭಿರಾಮ ಸೋಮಯಾಜಿ ಹೇಳುವ ಅಹಿಂಸೆ ಕುರಿತ ಗಾಂಧಿ ಸಂಕಥನ ಹೀಗಿದೆ:

"ಭಾರತಕ್ಕೆ ಇನ್ನೇನು ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಒಬ್ಬ ಅಮೆರಿಕನ್ ಪತ್ರಕರ್ತ ಗಾಂಧಿಯ ಸಂದರ್ಶನ ಮಾಡುತ್ತಾನೆ. ಆಗ ಆತ ಗಾಂಧಿಗೆ ಕೇಳಿದ ಒಂದು ಪ್ರಶ್ನೆ: 'ಸ್ವತಂತ್ರ ಭಾರತಕ್ಕೆ ನಿಮ್ಮ ಮೊದಲ ಅಜೆಂಡಾ ಏನು?' ಅಂತ. ಗಾಂಧಿ ಹೇಳುತ್ತಾರೆ, 'ಲ್ಯಾಂಡ್ ರಿಫಾರ್ಮ್' ಅಂತ. ಆ ಅಮೆರಿಕಾದ ಪತ್ರಕರ್ತನಿಗೆ ದಿಗಿಲಾಗುತ್ತದೆ. 'ಭೂಸುಧಾರಣೆಯನ್ನು ಜಾರಿಗೆ ತರಲು ಹೊರಟರೆ, ಇಡೀ ಭಾರತ ಕುರುಕ್ಷೇತ್ರವಾಗಿ ರಣರಂಗವಾಗುವುದಿಲ್ಲವೇ? ಇದು ನಿಮ್ಮ ಅಹಿಂಸಾತ್ಮಕ ತತ್ವಕ್ಕೆ ವಿರೋಧವಲ್ಲವೇ?' ಅಂತ ಆತನ ಪ್ರಶ್ನೆ. ಆಗ ಗಾಂಧಿ, 'ಎಷ್ಟು ದಿವಸ ನಡೆಯಬಹುದು, ಹಿಂಸೆ? ಹದಿನೈದು ದಿವಸ ನಡೆಯಬಹುದೋ' ಅಂತಾರೆ. ಆ ಮೇಲೆ ಆ ಪತ್ರಕರ್ತ ಕೇಳುತ್ತಾನೆ. 'ಜಮೀನ್ದಾರರು ಬಹಳ ಭೀಕರ ಹಿಂಸೆ ಮಾಡುವ ಸಾಮರ್ಥ್ಯವುಳ್ಳವರು. ಅವರನ್ನು ಎದುರು ಹಾಕಿಕೊಳ್ಳುವುದು ಸಾಧ್ಯವೋ ಅಂತ. ಅದಕ್ಕೆ ಗಾಂಧಿ, 'ಅವರೂ ಯುದ್ಧವನ್ನು ಬಿಟ್ಟು ಪಲಾಯನ ಮಾಡುವ ಮೂಲಕ ಸಹಾಯ ಮಾಡಬಹುದು!' ಅಂತ ಪ್ರತಿಕ್ರಿಯಿಸುತ್ತಾರೆ. ಇದನ್ನು ಯಾಕೆ ಪ್ರಸ್ತಾಪ ಮಾಡಿದೆ,ಎಂದರೆ, ಗಾಂಧಿಯ ಅಹಿಂಸೆಯ ಕಲ್ಪನೆಯಲ್ಲಿ ಈ ರೀತಿಯ ಅನಿವಾರ್ಯವಾದ, ನಿವಾರಿಸಿಕೊಳ್ಳಬಹುದಾದ ಹಿಂಸೆಯನ್ನು ಒಳಗೊಳ್ಳಬಹುದಾದ ಸಾಧ್ಯತೆ ಇದೆ. ಅಹಿಂಸೆ ಅನ್ನುವುದು ಕೇವಲ ಎಡಗೆನ್ನೆಗೆ ಹೊಡೆದರೆ ಬಲಗೆನ್ನೆ ಒಡ್ಡುವುದು ಎಂಬ ಮೊದ್ದುತನವಲ್ಲ. ಗಾಂಧಿಯಲ್ಲಿ ದೊಡ್ಡ ದರ್ಶನ ಅದು. 'ಯಾರೋ ಒಬ್ಬನ ಹೆಗಲ ಮೇಲೆ ಕೂತು ಸವಾರಿ ಮಾಡಿಕೊಂಡೇ ಜೀವನ ಮಾಡುವುದು ಅಭ್ಯಾಸ ಆಗಿರುವವನಿಗೆ ಒಂದು ದಿನ ಹೊತ್ತುಕೊಂಡಿರುವವನು, ಇನ್ನು ನನ್ನ ಕೈಯಲ್ಲಿ ಆಗುವುದಿಲ್ಲ ಅಂತ ಹೇಳಿ ಕೂತವನನ್ನು ಕೆಳಗೆ ಹೊತ್ತು ಹಾಕುತ್ತಾನೆ. ಬಿದ್ದವನಿಗೆ ತರಚು ಗಾಯಗಳಾಗುತ್ತವೆ. ಅದನ್ನೇ ಹಿಂಸೆ ಎಂದು ಕರೆದರೆ ಹೇಗೆ?' ಅಂತ ಗಾಂಧಿ ಕೇಳುತ್ತಾರೆ. ಈ ದರ್ಶನ ಗಾಂಧಿಗೆ ಸಾಧ್ಯವಾಗಿರುವುದು ಹಿಂಸಾ ಪಂಥದ ಜೊತೆಗೆ ಅವರು ನಡೆಸಿದ ವಾಗ್ವಾದದ ಮೂಲಕ."

ಜನವರಿ ೪, ೨೦೦೮

ಜಾಗತೀಕರಣವೆಂಬ ಪೌರುಷ ರಾಜಕಾರಣ

ಕಳೆದ ಹತ್ತು ತಿಂಗಳಿಂದ ಸತತವಾಗಿ ಬರೆಯುತ್ತಿದ್ದ 'ವಾರದ ಒಳನೋಟ' ಅಂಕಣಕ್ಕೆ ಹಲವು ರೀತಿಯ ಒತ್ತಡಗಳು ಹಾಗೂ ಮಾನಸಿಕ ಆಯಾಸದ ಕಾರಣಗಳಿಂದಾಗಿ ಅಂತ್ಯ ಹಾಡುವ ಆಲೋಚನೆಯಲ್ಲಿದ್ದಾಗ, ಪತ್ರಿಕೆಯ ಗೌರವ ಸಂಪಾದಕರಾದ ರವೀಂದ್ರ ರೇಷ್ಮೆಯವರು ಕಳೆದ ಸಂಚಿಕೆಯಲ್ಲಿ ಕುಪ್ಪಳ್ಳಿಯಲ್ಲಿ ನಡೆದ ಸಮಾಜವಾದಿ ಅಧ್ಯಯನ ಶಿಬಿರದ ಬಗ್ಗೆ ಬರೆದು ನನ್ನನ್ನು ಈ ವಾರದ ಮಟ್ಟಿಗಾದರೂ ಬರೆಯಲು ಪ್ರಚೋದಿಸಿದ್ದಾರೆ!

ಮೊದಲಿಗೆ ರೇಷ್ಮೆಯವರ ಬರಹಕ್ಕೆ ಒಂದು ತಿದ್ದುಪಡಿ: ಕುಪ್ಪಳ್ಳಿಯ ಕುವೆಂಪು ಶತಮಾನೋತ್ಸವ ಸ್ಮಾರಕ ಭವನದ ಉಸ್ತುವಾರಿಯಲ್ಲಿದ್ದು, ಅಂದು ಶಿಬಿರದ ಸಮಾರೋಪದಲ್ಲಿ ಭಾಗವಹಿಸಿದ್ದವರು, ಕಡಿದಾಳು ಪ್ರಕಾಶ್; ಕಿಮ್ಮನೆ ರತ್ನಾಕರ್ ಅಲ್ಲ. ಹೆಚ್ಚಾಗಿ ಸಕ್ರಿಯ ರಾಜಕಾರಣಿಗಳ ಸಹವಾಸದಲ್ಲೇ ಇರುವಂತೆ ತೋರುವ ರೇಷ್ಮೆಯವರಿಗೆ ಸಹಜವಾಗಿಯೇ ತೀರ್ಥಹಳ್ಳಿಯ ಸಕ್ರಿಯ ರಾಜಕಾರಣಿ ಕಿಮ್ಮನೆ ರತ್ನಾಕರರ ಹೆಸರೇ ಮನಸ್ಸಿನಲ್ಲಿ ದಾಖಲಾಗಿದೆ! ಅದಕ್ಕೆ ತಕ್ಕಂತೆಯೇ, ಮೂರು ದಿನಗಳ ಕಾಲ ಯಾವ ಸಮಕಾಲೀನ ಸಕ್ರಿಯ ರಾಜಕಾರಣಿಯ ಭಾಗವಹಿಸುವಿಕೆ ಇರಲಿ, ಪ್ರಸ್ತಾಪವೂ ಇಲ್ಲದೆ ಒಂದು ಅಧ್ಯಯನಶೀಲ ವಾತಾವರಣದಲ್ಲಿ ಸಮಾಜವಾದಿ ತತ್ವಗಳನ್ನು ವಿವಿಧ ನೆಲೆಗಳಿಂದ ವಿಶ್ಲೇಷಿಸುತ್ತಿದ್ದ ಆ ಶಿಬಿರಕ್ಕೆ ರೇಷ್ಮೆಯವರು ಸಕ್ರಿಯ ರಾಜಕಾರಣಿಗಳ ಒಂದು ಸಣ್ಣ ತಂಡವನ್ನೇ ಕರೆ ತಂದು, ಚರ್ಚೆಗೆ ಒಂದು ತಾಕ್ಷಣಿಕ ಪ್ರಸ್ತುತೆಯನ್ನು ಒದಗಿಸಿದರು! ಕರ್ನಾಟಕದ ರಾಜಕಾರಣದ ಎಲ್ಲ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಕರತಲಾಮಲಕ ಮಾಡಿಕೊಂಡಿರುವ ರೇಷ್ಮೆ, 'ಕರ್ನಾಟಕ ರಾಜಕಾರಣದ ಸಮಕಾಲೀನ ಸವಾಲುಗಳು' ಬಗ್ಗೆ ಮಾಡಿದ ಭಾಷಣ, ತನ್ನ ಸಮಗ್ರತೆ ಹಾಗೂ ಸಮತೋಲನಗಳಿಂದ ಎಲ್ಲರನ್ನೂ ದಂಗು ಬಡಿಸಿತು. ನನ್ನ ಮಟ್ಟಿಗೆ, ಎರಡು ಅಂಶಗಳ ಹೊರತಾಗಿ.

ಒಂದು: ಅವರು ಎಂ.ಪಿ. ಪ್ರಕಾಶರನ್ನು 'ಸಭ್ಯ ರಾಜಕಾರಣಿ' ಎಂದು ಕರೆದದ್ದು. ಕಳೆದ ಇಪ್ಪತ್ತೆರಡು ತಿಂಗಳಲ್ಲಿನ; ವಿಶೇಷವಾಗಿ ಕಳೆದೆರಡು, ನಿರ್ದಿಷ್ಟವಾಗಿ ಕಳೆದೊಂದು ತಿಂಗಳಿನ ಪ್ರಕಾಶರ ಅಸಭ್ಯ ರಾಜಕೀಯ ವರ್ತನೆಯನ್ನು ನೋಡಿಯೂ, ಅವರನ್ನು ಸಭ್ಯ ರಾಜಕಾರಣಿಯೆಂದು ಕರೆಯಬಹುದೇ? ಎರಡು: ರೇಷ್ಮೆಯವರು ರಾಜ್ಯದ ಸಮಕಾಲೀನ ರಾಜಕಾರಣದ ಅತಿ ದೊಡ್ಡ ಸವಾಲುಗಳಲ್ಲೊಂದು ಎಂದು ದೇವೇಗೌಡರ ಕುಟುಂಬ ರಾಜಕಾರಣವನ್ನು ಗುರುತಿಸುತ್ತಾರೆ. ಆದರೆ ಅದರ ಅತ್ಯಂತ ಜಿಗುಪ್ಸೆಕರ ಆವೃತ್ತಿಗೆ ಕಾರಣವಾದ ಜೆಡಿಎಸ್– ಬಿಜೆಪಿ ಮೈತ್ರಿ ಸರ್ಕಾರದ ರಚನೆಯ ಹಿಂದೆ ಕೆಲಸ ಮಾಡಿದ ಹಲವು ಕೈಗಳಲ್ಲಿ ತಮ್ಮವೂ ಸೇರಿದ್ದವು (ಸ್ವತಃ ಅವರೇ ಹಿಂದೊಮ್ಮೆ ಹೆಮ್ಮೆಯಿಂದ ಈ ಬಗ್ಗೆ ಬರೆದುಕೊಂಡಿದ್ದೂ ಉಂಟು.) ಎಂಬುದನ್ನೇಕೆ ಮರೆಯುತ್ತಾರೆ?

ರೇಷ್ಮೆಯವರು ಅಂದು ತಮ್ಮ ಭಾಷಣದಲ್ಲಿ ಎಲ್ಲವನ್ನೂ ಎಷ್ಟು ಸ್ಪಷ್ಟ ಹಾಗೂ ಅಸಂದಿಗ್ಧವಾಗಿ ಹೇಳಿದರೆಂದರೆ, ಅವರ ಭಾಷಣದ ಬಗ್ಗೆ ಚರ್ಚೆ ನಡೆಸಲು ಪ್ರಶ್ನೆಗಳೇ ಇರಲಿಲ್ಲ. ವಿಪರ್ಯಾಸವೆಂದರೆ, ಇದ್ದ ಒಂದೇ ಪ್ರಶ್ನೆಯೆಂದರೆ ಜನಪರ ಹಾಗೂ ಪ್ರಜಾಸತ್ತಾತ್ಮಕ ಆಂದೋಲನಗಳ ವಕ್ತಾರರೆನಿಸಿರುವ ಪಟ್ಟಾಭಿರಾಮ ಸೋಮಯಾಜಿಯವರದ್ದು: ಜನಪ್ರತಿನಿಧಿಗಳ ಸರ್ಕಾರದ ರಚನೆಯನ್ನು ಒಂದಷ್ಟು ಕಾಲ ಮುಂದೂಡುವ ಯಾವ ಅವಕಾಶವೂ ಇಲ್ಲವೇ? ಬಹುಶಃ ಇವರ ಆತಂಕ, ಚುನಾವಣೆಗಳು ಬೇಗ ನಡೆದರೆ ಬಿಜೆಪಿ ಅಧಿಕಾರಕ್ಕೆ ಬಂದೀತೆನ್ನುವುದೇನೋ! ಅದೇನೇ ಇರಲಿ, ರೇಷ್ಮೆಯವರು ತಮ್ಮ ಭಾಷಣದ ಈ ಯಶಸ್ಸಿನ ಸಂಭ್ರಮದಲ್ಲೆಂಬಂತೆ, ತಮ್ಮ ಭಾಷಣಕ್ಕೆ ಮುನ್ನ ಮುಕ್ತಾಯಗೊಂಡಿದ್ದ ಪಟ್ಟಾಭಿಯವರ ಭಾಷಣದ ಮೇಲಿನ ಚರ್ಚೆಗೆ ಪ್ರತಿಕ್ರಿಯಿಸಿ ಮಾತನಾಡಲು ಹೊರಟಾಗ, ಪರಿಸ್ಥಿತಿಯೇ ಬದಲಾಯಿತು. ಅವರೇನು ಮಾತನಾಡಿದರೆಂಬುದು ಹೋದ ವಾರದ ಅವರ ವರದಿಯಲ್ಲೇ ಉಲ್ಲೇಖವಾಗಿದೆ. ಆದರೆ ನಾನು ಅವರ ಈ ಪ್ರತಿಕ್ರಿಯೆಯ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಲು ನೀಡಿದ ರೂಲಿಂಗ್ ಎಂದು ಅವರು ಉಲ್ಲೇಖಿಸಿರುವ ಮಾತುಗಳು, ವಾಸ್ತವವಾಗಿ ನಾನು ಅವರ ಪ್ರತಿಕ್ರಿಯೆಯ ಮೇಲೆ ಚರ್ಚೆ ಆರಂಭಿಸಲು ಆಡಿದ ಮಾತುಗಳು ಆಗಿದ್ದವು! ನಾನು ಹೇಳಿದ್ದು ಇದು: ' ರೇಷ್ಮೆಯವರು ಈ ಮೂರು ದಿನಗಳ ಕಾಲ ನಡೆದ ಚರ್ಚೆಯೇ ನಿಷ್ಪ್ರಯೋಜಕ ಎನ್ನುವ ಧಾಟಿಯಲ್ಲಿ ಮಾತಾಡಿದ್ದಾರೆ. ಬಹುಶಃ ಅವರು ಮೂರು ದಿನಗಳ ಕಾಲ ನಮ್ಮ ಚರ್ಚೆಯಲ್ಲಿ ಭಾಗವಹಿಸಿದ್ದರೆ, ಈ ಮಾತುಗಳನ್ನಾಡುವ ಧೈರ್ಯ ಮಾಡುತ್ತಿರಲಿಲ್ಲ!'

ನಂತರ ಏನಾಯಿತೆಂದು ರೇಷ್ಮೆಯವರೇ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಆದರೆ ಅವರು ಹೇಳದೇ ಇರುವ ಒಂದು ಮಾತೆಂದರೆ, ಅಲ್ಲಿ ಸೇರಿದ್ದ– ಇಪ್ಪತ್ತೈದು ಮಂದಿ ಹೊಸ ಹುಡುಗ, ಹುಡುಗಿಯರೂ ಸೇರಿದಂತೆ– ಸುಮಾರು ನಲವತ್ತು ಜನ ಶಿಬಿರಾರ್ಥಿಗಳಲ್ಲಿ ಒಬ್ಬರೂ ರೇಷ್ಮೆಯವರ ವಾದವನ್ನು ಒಪ್ಪಲು ತಯಾರಿರಲಿಲ್ಲ. ಕರ್ನಾಟಕದ ಸಮಕಾಲೀನ ರಾಜಕಾರಣವನ್ನು ಕುರಿತ ರೇಷ್ಮೆಯವರ ವಿಶ್ಲೇಷಣೆಯನ್ನು ಕಿವಿಗೊಟ್ಟು ಕೇಳಿ ಮೆಚ್ಚಿದ್ದ

ಶಿಬಿರಾರ್ಥಿಗಳು, ಅವರ ಜಾಗತೀಕರಣ ಪರವಾದ ವಾದವನ್ನು ವಿಧ ವಿಧವಾದ ರೀತಿಯ ಪ್ರಶ್ನೆಗಳು ಹಾಗೂ ಅಸಮಾಧಾನಗಳ ಮೂಲಕ ವಿರೋಧಿಸತೊಡಗಿದಾಗ ದೊಡ್ಡ ಕೋಲಾಹಲವೇ ಉಂಟಾಯಿತು. ಈ ಕೋಲಾಹಲದ ನಡುವೆಯೂ, ಹಳೇ ಹುಲಿ ರೇಷ್ಮೆ ಅವರನ್ನು ಆ ಯುವ ಶಿಬಿರಾರ್ಥಿಗಳು (ಅವರಲ್ಲಿ ಹಲವರು ವಿದ್ಯಾರ್ಥಿಗಳು, ಉಪಾಧ್ಯಾಯರು, ಸರ್ಕಾರಿ ನೌಕರರು, ರೈತರೂ ಸೇರಿದ್ದರು) ಸಿಂಹದ ಮರಿಗಳಂತೆ ಅಟಕಾಯಿಸಿದ ಪರಿ, ಶಿಬಿರದ ನಿರ್ದೇಶಕನಾಗಿದ್ದ ನನಗೆ ನಿಜವಾದ ಖುಷಿ ಕೊಟ್ಟಿತು. ಎಲ್ಲ ಸಮಾಜವಾದಿ ಶಿಬಿರಗಳಂತೆ, ಹಲವು ಅನಿಶ್ಚಿತತೆಗಳ ನಡುವೆ ಆರಂಭವಾಗಿದ್ದ ಶಿಬಿರ, ಹೀಗೆ 'ಪರಿಣಾಮಕಾರಿ'ಯಾಗಿ ಮುಕ್ತಾಯಗೊಳ್ಳುತ್ತಿದ್ದುದು ನನಗೆ ತುಂಬ ಸಮಾಧಾನ ತಂದಿತ್ತು. ಅಂದು ನನಗೆ ಇದಕ್ಕಿಂತ ಹೆಚ್ಚಿನ ಸಂತೋಷದ ಸಂಗತಿಯಾಗಿ ಕಂಡದ್ದೆಂದರೆ, ಈ 'ದಾಳಿ'ಯ ನಡುವೆಯೂ ರೇಷ್ಮೆ ಹಾಗೂ ಅವರ ಬೆಂಬಲಕ್ಕೆ ನಿಂತಿದ್ದ ಶ್ರೀಮತಿ ಪ್ರಫುಲ್ಲ ಮಧುಕರ್ ಅವರು ತಮ್ಮ ಚಿತ್ತ ಸ್ಥಿಮಿತ ಕಳೆದುಕೊಳ್ಳದೆ ಅದನ್ನು ಖುಷಿಯಿಂದಲೇ ಎದುರಿಸಿದ್ದು.

ಜಾಗತೀಕರಣ ಕುರಿತ ನನ್ನ ಹಾಗೂ ರೇಷ್ಮೆಯವರ ಜಗಳ ಈ ಅಂಕಣದಷ್ಟೇ ಹಳೆಯದು. ಅವರು ಹಿಂದೊಮ್ಮೆ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರ ಸಾಧನೆಯನ್ನು ಮುಕ್ತವಾಗಿ ಹೊಗಳಿ ಬರೆದಾಗಲೇ, ವಾಸ್ತವವಾಗಿ ನಾನು– ಅದಕ್ಕೆ ಪ್ರತಿಕ್ರಿಯೆಯಾಗಿ, 'ನಾರಾಯಣಮೂರ್ತಿ ಮಾದರಿ: ಬಾಣಲೆಯಿಂದ ಬೆಂಕಿಗೆ' ಎಂಬ ಶೀರ್ಷಿಕೆಯಡಿ ನನ್ನ ಎರಡನೆಯದೋ, ಮೂರನೆಯದೋ ಅಂಕಣ ಬರೆದಾಗ– ಈ ಅಂಕಣವನ್ನು ನಿಯಮಿತವಾಗಿ ಬರೆಯಲು ಅಂತಿಮವಾಗಿ ನಿರ್ಧರಿಸಿದ್ದು! ಅಂದಿನಿಂದ ಇಂದಿನವರೆಗೆ ಜಾಗತೀಕರಣ ಹಾಗೂ ಅಮೆರಿಕಾ ಕುರಿತಂತೆ ನಮ್ಮಿಬ್ಬರ ನಡುವೆ ಅಭಿಪ್ರಾಯ ಭೇದಗಳು ಅನೇಕ ಬಾರಿ 'ವಿಕ್ರಾಂತ'ದಲ್ಲಿ ದಾಖಲಾಗಿವೆ. ಅಷ್ಟರ ಮಟ್ಟಿಗೆ ಈ ಪತ್ರಿಕೆ ಅಭಿಪ್ರಾಯ ಭೇದಗಳಿಗೆ ಅವಕಾಶ ಮಾಡಿಕೊಟ್ಟಿದೆ.

ಹಾಗೆ ನೋಡಿದರೆ, ರೇಷ್ಮೆಯವರ ವಾದದಲ್ಲೇ ಹಲವು ತೊಡಕುಗಳಿವೆ. ಅವರು ಅಂದು ಅಲ್ಲಿ ಹೇಳಿದಂತೆ, ಅಮೆರಿಕಾ open door democracyಯ ಪ್ರತೀಕ. ಹಾಗಾಗಿ, ನೀವು ಅಮೆರಿಕೀಕರಣವನ್ನೊಪ್ಪದಿದ್ದರೆ ಇರಾಕೀಕರಣವನ್ನೋ, ಚೀನೀಕರಣವನ್ನೋ ಒಪ್ಪಬೇಕಾಗುತ್ತದೆಂದು ಅವರು ವಾದಿಸುತ್ತಾರೆ. ಇಂತಹ ವಾದ ಮಂಡಿಸುವಾಗ ಅವರು ಎಷ್ಟು ಉದ್ವಿಗ್ನರಾಗುತ್ತಾರೆಂದರೆ, ಭಾರತಕ್ಕೆ ತನ್ನದೇ ಆದ ಅಸ್ಮಿತೆಯೊಂಬುದೊಂದಿದೆ; ಅದಕ್ಕೆ ದೇಶೀಯವಾದ ಒಂದು ಆಯ್ಕೆಯೂ ಇದೆ ಎಂಬುದನ್ನೇ ಮರೆಯುತ್ತಾರೆ. ಇದರಿಂದಾಗಿ, ಲೈಸೆನ್ಸ್– ಪರ್ಮಿಟ್ ರಾಜ್ಯವೆಂದು ಅವರು ಈಗ ಹೀಯಾಳಿಸುವ ವ್ಯವಸ್ಥೆಯಿಂದಾಗಿಯೇ ಕನಿಷ್ಟ ಎರಡು ತಲೆಮಾರುಗಳ ಸುಪ್ತ ಪ್ರತಿಭೆಯ ಅಸಂಖ್ಯಾತ ಜನ, ಸಮಾನ ಅವಕಾಶಗಳ ಪ್ರಯೋಜನ ಪಡೆದು ಸಮಾಜದಲ್ಲಿ ಘನತೆ ಗೌರವಗಳಿಂದ ಬಾಳಲು ಸಾಧ್ಯವಾದದ್ದು ಎಂಬುದರ ಪರಿವೆಯೇ ಅವರಿಗೆ ಇಲ್ಲದೇ ಹೋಗುತ್ತದೆ. ಲೈಸೆನ್ಸ್–

ಪರ್ಮಿಟ್ ರಾಜ್ಯದ ದೋಷಗಳಿಗೆ ಅಮೆರಿಕೀಕರಣವೇ ಮದ್ದು ಎಂಬಂತೆ ಅವರು ಅದರ ಲಾಭಗಳ ಪಟ್ಟಿ ಮಾಡುತ್ತಾರೆ.

ಇದಕ್ಕೆ ಕಾರಣ, ರೇಷ್ಮೆಯಂತಹವರು ಜಾಗತೀಕರಣವನ್ನು ಮಾಹಿತಿ ತಂತ್ರಜ್ಞಾನದ ಪರಿಣಾಮವಷ್ಟೆ ಎಂದು ಭಾವಿಸಿ, ಅದರ ಹಿಂದಿನ ರಾಜಕಾರಣದ ಬಗೆಗೆ ಯೋಚಿಸಲೇ ಹೋಗದಿರುವುದು. ಮಾಹಿತಿ ತಂತ್ರಜ್ಞಾನ ರೂಪಿಸಿದ ಅಂತರ್ಜಾಲದ ಮೂಲಕ ಜಗತ್ತು ಒಂದಾಗಿದೆ ಎನ್ನುವ ರೇಷ್ಮೆಯವರಿಗೆ, ಜಗತ್ತಿನ ಇಂತಹ ಅನಾತ್ಮಿಕ– ಜಡ– ಐಕ್ಯತೆಯ ಹುಸಿ ಭಾವನೆಯೇ ಮನುಷ್ಯನನ್ನು ಅನಾತ್ಮಿಕಗೊಳಿಸುತ್ತಾ ಅವನ ಎಲ್ಲ ಔಚಿತ್ಯ ಪ್ರಜ್ಞೆಯನ್ನೂ ನಾಶಗೈದು, ಅವನನ್ನು ರಾಕ್ಷಸ ಸುಖಿಯನ್ನಾಗಿ ಮಾಡುತ್ತಿರುವುದು ಎಂಬುದು ಅರಿವಿಗೆ ಬಾರದ್ದು ಸಹಜವೇ ಆಗಿದೆ. ಸದಾ ಬೆಂಗಳೂರು ರಾಜಕಾರಣದಲ್ಲೇ ಮುಳುಗಿ ತೇಲುವ ರೇಷ್ಮೆಯುವರಿಗೆ ಜಾಗತಿಕ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸುವಷ್ಟು ವ್ಯವಧಾನವಿಲ್ಲದಂತೆ ತೋರುತ್ತದೆ. ೨೦೦೦ರ ಅಮೆರಿಕಾ ಅಧ್ಯಕ್ಷ ಚುನಾವಣಾ ಮತ ಎಣಿಕೆಯಲ್ಲಿ ನಡೆದ ದೊಡ್ಡ ಮೋಸ ಯಾವ ಉದ್ದೇಶದ್ದು ಹಾಗೂ ಅದರಲ್ಲಿ ಆ ದೇಶದ ಧರ್ಮಾಧಿಕಾರ, ನ್ಯಾಯಾಂಗ ಹಾಗೂ ಕಾರ್ಯಾಂಗ ಈ ಎಲ್ಲವೂ ಹೇಗೆ ಸಮನ್ವಯದಿಂದ ಕೆಲಸ ಮಾಡಿದವು ಎಂಬುದು ಗೊತ್ತಿದ್ದರೆ (ಇದನ್ನು ಅಮೆರಿಕಾದ ನಾಗರಿಕ ಸಮಾಜ ಚಳುವಳಿಕಾರರೇ ತಮ್ಮ ಅಸಹಾಯಕತೆಯಲ್ಲಿ, ಬರವಣಿಗೆ ಹಾಗೂ ಸಾಕ್ಷ್ಯ ಚಿತ್ರಗಳ ಮೂಲಕ ಜಗತ್ತಿಗೆ ತಿಳಿಸಿದ್ದಾರೆ.), ಅಮೆರಿಕಾದ democracyಯ ಯಾವ doorಗಳು ಯಾರಿಗೆ ಎಷ್ಟು open ಆಗಿವೆ ಎಂಬುದು ರೇಷ್ಮೆಯವರಿಗೆ ತಿಳಿದಿರುತ್ತಿತ್ತು. ಅಮೆರಿಕಾ ಇರಾಕ್ ಮೇಲೆ ನಡೆಸಿರುವ ಯುದ್ಧ ಯಾವ ಪ್ರಜಾಸತ್ತಾತ್ಮಕತೆಯನ್ನು ಎತ್ತಿ ಹಿಡಿಯಲು ಎಂಬುದನ್ನು ರೇಷ್ಮೆಯವರೇ ಹೇಳಬೇಕು. ಜಾಗತಿಕ ಭಯೋತ್ಪಾದನೆಯ ಮೂಲ ಹಾಗೂ ಅಂತಿಮ ಗುರಿ ಅಮೆರಿಕಾವೇ ಏಕೆ ಆಗಿದೆಯೆಂದೂ ಅವರು ಯೋಚಿಸಬೇಕು.

ಅಮೆರಿಕೀಕರಣವೆಂಬ ಜಾಗತೀಕರಣ ಆರಂಭವಾದ ಹದಿನೈದು ವರ್ಷಗಳಲ್ಲಿ ನಮ್ಮ ನಿರುದ್ಯೋಗ ದರ ಎಷ್ಟು ಕಡಿಮೆಯಾಗಿದೆ ಎಂದು ರೇಷ್ಮೆಯವರು ಹೇಳಬೇಕು. ಕಳೆದ ಹದಿನೈದು ವರ್ಷಗಳೀಂದೀಚೆಗಷ್ಟೇ ರೈತರ ಆತ್ಮಹತ್ಯೆ ಏಕೆ ಆರಂಭವಾಯಿತೆಂದು ಅವರು ವಿವರಿಸಬೇಕು. ಕಳೆದು ಹದಿನೈದು ವರ್ಷಗಳಲ್ಲಿ ನಮ್ಮ ಸಮಾಜದಲ್ಲಿ ಹಿಂಸಾಚಾರದ ಪ್ರಮಾಣ ಹಾಗೂ ವೈವಿಧ್ಯ ಹೆಚ್ಚಾಗಿದೆಯೋ, ಕಡಿಮೆಯಾಗಿದೆಯೋ ಅವರೇ ತಿಳಿಸಬೇಕು. ಮುಕ್ತತೆ ಹಾಗೂ ಸ್ಪರ್ಧಾತ್ಮಕತೆಗಳ ಹೆಸರಿನಲ್ಲಿ ತಿಂಗಳಿಗೆ ಹತ್ತು ಲಕ್ಷ ರೂಪಾಯಿಗಳ ಸಂಬಳ ಕೊಡಲು ಅವಕಾಶ ಮಾಡಿಕೊಟ್ಟಿರುವ (ದುರಂತವೆಂದರೆ, ರೇಷ್ಮೆಯವರು ಇದನ್ನೊಂದು ಸಾಧನೆಯೆಂದು ಬಗೆಯುತ್ತಾರೆ!) ಈ ಆರ್ಥಿಕತೆಯ ವಕ್ತಾರರು, ಬಡತನ ರೇಖೆ ನಿರ್ಧರಿಸಲು ಇನ್ನೂ ನಲವತ್ತು ರೂಪಾಯಿಗಳ ದಿನವಹಿ ಆದಾಯವನ್ನೇ ಆಧಾರ ಮಾಡಿಕೊಂಡು ಬಡತನವನ್ನು ಸಾಕಷ್ಟು ಕಡಿಮೆ ಮಾಡಿದ್ದೇವೆ ಎಂದು ಹೇಳಿಕೊಳ್ಳುವುದು ಅಶ್ಲೀಲ ಎನಿಸುವುದಿಲ್ಲವೇ? ರೇಷ್ಮೆ ಹೇಳಬೇಕು. ಇಂತಹ ಅಭಿವೃದ್ಧಿಯ ಅವಧಿಯಲ್ಲಿಯೇ ಮಾನವ

ಬದುಕಿನ ಘನತೆ- ಮರ್ಯಾದೆಗಳ ಸೂಚ್ಯಂಕದಂತಿರುವ ವಿಶ್ವ ಅಭಿವೃದ್ಧಿ ಸೂಚ್ಯಂಕ ಪಟ್ಟಿಯಲ್ಲಿ ಭಾರತದ ಸ್ಥಾನಮಾನವೇಕೆ ಪ್ರತಿ ವರ್ಷ ಕೆಳಕ್ಕೇ ಹೋಗುತ್ತಿದೆ ಎಂಬುದನ್ನೂ ಅವರು ವಿವರಿಸಬೇಕು. ರೇಷ್ಮೆಯವರಿಗೆ ಬೆಂಗಳೂರೇ (ಒಂದು ರೂಪಕವಾಗಿ) ಪ್ರಪಂಚವಾದಂತಿದೆ; ಅಲ್ಲಿನ ಜಾಣರ ಯಶಸ್ಸೇ ಜಾಗತೀಕರಣದ ಯಶಸ್ಸಿನಂತೆ ಕಾಣುತ್ತಿದೆ.

ಸಂಸ್ಕೃತಿಯ ಸಂಸ್ಪರ್ಶವಿಲ್ಲದ ಪೌರುಷ ರಾಜಕಾರಣವೇ ಇದೆಲ್ಲದರ–ಅಮೆರಿಕಾ, ಜಾಗತೀಕರಣ– ಹಿಂದಿರುವ ಚೈತನ್ಯಶಕ್ತಿ. ಭಾರತವೂ ಮುಂದಿನ ಹತ್ತೋ ಹದಿನೈದೋ ವರ್ಷಗಳಲ್ಲಿ ಜಗತ್ತಿನ ಅತಿ ದೊಡ್ಡ ಮೂರನೇ ಮಹಾಶಕ್ತಿಯಾಗಿ ಹೊರಹೊಮ್ಮುವುದೆಂಬ ಕನಸನ್ನು ಬಿತ್ತಿಯೇ, ಜಾಗತಿಕ ಪೌರುಷ ರಾಜಕಾರಣವು ಜಾಗತಿಕ ಆರ್ಥಿಕ ಸಂಸ್ಥೆಗಳ ಮಾಜಿ ಉದ್ಯೋಗಿ ಮನಮೋಹನ ಸಿಂಗ್ ಹಾಗೂ ಅವರ ಗೆಳೆಯರ ಸುಪರ್ದಿಯಲ್ಲಿ (ತಮ್ಮ ಹಳೆಯ ಪೌರುಷ ರಾಜಕಾರಣದ ವರಸೆಗಳು ನೆನಪಾದಂತೆ, ಇತ್ತೀಚೆಗೆ ಬಂಗಾಳದ ಮಾರ್ಕ್ಸಿಸ್ಟರೂ ಇವರ ಜೊತೆ ಸೇರಲಾರಂಭಿಸಿದ್ದಾರೆ!) ಇಲ್ಲಿ ಹೊಸ ಆರ್ಥಿಕತೆಯ ಬೆಳೆ ತೆಗೆಯಲಾರಂಭಿಸಿರುವುದು. ಈ ಆರ್ಥಿಕತೆಯ ಭಾರತ ತನ್ನ ಹೊರಗೆ ಅಥವಾ ಒಳಗೆ ನವ– ವಸಾಹತುಶಾಹಿ ವ್ಯವಸ್ಥೆಯೊಂದನ್ನು ಸೃಷ್ಟಿಸಿಕೊಳ್ಳದ ಹೊರತು, ಜಾಗತೀಕರಣವೆಂಬ ಜಾಗತಿಕ ಪೌರುಷ ರಾಜಕಾರಣ ಇಲ್ಲಿ ಬಹಳ ಕಾಲ ನಡೆಯದು. ದೇಶಾದ್ಯಂತ ಈಗ ಜಾರಿಗೆ ಬರಹೊರಟಿರುವ ವಿಶೇಷ ಆರ್ಥಿಕ ವಲಯಗಳ ಪರಿಕಲ್ಪನೆಯೇ ಈ ನವ–ವಸಾಹತುಶಾಹಿ ವ್ಯವಸ್ಥೆಯನ್ನು ಸ್ಥಿರವಾಗಿ ನೆಲೆಗೊಳಿಸುವ ಪ್ರಯತ್ನವಾಗಿದ್ದರೆ ಆಶ್ಚರ್ಯವಿಲ್ಲ. ಇಂದು ಭಾರತದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ನಮ್ಮ ಕಣ್ಣಿನ ಮಿತಿಯಲ್ಲಷ್ಟೇ ಹಾಗೂ ಇಂದಿನ ಮಟ್ಟಿಗಷ್ಟೇ ನೋಡಿ ಅರ್ಥ ಮಾಡಿಕೊಂಡರೆ ಸಾಲದು. ಏಕೆಂದರೆ ಈಗಾಗುತ್ತಿರುವುದು ಯುಗಪಲ್ಲಟ. ಅದರ ದೂರಗಾಮಿ ಪರಿಣಾಮಗಳನ್ನು– ಶಾಂತಿ, ಸಮಾನತೆ, ಸಂಸ್ಕೃತಿ, ಪರಿಸರ ಇತ್ಯಾದಿ ನೆಲೆಗಳಲ್ಲಿ– ಯೋಚಿಸಿಯೇ ಅಂತಿಮ ತೀರ್ಮಾನಗಳಿಗೆ ಬರಬೇಕಾಗುತ್ತದೆ. ಮನಮೋಹನ ಸಿಂಗರ ವೈಯುಕ್ತಿಕ ಪರಿಶುದ್ಧತೆಯಾಗಲೀ, ಅಬ್ದುಲ್ ಕಲಾಂರ ಹೊಸ ಅಭಿವೃದ್ಧಿ ಪಥದ ಸಾಧುತ್ವವಾಗಲೀ ಮುಖ್ಯವೆನಿಸುವುದು ಇಂತಹ ಅಂತಿಮ ತೀರ್ಮಾನಗಳ ನೆಲೆಯಲ್ಲಿಯೇ ಹೊರತು, ಸ್ವತಂತ್ರವಾಗಿ ಅವು ಲೆಕ್ಕಕಿಲ್ಲದೇ ಹೋಗುವಂತಹವು.

ಹಾಗೆ ನೋಡಿದರೆ, ಕಲಾಂರ ಅಭಿವೃದ್ಧಿ ಪಥಕ್ಕೂ ಜಾಗತೀಕರಣಕ್ಕೂ ತಳುಕು ಹಾಕುವುದು ಸರಿ ಎನಿಸದು. ಏಕೆಂದರೆ ಇದು, ಜಾಗತೀಕರಣದಿಂದಲೇ ತಂತ್ರಜ್ಞಾನದ ಸೃಜನಶೀಲ ಅನ್ವಯ ಆರಂಭವಾಯಿತೆಂಬ ಹಾಗೂ ಜಾಗತೀಕರಣ ವಿರೋಧಿಗಳೆಲ್ಲರೂ ವಿಜ್ಞಾನ– ತಂತ್ರಜ್ಞಾನ ಮತ್ತು ಪ್ರಗತಿಯ ವಿರೋಧಿಗಳು ಎಂಬ ತಪ್ಪು ಅಭಿಪ್ರಾಯಕ್ಕೆ ದಾರಿ ಮಾಡಿಕೊಟ್ಟೀತು. ಇಲ್ಲಿ ಮುಖ್ಯ ಪ್ರಶ್ನೆ: ಎಂತಹ, ಎಷ್ಟು ವಿಜ್ಞಾನ– ತಂತ್ರಜ್ಞಾನ, ಯಾರ ಪ್ರಗತಿ ಹಾಗೂ ಯಾವ ವೆಚ್ಚದಲ್ಲಿ ಮತ್ತು ಏನೆಲ್ಲ ಕಳೆದುಕೊಂಡು ಎಂಬುದು. ಅಲ್ಲದೆ, ಯಾರನ್ನು ಕೇಳಿ ಹಾಗೂ ಯಾವ ಸಾಂವಿಧಾನಿಕ ನಿರ್ದೇಶನದ ಮೇರೆಗೆ ಈ ಯುಗಪಲ್ಲಟದ ಜಾಗತಿಕ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ ಎಂಬ ಪ್ರಶ್ನೆಯನ್ನೂ

ಪ್ರಜಾಪ್ರಭುತ್ವದ ವಕ್ತಾರರು ಇಲ್ಲಿ ಕೇಳಿಕೊಳ್ಳಬೇಕಾಗುತ್ತದೆ. ಜಾಗತೀಕರಣ, ಕಲಾಂರ ಅಭಿವೃದ್ಧಿ ಪಥದಂತಹ ಬೃಹತ್ ಯೋಜನೆಯನ್ನು ಅಪಾರ ದುಡ್ಡು ಮಾಡಿಕೊಳ್ಳುವ ಗುತ್ತಿಗೆ ಕೆಲಸಗಳ ದೊಡ್ಡ ಸರಮಾಲೆಯಾಗಿ ನೋಡುವುದೇ ಹೊರತು, ಅದನ್ನು ಜನಪರ ಶ್ರದ್ಧೆ ಹಾಗೂ ಬದ್ಧತೆಯಿಂದ ಅರ್ಥೈಸಿಕೊಂಡು ಪ್ರಾಮಾಣಿಕವಾಗಿ ಜಾರಿಗೆ ತರಬಲ್ಲ ಪ್ರಬುದ್ಧ ಪ್ರಜಾಸತ್ತಾತ್ಮಕ ರಾಜಕಾರಣವನ್ನು ಪ್ರೋತ್ಸಾಹಿಸಲಾರದು. ಕಳೆದ ಹದಿನೈದು ವರ್ಷಗಳ ರಾಜಕಾರಣದ ನಿರಂತರ ಹಾಗೂ ಹಲವು ನೆಲೆಗಳಲ್ಲಿನ ಅವನತಿಯೇ ಇದಕ್ಕೆ ಸಾಕ್ಷಿ.

ಎಲ್ಲ ಚರ್ಚೆಯ ಕೊನೆಯಲ್ಲಿ ಅಥವಾ ಕೊನೆಯೇ ಇಲ್ಲದಂತೆ ಕಾಣುತ್ತಿದ್ದ ಆ ಚರ್ಚೆಯನ್ನು ಕೊನೆಗಾಣಿಸಲು ರೇಷ್ಮೆಯವರಿಗೆ ನಾನು ಒಂದು ಮಾತು ಹೇಳಿದೆ: ಜಾಗತೀಕರಣದ ಪ್ರತೀಕದಂತಿರುವ ಇಂದಿನ ಬೆಂಗಳೂರನ್ನು ನೀವು ಒಪ್ಪುವಿರಾದರೆ, ಜಾಗತೀಕರಣವನ್ನೂ ಒಪ್ಪಿಕೊಳ್ಳಿ.

ಇಂತಹ ಬೆಂಗಳೂರಿನಿಂದ ಮೊನ್ನೆ ನಾನು ಮತ್ತು ನನ್ನ ಪತ್ನಿ ಬಸ್‌ನಲ್ಲಿ ಶಿವಮೊಗ್ಗಕ್ಕೆ ಬಂದು ಇಳಿದಾಗ ನನ್ನ ಪತ್ನಿ ನಿಟ್ಟುಸಿರು ಬಿಡುತ್ತಾ ಕೇಳಿದ ಪ್ರಶ್ನೆ: 'ಅಭಿವೃದ್ಧಿ ಎಂದರೆ, ಹತ್ತು ವರ್ಷಗಳ ಹಿಂದೆ ಆರು ತಾಸುಗಳಲ್ಲಿ ಮುಗಿಯುತ್ತಿದ್ದ ಈ ಪ್ರಯಾಣ ಈಗ ಎಂಟು ತಾಸಿಗೆ ಏರಿರುವುದೇ?' ಈ ಪ್ರಶ್ನೆ ಕೇಳಿ ಬಸ್ ಕಂಡಕ್ಟರ್ ಕೂಡಾ ಮಂಕಾದ...

ಆದರೆ ಅಲ್ಲಿ ರೇಷ್ಮೆಯವರಿದ್ದರೆ, ಬಹುಶಃ ಹೀಗೆ ಉತ್ತರಿಸುತ್ತಿದ್ದರೇನೋ: 'ಒಂದೆರಡು ವರ್ಷ ತಾಳಿ, ವಿಮಾನ ನಿಲ್ದಾಣ ಸಿದ್ಧವಾಗಲಿದೆ!'

ಜನವರಿ ೧೮, ೨೦೦೮

ಬಿ.ಎಸ್.ಪಿ : ದಲಿತ ಚಳುವಳಿಯ (ಅ)ತಾರ್ಕಿಕ ಅಂತ್ಯ ?

'ದಲಿತ ಚಳುವಳಿ ಮುಂದೇನು?' ಎಂಬ ಶೀರ್ಷಿಕೆಯಡಿ ಈ ಲೇಖನವನ್ನು ಮೂರು ವರ್ಷಗಳ ಹಿಂದೆ ಬರೆದಾಗ ಬಿ.ಎಸ್.ಪಿ., ದಲಿತ ಚಳುವಳಿಯ 'ಜಾತಿ ಬಿಟ್ಟು ದೇಶ ಕಟ್ಟು' ಎಂಬ ಘೋಷಣೆಗೆ ತಿಲಾಂಜಲಿ ನೀಡಿ, 'ದೇಶ ಬಿಟ್ಟು ಜಾತಿ ಕಟ್ಟು' ಎಂಬ ಘೋಷಣೆಯೊಂದಿಗೆ ಪರಿಶಿಷ್ಟ ಜಾತಿಗಳ ಜನರನ್ನು ಸಂಘಟಿಸುತ್ತಾ ಒಂದು ಅಂತರ್ಗಾಮಿ ರಾಜಕೀಯ ಶಕ್ತಿಯಾಗಿ ಮಾತ್ರ ಕ್ರಿಯಾಶೀಲವಾಗಿತ್ತು. ಆದರೆ ಇಂದು, ಅಂದು ತಾನು ಕೈ ಬಿಟ್ಟಿರುವುದಾಗಿ ಹೇಳಿಕೊಂಡಿದ್ದ ದೇಶಕ್ಕೆ ತನ್ನ ಅಭ್ಯರ್ಥಿಯನ್ನು ಪ್ರಧಾನಮಂತ್ರಿಯಾಗಿ ಸೂಚಿಸಬಲ್ಲ ಆತ್ಮವಿಶ್ವಾಸದೊಂದಿಗೆ ಕರ್ನಾಟಕದ ರಾಜಕಾರಣವನ್ನು ಏಕಾಕಿಯಾಗಿ– ಕೆಲವರ ಕಣ್ಣಿಗೆ ಬಿರುಗಾಳಿ ರೂಪದಲ್ಲೂ– ಪ್ರವೇಶಿಸಿದೆ. ಮೂಲ ದಲಿತ ಚಳುವಳಿಯೋ, ಹತ್ತು ಹಲವು ಪುಡಿ ನಾಯಕರ ಬಾಲಂಗೋಚಿಗಳಾಗಿ ಒಡೆದು ಹೋಗಿ ತನ್ನ ವಿಶ್ವಾಸಾರ್ಹತೆಯನ್ನೇ ಕಳೆದುಕೊಂಡಿದೆ. ಹಾಗಾದರೆ ಇದರೊಂದಿಗೆ, ಕಳೆದ ಮೂರು ದಶಕಗಳಲ್ಲಿ ಅಪಾರ ಶ್ರದ್ಧೆ, ಶ್ರಮ ಹಾಗೂ ತಾತ್ವಿಕ ಮುನ್ನೋಟದೊಂದಿಗೆ ಕಟ್ಟಲ್ಪಟ್ಟಿದ್ದ ದಲಿತ ಚಳುವಳಿ ಹಾಗೂ ರಾಜಕಾರಣ ಅಂತಿಮವಾಗಿ ಕೊನೆಗೊಂಡಂತಾಗಿದೆಯೇ? ಅಥವಾ ಅದು ಬಿ.ಎಸ್.ಪಿ ಮೂಲಕ ಹೊಸ ರೂಪ– ದಿಕ್ಕುಗಳನ್ನು ಪಡೆಯಲಾರಂಭಿಸಿದೆಯೇ? ಈ ಪ್ರಶ್ನೆಗಳ ಹಾಗೂ ಎರಡೂ ರೈತಸಂಘಗಳು ಒಗ್ಗೂಡಿ, ದಲಿತ ಸಂಘರ್ಷ ಸಮಿತಿಗಳ ಸಹಕಾರದೊಂದಿಗೆ 'ಸರ್ವೋದಯ ಕರ್ನಾಟಕ' ಪಕ್ಷವನ್ನು ಪುನರುಜ್ಜೀವನಗೊಳಿಸಲು ಈಗ ನಡೆಯುತ್ತಿರುವ ಪ್ರಯತ್ನಗಳ ಹಿನ್ನೆಲೆಯಲ್ಲಿ, ಹೊಸ ಶೀರ್ಷಿಕೆ ಹಾಗೂ ಕೊನೆಯಲ್ಲಿ ಹೊಸ ಸೇರ್ಪಡೆಯನ್ನು ಪಡೆದಿರುವ ಈ ಲೇಖನವನ್ನು, ಇಂದು ಇನ್ನೊಂದು (ಹೊಸ) ಓದಿಗೆ ಅರ್ಹ ಎಂದು ಭಾವಿಸಿ ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

*

ಸುಮಾರು ೨೫- ೩೦ ವರ್ಷಗಳಿಂದ ದಲಿತ ಚಳುವಳಿಯೊಂದಿಗೆ ನನ್ನ ಸಂಪರ್ಕವಿದೆ. ಆದರೆ ಈಗ ಆ ಸಂಪರ್ಕವಿದೆಯೆಂದು ನಾನು ನಿಜವಾಗಿ ಹೇಳಲಾರೆ. ಯಾಕೆಂದರೆ, ಮುಖ್ಯವಾಗಿ ಈಗ ದಲಿತ ಚಳುವಳಿ ಎಂಬುದೇ ಎಲ್ಲೂ ಕಾಣುತ್ತಿಲ್ಲ. ಹಾಗೇನಾದರೂ ಅದು ಕಣ್ಣಿಗೆ ಕಾಣುವಂತಿದ್ದರೆ, ಈಗ ಬಹುಜನ ಸಮಾಜ ಪಕ್ಷದ ಸಂಘಟನೆಯ ರೂಪದಲ್ಲಷ್ಟೇ ಕಾಣುತ್ತಿದೆ. ಆದರೆ ಎರಡು- ಮೂರು ದಶಕಗಳಿಂದಲೂ ದಲಿತ ಚಳುವಳಿಯನ್ನು ಸಹಾನುಭೂತಿಯಿಂದ ಗಮನಿಸುತ್ತಾ ಬಂದಿರುವ ನನಗೆ, ಬಹುಜನ ಸಮಾಜ ಪಕ್ಷದ ಯುವ ಸಂಘಟಕರ ಶಿಸ್ತು, ಬದ್ಧತೆ, ಅಂಬೇಡ್ಕರ್‌ವಾದವೆಂದು ಹೇಳಲಾಗುವ ವಿಚಾರಧಾರೆಯ ಉಗ್ರ ಪ್ರತಿಪಾದನೆ ಮತ್ತು ಪೆರಿಯಾರ್, ಜ್ಯೋತಿಬಾ ಫುಲೆ, ಶಾಹು ಮಹಾರಾಜ್ ಹಾಗೂ ಇತ್ತೀಚೆಗೆ ನಾಲ್ವಡಿ ಕೃಷ್ಣರಾಜ ಒಡೆಯರರ ಉಲ್ಲೇಖಗಳ ಹೊರತಾಗಿಯೂ, ಅದನ್ನು ದಲಿತ ಚಳುವಳಿಯೆಂದು ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಏಕೆ? ಈ ಪ್ರಶ್ನೆಯ ಹಿಂದೆಯೇ ಅಡಗಿದೆ ಸ್ವಾತಂತ್ರ್ಯೋತ್ತರ ಕರ್ನಾಟಕ ಕಂಡ ಅತ್ಯಂತ ನಿಜವಾದ ಹಾಗೂ ವಿಶಿಷ್ಟವಾದ ಚಳುವಳಿ ಎನಿಸಿದ ದಲಿತ ಚಳುವಳಿಯ ದುರಂತ ಕಥೆ.

– ೨–

ಆಗ–

ದಲಿತ ಸಂಘರ್ಷ ಸಮಿತಿಯ ತಾತ್ವಿಕ ಉದಾರತೆಯ ಉತ್ತುಂಗ ಕಾಲದಲ್ಲಿ ನಿರೂಪಿಸಿರಬಹುದಾದ 'ದಲಿತ' ಪದದ ಅರ್ಥ ವ್ಯಾಪ್ತಿಯ ಯಾವ ಅಳತೆಗೂ ಸಿಗದಂತಹ ಸಾಮಾಜಿಕ ಹಿನ್ನೆಲೆಯುಳ್ಳ ನನಗೆ ದಲಿತ ಚಳುವಳಿ, ನನ್ನ ಚಳುವಳಿ ಅನ್ನಿಸಿತ್ತು. ತಾತ್ವಿಕವಾಗಿ ಸಮಾಜವಾದಿ ಹಿನ್ನೆಲೆಗೆ ಸೇರಿದ ನನಗೆ ಅಂದಿನ ಆ ದಲಿತ ಚಳುವಳಿ ಲೋಹಿಯಾ ನಿಧನಾನಂತರ ಅವನತಿಗೊಂಡಿದ್ದ ಸಮಾಜವಾದಿ ಚಳುವಳಿಯ ಪುನರುಜ್ಜೀವಿತ ರೂಪವಾಗಿ ಕಂಡಿತ್ತು. ಅಸಮಾನತೆಗಳಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೊಂದಿರುವ ಎಲ್ಲ ಚಹರೆಯ 'ದಲಿತ'ರ ಲೌಕಿಕ ಹಾಗು ಅಧ್ಯಾತ್ಮಿಕ ನೆಮ್ಮದಿಯ ಗುರಿ ಇಟ್ಟುಕೊಂಡಿದ್ದ ಸಮಾಜವಾದಿ ಚಳುವಳಿಯು ತನ್ನ ಮಧ್ಯಮ ಜಾತಿ- ವರ್ಗಗಳ ಚಹರೆಗಳನ್ನು ಮೀರಿ ಬೆಳೆಯಲಾಗದೆ ಸ್ಥಗಿತಗೊಂಡಿದ್ದ ಸಮಯದಲ್ಲಿ ಕರ್ನಾಟಕದ ದಲಿತ ಚಳುವಳಿ ಹುಟ್ಟಿತ್ತು. ಆಗ ಅದು, ನಿಜವಾದ ಸಮಾಜವಾದಿ ಚಳುವಳಿಯಾಗಿ ಬೆಳೆಯುವ ಎಲ್ಲ ಲಕ್ಷಣಗಳನ್ನೂ ಪ್ರದರ್ಶಿಸತೊಡಗಿತ್ತು. ಈ ದಲಿತ ಚಳುವಳಿಯ ನಾಯಕರು ಎಂದೂ ಜಾತಿವಾದಿಗಳಾಗಿರಲಿಲ್ಲ. ಅವರು ಅಂಬೇಡ್ಕರ್ ಎಂದು ಮಾತನಾಡುತ್ತಿದ್ದರೂ, ಅವರ ಅಂಬೇಡ್ಕರರ ಹಿಂದೆ ಗಾಂಧೀಜಿ, ಲೋಹಿಯಾ, ಮಾರ್ಕ್ಸ್ ಎಲ್ಲರೂ ಇರುತ್ತಿದ್ದರು. ಹಾಗಾಗಿ ಅವರು ನಿಜವಾದ ಸಮಾಜವಾದಿ ಚಳುವಳಿಯ ನಾಯಕರಾಗಲು ಎಲ್ಲ ಅರ್ಹತೆ ಪಡೆದಿದ್ದರು. ಆ ಅರ್ಹತೆಯಲ್ಲಿ ಅಂಬೇಡ್ಕರರ ನೋವು ಮತ್ತು ಅವಮಾನ, ಗಾಂಧೀಜಿಯ ದುಃಖ ಮತ್ತು ವಿಷಾದ, ಲೋಹಿಯಾರ ಪ್ರತಿಭೆ ಮತ್ತು ಪ್ರತಿಭಟನೆ ಹಾಗೂ ಮಾರ್ಕ್ಸ್‌ನ ಬುದ್ಧಿ ಮತ್ತು ಮುನ್ನೋಟ ಎಲ್ಲ ಸೇರಿದ್ದವು.

ಅವರು ಈ ಎಲ್ಲ ಮಾನವೀಯ ಆಯಾಮಗಳೊಂದಿಗೆ ರಾಜ್ಯಾದ್ಯಂತ ಸಂಘಟನೆ ಕಟ್ಟಿದರು. ನಮ್ಮಂತಹವರು ಅವರನ್ನು ಟೀಕಿಸುತ್ತಾ, ವಿಮರ್ಶಿಸುತ್ತಾ, ಬೆಂಬಲಿಸುತ್ತಾ ನಮ್ಮ ಕೈಲಾದ ರೀತಿಯಲ್ಲಿ ಅವರೊಂದಿಗೆ ಕೈಜೋಡಿಸಿದೆವು. ಯಾಕೆಂದರೆ ಜಾತಿ ವ್ಯವಸ್ಥೆ ಮೂಲವಾದ ಎಲ್ಲ ಸಾಮಾಜಿಕ- ಆರ್ಥಿಕ ಪಾಪಗಳಿಂದ ನಮ್ಮೆಲ್ಲರ ಮುಕ್ತಿಯನ್ನೂ ದಲಿತ ಚಳುವಳಿಯ ಯಶಸ್ಸಿನಲ್ಲಿ ನಮ್ಮಂತಹವರು ಕಾಣತೊಡಗಿದ್ದರು. ಸಂಘಟನೆ ಕಟ್ಟುವಾಗ ಅವರು ಕಟ್ಟಿಕೊಂಡು ಹಾಡುತ್ತಿದ್ದ ಹಾಡುಗಳ ಮಾರ್ದವತೆಗೆ ಸೋಲದವನೇ ಪರಮಪಾಪಿ ಎಂದು ನನಗೆ ಆಗ ಎಷ್ಟೋ ಸಲ ಅನ್ನಿಸುತ್ತಿತ್ತು:

'ಕೊಲೆ ಸುಲಿಗೆ ನಾಡಿನಲ್ಲಿ ಕುಡಗೋಲು, ಅತ್ಯಾಚಾರ; ನಾಡಲ್ಲವೋ ಇದು, ವಿಷದ ಸಮುದ್ರ..!'

ಈಗ–

ಎಲ್ಲಿವೆ ಆ ಹಾಡುಗಳು? ಎಲ್ಲಿ ಹೋಯಿತು ಆ ವಿಷಾದ, ಪ್ರತಿಭಟನೆ, ಮಾರ್ದವತೆ?

– ೩ –

೧೯೮೮ರ ಆಸುಪಾಸಿನಲ್ಲಿ ಇರಬೇಕು. ಕೆಮ್ಮಣ್ಣುಗುಂಡಿಯ ಮೋಡ- ಮಂಜುಗಳ ಮಧ್ಯೆ ಐದಾರು ದಿನಗಳ ದಲಿತ ಅಧ್ಯಯನ ಶಿಬಿರವೊಂದು ಏರ್ಪಾಡಾಗಿತ್ತು. ಎಂತಹ ಶಿಬಿರವದು! ಅಲ್ಲಿ ಕರ್ನಾಟಕದ ಅತ್ಯುತ್ತಮ ಮನಸ್ಸುಗಳು ಸೇರಿದ್ದವು! ಲೋಹಿಯಾರಾಗಲಿ, ಅಂಬೇಡ್ಕರರಾಗಲೀ ಅಂತಹ ಶಿಬಿರ ನಡೆಸಿರಲಾರರು... ಅಲ್ಲಿ ಊಟಕ್ಕೆ ಕೊರತೆಯಿತ್ತು, ವಸತಿಗೆ ಕೊರತೆಯಿತ್ತು; ವಿಚಾರಕ್ಕೆ, ವಿಶ್ವಾಸಕ್ಕೆ ಕೊರತೆಯಿರಲಿಲ್ಲ. ಅಲ್ಲಿ ನಾವೆಲ್ಲ ಹೊಚ್ಚ ಹೊಸ ಕರ್ನಾಟಕದ ಕನಸು ಕಂಡೆವು.

ಆದರೆ ಅದೇ ಕೊನೆ... ಮತ್ತೆ ಆ ಕನಸು ಕಾಣದಾಯಿತು... ಆ ಹೊತ್ತಿಗೆ ಸರಿಯಾಗಿ ರೈತ ಸಂಘ ತಲೆ ಎತ್ತಿತ್ತು. ಅದು ತಲೆ ಎತ್ತಿತ್ತಾದರೂ ಹೇಗೆಂದರೆ, ಇಡೀ ಕರ್ನಾಟಕ ಅದರ ಕೂಗಿಗೆ ದಂಗು ಬಡಿದಿತ್ತು. ಹಾಗೆ ಬಡಿದ ದಂಗು, ದಲಿತ ಚಳುವಳಿಯನ್ನು ವಿಚಲಿತಗೊಳಿಸಿತ್ತು– ಎಷ್ಟರ ಮಟ್ಟಿಗೆ ಅಂದರೆ, ಆ ದಲಿತ ಚಳುವಳಿಯಲ್ಲಿದ್ದ ಪ್ರಮುಖ ನಾಯಕರೊಬ್ಬರು ದಲಿತ ಚಳುವಳಿಯನ್ನು ಮಟ್ಟ ಹಾಕಲೆಂದೇ ರೈತ ಚಳುವಳಿಯನ್ನು ಹುಟ್ಟು ಹಾಕಲಾಯಿತು ಎಂದು ಇಂದು ಕಾಲದೂರದಲ್ಲಿ ನಿಂತು, ಅರ್ಧ ವಿಷಾದ, ಅರ್ಧ ಸಿಟ್ಟಿನಿಂದ ಆರೋಪಿಸುವಷ್ಟು. ಈ ಆರೋಪಕ್ಕೆ ಇಂದು ಪುರಾವೆಗಳು ಸುಲಭಕ್ಕೆ ಸಿಗಲಾರವು. ಸಿಕ್ಕರೂ ಅವು ಇನ್ನಷ್ಟು ವಾದ- ವಿವಾದಗಳಿಗೆ ಕಾರಣವಾದಾವು. ಆದರೆ ಇಂದು ರೈತ ಚಳುವಳಿಯೊಂದಿಗೆ ಕೈ ಹಿಡಿದು ನಡೆಯಬಯಸಿರುವ ದಲಿತ ಚಳುವಳಿ ಹಾಗೂ ದಲಿತ ಚಳುವಳಿಯೊಂದಿಗೆ ಕೈಹಿಡಿದು ನಡೆಯಬಯಸಿರುವ ರೈತ ಚಳುವಳಿ ಈ ಆರೋಪಕ್ಕೆ ಪುರಾವೆಗಳನ್ನು ಹುಡುಕತೊಡಗುವುದರ ಬದಲಾಗಿ, ಈ ಆರೋಪದ ಹಿಂದಿರುವ ಕಹಿಯ

ಮೂಲ ಯಾವುದು ಎಂಬುದನ್ನು ಮುಖ್ಯವಾಗಿ ಪರಿಶೀಲಿಸಬೇಕಾಗಿದೆ. ಇಪ್ಪತ್ತು ವರ್ಷಗಳ ಹಿಂದೆ ಈ ಚಳುವಳಿಗಳ ಪರ್ವ ಕಾಲದಲ್ಲಿ ನಡೆದ ಪರಸ್ಪರ ತಾತ್ವಿಕ ಮುಖಾಮುಖಿ ಅಮೃತವನ್ನು ಕಡೆಯದೆ ವಿಷವನ್ನೇಕೆ ಕಡೆಯುವಂತಾಯಿತು? ಎರಡೂ ಚಳುವಳಿಗಳನ್ನು ಒಗ್ಗೂಡಿಸಿ ಒಂದು ಗ್ರಾಮ ಚಳುವಳಿಯನ್ನಾಗಿ ರೂಪಿಸುವ ಅಂದಿನ ಆ ಪ್ರಯತ್ನದ ಸಂದರ್ಭದಲ್ಲಿ ಎರಡೂ ಚಳುವಳಿಗಳ ಕೆಲವೇ ಕೆಲವು ನಾಯಕರುಗಳ ಹೊರತಾಗಿ ಮಿಕ್ಕವರೆಲ್ಲರೂ, ಈ ಎರಡೂ ಚಳುವಳಿಗಳ ಆಸಕ್ತಿಗಳೇ, ಕಾಳಜಿಗಳೇ, ಗುರಿಗಳೇ, ಕಾರ್ಯಕ್ರಮಗಳೇ ಬೇರೆ ಎಂಬಂತೆ ವರ್ತಿಸಿದುದರ ಹಿಂದಿನ ಕಾರಣವೇನು? ಈ ವಿಫಲ ಪ್ರಯತ್ನದ ನಂತರ ಕ್ರಮೇಣ ಈ ಎರಡೂ ಚಳುವಳಿಗಳು ಛಿದ್ರ– ವಿಚ್ಛಿದ್ರವಾಗುತ್ತ ಹೋದವು ಏಕೆ?

ಈ ಬಹುಮುಖ್ಯ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಈ ಎರಡೂ ಚಳುವಳಿಗಳ ಹಿಂದೆ ಕೆಲಸ ಮಾಡುತ್ತಿದ್ದ ಕರ್ನಾಟಕದ ಸಮಾಜವಾದಿ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕರ್ನಾಟಕದ ಮಟ್ಟಿಗಾದರೂ ಸಮಾಜವಾದಿ ಚಳುವಳಿಯು ನಮ್ಮ ಸಮಾಜದ ಎಲ್ಲ ವಿಷಮತೆಗಳ ಮೂಲವನ್ನು ಜಾತಿಪದ್ಧತಿಯೊಳಗೇ ಇರುವ ವಿಷಮತೆಯಲ್ಲಿ ಗುರುತಿಸಿತ್ತು. ಆದರೆ ಅಂತಹ ಜಾತಿ ಪದ್ಧತಿಗೆ ಚಾರಿತ್ರಿಕವಾಗಿ ಎಲ್ಲರೂ ಸಮಾನ ಉತ್ತರಾಧಿಕಾರಿಗಳಾಗಿದ್ದು; ಹಾಗಾಗಿ ಅದನ್ನು ಎಲ್ಲರೂ ಸಮಾನ ಸಂಕಲ್ಪದೊಡನೆ ಕಿತ್ತು ಹಾಕಲು ಪ್ರಯತ್ನಿಸಿದಾಗ ಮಾತ್ರ ಅದು ಬುಡ ಸಮೇತ ನಾಶವಾಗಬಲ್ಲುದು ಎಂಬ ರಾಜಕೀಯ ವಿವೇಕವನ್ನು ಸಮಾಜವಾದಿ ಚಳುವಳಿ ತೋರಲೇ ಇಲ್ಲ. ಬದಲಾಗಿ ಈ ಜಾತಿ ಪದ್ಧತಿಯಿಂದಾಗಿ ಅನುಭವಿಸಿದ ಚಾರಿತ್ರಿಕ ಲಾಭ ನಷ್ಟಗಳ ಲೆಕ್ಕಾಚಾರವೇ ಸಮಾಜವಾದಿಗಳ ಜಾತಿ ವಿರೋಧಿ ಹೋರಾಟದ ನೀತಿ ಸಂಹಿತೆಯಾಗಿ ರೂಪುಗೊಂಡಿತ್ತು. ಜಾತಿ ಪದ್ಧತಿ ಕುರಿತಂತೆ ಲೋಹಿಯಾ ಅವರು ವಿಶ್ವಾತ್ಮಕ ಪರಿಭಾಷೆಯಲ್ಲಿ ಮಂಡಿಸಿದ್ದ ತತ್ವ ಮೀಮಾಂಸೆಯನ್ನು ವಿಚಾರ ಸಂಕಿರಣಗಳಿಗಷ್ಟೇ ಮೀಸಲಿಟ್ಟ ಸಮಾಜವಾದಿಗಳು ತಮ್ಮ ಜಾತಿ ವಿರೋಧಿ ಕಾರ್ಯಕ್ರಮಗಳಿಗೆ, ಬ್ರಾಹ್ಮಣ ವಿರೋಧವನ್ನೇ ಮುಖ್ಯ ನೆಲೆಯನ್ನಾಗಿ ಮಾಡಿಕೊಂಡರು. ಜಾತಿ ಪದ್ಧತಿಯ ಮೂಲದಲ್ಲಿ ಬ್ರಾಹ್ಮಣನಿರುವನೆಂದೂ, ಆ ಬ್ರಾಹ್ಮಣನನ್ನು 'ನಿರ್ಮೂಲ' ಮಾಡಿದರೆ ಜಾತಿ ಪದ್ಧತಿ ನಾಶವಾಗುವುದೆಂಬ ಪೆರಿಯಾರ್ ಚಳುವಳಿಯಿಂದ ದತ್ತವಾದ ಸುಲಭ– ಸರಳವಾದ ಮತ್ತು ಕೇವಲ ಭಾವನಾತ್ಮಕವಾದ ನಿಲುವಿಗೆ ಸಮಾಜವಾದಿ ಚಳುವಳಿ ಬಲಿಯಾಯಿತು. ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿನ ಪೆರಿಯಾರ್ ಮೂಲದ 'ವಿಚಾರವಾದಿ ಚಳುವಳಿ'ಯ ಬಹುತೇಕ ನಾಯಕರು ಸಮಾಜವಾದಿ ಚಳುವಳಿಯ ನಾಯಕರೇ ಆಗಿದ್ದುದು ಆಕಸ್ಮಿಕವೇನಲ್ಲ. ಇದು ಸಮಾಜವಾದವನ್ನು ಬ್ರಾಹ್ಮಣೇತರವಾದವನ್ನಾಗಿ ಕುಬ್ಜಗೊಳಿಸುವಲ್ಲಿ ಮಾತ್ರ ಯಶಸ್ವಿಯಾಯಿತು. ಇದರಿಂದಾದ ದೊಡ್ಡ ದುರಂತ ಎಂದರೆ ಸಮಾಜವಾದಿ ಚಳುವಳಿಯೊಳಗೆ ಜಾತಿ ಪದ್ಧತಿಯು, ಗಾಯಗೊಂಡ ಕ್ರೂರ ಮೃಗದಂತೆ ಅಡ್ಡಾಡುತ್ತಾ ಸಮಾಜವಾದಿಗಳನ್ನು

ಘಾಸಿಗೊಳಿಸತೊಡಗಿತು. ಬ್ರಾಹ್ಮಣ ವಿರೋಧವು ಬ್ರಾಹ್ಮಣ ವಿರೋಧವಾಗಿ ಮಾತ್ರ ಉಳಿಯದೆ, ಪ್ರತಿಯೊಂದು ಕೆಳ ಜಾತಿಯೂ ತನ್ನ ಮೇಲಿನ ಪ್ರತಿಯೊಂದು ಜಾತಿಯನ್ನೂ ಶತ್ರು ಪಾಳೆಯದಂತೆ ನೋಡುವ ಪ್ರವೃತ್ತಿಗೆ ದಾರಿ ಮಾಡಿಕೊಟ್ಟಿತು. ಸಮಾಜವಾದಿ ಚಳುವಳಿ ಸಮಗ್ರ ನೋಟವನ್ನೇ ಕಳೆದುಕೊಂಡು ತನ್ನ ಮನಸ್ಸನ್ನು ಒಡೆದುಕೊಂಡಿತು. ಈ ಒಡಕುಗಳಲ್ಲೇ ದಲಿತ ಚಳುವಳಿ, ಹಿಂದುಳಿದ ವರ್ಗಗಳ ಚಳುವಳಿ, ಕನ್ನಡ ಚಳುವಳಿ ಹಾಗೂ ರೈತ ಚಳುವಳಿಗಳು ಹುಟ್ಟಿಕೊಂಡಿದ್ದು. ಗತಿಗೆಟ್ಟ ಕೆಲವು ಸಮಾಜವಾದಿಗಳು ಇವೆಲ್ಲವನ್ನೂ ಸಮಾಜವಾದಿ ಚಳುವಳಿಗಳು ಎಂದು ಗುರುತಿಸಿಕೊಂಡು ಹೆಮ್ಮೆಪಡುವುದುಂಟು...

– ೪–

ಈ ಎಲ್ಲ ವಿಪರ್ಯಾಸಗಳ ನಡುವೆ ನನ್ನಂತಹವರನ್ನು ಕಾಡುವ ಬಹುಮುಖ್ಯ ಪ್ರಶ್ನೆ ಎಂದರೆ, ಏನೆಲ್ಲ ಸಮಾಜವಾದಿ ಆಶಯಗಳನ್ನು ಹೇಳಿಕೊಂಡರೂ ಅಂತಿಮವಾಗಿ ಲೌಕಿಕವಾಗಷ್ಟೇ– ಬೆಳೆ ಬೆಲೆ ಬೇಡಿಕೆ ಸುತ್ತ– ಬೆಳೆದ ರೈತ ಚಳುವಳಿಯು, ದಲಿತ ಚಳುವಳಿಯನ್ನು ಆ ಪರಸ್ಪರ ಐತಿಹಾಸಿಕ ಮುಖಾಮುಖಿಯಲ್ಲಿ, ತನ್ನ ದಾರಿಗೆ ಅಡ್ಡ ಬಿದ್ದಿದ್ದ ಆಂಜನೇಯನ ಬಾಲವನ್ನು ನೋಡಿ ಅಸಹನೆಗೊಂಡ ಭೀಮನಂತೆ ವರ್ತಿಸಿದ್ದು ಆಶ್ಚರ್ಯಕರವಲ್ಲವಾದರೂ; ನೋವು– ವಿಷಾದಗಳನ್ನು ತುಂಬಿಕೊಂಡೇ ಬೆಳೆದ ದಲಿತ ಚಳುವಳಿಯು, ರೈತ ಚಳುವಳಿಯೊಂದಿಗೆ ಆಂಜನೇಯನಂತೆ– ಹಿರಿಯನ ಮಾರ್ದವತೆಯೊಂದಿಗೆ– ಏಕೆ ವರ್ತಿಸಲಾಗಲಿಲ್ಲ ಎಂಬುದು. ದಲಿತ ಸಂಘರ್ಷ ಸಮಿತಿಯು ರೈತ ಸಂಘದೊಂದಿಗೆ ಜಗಳಕ್ಕಿಳಿಯದೆ ಅದನ್ನು ಪಳಗಿಸುವ ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನೇಕೆ ಪ್ರದರ್ಶಿಸಲಾಗಲಿಲ್ಲ? ನನ್ನ ಅನುಮಾನ, ತನ್ನೆಲ್ಲ ಹಾಡು– ಹೋರಾಟಗಳ ಹೊರತಾಗಿಯೂ ದಲಿತ ಚಳುವಳಿಗೆ ಆತ್ಯಂತಿಕವಾಗಿ ಜಾತಿ ಪದ್ಧತಿಯ ಭಯದಿಂದ ಬಿಡುಗಡೆ ಸಿಕ್ಕಿರಲಿಲ್ಲ. ಈಗಲೂ ಹಾಗಾಗಿಯೇ ಅದು ನಿರ್ಣಾಯಕ ಸಂದರ್ಭದಲ್ಲಿ, ರೈತ ಸಂಘದ ಆರ್ಭಟಕ್ಕೆ ತಲ್ಲಣಗೊಂಡು ಅದನ್ನು ಗುಮಾನಿಯಿಂದ ನೋಡುವಂತಾಯಿತು. ಇದು ಜಾತಿ ಪದ್ಧತಿಯ ಸಮಸ್ಯೆಯನ್ನು ಇಡಿಯಾಗಿ ಮುಖಾಮುಖಿಯಾಗಿಸಿಕೊಂಡು ಅದನ್ನು ಸಂಪೂರ್ಣವಾಗಿ ಪರಿಹರಿಸಿಕೊಳ್ಳುವಲ್ಲಿ ಗಂಭೀರ ಪ್ರಯತ್ನ ಮಾಡದ ಸಮಾಜವಾದಿ ಚಳುವಳಿಯ ಸೋಲೆಂದೇ ನಾನು ಗುರುತಿಸಬಯಸುವೆ. ಅರ್ಧಂಬರ್ಧ ಹೊಡೆದು ಹಾಕಲ್ಪಟ್ಟಿರುವ ಜಾತಿ ಪದ್ಧತಿಯೆಂಬ ಹಾವು, ಇಂದು ಟಿಸಿಲು ಟಿಸಿಲಾಗಿ ಒಡೆದು ಹೋಗಿ ಅಲ್ಲಲ್ಲಿ ಸಡಿಲ ಗುಂಪುಗಳಾಗಿ ಅಸ್ತಿತ್ವದಲ್ಲಿರುವ ಸಮಾಜವಾದಿ ಚಳುವಳಿಯನ್ನು, ಆಗಾಗ– ನಿರ್ಣಾಯಕ ಸಂದರ್ಭಗಳಲ್ಲಿ– ಕಚ್ಚುತ್ತಾ, ಎಚ್ಚರ ತಪ್ಪಿಸುತ್ತಲೇ ಇದೆ. ಆದರೆ ಒರಟಾದ ಸಮಕಾಲೀನ ರಾಜಕಾರಣದಲ್ಲಿ ತಮ್ಮ ಸೂಕ್ಷ್ಮತೆಯನ್ನೇ ಕಳೆದುಕೊಂಡಂತಿರುವ ಸಮಾಜವಾದಿಗಳು, ಪ್ರತಿ ಬಾರಿ ಎಚ್ಚರ ತಪ್ಪಿದಾಗಲೂ, ಬೇರೇನನ್ನೋ ಕಾರಣಗಳನ್ನು ಹುಡುಕುತ್ತಾ ಕ್ರಮೇಣ ಸ್ವತಃ ತಾವೇ ಕಳೆದು

ಹೋಗುತ್ತಿದ್ದಾರೆ. ದಲಿತ- ರೈತ ಚಳುವಳಿಗಳು ಕಳೆದು ಹೋಗಿರುವುದೂ ಹೀಗೇ- ಎಚ್ಚರ ತಪ್ಪಿ ತಪ್ಪಿ, ದಿಕ್ಕೆಟ್ಟು ಅಲೆಯುತ್ತಿವೆ. ದಲಿತ ಚಳವಳಿಗೆ ರೈತ ಚಳುವಳಿಯೇ ದಿಕ್ಕು, ರೈತ ಚಳುವಳಿಗಳಿಗೆ ದಲಿತ ಚಳುವಳಿಯೇ ದಿಕ್ಕು ಎಂಬ ಅರಿವು ಮೂಡಿದಾಗ ಮಾತ್ರ ಇವೆರಡೂ ಒಂದಾಗಿ ಜನರ ಕಣ್ಣಿಗೆ ಕಾಣಿಸಬಲ್ಲವು. ಈ ಎರಡೂ ಚಳುವಳಿಗಳ ಮನಸ್ಸುಗಳು ಜಾತಿ ಪದ್ಧತಿಯ ಒಳ ಸುಳಿಗಳಿಂದ ಬಿಡುಗಡೆಗೊಂಡಾಗ ಮಾತ್ರ ಈ ಅರಿವು ಮೂಡಬಲ್ಲುದು. ಜಾಗತೀಕರಣದ ಸವಾಲುಗಳನ್ನು ಎದುರಿಸಲು ಒಗ್ಗಟ್ಟಾಗಿ ಹೊರಟಿರುವ ಈ ಚಳುವಳಿಗಳು, ಈ ಒಗ್ಗಟ್ಟಾಗುವ ಕ್ರಮದಲ್ಲೇ ಈ ಬಿಡುಗಡೆಗೂ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು. ಇದಕ್ಕಾಗಿ ಎರಡೂ ಚಳುವಳಿಗಳಿಗೂ ಗಾಂಧಿ- ಲೋಹಿಯಾ- ಅಂಬೇಡ್ಕರ್ ಸಮಾನ ಹಾಗೂ ಸಾಮಾನ್ಯ ನಾಯಕರಾಗಬೇಕು.

– ೫ –

ಈ ಹಿನ್ನೆಲೆಯಲ್ಲಿ ನೋಡಿದಾಗ ಬಹುಜನ ಸಮಾಜ ಪಕ್ಷದ ನಿಲುವು- ಸಂಘಟನೆಗಳ ಮಿತಿಗಳು ಗೊತ್ತಾಗುತ್ತವೆ. ದುರಂತವೆಂದರೆ ಸಮಾಜವಾದಿ ಚಳುವಳಿಗೆ ಯಾವ ಜಾತಿ ಪದ್ಧತಿ ಉರುಳಾಗಿ ಪರಿಣಮಿಸಿದೆಯೋ, ಅದನ್ನೇ ಬಹುಜನ ಸಮಾಜ ಪಕ್ಷ ಆಭರಣವೆಂಬಂತೆ ಧರಿಸಿಕೊಳ್ಳುತ್ತಿರುವುದು. ಹಾಗೆ ನೋಡಿದರೆ ದಲಿತ ಚಳುವಳಿ ಎಚ್ಚರ ತಪ್ಪಿದುದರ ಒಂದು ಪರಿಣಾಮವಾಗಿಯೇ ಕರ್ನಾಟಕದಲ್ಲಿ ಬಹುಜನ ಸಮಾಜ ಪಕ್ಷದ ಸಂಘಟನೆ ಆರಂಭವಾಯಿತೆಂದು ಹೇಳಬೇಕು. ಜಾತಿ ಪದ್ಧತಿಯ ಚರಿತ್ರೆಯನ್ನೇ ತನ್ನ ಸಿದ್ಧಾಂತವನ್ನಾಗಿ ಸ್ವೀಕರಿಸಿ, ಆ ಕಹಿ ಚರಿತ್ರೆಯ ಮೇಲೇ ಬಹುಜನರ ಭವಿಷ್ಯವನ್ನು ನಿರ್ಮಿಸಹೊರಟಿರುವ ಈ ಸಂಘಟನೆಗೆ; ಮನುಷ್ಯ ಚರಿತ್ರೆಗೆ ಮಾತ್ರ ಸೇರಿದವನಲ್ಲ, ಅವನು ವರ್ತಮಾನದಲ್ಲೂ ಇರುತ್ತಾ ಅವೆರಡನ್ನೂ ಮೀರುವುದರಲ್ಲೇ ಭವಿಷ್ಯವನ್ನು ನಿರ್ಮಿಸುತ್ತಿರುತ್ತಾನೆ ಎಂಬ ಪ್ರಾಥಮಿಕ ಅರಿವೂ ಇದ್ದಂತಿಲ್ಲ. ನೆನಪುಗಳು- ಅವು ಕಹಿಯಾಗೇ ಇರಲಿ, ಸಿಹಿಯಾಗೇ ಇರಲಿ- ಅವುಗಳನ್ನಷ್ಟೇ ಆಧರಿಸಿ ಒಂದು ರಾಜಕೀಯ ತತ್ವಜ್ಞಾನವನ್ನು ರೂಪಿಸಲಾಗುವುದಿಲ್ಲ. ಹಾಗೆ ರೂಪಿಸಹೊರಟವರು ವರ್ತಮಾನದ ನಿಷ್ಠುರ ಹೆಜ್ಜೆಗಳ ತೊತ್ತಳದುಳಿತಕ್ಕೆ ಸಿಕ್ಕಿ ಭವಿಷ್ಯವನ್ನೇ ಕಾಣದ ದುರಂತಕ್ಕೀಡಾಗುವರು. ಹಾಲು ಕುಡಿದ ಮಕ್ಕಳೇ ಬದುಕುತ್ತಿಲ್ಲ. ಇನ್ನು ವಿಷ ಕುಡಿಯಲೆಳಸುವ ಮಕ್ಕಳು? ಹೀಗಿರುವಾಗ ಪ್ರಜ್ಞಾಪೂರ್ವಕವಾಗಿಯೇ ಒಂದು ಜನಸಮೂಹವನ್ನು ದುರಂತದೆಡೆಗೆ ಒಯ್ಯಲಾಗುತ್ತಿರುವ ಪ್ರಯತ್ನವನ್ನು ದಲಿತ ಚಳುವಳಿಯೆಂದೋ ಮತ್ತೊಂದು ಚಳುವಳಿಯೆಂದೋ ಹೇಗೆ ಕರೆಯಲಾದೀತು?

ಈಗ ಸೇರಿಸಿದ್ದು: ಕರೆಯಬೇಡಿ; ಹಾಗೆಂದು ಕರೆಯಲು ಯಾರು ಹೇಳಿದ್ದು ನಿಮಗೆ ಎನ್ನುತ್ತಾರೆ ಈಗ ಬಹುಜನ ಸಮಾಜ ಪಕ್ಷದ ನಾಯಕರು! ಏಕೆಂದರೆ, 'ಜನಿವಾರ, ಕತ್ತಿ,

ತಕ್ಕಡಿ– ಈ ಮೂರಕ್ಕೆ ಚಪ್ಪಲಿಯಿಂದ ಹೊಡಿ' ಎಂಬ ಪ್ರಚೋದಕ ಘೋಷಣೆ ಮೂಲಕ ಎರಡು ದಶಕಗಳ ಹಿಂದೆ ದ್ವಿಜೇತರ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯೇತರ) ಜಾತಿಗಳ ರಾಜಕೀಯ ಸಂಘಟನೆಗೆ ತೊಡಗಿದ ಬಿಎಸ್‌ಪಿ, ಇಂದು ತನ್ನನ್ನು ಇದ್ದಕ್ಕಿದಂತೆ ಸರ್ವಜನರ ಪಕ್ಷವೆಂದು ಹೇಳಿಕೊಳ್ಳತೊಡಗಿದೆ. ಮನುವಾದದ ವಿರುದ್ಧವಾದುದೆಂದು ಹೇಳಲಾದ ರಾಜಕೀಯ ತತ್ವಾದರ್ಶಗಳೊಂದಿಗೆ ಸಂಘಟನೆ ಆರಂಭಿಸಿದ ಈ ಪಕ್ಷವೀಗ ಚುನಾವಣಾ ರಾಜಕೀಯವೇ ನಿಜವಾದ ರಾಜಕಾರಣವೆಂಬ 'ವಾಸ್ತವಿಕ ಸತ್ಯ'ಕ್ಕಷ್ಟೇ ತನ್ನನ್ನು ಮಿತಿಗೊಳಿಸಿಕೊಂಡು, ತನ್ನೆಲ್ಲ ತತ್ವಾದರ್ಶಗಳಿಗೂ ತಿಲಾಂಜಲಿ ನೀಡಿದೆ. ತಾನು ಏನು ಮಾಡಲು ಹೊರಟು, ಏನು ಮಾಡತೊಡಗಿದ್ದೇನೆ ಎಂಬ ಪರಿವೇ ಇಲ್ಲದ ಈ ಪಕ್ಷ, ಜನತೆಗೆ ಯಾವುದರ ಬಗೆಗೂ ಏನೂ ಹೇಳದೆ; ಸದ್ಯಕ್ಕೆ ತನ್ನ ನಾಯಕಿ ಮಾಯಾವತಿಯವರನ್ನು ರಾಷ್ಟ್ರದ ಪ್ರಧಾನ ಮಂತ್ರಿಯನ್ನಾಗಿ ಮಾಡುವ ಒಂದಂಶದ ಕಾರ್ಯಕ್ರಮವನ್ನು ತನ್ನ ಮುಂದಿಟ್ಟುಕೊಂಡಿದೆ. ಅದಕ್ಕಾಗಿ ಅದು ಮಾಡುತ್ತಿರುವ ರಾಜಕಾರಣದ ಮಾದರಿ ಮೊನ್ನೆ ಬೆಂಗಳೂರಿನ ಅದರ ಬೃಹತ್ ಸಮಾವೇಶದಲ್ಲಿ ಪ್ರದರ್ಶನಗೊಂಡಿತು.

ಮಾಯಾವತಿ ಚಿನ್ನದ (ಲೇಪನದ?) ಕಿರೀಟ ಧರಿಸಿ, ಚಿನ್ನದ ಕತ್ತಿ ಸ್ವೀಕರಿಸಿದರು! ಇದು ಜನಪ್ರಿಯ ರಾಜಕಾರಣದ ಒಂದು ಸಾಮಾನ್ಯ ವರಸೆ ಎಂದು ನಿರ್ಲಕ್ಷಿಸಬಹುದೆನ್ನುವ ಹೊತ್ತಿಗೆ ಅವರು ತಮ್ಮ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆಯನ್ನು ಆ ಸಾರ್ವಜನಿಕ ಸಭೆಯಲ್ಲಿ– ಜಾತಿ, ಉಪಜಾತಿ ಆಧಾರದ ಮೇಲೆ ಸಮರ್ಥಿಸಿಕೊಳ್ಳುತ್ತಾ– ಏಕಾಏಕಿ ಪ್ರಕಟಿಸಿ, ಎಲ್ಲರನ್ನೂ– ಬಹುಶಃ ಅವರ ಪಕ್ಷದ ಪದಾಧಿಕಾರಿಗಳು ಹಾಗೂ ಅಭಿಮಾನಿಗಳೂ ಸೇರಿದಂತೆ– ದಂಗು ಬಡಿಸಿದರು. ಇವರು ಈ ಚಿನ್ನದ ಕಿರೀಟ, ಕತ್ತಿಗಳ ಅಸಭ್ಯ ಹಾಗೂ ಎಡಗೈ– ಬಲಗೈ ಲೆಕ್ಕಾಚಾರದ ಭಂಡ ರಾಜಕಾರಣ ಮಾಡುತ್ತಲೇ ಸರ್ವಜಾತಿಗಳ ಬೆಂಬಲ ಕೇಳುವ ಧೈರ್ಯ ಮಾಡುತ್ತಾರೆಂದರೆ ಹಾಗೂ ಅದಕ್ಕೆ ನಮ್ಮ ಕೆಲವು ಹಿರಿಯ ರಾಜಕೀಯ ನಾಯಕರು ಸ್ಪಂದಿಸುತ್ತಾರೆಂದರೆ, ನಮ್ಮ ಇಂದಿನ ರಾಜಕಾರಣ ಎಷ್ಟು ನಿರ್ಲಜ್ಜಗೊಂಡಿರಬೇಕು! ಈ ನಿರ್ಲಜ್ಜ ರಾಜಕಾರಣದ ಪ್ರತೀಕವಾಗಿ ದಲಿತ ಮಹಿಳೆಯೊಬ್ಬರು ಒಡಮೂಡಿ ನಿಂತಿರುವುದು ಹಾಗೂ ಆಕೆಯ ಎದುರಿಗೆ ಒಂದು ಕಾಲದಲ್ಲಿ ರಾಜ್ಯದ ವಿಚಾರವಂತ ಜನತೆಯ ಸಾಮಾಜಿಕ ಆತ್ಮಸಾಕ್ಷಿಯಾಗಿ ಕೆಲಸ ಮಾಡಿದ ದಲಿತ ಚಳುವಳಿ ಇಂದು ದೀನವಾಗಿ, ಅಸಹಾಯಕವಾಗಿ ನಿಲ್ಲುವಂತಾಗಿರುವುದು ಕರ್ನಾಟಕದ ದಲಿತ ರಾಜಕಾರಣ– ಇದರಲ್ಲಿ ಎಲ್ಲ ಪಕ್ಷಗಳ ದಲಿತ ನಾಯಕರ ಪಾಲಿದೆ– ತಲುಪಿರುವ ದರಿದ್ರ ಸ್ಥಿತಿಯ ಸಂಕೇತವೇ ಆಗಿದೆ.

ಜಾತಿ ವಿನಾಶದ ಆದರ್ಶ ಹೊಂದಿದ್ದ ಸಮಾಜವಾದಿ ಚಳುವಳಿಯಿಂದ ಸ್ಫೂರ್ತಿ ಪಡೆದಿದ್ದ ಕರ್ನಾಟಕದ ದಲಿತ ಚಳುವಳಿ ಅದಕ್ಕೆ ತದ್ವಿರುದ್ಧವಾಗಿ; ಚಿನ್ನದ ಕತ್ತಿ, ಕಿರೀಟಗಳೊಂದಿಗೆ ಜಾತಿ ಸಮಾಜವನ್ನು ಪೋಷಿಸುವ ದಲಿತ ನೇತೃತ್ವದ ಪಕ್ಷವೊಂದಕ್ಕೆ ಜಾಗ ಬಿಟ್ಟು ಕೊಡುವಂತಾಗಿರುವುದು, ನಿಜವಾಗಿಯೂ ನಮ್ಮ ದಲಿತ ಚಳುವಳಿಯ

ವೈಫಲ್ಯವೋ ಅಥವಾ ನಾವು ಇಷ್ಟರವರೆಗೆ ನಂಬಿಕೊಂಡು ಬಂದಿದ್ದ ಸಮಾಜವಾದಿ ತತ್ವದ ಶಿಥಿಲತೆಂಯೋ ಹೇಳಲಾಗದಷ್ಟು, ಇಂದಿನ ಕರ್ನಾಟಕದ ರಾಜಕಾರಣ 'ಅತಿವಾಸ್ತವವಾದಿ'ತ್ವದಲ್ಲಿ ಮುಳುಗಿಹೋಗಿದೆ.

ಜನವರಿ ೨೫, ೨೦೦೮

ಕರ್ನಾಟಕದ ರಕ್ಷಣೆ ಯಾರಿಂದ ?

ಸಮಾಜವಾದಿ ಗೆಳೆಯ ಶ್ರೀನಿವಾಸ ಕುಮಾರ್ ಇನ್ನಿಲ್ಲ ಎಂದರೆ ನಂಬುವುದು ಕಷ್ಟ. ಇನ್ನೂ ಮಧ್ಯ ವಯಸ್ಸಿನಲ್ಲಿದ್ದ ಅವರು ಮೊನ್ನೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಶ್ರೀನಿವಾಸ ಕುಮಾರ್ ಮೂಲತಃ ತುಮಕೂರು ಜಿಲ್ಲೆಯವರಾದರೂ ಉದ್ಯೋಗ ನಿಮಿತ್ತ ದೂರದ ಚಾಮರಾಜನಗರದಲ್ಲಿ ನೆಲೆಸಿದ್ದು, ಅಲ್ಲಿ ಅಪೂರ್ವ ಡಿಸಿಲ್ವ, ಮಹೇಶ್ ಹರವೆ, ಬಿ. ರಾಜೇಶ್ ಮುಂತಾದ ಯುವ ಗೆಳೆಯರೊಡಗೂಡಿ ಸಮಾಜವಾದಿ ಅಧ್ಯಯನ ಕೇಂದ್ರವೆಂಬುದೊಂದನ್ನು ಕಟ್ಟಿಕೊಡಿದ್ದರು, ಅದರಡಿಯಲ್ಲಿ ಅವರು ತಮ್ಮ ಮಿತಿಗಳಲ್ಲೇ ಅನೇಕ ರೀತಿಯ ಸಮಾಜವಾದಿ ಚಟುವಟಿಕಗಳಲ್ಲಿ ತೊಡಗಿಕೊಂಡಿದ್ದರು: ತಮ್ಮ ಗೆಳೆಯರನ್ನು ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ಮದುವೆಗಳಿಗೆ ಪ್ರೋತ್ಸಾಹಿಸಿ, ಸ್ಥಳೀಯವಾಗಿ ಅದನ್ನೊಂದು ಸಣ್ಣ ಚಳುವಳಿಯಾಗಿ ರೂಪಿಸಿದ್ದರು. ಸಮಾಜವಾದಿ ಸಾಹಿತ್ಯವನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನೂ ಅವರು ಮಾಡಿದ್ದರು. ಕಂಪ್ಯೂಟರ್ ನಿರ್ವಹಣೆಯಲ್ಲಿ ಪರಿಣತಿ ಹೊಂದಿದ್ದ ಶ್ರೀನಿವಾಸ ಕುಮಾರ್, ಇತ್ತೀಚಿನ ದಿನಗಳಲ್ಲಿ ಲೋಹಿಯಾ ಕುರಿತ ವೆಬ್-ಸೈಟೊಂದನ್ನು ಸ್ಥಾಪಿಸುವ ಸಾಹಸದಲ್ಲಿ ತೊಡಗಿದ್ದರು. ಅದಕ್ಕಾಗಿ ನನ್ನಿಂದ ಲೋಹಿಯಾ ಸಂಪಾದಕತ್ವದ ಹಳೆಯ 'ಮ್ಯಾನ್‌ಕೈಂಡ್' ಸಂಚಿಕೆಗಳನ್ನು ತರಿಸಿಕೊಂಡಿದ್ದರು. ಈ ಕೆಲಸ ಎಷ್ಟು ಪೂರ್ಣವಾಗಿದೆಯೋ ತಿಳಿಯದು. ಸರಳ ಸಜ್ಜನರಾಗಿದ್ದ ಶ್ರೀನಿವಾಸಕುಮಾರ್, ಬಹಳಷ್ಟು ಸಮಾಜವಾದಿಗಳ ಕಾರ್ಯಶೈಲಿಗೆ ವಿರುದ್ಧವಾಗಿ, ಎಲೆ ಮರೆಯ ಕಾಯಿಯಂತೆ ಕೆಲಸ ಮಾಡಿ ಕಣ್ಮರೆಯಾಗಿದ್ದಾರೆ. ಈ ಕಾಲದಲ್ಲಿ ಸಮಾಜವಾದಿ ಎನಿಸಿಕೊಳ್ಳಲು ಸಾಕಷ್ಟು ಧೈರ್ಯ ಹಾಗೂ ಬದ್ಧತೆ ಬೇಕು. ಅಂತಹ ಅಪರೂಪದ ಧೈರ್ಯ, ಬದ್ಧತೆಗಳಿದ್ದ ಶ್ರೀನಿವಾಸ ಕುಮಾರ್‌ರ ಸಾವು ಅವರ ಗೆಳೆಯರಲ್ಲಿ ಅಪಾರ ದುಃಖವನ್ನುಂಟು ಮಾಡಿರುವುದು ಸಹಜವೇ. ಆದರೆ, ಕನಿಷ್ಟ ಅವರ ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸುವುದೇ ಆ ಚೇತನಕ್ಕೆ ಈ ಗೆಳೆಯರು ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ.

ಈ ಕಾಲ ಶ್ರೀನಿವಾಸ ಕುಮಾರ್‌ರಂತಹ ತಾತ್ವಿಕ ಬದ್ಧತೆಯಿದ್ದವರು ಬೆಳಕಿಗೆ ಬರುವ ಕಾಲವಲ್ಲ. ಏನಿದ್ದರೂ, ಪ್ರಮೋದ್ ಮುತಾಲಿಕ ಅಥವಾ ನಾರಾಯಣಗೌಡರಂತಹ ಬೀದಿ ಬಂಟರು ಮೆರೆಯುವ ಕಾಲ. ಇತ್ತೀಚೆಗೆ ರೈಲ್ವೆ ನೇಮಕಾತಿಯ ವಿರುದ್ಧ ಬೆಂಗಳೂರಿನಲ್ಲಿ

ನಡೆದ ಮತ್ತು ರಾಜ್ಯದ ಹಲವು ಕಡೆ ಪ್ರತಿಧ್ವನಿಸಿದ ಪ್ರತಿಭಟನೆಯನ್ನೇ ನೋಡಿ. ವಸೂಲಾತಿ ಮೂಲಕ ಅಪಾರ ಆಸ್ತಿ ಸಂಗ್ರಹ ಹಾಗೂ ಅನೇಕ ರೀತಿಯ ದುಂಡಾವರ್ತಿಯ ಆರೋಪಗಳನ್ನು ತಮ್ಮ ಮಾಜಿ ಸಹಚರರಿಂದಲೇ ಎದುರಿಸುತ್ತಿರುವ ಟಿ. ನಾರಾಯಣಗೌಡರ ಕರ್ನಾಟಕ ರಕ್ಷಣಾ ವೇದಿಕೆ, ರೈಲ್ವೇ ಇಲಾಖೆ ತನ್ನ ನೇಮಕಾತಿ ಪ್ರಕ್ರಿಯೆಯನ್ನು ಅಮಾನತ್ತಿನಲ್ಲಿಡಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿ, ಇಂದು ಒಂದು ಸಾರ್ವಜನಿಕ ಮಾನ್ಯತೆ ಹಾಗೂ ಗೌರವಾನ್ವಿತತೆಗಳನ್ನು ಗಳಿಸಿಕೊಳ್ಳುವಂತಾಗಿದೆ. ಹೋದ ವಾರದ ಸಂಪಾದಕೀಯದಲ್ಲಿ ರೇಷ್ಮೆಯವರು ಹೇಳಿದಂತೆ, ಇದಕ್ಕೆ ಕಾರಣ ನಮ್ಮ ರಾಜಕೀಯ ನಾಯಕತ್ವದ ವೈಫಲ್ಯವೇ ಆಗಿದೆ. ನಮ್ಮದು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ. ಅಂದರೆ, ಜನರ ಅಧಿಕೃತ ಪ್ರತಿನಿಧಿಗಳು ಜನರ ಹಿತಾಸಕ್ತಿಗಳನ್ನು ಸಂರಕ್ಷಿಸುವ ವ್ಯವಸ್ಥೆ. ಆದರೆ ಇಂದು ಈ ಅಧಿಕೃತ ಜನ ಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿ, ಅನಧಿಕೃತ ಜನ ಪ್ರತಿನಿಧಿಗಳಿಗೆ ರಾಜ್ಯ ವ್ಯವಸ್ಥೆಯನ್ನು ವಹಿಸಿಕೊಡುತ್ತಿದ್ದಾರೆ.

ನಮ್ಮ ಪ್ರಜಾಪ್ರಭುತ್ವದಲ್ಲಿ ಅನಧಿಕೃತ ಜನ ಪ್ರತಿನಿಧಿಗಳಿಗೆ ಜಾಗವಿಲ್ಲವೆಂದಲ್ಲ. ಜನರ ಹಿತಾಸಕ್ತಿಗಳು ಧಕ್ಕೆಗೊಳಗಾದಾಗಲೆಲ್ಲ ಆ ಬಗ್ಗೆ ಜಾಗೃತಿ ಮೂಡಿಸಲು ಅನಧಿಕೃತ ಜನಸಂಘಟನೆಗಳು ಅಗತ್ಯ. ಅವುಗಳ ಪ್ರತಿನಿಧಿಗಳು ಅಥವಾ ನಾಯಕರೆನಿಕೊಂಡವರು ಅಧಿಕೃತ ಪ್ರತಿನಿಧಿಗಳ ಮೇಲೆ ಒತ್ತಡ ಹಾಕಿ ಅವರ ಮೂಲಕ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವಂತಹ ಕಾರ್ಯಾಚರಣೆಗಳಲ್ಲಿ ತೊಡಗುವುದು ಒಂದು ಕ್ರಿಯಾಶೀಲ ಪ್ರಜಾಪ್ರಭುತ್ವದ ಲಕ್ಷಣ. ಆದರೆ ಇಂದು ಕಂಡುಬರುತ್ತಿರುವುದೇನೆಂದರೆ, ಅನಧಿಕೃತ ಜನ ಪ್ರತಿನಿಧಿಗಳೇ ನೇರವಾಗಿ ವ್ಯವಸ್ಥೆಗೆ ಸವಾಲು ಹಾಕಿ ವ್ಯವಸ್ಥೆಯಿಂದ ಪ್ರತಿಸ್ಪಂದನವನ್ನೂ, ಆ ಮೂಲಕ ಮಾನ್ಯತೆಯನ್ನೂ ಪಡೆಯುತ್ತಿರುವುದು! ಇದು, ನಮ್ಮಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ ಸೋಲುತ್ತಿರುವ, ಅರಾಜಕತೆಗೆ ದಾರಿ ಮಾಡಿಕೊಡುತ್ತಿರುವ ಸೂಚನೆಯಷ್ಟೇ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇಂದು ಒಂದು ಕಡೆಯಿಂದ ಕಾರ್ಪೊರೇಟ್‌ಶಾಹಿ ತನ್ನ ಧನ ಮದದ ಮೂಲಕ ಬೆದರಿಕೆ ಹಾಕುತ್ತಿದ್ದರೆ, ಇನ್ನೊಂದು ಕಡೆ ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಜನಸಾಮಾನ್ಯರ ಅನಧಿಕೃತ ಪ್ರತಿನಿಧಿಗಳು ತಮ್ಮ ದುಂಡಾವೃತ್ತಿಯ ಮೂಲಕ ಬೆದರಿಕೆ ಹಾಕುತ್ತಿದ್ದಾರೆ.

ಮೊನ್ನೆ ವಿಶ್ವಬ್ಯಾಂಕಿನ ಆರ್ಥಿಕ ಸಲಹೆಗಾರರೆಂದು ಹೇಳಲಾದ ಬಾಲಸುಬ್ರಹ್ಮಣ್ಯಂ ಎಂಬುವವರು ಕರ್ನಾಟಕವನ್ನು ಭಾರತದಲ್ಲೇ ಅತ್ಯಂತ ಭ್ರಷ್ಟ ರಾಜ್ಯವೆಂದು ಕರೆದಿದ್ದಾರೆ. ಇದಕ್ಕೂ, ರಾಜ್ಯದಲ್ಲಿ ಇಂದು ಅನೇಕ ರೀತಿಯ ಅಸಂಖ್ಯಾತ ವೇದಿಕೆಗಳು, ಸೇನೆಗಳು, ದಳಗಳು, ಅಭಿಮಾನಿ ಸಂಘಗಳು ತಲೆ ಎತ್ತುತ್ತಿರುವುದಕ್ಕೂ ಸಂಬಂಧವಿದ್ದಂತೆ ತೋರುತ್ತದೆ. ನಮ್ಮ ಶಾಸಕಾಂಗ, ಕಾರ್ಯಾಂಗಗಳೆರಡೂ ಭ್ರಷ್ಟತೆಯ ಭಾರದಲ್ಲಿ ಕುಸಿದು ಬಿದ್ದು, ನ್ಯಾಯಾಂಗ ಅದನ್ನು ಅಸಹಾಯಕವಾಗಿ ನೋಡುವಂತಹ ಸ್ಥಿತಿ ಉಂಟಾದಾಗ; ಖಾಸಗಿ ದಳಗಳು– ಒಳ್ಳೆಯದು, ಕೆಟ್ಟದು ಎರಡಕ್ಕೂ– ಹುಟ್ಟಿಕೊಳ್ಳುವುದು ಸಹಜವೇ ಆಗಿದೆ. ಕಾರ್ಪೊರೇಟ್‌ಶಾಹಿ

ತನ್ನ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗದ ಸ್ವೋಪಜ್ಞ ಹೆಸರುಗಳಲ್ಲಿ ಖಾಸಗಿ ದಳಗಳನ್ನು ರಚಿಸಿಕೊಂಡು ಅವುಗಳ ಮೂಲಕ ತುಂಬಾ ನಾಜೂಕಾಗಿ (ಅಥವಾ ನಾಜೂಕಯ್ಯಗಳಾಗಿ?) ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಕೊಳ್ಳತೊಡಗಿದ್ದರೆ; ಸಾಮಾನ್ಯ ಜನತೆ ತಮ್ಮದೇ ಬೀದಿ ಹೋರಾಟದ ಅನಧಿಕೃತ ದಳ, ಸೇನೆ, ವೇದಿಕೆ, ಸಂಘಗಳ ಮೂಲಕ ದೊಂಬಿ, ಗಲಭೆ, ಪ್ರತಿಭಟನೆ, ಮೆರವಣಿಗೆಗಳನ್ನು ಏರ್ಪಡಿಸಿಕೊಂಡು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳತೊಡಗಿದ್ದಾರೆ. ಇದರಲ್ಲಿನ ಮುಖ್ಯ ಅಪಾಯವೆಂದರೆ, ಆ ನಾಜೂಕುತನದಲ್ಲಿನ ಜಾಣ ಸುಳ್ಳು, ಮೋಸ, ತಟವಟ, ಆಮಿಷ ಅಥವಾ ಈ ದೊಂಬಿ– ಮೆರವಣಿಗೆಗಳಲ್ಲಿನ ಹಿಂಸಾಚಾರ, ಸಾರ್ವಜನಿಕ ಜೀವನದ ಅಸ್ತವ್ಯಸ್ತತೆಗಳಿಗಿಂತ ಹೆಚ್ಚಾಗಿ, ಅವು ಸೃಷ್ಟಿಸುವ ದೊಡ್ಡ ಪ್ರಚಾರ– ಗೊಂದಲಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯೆಂಬುದೇ ಖಾಸಗಿ ಹಿತಾಸಕ್ತಿಯಾಗಿ ಮಾರ್ಪಾಡಾಗುವುದು. ನಮ್ಮ ಕಾರ್ಪೊರೇಟ್ ಸಂಸ್ಥೆಗಳ ಬರೀ ಬೆಂಗಳೂರು ಕೇಂದ್ರಿತ ಅಭಿವೃದ್ಧಿ ಬೇಡಿಕೆಗಳನ್ನು ನೋಡಿದರೆ ಅಥವಾ ಕರ್ನಾಟಕ ರಕ್ಷಣಾ ವೇದಿಕೆಯ ಬ್ಯಾನರ್‌ಗಳ ತುಂಬಾ ವ್ಯಾಪಿಸಿರುವ ಅದರ ನಾಯಕಮಣಿಗಳ ಮುಖಾರವಿಂದಗಳನ್ನು ನೋಡಿದರೆ ಇದು ವೇದ್ಯವಾದೀತು.

ಅಂದ ಮಾತ್ರಕ್ಕೆ ನಾನು ಕರ್ನಾಟಕ ರಕ್ಷಣಾ ವೇದಿಕೆಯ ಇತ್ತೀಚಿನ ಹೋರಾಟದ ಮಹತ್ವವನ್ನು ಅಲ್ಲಗೆಳೆಯುತ್ತಿಲ್ಲ. ಈ ಹೋರಾಟದ ಮೂಲಕ ಅದು ಗಳಿಸಿಕೊಂಡಿರುವ ಕೀರ್ತಿಗೆ ಅದು ನಿಜವಾಗಿಯೂ ಬಾಧ್ಯವೇ ಆಗಿದೆ. ಆದರೆ, ಭಾರತದ ಸ್ವತಂತ್ರ ಪ್ರಜೆಗಳಾಗಿ ಕನ್ನಡಿಗರ– ಕರ್ನಾಟಕದವರ ಹಕ್ಕುಗಳನ್ನು ಎತ್ತಿ ಹಿಡಿಯಲು ಎಷ್ಟೆಲ್ಲ ವೇದಿಕೆಗಳನ್ನು ನಮ್ಮ ಪ್ರಜಾಪ್ರಭುತ್ವ ಕಲ್ಪಿಸಿ ಕೊಟ್ಟಿದ್ದರೂ– ಸಂಸತ್ತು, ರಾಜ್ಯ ಶಾಸನ ಸಭೆ, ನ್ಯಾಯಾಂಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿಗಳು– ಕನ್ನಡಿಗರು ಯಾವಾಗಲೂ ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವ ದುಂಡಾವರ್ತಿಯ ಮೂಲಕವೇ ಮತ್ತು ಅನ್ಯ ಭಾಷಿಕ ಸಮುದಾಯಗಳ ವಿರುದ್ಧ ಕಹಿ ಹುಟ್ಟಿಸುತ್ತಲೇ, ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಅನಿವಾರ್ಯತೆ ಉಂಟಾಗಿರುವ ಬಗ್ಗೆ ನಮಗೆ ವಿಷಾದವೂ ಉಂಟಾಗಬೇಕು. ರಕ್ಷಣಾ ವೇದಿಕೆಯ ಹೋರಾಟ ದೊಡ್ಡ ಸುದ್ದಿಯಾಗಿ ಸಾರ್ವಜನಿಕರ ಗಮನ ಸೆಳೆದ ಮೇಲೇ ಅಲ್ಲವೇ, ಈ ಎಲ್ಲ ಅಧಿಕೃತ ವೇದಿಕೆಗಳ ಸದಸ್ಯರು ಹೋರಾಟದಲ್ಲಿ ತಾವೂ ಇದ್ದೇವೆ ಎಂದು ಮುಖ ತೋರಿಸಹೊರಟದ್ದು? ಕನ್ನಡದ ಜನಸಮುದಾಯ ಭಾರತವೆಂಬ ಒಕ್ಕೂಟದ ಒಂದು ಭಾಗವಾಗಿರುವುದು ತಮ್ಮ ಕುಲ ಅಸ್ಮಿತೆಯನ್ನು ಕಳೆದುಕೊಳ್ಳುವುದಕ್ಕಲ್ಲ; ಬದಲಿಗೆ ಅದನ್ನು ಇನ್ನಷ್ಟು ಸಂಪನ್ನಗೊಳಿಸಿಕೊಳ್ಳುವ ಮೂಲಕ ಈ ಒಕ್ಕೂಟವನ್ನು ಬಲಗೊಳಿಸಲು. ನಮ್ಮ ರಾಷ್ಟ್ರೀಯ (ಸ್ವಾತಂತ್ರ್ಯ) ಹೋರಾಟ ಹಾಗೂ ಕರ್ನಾಟಕ ಏಕೀಕರಣ ಹೋರಾಟಗಳು ನಡೆದದ್ದು ಈ ಆಶಯದೊಂದಿಗೇ. ಹೀಗಾಗಿಯೇ ನಮ್ಮ ಸಂವಿಧಾನ ಈ ರಾಷ್ಟ್ರವನ್ನು ಸಾಂಘಿಕ ಸ್ವರೂಪದ ರಾಷ್ಟ್ರವನ್ನಾಗಿ ಘೋಷಿಸಿ, ಎಲ್ಲರಿಗೂ ತಮ್ಮ ಭಾಷೆ, ಸಂಸ್ಕೃತಿಗಳನ್ನು ಉಳಿಸಿಕೊಂಡು ಬೆಳೆಸುವ ಹಕ್ಕುಗಳನ್ನು ನೀಡಿರುವುದು.

ಇದು ಸಾಧ್ಯವಾಗುವುದು ಎಲ್ಲ ಭಾಷೆ– ಸಂಸ್ಕೃತಿಗಳ ಜನರಿಗೂ ರಾಷ್ಟ್ರ ಜೀವನವನ್ನು ಕಟ್ಟುವ ಸಮಾನಾವಕಾಶಗಳು ಲಭ್ಯವಿರುವ ವಾತಾವರಣವಿದ್ದಾಗ. ಆದರೆ, ಏಕೀಕರಣ ಸಮಯದಲ್ಲೇ ಕರ್ನಾಟಕದ 'ಅಖಿಲ ಭಾರತೀಯ' ನಾಯಕರ ತಲೆಕೆಳಗಾದ ರಾಷ್ಟ್ರೀಯತೆಯಿಂದಾಗಿ ಅನೇಕ ಕನ್ನಡ ಪ್ರದೇಶಗಳನ್ನು ರಾಜ್ಯ ಕಳೆದುಕೊಂಡಿತು. ನಂತರದ ವರ್ಷಗಳಲ್ಲಿ ಈ ತಲೆಕೆಳಗಾದ ರಾಷ್ಟ್ರೀಯತೆಯಿಂದಾಗಿಯೇ ಹುಟ್ಟಿದ ಸ್ವಾರ್ಥ, ಅಧಿಕಾರ ಲಾಲಸೆ ಹಾಗೂ ಜಾತಿ ಹಿತಾಸಕ್ತಿಗಳನ್ನಾಧರಿಸಿದ ಜನದೂರವಾದ ರಾಜಕಾರಣ ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನೇ ಕಳೆದುಕೊಂಡು, ಸಾಮಾನ್ಯ ಕನ್ನಡಿಗರನ್ನು ಭಾರತದ ಅಸಹಾಯಕ ಪ್ರಜೆಗಳನ್ನಾಗಿ ಮಾಡಿ ಕೂರಿಸಿದೆ. ಇದರ ಜೊತೆಗೆ, ಅನೇಕ ಐತಿಹಾಸಿಕ ಕಾರಣಗಳಿಂದಾಗಿ ತಮ್ಮ ಸಾಂಸ್ಕೃತಿಕ ಅಸ್ಮಿತೆಯ ಬಗೆಗೆ ಅಷ್ಟು ಕಾಳಜಿ ಇಲ್ಲದ ಕನ್ನಡಿಗರ ಒಂದು ದೊಡ್ಡ ಜನಸಮೂಹದ ನಿರಭಿಮಾನವೂ ಸೇರಿ, ಕರ್ನಾಟಕವನ್ನು ಸಾಂಸ್ಕೃತಿಕ ಬೇರು ಕಳೆದುಕೊಳ್ಳುತ್ತಿರುವ ಒಂದು ಆಧುನಿಕ ಪೆಡಂಭೂತವನ್ನಾಗಿ ಪರಿವರ್ತಿಸುತ್ತಿದೆ.

ಹೀಗೆ ಬೇರೆ ರಾಜ್ಯಗಳ ಭಾಷಾ ಸಮುದಾಯಗಳ ನಾಯಕತ್ವಕ್ಕೆ ಹೋಲಿಸಿದರೆ, ಒಂದು ಸಾಂಸ್ಕೃತಿಕ ಅರಿವೇ ಇಲ್ಲದಂತೆ ತೋರುವ ಕರ್ನಾಟಕದ ರಾಜಕೀಯ ನಾಯಕತ್ವ, ತನ್ನ ಉಳಿವಿಗಾಗಿ ಪೋಷಿಸುತ್ತಿರುವ ಭ್ರಷ್ಟಾಚಾರ, ಕುಟುಂಬವಾದ, ಜಾತಿವಾದ, ಜಾಗತಿಕವಾದಗಳ ಸುಳಿಯಲ್ಲಿ ಈ ರಾಜ್ಯ ಭಾರತದ ರಾಜಕಾರಣದಲ್ಲಿ ತನ್ನ ಲಂಗರುಗಳನ್ನು ಕಳೆದುಕೊಂಡು ಆತ್ಮವಿಲ್ಲದ ದೇಹದಂತೆ ಎದ್ದೆದ್ದು ಬೀಳುತ್ತಿದೆ. ಇದರ ರಾಜಧಾನಿ ಬೆಂಗಳೂರು ಎಲ್ಲ ಪ್ರಾದೇಶಿಕ ಪರಿಮಳವನ್ನೂ ಕಳೆದುಕೊಂಡು ಮಿರಿ ಮಿರಿ ಮಿಂಚುವ ಕಾಗದದ ರಾಕ್ಷಸ ಹೂವಿನಂತೆ, ಜಾಗತಿಕವಾದದ ಗಾಳಿಗೆ ಸಿಕ್ಕಿ ಹೇಗೆ ತೊನೆದಾಡುತ್ತಿದೆ ನೋಡಿ. ಈ ನರ್ತನವನ್ನು ಕಂಡು, ಕರ್ನಾಟಕದ ಎಲ್ಲ ಪಟ್ಟಣ– ನಗರಗಳೂ ಇಂತಹ ಕಾಗದದ ಹೂಗಳಾಗಲು ಹೇಗೆ ಹಾತೊರೆಯುತ್ತಿವೆ ನೋಡಿ.

ಇಂತಹ ವಾತಾವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ವೀರಾವೇಶದ ಹಾರಾಟ– ಹೋರಾಟಗಳೆಲ್ಲವೂ ಅಲ್ಪಕಾಲಿಕ ಹಾಗೂ ಅಲ್ಪ ತೃಪ್ತ ಮಾತ್ರವಾಗಿರಬಲ್ಲವು. ಮೂಲತಃ ಇಂತಹ ಸೇನೆಗಳು ಭಾವನಾತ್ಮಕ ನೆಲೆಯಲ್ಲಿ ಮಾತ್ರ ಕೆಲಸ ಮಾಡಬಲ್ಲವಾಗಿದ್ದು, ಭಾವಾವೇಶ ಇಳಿದೊಡನೆ ಅವುಗಳ ಹೋರಾಟ– ಹಾರಾಟಗಳೆಲ್ಲ ಹಿನ್ನೆಲೆಗೆ ಸರಿದು, ತಾವು ಉಳಿಯಲು ತಮ್ಮ ದೈನಂದಿನ 'ವ್ಯವಹಾರ'ಗಳಲ್ಲಿ ತೊಡಗಬೇಕಾಗುತ್ತದೆ. ಮತ್ತೆ ಏಕೆಂದರೆ, ಇಂದಿನ ಜಾಗತೀಕರಣದ ಬಿರುಗಾಳಿಯನ್ನು ತಡೆಯುವಷ್ಟು ಅವುಗಳ ಬುಡ ಭದ್ರವಿರುವುದಿಲ್ಲ. ಬಿಹಾರದ ಲಾಲೂ ಪ್ರಸಾದ್ ಯಾದವ್ ಹಾಗೂ ಕರ್ನಾಟಕದ ಕೆ.ಎಚ್. ಮುನಿಯಪ್ಪ ಅಥವಾ ತೇಜಸ್ವಿನಿ ಈಗ ಎತ್ತಿ ಹಿಡಿಯುತ್ತಿರುವುದಾದರೂ ನಮ್ಮ ಹೊಸ ರಾಷ್ಟ್ರೀಯತೆಯ ಹೊಸ ಆದರ್ಶವಾಗಿರುವ ಜಾಗತೀಕರಣ ಪ್ರತಿಪಾದಿಸುತ್ತಿರುವ ಮುಕ್ತ ಸ್ಪರ್ಧೆಯನ್ನೇ! ಯಾರು ಎಲ್ಲಿಗೆ ಬೇಕಾದರೂ ಹೋಗಿ ಅಥವಾ ಬಂದು ಸ್ಪರ್ಧಿಸಿ 'ಗೆಲ್ಲ'ಬಹುದು. ಆದರೆ ಈ ಸ್ಪರ್ಧೆ ನಾವು ಒಪ್ಪಿಕೊಂಡ ಒಕ್ಕೂಟದ ಪರಿಕಲ್ಪನೆಗೇ ಧಕ್ಕೆ ತರುವಂತಿದ್ದರೆ? ರಾಜಕೀಯ

ಬಲಶಾಲಿಗಳು ಈ ಒಕ್ಕೂಟದ ಆಶಯವನ್ನೇ ವಿಕೃತಗೊಳಿಸಿದ್ದರೆ? ಇದರಿಂದಾಗಿ ಕೆಲ ಸಮುದಾಯಗಳು ಸದಾ ಅನ್ಯಾಯಕ್ಕೇ ಒಳಗಾಗುವಂತಹ ಸ್ಥಿತಿ ನಿರ್ಮಾಣವಾಗಿದ್ದರೆ?

ಇಂತಹ ಮೂಲಭೂತ ಪ್ರಶ್ನೆಗಳನ್ನು ಕೇಳಬಲ್ಲ ಪ್ರಬುದ್ಧತೆ ಕರ್ನಾಟಕ ರಕ್ಷಣಾ ವೇದಿಕೆಯಂತಹ ಸಂಘ ಸಂಸ್ಥೆಗಳಿಗೆ ಬಂದಲ್ಲಿ ಮಾತ್ರ ಅವು ನಿಜವಾಗಿ ಕನ್ನಡ– ಕರ್ನಾಟಕವನ್ನು ರಕ್ಷಿಸಬಲ್ಲವು. ಆದರೆ ಅವುಗಳ ಇಂದಿನ ನಾಯಕತ್ವವನ್ನು ನೋಡಿದರೆ ಅದು ಸಾಧ್ಯವಿಲ್ಲದಂತೆ ತೋರುತ್ತದೆ. ಏಕೆಂದರೆ, ಕನ್ನಡದ ಮಕ್ಕಳಿಗೆ ಬಾಲ್ಯದಲ್ಲೇ ಕನ್ನಡ ಭಾಷೆ, ಸಂಸ್ಕೃತಿಗಳ ಬಗ್ಗೆ ಅರಿವು ಮೂಡಿಸುವಂತಹ ಶಿಕ್ಷಣ ಕ್ರಮ ಮತ್ತು ಅದಕ್ಕಾಗಿ ಕನ್ನಡ ಮಾಧ್ಯಮ ಶಾಲಾ ಶಿಕ್ಷಣವನ್ನು ಕಡ್ಡಾಯ ಮಾಡುವಂತೆ ಒತ್ತಾಯಿಸುವ ಮೂಲಕ ಮಾತ್ರ ಕನ್ನಡಿಗರ ಲೌಕಿಕ ಅಭ್ಯುದಯಕ್ಕಾಗಿ ಅವರನ್ನು ನಿಜವಾದ ಅರ್ಥದಲ್ಲಿ ಜಾಗೃತಗೊಳಿಸಲು ಸಾಧ್ಯ ಎಂಬ ಎಂಬ ಮೂಲಭೂತ ಅರಿವೇ ಅವಕ್ಕೆ ಇಲ್ಲವಾಗಿದೆ. ಹಾ[illegible]ಈಗ ಸರ್ಕಾರ ಒಂದನೇ ತರಗತಿಯಿಂದಲೇ ಕನ್ನಡದ ಮಕ್ಕಳಿಗೆ ಇಂಗ್ಲಿಷ್ ಕಲಿಸು[illegible]ಜ್ಞೆ ಹೊರಡಿಸಿದಾಗ, ಮೊದಲು ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿ; ನಂತರ ಎಲ್ಲಿಂದಲಾದರೂ ಇಂಗ್ಲಿಷ್ ಕಲಿಸಿ ಎಂದು ಹೇಳುವ ಕನ್ನಡ ನೈತಿಕತೆಯನ್ನು ಎಷ್ಟು ಕನ್ನಡ ಸಂಘಟನೆಗಳು ಪ್ರದರ್ಶಿಸಲು ಸಾಧ್ಯವಾಯಿತು?

ಹಾಗಾಗಿಯೇ ಆರೇಳು ತಿಂಗಳುಗಳ ಹಿಂದೆ ರೈಲ್ವೇ ಇಲಾಖೆ ರೇಲ್ವೇ ಟಿಕೆಟ್ಟಿನಿಂದ ಕನ್ನಡವನ್ನು ತೆಗೆದು ಹಾಕಿದಾಗ, ಇಲ್ಲಿಂದ ಅನ್ಯ ರಾಜ್ಯಗಳಿಗೆ ಹೋಗುವ ಅಥವಾ ಬರುವ ರೈಲುಗಳಿಂದ ಕನ್ನಡದ ಫಲಕಗಳನ್ನು ಹಿಂತೆಗೆದುಕೊಂಡಾಗ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ಕನ್ನಡ ಚಳುವಳಿಕಾರರು ಒಂದೆರಡು ದಿನ ತಕ ತಕ ಕುಣಿದು ಆಮೇಲೆ ಸುಮ್ಮನಾದವು. ರೇಲ್ವೇ ಟಿಕೆಟ್ಟಿನಿಂದ ಕನ್ನಡ ಶಾಶ್ವತವಾಗಿ ಹೋಗಿಯೇ ಹೋಯಿತು. ಅದಕ್ಕಾಗಿ ಕಣ್ಣೀರು ಸುರಿಸುವವರು ಯಾರೂ ಇಲ್ಲ– ಬಹುಶಃ ಮೊನ್ನೆ ಶಿವಮೊಗ್ಗದಿಂದ ರೈಲು ಹತ್ತಿ, ಯಾವ ಊರಿಗೆ ಟಿಕೆಟ್ ಕೊಟ್ಟಿದ್ದಾರೆ ನೋಡಿ ಹೇಳಿ ಎಂದು ನನ್ನ ಬಳಿ ಟಿಕೆಟ್ ಕೊಟ್ಟು ಯಾಚಿಸಿದ ಮುದುಕರೊಬ್ಬರ ಮುಖದಲ್ಲಿ ನಾನು ಕಂಡ– ತನ್ನ ದೇಶದಲ್ಲೇ ತಾನು ಪರದೇಶಿಯಾಗುವ– ಆಳದ ವಿಷಾದದ ಹೊರತಾಗಿ.

ಹೀಗಿರುವಾಗ ಹೇಳಿ, ಯಾವ ಪ್ರಜಾಪ್ರಭುತ್ವವಿದು, ಎಂತಹ ಪ್ರಜಾಪ್ರಭುತ್ವವಿದು? ಇಲ್ಲಿ ಯಾರಿಗೆ, ಯಾವುದಕ್ಕೆ ದೊರೆಕಿರುವುದು ಸ್ವಾತಂತ್ರ್ಯ? ನಿಜವಾಗಿ ಮುಗಿದಿದೆಯೇ ನಮ್ಮ ಪಾರತಂತ್ರ್ಯ? ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದವರೇ ಅದನ್ನು ಭಕ್ಷಿಸತೊಡಗಿದಾಗ, ಪಾರತಂತ್ರ್ಯ ಹಿಂದಿರುಗಿ ಬರಲು ಒಂದಲ್ಲ ಒಂದು ವೇಷದಲ್ಲಿ ಕಾದು ನಿಂತಿರುತ್ತದೆ ಅಲ್ಲವೇ? ಇದನ್ನು ಕನ್ನಡಿಗರಿಗೆ ಮನವರಿಕೆ ಮಾಡಿಕೊಡುವುದಾದರೂ ಯಾರು? ಹೇಗೆ?

ಫೆಬ್ರುವರಿ ೧, ೨೦೦೮

ರೈತರ ಸಾಲ ಮನ್ನಾ :
ಸರ್ಕಾರ ಹೊಸ ಸೂಕ್ಷ್ಮತೆಯೆಡೆಗೆ ?

ಚುನಾವಣಾ ಮುಂಗಡ ಪತ್ರವೋ, ಮತ್ತೆಂತಹುದೋ; ಕೇಂದ್ರ ಸರ್ಕಾರ ಈ ಮುಂಗಡ ಪತ್ರದಲ್ಲಿ ಎಲ್ಲ ಸಣ್ಣ ಹಾಗೂ ಅತಿ ಸಣ್ಣ ರೈತರ, ಈ ಆರ್ಥಿಕ ವರ್ಷದ ಕೊನೆಯವರೆಗೆ ಬಾಕಿಯಿರುವ ಎಲ್ಲ ರೀತಿಯ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡುವುದಾಗಿ ಪ್ರಕಟಿಸಿದೆ. ಜೊತೆಗೆ ಇತರ ರೈತರು ತಮ್ಮ ಸಾಲ ಬಾಕಿಯ ಶೇ. ೭೫ರಷ್ಟನ್ನು ಪಾವತಿ ಮಾಡಿದಲ್ಲಿ, ಮಿಕ್ಕದ್ದನ್ನು ಮನ್ನಾ ಮಾಡುವುದಾಗಿಯೂ ಭರವಸೆ ನೀಡಿದೆ. ಇದಕ್ಕೆಲ್ಲ ಅಗತ್ಯವಾದ ಅರವತ್ತು ಸಾವಿರ ಕೋಟಿ ರೂಪಾಯಿಗಳಿಗೆ ಈ ಮುಂಗಡ ಪತ್ರದಲ್ಲಿ ಅವಕಾಶ ಕಲ್ಪಿಸಿಲ್ಲವಾದರೂ, ಈ ಸಾಲ ಮನ್ನಾ ಯೋಜನೆ ಪೂರ್ಣಗೊಳ್ಳುವ ಜೂನ್ ಅಂತ್ಯದ ವೇಳೆಗೆ ಈ ಹಣದ ಸಮಸ್ಯೆಗೆ ಪರಿಹಾರ ಸೂಚಿಸುವುದಾಗಿ ಅರ್ಥಮಂತ್ರಿ ಹೇಳಿದ್ದಾರೆ. ಆದರೆ, ಪಿ. ಚಿದಂಬರಂ ಅವರ ಈ ಭರವಸೆಯನ್ನು ಗಮನಕ್ಕೇ ತೆಗೆದುಕೊಳ್ಳದ ಕೆಲವು ಉದ್ಯಮಪತಿಗಳು, ಅರ್ಥಶಾಸ್ತ್ರಜ್ಞರು ಹಾಗೂ ಪತ್ರಕರ್ತರು ಈ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸುತ್ತಲೇ ಇದ್ದಾರೆ ಹಾಗೂ ಕೊಂಕು ಮಾತುಗಳನ್ನು ಆಡುತ್ತಲೇ ಇದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಭಾರತದ ಹಲವಾರು ರಾಜ್ಯಗಳಲ್ಲಿ ಒಂದೂವರೆ ಲಕ್ಷಕ್ಕಿಂತಲೂ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಅನೇಕ ಅಧ್ಯಯನಗಳು ನಡೆದು, ಅವುಗಳ ಶಿಫಾರ್ಸಿನ ಪ್ರಕಾರ ಸರ್ಕಾರಗಳು ಅನೇಕ ಪರಿಹಾರ ಕ್ರಮಗಳನ್ನು ಕೈಗೊಂಡವು. ಇತ್ತೀಚೆಗೆ ಮಹಾರಾಷ್ಟ್ರದ ವಿದರ್ಭದಲ್ಲಿ ಇಂತಹ ಆತ್ಮಹತ್ಯೆಗಳು ದಾರುಣ ಹಂತ ತಲುಪಿದಾಗ ಎಚ್ಚೆತ್ತುಕೊಂಡ ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿಗಳ ಮಾರ್ಗದರ್ಶನದಲ್ಲಿ ವಿದರ್ಭ ಪ್ಯಾಕೇಜ್ ಹೆಸರಿನಲ್ಲಿ ಒಂದು ಪ್ರಮಾಣದ ಸಾಲ ಮನ್ನಾ, ಬೀಜ ಮತ್ತು ಗೊಬ್ಬರಗಳ ವಿತರಣೆಯ ಹಾಗೂ ಮರುಸಾಲದ ವ್ಯವಸ್ಥೆಯನ್ನೊಳಗೊಂಡ ಬೃಹತ್ ರಾಷ್ಟ್ರೀಯ ಪರಿಹಾರ ಕಾರ್ಯಕ್ರಮವನ್ನು ಜಾರಿಗೊಳಿಸಿತು. ಆದರೂ ಆತ್ಮಹತ್ಯೆಗಳು ನಿಲ್ಲದೇ ಹೋದವು. ಹೀಗಾಗಿ ದಿಕ್ಕೆಟ್ಟ ಸರ್ಕಾರ ಈಗ ಐದು ಎಕರೆಗಳಿಗೂ ಕಡಿಮೆ ಭೂಮಿ

ಹೊಂದಿರುವ ರೈತರ ಎಲ್ಲ ಸಾಲ ಮನ್ನಾ ಮಾಡುವ ನಿರ್ಧಾರ ಕೈಗೊಂಡಿದೆ. ಇದರಿಂದಾಗಿ, ಒಟ್ಟಾರೆ ನಾಲ್ಕು ಕೋಟಿ ರೈತರು ಸಾಲದ ಬಂಧನದಿಂದ ಬಿಡುಗಡೆ ಹೊಂದುತ್ತಾರೆಂದು ಅಂದಾಜು ಮಾಡಲಾಗಿದೆ. ಬಡ ರೈತರ ಆತ್ಮಹತ್ಯಾತ್ಮಕ ಸಂಕಷ್ಟವನ್ನು ಪರಿಹರಿಸಲು ಸದ್ಯಕ್ಕೆ ಇದು ಮೊದಲ ಮತ್ತು ಅನಿವಾರ್ಯ ಕ್ರಮವೂ ಆಗಿತ್ತು ಎಂಬುದನ್ನು ರಾಷ್ಟ್ರದ ಸಮಗ್ರ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡ ಯಾರೂ ಅಲ್ಲಗೆಳೆಯಲಾರರು.

ಆದರೆ ಈ ನಿರ್ಧಾರವನ್ನು ರಾಜಕೀಯ ನೆಲೆಯಲ್ಲಷ್ಟೇ ಗ್ರಹಿಸಿ ಕಟುವಾಗಿ ಟೀಕಿಸುವ, ನಮ್ಮ ಆರ್ಥಿಕತೆಯ ಉದಾರೀಕರಣದ ಸಂಭ್ರಮದಲ್ಲಿರುವ ಅರ್ಥಶಾಸ್ತ್ರಿಗಳಿಗೆ, ಉದ್ಯಮಪತಿಗಳಿಗೆ ಹಾಗೂ ರಾಜಕಾರಣಿಗಳಿಗೆ ನಮ್ಮಲ್ಲೇನೂ ಕೊರತೆಯಿಲ್ಲ. ಅರ್ಥಮಂತ್ರಿಗಳು ಈ ಸಾಲ ಮನ್ನಾದ ಹೊರೆಯನ್ನು ಬ್ಯಾಂಕುಗಳ ಮೇಲಾಗಲೀ, ಮುಂದಿನ ಸರ್ಕಾರದ ಮೇಲಾಗಲೀ ಹಾಕುವುದಿಲ್ಲ; ಈ ಯೋಜನೆ ಅನುಷ್ಠಾನಗೊಳ್ಳುವ ವೇಳೆಗೆ ಇದಕ್ಕೆ ಅಗತ್ಯವಾದ ಹಣಕಾಸಿನ ದಾರಿಗಳನ್ನು ಸೂಚಿಸಲಾಗುವುದು ಎಂದು ಪದೇ ಪದೇ ಸ್ಪಷ್ಟಪಡಿಸುತ್ತಿದ್ದರೂ, ನಮ್ಮ ಮಾಧ್ಯಮಗಳ ಆಯಕಟ್ಟಿನ ಜಾಗಗಳಲ್ಲಿ ಇರಿಸಲ್ಪಟ್ಟಿರುವ ಕೆಲವು ಉದ್ಯಮಪತಿಗಳ ವಕ್ತಾರರಂತಿರುವ ಅರ್ಥಶಾಸ್ತ್ರಜ್ಞರು, ಆ ದಾರಿಗಳನ್ನು ಈಗಲೇ ಪ್ರಕಟಿಸುವಂತೆ ಆಗ್ರಹಿಸುತ್ತಿದ್ದಾರೆ. ನಮ್ಮ ಮಾಧ್ಯಮಗಳ ಕುಚೇಷ್ಟೆಯ ಸಾಮರ್ಥ್ಯವನ್ನು ಚೆನ್ನಾಗಿ ಬಲ್ಲ ಚಿದಂಬರಂ ಸದ್ಯಕ್ಕೆ ಇದನ್ನು ಹೊರಗೆಡಹಲಾರೆ ಎಂದು ಹೇಳಿದರೂ; ತಮ್ಮ ಮಾಧ್ಯಮಕ್ಕೆ 'ಸ್ಕೂಪ್' ಪಡೆಯಲಾಗದ ಉದ್ಯಮಪರವಾದ ಈ ಮಾಧ್ಯಮ ಏಜೆಂಟರು, ಅವರನ್ನು ಆರ್ಥಿಕ ಅಶಿಸ್ತಿನ ಆರೋಪಕ್ಕೆ ಸಿಲುಕಿಸುವ ಒತ್ತಡ ತಂತ್ರಕ್ಕೂ ಕೈ ಹಾಕಿದ್ದಾರೆ. ಇದರಿಂದ ಜಿಗುಪ್ಸೆಗೊಂಡ ಅರ್ಥಮಂತ್ರಿ ಸಿ.ಎನ್.ಎನ್.– ಐ.ಬಿ.ಎನ್. ಟಿ.ವಿ. ವಾಹಿನಿಯ ಸಂದರ್ಶನದಿಂದ ಅರ್ಧಕ್ಕೇ ಎದ್ದು ಹೋದಾಗ, ಅವರನ್ನು ಸಮಾಧಾನಿಸಿ ಮತ್ತೆ ಕರೆದು ತರಬೇಕಾದ ಪ್ರಸಂಗವೂ ಉಂಟಾಗಿದೆ.

ಮುಕ್ತ ಸ್ಪರ್ಧೆ, ಖಾಸಗೀಕರಣ ಮತ್ತು ಉದಾರೀಕರಣಗಳ ಲಾಭ ಹಾಗೂ ಪ್ರಯೋಜನಗಳಿಂದ ಕೊಬ್ಬಿ ಹೋಗಿರುವ ನಮ್ಮ ಮಾಧ್ಯಮ ಮತ್ತು ಉದ್ಯಮಪತಿಗಳಿಗೆ ಮಾರಣಾಂತಿಕ ಸಂಕಷ್ಟದಲ್ಲಿರುವ ರೈತರಿಗಾಗಿ ಪ್ರಕಟಿಸಿರುವ ೬೦ ಸಾವಿರ ಕೋಟಿ ರೂಪಾಯಿಗಳ ಪರಿಹಾರ, ಸುಮಾರು ಏಳೂವರೆ ಲಕ್ಷ ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಮುಂಗಡ ಪತ್ರದಲ್ಲಿ ಒಂದು ದೊಡ್ಡ ಅಸಮತೋಲನದ ಅಂಶವಾಗಿ ಕಂಡಿದೆ! ಇವರು ದೂಷಿಸುವ ಆ ಹಳೆಯ 'ಸಮಾಜವಾದಿ ಆರ್ಥಿಕತೆ' (ಅದು ನಿಜವಾಗಿಯೂ ಸಮಾಜವಾದಿ ಅರ್ಥಿಕತೆಯೇ ಎಂಬುದು ಬೇರೆ ಪ್ರಶ್ನೆ.) ಎಷ್ಟು ಸಾವಿರ ಕೋಟಿ ರೂಪಾಯಿಗಳ ಕೈಗಾರಿಕಾ ಸಾಲಗಳನ್ನು ಮತ್ತು ಎಷ್ಟು ಸಾವಿರ ಕೋಟಿ ರೂಪಾಯಿಗಳ ಬ್ಯಾಂಕ್ ದುರಾಡಳಿತದ ಲೆಕ್ಕ ವ್ಯತ್ಯಯಗಳನ್ನು ಇವರಿಗಾಗಿ ಮನ್ನಾ ಮಾಡಿದೆ ಎಂಬುದನ್ನು ಲೆಕ್ಕ ಹಾಕಲಿ. ಹಾಗೇ ಇತ್ತೀಚಿನ ಜಾಗತೀಕರಣದ ಅವಧಿಯ ವಿಶ್ವ ಬ್ಯಾಂಕ್ ಪ್ರಣೀತ ಆರ್ಥಿಕತೆಯ ಭಾಗವಾಗಿ, ಯಾವ ಯಾವ ಉದ್ಯಮಗಳಿಗೆ ಎಷ್ಟು ಸಾವಿರ ಕೋಟಿ ರೂಪಾಯಿಗಳ ತೆರಿಗೆ ಮನ್ನಾ

ಮಾಡಿದೆ ಮತ್ತು ಇತರೆ ಸರ್ಕಾರಿ ಸವಲತ್ತು– ರಿಯಾಯತಿಗಳನ್ನು ನೀಡಲಾಗಿದೆ ಎಂಬುದನ್ನು ನೆನಪಿಸಿಕೊಳ್ಳಲಿ. ಭಾರತದ ಮೇಲ್ವರ್ಗ ಹಾಗೂ ಯಾವಾಗಲೂ ಅವರ ಚೇಲಾಗಳಂತೆ ವರ್ತಿಸುವ ಬುದ್ಧಿಜೀವಿ ವರ್ಗ ಜನಸಾಮಾನ್ಯರ ಕಷ್ಟ ನಷ್ಟಗಳೊಂದಿಗೆ ಎಂದೋ ಸಂಪರ್ಕ ಕಡಿದುಕೊಂಡಿದೆ ಎಂದು ಈ ದೇಶದ ಹಿಂದುಳಿದಿರುವಿಕೆ ಬಗ್ಗೆ ಅಧ್ಯಯನ ಮಾಡಿದ್ದ ಅರವತ್ತರ ದಶಕದ ಅಮೆರಿಕಾದ ರಾಯಭಾರಿ ಹಾಗೂ ಅರ್ಥಶಾಸ್ತ್ರಜ್ಞ ಗುನ್ನರ್ ಮಿರ್ಡಾಲ್ ಹೇಳಿದ್ದರು. ಇದಕ್ಕೂ ಮುನ್ನ ಸಮಾಜವಾದಿ ಚಿಂತಕ ಡಾ॥ ರಾಮಮನೋಹರ ಲೋಹಿಯಾ, ಲಕ್ಷಾಂತರ ಜನ ಹಸಿವಿನಿಂದ ಸಾಯಲು ಕಾರಣವಾದ ಬಂಗಾಳದ ಕ್ಷಾಮದ ಬಗ್ಗೆ ಸಂವೇದನಾಶೀಲವಾದ ಒಂದು ಅಭಿವ್ಯಕ್ತಿಯೂ ಸಾಧ್ಯವಾಗದ ಭಾರತದ ಬುದ್ಧಿಜೀವಿಗಳ 'ಜಡತೆ'ಯನ್ನು ಛೇಡಿಸಿದ್ದರು.

ಇಷ್ಟು ವರ್ಷಗಳ ನಂತರವೂ ಈ ಪರಿಸ್ಥಿತಿ ಬದಲಾಗಿಲ್ಲ. ಇವರೆಲ್ಲರಿಗೆ ತಾವು ನಂಬಿಕೊಂಡಿರುವ ವಿವಿಧ ಶಾಸ್ತ್ರಗಳ ಸೂತ್ರಬದ್ಧತೆಯೇ ದೊಡ್ಡದಾಗಿದೆ. ರಾಷ್ಟ್ರದ ಅರ್ಥಮಂತ್ರಿಯನ್ನು ನಂಬದ ಇವರು, ಸ್ವತಃ ತಾವೇ ರಾಷ್ಟ್ರದ ಆರ್ಥಿಕ ಯಜಮಾನಿಕೆಯನ್ನು ವಹಿಸಿಕೊಳ್ಳುವ ತವಕದಲ್ಲಿದ್ದಾರೆ. ಇದು ಸ್ವತಃ ಚಿದಂಬರಂ ಹಾಗೂ ಅವರ ಗೆಳೆಯರು ಮನಮೋಹನ ಸಿಂಗರ ನಾಯಕತ್ವದಲ್ಲಿ ಆರಂಭಿಸಿದ ಆರ್ಥಿಕ ಉದಾರೀಕರಣದ ರಾಜಕೀಯ ಫಲ. ಇದು, ಜನತೆಯ ಪ್ರತಿನಿಧಿಗಳಾದ ರಾಜಕಾರಣಿಗಳನ್ನೇ ರಾಜಕಾರಣದಿಂದ ಹೊರದೂಡಿ, ರಾಷ್ಟ್ರಾಡಳಿತವನ್ನು ಉದ್ಯಮಪತಿಗಳಿಗೆ ವಹಿಸಿಕೊಡಲು ತುದಿಗಾಲಿನಲ್ಲಿ ನಿಂತಿರುವ ವಿಶೇಷಜ್ಞರೆಂಬ ಹೊಸ ಆರ್ಥಿಕತೆಯ ದಲ್ಲಾಳಿಗಳ ಹುನ್ನಾರ. ರಾಜಕಾರಣಿಗಳಾದರೋ ಐದು ವರ್ಷಗಳಿಗೊಮ್ಮೆಯಾದರೂ ಜನತಾ ಶಕ್ತಿಯನ್ನು ಎದುರಿಸುವ ಪ್ರಜಾಸತ್ತಾತ್ಮಕ ಅನುಭವದಿಂದಾಗಿ ಸ್ವಲ್ಪ ಹೃದಯ ಉಳಿಸಿಕೊಂಡವರಂತೆ 'ಮಾನವೀಯ ಮುಖ'ದ ಉದಾರೀಕರಣ, 'ಆಂ ಆದ್ಮಿ'ಯ (ಶ್ರೀಸಾಮಾನ್ಯನ) ಸರ್ಕಾರ ಮತ್ತು 'ಆವೃತ' (ಎಲ್ಲರನ್ನೊಳಗೊಂಡ– inclusive) ಅಭಿವೃದ್ಧಿಯ ಮಾತುಗಳನ್ನಾಡುವ ಒತ್ತಾಯಗಳಿಗೆ ಸಿಲುಕಿರುತ್ತಾರೆ. ಆದರೆ ಈ ದಲ್ಲಾಳಿ– ವಿಶೇಷಜ್ಞರಿಗೆ ಇಂತಹ ಹೃದಯವಂತಿಕೆಗೆ ಆಸ್ಪದವಿರುವಂತಹ ಅಂತಹ ಒತ್ತಾಯಗಳೇನೂ ಇಲ್ಲದಿರುವುದೇ ಇವರ ಶಾಸ್ತ್ರೀಯ ಜಡತೆಗೆ ಕಾರಣವಾಗಿರುವಂತಿದೆ.

ಸಾಲ ಮನ್ನಾವನ್ನು ವಿರೋಧಿಸುವವರ ವಾದಗಳು ಹಲವಾರು ನೆಲೆಗಳಲ್ಲಿವೆ. ಈ ಸಾಲ ಮನ್ನಾದಿಂದ ಬ್ಯಾಂಕುಗಳ ಆರ್ಥಿಕ ಸ್ಥಿತಿ ಅಸ್ತವ್ಯಸ್ತಗೊಳ್ಳುತ್ತದೆ; ಗ್ರಾಮೀಣ ಸಹಕಾರಿ ಬ್ಯಾಂಕುಗಳು ಕುಸಿದು ಬೀಳುತ್ತವೆ ಎನ್ನುತ್ತಾರೆ ಈ ಪರಿಣತರು. ಇದೊಂದು ರೀತಿಯ ಬೌದ್ಧಿಕ ಭಯೋತ್ಪಾದನೆಯಲ್ಲದೆ ಮತ್ತೇನಲ್ಲ. ಅರ್ಥಮಂತ್ರಿಗಳು ಈ ಸಾಲ ಮನ್ನಾಕ್ಕೆ ಪ್ರತಿಯಾಗಿ ಬ್ಯಾಂಕುಗಳಿಗೆ ಹಣಕಾಸಿನ ಪರಿಹಾರ ಒದಗಿಸುವುದಾಗಿ ಹೇಳುತ್ತಿದ್ದರೂ, ಈ ಆತಂಕಗಳನ್ನು ಸೃಷ್ಟಿಸುತ್ತಿರುವುದಾದರೂ ಏಕೆ? ಆರ್ಥಿಕ ಉದಾರೀಕರಣದ ಮುಕ್ತ ಅವಕಾಶಗಳ 'ಪ್ರಯೋಜನ' ಪಡೆದು ನಡೆದ ಈ ಹಿಂದಿನ ಅನೇಕ ಷೇರುಪೇಟೆ ಹಗರಣಗಳಲ್ಲಿ ಯಾವ

ಯಾವ ಬ್ಯಾಂಕುಗಳು ಎಷ್ಟೆಷ್ಟು ಸಾವಿರ ಕೋಟಿ ರೂಪಾಯಿಗಳನ್ನು ಕಳೆದುಕೊಂಡವು ಮತ್ತು ಯಾವ ಯಾವ ಸ್ಥಳೀಯ ಬ್ಯಾಂಕುಗಳು ಮುಳುಗಿ ಹೋದವು ಎಂಬುದು ಇವರಿಗೆ ನೆನಪಿದೆಯೇ? ಇನ್ನು ಸರ್ಕಾರ ಬ್ಯಾಂಕುಗಳಿಗೆ ಪರಿಹಾರ ಹಣ ಒದಗಿಸುವವರೆಗೆ, ಅವು ಆ ಪಾಲಿನ ಬಡ್ಡಿಯನ್ನು ಕಳೆದುಕೊಳ್ಳುತ್ತವೆ ಎನ್ನುವವರನ್ನು ನಿಜವಾಗಿಯೇ ಬಡ್ಡಿ ಮಕ್ಕಳೆಂದೇ ಎಂದು ಕರೆಯಬೇಕಾಗುತ್ತದೆ! ಏಕೆಂದರೆ, ಇಷ್ಟು ಸೂಕ್ಷ್ಮವಾಗಿ ಲೆಕ್ಕಹಾಕಿ ಮಾತನಾಡುವವರ ಯಜಮಾನರುಗಳು, ಈವರೆಗಿನ ವಿವಿಧ ಸರ್ಕಾರಗಳ ಉದ್ಯಮಗಳ ಪರವಾದ ವಿವಿಧ ನೀತಿ ಧೋರಣೆಗಳ ಕಾರಣದಿಂದಾಗಿ ಎಷ್ಟು ಕೋಟಿ ರೂಪಾಯಿಗಳ ಬಡ್ಡಿಯನ್ನು ನುಂಗಿದ್ದಾರೆ ಎಂದು ಇವರೇ ಲೆಕ್ಕ ಹಾಕಿ ತಿಳಿಸಲಿ. ಹಾಗೇ, ಇವರೆಲ್ಲರ ಇಂತಹ 'ಸೂಕ್ಷ್ಮ' ಚಿಂತನೆಯ ಬೆಂಬಲಿಗರಾದ ಹೊಸ ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗಗಳವರ ಹಿತ ಕಾಪಾಡಲು ಈ ವರ್ಷ ಪ್ರಕಟಿಸಿರುವ ವರಮಾನ ತೆರಿಗೆ ರಿಯಾಯತಿಗಳಿಂದ ಸರ್ಕಾರದ ಆದಾಯಕ್ಕೆ ಎಷ್ಟು ಖೋತಾ ಆಗಲಿದೆ ಎಂಬುದನ್ನೂ ಇವರು ಲೆಕ್ಕ ಹಾಕಿ ಹೇಳಲಿ.

ಇವೆಲ್ಲವೂ ಹಣಕಾಸಿನ ಲೆಕ್ಕಾಚಾರಗಳನ್ನಾಧರಿಸಿದ ವಾದಗಳಾದರೆ; ನೈತಿಕತೆಯ, ನ್ಯಾಯದ ಆಧಾರದಲ್ಲಿ ಕೆಲವರು ತಮ್ಮ ವಾದಗಳನ್ನು ಮಂಡಿಸುತ್ತಿದ್ದಾರೆ. ಈ ಸಾಲ ಮನ್ನಾ ಇನ್ನು ಮುಂದೆ ಪಡೆಯಲಿರುವ ಸಾಲಗಳನ್ನೂ ಮರುಪಾವತಿ ಮಾಡದಿರುವಂತಹ ಅನೈತಿಕತೆಯನ್ನು ರೈತರಲ್ಲಿ ಸೃಷ್ಟಿಸುತ್ತದೆ ಎಂಬುದು ಕೆಲವರ ವಾದ. ಇದು ಈವರೆಗೆ ರೈತರು ಸಾಲ ಮರುಪಾವತಿ ಮಾಡಿಯೇ ಇಲ್ಲವೆಂದು ಭಾವಿಸಿ, ಸಾಯುತ್ತಿರುವವರ ಮಧ್ಯೆ ನೈತಿಕತೆಯ ಪಾಠ ಆರಂಭಿಸುವ ಮೂರ್ಖರ ಕ್ರೂರ ವಾದ ಮಾತ್ರ ಆಗುತ್ತದೆ. ನಿಜ, ಈ ಯೋಜನೆ ಕೆಲವರು ಟೀಕಿಸುತ್ತಿರುವಂತೆ ರೈತರನ್ನು ಬ್ಯಾಂಕ್ ಸಾಲದಷ್ಟೇ ಬೃಹತ್ತಾಗಿ ಸುತ್ತುವರೆದಿರುವ ಲೇವಾದೇವಿ ಸಾಲಗಳಿಂದ ಮುಕ್ತಗೊಳಿಸುತ್ತಿಲ್ಲ. ಅದು ಸರ್ಕಾರದಿಂದ ಕಷ್ಟಸಾಧ್ಯ ಕೂಡಾ. ಆದರೆ ಮೊದಲು ಸರ್ಕಾರ ಈಗ ಪ್ರಕಟಿಸಿರುವ ಪರಿಹಾರವನ್ನು ಮನಃಪೂರ್ವಕ ಸ್ವಾಗತಿಸಿ, ನಂತರ ಪೂರ್ಣ ಪರಿಹಾರದ ಸಾಧ್ಯತೆಗಳ ಬಗ್ಗೆ ಸಲಹೆ ನೀಡುವುದು ಹೆಚ್ಚು ಉಚಿತವೆನಿಸುತ್ತದೆ.ಇನ್ನು ಈಗಾಗಲೇ ಸಾಲ ಕಟ್ಟಿರುವವರಿಗೆ ಇದು ಅನ್ಯಾಯ ಮಾಡಿದಂತಲ್ಲವೇ ಎಂಬುದು ಕೆಲವರ ಪ್ರಶ್ನೆ. ಹಾಗೆ ಕೇಳುವವರು ಅಂತಹ ರೈತರ ಪಾವತಿಯನ್ನು ಅವರಿಗೇ ಹಿಂದಿರುಗಿಸುವಂತೆ ಸರ್ಕಾರವನ್ನು ಆಗ್ರಹಿಸುವುದು ಮಾತ್ರ ಸರಿಯಾದ ನ್ಯಾಯದ ಪ್ರಶ್ನೆಯಾದೀತು ಎಂದು ತಿಳಿದರೆ ಒಳಿತೇನೋ! ಇಲ್ಲಿ ಇಡೀ ಪ್ರಶ್ನೆ ಸಾಲ ಮರುಪಾವತಿ ಮಾಡಲಾಗದವರನ್ನು ಸಂಕಷ್ಟದಿಂದ ಪಾರುಮಾಡುವುದಕ್ಕೆ ಸಂಬಂಧಿಸಿದೆಯೇ ಹೊರತು, ಮರುಪಾವತಿ ಮಾಡಿದವರಿಗೆ ಸಂಬಂಧಿಸಿಲ್ಲ. ಈ ಗೊಂದಲ ನಿಜವಾಗಿಯೂ ಇಲ್ಲಿ ಅನವಶ್ಯಕ.

ಇಂತಹ ಗೊಂದಲಗಳಿಗೆ ಸಿಕ್ಕಿ ಹಾಕಿಕೊಂಡವರಲ್ಲಿ ಅಥವಾ ಹುಟ್ಟಿಸುತ್ತಿರುವವರಲ್ಲಿ ಎ.ಬಿ. ಬರ್ಧನ್‌ರಂತಹ ಕೆಲವು ಕಮ್ಯುನಿಸ್ಟರೂ ಸೇರಿಕೊಂಡಿರುವುದೂ ಒಂದು ವಿಪರ್ಯಾಸವೇ ಸರಿ. ಇವರಿಗೆ, ಕಾಂಗ್ರೆಸ್ ಮುಂದಿನ ಚುನಾವಣೆಗಳಲ್ಲಿ ಇದರ ರಾಜಕೀಯ

ಲಾಭ ಪಡೆದು, ತಮ್ಮ ನಿಯಂತ್ರಣಕ್ಕೆ ಎಲ್ಲಿ ಸಿಗದ ಹಾಗೆ ಹೋದೀತೋ ಎಂಬ ಆತಂಕವಿದ್ದಂತೆ ಕಾಣುತ್ತದೆ! ಇದು, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶರದ್ ಪವಾರ್ ಇದ್ದಕ್ಕಿದ್ದ ಹಾಗೆ ತಮ್ಮ ಕ್ರಿಕೆಟ್ ಸಾಮ್ರಾಜ್ಯದ ಹಣದ ಮಂಪರಿನಿಂದ; ಮರೆತೇಹೋದಂತಿರುವ ತಮ್ಮ ಕೃಷಿ ಮಂತ್ರಿತ್ವಕ್ಕೆ ಎಚ್ಚೆತ್ತುಕೊಂಡಂತೆ, ಈ ಸಾಲ ಮನ್ನಾ ತಮ್ಮ ರಾಜಕೀಯ ವಿಜಯವೆಂದು ಸಾರುವ ಪತ್ರಿಕಾ ಜಾಹೀರಾತುಗಳನ್ನು ನೀಡುತ್ತಿರುವುದರಷ್ಟೇ ನಾಚಿಕೆಗೇಡಿನ ಸಂಗತಿ. ಇನ್ನು ನಮ್ಮ ದೇವೇಗೌಡರಂತೂ, ಈ ಸಾಲ ಮನ್ನಾ ಯೋಜನೆ ತಮ್ಮ ಮಗ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಪ್ರಕಟಿಸಿದ (ಇದಕ್ಕಿನ್ನೂ ಏಕೋ ಯಡಿಯೂರಪ್ಪನವರ ಆಕ್ಷೇಪಣೆ ವ್ಯಕ್ತವಾಗಿಲ್ಲ!) ಯೋಜನೆಯ ಅನುಕರಣೆ ಎಂದು ಟೀಕಿಸಿದ್ದಾರೆ. ಅನುಕರಣೆ ಒಳ್ಳೆಯ ಉದ್ದೇಶಕ್ಕೇ ಆದರೆ ಟೀಕೆ ಯಾಕೋ? ಅವರ ಪ್ರಕಾರ ಎಲ್ಲ ರೈತರಿಗೂ ಈ ಪ್ರಯೋಜನ ಒದಗಿಸಬೇಕಿತ್ತಂತೆ! ನಮ್ಮ ರೈತ ರಾಜಕಾರಣದ ಸೋಲಿನ ಮೂಲ ಇಲ್ಲಿದೆ. ರೈತ ಎಂಬುದು ಒಂದು ಸಾರಾ ಸಗಟು ವರ್ಗ; ಅದರಲ್ಲಿ ಸಣ್ಣ, ಮಧ್ಯಮ, ದೊಡ್ಡ ರೈತ ಎಂಬುದಿಲ್ಲ ಎಂಬ ಹುಸಿ ಘೋಷಣೆ ರೈತ ರಾಜಕಾರಣದ ವಿಶ್ವಾಸಾರ್ಹತೆಯನ್ನೇ ನಾಶ ಮಾಡಿದೆಯಲ್ಲದೆ, ಅದಕ್ಕೊಂದು ತಾತ್ವಿಕ ಹಾಗೂ ಕಾರ್ಯಕ್ರಮ ಸ್ಪಷ್ಟತೆಯೇ ಇಲ್ಲದಂತೆ ಮಾಡಿದೆ.

ಇಂತಹ ಹುಸಿ ಘೋಷಣೆಯನ್ನು ಇಪ್ಪತ್ತು ವರ್ಷಗಳ ಹಿಂದೆ ಪ್ರೊ॥ ನಂಜುಂಡಸ್ವಾಮಿಯವರ ನೇತೃತ್ವದ ರೈತ ಸಂಘವೂ ಮಾಡುತ್ತಾ, ತಾತ್ವಿಕ ಹಾಗೂ ಕಾರ್ಯಕ್ರಮ ನೆಲೆಗಳೆರಡರಲ್ಲೂ ದುಂಡಾವರ್ತಿ ನಡೆಸಿತ್ತು. ಹಾಗಾಗಿಯೇ ಈಗ ದೇವೇಗೌಡರು ಸೂಚಿಸುತ್ತಿರುವಂತಹ ಸಾರಾ ಸಗಟು ನೆಲೆಯ ಬಡ್ಡಿ ಮನ್ನಾ ಯೋಜನೆಯನ್ನು ಆಗ ರಾಜ್ಯಮಟ್ಟದಲ್ಲಿ ಪ್ರಕಟಿಸಿದಾಗ, ಹೆಚ್ಚಾಗಿ ಅದರ ಪ್ರಯೋಜನ ಪಡೆದವರು ಚಳುವಳಿಯ ನಾಯಕರೂ ಆಗಿದ್ದ ದೊಡ್ಡ ರೈತರೇ ಎಂದು ಸಂಘದ ಕಾರ್ಯಕರ್ತರು ಹೇಳಿದ್ದನ್ನು ನಾನು ಕೇಳಿದ್ದೇನೆ. ಸಾಲ ಕಟ್ಟಬೇಡಿ ಎಂದು ರೈತರನ್ನು ಹುರಿದುಂಬಿಸುತ್ತಿದ್ದ ಈ ನಾಯಕರಲ್ಲಿ ಹಲವರು ಬಡ್ಡಿ ಮನ್ನಾ ಘೋಷಿತವಾದೊಡನೆ, ಸದ್ದಿಲ್ಲದೆ ತಂತಮ್ಮ ಸಾಲಗಳನ್ನು ತೀರಿಸಿಕೊಂಡರು. ತೀರಿಸಲಾಗದ ಸಣ್ಣ ರೈತರು ಸರ್ಕಾರಿ ಜಪ್ತಿಯಂತಹ ದೌರ್ಜನ್ಯಗಳಿಗೆ ಒಳಗಾದರು. ಇದರಿಂದ ಹೇಗೂ ಚಳುವಳಿಗೆ ಹೊಸ ತೀವ್ರತೆ ದಕ್ಕಿತಷ್ಟೇ! ಹಾಗೆ ನೋಡಿದರೆ, ಬಹುಮುಖ ಆರ್ಥಿಕ ಚಟುವಟಿಕೆಗಳನ್ನುಳ್ಳ ದೊಡ್ಡ ರೈತರು ಬಹುಪಾಲು ಗೈರು ರೈತರೇ ಆಗಿರುತ್ತಾರೆ. ನಗರಜೀವಿಗಳಾದ ಇವರು ಕೆಲವೊಮ್ಮೆ ಬೇಜಾರು ಕಳೆದುಕೊಳ್ಳಲೆಂದೋ, ವಿಹಾರಾರ್ಥವಾಗಿಯೋ ಇತರೆ ಆದಾಯಗಳ ಹೂಡಿಕೆಯಾಗಿ ಕೃಷಿಯನ್ನು ತಮ್ಮ ಕುಟುಂಬದ ಇತರರ ಹೆಸರಲ್ಲಿ, ಬೇರೆಯವರಿಂದ ಮಾಡಿಸುತ್ತಿರುತ್ತಾರೆ. ಇಂತಹ ಅನುಕೂಲಸ್ಥ ರೈತರು ಸಾಮಾಜಿಕವಾಗಿ ಎಂದೂ ಬಡ ರೈತರೊಂದಿಗೆ ಗುರುತಿಸಿಕೊಳ್ಳದಿದ್ದರೂ, ರೈತರ ಹೆಸರಲ್ಲಿ ಲಾಭ ಪಡೆಯುವಲ್ಲಿ ಮಾತ್ರ ತಮ್ಮ ವ್ಯಾವಹಾರಿಕತೆಯಿಂದಾಗಿ ಎಲ್ಲರಿಗಿಂತ ಮುಂದಿರುತ್ತಾರೆ. ಇದನ್ನು ಚಿದಂಬರಂ ತಮ್ಮ ಔಚಿತ್ಯಪೂರ್ಣ ವಿಂಗಡಣೆಯ ಮೂಲಕ ಸ್ವಲ್ಪ ಮಟ್ಟಿಗೆ ತಪ್ಪಿಸಿದ್ದಾರಾದರೂ, ನಗರ ಕೇಂದ್ರಿತ ಗೈರು ರೈತರನ್ನೂ– ಅವರು ಎಷ್ಟೇ ಸಣ್ಣ

ರೈತರಾದರೂ– ಈ ಸಾಲ ಮನ್ನಾದ ವ್ಯಾಪ್ತಿಯ ಹೊರಗಿಡುವ ಉಪಾಯವೊಂದನ್ನು ಅಳವಡಿಸಿದ್ದರೆ, ಈ ಯೋಜನೆ ಇನ್ನಷ್ಟು ವಿಶ್ವಾಸಾರ್ಹವೆನ್ನಿಸಿಕೊಳ್ಳುತ್ತಿತ್ತು.

ಅದೇನೇ ಇರಲಿ, ಕೇಂದ್ರ ಸರ್ಕಾರ ೬೦ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾದ ಜೊತೆಗೆ ರೈತರಿಗೆ ಮುಂದಿನ ವರ್ಷ ಎರಡು ಲಕ್ಷ ಎಂಭತ್ತು ಸಾವಿರ ಕೋಟಿ ರೂಪಾಯಿಗಳ ಸಾಲ ವಿತರಣೆಯ ಭರವಸೆಯನ್ನೂ ನೀಡಿದೆ. ಇದಕ್ಕೆಲ್ಲ ಮುಖ್ಯ ಕಾರಣ, ಆರ್ಥಿಕ ಉದಾರೀಕರಣದ ಪ್ರಕ್ರಿಯೆ ಕಳೆದ ನಾಲ್ಕೈದು ವರ್ಷಗಳಲ್ಲಿ ತೋರಿದ ಎರಡಂಕಿ ಆಸುಪಾಸಿನ ಏರುಗತಿಯ ಬೆಳವಣಿಗೆ ದರ, ಈ ವರ್ಷ ತೀವ್ರ ಇಳಿತಾಯದ ಅಪಾಯದ ಮುನ್ಸೂಚನೆ ನೀಡಿರುವುದು. ಈ ಅಪಾಯದ ಮೂಲ ಇರುವುದು, ಕೃಷಿ ವಲಯದ ಬೆಳವಣಿಗೆಯ ದರ ಶೇ. ಮೂರಕ್ಕೂ ಕಡಿಮೆಯಾಗಿರುವುದರಲ್ಲಿ. ಕೈಗಾರಿಕಾ (ಉತ್ಪಾದನಾ) ವಲಯ ಕೂಡಾ ಆರ್ಥಿಕ ಬೆಳವಣಿಗೆ ದರದಲ್ಲಿ ಈಗ ಸೇವಾ ವಲಯಕ್ಕೆ ತನ್ನ ಅಗ್ರ ಸ್ಥಾನವನ್ನು ಬಿಟ್ಟುಕೊಟ್ಟು, ನಮ್ಮ ಇಡೀ ಅರ್ಥ ವ್ಯವಸ್ಥೆಯನ್ನೇ ಒಂದು ಅಮೂರ್ತ ಅಸಮತೋಲನದೆಡೆಗೆ ಕೊಂಡೊಯ್ಯುತ್ತಿರುವುದು ಇನ್ನೂ ದೊಡ್ಡ ಅಪಾಯದ ಸೂಚನೆಯಾಗಿದೆ. ಉದಾರೀಕರಣದ ಮೂಲಕ ವಿಶ್ವ ಆರ್ಥಿಕತೆಯೊಡನೆ, ವಿಶೇಷವಾಗಿ ಅಮೆರಿಕಾದ ಆರ್ಥಿಕತೆಯೊಡನೆ ತನ್ನನ್ನು ಜೋಡಿಸಿಕೊಂಡ ಭಾರತದ ಅರ್ಥ ವ್ಯವಸ್ಥೆ, ಅಮೆರಿಕಾದಲ್ಲಿ ಈಗ ಆರಂಭವಾಗಿರುವ ಆರ್ಥಿಕ ಹಿಂಜರಿತದಿಂದ ಮುಂದೆ ಅನೇಕ ಆಘಾತಗಳನ್ನು ಎದುರಿಸುವ ಸೂಚನೆಗಳು– ಉದಾಹರಣೆಗೆ ಇತ್ತೀಚಿನ ನಮ್ಮ ಷೇರು ಪೇಟೆಯ ಆಘಾತಕಾರಿ ಪ್ರಮಾಣದ ಕುಸಿತದ ಪರೋಕ್ಷ ರೂಪದಲ್ಲಿ– ಈಗಾಗಲೇ ಕಂಡುಬರುತ್ತಿವೆ.

ಈ ಎಲ್ಲ ಅಪಾಯುಗಳ ಹಿನ್ನೆಲೆಯುಲ್ಲಿ ನಮ್ಮ ಅರ್ಥ ವ್ಯವಸ್ಥೆಯುಲ್ಲಿ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿರುವ ಕೃಷಿ ವಲಯದ ಪುನರುಜ್ಜೀವನ ಭಾರತದ ಆರ್ಥಿಕ ಸ್ಥಿರತೆಯ ದೃಷ್ಟಿಯಿಂದ ಮಾತ್ರವಲ್ಲ; ಅದರ ರಾಜಕೀಯ ಸ್ಥಿರತೆಯ ಮತ್ತು ಅದರ ಸಾಂಸ್ಕೃತಿಕ ಬೇರುಗಳ ಸಂರಕ್ಷಣೆಯ ದೃಷ್ಟಿಗಳಿಂದಲೂ ಅತ್ಯಗತ್ಯ ಹಾಗೂ ಅನಿವಾರ್ಯವಾದ ಕ್ರಮವಾಗಿದೆ. ತನ್ನ ರಾಜಕೀಯ ಲಾಭದ ದೃಷ್ಟಿಯಿಂದಲೇ ಆಗಲಿ, ಈ ಅರಿವಿಗೆ ಪರೋಕ್ಷವಾಗಿಯಾದರೂ ತನ್ನನ್ನು ತೆರೆದುಕೊಂಡಿರುವ ಈ ಕಾಂಗ್ರೆಸ್ ನೇತೃತ್ವದ ಸರ್ಕಾರ ನಿಜವಾಗಿಯೂ ಅಭಿನಂದನೆಗೆ ಅರ್ಹವಾಗಿದೆ. ಆದರೆ, ಇದು ದೊಡ್ಡ ಎಚ್ಚರಿಕೆಯ ಆರಂಭದ ಕ್ರಮ ಮಾತ್ರವಾಗಿದ್ದು, ನಮ್ಮ ಕೃಷಿ ವಲಯವನ್ನೇ ಮೊದಲು ಆಧುನಿಕ ತಾಂತ್ರಿಕತೆಯ ಜಂಜಾಟದಿಂದ ಮುಕ್ತಗೊಳಿಸಿಬೇಕಿದೆ. ಅಲ್ಲದೆ, ಅದರ ಇಡೀ ಆಯೋಜನೆಯನ್ನು ಹೆಚ್ಚಾಗಿ ಸ್ಥಳೀಯ ಸಂಸ್ಥೆಗಳ ಸುಪರ್ದಿಗೆ ಒಪ್ಪಿಸುವ ಮೂಲಕ ಅದನ್ನು ಒಂದು ವಿಕೇಂದ್ರಿತ ಹಾಗೂ ದೇಸಿ ವ್ಯವಸ್ಥೆಯನ್ನಾಗಿ ರೂಪಿಸುವುದಾದರೆ ಮಾತ್ರ ಈ ಎಚ್ಚರಿಕೆ ಹಾಗೂ ಈ ಕ್ರಮ ಅರ್ಥಪೂರ್ಣವೆನಿಸಿಕೊಳ್ಳಬಹುದು.

ಆದರೆ, ಈ ಸಾಧ್ಯತೆಯೇ ಉದಾರೀಕರಣ(ಈ ಪದವೇ ಎಷ್ಟು ದಾರಿ ತಪ್ಪಿಸುವಂತಹುದಾಗಿದೆ!)ವಾದಿಗಳಾದ ಹೊಸ ಉದ್ಯಮಪತಿಗಳು ತಂತ್ರಜ್ಞರು, ಆಡಳಿತಗಾರರು

ಹಾಗೂ ಅರ್ಥಶಾಸ್ತ್ರಜ್ಞರ ಕೂಟದಂತಿರುವ ನಮ್ಮ ಹೊಸ ಕಾರ್ಪೊರೇಟ್ ವಲಯದ ಕಿವಿಗೆ ಅಪಾಯದ ಕರೆಗಂಟೆ ರೂಪದಲ್ಲಿ ಕೇಳಿಸಲಾರಂಭಿಸಿದೆ! ಅವರ ಘೋಷಿತ ಅಭಿವೃದ್ಧಿ ಮಾದರಿ ನಮ್ಮ ಕೃಷಿ ನೆಲೆಗಳಾದ ಹಳ್ಳಿಗಳ ದರಿದ್ರೀಕರಣದ ಮೂಲಕ ನಗರೀಕರಣವನ್ನು ಸಾಧಿಸುವುದೇ ಆಗಿದೆ. ಈ ನಗರೀಕರಣದ ಬೆಡಗಿಗೆ ಬಹುವಾಗಿ ಕಾರಣಕರ್ತವಾಗಿರುವ ಸೇವಾ ವಲಯದ ಹೆಗ್ಗುರುತಾದ ದಲ್ಲಾಳಿಕೋರತನವು, ಅದರ ಹಲವು ನಾಜೂಕಾದ ಪದರಗಳಲ್ಲಿ ಅಂತರ್ಗತವಾಗಿದೆ. ಹಿಂದೆಂದೂ ಯಾವ ವ್ಯಾಪಾರದಲ್ಲೂ ಕಾಣದಿದ್ದಂತಹ ಈ ಅಪಾರ ಲಾಭಕೋರತನದ ರುಚಿ ಕಳೆದ ಹತ್ತು ವರ್ಷಗಳಲ್ಲಿ ಇವರ ಹಲ್ಲುಗಳಿಗೆ ಇಳಿದಿದೆ. ಆದರೆ ಅವರು ತಮ್ಮ ದಲ್ಲಾಳಿತನಕ್ಕಾಗಿ ಈಗ ಹೊಸದಾಗಿ ರೂಪಿಸಿಕೊಂಡಿರುವ ವೇದಿಕೆಯಂತಿರುವ ವಿಶೇಷ ಆರ್ಥಿಕ ವಲಯಗಳಿಗೆ ರೈತರಿಂದ ದೊಡ್ಡ ಪ್ರಮಾಣದ ಪ್ರತಿರೋಧ ವ್ಯಕ್ತವಾಗುತ್ತಿರುವುದನ್ನು ಅವರು ಆತಂಕದಿಂದ ನೋಡುತ್ತಿದ್ದಾರೆ. ಇದನ್ನು ಮಟ್ಟ ಹಾಕುವ ಬದಲಾಗಿ ಸರ್ಕಾರ ಈ ಪ್ರತಿರೋಧಕ್ಕೆ ಕ್ರಮೇಣ ಮಣಿಯುತ್ತಿರುವಂತೆ ತೋರುತ್ತಿರುವುದು ಈ ನವ ಬಂಡವಾಳಶಾಹಿಗಳಲ್ಲಿ ಸರ್ಕಾರದ ಉದಾರೀಕರಣದ ಬಗೆಗೇ ಅನುಮಾನ ಹುಟ್ಟಿಸುತ್ತಿರುವಂತಿದೆ. ಹಾಗಾಗಿಯೇ, ರೈತರ ಸಾಲ ಮನ್ನಾ ಬಗ್ಗೆ ಇವರಿಂದ ಇಷ್ಟೊಂದು ಹುಯ್ಲು! ಜನ– ಅಂದರೆ ಜನಸಂಘಟನೆಗಳು– ಕೊನೆಗೂ– ಚುನಾವಣಾ ವೇಳೆಗಾದರೂ, ಹೊಸ ಸತ್ಯವೊಂದರೆಡೆಗೆ ಸರ್ಕಾರದ ಕಣ್ಣು ತೆರೆಸಿರುವಂತಿದೆ. ಸರ್ಕಾರವೀಗ ಈ ಹೊಸ ಸಂದರ್ಭದಲ್ಲಿ ತನ್ನ ಮೇಲೇ ಸವಾರಿಗೆ ಸಿದ್ಧವಾಗುತ್ತಿರುವಂತೆ ತೋರುತ್ತಿರುವ ಕಾರ್ಪೊರೇಟ್ ಅಧಿಪತಿಗಳನ್ನು ಹಾಗೂ ಅವರ ವಕ್ತಾರರನ್ನು ಹೇಗೆ ನಿರ್ವಹಿಸುವುದೋ ಕಾದು ನೋಡಬೇಕು.

ಮಾರ್ಚ್ ೧೪, ೨೦೦೮

ಕೃಷ್ಣಾಗಮನ : ಕಾಂಗ್ರೆಸ್ಸಿನ ಸೋಲಿನ ರಾಜಕಾರಣ

ಕಾಂಗ್ರೆಸ್ಸಿಗರಿಗೆ ಕಾಂಗ್ರೆಸ್ಸಿಗರೇ ಶತ್ರುಗಳು ಎಂದು ಕಾಣುತ್ತದೆ. ಇಲ್ಲದಿದ್ದರೆ, ಚುನಾವಣೆಗಳು ಮೇನಲ್ಲೇ ಖಚಿತ ಎಂಬ ಸೂಚನೆ ಸಿಗುತ್ತಿದ್ದಂತೆ, ತರಾತುರಿಯಲ್ಲಿ ಎಸ್.ಎಂ. ಕೃಷ್ಣರನ್ನೇಕೆ ಮಹಾರಾಷ್ಟ್ರದ ರಾಜ್ಯಪಾಲರ ಹುದ್ದೆಯಿಂದ ಬಿಡುಗಡೆಗೊಳಿಸಿ ರಾಜ್ಯ ರಾಜಕೀಯಕ್ಕೆ ಕಳಿಸಲಾಗುತ್ತಿತ್ತು? ಮೊದಲಾಗಿ, ರಾಜ್ಯಪಾಲರಾಗಿದ್ದವರೊಬ್ಬರು ಮತ್ತೆ ಸಕ್ರಿಯ ರಾಜಕಾರಣಕ್ಕೆ ಮರಳುವುದೇ ಅನೈತಿಕ ಹಾಗೂ ರಾಜ್ಯಪಾಲರ ಹುದ್ದೆಯ ಘನತೆಗೆ ಮಾಡುವ ಅವಮಾನ. ರಾಜ್ಯಪಾಲ ಹುದ್ದೆಯು ಪಕ್ಷ ರಾಜಕೀಯವನ್ನು ಮೀರಿ ಕಾರ್ಯ ನಿರ್ವಹಿಸಬೇಕಾದ ಸಂವೈಧಾನಿಕ ಮುತ್ಸದ್ದಿತನದ ಪ್ರತೀಕ. ಅದನ್ನು ರಾಜಕೀಯ ಆಸೆ-ಆಕಾಂಕ್ಷೆಗಳನ್ನು ಮೀರಿ ಬೆಳೆದವರು ಅಲಂಕರಿಸಬೇಕೆಂಬುದು ಜನತಂತ್ರ ವ್ಯವಸ್ಥೆಯಲ್ಲಿನ ಸಾಮಾನ್ಯ ನಂಬಿಕೆ. ಕಾಂಗ್ರೆಸ್ ಹಲವು ಬಾರಿ ಈ ನಂಬಿಕೆಯನ್ನು ಧಿಕ್ಕರಿಸಿ, ರಾಜ್ಯಪಾಲರ ಹುದ್ದೆಯ ಪಾವಿತ್ರ್ಯವನ್ನೇ ಹಾಳು ಮಾಡಿದೆ. ಈ ರಾಜಕೀಯ ಅನೈತಿಕತೆಯ ಬಗ್ಗೆ ಯಾವೊಂದು ಪಕ್ಷವೂ ಉಸಿರೆತ್ತದಿರುವುದು, ನಮ್ಮ ರಾಜಕೀಯ ಪಕ್ಷಗಳೆಲ್ಲವೂ ಹೇಗೆ ರಾಷ್ಟ್ರಾಡಳಿತದ ವಿಷಯವಾಗಿ ಎಲ್ಲ ಸೂಕ್ಷ್ಮತೆಗಳನ್ನೂ ಕಳೆದುಕೊಂಡಿವೆ ಎಂಬುದರ ಸೂಚನೆಯೂ ಆಗಿದೆ.

ಕೃಷ್ಣ ಹೇಳಿ ಕೇಳಿ ಕಳೆದ ಚುನಾವಣೆಗಳಲ್ಲಿ ರಾಜ್ಯ ಕಾಂಗೆಸ್ಸನ್ನು ಹೆಚ್ಚು ಕಡಿಮೆ ನಿರ್ನಾಮ ಮಾಡಿ- ಅದು ಎಂದೂ ವಿಧಾನಸಭೆಯಲ್ಲಿ ಅಷ್ಟು ಕಡಿಮೆ ಸ್ಥಾನಗಳನ್ನು ಪಡೆದಿರಲಿಲ್ಲ- ತಮ್ಮ ರಾಜಕೀಯ ಸ್ವೋಪಜ್ಞತನದಿಂದಾಗಿಯಷ್ಟೇ ಮಹಾರಾಷ್ಟ್ರದ ರಾಜ್ಯಪಾಲ ಹುದ್ದೆಯಲ್ಲಿ ಪುನರ್ವಸತಿ ಪಡೆದವರು. ಅವರು ಅದರ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ರಾಜ್ಯ ಘಟಕದ ಅಧ್ಯಕ್ಷರಾಗಿ ತಮ್ಮ ನೇತೃತ್ವದಲ್ಲಿ ಪಕ್ಷಕ್ಕೆ ಭಾರಿ ಗೆಲುವನ್ನು ತಂದುಕೊಟ್ಟಿದ್ದರು ಎಂದು ಅವರ ಪರವಾಗಿ ವಾದಿಸಬಹುದು. ಆದರೆ, ಆ ನೇತೃತ್ವ ಅಧಿಕಾರ ವಹಿಸಿಕೊಂಡು ಎಂತಹ ಆಡಳಿತ ನೀಡಿತು, ಯಾರ ಪರವಾದ ಅಭಿವೃದ್ಧಿ ಕೈಗೊಂಡಿತು ಮತ್ತು ಆತ್ಯಂತಿಕವಾಗಿ

ಜನ ಅದನ್ನು ಎಷ್ಟರ ಮಟ್ಟಿಗೆ ಒಪ್ಪಿತು ಎಂಬುದು ಅವರ ರಾಜ್ಯ ರಾಜಕೀಯದ ಪುನರಾಗಮನವನ್ನು ನಿಶ್ಚಯಿಸುವಲ್ಲಿ ನಿರ್ಣಾಯಕ ಅಂಶವಾಗಬೇಕು. ಏಕೆಂದರೆ, ಬಾಯಿ ಬಿಟ್ಟರೆ ಇಂಗ್ಲಿಷ್ ಮಾತನಾಡುತ್ತಾ, ಐ.ಟಿ.– ಬಿ.ಟಿ. ಉದ್ಯಮಪತಿಗಳ ಸಖ್ಯದಲ್ಲಿ ಸುಖ ಕಾಣುತ್ತಾ, ಬೆಂಗಳೂರನ್ನು ಸಿಂಗಪುರ ಮಾಡುವ ಕನಸು ಕೊಟ್ಟು; ಅದಕ್ಕೆ ತಕ್ಕ ಹಾಗೆ ತಮ್ಮ ಕ್ಷೇತ್ರವನ್ನು ಮದ್ದೂರಿನ ಹಳ್ಳಿಗಾಡಿನಿಂದ ಬೆಂಗಳೂರಿನ ಚಾಮರಾಜಪೇಟೆಗೆ ವರ್ಗಾಯಿಸಿಕೊಂಡ ಕೃಷ್ಣ, ಹೈಟೆಕ್ ಮುಖ್ಯಮಂತ್ರಿಯೆಂದೇ ಮಾಧ್ಯಮಗಳಲ್ಲಿ ಪ್ರಚಾರ ಪಡೆದುಕೊಂಡು ಅಂತಿಮವಾಗಿ ಚುನಾವಣೆಗಳಲ್ಲಿ ಮಣ್ಣು ಮುಕ್ಕಿದವರು.

ಹಾಗಾದರೆ, ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ವಾಸ್ತವವನ್ನು ಮರೆಸಿ, ಕೃಷ್ಣರನ್ನು ರಾಜ್ಯ ರಾಜಕೀಯಕ್ಕೆ ಮರಳಿ ತರುವಂತಹ ಬದಲಾವಣೆಗಳೇನಾದರೂ ಆಗಿವೆಯೇ? ಹಾಗೆ ನೋಡಿದರೆ, ಅಷ್ಟೇನೂ ಹೆಸರು ಕೆಡಿಸಕೊಂಡಿರದ ಹಾಗೂ ಹೈಟೆಕ್ ಅಥವಾ ಅಗ್ಗದ ರಾಜಕಾರಣದ ಅತಿಗಳಿಗೆ ಹೋಗದ ಅನುಭವಿ ರಾಜಕಾರಣಿಯಾದ ಖರ್ಗೆಯವರ ನೇತೃತ್ವದಲ್ಲಿ ರಾಜ್ಯವು ಮೊಟ್ಟಮೊದಲ ದಲಿತ ಮುಖ್ಯಮಂತ್ರಿಯನ್ನು ಪಡೆಯುವ ಹಿರಿಮೆ ಹಾಗೂ ಸಾಧ್ಯತೆಗಳು ಒಡಮೂಡುವ ರೀತಿಯಲ್ಲಿ; ಈ ದಿನಗಳಲ್ಲಿ ರಾಜ್ಯ ರಾಜಕಾರಣ, ಕಾಂಗ್ರೆಸ್ಸಿನ ಸುತ್ತಮುತ್ತಲೇ ಎಲ್ಲ ಸಭ್ಯ ಹಾಗೂ ಜನಪರ ಮತ್ತು ಪ್ರಗತಿಪರ ಶಕ್ತಿಗಳು ಕ್ರೋಢೀಕೃತಗೊಳ್ಳುವಂತೆ ವಿನ್ಯಾಸಗೊಳ್ಳುತ್ತಿತ್ತು. ಆದರೆ ಕೃಷ್ಣರ ಈ ಪುನರಾಗಮನ ಈಗ ಕಾಂಗ್ರೆಸ್ ಪಾಲಿಗೆ ಒಂದು ಹಿನ್ನಡೆಯೇ ಆಗಿ ಪರಿಣಮಿಸಿದಂತಿದೆ. ಬಿಜೆಪಿಯ ಮತೀಯ ದ್ವೇಷದ ಹಾಗೂ ಅಗ್ಗದ ಜನಪ್ರಿಯ ರಾಜಕಾರಣ (ನಾನು ಮತ್ತೆ ಮುಖ್ಯಮಂತ್ರಿಯಾದರೆ, ಮತಗಳಿಗೆ ಈಗ ಕೊಟ್ಟಿರುವುದರ ಹತ್ತು ಪಟ್ಟು ಹಣವನ್ನು ನೀಡಿಯೇನು ಎಂಬ ಯಡಿಯೂರಪ್ಪನವರ ಠೇಂಕಾರದ ಹೇಳಿಕೆಯನ್ನು ಗಮನಿಸಿ!) ಹಾಗೂ ಜೆಡಿಎಸ್‌ನ ಭಂಡ ಕೌಟುಂಬಿಕ ರಾಜಕಾರಣ ಹುಟ್ಟುಹಾಕಿದ ಸ್ವಜನ ಪಕ್ಷಪಾತ, ಜಾತೀಯತೆ, ಎಗ್ಗಿಲ್ಲದ ಭ್ರಷ್ಟಾಚಾರ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಅವು ತಮ್ಮ ಅಧಿಕಾರಾವಧಿಯ ಅಂತ್ಯದಲ್ಲಿ ನಾಚಿಕೆಗೆಟ್ಟು ಪ್ರದರ್ಶಿಸಿದ ರಾಜಕೀಯ ಅಪ್ರಾಮಾಣಿಕತೆಯ ಪರಿಯನ್ನು ಕಂಡು ಸಾಮಾನ್ಯ ಜನತೆ ಗಾಬರಿಗೊಂಡಿತ್ತು. ಹೀಗಾಗಿ ಇವರೆಲ್ಲ ಮತ್ತೆ ಕಾಂಗ್ರೆಸ್ಸಿನೆಡೆಗೆ ತಿರುಗಿ ನೋಡಬೇಕೆನ್ನಿಸಲಾರಂಭಿಸಿದ್ದ ಹೊತ್ತಿನಲ್ಲಿ, ಕಾಂಗ್ರೆಸ್ಸಿನ ವರಿಷ್ಠ ನಾಯಕತ್ವ ಆತುರದಲ್ಲಿ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡಿದೆ. ಖರ್ಗೆಯವರ ಸಾಂಸ್ಥಿಕ ನಾಯಕತ್ವವಾಗಲೀ, ಮೊಯ್ಲಿಯವರ ಬೌದ್ಧಿಕ ನಾಯಕತ್ವವಾಗಲೀ ದೆಹಲಿ ನಾಯಕತ್ವಕ್ಕೆ ಕರ್ನಾಟಕದ ರಾಜಕೀಯ ವಾಸ್ತವವನ್ನು ಮನವರಿಕೆ ಮಾಡಿಕೊಡುವಲ್ಲಿ ವಿಫಲವಾಗಿದೆ ಎಂದೇ ಇದರ ಅರ್ಥ.

ಕೃಷ್ಣರನ್ನು ದೇವೇಗೌಡರ ಒಕ್ಕಲಿಗರ ರಾಜಕಾರಣವನ್ನು ನಿಯಂತ್ರಿಸಲು ತರಲಾಗಿದೆಯಂತೆ... ಕಾಂಗ್ರೆಸ್ಸಿಗೆ ಆಧುನಿಕ ಮುಖ ನೀಡಲು ಅವರನ್ನು ಕರೆತರಲಾಗಿದೆಯಂತೆ... ಕಾಂಗ್ರೆಸ್ಸಿನ ಹಲವು ಗುಂಪುಗಳ ಏಕತೆಗಾಗಿ ಈ ರಾಜಕೀಯ ತಂತ್ರವಂತೆ... ಈ ಸಮರ್ಥನೆಗಳ ಹಿಂದೆ ಎಂತಹ ಅವಿವೇಕದ ಮಂಕು ಇದೆಯೆಂದರೆ, ಕೃಷ್ಣ ಇವೆಲ್ಲ ಆಗಿದ್ದಾಗಲೇ ಅವರ

ನೇತೃತ್ವದಲ್ಲಿ ಕಾಂಗ್ರೆಸ್ ಅವಮಾನಕಾರಿ ರೀತಿಯಲ್ಲಿ ಸೋತದ್ದು ಎಂಬುದೂ ಈ ನಿರ್ಧಾರ ಕೈಗೊಂಡ ಪಕ್ಷದ ವರಿಷ್ಠ ನಾಯಕತ್ವದ ಗಮನಕ್ಕೆ ಬಾರದೇ ಹೋಗಿದೆ! ಹೋದ ಚುನಾವಣೆಗಳಲ್ಲಿ ಸೋಲಿನ ಭಯದಿಂದಾಗಿ ಒಕ್ಕಲಿಗರ ನೆಲೆಯಿಂದ ತಪ್ಪಿಸಿಕೊಂಡು ಬೆಂಗಳೂರಿನ ಮಧ್ಯಮ ವರ್ಗದ ಕ್ಷೇತ್ರಕ್ಕೆ ಓಡಿಬಂದ ಕೃಷ್ಣ, ಯಾವ ಕಾಲಕ್ಕೂ ಒಕ್ಕಲಿಗರ ನಾಯಕತ್ವಕ್ಕೆ ಬಾಧ್ಯರಾಗಲಾರರು. ಹಾಗೇ, ಅವರು ಕಾಂಗ್ರೆಸ್ಸಿಗೆ ಆಧುನಿಕ ಮುಖ ಒದಗಿಸುವರು ಎಂಬ ನಂಬಿಕೆ ಕೂಡಾ. ಅವರು ಎಷ್ಟು ಮತದಾರರನ್ನು ಈ ನೆಲೆಯಲ್ಲಿ ಸೆಳೆಯಬಲ್ಲರೋ, ಅದರ ಹಲವಾರು ಪಟ್ಟು ಮತದಾರರನ್ನು ತಮ್ಮ ಹೈಟೆಕ್ ಬಿಂಬದಿಂದಾಗಿ ಕಾಂಗ್ರೆಸ್ಸಿನಿಂದ ದೂರ ಸರಿಸುವ ಸಾಧ್ಯತೆಗಳೂ ಇವೆ! ಅಲ್ಲದೆ, ತಾವು ವಿಧಾನಸಭೆಗೆ ಸ್ಪರ್ಧಿಸುವುದೋ ಬಿಡುವುದೋ ಎಂಬುದನ್ನು ತೀರ್ಮಾನ ಮಾಡಿಲ್ಲವೆಂಬ ಕೃಷ್ಣರ ಹೇಳಿಕೆ, ಕಾಂಗ್ರೆಸ್ಸಿನಲ್ಲಿ ಹೆಚ್ಚೂ ಕಡಿಮೆ ಇತ್ಯರ್ಥವಾಗಿದ್ದ ನಾಯಕತ್ವದ ಗೊಂದಲವನ್ನು ಮತ್ತೆ ಸೃಷ್ಟಿಸಿದೆ.

ಕಳೆದ ಲೋಕಸಭಾ ಚುನಾವಣೆಗಳ ನಂತರದ ಯಾವ ಚುನಾವಣೆಗಳಲ್ಲೂ ಗೆಲುವಿನ ಮುಖ ಕಾಣದೇ ಹೋಗಿರುವ ಕಾಂಗ್ರೆಸ್, ಈ ವರ್ಷಾಂತ್ಯದಲ್ಲಿ ನಡೆಯಬೇಕಾದ ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೆ ತನ್ನ ಪಾಲಿನ ಶುಭಾರಂಭವನ್ನು ಮೇನಲ್ಲಿ ಕರ್ನಾಟಕದಲ್ಲಿ ಸಾಧಿಸುವ ಕಾತರದಲ್ಲಿ ಈ ತಪ್ಪು ಹೆಜ್ಜೆ ಇಟ್ಟಂತಿದೆ. ಕಾಂಗ್ರೆಸ್ ಒಂದು ಕಡೆ ತನ್ನ ಇತ್ತೀಚಿನ ಮುಂಗಡ ಪತ್ರದ ಮೂಲಕ ಮತ್ತೆ ಗ್ರಾಮ ಪರ ತಾತ್ವಿಕತೆಯೆಡೆಗೆ ವಾಲಿದಂತೆ ತೋರಿದರೂ, ಅದು ದೇಶದಲ್ಲಿ ಆರ್ಥಿಕ ಜಾಗತೀಕರಣವನ್ನು ಅನಾವರಣ ಮಾಡಿದ ಪಕ್ಷವಾಗಿ ತನ್ನ ಹೈಟೆಕ್ ಸಂಸ್ಕೃತಿಯ ಪ್ರತಿಪಾದನೆಯನ್ನು ಬಿಟ್ಟುಕೊಡಲಾಗದ ಸಂದಿಗ್ಧಕ್ಕೂ ಸಿಕ್ಕಿಕೊಂಡಿದ್ದಂತೆ ಕಾಣುತ್ತದೆ. ಅದರ ಇಂದಿನ ಮೂವ್ವರು ಮುಖ್ಯ ನಾಯಕರಾದ ಸೋನಿಯಾ ಗಾಂಧಿ, ಮನಮೋಹನ ಸಿಂಗ್ ಹಾಗೂ ರಾಹುಲ ಗಾಂಧಿ ಮೂಲತಃ ಪ್ರಖರ ಜಾಗತೀಕರಣವಾದಿಗಳೇ ಆಗಿದ್ದು, ಈ ಜಾಗತೀಕರಣದ ಜವಾಬ್ದಾರಿಯನ್ನು ಅವರು ರಾಜ್ಯ ಮಟ್ಟದಲ್ಲಿ ಖರ್ಗೆ ಅಥವಾ ಸಿದ್ಧರಾಮಯ್ಯನವರಂತಹ 'ಹಿಂದುಳಿದ ಗ್ರಾಮೀಣ ಮುಖ'ಗಳಿಗೆ ವಹಿಸಲಾಗದು ಎಂಬ ನಿರ್ಧಾರಕ್ಕೆ ಬಂದಿದ್ದರೆ ಆಶ್ಚರ್ಯವಿಲ್ಲ! ಇದನ್ನು ಒಂದು ಉದಾಹರಣೆಯೊಂದಿಗೆ ವಿಷದೀಕರಿಸಿ ಹೇಳುವುದದರೆ, ಕ್ರಿಕೆಟ್‌ನ ಹೆಸರಿನಲ್ಲಿ ಇಂದು ರಾಷ್ಟ್ರಾದ್ಯಂತ ಹುಟ್ಟುಹಾಕುತ್ತಿರುವ ಹುಸಿ ಆವೇಶದ ವಾತಾವರಣದಲ್ಲಿ, ವರ್ಣರಂಜಿತವಾಗಿ ಕಾಣಿಸಿಕೊಂಡು ಸಂಭ್ರಮಿಸಬಲ್ಲವರು ಮಾತ್ರ ಆಡಳಿತದ ಚುಕ್ಕಾಣಿ ಹಿಡಿದು ತಾವು ನಂಬಿರುವ ಜಾಗತಿಕ ಆರ್ಥಿಕತೆಯನ್ನು ದೇಶದಲ್ಲಿ ಬಲಪಡಿಸಬಲ್ಲರು ಎಂಬುದು ಕಾಂಗ್ರೆಸ್ ನಾಯಕತ್ವದ ನಂಬಿಕೆಯಾಗಿದ್ದಂತೆ ತೋರುತ್ತದೆ. ಅವರಿಗೆ ಕೃಷ್ಣರ 'ಮುಖ' ಈ ನಂಬಿಕೆಗೆ ಅರ್ಹವಾಗಿ ಕಂಡಿರಬೇಕು!

ಕ್ರಿಕೆಟ್, ಭಾರತದ ಮಟ್ಟಿಗೆ ಇಂದು ಅತಿ ಮಹತ್ವದ 'ಚಟುವಟಿಕೆ'ಯಾಗಿ ಪ್ರಸ್ತುತಗೊಂಡಿರುವುದರ ಮರ್ಮವಾದರೂ ಏನು? ಹಣದ ದುರಾಶೆಯ ಆಡಳಿತಗಾರರ ಕೈಗೆ ಸಿಕ್ಕಿರುವ ಕ್ರಿಕೆಟ್, ಒಂದು ಆಟವಾಗಿ ಎಂದೋ ಮೃತ ಹೊಂದಿದೆ. ಐದು ದಿನಗಳ

ಅವಧಿಯಲ್ಲಿ ಬ್ಯಾಟಿಂಗ್, ಬೌಲಿಂಗ್ ಹಾಗೂ ಫೀಲ್ಡಿಂಗ್‌ಗಳ ಜೊತೆಗೆ ತಂಡದ ನಾಯಕತ್ವದಲ್ಲಿಯೂ ವಿವಿಧ ತೆರನ ಕೌಶಲ್ಯಗಳನ್ನು ಮರೆಯುವ ಮೂಲಕ ತನ್ನನ್ನು ಅತ್ಯಂತ ಸೂಕ್ಷ್ಮ ಮತ್ತು ಅದೇ ವೇಳೆಯಲ್ಲಿ ರೋಚಕ ಕ್ರೀಡೆಯನ್ನಾಗಿಯೂ ಪ್ರಸ್ತುತಗೊಳಿಸಿಕೊಂಡಿದ್ದ ಕ್ರಿಕೆಟ್, ಇತ್ತೀಚಿನ ವರ್ಷಗಳಲ್ಲಿ ಒಂದು ದಿನದ ಪಂದ್ಯವಾಗಿ; ನಂತರ ೨೦– ೨೦ ಓವರ್‌ಗಳ ಪಂದ್ಯವಾಗಿ, ತನ್ನೆಲ್ಲಾ ಸಮಗ್ರತೆಯನ್ನೂ, ಕಲಾತ್ಮಕತೆಯನ್ನೂ ಕಳೆದುಕೊಂಡು ಈಗ ಬರೀ ಪೌರುಷ ಮೆರೆಯುವ ಶಕ್ತಿ ಕ್ರೀಡೆಯಾಗಿ ಅವನತಿ ಹೊಂದಿದೆ. ಈ ಅವನತಿಯ ಹಿಂದೆ ಇರುವುದು ಜಾಗತಿಕ ಮಾರ್ವಾಡಿಗಳ ಕೈವಾಡ. ನಮ್ಮ ಭಾರತದ ಕ್ರಿಕೆಟ್ ಮಂಡಳಿಯ ತುಂಬಾ ಇರುವವರು ಇವರ ಚೇಲಾಗಳೇ. ಶರದ್ ಪವಾರರು ಕೃಷಿ ಮಂತ್ರಿಯಾಗಿ ಎಂದಾದರೂ ಚಟುವಟಿಕೆಯಿಂದ ಇದ್ದುದನ್ನು ನೀವು ಈವರೆಗೆ ಕಂಡಿದ್ದಿರಾ? ಆದರೆ ಕ್ರಿಕೆಟ್ ಮಂಡಳಿಯ ಅಧ್ಯಕ್ಷರಾಗಿ ಮಾತ್ರ ಅವರು ಬಾಯಿ ತುಂಬಾ ನಗುವ ದೃಶ್ಯಗಳು ಈಗ ಕಿರುತೆರೆಯ ಮೇಲೆ ಪದೇ ಪದೇ ಕಾಣಿಸಿಕೊಳ್ಳುತ್ತಿರುವುದರ ಮರ್ಮವಾದರೂ ಏನು, ಯೋಚಿಸಿ! ಈಚೆಗೆ ಭಾರತ ತಂಡ ಆಸ್ಟ್ರೇಲಿಯಾವನ್ನು ಅದರ ನೆಲದಲ್ಲೇ ಮಣಿಸುವ ಮುನ್ನ, ಅದಕ್ಕೆ ಸ್ಫೂರ್ತಿ ಎಂಬಂತೆ, ನಮ್ಮ ಕ್ರಿಕೆಟ್ ಮಂಡಳಿ ಆ ದೇಶದ ಕ್ರಿಕೆಟ್ ಮಂಡಳಿಯನ್ನು ತನ್ನ ಆರ್ಥಿಕ ಬಲ ಬಳಸಿಯೇ ಮಣಿಸಿತ್ತು ಎಂಬುದನ್ನೂ ನೆನಪಿಡೋಣ...

ಆಸ್ಟ್ರೇಲಿಯಾದಲ್ಲಿನ ನಮ್ಮ ಕ್ರಿಕೆಟ್ ವಿಜಯ ನಿಜವಾಗಿಯೂ ನಮ್ಮೆಲ್ಲರಿಗೆ ಹೆಮ್ಮೆ ಹಾಗೂ ಸಂತೋಷ ತಂದಿದೆ. ಆದರೆ ಇದು ನಿಜವಾಗಿಯೂ ಇವರೆಲ್ಲ– ಅಂದರೆ ಕ್ರಿಕೆಟ್ ಆಡಳಿತಗಾರರು ಹಾಗೂ ಮಾಧ್ಯಮದವರು– ಸಂಭ್ರಮಿಸುತ್ತಿರುವ ಪ್ರಮಾಣದ ರಾಷ್ಟ್ರೀಯ ಮಹತ್ವ ಹೊಂದಿದೆಯಾ? ಯಾಕೆ ಹೀಗೆ ಆಟಗಾರರಿಗೆ, ತರಬೇತಿದಾರರಿಗೆ, ಆಯ್ಕೆದಾರರಿಗೆ ಕೋಟಿ ಕೋಟಿ ರೂಪಾಯಿಗಳ ಹಣವನ್ನು ಎರಚಲಾಗುತ್ತಿದೆ? ಇವರು– ಈಚೆಗೆ ವಿಶ್ವ ಕಪ್ ಗೆದ್ದು ಬಂದ ಕಿರಿಯರ ಕ್ರಿಕೆಟ್ ತಂಡವೂ ಸೇರಿದಂತೆ– ಪ್ರದರ್ಶಿಸುತ್ತಿರುವ ಕ್ರಿಕೆಟ್ ಸಾಮರ್ಥ್ಯ, ನಮ್ಮ ಜನರ ಇತರೇ ಯಾವುದೇ ತೆರನ ಸಾಮರ್ಥ್ಯಕ್ಕಿಂತ ಅಷ್ಟು ಅಮೂಲ್ಯವಾಗಿದೆಯೇ? ಭಾರತದ ಒಬ್ಬ ಸಾಮಾನ್ಯ ಪ್ರಜೆ ಜೀವನ ಪೂರ್ತಿ ದುಡಿದೂ ಉಳಿತಾಯ ಮಾಡಲಾಗದಷ್ಟರ ಹಲವು ಪಟ್ಟು ಹಣವನ್ನು ಈ ಆಟಗಾರರಿಗೆ ಒಂದು ಪಂದ್ಯಾವಳಿಯನ್ನು ಗೆದ್ದುದಕ್ಕೆ ಏಕೆ ಕೊಡಲಾಗುತ್ತಿದೆ? ಯಾರ ಹಣ ಅದು? ಯಾವ ಆರ್ಥಿಕತೆ ಇದು? ಇಂತಹ ಪ್ರಶ್ನೆಗಳು ಏಳದಂತೆ ಜನರನ್ನು ಮಾರುಕಟ್ಟೆ ರೋಚಕತೆಯಲ್ಲಿ ಮುಳುಗಿಸಿ ಅವರ ವೈಚಾರಿಕತೆಯನ್ನು ನಾಶ ಮಾಡುವುದೇ ಜಾಗತಿಕ ಅರ್ಥಿಕತೆಯ ಗುರಿ ಮತ್ತು ಮಾರ್ಗಗಳೆರಡೂ ಆಗಿವೆ.

ಹಾಗಾಗಿಯೇ ಭಾರತದ ಕ್ರಿಕೆಟ್ ಮಂಡಳಿಯ ಆಶ್ರಯದಲ್ಲಿಯೇ ಹೆಂಡದ ಕುಳಗಳು, ಭಾರಿ ಉದ್ಯಮಪತಿಗಳು ಹಾಗೂ ಸಿನೆಮಾ ನಟ ನಟಿಯರು ಕ್ರಿಕೆಟಿಗರನ್ನು ಹರಾಜಿನಲ್ಲಿ ಕೂಗಿ, ಕೊಂಡು; 'ಆಟ'ದ ಹೆಸರಿನಲ್ಲಿ ಬಹುಮುಖ ಮನರಂಜನೆಯ– ಇದರಲ್ಲಿ ಅರೆಬೆತ್ತಲೆ ಹೆಣ್ಣುಗಳ ಕುಣಿತವೂ ಸೇರಿದೆ– ಹಲವು 'ಪ್ಯಾಕೇಜ್'ಗಳನ್ನು ಜನರ ಮುಂದಿಟ್ಟಿದೆ! ಸುಸಂಸ್ಕೃತ

ಆಟಗಾರರೆಂದೇ ಹೆಸರಾದ ಕುಂಬ್ಳೆ ಹಾಗೂ ದ್ರಾವಿಡರನ್ನೊಳಗೊಂಡ 'ರಾಯಲ್ ಚಾಲೆಂಜರ್ಸ್' ಎಂಬ ನಮ್ಮ ಬೆಂಗಳೂರು ತಂಡ, ಅದರ ಮಾಲೀಕ ವಿಜಯ ಮಲ್ಯ ತಯಾರಿಸುವ ಹೆಂಡದಿಂದಲೇ ತನ್ನ ಹೆಸರನ್ನು ಪಡೆದುಕೊಂಡಿದೆ ಎಂಬ ಸಂಗತಿ, ಕ್ರಿಕೆಟ್ ಎಂಬ ಉದ್ಯಮ ಮುಂದೆ ಹರಡಲಿರುವ 'ಮೌಲ್ಯಾಧಾರಿತ' ಸಂಸ್ಕೃತಿ ಎಂತಹದಿರುತ್ತದೆ ಎಂಬುದರ ಸೂಚಕವಾಗಿಯೂ ಇದ್ದಂತಿದೆ. ಇಂತಹುದನ್ನೆಲ್ಲ ಕಣ್ತುಂಬಾ ನೋಡಿ, ಬಾಯ್ತುಂಬಾ ಮೆಚ್ಚಬಲ್ಲ ಹೈಟೆಕ್ ಒಲವಿನ ಇಂಗ್ಲಿಷ್‌ಮನ್ ಕೃಷ್ಣರು ಕಾಂಗ್ರೆಸ್ ವರಿಷ್ಠ ಮಂಡಳಿಗೆ ಈ ಸಂದರ್ಭಕ್ಕೆ ತಕ್ಕ ರಾಜಕಾರಣಿಯಾಗಿ ಕಂಡಿದ್ದರೆ ಆಶ್ಚರ್ಯವಿಲ್ಲ!

ಮಾರ್ಚ್ ೨೧, ೨೦೦೮

ಸಮಾಜವಾದಿಗಳ ಕಾಂಗ್ರೆಸ್ಸೀಕರಣ : ಮುಂದೇನು ?

ಅಂತೂ ಎಂ.ಪಿ. ಪ್ರಕಾಶರು ಮತ್ತು ಅವರ ಬೆಂಬಲಿಗರು ತಿಂಗಳುಗಟ್ಟಲೆ ಕಾಂಗ್ರೆಸ್, ಬಿಜೆಪಿ ಎರಡೂ ಮನೆಗಳ ಬಾಗಿಲು ಕಾಯ್ದು ಈಗ ಕಾಂಗ್ರೆಸ್ ಮನೆ ಹೊಗಲು ಅರ್ಜಿ ಹಾಕಿದ್ದಾರೆ. ಇದರೊಂದಿಗೆ ಕರ್ನಾಟಕದ ಮಟ್ಟಿಗಾದರೂ, ಸಮಾಜವಾದಿಗಳ ಕಾಂಗ್ರೆಸ್ಸೀಕರಣ ಸಂಪೂರ್ಣವಾದಂತಿದೆ. ಬಂಗಾರಪ್ಪನವರು ಮುಲಾಯಂ ಸಿಂಗರ ರಾಷ್ಟ್ರೀಯ ನಾಯಕತ್ವದಲ್ಲಿ ಈಗ ಕೆಂಪು ಟೋಪಿ ಹಾಕಿಕೊಂಡು ಸಮಾಜವಾದಿ ವೇಷದಲ್ಲಿ ಕಾಣಿಸಿಕೊಳ್ಳುತ್ತಿರುವರಾದರೂ, ತಮ್ಮ ರಾಜಕೀಯ ಜೀವನದಲ್ಲಿ ಅವರು ತೊಟ್ಟಿರುವ ಇಂತಹ ಹಲವಾರು ವೇಷಗಳಲ್ಲಿ ಈಗಾಗಲೇ ಕನಿಷ್ಠ ಎರಡು ಬಾರಿ ಕಾಂಗ್ರೆಸ್ ವೇಷವನ್ನೂ ತೊಟ್ಟಿದ್ದರು ಎಂಬುದನ್ನು ಮರೆಯುವಂತಿಲ್ಲ ಮತ್ತು ಅನತಿ ಕಾಲದಲ್ಲೇ ಮೂರನೇ ಬಾರಿ ಆ ವೇಷ ತೊಡುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಅದೇನೇ ಇರಲಿ, ಇವರೆಲ್ಲರ ನಾಯಕರಾಗಿದ್ದ ಡಾ॥ ರಾಮಮನೋಹರ ಲೋಹಿಯಾ ಅವರು ತಮ್ಮ ಅಂತ್ಯ ಕಾಲದಲ್ಲಿ– ೧೯೬೭ರ ಚುನಾವಣೆಗಳ ಹೊತ್ತಿಗೆ– ಪ್ರತಿಪಾದಿಸಿ, ಅದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ಸನ್ನೂ ಕಂಡ 'ಕಾಂಗ್ರೆಸ್ಸೇತರವಾದ'ವು ನಾಲ್ಕು ದಶಕಗಳ ನಂತರ ಹೀಗೆ ತದ್ವಿರುದ್ಧ ದಿಕ್ಕಿನಲ್ಲಿ ಸಮಾಜವಾದಿಗಳ ಕಾಂಗ್ರೆಸ್ಸೀಕರಣದಲ್ಲಿ ಪರಿಸಮಾಪ್ತಿಯಾಗುತ್ತಿರುವುದು ವಿಪರ್ಯಾಸವೇ ಸರಿ!

ಸಮಾಜವಾದಿ ಚಳುವಳಿಯ ಲೋಹಿಯಾ ಧಾರೆ ರೂಢಿಸಿಕೊಂಡಿದ್ದ ಕಾಂಗ್ರೆಸ್ ವಿರೋಧಿ ಧೋರಣೆಯ ಹಿನ್ನೆಲೆಯಲ್ಲಿ ಇದು ವಿಪರ್ಯಾಸವಾಗಿ ಕಾಣುತ್ತಿದೆ, ನಿಜ. ಆದರೆ, ಸಮಾಜವಾದಿ ಚಳುವಳಿಯಲ್ಲಿ ಲೋಹಿಯಾ ಅವರ ಒಡನಾಡಿಯೂ, ಜೊತೆಗೆ ನೆಹರೂ ಅವರ ಸ್ನೇಹಿತರಾಗಿದ್ದ ಕಾರಣದಿಂದಾಗಿ 'ಸಮಸ್ಯೆ'ಯೂ ಆಗಿದ್ದ ಜಯಪ್ರಕಾಶ್ ನಾರಾಯಣರೇ ೧೯೭೭ರಲ್ಲಿ ಲೋಹಿಯಾ ಅವರ 'ಕಾಂಗ್ರೆಸ್ಸೇತರವಾದ'ವನ್ನು ತಮ್ಮ 'ಸಂಪೂರ್ಣ ಕ್ರಾಂತಿ' ಚಳುವಳಿಯ ಅವಸರದಲ್ಲಿ ಸಂಪೂರ್ಣವಾಗಿ ಇನ್ನೊಂದು ರೀತಿಯಲ್ಲಿ ಅನುಷ್ಠಾನಕ್ಕೆ

ತಂದ ನಂತರ, ರಾಷ್ಟ್ರೀಯ ರಾಜಕಾರಣ ಅನೇಕ ಹೊಸ ತಿರುವುಗಳನ್ನು ಪಡೆಯಿತು. ಇವುಗಳ ಹಿನ್ನೆಲೆಯಲ್ಲಿ ನೋಡಿದಾಗ ಸಮಾಜವಾದಿಗಳ ಈ ಕಾಂಗ್ರೆಸ್ಸೀಕರಣ ಸಹಜವೂ ಆಗಿ ಕಾಣಬಲ್ಲುದು! ಏಕೆಂದರೆ, ಸಮಾಜವಾದಿ ಚಳುವಳಿಯ ಉಳಿವಿಗೆ ಅನಿವಾರ್ಯ ರಾಜಕೀಯ ತಂತ್ರವೆಂಬಂತೆ ಲೋಹಿಯಾ ರೂಪಿಸಿದ್ದ ಈ 'ಕಾಂಗ್ರೆಸ್ಸೇತರವಾದ', ಹತ್ತು ವರ್ಷಗಳ ನಂತರ ಜೆ.ಪಿ.ಯವರ ಹೊಸ ರಾಜಕೀಯ ಪ್ರಯೋಗದಲ್ಲಿ ಸಮಾಜವಾದಿ ಪಕ್ಷವೇ ವಿಸರ್ಜನೆಯಾಗುವುದರೊಂದಿಗೆ ತನ್ನ ಸಾರ್ಥಕ್ಯವನ್ನು ಕಂಡಿತ್ತು! ಜೆ.ಪಿ.ಯವರೇನೋ ಸಮಾಜವಾದಿ ಪಕ್ಷವೂ ಸೇರಿದಂತೆ ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳನ್ನು ಒಗ್ಗೂಡಿಸಿ ರೂಪಿಸಿದ ಜನತಾ ಪಕ್ಷಕ್ಕೆ ಗಾಂಧಿ ಸಮಾಜವಾದದ ದೀಕ್ಷೆ ಕೊಟ್ಟು ಅದನ್ನು ಒಂದು ಸಮಾಜವಾದಿ ಕ್ರಾಂತಿಯ ರಾಜಕೀಯ ಸಾಧನವನ್ನಾಗಿ ಮಾಡುವ ಕನಸನ್ನು ಕಂಡಿದ್ದರು. ಆದರೆ, ತುರ್ತು ಪರಿಸ್ಥಿತಿ ಸೃಷ್ಟಿಸಿದ ರಾಜಕೀಯ ಒತ್ತಾಯಗಳ ತರಾತುರಿಯಲ್ಲಿ ಅವರ ಲೆಕ್ಕಾಚಾರವೆಲ್ಲ ತಲೆಕೆಳಗಾಗಿತ್ತು. ಅವರು ವಿಲೀನವೆಂದು ಭಾವಿಸಿದ್ದು, ಆಯಾ ಪಕ್ಷಗಳ ಪಾಲಿಗೆ ಸಮಯಸಾಧಕ ರಾಜಕೀಯ ತಂತ್ರವಾಗಿತ್ತೇ ಹೊರತು, ಮನಃಪೂರ್ವಕ ವಿಲೀನವೇನೂ ಆಗಿರಲಿಲ್ಲ. ಅದು ಅವರಿಗೆ ಗೊತ್ತಾಗುವ ಹೊತ್ತಿಗೆ ಅವರ ಮರಣವೂ ಸಮೀಪಿಸಿತ್ತು.

ಜನತಾ ಪಕ್ಷದಲ್ಲಿ ತನ್ನನ್ನು ವಿಲೀನಗೊಳಿಸಿಕೊಂಡಿದ್ದರೂ, ತನ್ನ ಆರ್.ಎಸ್.ಎಸ್. ಬೆನ್ನೆಲುಬನ್ನು ಉಳಿಸಿಕೊಂಡಿದ್ದ ಭಾರತೀಯ ಜನಸಂಘ (ಈಗಿನ ಭಾರತೀಯ ಜನತಾ ಪಕ್ಷದ ಹಿಂದಿನ ರೂಪ) ತನ್ನ ಈ ಸಂಘಟನಾತ್ಮಕ ದಕ್ಷತೆಯಿಂದಲೇ ಜನತಾ ಪಕ್ಷವನ್ನು ಒಳಗಿಂದೊಳಗೇ ನುಂಗಿಹಾಕುವ ಅಪಾಯವಿದೆ ಎಂದು ಸಮಾಜವಾದಿ ಚಿಂತಕ ಮಧು ಲಿಮಯೆ ಎಚ್ಚರಿಸಿದರು. ಇದರೊಂದಿಗೆ ಆರಂಭವಾದ ಜನತಾ ಪಕ್ಷದೊಳಗಿನ ತಳಮಳ, ಮೂರೇ ವರ್ಷಗಳಲ್ಲಿ ಅದನ್ನು ಛಿದ್ರಮಾಡಿತು. ಈ ಹಿನ್ನೆಲೆಯಲ್ಲಿ ಲಿಮಯೆ ಆಗ ತಾನೇ ಐತಿಹಾಸಿಕ ಸೋಲಿನಿಂದಾಗಿ ಆಘಾತಗೊಂಡಿದ್ದ ಕಾಂಗ್ರೆಸ್ಸನ್ನು ಪ್ರೋತ್ಸಾಹಿಸುವ ಅಗತ್ಯದ ಮಾತುಗಳನ್ನಾಡಿದರು. ಜನತಾ ಪಕ್ಷದ ಕ್ಷಿಪ್ರ ವಿಘಟನೆ ಜೆ.ಪಿ. ಚಳುವಳಿಯ ತಾತ್ವಿಕ ವೈಫಲ್ಯವನ್ನು ಸೂಚಿಸುತ್ತಿದ್ದು, ಇದರಿಂದಾಗಿ, ಆರ್.ಎಸ್.ಎಸ್. ನಿಯಂತ್ರಣದ ಭಾರತೀಯ ಜನಸಂಘ ಎಲ್ಲ ಪ್ರಜಾತಾಂತ್ರಿಕ ಹಾಗೂ ಸಮಾಜವಾದಿ ಶಕ್ತಿಗಳಿಗೆ ಕಂಟಕಪ್ರಾಯವಾಗಿ ಬೆಳೆಯಲಿದ್ದು; ಇದಕ್ಕೆ ಪ್ರತಿಯಾಗಿ ಸದ್ಯದ ಸಂದರ್ಭದಲ್ಲಿ ಕಾಂಗ್ರೆಸ್ಸನ್ನು ಉಳಿಸಿ ಬಲಪಡಿಸುವುದೊಂದೇ ದಾರಿ ಎಂದು ಅವರು ಪ್ರತಿಪಾದಿಸಿದರು. ಲೋಹಿಯಾ ಹತ್ತು ವರ್ಷಗಳ ಹಿಂದೆ ಪ್ರತಿಪಾದಿಸಿದ್ದ ವಾದಕ್ಕೆ ತದ್ವಿರುದ್ಧ ವಾದವೊಂದನ್ನು ಈಗ ಅವರ ಆಪ್ತ ಶಿಷ್ಯ ಪ್ರತಿಪಾದಿಸತೊಡಗಿದ್ದರು! ಇದು ಪಕ್ಷ ಕಳೆದುಕೊಂಡ ಸಮಾಜವಾದಿಯೊಬ್ಬನ ಆರ್ತ ಕೂಗಾಗಿದ್ದರೂ ಆಶ್ಚರ್ಯವಿಲ್ಲ. ಅದಕ್ಕಿಂತ ಹೆಚ್ಚಾಗಿ ಇದು, ತಾನು ಆವರೆಗೆ ಕಟುವಾಗಿ ವಿರೋಧಿಸುತ್ತಾ ಬಂದಿದ್ದ ಕಾಂಗ್ರೆಸ್ಸಿಗೆ ಪರ್ಯಾಯವಾದ ಜನತಾಂತ್ರಿಕ ಸಮಾಜವಾದಿ ರಾಜಕೀಯ ಶಕ್ತಿಯೊಂದನ್ನು ರೂಪಿಸಲಾಗದ ಸಮಾಜವಾದಿಯ ಅಸಹಾಯಕತೆಯ ಕೂಗೂ ಆಗಿತ್ತೆಂದೇ ನನ್ನ ಭಾವನೆ.

ಅಷ್ಟೇ ಅಲ್ಲ, ಲಿಮೆಯೆ ಅವರ ಈ ಕೂಗು, ಇದೆಲ್ಲ ಆದ ಇಷ್ಟು ವರ್ಷಗಳ ನಂತರ ನನಗೆ ಲೋಹಿಯಾರ 'ಕಾಂಗ್ರೆಸ್ಸೇತರವಾದ'ವೆಂಬ ಕೂಗಿನ ಪ್ರತಿಧ್ವನಿಯಂತೆಯೂ ಕೇಳಿಸುತ್ತಿದೆ... ಏಕೆಂದರೆ, ಇದೇ ಅಸಹಾಯಕತೆಯಲ್ಲೇ ಲೋಹಿಯಾ ಕೂಡ ಕಾಂಗ್ರೆಸ್ಸೇತರವಾದವನ್ನು ಮಂಡಿಸಿದ್ದು ಎಂಬುದನ್ನು ನಾವು ಗಮನಿಸಬೇಕು. ಹಾಗೆ ನೋಡಿದರೆ, ಈ ಸಂಘಟನಾತ್ಮಕ ಅಸಹಾಯಕತೆ ಸಮಾಜವಾದಿ ಚಳುವಳಿಯ ಆಳದಲ್ಲೇ ಅಂತರ್ಗತವಾಗಿತ್ತು. ಏಕೆಂದರೆ ಸಮಾಜವಾದಿ ಚಳುವಳಿ ಮೂಲತಃ ಒಂದು ಸ್ವತಂತ್ರ ರಾಜಕೀಯ ಚಳುವಳಿಯಾಗಿ ಆರಂಭವಾದುದಲ್ಲ. ಅದು ಕಾಂಗ್ರೆಸ್ಸಿನ ಕೊಡೆಯ ಕೆಳಗೆ ಒಂದು ಒಳ ಗುಂಪಾಗಿ, ನಂತರ ಒಂದು ಅದರ ಒಳ ಪಕ್ಷವಾಗಿ ತನ್ನ ಅಸ್ತಿತ್ವವನ್ನು ಕಂಡುಕೊಂಡದ್ದು. ತಮ್ಮ ಸೃಜನಶೀಲ ಚಿಂತನೆ ಹಾಗೂ ನಿರ್ಭಯ ಹೋರಾಟಗಳ ಕಾರಣದಿಂದಾಗಿ ಗಳಿಸಿದ ಗಾಂಧೀಜಿಯ ಸಹಾನುಭೂತಿ ಮತ್ತು ಪ್ರೀತಿ, ಸಮಾಜವಾದಿಗಳನ್ನು ಅಲ್ಲಿಯೇ ಉಳಿಸಿತಾದರೂ; ಅವರು ಕಾಂಗ್ರೆಸ್ಸಿನ ಎಲ್ಲ ರಾಜಕೀಯ ಕ್ರಮಗಳನ್ನೂ ವಿಮರ್ಶಿಸುತ್ತಾ, ಟೀಕಿಸುತ್ತಾ, ವಿರೋಧಿಸುತ್ತಾ ಪಕ್ಷದ ಹಿರಿಯ ಹಾಗೂ ಗಣ್ಯ ನಾಯಕರಿಗೆ ಕಿರಿಕಿರಿಯನ್ನುಂಟು ಮಾಡುತ್ತಾ ಬಂದ ಕಾರಣದಿಂದಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಘೋಷಣೆಗಿಂತ ಸ್ವಲ್ಪ ಮುನ್ನ ಪಕ್ಷದಿಂದ ಹೊರ ಹೋಗಬೇಕಾದ ಅನಿವಾರ್ಯತೆ ಉಂಟಾಯಿತು. ಆ ವೇಳೆಗಾಗಲೇ ಅನೇಕ ತಾತ್ವಿಕ ಹಾಗೂ ವೈಯುಕ್ತಿಕ ಕಾರಣಗಳಿಂದಾಗಿ ನೆಹರೂ ವಿರೋಧಿಯಾಗಿದ್ದ ಲೋಹಿಯಾರಂತವರು, ಒಳಗಿದ್ದುಕೊಂಡೇ ಗಾಂಧೀಜಿಯ ಬೆಂಬಲದಿಂದ ಕಾಂಗ್ರೆಸ್ಸನ್ನು ನೆಹರೂ ಅವರ ಎಡಬಿಡಂಗಿ ರಾಜಕೀಯ ಹಿಡಿತದಿಂದ ಬಿಡುಗಡೆಗೊಳಿಸಿ ನಿಜವಾದ ಸಮಾಜವಾದಿ ಪಕ್ಷವನ್ನಾಗಿ ಮಾಡಬೇಕೆಂಬ ಆಸೆಯುಳ್ಳವರಾಗಿದ್ದರು. ಆದರೆ, ಅದು ಪಟೇಲ್– ನೆಹರೂರ ಜೋಡಿಯ ತಂತ್ರದಿಂದಾಗಿ ಸಾಧ್ಯವಾಗದೆ ಅವರೆಲ್ಲ ಹೊರ ಬರಬೇಕಾಯಿತು.

ಈ ಸಿಟ್ಟು ಮತ್ತು ನೋವೇ ಲೋಹಿಯಾರ ರಾಜಕೀಯ ಜೀವನದುದ್ದಕ್ಕೂ ಬಾಧಿಸಿತು. ಇದು, ಅವರ ಪ್ರಖರ ಸಮಾಜವಾದಿ ಚಿಂತನೆಯ ಜೊತೆ ಜೊತೆಗೇ ವ್ಯಕ್ತವಾಗುತ್ತಾ; ಆದರೆ, ಅದರ ಶುಚಿ– ರುಚಿಗಳನ್ನೇ ಕೆಡಿಸುತ್ತಾ ಮತ್ತು ಆ ಮೂಲಕ ಜನಸಾಮಾನ್ಯರ ವಿಶ್ವಾಸಾರ್ಹತೆಗೆ ಎರವಾಗುತ್ತಾ ಬಂದ ಕಟುವಾದ– ಒಮ್ಮೊಮ್ಮೆ ಒರಟೊರಟೂ ಆದ– ನೆಹರೂ ವಿರೋಧಿ ಧೋರಣೆಯ ಪ್ರತಿ ವಿವರದಲ್ಲೂ ಕಂಡುಬರುತ್ತದೆ. ಹೀಗಾಗಿ ಲೋಹಿಯಾರ ಕಾಂಗ್ರೆಸ್ ದ್ವೇಷ, ಅವರ ಕಾಂಗ್ರೆಸ್ ಪ್ರೇಮದ ಇನ್ನೊಂದು– ಸುಪ್ತ– ಮುಖವಾಗಿಯೇ ನನಗೆ ಕಾಣುತ್ತದೆ. ಅವರು ಕಾಂಗ್ರೆಸ್ ಬಿಡುವಾಗ, 'ಇದು ನಾವೂ ಕೈಹಾಕಿ ಕಟ್ಟಿದ ಮನೆ. ಇದರಲ್ಲಿ ನಮ್ಮ ಪಾಲೂ ಇದೆ. ಆದರೆ ನಾವಿಂದು ಒಂದು ಅನಿವಾರ್ಯ ರಾಜಕೀಯ ಸನ್ನಿವೇಶದಲ್ಲಿ ನಮ್ಮ ಪಾಲನ್ನು ಬಿಟ್ಟುಕೊಟ್ಟು ಹೋಗುತ್ತಿದ್ದೇವೆ' ಎಂದು ವಿಷಾದದಿಂದ ವಿದಾಯ ಹೇಳಿದ್ದರು.

ತಮ್ಮ ಮೂಲ ಮನೆಯಲ್ಲಿ ಜಗಳಾಡಿಕೊಂಡು ಬಂದ ಅತಿಯಾದ ಆತ್ಮವಿಶ್ವಾಸದ ಈ ಮಕ್ಕಳು ನಂತರವೂ ತಮ್ಮ ಜಗಳಗಳನ್ನು ನಿಲ್ಲಿಸದೇ ಹೋದ ಕಾರಣದಿಂದಾಗಿ, ತಮ್ಮದೇ ಆದ ಮನೆಯೊಂದನ್ನು ಸರಿಯಾಗಿ ಕಟ್ಟಿಕೊಳ್ಳಲಾಗದೇ ಹೋದವು ಎಂಬುದು ಇತಿಹಾಸದ ವಾಸ್ತವದ ಸಂಗತಿ. ಈ ವೈಫಲ್ಯದ ಹಿನ್ನೆಲೆಯಲ್ಲಿ, ಮೂಲ ಮನೆ ಕಳೆದುಕೊಂಡ ವಿಷಾದವು ಸಿಟ್ಟಿನ ರೂಪ ತಾಳಿ ಲೋಹಿಯಾರನ್ನು 'ಕಾಂಗ್ರೆಸ್ಸೇತರವಾದ' ಎಂಬ ರಾಜಕೀಯ ಶಾಪದ ಕಲ್ಪನೆಗೆ ಪ್ರೇರೇಪಿಸಿದ್ದರೆ; ಹೆಸರಿಗಾಗಿಯಾದರೂ ಇದ್ದ ತಮ್ಮ ಹೊಸ ಮನೆಯನ್ನೂ ಕಳೆದುಕೊಂಡ ನೋವು, ಮಧು ಲಿಮೆಯೆ ಅವರನ್ನು ಮತ್ತೆ ತಮ್ಮ ಹಿರಿಯರ ಮೂಲ ಮನೆ ಎನಿಸಿದ ಕಾಂಗ್ರೆಸ್‌ನತ್ತ ನೋಡುವಂತೆ ಮಾಡಿತೇನೋ! ಹಾಗೇ ಅದರ ಪುನರುದ್ಧಾರದ ಅಗತ್ಯ ಮತ್ತು ಕಾರ್ಯಕ್ರಮಕ್ಕೆ ಪ್ರೇರೇಪಿಸಿತೇನೋ... ಈ ಹಿನ್ನೆಲೆಯಲ್ಲಿ, ಸಮಾಜವಾದಿಗಳ ಕಾಂಗ್ರೆಸ್ಸೀಕರಣವನ್ನು, ಸಮಾಜವಾದಿ ಚಳುವಳಿ ಒಂದು ಸುತ್ತು ಪೂರ್ಣಗೊಳಿಸಿದ್ದರ ಸೂಚನೆಯನ್ನಾಗಿಯೂ ನೋಡಬಹುದಾಗಿದೆ. ಆದರೆ ಈ ಒಂದು ಸುತ್ತನ್ನು ಪೂರ್ಣಗೊಳಿಸುವಲ್ಲಿ ಅವರು ಸಮಾಜವಾದದ ವಿಶ್ವಾಸಾರ್ಹತೆಗೆ ಮಾಡಿರುವ ಆಘಾತವೇನೂ ಕ್ಷಮಾರ್ಹವಾಗುವುದಿಲ್ಲ ಎಂಬುದೂ ನಿಜ.

ಅದೇನೇ ಇರಲಿ, ಇದೆಲ್ಲವೂ– ಸಮಾಜವಾದಿಗಳ ಈ ಕಾಂಗ್ರೆಸ್ಸೀಕರಣ– ಸಮಾಜವಾದಿ ಚಳುವಳಿಯ ಅಂತ್ಯವನ್ನು ಸೂಚಿಸುತ್ತಿದೆಯೆ? ಚಳುವಳಿಯ ಅಂತ್ಯವಲ್ಲದಿದ್ದರೂ, ಕಾಂಗ್ರೆಸ್ ಮುಖಾಮುಖಿಯಲ್ಲಿ ಮೂಡಿದ ಅದರ ಸಾಂಸ್ಥಿಕ ಹಾಗೂ ತಾತ್ವಿಕ ಗೊಂದಲ– ವಿರೋಧಾಭಾಸಗಳ ಘಟ್ಟದ ಅಂತ್ಯವಂತೂ ಹೌದು. ಇದು ತನ್ನ ಮುಂದಿನ ಆರೋಗ್ಯಕರ ಬೆಳವಣಿಗೆಯ ರೂಪದಲ್ಲಿ, ಕಾಂಗ್ರೆಸ್ಸನ್ನೇ ಒಂದು ಮುಖ್ಯ ವಾಹಿನಿಯ ಸಮಾಜವಾದಿ ರಾಜಕೀಯದ ದೀವಟಿಗೆಯನ್ನಾಗಿ ಮಾಡುವ ಹೊಸ ಘಟ್ಟದ ಆರಂಭವಾಗಿಯೂ ಕಾಣಿಸಿಕೊಳ್ಳಬಹುದಾಗಿದೆ. ಹಾಗೆ ನೋಡಿದರೆ, ಈ ಸಾಧ್ಯತೆಯೇ ಇಂದಿನ ರಾಜಕಾರಣದ ಭರವಸೆಯ ಬೆಳಕೂ ಆಗಿದೆ. ಈ ಮಾತು, ಸಮಾಜವಾದವೆಂದರೆ ಒಂದು ಸ್ಥಿರವಾದ ವಿಚಾರ (fixed idea) ಎಂದುಕೊಂಡಿರುವವರಿಗೆ ತಮಾಷೆಯಾಗಿಯೂ ಕಾಣಬಹುದು. ಇಂತಹ ಜಡವಾದಿಗಳೇ ಸಮಾಜವಾದ ವಿಫಲವಾಗಿದೆ ಎಂದು ಹೇಳಿಕೊಂಡು ತಿರುಗುತ್ತಿರುವವರು ಕೂಡಾ. ಆದರೆ, ಸಮಾಜವಾದಿ ಚಳುವಳಿ ಕಳೆದ ಐವತ್ತು ವರ್ಷಗಳಲ್ಲಿ ತನ್ನ ವಿವಿಧ ರೂಪಗಳಲ್ಲಿ ಹಾಗೂ ತನ್ನ ಅನೇಕ ಏಳು ಬೀಳುಗಳ ನಡುವೆಯೂ, ಈ ದೇಶದಲ್ಲಿ ಉಂಟು ಮಾಡಿದ ರಾಜಕೀಯ ವಾತಾವರಣದಿಂದಾಗಿ ವಂಚಿತ ಸಮುದಾಯಗಳ ಕನಿಷ್ಠ ಎರಡು ತಲೆಮಾರುಗಳು ಹಲವು ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳ ಲಾಭ ಪಡೆದು ರಾಷ್ಟ್ರದ ಹೆಚ್ಚಿದ ಸಾಮಾಜಿಕ ಘನತೆಗೆ ಕಾರಣವಾಗಿದೆ ಹಾಗೂ ಒಂದು ಮಟ್ಟದ ಕ್ರಾಂತಿಕಾರಿ ಸಾಮಾಜಿಕ ಹಾಗೂ ರಾಜಕೀಯ ಪುನಾರಚನೆಗೆ ಪ್ರೇರಣೆ ಒದಗಿಸಿದೆ ಎಂಬ ವಾಸ್ತವವನ್ನು ನಾವು ಮರೆಯಬಾರದು.

ಹೀಗೆ ಲಾಭ ಪಡೆದ ತಲೆಮಾರುಗಳ ಕುಟುಂಬಗಳು ಆ ಲಾಭದ ಸಂಭ್ರಮದಲ್ಲಿ ಮೈಮರೆತು, ಈ ಸಂಸ್ಕೃತಿಯ ವಾರಸುದಾರಿಕೆಯನ್ನು ಸರಿಯಾಗಿ ನಿರ್ವಹಿಸದೇ ಹೋದದ್ದೇ ಸಮಾಜವಾದದ ವಿರೋಧಿಗಳಿಗೆ ಒಂದು ವರವಾಗಿ ಪರಿಣಮಿಸಿತು. ಇದೇ ಸಮಾಜವಾದಿ ಚಳುವಳಿ ಇಂದು ಎದುರಿಸುತ್ತಿರುವ ನೈತಿಕ ಬಿಕ್ಕಟ್ಟಿಗೆ ಕಾರಣವಾಯಿತು ಎಂದು ನಾನು ಭಾವಿಸಿದ್ದೇನೆ. ಅಂದರೆ ಸಮಾಜವಾದ ತನ್ನದೇ ಆದ ಒಂದು ಸುಸ್ಥಿರವಾದ ಶೀಲ ಹಾಗೂ ದೀರ್ಘಕಾಲಿಕವಾದ ಒಂದು ದರ್ಶನವನ್ನು ಸಾಮಾನ್ಯ ಜನತೆಯ ನಡುವೆ ಕಟ್ಟಿಕೊಡುವಲ್ಲಿ ವಿಫಲವಾಗಿತ್ತು. ಈ ವೈಫಲ್ಯವನ್ನು ಮೀರಿ ನಿಲ್ಲಲು ಈಗಲೂ ಅದಕ್ಕೆ ಸಾಧ್ಯವಾಗುವುದಾದರೆ, ಸಮಾಜವಾದಿ ಚಳುವಳಿ ಹೊಸ ರೂಪ ಪಡೆದು ಮತ್ತೆ ಚಿಗುರುವುದರಲ್ಲಿ ಸಂದೇಹವಿಲ್ಲ. ಏಕೆಂದರೆ, ಅದು ಸಮಾನತೆಯ ಕಡೆಗಿನ ಮನುಷ್ಯನ ಸಹಜ ಮತ್ತು ಅದಮ್ಯ ತುಡಿತದ ಪ್ರತೀಕವಾಗಿದ್ದು, ಸಮಾಜವಾದ ಪ್ರತಿಪಾದಿಸುವ ಸಮಾನ ಅವಕಾಶ ಹಾಗೂ ಸಮಾನ ಉತ್ಪಾದನಾ ಸಂಸ್ಕೃತಿಯ ಮೂಲಕ ಗರಿಷ್ಠ ಸಾಧ್ಯ ಸಮಾನತೆಯನ್ನು ಸಾಧಿಸುವವರೆಗೆ, ಅದು ಅಂತ್ಯ ಕಾಣಲು ಸಾಧ್ಯವಿಲ್ಲ... ಹಾಗಾಗಿಯೇ ಸಮಾಜವಾದದ ಅಂತ್ಯ ಹಾಡಲು ಹೊರಟ ಜಾಗತೀಕರಣದ ವಿರುದ್ಧ ನಮ್ಮ ದೇಶವೂ ಸೇರಿದಂತೆ ಜಗತ್ತಿನಾದ್ಯಂತ ಜನ ತಮ್ಮ ನೀರು, ನೆಲ, ಗಾಳಿಗಳನ್ನು ರಕ್ಷಿಸಿಕೊಳ್ಳುವ ಹೋರಾಟದ ರೂಪಗಳಲ್ಲಿ ಕ್ರಮೇಣ ಬಂಡಾಯವೇಳತೊಡಗಿದ್ದಾರೆ. ಇದು ಸಮಾಜವಾದಿ ಆದರ್ಶಗಳನ್ನು ಹಾಳು ಮಾಡುತ್ತಿರುವ ರಾಜಕೀಯ ಶಕ್ತಿಗಳ ವಿರುದ್ಧ ನಡೆದಿರುವ ಹೋರಾಟವೇ ಆಗಿದೆ.

ಇದರಿಂದಾಗಿ ಹಲವು ದೇಶಗಳಲ್ಲಿ ಒಂದೊಂದಾಗಿ ಮತ್ತೆ ಸಮಾಜವಾದಿ ಸರ್ಕಾರಗಳು ಸ್ಥಾಪಿತವಾಗತೊಡಗಿವೆ. ಇತ್ತೀಚೆಗೆ ತಾನೇ, ಸ್ಪೇನ್‌ನಲ್ಲಿ ಸಮಾಜವಾದಿಗಳು ಮತ್ತೆ ಅಧಿಕಾರ ಹಿಡಿದಿದ್ದಾರೆ. ನಮ್ಮ ದೇಶದಲ್ಲಿ ಜಾಗತೀಕರಣವನ್ನು ಪ್ರೋತ್ಸಾಹಿಸಿದ ಕಾಂಗ್ರೆಸ್ಸೇ ಈಗ ಅದರ ಆರ್ಥಿಕ ಹಾಗೂ ರಾಜಕೀಯ ಅನಾಹುತಗಳಿಂದ ಗಾಬರಿಗೊಂಡಂತೆ, ತನ್ನ ಆರ್ಥಿಕ ಉದಾರೀಕರಣ ನೀತಿಯ ವಿಷಯದಲ್ಲಿ ಸಂಯಮ ತೋರುತ್ತಾ, 'ಆವೃತ' ಬೆಳವಣಿಗೆಯ ಮಾತನಾಡತೊಡಗಿದೆ.! ಇಂತಹ ನಿರ್ಣಾಯಕ ನೀತಿ ಸ್ಥಿತ್ಯಂತರದ ಸಂದರ್ಭದಲ್ಲಿ, ಕಾಂಗ್ರೆಸ್ ಒಳ ಹೊಕ್ಕಿರುವ ಸಮಾಜವಾದಿಗಳು, ಅವರಲ್ಲಿ ಇನ್ನೂ ತಮ್ಮ ಸಮಾಜವಾದಿತ್ವದ ಬಗ್ಗೆ ಕಿಂಚಿತ್ತಾದರೂ ಹೆಮ್ಮೆ ಉಳಿದಿದ್ದಲ್ಲಿ, ಇಂದಿನ ಸಂದರ್ಭಕ್ಕೆ ತಕ್ಕ ಸಮಾಜವಾದಿ ನೀತಿಗಳನ್ನು ಕಾಂಗ್ರೆಸ್ ಅಳವಡಿಸಿಕೊಳ್ಳುವಂತಹ ತೀವ್ರತರ ರಾಜಕಾರಣ ಮಾಡಬೇಕಾಗಿದೆ. ಇಂತಹ ಕೆಲಸವನ್ನೇ ಆಗ ಲೋಹಿಯಾ ಕಾಂಗ್ರೆಸ್ಸಿನಲ್ಲೇ ಉಳಿದು ಮಾಡಬೇಕೆಂದು ಬಯಸಿದ್ದು. ಅದನ್ನು ಅವರ ಶಿಷ್ಯರೆನಿಸಿಕೊಂಡವರು ಈಗಲಾದರೂ ಮಾಡಲು ಪ್ರಯತ್ನಿಸುವುದಾದರೆ, ಅದು ಅವರೆಲ್ಲರ ಈವರೆಗಿನ ರಾಜಕೀಯ ಅಡ್ಡದಾರಿಗಳನ್ನೂ ಕ್ಷಮಾರ್ಹಗೊಳಿಸಿ, ಲೋಹಿಯಾ ಅವರಿಗೆ ಈಗ ಅವರ ೯೮ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ (ಮಾರ್ಚ್, ೨೩) ಸಲ್ಲಿಸಬಹುದಾದ ಅತ್ಯಮೂಲ್ಯ ಶ್ರದ್ಧಾಂಜಲಿಯೂ ಆಗಬಲ್ಲುದು.

ಮಾರ್ಚ್ ೨೮, ೨೦೦೮

ಮೈ ಮರೆತಂತಿರುವ ನಮ್ಮ ಸೆಕ್ಯುಲರ್ ರಾಜಕಾರಣ...

ಕಳೆದ ವಾರ ಕರ್ನಾಟಕ ಸಮಾಜವಾದಿ ಅಧ್ಯಯನ ವೇದಿಕೆ ಹಾಸನದಲ್ಲಿ ಎರಡು ದಿನಗಳ 'ಸಂಸ್ಕೃತಿ ಶಿಬಿರ'ವೊಂದನ್ನು ಆಯೋಜಿಸಿತ್ತು. ಹೋದ ಡಿಸೆಂಬರ್‌ನಲ್ಲಿ ಕುಪ್ಪಳಿಯಲ್ಲಿ ನಡೆದ ಸಮಾಜವಾದಿ ಅಧ್ಯಯನ ಶಿಬಿರಕ್ಕೆ ಶಿಬಿರಾರ್ಥಿಯಾಗಿ ಬಂದಿದ್ದ ಬಿ. ಶಿವಕುಮಾರ್ ಆ ಶಿಬಿರದಿಂದ ಸ್ಫೂರ್ತಿಗೊಂಡು, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಾವು ನಡೆಸುವ 'ವಿವೇಕ ಬ್ಯೂರೋ' ಎಂಬ ಪಾಠದ ಮನೆಯ ತಮ್ಮ ವಿದ್ಯಾರ್ಥಿಗಳಿಗಾಗಿ ಈ ಶಿಬಿರವನ್ನು ಪ್ರಾಯೋಜಿಸಿದ್ದರು. ಶಿಬಿರವನ್ನು ಕಿ.ರಂ. ನಾಗರಾಜ ಅವರು ಉದ್ಘಾಟಿಸಿದರೆ, ಕೆ.ವಿ. ನಾರಾಯಣ ಅವರದು ಸಮಾರೋಪ. ಎರಡು ದಿನಗಳ ಒಟ್ಟು ಎಂಟು ಗೋಷ್ಠಿಗಳಲ್ಲಿ ವಿವಿಧ ಕ್ಷೇತ್ರಗಳ ಪರಿಣತರು ಧರ್ಮ, ಇತಿಹಾಸ, ಸಾಹಿತ್ಯ, ಸಮೂಹ ಮಾಧ್ಯಮಗಳು, ವಿಜ್ಞಾನ, ಜಾಗತೀಕರಣ ಇತ್ಯಾದಿ ವಿಷಯಗಳ ಬಗ್ಗೆ ಮಾತನಾಡಿ ಚರ್ಚೆಗಳನ್ನು ನಡೆಸಿಕೊಟ್ಟರು. ಬಿ. ಶಿವಕುಮಾರರ ಒತ್ತಾಯಕ್ಕೆ ಮಣಿದೆಂಬಂತೆ ಶುಲ್ಕ ನೀಡಿ ಶಿಬಿರಕ್ಕೆ ಬಂದಿದ್ದ ಸುಮಾರು ನಲವತ್ತು ಜನ ಶಿಬಿರಾರ್ಥಿಗಳು, ಶಿಬಿರದ ಕೊನೆಯ ಹೊತ್ತಿಗೆ ತಂತಮ್ಮ ಪಠ್ಯಗಳ ಹೊರತಾಗಿಯೂ ಕಲಿಯಬೇಕಾದ ಎಷ್ಟೊಂದು ವಿಷಯಗಳಿವೆ, ಪ್ರತಿಯೊಂದು ವಿಷಯಕ್ಕೂ ಎಷ್ಟೊಂದು ಮಗ್ಗುಲುಗಳಿವೆ ಎಂದು ಆಶ್ಚರ್ಯಪಡುತ್ತಾ, ಮುಗ್ಧ ಪ್ರಶ್ನೆಗಳನ್ನು ಕೇಳುತ್ತಾ ಕುತೂಹಲ, ಶ್ರದ್ಧೆ, ಆಸಕ್ತಿಗಳಿಂದ ಚರ್ಚೆಯಲ್ಲಿ ಪಾಲ್ಗೊಂಡರು.

ಈ ಶಿಬಿರದಿಂದ ಬಿ. ಶಿವಕುಮಾರರ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಎಷ್ಟು ಪ್ರಯೋಜನವಾಯಿತೋ ತಿಳಿಯದು. ಆದರೆ, ಶಿಬಿರದ ನಿರ್ದೇಶಕನಾಗಿದ್ದ ನನಗೆ ಮತ್ತು ಇತರೆ ಸಂಪನ್ಮೂಲ ವ್ಯಕ್ತಿಗಳಿಗೆ ಈ ಶಿಬಿರ, ನಮ್ಮ ಯುವಜನರ ಮನೋಲೋಕದ ಬಗ್ಗೆ ಹೊಸ ತಿಳುವಳಿಕೆ ನೀಡುವ, ಆ ಮೂಲಕ ಹೊಸ ಜವಾಬ್ದಾರಿಯೊಂದನ್ನು ಅರಿವು

ಮಾಡಿಕೊಡುವ ಕೆಲಸದಲ್ಲಂತೂ ಯಶಸ್ವಿಯಾಯಿತು. ನಮ್ಮ ಯುವಜನರ ತಲೆಗಳಲ್ಲಿ ನಮ್ಮ ಧರ್ಮ, ಇತಿಹಾಸ ಮತ್ತು ವರ್ತಮಾನಗಳ ಬಗ್ಗೆ ಎಂತೆಂತಹ ವಿಷ ಬೀಜಗಳನ್ನು ಬಿತ್ತಲಾಗಿದೆ ಎಂಬ ಅರಿವುಂಟಾಗಿ ನಾವು ಕೆಲವರು ತತ್ತರಿಸಿದೆವು. ಶಿಬಿರದ ಉದ್ಘಾಟನೆಯ ನಂತರದಲ್ಲೇ ಆರಂಭವಾದ ಧರ್ಮ ಕುರಿತ ಗೋಷ್ಠಿಗೆ ಪ್ರಾಸ್ತಾವಿಕವಾಗಿ, ಇತ್ತೀಚೆಗೆ ದೆಹಲಿ ವಿಶ್ವವಿದ್ಯಾಲಯದಲ್ಲಿ ರಾಮಾಯಣದ ಬಹುಮುಖತೆ ಕುರಿತ ಪಠ್ಯವನ್ನು ಕೆಲವರು ಇತಿಹಾಸ ಪ್ರಾಧ್ಯಾಪಕರ ಮೇಲೆ ಹಲ್ಲೆ ಮಾಡುವ ಮೂಲಕ ವಿರೋಧಿಸಿದ್ದರ ಬಗ್ಗೆ ನಾನು ಮಾತನಾಡುತ್ತಿದ್ದಂತೆಯೇ, ಪ್ರಶ್ನೆಗಳಿಗೆ ವೇದಿಕೆ ಸಿದ್ಧವಾಯಿತು! ಲಕ್ಷೀಶ ತೋಳ್ಪಾಡಿಯವರ ಮುಖ್ಯ ಭಾಷಣ ಕೇಳಿದ ನಂತರ ಪ್ರಶ್ನೆಗಳನ್ನು ಕೇಳಬಹುದು ಎಂದು ಅವರನ್ನು ಸುಮ್ಮನಿರಿಸಲಾಯಿತಾದರೂ, ಭಾಷಣ ಮುಗಿದ ತಕ್ಷಣವೇ ಮೊದಲ ಪ್ರಶ್ನೆ ಬಾಣದಂತೆ ಬಂತು: 'ಬಹುಜನರ ಭಾವನೆಗಳನ್ನು ನೋಯಿಸುವಂತಹ ಪಠ್ಯಗಳನ್ನು ಇಟ್ಟವರನ್ನೇಕೆ ಹೊಡೆಯಬಾರದು?'

ಆತ ತೋಳ್ಪಾಡಿಯವರ ಭಾಷಣವನ್ನು ಕೇಳಿದ್ದರೆ, ಇಂತಹ ಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ. ಆದರೆ ಆತ ಕೇಳಲು ಬಂದಂತಿರಲಿಲ್ಲ, ತಾನು ಈಗಾಗಲೇ ತಲೆಯಲ್ಲಿ ತುಂಬಿಕೊಂಡಿರುವುದನ್ನು ಹೇಳಲು ಮಾತ್ರ ಬಂದಂತಿತ್ತು. ವೇದೋಪನಿಷತ್ತುಗಳ ಜೊತೆಗೆ ಆಧುನಿಕ ಸಾಹಿತ್ಯ- ವಿಚಾರಗಳನ್ನೂ ಕರತಲಾಮಲಕ ಮಾಡಿಕೊಂಡಿರುವ ಲಕ್ಷೀಶರು ಧರ್ಮ ಎಂದರೆ, ಮನುಷ್ಯನಿಗೆ ತನಗೆ ಗೊತ್ತು ಎಂಬುದು ಗೊತ್ತಾಗುವ ಮುನ್ನ ಇದ್ದ ಸ್ಥಿತಿಯ ಅರಿವು; ಅದೊಂದು ಪದ್ಧತಿ- ಸವೆದ ಹಾದಿ- ಅಲ್ಲ; ನಿರಂತರ ಹುಡುಕಾಟ ಎಂದು, ಒಂದೂವರೆ ತಾಸು ಹಲವು ನೆಲೆಗಳಲ್ಲಿ ಅದನ್ನು ಅತ್ಯದ್ಭುತವಾಗಿ ವಿವರಿಸಿದರು. ಆದರೆ ಅದನ್ನು ಕೇಳುವ ವ್ಯವಧಾನವಾಗಲಿ, ಸಂಯಮವನ್ನಾಗಲಿ, ಕುತೂಹಲವಾಗಲಿ, ಶ್ರದ್ಧೆಯಾಗಲೀ ತೋರದ ಈತ 'ಉದ್ವಿಗ್ನತೆಯ ರಾಜಕಾರಣ ಇಲ್ಲಿ ಬೇಡ' ಎಂಬ ನನ್ನ ಮನವಿಗೆ ಪ್ರತಿಕ್ರಿಯಿಸಿದ್ದು ಹೀಗೆ: 'ನಮ್ಮದು ಉದ್ವಿಗ್ನತೆಯ ರಾಜಕಾರಣವಾದರೆ, ನಿಮ್ಮದು ವೈಚಾರಿಕ ರಾಜಕಾರಣವಷ್ಟೆ'! ರಾಜಕಾರಣ ಮಾಡಬೇಕಾದದ್ದೇ ವೈಚಾರಿಕ ನೆಲೆಯಲ್ಲಿ- ಚರ್ಚೆಯ ಮೂಲಕ- ಅಲ್ಲವೇ ಎಂಬ ನಮ್ಮ ಮಾತಿನಿಂದ ಸ್ವಲ್ಪ ಅವಾಕ್ಕಾದ ಈತ, ತನ್ನ ಬೆಂಬಲಕ್ಕೆ ಪಕ್ಕದಲ್ಲಿದ್ದ ತನ್ನ ಗೆಳೆಯನನ್ನು ಪ್ರಚೋದಿಸಿದ್ದು ಈ ಪ್ರಶ್ನೆಯ ಮೂಲಕ: 'ಹಿಂದೂ ಧರ್ಮ ರಕ್ಷಣೆಗಾಗಿ ಹಿಂಸೆಗೆ ಇಳಿದರೆ ತಪ್ಪೇನು?' ಈತನೊಬ್ಬ ಕಾಲೇಜು ಅಧ್ಯಾಪಕ ಎಂದು ಕೇಳಿ ನನ್ನೆದೆ ಝಲ್ಲೆಂದಿತು...

ಅದೇನೇ ಇರಲಿ, ತಮ್ಮ ಉದ್ಘಾಟನಾ ಭಾಷಣದಲ್ಲಿ, ಸಂಸ್ಕೃತಿ ಎಂದರೆ ಸ್ಥಗಿತಗೊಂಡಿದ್ದನ್ನು ಚಲನಶೀಲಗೊಳಿಸುವ ಕ್ರಿಯಾಶಕ್ತಿ ಎಂದೂ ವ್ಯಾಖ್ಯಾನಿಸಿದ್ದ ಕಿ.ರಂ., ಈ ಹೊತ್ತಿಗೆ ಇವರ ಹಿನ್ನೆಲೆಯನ್ನು ಗುರುತಿಸಿದವರಂತೆ; ಬಹುಸಂಖ್ಯಾತರು ಎಂದರೆ ಯಾರು, ಹಲವು ರಾಮಾಯಣಗಳನ್ನು ಸೃಷ್ಟಿಸಿದವರು ಯಾರು, ಈ ಹಲವು ರಾಮಾಯಣಗಳು ಹೇಳುವ ಸತ್ಯ ಯಾರನ್ನು ಯಾಕೆ ನೋಯಿಸುತ್ತದೆ ಎಂಬ ಪ್ರಶ್ನೆಗಳನ್ನೆತ್ತಿಕೊಂಡು, ಹಿಂಸೆ

ಹೇಗೆ ವಿವೇಚನೆ ಕಳೆದುಕೊಂಡವರ ಅಸ್ತ್ರ ಎಂಬುದನ್ನು ಸಾವಧಾನವಾಗಿ ವಿವರಿಸಲು ಯತ್ನಿಸಿದರು. ಕಲಿಯಲೆಂದೇ ಮುಕ್ತ ಮನಸ್ಸಿಟ್ಟು ಬಂದಿದ್ದ ಇತರ ಶಿಬಿರಾರ್ಥಿಗಳು ಕಿ.ರಂ.ರ ಮಾತುಗಳನ್ನು ಶಾಂತರಾಗಿ ಕೇಳಿದರಾದರೂ, ಮನಸ್ಸನ್ನು ಪೂರ್ತಿ ಮುಚ್ಚಿಕೊಂಡು ಬಂದಿದ್ದ ಆ ಇಬ್ಬರು ಮುವ್ವರು 'ಹಿಂದೂ ಧರ್ಮ ಮುಸ್ಲಿಮರ ದಾಳಿಗೆ ಸಿಕ್ಕಿ ತತ್ತರಿಸುತ್ತಿರುವ ಇಂದಿನ ಸಂದರ್ಭದಲ್ಲಿ ಈ ಚರ್ಚೆಯೆಲ್ಲ ಅನಗತ್ಯ' ಎಂಬ ಧಾಟಿಯಲ್ಲಿ ಮಾತನಾಡತೊಡಗಿದಾಗ, ಸ್ವತಃ 'ಹಿಂದೂವಾದಿ'ಗಳೊಂದಿಗೆ ಸಾಂಸ್ಕೃತಿಕವಾಗಿಯಾದರೂ ಗುರುತಿಸಲ್ಪಟ್ಟಿರುವ ಲಕ್ಷ್ಮೀಶರು ತಳಮಳಿಸಿ ಹೇಳಿದ್ದು: 'ದಯವಿಟ್ಟು ಹಿಂದೂ ಧರ್ಮವನ್ನು ಇಸ್ಲಾಮೀಕರಿಸಿ ಹಾಳು ಮಾಡಬೇಡಿ!' ಅಂದರೆ, ಧರ್ಮ ಬೆಳೆಯುವುದು ಮತ್ತು ಆ ಮೂಲಕ ಉಳಿಯುವುದು ತನ್ನನ್ನು ಸದಾ ವಿಮರ್ಶೆಗೆ ತೆರೆದುಕೊಂಡಿರುವ ಮೂಲಕ; ಸತ್ಯದ ಬಹುಮುಖತೆಯನ್ನು ಸಹಾನುಭೂತಿಯೊಡನೆ ಅರಿಯುವ ಮೂಲಕ. ಇದನ್ನು ಲಕ್ಷ್ಮೀಶರು ಪಕ್ರು ಎಂಬ ನಾಗರೀಕ ಲೋಕಕ್ಕೇ ತೆರೆದುಕೊಳ್ಳದ ಅನಕ್ಷರಸ್ಥ ತುಳುವನೊಬ್ಬ ತನ್ನದೇ ರಾಮಾಯಣವನ್ನು ಹೇಳಿದ್ದನ್ನೂ, ಅದು 'ಪಕ್ರು ರಾಮಾಯಣ'ವೆಂದೇ ದಾಖಲಾಗಿರುವುದನ್ನೂ ವಿವರಿಸಿ ಹೇಳುತ್ತಾ; ಆ ಪಕ್ರುವನ್ನೂ ಒಬ್ಬ ಗೌರವಾನ್ವಿತ ಹಿಂದೂ ಎಂದು ಪರಿಗಣಿಸದ ಹಿಂದೂ ಧರ್ಮಕ್ಕೆ ಭವಿಷ್ಯವಿಲ್ಲವೆಂದು ಎಚ್ಚರಿಸಿದಾಗ, ಅವರು ಛೀಮಾರಿ ಹಾಕಿಸಿಕೊಂಡವರಂತೆ ಸುಮ್ಮನೆ ಕೂತರಾದರೂ, ಇದರಿಂದಾಗಿ ಅವರಿಗೆ ತಮ್ಮ ರಾಜಕೀಯ ನಂಬಿಕೆ ಬಗ್ಗೆ ಅನುಮಾನಗಳೆದ್ದಂತೇನೂ ತೋರಲಿಲ್ಲ.

ಇದು ಇನ್ನಷ್ಟು ಸ್ಪಷ್ಟವಾದದ್ದು, ಮಾರನೆಯ ದಿನ ಖ್ಯಾತ ಇತಿಹಾಸ ಸಂಶೋಧಕರಾದ ಡಾ॥ ರಾಜಾರಾಮ ಹೆಗಡೆಯವರು ಇತಿಹಾಸ ಎಂದರೇನು ಎಂಬ ಬಗ್ಗೆ ಉಪನ್ಯಾಸ ನೀಡಿ, ಪಾಶ್ಚಾತ್ಯರ ಸಾಕ್ಷ್ಯಾಧಾರಿತ ಇತಿಹಾಸದ ಕಲ್ಪನೆ ಹಾಗೂ ಭಾರತೀಯರ ಪೌರಾಣಿಕ ಇತಿಹಾಸದ ಕಲ್ಪನೆಗಳು ಆಧುನಿಕ ಕಾಲದಲ್ಲಿ ಹೇಗೆ ಮುಖಾಮುಖಿಯಾಗಿ ಗೊಂದಲಗಳನ್ನು ಸೃಷ್ಟಿಸುತ್ತಿವೆ ಎಂಬುದನ್ನು ವಿಷದೀಕರಿಸುತ್ತಾ, ರಾಮಾಯಣದ ಸತ್ಯಾಸತ್ಯತೆಯನ್ನು ಕುರಿತ ಸದ್ಯದ ಚರ್ಚೆಯೇ ಅಸಂಗತ ಎಂದಾಗ. ಕೂಡಲೇ, ಹಿಂದಿನ ದಿನದ ಇಬ್ಬರ ಪ್ರಶ್ನೆಗಳು ಇಂದು ಹಲವರ ಪ್ರಶ್ನೆಗಳಾಗಿ ಮಾರ್ಪಾಡಾದವು! ಹಲವು ಶಿಬಿರಾರ್ಥಿಗಳಲ್ಲಿ 'ರಾಮಾಯಣ ಹಾಗಾದರೆ ಸುಳ್ಳೋ?' ಎಂಬ ಪ್ರಶ್ನೆ ಎದ್ದು, ಒಂದಿಬ್ಬರು ಹೆಗ್ಗಡೆಯವರ 'ಭಾರತೀಯತೆ'ಯನ್ನೇ ಪ್ರಶ್ನಿಸಲು ಯತ್ನಿಸಿದರು! ಹೆಗಡೆಯವರು 'ರಾಮಾಯಣ ಮಹಾಭಾರತಗಳ ಬಗ್ಗೆ ಇಂತಹ ಪ್ರಶ್ನೆ ಕೇಳುವುದೇ ಅಸಂಗತ. ನಮ್ಮ ಪೂರ್ವಿಕರು ಅವು ನಿಜವೋ ಸುಳ್ಳೋ ಎಂಬ ಪ್ರಶ್ನೆಯನ್ನೇ ಮುಖ್ಯ ಮಾಡಿಕೊಳ್ಳದೆ, ಅವನ್ನು ಗೌರವಿಸುತ್ತಾ, ಅವುಗಳಿಂದ ಸ್ಫೂರ್ತಿ ಪಡೆಯುತ್ತಾ ತಮ್ಮ ಬದುಕಿಗಾಗಿ ಮೌಲ್ಯ ನಿರ್ಮಾಣ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಇಂತಹ ಪ್ರಶ್ನೆಗಳೆದ್ದಿರುವುದು ಪಾಶ್ಚಾತ್ಯ ಇತಿಹಾಸ ಕಲ್ಪನೆಯನ್ನೇ ಇತಿಹಾಸ ಕಲ್ಪನೆಯ ಏಕೈಕ ಹಾಗೂ ನಿಜವಾದ ಮಾದರಿ ಎಂದು ನಂಬಿರುವವರಿಂದ' ಎಂದು ಎಷ್ಟೇ ಸ್ಪಷ್ಟಪಡಿಸಿದರೂ, ರಾಮಾಯಣ ವಾಸ್ತವಿಕವಾಗಿ ನಡೆಯದೇ ಇದ್ದರೂ ಇರಬಹುದು–

ಅಂದರೆ ಸುಳ್ಳಿರಬಹುದು– ಎಂಬ ಅನುಮಾನದಿಂದ ಆಘಾತಗೊಂಡವರಂತೆ ಕಂಡುಬಂದ ಈ ಎಳೆಯರು, ರಾಮಾಯಣ ನಡೆದೇ ಇದೆಯೆಂದು ತಾವು ನಂಬಲು ಇರುವ ಸಾಕ್ಷ್ಯಗಳ ಕಡೆ ಹೆಗಡೆಯವರ ಗಮನ ಸೆಳೆಯತೊಡಗಿದರು...

ಸಮುದ್ರದಲ್ಲಿ ರಾಮಸೇತು ಕಣ್ಣಿಗೆ ಕಾಣುವಂತೆಯೇ ಇದೆಯಲ್ಲಾ? ಅಯೋಧ್ಯೆಯಲ್ಲಿ ಬಿದ್ದ ಮಸೀದಿಯ ಕೆಳಗೆ ದೇವಸ್ಥಾನದ ಅವಶೇಷಗಳು ಸಿಕ್ಕಿವೆ ಎಂದು ಸರ್ಕಾರ ನೇಮಿಸಿದ್ದ ಆಯೋಗವೇ ಹೇಳುತ್ತಿದೆಯಲ್ಲವೇ? ರಾವಣನ ಅರಮನೆ ಇದೆಯೆಂದು ಶ್ರೀಲಂಕಾದವರೇ ಒಪ್ಪಿಕೊಂಡಿದ್ದಾರೆ! ಈ ಎಲ್ಲ 'ಸಾಕ್ಷ್ಯ'ಗಳನ್ನು ಕೇಳಿ, ಇವೆಲ್ಲ ಮೂಲತಃ 'ಸುದ್ದಿ'ಗಳೇ ಹೊರತು ನಂಬಲರ್ಹವಾದ ಸಾಕ್ಷ್ಯಗಳು ಏಕಲ್ಲ ಎಂದು ವಿವರಿಸಿದ ಹೆಗಡೆಯವರು, ಇತಿಹಾಸದ ವಿಷಯದಲ್ಲಿ ಇತಿಹಾಸ ಶಾಸ್ತ್ರವನ್ನು ಅಧ್ಯಯನ ಮಾಡಿದ ಇತಿಹಾಸಕಾರರನ್ನು ನೀವು ನಂಬುತ್ತೀರೋ ಅಥವಾ ಬೀದಿ ಬದಿ ಭಾಷಣ ಮಾಡುವ ರಾಜಕಾರಣಿಯ ಹಾಗೂ ಮಾರುಕಟ್ಟೆಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಪ್ರಕಟವಾಗುವ ಪತ್ರಿಕೆಗಳ ವರದಿಗಳನ್ನು ನಂಬುತ್ತೀರೋ ಎಂದು ಕೇಳಿದರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ, ಇತಿಹಾಸಕಾರನ ಬದಲಾಗಿ ರಾಜಕಾರಣಿಗಳನ್ನೂ, ಪತ್ರಿಕೆಗಳನ್ನೂ ನಂಬಲು ಸಿದ್ಧರಿರುವ ಸಂಖ್ಯೆಯೇನೂ ಕಡಿಮೆಯಲ್ಲ ಎಂಬ ಸೂಚನೆ ದೊರೆತು ನಾವು ತಲ್ಲಣಗೊಂಡೆವು!

ಒಂದಷ್ಟು ಜನ ವಿಚಾರವಾದಿಗಳು ಮತ್ತು ಬುದ್ಧಿಜೀವಿಗಳೆನಿಸಿಕೊಂಡವರು ನಮ್ಮ ಹೆಮ್ಮೆಯ ಸಂಸ್ಕೃತಿಗೆ ಅಪಚಾರವೆಸಗುವ ಪಿತೂರಿ ನಡೆಸಿದ್ದಾರೆ ಎಂಬ ರಾಜಕೀಯ ಪ್ರಚಾರಕ್ಕೆ ಇವರೆಲ್ಲ ಬಲಿಯಾಗಿದ್ದಾರೆ ಎನಿಸಿದರೂ, ನಾವು ಎಷ್ಟೆಲ್ಲ ಆಧಾರ– ವಿಚಾರಗಳೊಂದಿಗೆ ಸ್ಪಷ್ಟಪಡಿಸಿದರೂ ಇವರೇಕೆ ನಮ್ಮ ಮಾತುಗಳನ್ನು ನಂಬಲು ಹಿಂಜರಿಯುತ್ತಿದ್ದಾರೆ ಎಂಬ ಆಶ್ಚರ್ಯ ಮತ್ತು ಪ್ರಶ್ನೆಗಳು ನಮ್ಮನ್ನು ಕಾಡದಿರಲಿಲ್ಲ. ಶಿಬಿರ ಮುಗಿಯುವವರೆಗೂ ತಮ್ಮ ಹಿಂದೆ ಬಿದ್ದ ಇಂತಹವರ ಶಂಕೆ– ಸಂದೇಹ– ಪ್ರಶ್ನೆಗಳಿಗೆ ಉತ್ತರಿಸಿ, ವಿವರಣೆ ನೀಡಿ ಸುಸ್ತಾಗಿದ್ದ ಹೆಗಡೆಯವರಿಗೆ ಕೊನೆಗೆ ಅನಿಸಿದ್ದು: 'ಇವರೊಂದಿಗೆ ಮಾತಾಡುವುದೇ ಮೂರ್ಖತನ'. ನಂತರ ತಮ್ಮ ಅನ್ನಿಸಿಕೆಯನ್ನು ತಿದ್ದಿಕೊಂಡದ್ದು ಹೀಗೆ: 'ಇದು ನಮ್ಮ ಕಾಲೇಜುಗಳಲ್ಲಿ ಪಾಠ ಮಾಡುವ ಇತಿಹಾಸದ ಅಧ್ಯಾಪಕರು ಸೃಷ್ಟಿಸಿರುವ ಮೂರ್ಖತನ'. ತದನಂತರ ತಮ್ಮೊಳಗೆ ತಾವೇ ಯೋಚಿಸಿದವರಂತೆ ಆತಂಕದಿಂದ ಹೇಳಿದ್ದು: 'ಇವರ ಮನಸ್ಸಿಗೆ ಒಪ್ಪುವಂತೆ ಹೇಳುವ ವಿಧಾನವನ್ನು ಆದಷ್ಟು ಬೇಗ ನಾವು ರೂಪಿಸಿಕೊಳ್ಳದಿದ್ದರೆ, ಯಾವುದೇ ವಿಷಯದ ಅಧ್ಯಯನವೆಂಬುದಕ್ಕೇ ಉಳಿಗಾಲವಿಲ್ಲದಾಗುತ್ತದೆ.'

ನನಗೂ ಹಾಗೆ ಅನಿಸಿದ್ದು ನಾನು ಗಾಂಧೀಜಿಯವರ 'ಹಿಂದ್ ಸ್ವರಾಜ್' ಬಗ್ಗೆ ಮಾತಾಡಿ ಕೂತ ನಂತರ. ಆವರೆಗೆ ಬಾಯಿ ಬಿಚ್ಚದೆ ಕೂತಿದ್ದ ಹುಡುಗಿಯೊಬ್ಬಳು ಮೆಲ್ಲಗೆ, 'ನೀವು ಏನೇ ಹೇಳಿದರೂ ಗಾಂಧಿಯನ್ನು ಒಪ್ಪಲು ಸಾಧ್ಯವಿಲ್ಲ' ಎಂದಾಗ! ಆಕೆ ಇತರರೆಲ್ಲಿ ನನ್ನ ಮಾತು ಕೇಳಿ ಗಾಂಧಿಯನ್ನು ಒಪ್ಪಿಕೊಂಡು ಬಿಡುವರೋ ಎಂಬ ಆತಂಕದಲ್ಲಿದ್ದಂತಿತ್ತು... ಹಾಗಾಗಿಯೇ ಆಕೆ 'ಸುಭಾಷ್ ಚಂದ್ರಬೋಸರು ಎಲ್ಲಿ ಹೋದರು ಸರ್?' ಎಂಬ ಪ್ರಶ್ನೆಯನ್ನೂ

ಎಸೆದಳು. ಆಕೆಯ ಈ ಪ್ರಶ್ನೆಯ ಹಿಂದೆ ಸುಭಾಷ್ ಕಣ್ಮರೆಯಾಗಲು ಗಾಂಧೀಜಿಯೇ ಕಾರಣ ಎಂಬ ನಂಬಿಕೆ ಇದ್ದಂತಿತ್ತು. ಹಾಗೇ ಹುಡುಗನೊಬ್ಬ 'ಭಗತ್ ಸಿಂಗರನ್ನು ಕೊಂದ ಇಂಗ್ಲಿಷರು ಗಾಂಧಿಯನ್ನೇಕೆ ಕೊಲ್ಲಲಿಲ್ಲ?' ಎಂದು ಕೇಳಿದ. ಆತನ ಅನುಮಾನ: ಗಾಂಧೀಜಿ ಇಂಗ್ಲಿಷರೊಂದಿಗೆ ಶಾಮೀಲಾಗಿದ್ದುದರಿಂದ ಅವರನ್ನು ಕೊಲ್ಲಲಿಲ್ಲ! ಇಂತಹ ಪ್ರಶ್ನೆಗಳಿಂದ ಸ್ಫೂರ್ತಿಗೊಂಡ ಮತ್ತೊಬ್ಬ ಹುಡುಗ ತನ್ನೊಳಗಿನ ಅನುಮಾನವನ್ನು ಮುಗ್ಧವಾಗಿ ಹೊರಹಾಕಿದ: 'ಮುಸ್ಲಿಮರೆಲ್ಲ ಭಯೋತ್ಪಾದಕರಾಗಿ ಹಿಂದೂಗಳನ್ನು ಕೊಲ್ಲುತ್ತಿರುವಾಗ, ಗಾಂಧೀಜಿಯ ಹಿಂದೂ– ಮುಸ್ಲಿಂ ಐಕ್ಯತೆಯ ಸಂದೇಶವನ್ನು ಇಂದು ಒಪ್ಪಿಕೊಳ್ಳುವುದಾದರೂ ಹೇಗೆ?'

ಗಾಬರಿಯಾಗುವುದಲ್ಲವೇ? ಈ ಎಲ್ಲ ಪ್ರಶ್ನೆಗಳಿಗೆ ನಾವು ಆಯಾ ಪ್ರಶ್ನೆಗಳ ಹಿಂದಿದ್ದ ವ್ಯಂಗ್ಯ ಹಾಗೂ ಅನುಮಾನಗಳನ್ನನುಸರಿಸಿ ಚುರುಕು ಮುಟ್ಟುವಂತೆ, ಅನುಮಾನಗಳು ಪರಿಹಾರವಾಗುವಂತೆ ಉತ್ತರ ಕೊಟ್ಟೆವಾದರೂ; ಮತ್ತು ಸಮಾರೋಪ ಭಾಷಣ ಮಾಡಿದ ಕೆ.ವಿ. ನಾರಾಯಣರು, 'ನಿಮ್ಮದಲ್ಲದ ಸಾಂಸ್ಕೃತಿಕ ವಾರಸುದಾರಿಕೆಯನ್ನು ನಿಮ್ಮದೆಂಬಂತೆ ನಂಬಿಸಿ, ಅದನ್ನು ಆತ್ಮಹತ್ಯಾ ಬಾಂಬ್‌ನಂತೆ ನಿಮ್ಮ ಸೊಂಟಕ್ಕೆ ಕಟ್ಟಲಾಗಿದೆ. ಅದರ ರಿಮೋಟ್ ಕಂಟ್ರೋಲ್ ಕೂಡಾ ಅವರ ಕೈಯಲ್ಲೇ ಇದೆ ಎಂಬುದನ್ನು, ಅವರು ಸ್ವಿಚ್ ಒತ್ತುವ ಮುನ್ನ ನೀವು ತಿಳಿದರೆ ಒಳ್ಳೆಯದು!' ಎಂದು ಎಚ್ಚರಿಸಿದರಾದರೂ, ನಮ್ಮ ಮಾತುಗಳ ಪರಿಣಾಮದ ಬಗ್ಗೆ ನಮಗೇ ಪೂರ್ಣ ನಂಬಿಕೆ ಬರದಂತಹ ವಾತಾವರಣ ಅಲ್ಲಿ ಸೃಷ್ಟಿಯಾಗುತ್ತಿದ್ದುದು ನಮ್ಮ ಗಮನಕ್ಕೆ ಬರತೊಡಗಿತ್ತು. ನಮ್ಮನ್ನು ಪ್ರಚೋದಿಸಿದಂತಹ ಪ್ರಶ್ನೆಗಳನ್ನು ಕೇಳಿದವರು ಕೆಲವರೇ ಆದರೂ, ಮಿಕ್ಕವರನ್ನು ಪ್ರಭಾವಿಸುವ ಅವರ ತಂತ್ರ, ರೊಚ್ಚು, ಕೆಚ್ಚು, ಮುನ್ನೋಟ, ಬದ್ಧತೆಗಳು ನಮ್ಮ ಕಣ್ಣಿಗೆ ರಾಚುವಂತಿದ್ದವು. ಕೋಮುವಾದಿ ರಾಜಕಾರಣ ಅಷ್ಟೇನೂ ಬೇರೂರಿರದ ಹಾಸನದಲ್ಲೇ ಪರಿಸ್ಥಿತಿ ಹೀಗಿದ್ದರೆ, ಇತರ ಕಡೆ?

ಒಂದಂತೂ ನಿಜ. ಈ ಹಿಂದೆ ಎಡಪಂಥೀಯ ಅಥವಾ ಪ್ರಗತಿಪರ ರಾಜಕೀಯ ಚಟುವಟಿಕೆಗಳ ಕಡೆ ಒಲಿಯುತ್ತಿದ್ದ ಯುವಜನ ಇಂದು ಬಹು ಸುಲಭವಾಗಿ ಕೋಮುವಾದಿ ರಾಜಕಾರಣದ ತೆಕ್ಕೆಗೆ ಜಾರುತ್ತಿದ್ದಾರೆ. ಯಾಕೆ? ಎಡಪಂಥೀಯರು ತಮ್ಮ ತಾತ್ವಿಕ ಶ್ರೇಷ್ಠತೆಯ ಅಹಂಕಾರದಲ್ಲಿ, ನಮ್ಮ ಇತಿಹಾಸ– ಪರಂಪರೆಯ ಬಗ್ಗೆ ಸಂಪೂರ್ಣ ಸಿನಿಕರಾಗಿ, ಅದನ್ನು ಸಾರಾಸಗಟಾಗಿ ಅವಹೇಳನ ಮಾಡುವುದೇ ಪ್ರಗತಿಪರತೆ ಎಂಬ ಅಭಿಪ್ರಾಯ ಕ್ರಮೇಣ ಜನ ಸಾಮಾನ್ಯರಲ್ಲಿ ಮೂಡುವಂತಹ ಉಡಾಫೆ ರಾಜಕಾರಣದಲ್ಲಿ ಮೈ ಮರೆತಿದ್ದೇ, ಹೊಸ ತಲೆಮಾರು ನಮ್ಮ ಮಾತುಗಳನ್ನು ಅನುಮಾನದಿಂದ ನೋಡುವಂತೆ ಮಾಡಿದೆಯಲ್ಲವೇ? ಉದಾಹರಣೆಗೆ, ಸಮಾಜವಾದಕ್ಕೆ ಒದಗಿರುವ ಗತಿ ನೋಡಿ. ಅದು ಮೂಲತಃ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನೂ ತನ್ನ ಸ್ಫೂರ್ತಿ ಕೇಂದ್ರವೊಂದನ್ನಾಗಿ ಮಾಡಿಕೊಂಡು ಕಟ್ಟಿಕೊಂಡ ಸಾಮಾಜಿಕ ನ್ಯಾಯದ ಸಂಕೀರ್ಣ ರಾಜಕಾರಣ. ಆದರೆ ನಾವು ಕಳೆದ ಮುವ್ವತ್ತು ವರ್ಷಗಳಲ್ಲಿ ಅದಕ್ಕೆ ಪೆರಿಯಾರ್‌ವಾದ, ಹಾವನೂರ್‌ವಾದ, ಅಹಿಂದವಾದ ಇತ್ಯಾದಿ ನಮ್ಮದೇ ಬಣ್ಣಗಳನ್ನು

ಬಳಿದು ಅದರ ಸಂಕೀರ್ಣತೆಯನ್ನೆಲ್ಲ ಕಳೆದು, ಅದನ್ನೊಂದು ಅಗ್ಗದ ಜಾತಿ ರಾಜಕಾರಣದ ಸಾಧನವನ್ನಾಗಿ ಮಾರ್ಪಡಿಸಿ ಅದರ ವಿಶ್ವಾಸಾರ್ಹತೆಯನ್ನೇ ಕಳೆದಿದ್ದೇವೆ.

ಹೀಗಾಗಿ, ತನ್ನೆಲ್ಲ ಅಧ್ಯಾತ್ಮಿಕತೆಯನ್ನು (ಅಂದರೆ ತನ್ನ ಆವೃತ ದೃಷ್ಟಿಕೋನವನ್ನು) ಕಳೆದುಕೊಂಡಿರುವ, ಈ ಜಾತಿವಾದಿ ರಾಜಕಾರಣದ ಹಿಂದಿನ ಫಲಾನುಭವಿಗಳೇ ಇಂದು ಕೋಮುವಾದಿ ರಾಜಕಾರಣದ ಬೆನ್ನೆಲುಬಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಎಡಪಂಥೀಯ ಪ್ರಗತಿಪರತೆ ತನ್ನ ಈ ಅನುಯಾಯಿಗಳನ್ನು ಅರ್ಧ ಮನುಷ್ಯರನ್ನಾಗಿ ಮಾಡಿ ಕೈಬಿಟ್ಟಿದೆ. ಇನ್ನರ್ಧಕ್ಕಾಗಿ ಅವರ ಮುಂದಿರುವ ಏಕೈಕ ಹಾಗೂ ಸುಲಭ ಆಯ್ಕೆ, ತಮ್ಮ ಸಾಂಸ್ಕೃತಿಕ ಅಹಂಕಾರದ ಅಗತ್ಯವನ್ನು ತಣಿಸಬಲ್ಲ 'ಭವ್ಯ' ಭೂತವೊದನ್ನು ಕಟ್ಟಿಕೊಡುವ ಕೋಮುವಾದಿ ರಾಜಕಾರಣವೇ ಆಗಿರುವಂತೆ ತೋರುತ್ತದೆ. ಏಕೆಂದರೆ ಇಂದಿನ ನಮ್ಮ 'ಸೆಕ್ಯುಲರ್' ರಾಜಕಾರಣ ತನ್ನೆಲ್ಲ ಉದಾತ್ತ ಆಶಯಗಳನ್ನು ಕಳೆದುಕೊಂಡು, ಬರೀ ಹೇಗಾದರೂ ಗಳಿಸಿ, ತಿಂದು, ಕುಡಿದು ನಲಿದು ಸಾಯುವ ಬರೀ ಪದಾರ್ಥ ರಾಜಕಾರಣವಾಗಿ ಮಾರ್ಪಟ್ಟಿದೆ. ಯಾರಾದರೂ ಇದರ ಬಗ್ಗೆ ಯೋಚಿಸುವ ವ್ಯವಧಾನ ತೋರಬಲ್ಲರೇ?

ಏಪ್ರಿಲ್ ೪, ೨೦೦೮

ಅಡ್ವಾಣಿಯವರ ಅಗ್ನಿ ಪರೀಕ್ಷೆ

ಕೆಲವು ದಿನಗಳ ಹಿಂದಷ್ಟೇ ಬಿ.ಜೆ.ಪಿ. ನಾಯಕ ಎಲ್.ಕೆ. ಅಡ್ವಾಣಿಯವರ ಆತ್ಮಕಥೆ 'ಮೈ ಕಂಟ್ರಿ, ಮೈ ಲೈಫ್' ('ನನ್ನ ದೇಶ, ನನ್ನ ಬದುಕು') ದೆಹಲಿಯಲ್ಲಿ ಬಿಡುಗಡೆಯಾಯಿತು. ಬಿಡುಗಡೆ ಸಮಾರಂಭದಲ್ಲಿ ಅಡ್ವಾಣಿಯವರ ನಿಡುಗಾಲದ ಗೆಳೆಯರೂ, ಭಾರತದ ರಾಜಕಾರಣದ ಭೀಷ್ಮ ಪಿತಾಮಹರೂ ಆದ ಅಟಲ್ ಬಿಹಾರಿ ವಾಜಪೇಯಿವರ ಅನಾರೋಗ್ಯ ಕಾರಣದ ಗೈರುಹಾಜರಿ ಎದ್ದು ಕಾಣುವಂತಿತ್ತು ಎಂದು ಇಂಗ್ಲಿಷ್ ಪತ್ರಿಕೆಯೊಂದು ಬರೆದಿದೆ. ಸುಮ್ಮನೆ ನೋಡಿದರೆ ಇದೊಂದು ಸಾಮಾನ್ಯ ಸುದ್ದಿ. ಆದರೆ ಇದರಲ್ಲಿ ನನಗೆ ಎದ್ದು ಕಂಡದ್ದು, ಆ ಪತ್ರಕರ್ತ ಮಾಡಿದ್ದ ಭಾರತದ ರಾಜಕಾರಣದ ಭೀಷ್ಮ ಪಿತಾಮಹ ಎಂಬ ವಾಜಪೇಯಿಯವರ ವರ್ಣನೆ. ಅದು ನನ್ನನ್ನು, ನಿಜವಾಗಿಯೂ ವಾಜಪೇಯಿಯವರು ಭಾರತದ ರಾಜಕಾರಣದ ಭೀಷ್ಮ ಪಿತಾಮಹರೇ ಎಂದು ಯೋಚಿಸುವಂತೆ ಮಾಡಿತು.

ನಿಜ, ವಾಜಪೇಯಿಯವರು ನಮ್ಮ ರಾಷ್ಟ್ರ ರಾಜಕಾರಣದಲ್ಲಿನ ಅತ್ಯಂತ ಹಿರಿಯಲ್ಲೊಬ್ಬರು. ಸಜ್ಜನರು ಕೂಡಾ. ಆದರೆ ರಾಷ್ಟ್ರ ರಾಜಕಾರಣದ ಭೀಷ್ಮಪಿತಾಮಹರು ಎನ್ನಿಸಿಕೊಳ್ಳಲು, ಅದಕ್ಕೆ ಅವರಿಂದ ಸಂದ ಕೊಡುಗೆಯಾದರೂ ಏನು? ಆಕರ್ಷಕವಾದ ಆಂಗಿಕ ಭಾವ ಭಂಗಿಗಳಲ್ಲಿ ಹೊಮ್ಮುವ ಅಲಂಕಾರಿಕ ಮಾತುಗಾರಿಕೆಯ ಮೂಲಕ ಸೃಷ್ಟಿಸುತ್ತಿದ್ದ ರಾಜಕೀಯ ಮೋಡಿಯ ಹೊರತಾಗಿ, ಅವರು ನಮ್ಮ ರಾಜಕಾರಣಕ್ಕೆ ಯಾವ ಹೊಸ ಚೈತನ್ಯ ಒದಗಿಸಿದ್ದಾರೆಂದು ಅವರನ್ನು 'ಭೀಷ್ಮ ಪಿತಾಮಹ'ರೆಂದು ಕರೆಯಬೇಕು? ಸ್ಪಷ್ಟವಾಗಿ ಯಾವುದೇ ನಿರ್ದಿಷ್ಟ ರಾಜಕೀಯ ಚಿಂತನೆಯನ್ನಾಗಲೀ ಪ್ರತಿಪಾದಿಸದ ಮತ್ತು ಯಾವುದೇ ರಾಜಕೀಯ ಹೋರಾಟದಲ್ಲಿ ಭಾಗವಹಿಸದ ವಾಜಪೇಯಿ, ವಾದದ ಎರಡೂ ಕಡೆ ಅರ್ಥ ಹೊರಡುವಂತಹ ಪೌರಾಣಿಕ ಭಾಷೆಯಲ್ಲಿ ಮಾತನಾಡುತ್ತಾ, ತಮ್ಮ ಭೋಳೆ ರಾಜಕಾರಣವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದವರು. ಆದರೆ ಇಂತಹ ಯಶಸ್ಸು ಕೂಡಾ ತಾತ್ಕಾಲಿಕ ಮಾತ್ರ ಎಂಬುದನ್ನು ೨೦೦೪ರ ಚುನಾವಣೆ ತೋರಿಸಿತು!

ಹಾಗೆ ನೋಡಿದರೆ ಇಂದು ರಾಷ್ಟ್ರ ರಾಜಕಾರಣದ ಭೀಷ್ಮ ಪಿತಾಮಹ ಎನ್ನಿಸಿಕೊಳ್ಳಲು ಪೈಪೋಟಿ ನಡೆಸಬಲ್ಲವರು ಬಹುಶಃ ಈ ಮುವ್ವರು: ಜ್ಯೋತಿ ಬಸು, ಜಾರ್ಜ್ ಫರ್ನಾಂಡೀಸ್ ಹಾಗೂ ಎಲ್.ಕೆ. ಅಡ್ವಾಣಿ. ತಮ್ಮ ರಾಜಕೀಯ ಜೀವನದ ಅಂತಿಮ ಘಟ್ಟದಲ್ಲಿರುವ ಈ ಮುವ್ವರೂ ಹಿರಿಯರಷ್ಟೇ ಅಲ್ಲ, ಹೋರಾಟದ ಮೂಸೆಯಲ್ಲಿ ಪುಟಗೊಂಡು ಬೆಳೆದವರು. ನಮ್ಮ ರಾಜಕೀಯ ಅಭಿಪ್ರಾಯದ ಮೇರೆಗೆ ಈ ಹಿರಿಯರ ಹೋರಾಟದ ರಾಜಕಾರಣದ ರೀತಿ ನೀತಿಗಳನ್ನು ನಾವು ಒಪ್ಪಬಹುದು. ಒಪ್ಪದೇ ಇರಬಹುದು; ಆದರೆ ಅವರು ತಮ್ಮ ಆ ಹೋರಾಟದ ರಾಜಕಾರಣದ ಮೂಲಕ ಭಾರತದ ರಾಜಕಾರಣದಲ್ಲಿ ತಮ್ಮದೇ ಛಾಪನ್ನು ಮೂಡಿಸಿರುವವರು ಎಂಬುದನ್ನು ಅಲ್ಲಗಳೆಯಲಾಗದು. ಆರಂಭದಲ್ಲಿ ಒಂದು ಕಡೆ ಕಾಂಗ್ರೆಸ್ಸಿಗರ, ಮತ್ತೊಂದು ಕಡೆ ನಕ್ಸಲೈಟರ ರಾಜಕೀಯ ದಾಳಿಗೆ ಸಿಕ್ಕಿಯೂ ತಮ್ಮ ಕಾರ್ಮಿಕ ಸಂಘಟನೆಯ ಮೇಲಿನ ಹಿಡಿತವನ್ನು ಬಿಟ್ಟುಕೊಡದೆ; ಸತತ ಐದು ಅವಧಿಗಳ ಕಾಲ ತಮ್ಮ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ತಮ್ಮ ರಾಜ್ಯ ಪಶ್ಚಿಮ ಬಂಗಾಳದಲ್ಲಿ ಭಾರಿ ಬಹುಮತದೊಂದಿಗೆ ಗೆಲ್ಲಿಸಿಕೊಂಡಿದ್ದಲ್ಲದೆ, ತಾವೂ ಅಷ್ಟೂ ಅವಧಿಯದ್ದಕ್ಕೂ ಮುಖ್ಯಮಂತ್ರಿಯಾಗಿ ಮುಂದುವರೆಯುವ (ನಂತರವೂ ತಮ್ಮ ಪಕ್ಷ ಮತ್ತೆರಡು ಅವಧಿಗೂ ಭಾರಿ ಬಹುಮತದೊಂದಿಗೆ ಚುನಾಯಿತವಾಗುವಂತಹ) ರಾಜಕೀಯ ದಕ್ಷತೆ ಹಾಗೂ ಕೌಶಲ್ಯ ತೋರಿದ ಜ್ಯೋತಿ ಬಸು, ರಾಷ್ಟ್ರ ರಾಜಕಾರಣದಲ್ಲಿ ಪಾಲ್ಗೊಂಡಿದ್ದು ಕಡಿಮೆ. ೧೯೯೭ರಲ್ಲಿ ಪ್ರಧಾನಿಮಂತ್ರಿಯಾಗುವ ಅವಕಾಶವಿದ್ದರೂ, ಅವರ ಪಕ್ಷದ ಈಗ ಅವ್ಯವಾಹಾರಿಕವೆಂದು ತೋರುವ ರಾಜಕೀಯ ನಿರ್ಧಾರಕ್ಕೆ ಬಲಿಯಾಗಿ ಆ ಅವಕಾಶ ತಪ್ಪಿಸಿಕೊಂಡ ಹಾಗೂ ಆ ಬಗ್ಗೆ ನಂತರ ಯಾವುದೇ ವಿಷಾದ ತೋರದ ರಾಜಕೀಯ ಮುತ್ಸದ್ದಿ ಇವರು. ಹೀಗಾಗಿ, ಉಳಿದಿಬ್ಬರಿಗೆ ಹೋಲಿಸಿದರೆ ಇವರು ರಾಷ್ಟ್ರ ರಾಜಕಾರಣದಲ್ಲಿ ಸೀಮಿತ ಪಾತ್ರ ವಹಿಸಿದವರು.

ಜಾರ್ಜ್ ಫರ್ನಾಂಡೀಸ್ ಈ ಮುವ್ವರಲ್ಲಿ ಕಿರಿಯರಾದರೂ, ಹೋರಾಟದ ವಿಷಯದಲ್ಲಿ ಎಲ್ಲರಿಗಿಂತ ಹಿರಿಯರು! ಮಂಗಳೂರು ಮೂಲದವರಾದರೂ, ಮುಂಬೈನಲ್ಲಿ ಕಾರ್ಮಿಕ ನಾಯಕರಾಗಿ ಬೆಳೆದು ಬಿಹಾರದಲ್ಲಿ ತಮ್ಮ ರಾಜಕೀಯ ನೆಲೆ ಕಂಡುಕೊಂಡ ಇವರು ತಮ್ಮ ವಿಶಿಷ್ಟ ಹೋರಾಟಗಳ ಮೂಲಕವೇ ಬಹು ಬೇಗ ರಾಷ್ಟ್ರೀಯ ರಾಜಕಾರಣದ ಮುಂಚೂಣಿಯಲ್ಲಿ ಸ್ಥಾನ ಪಡೆದುಕೊಂಡರು. ಮುಂಬೈನಲ್ಲಿ ಎಪ್ಪತ್ತರ ದಶಕದ ಹೊತ್ತಿಗೇ ಎಸ್.ಕೆ. ಪಾಟೀಲರಂತಹ ಘಟಾನುಘಟಿಯನ್ನು ಸೋಲಿಸಿ ಮುಂಬೈ ರಾಜಕಾರಣದ ಸ್ವರೂಪವನ್ನೇ ಬದಲಿಸಿ 'ದೈತ್ಯಾರಿ' (Gaint killer) ಎನ್ನಿಸಿಕೊಂಡ ಜಾರ್ಜ್ ಸಂಘಟಿಸಿದ ರೈಲ್ವೇ ಮುಷ್ಕರವು ಅವರ ನಾಯಕತ್ವದ ಗುಣಗಳನ್ನು ಬೆಳಕಿಗೆ ತಂದಿತಲ್ಲದೆ, ದುಡಿಯುವ ವರ್ಗದ ಸಂಕಷ್ಟಗಳ ಬಗೆಗೆ ರಾಷ್ಟ್ರದ ಆತ್ಮಸಾಕ್ಷಿಯನ್ನು ಕೆಣಕುವಂತಿತ್ತು. ನಂತರ ತುರ್ತು ಪರಿಸ್ಥಿತಿ ವಿರುದ್ಧ ಭೂಗತರಾಗಿ ಅವರು ನಡೆಸಿದ– ಬರೋಡಾ ಡೈನಮೈಟ್ ಪ್ರಕರಣವೆಂದೇ ಪ್ರಸಿದ್ಧವಾದ– ಹೋರಾಟ, ಅವರನ್ನು ಎಪ್ಪತ್ತರ ದಶಕದ ರಾಜಕೀಯ 'ಹೀರೋ'ನನ್ನಾಗಿ

ಮಾಡಿತು. ಹಾಗಾಗಿಯೇ ಅವರು ಬರೋಡಾದ ಸೆರೆಮನೆಯೊಂದರಲ್ಲಿ ಕೈ ಕಾಲುಗಳಿಗೆಲ್ಲ ಸರಪಣಿ ಹಾಕಿಸಿಕೊಂಡ ಕೈದಿಯಾಗಿದ್ದುಕೊಂಡೇ ಬಿಹಾರದ ಮುಝಾಫರಪುರದಿಂದ ಲೋಕಸಭೆಗೆ ಸ್ಪರ್ಧಿಸಿ ನಾಲ್ಕು ಲಕ್ಷಗಳಿಗೂ ಅಧಿಕ ಮತಗಳಿಂದ ಜಯ ಗಳಿಸಲು ಸಾಧ್ಯವಾದದ್ದು. ನಂತರ ಕೈಗಾರಿಕಾ ಮಂತ್ರಿಯಾಗಿ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಚಾಲನೆ ನೀಡಿದ್ದು ಮತ್ತು 'ಕೋಕಾ ಕೋಲಾ'ವನ್ನು ದೇಶದಿಂದ ಓಡಿಸಿದ್ದು ಇವರ ಆಡಳಿತ ಸಾಧನೆ.

ಆದರೆ ಎಂಭತ್ತರ ದಶಕದ ಹೊತ್ತಿಗೆ ಫರ್ನಾಂಡೀಸರ ರಾಜಕಾರಣ ಅಂದಾದುಂದಿಯಾಗಿ ಹೋದದ್ದು ರಾಷ್ಟ್ರ ರಾಜಕಾರಣದ ಒಂದು ದೊಡ್ಡ ದುರಂತ. ಲೋಹಿಯಾ ಶಿಷ್ಯರಾದರೂ, ತುರ್ತು ಪರಿಸ್ಥಿತಿಯ ನಂತರ ಪಕ್ಷ ಕಳೆದುಕೊಂಡ ಸಮಾಜವಾದಿಯಾಗಿ ಯಾವುದೇ ರಾಜಕೀಯ ಸ್ಪಷ್ಟತೆ ಇಲ್ಲದವರಂತೆ ಇವರು ಯಾವುದಾವುದೋ ಪಕ್ಷಗಳ ಜಗುಲಿಗಳ ಮೇಲೆ ಮಲಗಿದರು. ಕೊನೆಗೆ ಪ್ರಧಾನ ಮಂತ್ರಿಯಾಗುವ ಆಸೆಯೊಂದಿಗೆ ತಮ್ಮ ಕೊನೆಯ ಪಕ್ಷ(?) ಸಂಯುಕ್ತ ಜನತಾ ದಳವನ್ನು ಬಿ.ಜೆ.ಪಿ. ನೇತೃತ್ವದ ಮೈತ್ರಿ ಕೂಟಕ್ಕೆ ಸೇರಿಸುವ ಒತ್ತಡಕ್ಕೆ ಸಿಕ್ಕಿ, ಈಗ ರಾಜಕೀಯವಾಗಿ ನಿರ್ನಾಮವಾಗುವ ಹಂತ ತಲುಪಿದ್ದಾರೆ. ಒಂದು ರೀತಿಯಲ್ಲಿ ಇವರು ಲೋಹಿಯೋತ್ತರ ಸಮಾಜವಾದಿ ಚಳುವಳಿ ತನ್ನ ಮೂಲ ನೆಲೆ– ಸೆಲೆಗಳೆರಡನ್ನೂ ಕಳೆದುಕೊಂಡ ಚರಿತ್ರೆಯ ದುರಂತ ನಾಯಕ. ಇಂದು ವಿವಿಧ ಟಿ.ವಿ. ವಾಹಿನಿಗಳ ಸಂದರ್ಶನಗಳಲ್ಲಿ ಜಾರ್ಜ್ ಅನಾಥರಾದವರಂತೆ, ಸ್ವಯಂಮರುಕದ ತಳ ಮುಟ್ಟಿದವರಂತೆ, ರಾಜಕೀಯ ದಿಗ್ಭ್ರಾಂತಿಗೆ ಒಳಗಾದವರಂತೆ, ದೈಹಿಕ ಅನಾರೋಗ್ಯದ ಅಂಚು ಮುಟ್ಟಿರುವ ಆತಂಕದಲ್ಲಿರುವವರಂತೆ, ಅಸಹಾಯಕವಾಗಿ ಒಂದೊಂದೇ ಶಬ್ದವನ್ನು ತೊದಲುತ್ತಾ ಉಚ್ಚರಿಸುವುದನ್ನು ನೋಡಿದಾಗ, ಇವರ ಕೆಚ್ಚು ಮತ್ತು ಸಾಹಸಮಯ ರಾಜಕೀಯ ಜೀವನವನ್ನು ಬಲ್ಲವರ ಕಣ್ಣಲ್ಲಿ ನೀರಾಡುತ್ತದೆ. ಜಾರ್ಜ್ ಸಂಪೂರ್ಣ ಮಂಕಾಗಿದ್ದಾರೆ, ಅವರನ್ನು ಬೆಳೆಸಿದ ಸಮಾಜವಾದಿ ಚಳುವಳಿಯಂತೆಯೇ...

ಇನ್ನು ಉಳಿದವರು ಅಡ್ವಾಣಿಯವರು. ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಕರಾಚಿಯಿಂದ ಪಾಕಿಸ್ತಾನ್ ನಿರಾಶ್ರಿತರಾಗಿ ದೆಹಲಿಗೆ ಬಂದ ಇವರು, ಆರ್.ಎಸ್.ಎಸ್. ಸ್ವಯಂಸೇವಕರಾಗಿ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದ್ದು ಸಹಜವೇ ಆಗಿದೆ. ಅಂದಿನಿಂದ ಇಂದಿನವರೆಗೂ ತಮ್ಮ ರಾಜಕೀಯ ನೆಲೆಯನ್ನಾಗಲೀ, ನಂಬಿಕೆಯನ್ನಾಗಲೀ ಬದಲಾಯಿಸಿಕೊಳ್ಳದ (೧೯೭೭ರ ಜನತಾ ಪಕ್ಷದಲ್ಲಿದ್ದ ಮೂರು ವರ್ಷಗಳ ಮಾರುವೇಷದ ಹೊರತಾಗಿ!) ಅಡ್ವಾಣಿ, ದೆಹಲಿ ನಗರಸಭೆ ಅಧ್ಯಕ್ಷ ಸ್ಥಾನದಿಂದ ಇಂದು ಛಾಯಾ ಪ್ರಧಾನಿ ಮಂತ್ರಿ(Prime Minister in waiting)ಯಾಗಿ ಮೂಡುವವರೆಗೂ, ಅವರು ತಾವು ನಂಬಿದ್ದನ್ನು ಸ್ಪಷ್ಟವಾಗಿ ಹೇಳಿಕೊಂಡು ಬಂದವರೇ. ಯಾವುದೇ ಆಮಿಷಕ್ಕೊಳಗಾಗಿ ಅತ್ತಿತ್ತ ಸರಿದವರಲ್ಲ. ಹಾಗಾಗಿಯೇ ಅವರು ತಾವು ಹಿಡಿದು ಹೊರಟ ರಾಜಕೀಯ ಹಾದಿಯ ಅಂತಿಮ ಹಂತ ತಲುಪಿದ್ದಾರೆ. ಅವರ ಅಥವಾ ಅವರ ಪಕ್ಷದ ರಾಜಕೀಯ ಚಿಂತನೆಯ

ಮಿತಿ ಹಾಗೂ ಸಂಕುಚಿತತೆಗಳಿಂದಾಗಿ ಅವರು ತಮ್ಮ ರಾಜಕೀಯ ಬದುಕಿನ ಅಂತಿಮ ಗುರಿ ತಲುಪದೇ ಹೋಗಬಹುದು. ಆದರೆ ತಾವು ನಂಬಿದ ಒಂದು ರಾಜಕೀಯ ಚಿಂತನೆಯನ್ನು– ಎಲ್ಲ ಕಡೆಯಿಂದ ವಿರೋಧ, ದೂಷಣೆಗಳು ಹಾರಿ ಬರುತ್ತಿದ್ದ ಕಾಲದಲ್ಲೂ ವಿಚಲಿತರಾಗದೇ– ಹೇಗೆ ಶಿಸ್ತು, ಶ್ರದ್ಧೆ ಹಾಗೂ ಬದ್ಧತೆಗಳಿಂದ ಬೆಳಸಬಹುದು ಎಂಬುದಕ್ಕೆ ಅವರು ದೊಡ್ಡ ಉದಾಹರಣೆಯಾಗಿದ್ದಾರೆ. ಹಾಗೆ ನೋಡಿದರೆ ವಾಜಪೇಯಿಯವರಿಗಿಂತಲೂ ದೊಡ್ಡ ಉದಾಹರಣೆ: ವಾಜಪೇಯಿ ಪ್ರಧಾನಿಯಾಗಿದ್ದಾಗ; ಅಡ್ವಾಣಿಯವರನ್ನು ನಂಬಬಹುದು, ಇವರನ್ನು ನಂಬುವಂತಿಲ್ಲ ಎಂದು ಎಷ್ಟು ಬಾರಿ ಎಷ್ಟು ಜನಕ್ಕೆ ಅನ್ನಿಸಿಲ್ಲ!

ಆದರೆ ಅಡ್ವಾಣಿಯವರು ಹಿಡಿದ ಹಾದಿಯೇ ತಪ್ಪಾಗಿದೆ. ತಮ್ಮ ಪಕ್ಷ ವಿ.ಪಿ. ಸಿಂಗ್ ಅವರ ಸಾಮಾಜಿಕ ನ್ಯಾಯದ ರಾಜಕಾರಣದ ಎದುರು ಅಪ್ರಸ್ತುತವಾಗಿಬಿಡುವ ಅಪಾಯಕ್ಕೆ ಸಿಕ್ಕಿಕೊಂಡಾಗ ಅವರು ಸಂಕುಚಿತ ಸಾಂಸ್ಕೃತಿಕ ರಾಷ್ಟ್ರೀಯತೆಯ ರಾಜಕಾರಣ ಶುರು ಮಾಡಿ ಬಾಬ್ರಿ ಮಸೀದಿ ನಾಶಕ್ಕೆ ಕಾರಣರಾದರು. ಈ ದುರಂತಕ್ಕೆ– ಈಗ ಹಿಂದಿರುಗಿ ನೋಡಿದಾಗ– ಅವರಷ್ಟೇ ಅಲ್ಲದೆ, ಕಾಂಗ್ರೆಸ್ಸೇತರ ಸೆಕ್ಯುಲರ್ ಎಂದು ಹೇಳಿಕೊಳ್ಳುವ ರಾಜಕೀಯ ಪಕ್ಷಗಳ ಅಲ್ಪಕಾಲಿಕ ರಾಜಕಾರಣವೂ (ಲೋಕಸಭೆಯಲ್ಲಿ ಎರಡೇ ಎರಡು ಸ್ಥಾನಗಳೊಂದಿಗೆ ಒದ್ದಾಡುತ್ತಿದ್ದ ಅವರ ಪಕ್ಷ ಇವರ ಮೈತ್ರಿಯಲ್ಲಿ ಎಂಭತ್ತು ಸ್ಥಾನಗಳಿಗೆ ಏರಿತು!) ಹಾಗೂ ಕಾಂಗ್ರೆಸ್ಸಿನ (ರಾಜೀವ್ ಗಾಂಧಿ ಹಾಗೂ ಪಿ.ವಿ. ನರಸಿಂಹರಾಯರ ಕಾಲದ) ಸಮಯಸಾಧಕ ಕೋಮು ರಾಜಕಾರಣವೂ ಕಾರಣವಾಗಿದ್ದುದೂ ಸ್ಪಷ್ಟವಾಗಿ ಕಾಣುತ್ತದೆ. ಅದೇನೇ ಇರಲಿ, ಅಡ್ವಾಣಿಯವರು ಆ ದುರಂತದ ದಿನವನ್ನು ತಮ್ಮ ರಾಜಕೀಯ ಜೀವನದ ಅತ್ಯಂತ ಕೆಟ್ಟ ದಿನ ಎಂದು ವರ್ಣಿಸಿದಾಗ, ಅದು ಪ್ರಾಮಾಣಿಕ ಹೇಳಿಕೆ ಇದ್ದರೂ ಇರಬಹುದು ಎಂದು ನಂಬಿದವರನ್ನು ಗೌರವಿಸಲಾದರೂ ಅವರು ತಮ್ಮ ಕೈಮೀರಿ ಹೋದ ಈ ಘಟನೆಗೆ ಕಾರಣರಾದ ವಿ.ಎಚ್.ಪಿ. ಹಾಗೂ ಬಜರಂಗ ದಳಗಳಿಂದ ತಮ್ಮನ್ನು ದೂರವಿರಿಸಕೊಳ್ಳಬೇಕಿತ್ತು. ಆದರೆ ಅವರ ರಾಜಕೀಯ ಮಹಾತ್ವಾಕಾಂಕ್ಷೆಯೇ ಅದು ಸಾಧ್ಯವಾಗದಂತೆ ತಡೆದು ಅವರನ್ನು ಮತ್ತೆ ನರೇಂದ್ರ ಮೋದಿಯ ನರಹಂತಕ ರಾಜಕಾರಣವನ್ನು ಮನ್ನಿಸುವಂತೆ ಪ್ರೇರೇಪಿಸಿತು... ಹುಲಿ ಏರಿರುವ ಅಡ್ವಾಣಿ ಈಗ ಅದರಿಂದ ಇಳಿದು ಮನುಷ್ಯರಂತೆ ನಡೆಯಲಾರದವರಾಗಿದ್ದಾರೆ!

ಈ ಅಸಹಾಯಕ ಸ್ಥಿತಿಯಿಂದ ಅಡ್ವಾಣಿಯವರನ್ನು ಪಾರು ಮಾಡಲೆಂಬಂತೆಯೋ ಏನೋ, ಅವರ ಆತ್ಮಚರಿತ್ರೆ ಪುಸ್ತಕದ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಗಿತ್ತು. ಕಾಂಗ್ರೆಸ್ಸೊಂದರ ಹೊರತಾಗಿ ಸಕಲ ರಾಜಕೀಯ ಪಕ್ಷಗಳ ನಾಯಕರು, ಲೇಖಕರು, ಬುದ್ಧಿಜೀವಿಗಳು, ಪತ್ರಕರ್ತರು, ಕೈಗಾರಿಕೋದ್ಯಮಿಗಳು, ಸಿನೆಮಾ ನಟ ನಟಿಯರು ಇತ್ಯಾದಿಯಾಗಿ ರಾಜಕೀಯ ಹಾಗೂ ಸಾಂಸ್ಕೃತಿಕ ಲೋಕದ ಮುಖ್ಯರಿಂದ ತುಂಬಿ ತುಳುಕುತ್ತಿದ್ದ ಆ ಸಮಾರಂಭದಲ್ಲಿ, ಅವರನ್ನು 'ಮೃದುವಾದಿ'ಯೆಂದು ಬಿಂಬಿಸುವ ದೊಡ್ಡ ಪ್ರಯತ್ನವೊಂದು ನಡೆಯಿತು. ಆದರೆ ಇಂತಹ ಪ್ರಯತ್ನಗಳಿಂದ ಯಾವುದೇ

ಪ್ರಯೋಜನವಿಲ್ಲವೆಂದು ಅವರ ಅಭಿಮಾನಿಗಳು ಆದಷ್ಟು ಬೇಗನೆ ತಿಳಿದರೆ ಒಳ್ಳೆಯದು. ಅಡ್ವಾಣಿ ನಿಜವಾಗಿ ಮೃದುವಾದಿ ಎಂದೆನ್ನಿಸಿಕೊಳ್ಳಬೇಕಾದರೆ, ಮೊದಲು ತಮ್ಮ ಪಕ್ಷವನ್ನು ಮೃದು ಮಾಡಬೇಕಿದೆ. ಕೆಲವು ವರ್ಷಗಳ ಹಿಂದೆ ಪಾಕಿಸ್ತಾನದಲ್ಲಿ ಜಿನ್ನಾರ ಸಮಾಧಿಯ ಮುಂದೆ ಅವರನ್ನು ಮೆಚ್ಚಿ ತಾವು ಆಡಿದ ಮಾತಿನ ಮೂಲಕ ಎತ್ತಿ ಹಿಡಿದ ಕೋಮು ದೃಷ್ಟಿ ಮೀರಿದ ರಾಜಕಾರಣದ ಬಗೆಗಿರುವ ತಮ್ಮ ಬದ್ಧತೆಯನ್ನು ಸಮರ್ಥಿಸುವ ರಾಜಕೀಯ ಧೈರ್ಯವನ್ನು ಅವರು ತೋರಬೇಕಿದೆ. ಮುಖ್ಯವಾಗಿ ಕಾಂಗ್ರೆಸ್ಸಿನ ತಥಾಕಥಿತ ಮುಸ್ಲಿಂ ತುಷ್ಟೀಕರಣದ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಭಾರತದಲ್ಲಿರುವರೆಲ್ಲರೂ ಹಿಂದೂಗಳೇ ಎಂಬ ತಮ್ಮ ಪಕ್ಷದ ಮೂಲ ನಂಬಿಕೆಗೊಂದು ರಾಜಕೀಯ ಘನತೆ ಒದಗಿಸುವ ರೀತಿಯಲ್ಲಿ, ಎಲ್ಲರನ್ನೂ ನಮ್ಮವರಂತೆಯೇ ನೋಡುವ ಉದಾರ ರಾಜಕಾರಣಕ್ಕೆ ಅವರು ನಾಂದಿ ಹಾಡಬೇಕಿದೆ. ಅಡ್ವಾಣಿಯವರು ರಾಷ್ಟ್ರದ ಪ್ರಧಾನಿಯಾಗಲು ತಮ್ಮ ಜನಪ್ರಿಯತೆಯನ್ನು ಪಣ ಒಡ್ಡಬೇಕಾದದ್ದು ಪಕ್ಷದ ಮುಂದಲ್ಲ, ರಾಷ್ಟ್ರದ ಮುಂದೆ.

ಹಾಗೆ ನೋಡಿದರೆ ಅಡ್ವಾಣಿಯವರ ರಾಜಕೀಯ ಜೀವನದ ಮುಂದೆ ಇಂದಿನ ಕಾಂಗ್ರೆಸ್ಸಿನ ಹೆಚ್ಚೂ ಕಡಿಮೆ ಎಲ್ಲ ನಾಯಕರೂ ಬಚ್ಚಾಗಳೇ! ಅಡ್ವಾಣಿಯವರ ಆತ್ಮಚರಿತ್ರೆ ಪುಸ್ತಕದ ಬಿಡುಗಡೆ ಸಮಾರಂಭವನ್ನು ಅವರು ಬಹಿಷ್ಕರಿಸಿದರೆಂಬುದೇ ಅವರ ಅಪ್ರಬುದ್ಧತೆಯನ್ನು ತೋರಿಸುವಂತಿದೆ. ಮೊನ್ನೆ ಕರ್ನಾಟಕದಲ್ಲಿ ರಾಹುಲ್ ಗಾಂಧಿಯೆಂಬ, ಹುಟ್ಟಿನ ಹಿನ್ನೆಲೆಯ ಹೊರತಾಗಿ ಇನ್ನಾವ ರಾಜಕೀಯ ಅರ್ಹತೆಯನ್ನೂ ಈವರೆಗೆ ಪ್ರದರ್ಶಿಸಿರದ ಪಡ್ಡೆ ಹುಡುಗನೊಬ್ಬನ ಸುತ್ತ ಹಾರ ಹಿಡಿದು ಸುಳಿದಾಡುವ, ಅವರ ಗುಣಗಾನ ಮಾಡಲು ತಮ್ಮ ದೇಹದ ಪೀಠ ಭಾಗದ ನರಗಳನ್ನೆಲ್ಲ ಎಳೆದು ಅಬ್ಬರಿಸುವ ಕಾಂಗ್ರೆಸ್ಸಿನ 'ಹಿರಿಯ' ನಾಯಕರನ್ನು ನೋಡಿದರೇ ಇದು ಸ್ಪಷ್ಟವಾಗುತ್ತದೆ. ಹಾಗೇ, ಎಂತಹ ದೊಡ್ಡ ಸ್ವಾತಂತ್ರ್ಯ ಹೋರಾಟಗಾರರಾಗಲೀ ಅಥವಾ ಪಕ್ಷಕ್ಕೆ ತಮ್ಮ ತನು- ಮನ- ಧನ ತೆತ್ತ ಯಾರೇ ಹಿರಿಯ ನಾಯಕರಾಗಲೀ ಅಲಂಕರಿಸದಿದ್ದಷ್ಟು ಕಾಲ ಸೋನಿಯಾ ಗಾಂಧಿಯವರು ತಮ್ಮ ಪಕ್ಷದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದಾರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾ; ಅದನ್ನು ಇತ್ತೀಚೆಗೆ ಸಂಭ್ರಮದಿಂದ ಆಚರಿಸಿದ ಕಾಂಗ್ರೆಸ್ಸಿಗರ ಆತ್ಮಾಭಿಮಾನವಿಲ್ಲದ ರಾಜಕಾರಣಕ್ಕೆ ಪ್ರತಿಕ್ರಿಯಿಸುವ ಅಗತ್ಯವೇ ಅಡ್ವಾಣಿಯವರಂತಹ ಹಿರಿಯರಿಗೆ ಈಗ ಇಲ್ಲ.

ಆದರೆ ಆಘಾತ- ಸೋಲು- ದೂಷಣೆಗಳೇ ಹೆಚ್ಚಿರುವ ತಮ್ಮ ದೀರ್ಘ ರಾಜಕೀಯ ಜೀವನದ ಮಧ್ಯೆ ತಮ್ಮ ಗೃಹಸ್ಥ ಜೀವನವನ್ನು ಸಿನೆಮಾ- ಸಂಗೀತ- ಸಾಹಿತ್ಯದಂತಹ ಸರಳ ಸಂತೋಷಗಳ ಮೂಲಕ ಜೀವಂತವಾಗಿಟ್ಟುಕೊಂಡು ಎಂಭತ್ತು ವರ್ಷಗಳನ್ನು ಯಶಸ್ವಿಯಾಗಿ ದಾಟಿರುವ ವಯೋವೃದ್ಧ ಅಡ್ವಾಣಿ, ಊರಲ್ಲಿದ್ದೂ ತಮ್ಮ ಆತ್ಮಕತೆ ಪುಸ್ತಕದ ಬಿಡುಗಡೆ ಸಮಾರಂಭಕ್ಕೆ ಬರದಿದ್ದ ಸೋನಿಯಾ ಗಾಂಧಿಯವರ ಮನೆಗೆ ಒಂದೆರಡು ದಿನಗಳಲ್ಲೇ ಹೋಳಿ ಹಬ್ಬದ ನೆಪದಲ್ಲಿ ತಾವೇ ಹೋಗಿ ಶುಭಾಶಯ ಹೇಳಿ ಬಂದಿರುವ ಪ್ರಬುದ್ಧ ಮನಸ್ಸಿನ ಅಡ್ವಾಣಿ; ರಾಷ್ಟ್ರದ ವರ್ತಮಾನದ ಸಂದಿಗ್ಧಗಳನ್ನು ನಿವಾರಿಸಿಕೊಳ್ಳಲು,

ತಮ್ಮ ಪಕ್ಷದ ರಾಜಕೀಯ ಚರಿತ್ರೆಯ ಅಹಂಕಾರದ ಹಂಗುಗಳನ್ನು ಮೀರಬಲ್ಲರೇ? ಅದಕ್ಕಾಗಿ ಅವರು ತಮ್ಮ ಪಕ್ಷವನ್ನು ಸಿದ್ಧಪಡಿಸಬಲ್ಲರೇ? ಅದೇ ಎಲ್ಲ ರಾಜಕಾರಣದ ಆತ್ಯಂತಿಕ ಜಯವೂ ಅಲ್ಲವೇ? ಆ ಅರಿವು, ಆ ಧೈರ್ಯ, ಆ ತ್ಯಾಗ ರಾಷ್ಟ್ರದ ಅತ್ಯಂತ ಹಿರಿಯ ಕ್ರಿಯಾಶೀಲ ರಾಜಕಾರಣಿಯಾದ ಅಡ್ವಾಣಿಯವರಿಗೆ ಸಾಧ್ಯವೇ? ತಮ್ಮ ಬದುಕಿನ ಕೊನೆಯ ಘಳಿಗೆಯ ಈ ಅಗ್ನಿ ಪರೀಕ್ಷೆಯನ್ನು ಅವರು ನಿಜವಾಗಿ ಗೆಲ್ಲಬಲ್ಲರೇ?

'ಮೈ ಕಂಟ್ರಿ, ಮೈ ಲೈಫ್' ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಹಾಜರಿದ್ದ ಕೆಲವರನ್ನಾದರೂ ಈ ಪ್ರಶ್ನೆಗಳು ಕಾಡಿದ್ದರೆ ಆಶ್ಚರ್ಯವಿಲ್ಲ.

ಏಪ್ರಿಲ್ ೧೧, ೨೦೦೮

ಕನ್ನಡಕ್ಕಿದು ಕಷ್ಟ ಕಾಲ

ಅಂತೂ ಹೊಗೇನಕಲ್ ವಿವಾದ ತಾತ್ಕಾಲಿಕವಾಗಿಯಾದರೂ ಅಂತ್ಯ ಕಂಡಿದೆ. ಬಹುಶಃ ಸೋನಿಯಾ ಗಾಂಧಿ ಹಾಗೂ ಮನಮೋಹನ ಸಿಂಗರ ಮಧ್ಯಸ್ಥಿಕೆಯಿಂದಾಗಿ ಇದು ಸಾಧ್ಯವಾಗಿದೆ. ತಮ್ಮ ಪಕ್ಷ ಭಾಗವಹಿಸಿರುವ *ಸಂಯುಕ್ತ ಪ್ರಗತಿ ರಂಗ*ವೆಂಬ (ಯುಪಿಎ) ಮೈತ್ರಿಕೂಟದ ಧರ್ಮ ಪರಿಪಾಲಿಸುವ ಒತ್ತಡಕ್ಕೆ ಸಿಲುಕಿ ಕರುಣಾನಿಧಿಯವರು ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನು ಕರ್ನಾಟಕದಲ್ಲಿ ಚುನಾಯಿತ ಸರ್ಕಾರ ಅಧಿಕಾರಕ್ಕೆ ಬರುವವರೆಗೆ ತಡೆ ಹಿಡಿದಿರುವುದಾಗಿ ಪ್ರಕಟಿಸಿದ್ದಾರೆ. ಇದನ್ನು ಈಗ ರಾಜಕೀಯ ಮುತ್ಸದ್ದಿತನದ ನಿರ್ಧಾರವೆಂದು ಕರೆಯಬಹುದಾದರೂ, ಈ ನಿರ್ಧಾರ ಪ್ರಕಟವಾಗುವ ಮುನ್ನ ಎರಡೂ ರಾಜ್ಯಗಳ ನಡುವೆ ಉಂಟಾದ ಉದ್ವಿಗ್ನತೆ, ಕಹಿ ಭಾವನೆಗಳು ಮತ್ತು ಇದರಿಂದ ಎರಡೂ ಕಡೆ ಸಂಭವಿಸಿದ ಪುಂಡಾಟಿಕೆಯ ಘಟನೆಗಳಿಗೆ ಯಾರು ಜವಾಬ್ದಾರರು ಎಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕಾಗುತ್ತದೆ. ಹಾಗೇ, ತಮಿಳರು ಮತ್ತು ಕನ್ನಡಿಗರ ನಡುವೆ ಪದೇ ಪದೇ ಈ ತರಹದ ಘರ್ಷಣೆಗಳು ಏಕೆ ತಲೆದೋರುತ್ತವೆ ಮತ್ತು ಕರ್ನಾಟಕ ಏಕೀಕರಣದ ನಂತರ ಕಟ್ಟಿಕೊಂಡ ಕನ್ನಡ ಚಳುವಳಿಗಳ ಪ್ರಚೋದಕ ಶಕ್ತಿ ಮುಖ್ಯವಾಗಿ ಏಕೆ ತಮಿಳು ವಿರೋಧವೇ ಆಗಿದೆ ಎಂಬ ಪ್ರಶ್ನೆಗಳನ್ನೂ.

ಇತ್ತೀಚೆಗೆ ಪ್ರಕಟಗೊಂಡ ಡಾ॥ ಷ.ಶೆಟ್ಟರ್ ಅವರ '*ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ*' ಪುಸ್ತಕವು ಕನ್ನಡ ಭಾಷೆ ಹಾಗೂ ಸಂಸ್ಕೃತಿ ಚರಿತ್ರೆಯನ್ನು ಈವರೆಗೆ ನಮ್ಮ ಗಮನಕ್ಕೆ ಬಾರದಿದ್ದ ನೆಲೆಗಳ ಆಧಾರದ ಮೇಲೆ ಪುನಾರಚಿಸುವ ಅಗತ್ಯವನ್ನು ಮನಗಾಣಿಸುತ್ತದೆ. ಮುಖ್ಯವಾಗಿ ಈ ಪುಸ್ತಕ ಕನ್ನಡವನ್ನು ಕಟ್ಟಿದ್ದೆಂದು ಈವರೆಗೆ ನಾವು ಭಾವಿಸಿರುವ ಕನ್ನಡ– ಸಂಸ್ಕೃತ 'ಬಾಂಧವ್ಯ'ಕ್ಕಿಂತ ಮೂಲಭೂತವಾದ ಹಾಗೂ ಅರ್ಥಪೂರ್ಣವಾದ ಕನ್ನಡ– ತಮಿಳು 'ಬಾಂಧವ್ಯ'ವನ್ನು ನಮಗೆ ಎತ್ತಿ ತೋರಿಸುತ್ತದೆ.

ಆದಿ ತಮಿಳಿನ ಮತ್ತು ತಮಿಳು 'ಪ್ರದೇಶ'ದ (ತಮಿಳಗಂ) ಒಡನಾಟದಲ್ಲೇ ಒಡಮೂಡಿದ ಕನ್ನಡ ಮತ್ತು ಕನ್ನಡ ಸಮುದಾಯ, ತಮಿಳು ತನ್ನದೇ ಲಿಪಿಯನ್ನು ಪಡೆಯುವ ಸಾಕಷ್ಟು ಮುನ್ನವೇ ತನ್ನದೇ ಲಿಪಿಯನ್ನು ಪಡೆದುಕೊಂಡಿತು. ಇದರಿಂದಾಗಿ ಕನ್ನಡವು ತಮಿಳು ಭಾಷೆ, ಸಾಹಿತ್ಯ ಮತ್ತು ರಾಜ್ಯವ್ಯವಸ್ಥೆಯ ಮೇಲೂ ಪ್ರಭಾವ ಬೀರುವಷ್ಟು ಆತ್ಮ ವಿಶ್ವಾಸದಿಂದ ಬೆಳೆದ ಒಂದು ಕಾಲ ಘಟ್ಟದ ಚರಿತ್ರೆಯನ್ನು ಷ. ಶೆಟ್ಟರ್ ಈ ಪುಸ್ತಕದಲ್ಲಿ ಅನೇಕ ಶಾಸನ ಹಾಗೂ ಸಾಹಿತ್ಯ ಕೃತಿಗಳ ಸೂಕ್ಷ್ಮ ವಿಶ್ಲೇಷಣೆಯ ಮೂಲಕ ನಮ್ಮ ಮುಂದೆ ಬೆರಗಾಗುವಂತೆ ಮಂಡಿಸುತ್ತಾರೆ. ಆ ಮೂಲಕ ಪರೋಕ್ಷವಾಗಿ; ಕನ್ನಡ ಕುಲ ಮೂಲದ ನಿಜ ಚರಿತ್ರೆ ಹೀಗಿದ್ದರೂ, ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಚರಿತ್ರೆಯನ್ನು ಸಂಸ್ಕೃತದ ಒಡನಾಟದ ಆಧಾರದ ಮೇಲೇ ಕಟ್ಟಲಾಗಿರುವ ಸಾಂಸ್ಕೃತಿಕ ರಾಜಕಾರಣದ ಕಡೆ ಅವರು ನಮ್ಮ ಗಮನ ಸೆಳೆಯುತ್ತಾರೆ.

ತಮಿಳು ಸಂಸ್ಕೃತಿ ಮತ್ತು ಕನ್ನಡ ಸಂಸ್ಕೃತಿಗಳ ನಡುವೆ ಈ ಸಾಂಸ್ಕೃತಿಕ ರಾಜಕಾರಣ ಉಂಟು ಮಾಡಿದ ಬಿರುಕೇ ಈ ದಿನಗಳ ಕನ್ನಡ– ತಮಿಳರ ಘರ್ಷಣೆಗಳ ಹಿಂದೆ ಕೆಲಸ ಮಾಡುತ್ತಿರಬಹುದೇ ಎಂಬ ಅನುಮಾನ ನನ್ನದು. ಇದೊಂದೇ ಅಲ್ಲ. ಇನ್ನೂ ಒಂದು ಮುಖ್ಯ ಸಂಗತಿ ಇದರ ಹಿಂದೆ ಕೆಲಸ ಮಾಡುತ್ತಿರಬಹುದೇ ಎಂಬ ಅನುಮಾನವೂ ಇದೆ: ಮೂರನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತ. ಇದರ ಪರಿಣಾಮವಾಗಿ ಬ್ರಿಟಿಷರು ಚಾರಿತ್ರಿಕ ಕನ್ನಡ ನಾಡಿನ ಕೊನೆಯ ರೂಪ ಎನ್ನಬಹುದಾದ ಮೈಸೂರು ಸಂಸ್ಥಾನವನ್ನು ಮೂರು ಭಾಗಗಳಾಗಿ ಛಿದ್ರ ಮಾಡಿದರು. ಒಂದು ಭಾಗ ಬ್ರಿಟಿಷ್ ಆಡಳಿತದ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದಾಗ, ಬ್ರಿಟಿಷರು ಅಲ್ಲಿಂದ ತಮಿಳು– ತೆಲುಗರನ್ನು ಭಾರಿ ಪ್ರಮಾಣದಲ್ಲಿ ದುಡಿಮೆಗಾಗಿ ಇಲ್ಲಿಗೆ ಸಾಗಿಸಿದರು. ಈ ರಾಜಕೀಯ ದುರುದ್ದೇಶದ ಆಯೋಜಿತ ವಲಸೆ ಮೈಸೂರು ಕನ್ನಡಿಗರ ಮಧ್ಯೆ ಉಂಟು ಮಾಡಿದ ಸಾಂಸ್ಕೃತಿಕ ಆಘಾತದ ಸುಪ್ತ ನೆನಪುಗಳೂ ಇಲ್ಲಿ ಕೆಲಸ ಮಾಡುತ್ತಿರಬಹುದು. ಹಾಗಾಗಿಯೇ ಕನ್ನಡ ಚಳುವಳಿ ತಮಿಳರು ಗಣನೀಯ ಸಂಖ್ಯೆಯಲ್ಲಿರುವ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲೇ ತನ್ನನ್ನು ವಿವಿಧ ರೂಪಗಳಲ್ಲಿ ಕಟ್ಟಿಕೊಂಡು, ತಮಿಳರನ್ನು ತನ್ನ ದೃಷ್ಟಿಕೇಂದ್ರವನ್ನಾಗಿ ಮಾಡಿಕೊಂಡಿದೆ. ಕನ್ನಡ ಚಳುವಳಿಯ ಈ ತಮಿಳು ವ್ಯಸನದಿಂದಾಗಿ ಇತರ ಭಾಷಾ ಸಮುದಾಯಗಳು– ಉದಾ: ಮಲೆಯಾಳಿಗಳು, ಹಿಂದೀಯರು, ಇತ್ತೀಚೆಗೆ ರಾಜಸ್ಥಾನಿಗಳು ಮತ್ತು ಬಿಹಾರಿಗಳು– ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ವಲಸೆ ಬಂದು ನೆಲೆಗೊಂಡು ಇಲ್ಲಿನ ಜನ ಸಮುದಾಯದೊಂದಿಗೆ ಬೆರೆಯುವ ಪ್ರಕ್ರಿಯೆಯಲ್ಲಿ ತೊಡಗದೇ ಹೋಗಿರುವುದು ಯಾರ ಗಮನಕ್ಕೂ ಬಾರದೆ ಹೋಗಿ, ತಮಿಳರು ತಮಿಳರಾಗಿಯೇ ಉಳಿದಿರುವುದು ಮಾತ್ರ ಈ ಕನ್ನಡ ಚಳುವಳಿಕಾರರನ್ನು ಬಾಧಿಸುವ ದೊಡ್ಡ ಸಮಸ್ಯೆಯಾಗಿದೆ! ಕನ್ನಡ ಚಳುವಳಿಯ ಈ ದೃಷ್ಟಿದೋಷದಿಂದಾಗಿ ಕನ್ನಡದ ಪೂರ್ವ ಗಡಿ ಪೂರ್ತಾ ರಾಜಕೀಯವಾಗಿ (ಇದೇ ಅಂತಿಮ ಹಂತ ತಾನೇ?) ತೆಲುಗರ ವಶವಾಗುತ್ತಿರುವುದು ಯಾರಿಗೂ ದೊಡ್ಡ ಸಮಸ್ಯೆಯಾಗಿ ಕಾಣುತ್ತಿಲ್ಲ. ಇದು ಕನ್ನಡ ಚಳುವಳಿಯ ಇಂದಿನ ದುರಂತ.

ಈ ದುರಂತಕ್ಕೆ ಕಾರಣ, ಕನ್ನಡ ಚಳುವಳಿಯು ಕನ್ನಡನಾಡಿನ ಛಿದ್ರೀಕರಣದ ಚರಿತ್ರೆಯ ಗಾಯಗಳ ನೆನಪಿನ ಜಾಲದಲ್ಲಿ ಸಿಕ್ಕಿಬಿದ್ದಿದ್ದು (ಹಾಗಾಗಿಯೇ ಏನೋ, ಅದು ನೋವು ನಿವಾರಕವೆಂಬಂತೆ ಕರ್ನಾಟಕದ ಗತವೈಭವವನ್ನು ಅಷ್ಟು ಮೆರೆಸುವುದು!) ವರ್ತಮಾನದ ಕನ್ನಡದ ನಿಜ– ಬೇರು ಮಟ್ಟದ– ಸಮಸ್ಯೆಗಳ ಕಡೆ ಗಮನವನ್ನೇ ಕೊಡದೇ ಹೋಗಿರುವುದು. ಕನ್ನಡ ಚಳುವಳಿಯು ಕನ್ನಡದ ಅಸ್ಮಿತೆಗೆ, ಅದರ ಅಳಿವು– ಉಳಿವುಗಳಿಗೆ ಆಧಾರಭೂತವಾಗಿರುವ, ಶಿಕ್ಷಣದಲ್ಲಿನ ಕನ್ನಡದ ಪ್ರಶ್ನೆ ಅಥವಾ ಗಣಕ ಯಂತ್ರಜ್ಞಾನದಲ್ಲಿನ ಕನ್ನಡದ ಪ್ರಶ್ನೆಯನ್ನು ಎಂದಾದರೂ ಕೈಗೆತ್ತಿಕೊಂಡಿರುವುದನ್ನು ಕಂಡಿದ್ದೀರಾ? ಶಾಲಾ ಶಿಕ್ಷಣದ ಒಂದು ಹಂತದವರೆಗಾದರೂ ಕರ್ನಾಟಕದಲ್ಲಿ ಕನಿಷ್ಠ ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಬಹುದೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ್ನು ಜಾರಿಗೆ ತರುವಂತೆ ಇವರೆಂದಾದರೂ ಸರ್ಕಾರದ ಮೇಲೆ ಒತ್ತಡ ಹಾಕಿದ್ದುಂಟಾ? ಈ ತೀರ್ಪಿಗೆ ತಡೆಯಾಜ್ಞೆತಂದ ಬೆಂಗಳೂರಿನ ಖಾಸಗಿ ಶಾಲಾ ಸಾಮ್ರಾಜ್ಯದ ವಿರುದ್ಧ ಮತ್ತು ಈ ತಡೆಯಾಜ್ಞೆಯನ್ನು ತೆರವುಗೊಳಿಸುವ ಆಸಕ್ತಿಯನ್ನೇ ತೋರದ ಕರ್ನಾಟಕ ಸರ್ಕಾರದ ವಿರುದ್ಧ ಇವರೇಕೆ ಚಳುವಳಿ ಹೂಡದೇ ಹೋದರು?

ಈ ಮಧ್ಯೆ ಬೆಂಗಳೂರು ಕೇಂದ್ರಿತವಾದ ಕನ್ನಡದ್ದೇ ಆದ ಒಂದು ಗುಂಪು ಚಾರಿತ್ರಿಕ ಸನ್ನಿವೇಶವೇ ಬದಲಾಗಿದೆ ಎಂದು ವಾದಿಸುತ್ತಾ, ದಲಿತ ಮತ್ತು ಹಿಂದುಳಿದ ವರ್ಗಗಳ ಹಿತಾಸಕ್ತಿಯ ಹೆಸರಲ್ಲಿ; ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಬೋಧಿಸುವ ಆಜ್ಞೆಯನ್ನು ಸರ್ಕಾರ ಹೊರಡಿಸುವಂತೆ (ಸರ್ಕಾರವೂ ಇಂತಹ ಒತ್ತಡಕ್ಕೆ ಕಾಯುತ್ತಿತ್ತೋ ಅಥವಾ ಅದೇ ಇಂತಹ ಒತ್ತಡವನ್ನು ಸೃಷ್ಟಿಸಿತೋ ಇನ್ನೂ ತಿಳಿಯದು!) ಸತತ ಒತ್ತಡ ಹೇರಿತು. ಇದರಲ್ಲಿ ಅದು ಯಶಸ್ವಿಯಾದಾಗ ಈವರೆಗೆ ಕನ್ನಡ ಹೋರಾಟದ ಕೇಂದ್ರ ಕಳಕಳಿಯಾಗಿದ್ದ ಕನ್ನಡ ಶಿಕ್ಷಣದ ಪ್ರಶ್ನೆಯೇ ಅಪ್ರಸ್ತುತ ಹಾಗೂ ಅಸಂಗತವಾಗಿ ಹಿನ್ನೆಲೆಗೆ ಸರಿಯುವಂತಾಯಿತು. ಆಗ ಕನ್ನಡ ಮತ್ತು ಕನ್ನಡ ಸಮಾಜಕ್ಕೆ ಸಂಬಂಧಿಸಿದಂತೆ ಇದರ ಮುಂದಿನ ಪರಿಣಾಮಗಳೇನು ಎಂಬುದರ ಬಗ್ಗೆ ಯೋಚಿಸುವ ತಾಕತ್ತನ್ನೇ ಕಳೆದುಕೊಂಡಂತೆ ಈ ಚಳುವಳಿಗಳು ನಿಷ್ಕ್ರಿಯುವಾಗಿದ್ದುದಾದರೂ ಯಾಕೆ? ರಾಜ್ಯ ಸರ್ಕಾರದ ಅನಾಸಕ್ತಿಯಿಂದಾಗಿ ಹದಿಮೂರು ವರ್ಷಗಳವರೆಗೆ ತಡೆಯಾಜ್ಞೆಗೆ ಸಿಕ್ಕಿ ನೆನೆಗುದಿಗೆ ಬಿದ್ದಿದ್ದ ಸರ್ವೋಚ್ಚ ನ್ಯಾಯಾಯಲಯದ ತೀರ್ಪು ಕೊನೆಗೂ ವಿಚಾರಣೆಗೆ ಬಂದು, ವಿಚಾರಣೆ ಮುಗಿದು ಒಂದು ವರ್ಷದ ಮೇಲಾಯಿತು. ಆದರೂ ನಮ್ಮ ಉಚ್ಚ ನ್ಯಾಯಾಲಯದಿಂದ ಆ ಬಗೆಗಿನ ತೀರ್ಪು ಹೊರಬರದಿರುವ 'ವಿಶಿಷ್ಟ ಸನ್ನಿವೇಶ'ದ ಕಡೆ ಈ ಚಳುವಳಿಗಳ ಗಮನವೇಕೆ ಹರಿದಿಲ್ಲ? ಏಕೆಂದರೆ, ವ್ಯಕ್ತಿಗತ ಖಾಸಗಿ ಕಂಪನಿಗಳಂತೆ ಬೆಳೆದಿರುವ ಈ ಚಳುವಳಿಗಳು ರೂಪಿತವಾಗಿರುವುದೇ ಮೂಲತಃ ಅನ್ಯರ ವಿರುದ್ಧ. ಹೀಗಾಗಿ, ಇಂದು ಕನ್ನಡ ಚಳುವಳಿ ತನ್ನ ವಿರುದ್ಧವೂ ಚಳುವಳಿ ಹೂಡಬೇಕಾದ ಸಾಧ್ಯತೆಗಳ ಅರಿವಿರದ,

ಸಂಪೂರ್ಣ ಹೊರ ಹೋರಾಟದ– ಬರೀ ಗಲಾಟೆ ಹುಟ್ಟಿಸುವ– ಚಳುವಳಿಯಾಗಿ ಮೂಡಿ ನಿಂತಿದೆ.

ಕನ್ನಡವನ್ನು ಕೈ ಬಿಡುವುದು ಅನಿವಾರ್ಯವೆಂದು ಕನ್ನಡಿಗರೇ ಹೇಳುವಂತಾಗಿರುವ ಈ 'ಬದಲಾದ ಚಾರಿತ್ರಿಕ ಸನ್ನಿವೇಶ'ದಲ್ಲಿ ಕನ್ನಡ ಚಳುವಳಿಯ ಮೂಲ ಆಶಯಗಳೇ ಸಂಪೂರ್ಣ ಬದಲಾಗಬೇಕಿತ್ತು. ಆದರೆ ಹಾಗಾಗದೇ ಅದು, ಕನ್ನಡವನ್ನು ಕೈಬಿಟ್ಟು ಇಂಗ್ಲಿಷ್–ಹಿಂದಿಗಳನ್ನು ತಮ್ಮ ವ್ಯಕ್ತಿತ್ವದ ಹಿರಿಮೆ– ಗರಿಮೆಗಳನ್ನಾಗಿ ಮಾಡಿಕೊಳ್ಳಲು ಹಾತೊರೆಯುತ್ತಿರುವ 'ಕನ್ನಡಿಗ'ರ ನೆಲ ಜಲಗಳಿಗಾಗಿ ಹೋರಾಟ ಮಾಡುವುದನ್ನು ತನ್ನ ಗುರಿಯಾಗಿಸಿಕೊಂಡಿರುವ ವಿಪರ್ಯಾಸವನ್ನು ನಾವಿಂದು ನೋಡುತ್ತಿದ್ದೇವೆ. ಇದರ ಅಂತಿಮ ಪರಿಣಾಮವೆಂದರೆ, ತಮಿಳರ ಸ್ವಭಾವಕ್ಕೆ ವಿರುದ್ಧವಾಗಿ ಅನ್ಯರ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗುವ ಚಾರಿತ್ರಿಕ ದೌರ್ಬಲ್ಯವುಳ್ಳ ಕನ್ನಡಿಗರು ತಮ್ಮ ನೆಲ ಜಲಗಳನ್ನು ಹಿಂದಿ–ಇಂಗ್ಲಿಷ್‌ಗಳ ನವ ಸಾಮ್ರಾಜ್ಯಶಾಹಿಯ ವಶಕ್ಕೆ (ಅಂದರೆ ರಾಷ್ಟ್ರೀಯ–ಬಹುರಾಷ್ಟ್ರೀಯ ಕಂಪನಿ ವ್ಯಾಪಾರಿಗಳಿಗೆ) ಬಿಟ್ಟುಕೊಡುವಂತಹ, ಕನ್ನಡದ ಬೇರುಗಳೇ ನಿರ್ನಾಮವಾಗುವಂತಹ ವಾತಾವರಣ ಮುಂದಿನ ದಿನಗಳಲ್ಲಿ ನಿರ್ಮಾಣವಾಗಲಾರಂಭಿಸುವುದು. ಈ ಅಪಾಯಕ್ಕೆ ಮುಖ್ಯ ಕಾರಣ, ಕನ್ನಡ ಚಳುವಳಿ ಈಗ ಮೂಲತಃ ನಗರ ಕೇಂದ್ರಿತ ಮಧ್ಯಮ ಮತ್ತು ಕೆಳ ಮಧ್ಯಮ ಜಾತಿಗಳ ಚಳುವಳಿಯಾಗಿರುವುದು. ಅದು ರೈತರು, ದಲಿತರು, ಕಾರ್ಮಿಕರು, ಪರಿಸರವಾದಿಗಳು– ಹೀಗೆ ಕನ್ನಡದ ವಿವಿಧ ಚಲನಶೀಲ ಹಾಗೂ ಮುಖ್ಯವಾಹಿನಿಯ ಚಳುವಳಿಗಳನ್ನು ಒಳಗೊಂಡು ಬೆಳೆಯುವಂತಾಗಿದ್ದರೆ ತನ್ನ ಬುಡವನ್ನೇ ಕತ್ತರಿಸುವ ಕೊಡಲಿಗೆ ತಾನೇ ಕಾವಾಗುವಂತಹ ಈ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಿರಲಿಲ್ಲ.

ಈ ಇಕ್ಕಟ್ಟಿನಿಂದ ಕನ್ನಡ ಚಳುವಳಿಯನ್ನು ಪಾರುಮಾಡಬಲ್ಲುದಾಗಿದ್ದುದು ಕನ್ನಡ ಬುದ್ಧಿಜೀವಿ ವರ್ಗ. ಆದರೆ ಗೋಕಾಕ್ ಚಳುವಳಿಯವರೆಗೆ ಕನ್ನಡ ಚಳುವಳಿಯೊಂದಿಗೆ ಸ್ಥೂಲವಾಗಿಯಾದರೂ ಗುರುತಿಸಿಕೊಂಡಿದ್ದ ಈ ವರ್ಗ ಇತ್ತೀಚಿನ ವರ್ಷಗಳಲ್ಲಿ ಕಾಲಧರ್ಮಕ್ಕನುಸಾರವಾಗಿಯೋ ಏನೋ, ಜಾಗತೀಕರಣದ ಇಕ್ಕಟ್ಟಿಗೆ ಸಿಲುಕಿಕೊಂಡಿರುವ ಮಧ್ಯಮ ವರ್ಗದವರ ಕಷ್ಟ ಸುಖಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳಲಾರಂಭಿಸಿದೆ. ಹಾಗೇ, ಕನ್ನಡ ಚಳುವಳಿ, ರೈತ ಚಳುವಳಿ ಹಾಗೂ ಪರಿಸರ ಚಳುವಳಿಗಳು ಕೈಬಿಟ್ಟ ದಲಿತ ವರ್ಗವನ್ನು ಮುಂದೆ ಮಾಡಿಕೊಂಡು, ಕನ್ನಡವನ್ನು ಜಾಗತೀಕರಣದ ಇಕ್ಕಟ್ಟುಗಳಿಂದ ಪಾರುಮಾಡಲು ಇಂಗ್ಲಿಷ್‌ನೊಡನೆ ಅನುಸಂಧಾನ ನಡೆಸುವುದೇ ಶ್ರೇಷ್ಠ ಮಾರ್ಗವೆಂದು ಅದು ಪ್ರತಿಪಾದಿಸತೊಡಗಿದೆ. ಈ ವರ್ಗ ದಲಿತರಿಗೆ ಮತ್ತು ಇತರ ಶೂದ್ರರಿಗೆ ಈಗ ಶಿಕ್ಷಣ ಮತ್ತು ಆಡಳಿತಗಳಲ್ಲಿ ಬಳಸಲಾಗುತ್ತಿರುವ 'ಪ್ರಮಾಣಿತ'– ಶಿಷ್ಟ– ಕನ್ನಡ ಕ್ಲಿಷ್ಟವೂ, ಸಾಮಾಜಿಕವಾಗಿ ಕೀಳರಿಮೆ ಉಂಟುಮಾಡುವಂತಹದಾಗಿದ್ದು; ಅವರು ಇವುಗಳಿಂದ ಪಾರಾಗಲು ಇಂಗ್ಲಿಷ್ ಶಿಕ್ಷಣವನ್ನು ಬಯಸತೊಡಗಿದ್ದಾರೆಂಬ ವಿಚಿತ್ರ ವಾದದ ಮೂಲಕ

ಕನ್ನಡ ಶಿಕ್ಷಣದ ಹಿಂದಿರುವ ತಾತ್ವಿಕತೆ ಹಾಗೂ ನೈತಿಕತೆಗಳಿಗೆ ಮತ್ತು ಆ ಮೂಲಕ ಕನ್ನಡ ಸಮಾಜದ ಮೂಲ ಅಸ್ಮಿತೆಗೇ ಕೊಡಲಿ ಪೆಟ್ಟು ಹಾಕತೊಡಗಿದೆ.

ಈ ವಿಷಯ ಕಳೆದ ೫ ಹಾಗೂ ೬ರಂದು ಶಿವಮೊಗ್ಗದಲ್ಲಿ ನಡೆದ 'ನಮಗೆ ಬೇಕಾದ ಕನ್ನಡ' ಎಂಬ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ (ಇದನ್ನು ಆಯೋಜಿಸಿದ್ದುದು ಮುಖ್ಯವಾಗಿ, ಕುವೆಂಪು ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘ) ಬಹು ಆಯಾಮಗಳಲ್ಲಿ ಚರ್ಚಿತವಾಯಿತು. ಕನ್ನಡದ ತಮಿಳು ಒಡನಾಟದ ಬಗ್ಗೆ ಇತ್ತೀಚೆಗೆ ಹೊಸ ಬೆಳಕು ಚೆಲ್ಲಿರುವ ಷ. ಶೆಟ್ಟರ್, ಕನ್ನಡದಲ್ಲಿನ ಆಧುನಿಕ 'ತೋಂಡಿ' ಸಂಪ್ರದಾಯದ ಪಿತಾಮಹರೆನಿಸಿರುವ ಕಿ.ರಂ. ನಾಗರಾಜ ಹಾಗೂ ಕನ್ನಡದ ಆಧುನಿಕ ಭಾಷಾಶಾಸ್ತ್ರಜ್ಞರೆನಿಸಿರುವ ಕೆ.ವಿ. ನಾರಾಯಣ ಮುಖ್ಯವಾಗಿ ಈ ಸಂಕಿರಣದ ಸಂಪನ್ಮೂಲ ವ್ಯಕ್ತಿಗಳು. ವಿಚಾರ ಸಂಕಿರಣದ ಭಾಗವಾಗಿ ಇವರೆಲ್ಲರ ಎದುರಿನಲ್ಲಿ ನಾನು ಮೇಲೆ ವಿವರಿಸಿದಂತಹ ಕನ್ನಡಕ್ಕೊದಗಿರುವ ಬಿಕ್ಕಟ್ಟಿನ ಬಗ್ಗೆ ಮಾತನಾಡಿದಾಗ ಅದು ಬಿಸಿ ಬಿಸಿ ಚರ್ಚೆಗೆ ಕಾರಣವಾಯಿತು, ಕೆ.ವಿ. ನಾರಾಯಣರ ಇತ್ತೀಚಿನ 'ಕನ್ನಡ ಜಗತ್ತು:ಅರ್ಧ ಶತಮಾನ' ಎಂಬ ಪುಸ್ತಕವೇ ಕನ್ನಡದ ಇಂದಿನ ಬಿಕ್ಕಟ್ಟನ್ನು ಸಮರ್ಥವಾಗಿ ಬಿಂಬಿಸುತ್ತದೆ ಎಂದು ಕಿ.ರಂ. ಪ್ರತಿಪಾದಿಸತೊಡಗಿದಾಗ ಅದನ್ನು ನಾನು ತೀವ್ರವಾಗಿಯೇ ವಿರೋಧಿಸಬೇಕಾಯಿತು. ಏಕೆಂದರೆ ಸದಾ ಇತರ ಭಾಷೆಗಳ (ತಮಿಳು,ಸಂಸ್ಕೃತ, ಪರ್ಷಿಯನ್, ಇಂಗ್ಲಿಷ್, ಈಗ ಅಮೆರಿಕನ್) ಮುಖಾಮುಖಿಯಲ್ಲೇ ಉಳಿದು ಬೆಳೆಯುವ ಸಂಕಟದಲ್ಲೇ ತನ್ನ ಚರಿತ್ರೆಯನ್ನು ಕಟ್ಟಿಕೊಳ್ಳುತ್ತಾ ಬಂದಿರುವ ಕನ್ನಡ, ತನ್ನ ನಿಜವಾದ ಸ್ವಾಯತ್ತತೆಯನ್ನು ಸ್ಥಾಪಿಸಿಕೊಳ್ಳುವ ಹೋರಾಟದಲ್ಲಿ ಎಲ್ಲ ಅಡೆ ತಡೆಗಳನ್ನೂ ದಾಟಿ; ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಮೂಲಕ ಒಂದು ಹಂತದವರೆಗಾದರೂ ಶಿಕ್ಷಣದ ಭಾಷೆಯಾಗಿ ಸ್ಥಾಪಿತವಾಗುವ ಸಂದರ್ಭ ಒದಗಿ ಬಂದಾಗ, ಅದನ್ನು ತಮ್ಮ 'ಒಂದನೇ ತರಗತಿಯಿಂದ ಇಂಗ್ಲಿಷ್' ಚಳುವಳಿಯ ಮೂಲಕ ಹಾಳು ಮಾಡಲು ಒಟ್ಟುಗೂಡಿದ ಹೊಸ ಪಟ್ಟಭದ್ರರ ಎಲ್ಲ ವಾದಗಳಿಗೂ ನನ್ನ ಪ್ರಕಾರ ಈ ಪುಸ್ತಕ ತಾನು ವಿನ್ಯಾಸಗೊಳಿಸಿಕೊಂಡಿರುವ ತಾತ್ವಿಕತೆ ಮತ್ತು ಶೈಲಿಯ ಮೂಲಕ ಒಂದು ಸಾಧುತ್ವವನ್ನು ಒದಗಿಸಲು ಹವಣಿಸುತ್ತದೆ.

ಈ ಪುಸ್ತಕ ಹೇಳುವ ಅತಿಯಾದ ಸಂಸ್ಕೃತೀಕರಣದಿಂದ ಕನ್ನಡ ಭಾಷೆಯ ರಚನೆ ಮತ್ತು ಲಿಪಿಗಳಲ್ಲಿ ಉಂಟಾಗಿರುವ ಸಾಮಾಜಿಕ ನೆಲೆಯ ತೊಡಕುಗಳು ಇಂದಿನ ಸಂದರ್ಭದಲ್ಲಿ ಈ ಭಾಷೆ ಬೆಳೆಯಲು ಇರುವ ತೊಂದರೆಗಳಾಗಿವೆ ಎಂಬುದನ್ನು ನಾನು ಒಪ್ಪುವೆ. ಆದರೆ, ಇವನ್ನು ಹಿರಿಯರಾದ ಡಿ.ಎನ್. ಶಂಕರಭಟ್ಟರು ಈಗಾಗಲೇ ಪ್ರತಿಪಾದಿಸಿರುವ ಹಾದಿಯಲ್ಲಿ ಸರಿಪಡಿಸಿಕೊಳ್ಳುವ ರೀತಿಯಲ್ಲಿ ಭಾಷಾ ಆಂದೋಲನವನ್ನು ಸಾಮಾಜಿಕವಾಗಿ ಪುನರ್ರೂಪಿಸಬೇಕೆಂದು ಹೇಳುವವನು ನಾನು. ಬದಲಿಗೆ, ಈ ಇಕ್ಕಟ್ಟನ್ನು ಇಂಗ್ಲಿಷ್ ಶಿಕ್ಷಣದ ಹಪಾಹಪಿಯನ್ನು ಪ್ರತ್ಯಕ್ಷವಾಗಿಯಲ್ಲದಿದ್ದರೂ (ಅದಕ್ಕೂ ಧೈರ್ಯ ಬೇಕಾದ ಸ್ಥಿತಿ ಇನ್ನೂ ಉಳಿದಿದೆ ಎಂಬುದೇ ಸದ್ಯದ ಸಂತೋಷದ ಸಂಗತಿ!) ಪರೋಕ್ಷವಾಗಿ ಬೆಂಬಲಿಸುವ

ವಾದಗಳನ್ನು ಮಂಡಿಸಲು ಸುಲಭದ ದಾರಿಯಾಗಿ ಬಳಸಿಕೊಳ್ಳಬಾರದು. ಆದರೆ, ಈ ಪುಸ್ತಕದಲ್ಲಿ ಕೆ.ವಿ. ನಾರಾಯಣರು ಹಾಗೆ ಮಾಡಿರುವುದು ನನಗೆ ಕಂಡಿದೆ. ಏಕೆಂದರೆ, 'ಅಂತಸ್ಥ ಜಾಗತಿಕ ವ್ಯಾಕರಣ'ವೆಂಬ ಸಿದ್ಧಾಂತದ ಆಧಾರದ ಮೇಲೆ ಇಲ್ಲಿ ಅವರು ಮಂಡಿಸಿರುವ ಹಲವು ವಾದಗಳು ಅನುಮಾನಾಸ್ಪದವೂ, ಪ್ರಶ್ನಾರ್ಹವೂ ಆಗಿವೆ. ಭಾಷಾ ಪರಿಸರದ ಪ್ರಸ್ತಾಪವೇ ಇಲ್ಲದೆ, ಒಂದು ಮಗು ಎಷ್ಟು ಭಾಷೆಗಳನ್ನಾದರೂ ಕಲಿಯಬಲ್ಲುದು, ಶಿಕ್ಷಣ ಮಾಧ್ಯಮಕ್ಕೂ ಕಲಿಕೆಗೂ ಸಂಬಂಧವಿಲ್ಲ, ಭಾಷಾ ಕಲಿಕೆಗೂ ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆಗೂ ಸಂಬಂಧವಿಲ್ಲ, ಕನ್ನಡ ತನ್ನ ಸಹಭಾಷೆಗಳ (ತುಳು, ಕೊಂಕಣಿ, ಕೊಡವ) ಜೊತೆ ಯಾಜಮಾನ್ಯ ಸಂಬಂಧಗಳನ್ನು ಬೆಳೆಸಿಕೊಂಡು ಆ ಭಾಷೆಗಳ ಸಹಜ ಬೆಳವಣಿಗೆಗೆ ಅಡ್ಡಿಯಾಗಿದೆ ಮುಂತಾದ ಇವರ ವಾದಗಳನ್ನು ಪ್ರಶ್ನೆಗಳಿಲ್ಲದೆ ಒಪ್ಪಿಕೊಂಡುಬಿಟ್ಟರೆ, ಕನ್ನಡ ಚಳುವಳಿಯ– ಈಗಾಗಲೇ ಕ್ಷೀಣ ಸ್ಥಿತಿ ತಲುಪಿರುವ– ಹೃದಯವೇ ನಿಂತು ಹೋದಂತಾಗುತ್ತದೆ.

ಕನ್ನಡದ ಇಂತಹ ಹೃದಯ ಸ್ತಂಭನವನ್ನು ನಾರಾಯಣರು-ಬಯಸಲಾರರು ಎಂಬ ನಂಬಿಕೆಯಿಂದಲೇ ನಾನು ನನ್ನ ವಿಚಾರಗಳನ್ನು ಮಂಡಿಸಿದ್ದೆ. ಆದರೆ ಅವರು ನಾನು ಅವರ ವಿಚಾರಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬ ಅಸಮಾಧಾನದಲ್ಲಿದ್ದಂತಿದ್ದು, ಏನೂ ಮಾತಾಡಲಿಲ್ಲ. ಕಿ.ರಂ. ಸಹಜವಾಗಿಯೇ ಉದ್ವಿಗ್ನರಾಗಿ, ಇಂದಿನಿಂದಲೇ ನೀವು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಮುಚ್ಚಿಸಿ, ನಾವು ನಿಮ್ಮ ಜೊತೆಗಿರುತ್ತೇವೆ ಎಂದು ಘೋಷಿಸಿದರು– ಇದು ಎಲ್ಲರೂ ಸೇರಿ ಮಾಡಬೇಕಾದ ದೀರ್ಘಕಾಲಿಕ ರಾಜಕಾರಣ ಎಂಬುದನ್ನೇ ಮರೆತವರಂತೆ! ಇವರು ಕನ್ನಡದ ಮಕ್ಕಳಿಗೆ ಕನ್ನಡ ಶಿಕ್ಷಣವೆಂಬುದು ಒಂದು ಸಾಮಾಜಿಕ ನೈತಿಕತೆಯ ಹಾಗೂ ಜವಾಬ್ದಾರಿಯ ಪ್ರಶ್ನೆಯೂ ಆಗಿದೆ ಮತ್ತು ಅದಕ್ಕೆ ತಕ್ಕನಾದ ಉದ್ಯೋಗ ಮಾರುಕಟ್ಟೆ ನಿರ್ಮಾಣವಾಗುವಂತೆ ಖಚಿತಪಡಿಸಿಕೊಳ್ಳುವ ದಾರಿಗಳನ್ನು ಹುಡುಕುವುದೇ ಇಂದು ನಾವು ಮಾಡಬೇಕಾದ ನಿಜವಾದ ರಾಜಕಾರಣವೆಂಬುದನ್ನು ಮರೆತು ಜಾಗತೀಕರಣದ ರಾಜಕೀಯ ಒತ್ತಡಗಳಿಗೆ ಸುಲಭವಾಗಿ ಮಣಿದವರಂತೆ ಕಂಡು ಖೇದವೆನಿಸಿತು. ಇವರ ಇನ್ನೊಬ್ಬ ಬೆಂಬಲಿಗರು ಅಂಬೇಡ್ಕರರ ಸಂಕಟಕ್ಕೆ ಇಂಗ್ಲಿಷ್ ಹೇಗೆ ಹೊರ ದಾರಿಯನ್ನು ಕಲ್ಪಿಸಿತು ಎಂಬುದನ್ನು ವಿವರಿಸುತ್ತಾ, ನನ್ನ ವಾದ ಆರ್.ಎಸ್.ಎಸ್. ವಾದಕ್ಕೆ ಸಮೀಪವಾಗಿದೆ ಎಂದು ಎಚ್ಚರಿಸಿದರು! ಕನ್ನಡ ವಿದ್ವದ್ವಲಯದ ತಾರೆಗಳಲೊಬ್ಬರಾದ ಇವರು, ಸಂಪೂರ್ಣ ದಿವಾಳಿಯೆದ್ದ ಒಬ್ಬ ಎಡಪಂಥೀಯರಂತೆ ನನ್ನ ಮುಂದೆ ಆರ್.ಎಸ್.ಎಸ್. ಗುಮ್ಮನನ್ನು ಇರಿಸಿ ಮಾತನಾಡತೊಡಗಿದ್ದು ಗಾಬರಿ ಹುಟ್ಟಿಸಿತು. ಅಲ್ಲದೆ, ಅಂಬೇಡ್ಕರ್ ಇಡೀ ಶಾಲಾ ಶಿಕ್ಷಣವನ್ನು ಮುಗಿಸಿದ್ದು ಮರಾಠಿಯಲ್ಲಿ ಮತ್ತು ಅವರು ಇಂಗ್ಲಿಷ್ ಕಲಿತದ್ದು ಸ್ವಂತ ಪರಿಶ್ರಮದಿಂದ– ಹೆಚ್ಚಿನ ವಿದ್ವತ್ತಿಗಾಗಿ ಹಾಗೂ ರಾಜಕಾರಣಕ್ಕಾಗಿ ಎಂಬುದನ್ನು ಗಣನೆಗೇ ತೆಗೆದುಕೊಳ್ಳದೆ ಅವರು ಮಾಡಿದ ವಾದ, ಕೇವಲ ಅಮಾಯಕವಾದುದಲ್ಲವೆನ್ನಿಸಿ ಜಿಗುಪ್ಸೆಯನ್ನೂ ಹುಟ್ಟಿಸಿತು.

ಯಾರೂ, ಯಾವುದೂ ಪವಿತ್ರ ಗೋವುಗಳಲ್ಲ ಎಂದು ಸರಿಯಾಗಿಯೇ ವಾದಿಸುವ ಈ ಗುಂಪು, ಅಂಬೇಡ್ಕರರನ್ನು ಮಾತ್ರ ಪವಿತ್ರ ಗೋವಿನಂತೆ ಕಾಪಾಡಿಕೊಂಡು ತಮ್ಮ ರಾಜಕೀಯ ವಾದಗಳಿಗೆ ಬಳಸಿಕೊಳ್ಳುವ ರೀತಿಯೇ ಅವರ ವಾದಗಳ ಹಿಂದಿರುವ ಟೊಳ್ಳು ರಾಜಕಾರಣವನ್ನು ಸೂಚಿಸುತ್ತದೆ ಎಂದು ನನಗನ್ನಿಸುತ್ತದೆ. ದಲಿತರ ಬೇಡಿಕೆಗಳನ್ನೆಲ್ಲ ಪ್ರಶ್ನೆಯೇ ಇಲ್ಲದೆ ಸಾರಾಸಗಟಾಗಿ ಒಪ್ಪಿಕೊಳ್ಳಬೇಕೆಂದು ವಾದಿಸುವವರ ಗುಂಪಿಗೆ ದಲಿತರು 'ಕರುಣೆ'ಗೆ ಅರ್ಹರಾದ 'ಅನ್ಯ'ರು; 'ಕರುಣಾ'ದ ವ್ಯಾಪ್ತಿಗೆ ಬರುವ ಜೊತೆಗಾರರಲ್ಲ. ಹೀಗೆ ದಲಿತರನ್ನು ಕೇವಲ ಒಂದು ರಾಜಕೀಯ ಸಮುದಾಯವೆಂಬಂತೆ ಕಲ್ಪಿಸಿಕೊಂಡು, ದಲಿತರಲ್ಲಿಯೂ ಕನ್ನಡದ ಸತ್ಯ ಮತ್ತು ಸತ್ವದ ಬಗ್ಗೆ ನಂಬಿಕೆ– ಗೌರವಗಳನ್ನು ಉಳಿಸಿಕೊಂಡಿರುವವರೂ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಇವರು ಗುರುತಿಸಲಾರದೇ ಹೋಗಿದ್ದಾರೆ. ಹಾಗಾಗಿಯೇ, ನಾವ್ಯಾರೂ ಇಂಗ್ಲಿಷನ್ನು ಕಲಿಸಬೇಡಿ ಎಂದು ಹೇಳುತ್ತಿಲ್ಲ; ಬದಲಿಗೆ ಕನ್ನಡ ಕಲಿಕೆಯ ನೆಲಗಟ್ಟಿನ ಮೇಲೆ ಇಂಗ್ಲಿಷನ್ನು ಚೆನ್ನಾಗಿ ಕಲಿಸಿ ಎಂದು ಹೇಳುತ್ತಿದ್ದೇವೆ ಎಂಬುದನ್ನು ಉದ್ದೇಶಪೂರ್ವಕವಾಗಿಯೇ ಜನರಿಂದ ಮರೆಸಿ ಇವರು ವಾದ ಮಾಡುತ್ತಿದ್ದಾರೆ. ಅಲ್ಲದೆ, ನಮ್ಮ ನಿಜವಾದ ಆತಂಕ ಇರುವುದು ಒಂದನೇ ತರಗತಿಯ ಇಂಗ್ಲಿಷ್ ಕಲಿಕೆಯ ಬಗೆಗಲ್ಲ, ಬದಲಿಗೆ ಅದರ ಮುಂದಿನ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಪರಿಣಾಮಗಳ ಬಗೆಗೆ ಎಂದು ಸಾರಿ ಸಾರಿ ಹೇಳುತ್ತಿದ್ದರೂ, ಇವರ ಕಿವಿಗಳಿಗೇಕೆ ಬೀಳದಾಗಿದೆ? ಜಾಗತೀಕರಣದೊಂದಿಗೆ ಚರಿತ್ರೆ ತನ್ನ ಅಂತ್ಯ ಮುಟ್ಟಿದೆ ಎಂದು ಹೇಳುತ್ತಿರುವ ಜಾಗತೀಕರಣವಾದಿಗಳ ಮಾತುಗಳಿಗೆ ಮರುಳಾದಂತೆ ಇವರು, ಕನ್ನಡವೂ ಸೇರಿದಂತೆ ತಮ್ಮೆಲ್ಲ ದೇಶೀ ಅಸ್ತ್ರಗಳನ್ನು ಕೆಳಗಿಟ್ಟಂತೆ ತೋರುತ್ತದೆ. ಇದು ಖಂಡಿತ ಬಾಣಲೆಯಿಂದ ಬೆಂಕಿಯ ಕಡೆಗಿನ ಪ್ರಯಾಣವೇ ಆಗಿದೆ ಎಂದು ನನಗನ್ನಿಸುತ್ತದೆ. ನನ್ನ ಈ ಅನ್ನಿಸಿಕೆ ಸುಳ್ಳಾಗಲಿ ಎಂಬುದರ ಹೊರತಾಗಿ ಇನ್ನಾವ ಹಾರೈಕೆಯೂ ಅವರಿಗಾಗಿ ನನ್ನ ಬಳಿ ಸದ್ಯಕ್ಕೆ ಇಲ್ಲದಾಗಿದೆ!

ಶಿವಮೊಗ್ಗದಲ್ಲಿನ ವಿಚಾರ ಸಂಕಿರಣದ ಈ ಪುರಾಣವನ್ನೆಲ್ಲ ನಾನು ಇಲ್ಲಿ ಇಷ್ಟು ವಿವರವಾಗಿ ಏಕೆ ಹೇಳಬೇಕಾಗಿ ಬಂತೆಂದರೆ, ಈಚಿನ ಹೊಗೇನಕಲ್ ಗಲಾಟೆಯಲ್ಲಿ ನಾವು ನೋಡಿದಂತೆ, ಕನ್ನಡ ಬೀದಿ ಚಳುವಳಿ ರೂಕ್ಷವಾಗಿ ಕಾಣುವಂತಾಗಿದ್ದರೆ ಅದಕ್ಕೆ ಕನ್ನಡದ ಕೆಲವು (ಅತಿ)ಬುದ್ಧಿಜೀವಿಗಳು ಹಿಡಿದಿರುವ ಇಂತಹ ಅಡ್ಡದಾರಿಗಳೂ ಕಾರಣವಾಗಿರಬಹುದೇ ಎಂಬ ನನ್ನ ಅನುಮಾನವನ್ನು ಸೂಚಿಸಲು. ಇದಕ್ಕೆ ಇಂದು ಯದ್ವಾತದ್ವಾ ವರ್ತಿಸುತ್ತಿರುವಂತೆ ತೋರುವ ಇವರಿಬ್ಬರಲ್ಲೂ ಸಾಮಾಜಿಕ ನೈತಿಕತೆಯ ಭಯ ಹುಟ್ಟಿಸುವ ಕನ್ನಡದ ಹಿರಿಯರೆಂಬುವವರು ಒಬ್ಬರೂ ಇಲ್ಲದೇ ಹೋಗಿರುವುದೇ ಕಾರಣವಾಗಿರಬಹುದು. ಕುವೆಂಪು, ಕಾರಂತ ಮತ್ತು ರಾಜಕುಮಾರ್ ನಮ್ಮ ಮಧ್ಯೆ ಇದ್ದರೆಂಬುದೇ ಬುದ್ಧಿಜೀವಿಗಳನ್ನೂ ಒಳಗೊಂಡಿದ್ದ ಕನ್ನಡ ಚಳುವಳಿ ತನ್ನ ಸಾಮಾಜಿಕ ಸಭ್ಯತೆಯ ಎಲ್ಲೆಗಳನ್ನು ದಾಟದಂತೆ ಪ್ರತಿಬಂಧಿಸುತ್ತಿತ್ತು. ಅವರ ಕಾಲದಲ್ಲೂ ಕನ್ನಡ ಬೀದಿ ಚಳುವಳಿ (ಈ ಶಬ್ದವನ್ನು ನಾನು

ಖಂಡಿತ ಅವಹೇಳನಕಾರಿ ಉದ್ದೇಶದಿಂದ ಬಳಸುತ್ತಿಲ್ಲ; ಬದಲಿಗೆ ಅದರ ಅಸ್ತಿತ್ವದ ಅಗತ್ಯವನ್ನು ಗೌರವಪೂರ್ಣವಾಗಿ ಒಪ್ಪಿಕೊಂಡೇ ಹೇಳುತ್ತಿರುವೆ) ಪುಂಡಾಟಿಕೆ, ಚಂದಾ ವಸೂಲಿಗಳನ್ನು ನಡೆಸುತ್ತಿದ್ದರೂ, ಅದು ಒಂದು 'ಚಿಲ್ಲರೆ' ಪ್ರಮಾಣದಲ್ಲಿ ಮತ್ತು ಅಪರಾಧಿ ಮನೋಭಾವನೆಯೊಂದಿಗೇ ನಡೆಯುತ್ತಿತ್ತು. ಇಂದು ಅದಾದರೋ ಸೇನೆ, ವೇದಿಕೆ, ಕೇಂದ್ರಗಳ ಹೆಸರುಗಳಲ್ಲಿ ಸಾಂಸ್ಥಿಕ ಸ್ವರೂಪ ಪಡೆದು ರಾಜಾ– ರೋಷವಾಗಿ ನಡೆಯುತ್ತಿದೆ. ಇದರ ಅನಾಹುತಕಾರಿ ಪರಿಣಾಮಗಳನ್ನು ನಾವು ಒಂದೆರಡು ವರ್ಷಗಳಿಂದೀಚೆಗೆ ಕಾಣುತ್ತಾ ನಿಶ್ಚೇಷ್ಟಿತರಾಗುತ್ತಿದ್ದೇವೆ! ಬೆಳಗಾವಿಯ ಮೇಯರ್ ಆಯ್ಕೆಯ ಹಿಂದಿನ ರಾಜಕಾರಣವನ್ನು ನಿರ್ವಹಿಸಲು ಇಂತಹ 'ವೇದಿಕೆ'ಯೊಂದರ ನಾಯಕರು ಬೆಂಗಳೂರಿನಿಂದ ಅಲ್ಲಿಗೆ ಹೋಗಿ ಮೊಕ್ಕಾಂ ಮಾಡಿದ್ದರೆಂಬುದು ಈ ಕನ್ನಡ ಚಳುವಳಿಯ ರಾಜಕಾರಣ ಪಡೆಯುತ್ತಿರುವ ಹೊಸ ಹಾಗೂ ಆತಂಕಕಾರಿ ಆಯಾಮಗಳೆಂತಹುದು ಎಂಬುದನ್ನು ಸೂಚಿಸುತ್ತದೆ. ಕರ್ನಾಟಕದ ರಾಜಕೀಯ ಪಕ್ಷಗಳ ರಾಜಕಾರಣಕ್ಕೆ ಮತ್ತು ಬುದ್ಧಿಜೀವಿಗಳ ಕಾರ್ಯಶೀಲತೆಗೆ ಕನ್ನಡ ಒಂದು ನಿಜವಾದ ಕಳಕಳಿಯ ವಿಷಯವಾಗದಿರುವುದೇ ಇದಕ್ಕೆಲ್ಲ ಕಾರಣ ಎಂಬುದು ಸ್ಪಷ್ಟ

ಮಾರುಕಟ್ಟೆಯಲ್ಲಿ ಉಳಿಯಲು ಹೆಣಗುತ್ತಿರುವ ಕೆಲವು ಪತ್ರಿಕೆಗಳು ಮಾಡುತ್ತಿರುವ ಮಸಾಲಾ ಪತ್ರಿಕೋದ್ಯಮ, ಚಳುವಳಿ ಹೂಡಿ ನಾಯಕರಾಗಲು ಸಂದರ್ಭಕ್ಕಾಗಿ ಕಾಯುತ್ತಿರುವ ಕೆಲವು ಕನ್ನಡ ಪುಢಾರಿಗಳು ಮತ್ತು ಹತ್ತಿರ ಬಂದಿರುವ ಚುನಾವಣೆಗಳಲ್ಲಿ ಲಾಭ ಪಡೆಯಲು ಕೆಲವು ಪಕ್ಷಗಳು ನಡೆಸಿದ ಪ್ರಯತ್ನಗಳು ಸೃಷ್ಟಿಸಿದ ಹೊಗೇನಕಲ್ ಉದ್ವಿಗ್ನತೆಯು, ಕರುಣಾನಿಧಿಯವರ 'ಬಿಸಿ' ಪ್ರತಿಕ್ರಿಯೆಯಿಂದಾಗಿ ಬೀದಿಗೆ ಹರಡಿ ತೆಗೆದುಕೊಂಡ ತಿರುವು, ಕನ್ನಡಿಗರಿಗೆ ಖಂಡಿತ ಮರ್ಯಾದೆ ತರುವಂತಹದಾಗಿರಲಿಲ್ಲ. ಹೊಗೇನಕಲ್ ಕುಡಿಯುವ ನೀರಿನ ಯೋಜನೆ ಹತ್ತು ವರ್ಷಗಳ ಹಿಂದೆಯೇ; ಕರ್ನಾಟಕದ ಪಾಲಿನ ಕಾವೇರಿ ನೀರಿನ ಅಗತ್ಯವಿಲ್ಲದಂತೆ ಮತ್ತು ಕರ್ನಾಟಕ ಸರ್ಕಾರದ ಒಪ್ಪಿಗೆಯೊಂದಿಗೇ ಕೇಂದ್ರ ಸರ್ಕಾರ ನೀಡಿದ್ದ ನಿರಪೇಕ್ಷಣಾ ಪತ್ರದ ಆಧಾರದ ಮೇಲೆ ರೂಪಿತವಾಗಿದ್ದು; ಅದು ಕರ್ನಾಟಕಕ್ಕೆ ಸೇರಿದ ನಡುಗಡ್ಡೆಯಲ್ಲಿ ಸ್ಥಾಪಿತವಾಗುತ್ತದೆ ಎಂಬುದು ಬರೀ ಹುಯ್ಲು ಮಾತ್ರವಾಗಿದೆ. ವಾಸ್ತವವೆಂದರೆ, ಈ ಯೋಜನೆ ಜಾರಿಗೆ ಬಂದರೆ ಆ ನಡುಗಡ್ಡೆ ಮುಳುಗಬಹುದು ಎಂಬುದಷ್ಟೇ ಸದ್ಯದ ಆತಂಕ. ಈ ಯಾವ ವಿವರಗಳನ್ನೂ ಗಮನಕ್ಕೆ ತೆಗೆದುಕೊಳ್ಳದೆ ರಾಜ್ಯಾದ್ಯಂತ ನಡೆದ ಪ್ರತಿಭಟನೆ ಮತ್ತು ಬೆಂಗಳೂರಲ್ಲಿ ನಡೆದ ತಮಿಳು ವಿರೋಧಿ ಪುಂಡಾಟಿಕೆ ಮೂಲತಃ ಕನ್ನಡದ ಮನಸ್ಸಿನ ಎರಡು ಸುಪ್ತ ಆತಂಕಗಳಿಂದ ಹೊಮ್ಮಿದುದು ಎಂದು ನಾನೂ ಭಾವಿಸಿದ್ದೇನೆ. ಒಂದು: ಭಾರತದ ಒಕ್ಕೂಟದಲ್ಲಿ ಕರ್ನಾಟಕ ಸದಾ ಅನ್ಯಾಯಕ್ಕೆ ಒಳಗಾಗುತ್ತಿದೆ. ಎರಡು: ಬಹಳಷ್ಟು ಬಾರಿ ಈ ಅನ್ಯಾಯಗಳಿಗೆ ತಮಿಳ್ನಾಡೇ ಕಾರಣ.

ಇವೆರಡೂ ಆತಂಕಗಳನ್ನು ದೂರ ಮಾಡಬಲ್ಲ ರಾಜಕೀಯ ಮುತ್ಸದ್ದಿತನ ನಮ್ಮ ಯಾವ ರಾಜಕಾರಣಿಗಳಲ್ಲೂ ಇಲ್ಲವಾಗಿದೆ. ಅವರೆಲ್ಲರೂ ನೂರಕ್ಕೆ ನೂರು ರಾಜಕಾರಣಿಗಳೇ ಆಗಿದ್ದಾರೆ. ತಾವು, ತಮ್ಮ ಕುಟುಂಬ, ತಮ್ಮ ಜಾತಿ, ತಮ್ಮ ಪಕ್ಷ, ತಮ್ಮ ಪಕ್ಷಕ್ಕೆ ಹಣಕಾಸು ಒದಗಿಸುವ 'ಡಾನ್'ಗಳು– ಇಷ್ಟೇ ಇವರ ಕಳಕಳಿಯ ವಸ್ತುಗಳಾಗಿವೆ. ಹೊಗೇನಕಲ್ ಗಲಾಟೆ ಆರಂಭವಾದೊಡನೆ ದೇವೇಗೌಡರೋ, ಕೃಷ್ಣರೋ ಅಥವಾ ಖರ್ಗೆಯವರೋ ಅಥವಾ ಈ ಮೂವರೂ ಸೇರಿಯೋ ಚಳುವಳಿಕಾರರ ನಾಯಕರನ್ನು ಆಹ್ವಾನಿಸಿ, ನಾವು ತಮಿಳ್ನಾಡು ಮತ್ತು ಕೇಂದ್ರದೊಂದಿಗೆ ಮಾತಾಡಿ ಸಮಸ್ಯೆಗೆ ಒಂದು ಇತ್ಯರ್ಥ ರೂಪಿಸುತ್ತೇವೆ ಎಂದು ಹೇಳಿ ಅವರ ಮನವೊಲಿಸುವ ರಾಜಕೀಯ ವಿವೇಕವಾಗಲಿ, ಆತ್ಮ ವಿಶ್ವಾಸವಾಗಲೀ ಇವರಿಗಿಲ್ಲ ಎಂಬುದೇ ಕರ್ನಾಟಕದ ಇಂದಿನ ನಿಜವಾದ ಸಮಸ್ಯೆಯಾಗಿದೆ. ತಮ್ಮ ಪಕ್ಷದ ಧ್ವಜ ಹಾರಿಸಿಕೊಂಡು ಹೊಗೇನಕಲ್ ನಡುಗಡ್ಡೆಗೆ ದೋಣಿ ಪ್ರಯಾಣ ಮಾಡಿ ಬಂದ ಯಡಿಯೂರಪ್ಪ ಮತ್ತು ಅವರ ಸಂಗಾತಿಗಳಿಗೆ ಈ ಯೋಜನೆಗೆ ಅನುಮತಿ ದೊರೆತದ್ದೇ ತಮ್ಮ ನಾಯಕ ವಾಜಪೇಯಿ ಮಧ್ಯಸ್ಥಿಕೆಯಲ್ಲಿ ಎಂಬುದೇ ಮರೆತು ಹೋದಂತಿದೆ! ಈ ದೃಷ್ಟಿಯಿಂದ, ಕರ್ನಾಟಕದ ಇಂತಹ ಎಲ್ಲ ರಾಜಕಾರಣಿಗಳ ಬಗ್ಗೆ ರಜನೀಕಾಂತ್ ಆಡಿರುವುದಾಗಿ ವರದಿಯಾಗಿರುವ ಮಾತುಗಳು ಸಭ್ಯತೆಯ ಎಲ್ಲೆ ಮೀರಿದೆಯಾದರೂ, ಸರಿಯಾಗಿಯೇ ಇದೆ. ಅದೇನೇ ಇದ್ದರೂ, ಈ ಬಗ್ಗೆ ಪ್ರತಿಭಟಿಸಬೇಕಾದವರು ಕರ್ನಾಟಕದ ಹಾಲಿ ಮತ್ತು ಭಾವಿ ರಾಜಕಾರಣಿಗಳೇ ಹೊರತು ಚಳುವಳಿಕಾರರಲ್ಲ. ಆದರೂ ಪ್ರತಿಭಟನೆಗಳು ನಡೆದೇ ಇವೆ.

ಇದೆಲ್ಲದರಿಂದಾಗಿ ನಮ್ಮ ಕನ್ನಡ ಚಳುವಳಿಕಾರರು ತಮಿಳ್ನಾಡಿನ ವಿರುದ್ಧ ಚಳುವಳಿ ಹೂಡಲು ನೆಪಕ್ಕಾಗಿ ಕಾಯುತ್ತಿರುವವರಂತೆ ಇತರರಿಗೆ ಕಾಣಿಸತೊಡಗಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಕರ್ನಾಟಕವೆಂದರೆ ಜಗಳಕೋರರ ರಾಜ್ಯವೆಂದೇ ಪ್ರತಿಬಿಂಬಿತವಾಗತೊಡಗಿದೆ. 'ಮುಟ್ಟಿದರೆ ಮುನಿ'ಯಂತಿರುವವರು ನಿಜವಾಗಿ ದುರ್ಬಲರು. ಕನ್ನಡಿಗರ ಈ ದೌರ್ಬಲ್ಯದ ಮೂಲವಿರುವುದು ಕನ್ನಡ ಸಮಾಜದ ಬುದ್ಧಿಜೀವಿ ನಾಯಕತ್ವ, ರಾಜಕೀಯ ನಾಯಕತ್ವ ಮತ್ತು ಬೀದಿ ಚಳುವಳಿಗಳ (ಕನ್ನಡ ಕಾರ್ಯಕರ್ತರ) ನಾಯಕತ್ವಗಳ ನಡುವಣ ಸಮನ್ವಯ ಹಾಗೂ ಏಕತೆಗಳು ಕಾಣೆಯಾಗಿ, ಮೂರೂ ಮೂರಾಬಟ್ಟೆಯಾಗಿರುವುದರಲ್ಲಿ. ಆದರೆ ತಮಿಳ್ನಾಡಿನಲ್ಲಿ ಆ ಜನರಲ್ಲಿ ಆಳವಾಗಿ ಬೇರು ಬಿಟ್ಟಿರುವ ಭಾಷಾ ಕುಲ ಪ್ರಜ್ಞೆ ಅವರ ಸಮಾಜ ಹೀಗೆ ಮೂರಾಬಟ್ಟೆಯಾಗದಂತೆ ನೋಡಿಕೊಂಡಿದೆ. ಅದೇ ನಮ್ಮ ಕಣ್ಣುರಿಸುತ್ತಿರುವ ತಮಿಳು ಸಮಾಜದ, ರಾಜಕಾರಣದ ಯಶಸ್ಸಿನ ಗುಟ್ಟೂ ಆಗಿದೆ. ತಮಿಳರು ಕಾವೇರಿ ಕೆಳ ಕಣಿವೆಯ ಮಕ್ಕಳಾದರೆ, ನಾವು ಕಾವೇರಿ ಮೇಲ್ಕಣಿವೆಯ ಮಕ್ಕಳು. ಅಂದರೆ ಮೂಲತಃ ಇಬ್ಬರೂ ಒಂದೇ ನದಿಯ ನೀರು ಕುಡಿದು ಬೆಳೆದ ಮಕ್ಕಳು. ಷ. ಶೆಟ್ಟರ್ ಅವರ ಪುಸ್ತಕ ಈ ಇಬ್ಬರ ಒಡನಾಟವನ್ನು ಉತ್ತರದಿಂದ ಆಮದಾದ ಸಂಸ್ಕೃತೀಕರಣ ಹೇಗೆ ಭಂಗಗೊಳಿಸಿತು ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತದೆ. ಆದರೆ ಅರ್ಧ ಶತಮಾನದ ಕನ್ನಡ ಜಗತ್ತಿನ ಬಗ್ಗೆ

ಬರೆಯಲಾಗಿರುವ ಕೆ.ವಿ. ನಾರಾಯಣರ ಪುಸ್ತಕ ಇದನ್ನು ಅನುಮೋದಿಸುತ್ತದಾದರೂ, ಮುಂದೆ ಬೇರೆ ದಾರಿಯನ್ನೇ ಹಿಡಿಯುತ್ತದೆ. ಇದಕ್ಕೆ ಕಾರಣ ಅದು ಈ ಅರ್ಧ ಶತಮಾನದ ವಿದ್ಯಮಾನಗಳನ್ನೇ ತನ್ನ ಅಧ್ಯಯನದ ಮೂಲ ನೆಲೆಗಳನ್ನಾಗಿ ಮಾಡಿಕೊಂಡು ಸಮೀಪ ದೃಷ್ಟಿಯ ದೋಷಗಳಿಗೆ ಒಳಗಾಗಿರುವುದು. ನಾರಾಯಣರು ಕನ್ನಡದ ಪ್ರಗತಿಗಾಗಿ ಇಂಗ್ಲಿಷ್ ಭಾಷಾ ಸಂಶೋಧನೆಗಳ ಕಡೆ ಕಣ್ಣು ಹಾಯಿಸಿದಂತೆ ತಮಿಳು ಭಾಷಾ ಸಂಶೋಧನಾ ಲೋಕದ ಕಡೆಗೂ ಕಣ್ಣು ಹಾಯಿಸಿದ್ದರೆ ಚೆನ್ನಿತ್ತೇನೋ!

ಅದೇನೇ ಇರಲಿ, ನಾವು ಈಗ ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕಾರಣದಿಂದ ಒದಗಿರುವ ಆತಂಕಗಳನ್ನು ಎದುರಿಸಲು ನಮ್ಮ ಮೂಲ ಸೋದರರೇ ಆದ ತಮಿಳರಿಂದ ದೂರದೃಷ್ಟಿಯ ರಾಜಕಾರಣದ ಮೂಲ ಪಾಠಗಳನ್ನು ಕಲಿಯುವ ಅಗತ್ಯವನ್ನು ಮನಗಾಣಬೇಕಿದೆ. ಇದು ಅವರ ರಾಜಕಾರಣವನ್ನೂ ಎದುರಿಸಲು ಸಹಾಯವಾಗಬಹುದು! ಹಾಗಾಗಿ ಕನ್ನಡ ಚಳುವಳಿ ಮಾಡಬೇಕಾದ ಮೊದಲ ಕೆಲಸವೆಂದರೆ, ಕನ್ನಡಿಗರಲ್ಲಿ ಭಾಷಾ ಕುಲಪ್ರಜ್ಞೆಯನ್ನು ಬೆಳೆಸುವುದಾಗಿದೆ. ಇದಕ್ಕಾಗಿ ಕನ್ನಡ ಸಮಾಜ ಕನ್ನಡ ಭಾಷಾ ಕೇಂದ್ರಿತವಾಗಿ ಬೆಳೆಯುವಂತೆ ನೋಡಿಕೊಳ್ಳುವ ಕಾರ್ಯಕ್ರಮಗಳ ಕಡೆ ತನ್ನ ಗಮನವನ್ನು ಕೇಂದ್ರೀಕರಿಸಬೇಕಿದೆ. ಅಂದರೆ ಶಿಕ್ಷಣ ಕ್ಷೇತ್ರದ ಕನ್ನಡದ ಅಗತ್ಯಗಳ ಕಡೆಗೆ. ಇದಕ್ಕಾಗಿ ಅದು ತನ್ನ ಭೌಗೋಳಿಕ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ತನ್ನ ಬೌದ್ಧಿಕ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬೇಕಿದೆ. ಈ ಬೌದ್ಧಿಕ ವ್ಯಾಪ್ತಿಯೊಳಕ್ಕೆ ಕನ್ನಡ ಸಂಸ್ಕೃತಿಗೆ ಅಪರಿಚಿತವಾದ 'ರಾಕ್ಷಸ ಭಾಷೆ'ಯಲ್ಲಿ ಮಾತನಾಡುವ ದೇಜಗೌರಂತಹ ಕನ್ನಡ ಸಾಮ್ರಾಜ್ಯವಾದಿಗಳು ಎಂದೂ ಪ್ರವೇಶ ಪಡೆಯಲಾರರು ಎಂಬುದನ್ನೂ ಮುಖ್ಯವಾಗಿ ತಿಳಿಯಬೇಕಿದೆ.

ಏಪ್ರಿಲ್ ೧೮, ೨೦೦೮

ಶೇಕಡಾ ಏಳರ ಹಣದುಬ್ಬರವೂ, ಬಣ್ಣದ ಟಿ.ವಿ.ಯೂ...

ಇತ್ತೀಚಿನ ವರ್ಷಗಳಲ್ಲಿ ಚುನಾವಣೆಗಳು ಹತ್ತಿರ ಬಂದಂತೆಲ್ಲ ಎರಡು ಪರಸ್ಪರ ವಿರುದ್ಧ ಬೆಳವಣಿಗೆಗಳು ಕಂಡು ಬರುವುದನ್ನು ನಾವೆಲ್ಲ ಗಮನಿಸುತ್ತಿದ್ದೇವೆ. ಒಂದು: ನಮ್ಮ ಪ್ರಜಾಪ್ರಭುತ್ವದ ಆಧಾರಸ್ತಂಭಗಳಲ್ಲೊಂದಾದ ಪಕ್ಷ ರಾಜಕಾರಣ ಅಸಂಗತವಾಗಿ ಕಾಣತೊಡಗುವುದು. ಎರಡು: ಇದರಿಂದ ಕಂಗೆಟ್ಟವರಂತೆ ತೋರುವ ಪ್ರಜಾಸತ್ತೆ ವ್ಯವಸ್ಥೆಯ ಕೆಲವು ಹಿತೈಷಿಗಳು ಜನತೆಯ ಮುಂದೆ ಆ ಚುನಾವಣೆಗೆ ಸಂಬಂಧಿಸಿದಂತೆ ಕಾರ್ಯಕ್ರಮವೊಂದನ್ನು ಇಡಲು ಮುಂದಾಗುವುದು. ಪಕ್ಷ ರಾಜಕಾರಣ ಅಸಂಗತವಾಗಿ ಕಾಣತೊಡಗುವುದು ತತ್ಕಾಲಕ್ಕೆ ಬೀಸುತ್ತಿರುವ ರಾಜಕೀಯ ಗಾಳಿಯ ದಿಕ್ಕನ್ನು ಮತ್ತು ಆ ದಿಕ್ಕಿನಲ್ಲಿರುವ ಪಕ್ಷದ 'ಟಿಕೆಟ್' ಲಭ್ಯತೆಯನ್ನವಲಂಬಿಸಿ ಯಾವುದೇ ಎಗ್ಗಿಲ್ಲದೆ ಪಕ್ಷಾಂತರ ಮಾಡತೊಡಗಿದಾಗ. ರಾಜ್ಯದಲ್ಲಿ ಇದಾಗಲೇ ಆರಂಭವಾಗಿದೆ. ನಂಜನಗೂಡಿನ ಬೆಂಕಿ ಮಹದೇವುರಂತಹ ಹಿರಿಯ ಕಾಂಗ್ರೆಸ್ಸಿಗರು ಸೇಡಿನ ಮೇಲೆಂಬಂತೆ ಬಿಜೆಪಿ ಸೇರುತ್ತಾರೆಂದರೆ, ಅದು ಅವರ ದೀರ್ಘಕಾಲಿಕ ರಾಜಕೀಯ ಜೀವನವನ್ನೇ ಅನುಮಾನಾಸ್ಪದಗೊಳಿಸುತ್ತದೆ. ಹಾಗೇ ಜಾತ್ಯತೀತ ಮತ್ತು ಪ್ರಗತಿಶೀಲ 'ಬುದ್ಧಿಜೀವಿ' ಎಂದೇ ಖ್ಯಾತರಾಗಿದ್ದ ಮೂಲತಃ ಕಾಂಗ್ರೆಸ್ಸಿಗರಾದ ಕೆ.ಎಚ್. ಶ್ರೀನಿವಾಸ್ ಎಂಬ ನಾಯಕರು ಈಗ ಈವರೆಗೆ ಅವರಿದ್ದ ಯಾವ ಪಕ್ಷದಲ್ಲೂ ಸಲ್ಲದವರಂಥಾಗಿ ಸಾಗರದಲ್ಲಿ ಬಿಜೆಪಿ ಅಭ್ಯರ್ಥಿಯಾಗಲು ಸಮ್ಮತಿಸಿದ್ದಾರೆಂದು ಸುದ್ದಿ. (ಈ ಸುದ್ದಿಯನ್ನೇನೂ ಅವರು ಈವರೆಗೆ ನಿರಾಕರಿಸಿಲ್ಲ) ಹಾಗೆ ನೋಡಿದರೆ ಈಗವರು ಯಾವ ಪಕ್ಷದಲ್ಲಿದ್ದಾರೆ ಎಂಬುದು ಮರೆತುಹೋಗುವಷ್ಟು ಬಾರಿ ಪಕ್ಷ ಬದಲಾಯಿಸಿ ರಾಜಕೀಯವಾಗಿ ಅಪ್ರಸ್ತುತವಾಗಿಹೋಗಿದ್ದಾರೆ! ಹಿಂದೊಮ್ಮೆ ಇವರು ತಮ್ಮ ಮೂಲ ಪಕ್ಷದಿಂದ ಪಕ್ಷಾಂತರ ಮಾಡಿದಾಗ ಶಿವಮೊಗ್ಗದ ಜನರ ಕೋಪಕ್ಕೆ ತುತ್ತಾಗಿ, ತಾವಿನ್ನು ಮತ್ತೆ ಪಕ್ಷಾಂತರ ಮಾಡಿದರೆ ಊರ ಬಾಗಿಲಿನಲ್ಲೇ ಚಪ್ಪಲಿಯಲ್ಲಿ ಹೊಡೆಯಬಹುದೆಂದು

ಹೇಳಿ ಹೋಗಿದ್ದರು. ಆನಂತರವೂ ಅವರು ಹಲವು ಬಾರಿ ಪಕ್ಷಾಂತರ ಮಾಡಿದ್ದಾರೆ. ಆದರೆ ಜನರೇನೂ ಚಪ್ಪಲಿಯಲ್ಲಿ ಹೊಡೆಯಲು ಹೋಗಿಲ್ಲ. ಜನರ ಇಂತಹ ಔದಾರ್ಯ ಅಥವಾ ರಾಜಕೀಯ ಔದಾಸೀನ್ಯವೇ ಇಂತಹವರಿಗೆಲ್ಲ ಧೈರ್ಯ ತಂದು ಕೊಟ್ಟಿದೆಯೆಂದು ಕಾಣುತ್ತದೆ!

ಮಹದೇವುರಂತಹ ಹಿರಿಯ ಕಾಂಗ್ರೆಸ್ಸಿಗರು ಮತ್ತು ಶ್ರೀನಿವಾಸರಂತಹ 'ಬುದ್ಧಿಜೀವಿ'ಗಳೇ ಎಲ್ಲ ರಾಜಕೀಯ ಮರ್ಯಾದೆಗಳನ್ನು ಧಿಕ್ಕರಿಸಿ, (ಇವರಿಬ್ಬರೂ ಹಿರಿಯರು ಮತ್ತು ತಮ್ಮ ದೀರ್ಘ ರಾಜಕೀಯ ಜೀವನದ ಮೂಲ ಮೌಲ್ಯಗಳಿಗೇ ತಿಲಾಂಜಲಿ ನೀಡಲುದ್ಯುಕ್ತರಾಗಿದ್ದಾರೆಂಬ ಕಾರಣಕ್ಕಷ್ಟೇ ಇವರನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಲಾಗಿದೆ) ರಾಜಕಾರಣವೆಂದರೆ ಶಾಸನಸಭಾ ರಾಜಕಾರಣವೆಂದೇ ಬಗೆಯುವಂತಾಗಿದ್ದರೆ, ಅದಕ್ಕೆ ಮುಖ್ಯ ಕಾರಣ ಶಾಸನಸಭಾ ರಾಜಕಾರಣ ಇತರೆಲ್ಲ ಸ್ತರಗಳ ರಾಜಕಾರಣವನ್ನು ನುಂಗಿ ಹಾಕಿರುವುದೇ ಆಗಿದೆ. ಇದು ಪ್ರಜಾಸತ್ತೆಯನ್ನು ಕೇವಲ ಶಾಸಕಸತ್ತೆಯನ್ನಾಗಿ ಮಾಡುವ ಮೂಲಕ ಪ್ರಜಾಸತ್ತೆಯನ್ನೇ ಒಂದು ದೊಡ್ಡ ವ್ಯಾಪಾರ–ವ್ಯವಹಾರವನ್ನಾಗಿ ಮಾಡಿರುವ ದುರಂತ. ಜನ ಶಾಸಕರಾಗಲು ಇಂದು ಬಯಸುತ್ತಿರುವುದಾದರೂ ಯಾತಕ್ಕಾಗಿ? ಜನಹಿತಕ್ಕಾಗಿ ಶಾಸನಗಳನ್ನು ರೂಪಿಸುವ ಆಸಕ್ತಿಯಿಂದಂತೂ ಅಲ್ಲ. ಇಂದು ಆಯ್ಕೆಯಾಗುತ್ತಿರುವ ಬಹಳಷ್ಟು ಜನರನ್ನು ನೋಡಿದರೆ. ಆ ಅರ್ಹತೆ ಅವರಿಗೆ ಇದ್ದಂತೆಯೂ ಇಲ್ಲ. ಅವರು ಶಾಸಕರಾಗಬಯಸುವುದು ತಮ್ಮ ಅಧಿಕಾರ ಬಳಸಿ ಸಮಾಜದ ಪಟ್ಟಭದ್ರರ ಹಿತ ಕಾಪಾಡುವ ಮೂಲಕ ಹಣ ಮಾಡಲಷ್ಟೆ. ಇತ್ತೀಚಿನ ವರ್ಷಗಳಲ್ಲಂತೂ ಈ ಪ್ರವೃತ್ತಿ ಯಾವ ಮಟ್ಟ ಮುಟ್ಟಿದೆಯೆಂದರೆ, ಪಟ್ಟಭದ್ರರೇ ನೇರವಾಗಿ ಹಣ ಚೆಲ್ಲಿ ಶಾಸಕರಾಗುವ ಪ್ರಯತ್ನಗಳಲ್ಲಿದ್ದಾರೆ. ಇಂದು ಗಣಿ ಮತ್ತು ಭೂ ಮಾಫಿಯಗಳೇ ನಮ್ಮ ರಾಜಕೀಯ ಪಕ್ಷಗಳ ಹಣಕಾಸಿನ ಸುಪರ್ದಿ ನೋಡಿಕೊಳ್ಳಲು ಮುಂದೆ ಬಂದಿದ್ದು, ಹಿರಿಯ ನಾಯಕರು ಇದನ್ನು ಸಂತೋಷದಿಂದ ಸ್ವಾಗತಿಸತೊಡಗಿದ್ದಾರೆಂದರೆ ನಮ್ಮ ರಾಜಕೀಯ ಸಂಸ್ಕೃತಿ ತನ್ನೆಲ್ಲ ತಾತ್ವಿಕತೆಯನ್ನೂ ಕಳೆದುಕೊಂಡಿದೆ ಎಂದೇ ಅರ್ಥ. ಏಕೆಂದರೆ ಇಂದು ಎಲ್ಲ ಪಕ್ಷಗಳ ಪ್ರಕಾರ ನಾಯಕನಾರೆಂದರೆ, ಜನರ ಮಧ್ಯೆ ಕೆಲಸ ಮಾಡಿ ಅವರ ವಿಶ್ವಾಸ ಗಳಿಸಿಕೊಂಡವನಲ್ಲ; ಹಣದ ದೊಡ್ಡ ಗಂಟು ತೋರಿಸುವವನು. ಆ ಗಂಟು ಎಷ್ಟು ದೊಡ್ಡದಾಗಿರುತ್ತದೋ ಅಷ್ಟು ದೊಡ್ಡ ನಾಯಕ ಅವನು.

ಹಾಗಾಗಿಯೇ ಇಂದು ಯಾರು ಯಾವ ಪಕ್ಷದಲ್ಲಾದರೂ ಇರಲು ಸಾಧ್ಯ ಮತ್ತು ತಮ್ಮ ರಾಜಕೀಯ ಅನುಕೂಲಕ್ಕೆ ತಕ್ಕಂತೆ ಯಾವಾಗ ಬೇಕಾದರೂ ಯಾವ ಪಕ್ಷಕ್ಕಾದರೂ ಹಾರಲು ಸಾಧ್ಯ. (ದೇವೇಗೌಡರು ತಮ್ಮ ಪಕ್ಷದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಯನ್ನು ತಡ ಮಾಡುತ್ತಿರುವುದಾದರೂ ಯಾತಕ್ಕಾಗಿ?) ಅಂದರೆ ನಮ್ಮ ರಾಜಕಾರಣ ಎಲ್ಲ ಮಾನ–ಮರ್ಯಾದೆಗಳನ್ನೂ ಕಳೆದುಕೊಂಡಿದೆ ಎಂದೇ ಅರ್ಥ. ಇದರಿಂದಾಗಿ ಪ್ರಜಾಸತ್ತೆಯ ಬಗ್ಗೆಯೇ ಆಸೆ ಕಳೆದುಕೊಂಡ ಕೆಲವರು, ಶಸ್ತ್ರಸಜ್ಜಿತರಾಗಿ ಕಾಡು ಹೊಕ್ಕು, ಪ್ರತಿ– ರಾಜಕಾರಣದ

ಮಾದರಿಯೊಂದನ್ನು ರೂಪಿಸತೊಡಗಿದ್ದಾರೆ. ಆದರೆ ಈ ಮಾದರಿ ಈಗಿರುವ ಮಾದರಿಗಿಂತ ಹೆಚ್ಚು ಅನಾಹುತಕಾರಿಯಾಗಿರುವುದಿಲ್ಲ ಎಂಬ ನಂಬಿಕೆ ಸದ್ಯಕ್ಕೆ ಜನರಿಗಿಲ್ಲವಾದ್ದರಿಂದ, ಈಗಿರುವ ಮಾದರಿಯನ್ನೇ ಸರಿಪಡಿಸಲು ಸಾಧ್ಯವೇ ಎಂದು ಯೋಚಿಸುತ್ತಿರುವ ಕೆಲವರು ಚುನಾವಣೆ ಬಂದ ಹೊತ್ತಲ್ಲಿ ಕ್ರಿಯಾಶೀಲರಾಗುತ್ತಾರೆ! ಇಂತಹ ಕ್ರಿಯಾಶೀಲತೆ ಹೊಸ ರಾಜಕೀಯ ರಂಗ, ಹೊಸ ರಾಜಕೀಯ ಕಾರ್ಯಕ್ರಮ ಹಾಗೂ ಮತದಾರರ ಶಿಕ್ಷಣ ವೇದಿಕೆ ಮುಂತಾದ ಸಾಮೂಹಿಕ ಮತ್ತು ವ್ಯೆಯುಕ್ತಿಕ ಉಪಕ್ರಮಗಳ ಮೂಲಕ ವ್ಯಕ್ತವಾಗುತ್ತದೆ.

ಸರ್ವೋದಯ ಕರ್ನಾಟಕ ಪಕ್ಷ ಇತ್ತೀಚೆಗೆ ಪ್ರಕಟಿಸಿರುವ ಜನಪರ ರಾಜಕೀಯ ರಂಗ ಇದಕ್ಕೊಂದು ಉದಾಹರಣೆ. ಎರಡು ವರ್ಷಗಳಿಗೂ ಹಿಂದೆ ತನ್ನ ಸ್ಥಾಪನೆಯನ್ನು ಸಂಭ್ರಮದಿಂದ ಘೋಷಿಸಿಕೊಂಡ ಈ ಪಕ್ಷ ಮತ್ತೆ ಸಾರ್ವಜನಿಕವಾಗಿ ಕಾಣಿಸಿಕೊಂಡಿರುವುದು ಈಗಲೇ– ಚುನಾವಣೆಗಳು ಘೋಷಣೆಯಾದ ಮೇಲೇ! ಇಂತಹ 'ಪಕ್ಷ' ರಾಜ್ಯದಲ್ಲಿ ಯಾವ ರಾಜಕೀಯ ಮಹತ್ವವನ್ನೂ ಹೊಂದಿರದ ಒಂದೆರಡು ಪಕ್ಷಗಳೊಂದಿಗೆ ಸೇರಿ ತಾನೊಂದು ರಂಗ ಸ್ಥಾಪಿಸಿಕೊಂಡಿದ್ದೇನೆಂದು ಹೇಳುವುದರ ಉದ್ದೇಶವಾದರೂ ಏನು? ಪ್ರಮುಖ ಪಕ್ಷವೊಂದರೊಡನೆ ನಾಲ್ಕೈದು ಸ್ಥಾನಗಳ ಹೊಂದಾಣಿಕೆಗಾಗಿ ಅದರ ಮೇಲೆ ಒತ್ತಡ ಹೇರಲೆಂದೆ? ಇನ್ನು ಅಮೆರಿಕಾದಿಂದ ಗೆಳೆಯ ರವಿಕೃಷ್ಣಾ ರೆಡ್ಡಿ ಚುನಾವಣೆಗೆ ಸ್ಪರ್ಧಿಸಲೆಂದೇ ಬರುತ್ತಿದ್ದಾರೆ. ತತ್ವಹೀನ ರಾಜಕಾರಣದೆದುರು ಜನಪರವಾದ ಕೆಲವಾದರೂ ತತ್ವಗಳನ್ನು ಎತ್ತಿಹಿಡಿಯಲು ತಾವು ಬರುತ್ತಿರುವುದಾಗಿ ಅವರು ಹೇಳಿಕೊಂಡಿದ್ದಾರೆ. ಐ.ಟಿ. ತಂತ್ರಜ್ಞರೇ ಬಹುಸಂಖ್ಯೆಯಲ್ಲಿರುವ ಕ್ಷೇತ್ರದಲ್ಲಿ ಮತದಾರರಿಂದಲೇ ಆದಷ್ಟೂ ಹಣ ಸಂಗ್ರಹಿಸಿ ಚುನಾವಣೆ ಎದುರಿಸುವ ಉದ್ದೇಶ ಇವರದು. ಇವರು ಇನ್ನೊಬ್ಬ ಮಹಿಮಾ ಪಟೇಲರಾಗುತ್ತಾರೇನೋ ಕಾದು ನೋಡಬೇಕು! ಬೆಂಗಳೂರಲ್ಲೇ ಐ.ಟಿ. ಯುವಜನರೇ ಸೇರಿ 'ಲೋಕ ಪರಿತ್ರಾಣ' ಎಂಬ ಪಕ್ಷ ಸ್ಥಾಪಿಸಿಕೊಂಡು ಈಗಾಗಲೇ ಚುನಾವಣಾ ಪ್ರಚಾರ ಆರಂಭಿಸಿದ್ದಾರೆಂಬುದು ರವಿಯವರಿಗೆ ಇನ್ನೂ ಗೊತ್ತಾಗಿಲ್ಲವೆಂದು ಕಾಣುತ್ತದೆ.

ಹಾಗೇ ಹಾಸನದಲ್ಲಿ ಕೆಲವು ಗೆಳೆಯರು 'ಜನಶಕ್ತಿ' ಸಮ್ಮೇಳನವೊಂದನ್ನು ಆಯೋಜಿಸುತ್ತಿದ್ದಾರೆ. ಇಂದಿನ ಗೊಂದಲಮಯ ರಾಜಕೀಯ ಸಂದರ್ಭದಲ್ಲಿ ಜನತೆಗೆ ಸರಿಯಾದ ರಾಜಕೀಯ ಸಂದೇಶ ನೀಡುವುದು ಇದರ ಉದ್ದೇಶವೆಂದು ಹೇಳಲಾಗಿದೆ. ಈ ಮಧ್ಯೆ ಯು.ಆರ್. ಅನಂತಮೂರ್ತಿಯವರೂ ಇಂದಿನ ರಾಜಕೀಯ ವಾತಾವರಣವನ್ನು ಸ್ವಚ್ಛಗೊಳಿಸುವ ಮತ್ತು ಆ ಮೂಲಕ ಹೊಸ ಸಮಾಜವೊಂದನ್ನು ಕಟ್ಟಲು ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿಯೊಂದನ್ನು ಪ್ರಕಟಿಸಿದ್ದಾರೆ. ಇದನ್ನು ಅವರು 'ಕಾರ್ಯಕ್ರಮ' ಎಂದಿರುವುದರಿಂದ ಇದು ಯಾರ ಗಮನಕ್ಕಾಗಿ– ಜನತೆಯ ಗಮನಕ್ಕಾಗಿಯೋ, ರಾಜಕೀಯ ಪಕ್ಷಗಳ ಗಮನಕ್ಕಾಗಿಯೋ– ಎಂಬುದು ತಿಳಿಯದಾಗಿದೆ. ಕೇಳಿದರೆ, ಇದು ವಿಚಾರ ಪ್ರಚೋದನೆಗೆ, ಚರ್ಚೆಗೆ– ಇದರಿಂದ ಮುಂದೆ ಪ್ರಯೋಜನವಾಗುತ್ತದೆ ಎನ್ನುತ್ತಾರೆ ಅವರು. ಇರಬಹುದು.

ಹೀಗೆ ಭವಿಷ್ಯದ ದೃಷ್ಟಿಯಿಂದ ಇಂತಹ ಎಲ್ಲ ಹವ್ಯಾಸಿ ಪ್ರಯತ್ನಗಳು ಯಾವಾಗಲೂ ಸ್ವಾಗತಾರ್ಹವೇ ಆದರೂ, ಇವುಗಳಿಂದ ಸದ್ಯದ ರಾಜಕಾರಣದ ಮೇಲೆ ಯಾವುದೇ ಗುಣಾತ್ಮಕ ಪರಿಣಾಮ ಆಗುತ್ತದೆ ಎಂದು ನಂಬುವುದು ಕಷ್ಟ. ಆದರೂ, ಚುನಾವಣೆಗಳ ಹೊತ್ತಿಗಷ್ಟೇ ಇಂತಹ ಪ್ರಯತ್ನಗಳು ನಡೆಯಲು ಕಾರಣವೇನು? ಇಂತಹ ಪ್ರಯತ್ನಗಳನ್ನು ಮಾಡುವವರು ಯಾರು ಎಂದು ಗಮನಿಸಿದರೆ ಇದಕ್ಕೆ ಉತ್ತರ ದೊರಕುತ್ತದೆ. ಇವರೆಲ್ಲ ತಮ್ಮನ್ನು ಎಡಪಂಥೀಯರೆಂದೂ, ಜಾತ್ಯತೀತವಾದಿಗಳೆಂದೂ, ಪ್ರಗತಿಪರರೆಂದೂ ಕರೆದುಕೊಳ್ಳುವವರು. ಅಷ್ಟೇ ಅಲ್ಲ, ಹತ್ತಾರು ವರ್ಷಗಳಿಂದ ರಾಜ್ಯದಲ್ಲಿ ಹದಗೆಡುತ್ತಿರುವ ರಾಜಕೀಯ ಪರಿಸ್ಥಿತಿಗೆ ಎದುರಾಗಿ ಪರ್ಯಾಯ ರಾಜಕಾರಣವೆಂಬುದೊಂದನ್ನು ರೂಪಿಸಲು ಯತ್ನಿಸುತ್ತಿರುವವರು. ಆದರೆ ಈ ಸದುದ್ದೇಶದ ಹೊರತಾಗಿ, ಅದನ್ನು ಸಾಕಾರಗೊಳಿಸಲು ಅಗತ್ಯವಾದ ತೀವ್ರ ಹಂಬಲವಾಗಲೀ, ಬದ್ಧತೆಯಾಗಲೀ, ಕ್ರಿಯಾಶೀಲತೆಯಾಗಲೀ, ಹಠವಾಗಲೀ ಇಲ್ಲದೆ, ಅದನ್ನೊಂದು ಚಟ ಮಾಡಿಕೊಂಡವರು. ಇಂತಹ ಪ್ರಯತ್ನಗಳ ಸತತ ಬೆಂಬಲಿಗನಾಗಿಯೇ ನಾನು ಈ ಮಾತನ್ನು ಇಂದು ದುಃಖದಿಂದ ಹೇಳುತ್ತಿರುವೆ. ರಾಜಕಾರಣ ನಿಧಾನವಾಗಿ ಸಮಾಜಘಾತುಕ ಶಕ್ತಿಗಳ ಕೈವಶವಾಗುತ್ತಿರುವ ಇಂದಿನ ಸನ್ನಿವೇಶದಲ್ಲಿ ಇಂತಹ ಪ್ರಯತ್ನಗಳಿಗೆ ಎಂತಹ ಆಳದ ತುರ್ತು, ತೀವ್ರತೆ ಬೇಡ?

ಇವರೆಡೂ ಸದ್ಯಕ್ಕೆ ನಮ್ಮಲ್ಲಿ ಇದ್ದಂತೆ ತೋರುತ್ತಿಲ್ಲ. ಹಾಗೇನಾದರೂ ಇವೆರಡೂ ನಮ್ಮಲ್ಲಿ ಇದ್ದಿದ್ದರೆ, ಈಗ್ಗೆ ಬಹು ಹಿಂದೆಯೇ 'ಸರ್ವೋದಯ ಕರ್ನಾಟಕ'ದ ಕನಸು, ರವಿಕೃಷ್ಣಾ ರೆಡ್ಡಿಯವರ ಆಶಯ, 'ಜನಶಕ್ತಿ'ಯವರ ಆತಂಕ ಮತ್ತು ಅನಂತಮೂರ್ತಿಯವರ ಕಾರ್ಯಕ್ರಮಗಳನ್ನಾಧರಿಸಿ ಸಮಾಜಘಾತುಕ ರಾಜಕಾರಣವನ್ನೆದುರಿಸಲು ಪರ್ಯಾಯ ರಾಜಕೀಯ ಸಂಘಟನೆಯೊಂದು ಸಿದ್ಧವಾಗಬೇಕಿತ್ತು. ಆದರೆ ಆಗಿಲ್ಲವೆಂದರೆ, ಅದಕ್ಕೆ ದೊಡ್ಡ ವಿಚಾರಗಳ ಈ ಜಾತ್ಯತೀತ ಪ್ರಗತಿಪರರಿಗೆ ಸಂಘಟನೆಯೊಂದನ್ನು ಕಟ್ಟಲು ಅಗತ್ಯವಾದ ದೊಡ್ಡ ಗುಣಗಳು ಇಲ್ಲವೆಂದೇ ಅರ್ಥ. ಬಹುಮುಖ 'ಆಸಕ್ತಿ'ಗಳ ಇವರ ದೃಷ್ಟಿಯೂ ಅಲ್ಪಕಾಲಿಕವೇ. ಹಾಗಾಗಿಯೇ ಇಂತಹ ಪ್ರಯತ್ನಗಳು ಯಾವುದೇ ಐಕ್ಯತೆ ಇಲ್ಲದೆ ಚುನಾವಣೆಗಳ ಹೊತ್ತಿಗೆ ಕಾಣಿಸಿಕೊಳ್ಳುತ್ತವೆ ಅಥವಾ ಚುರುಕಾಗುತ್ತವೆ. ನಂತರ ಸಾಯುತ್ತವೆ. ಆ ಮೂಲಕ ಪ್ರಗತಿಪರತೆ ಎಂಬ ಪರಿಕಲ್ಪನೆಯ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುತ್ತವೆ.

ಈ ಬಗ್ಗೆ ನಾನು ಇಷ್ಟು ಕಟುವಾಗಿ ಬರೆಯುತ್ತಿರುವುದು, ಇಂತಹ ಸಂಘಟಿತ ಪ್ರಯತ್ನವೊಂದು ಸಫಲವಾಗುವ ಲಕ್ಷಣಗಳು ಕಾಣುತ್ತಿಲ್ಲದಿರುವುದರ ಬಗ್ಗೆ ನನಗಿರುವ ನೋವಿನಿಂದಷ್ಟೇ. ಹಾಗಾಗಿಯೇ, ಈ ಜಾತ್ಯತೀತ ಪ್ರಗತಿಪರರ ವಿಶ್ವಾಸ ಕಳೆದುಕೊಂಡಿರುವ ರಾಜಕೀಯ ಮುಖ್ಯ ಪ್ರವಾಹದ ರಾಜಕಾರಣಿ ಬಂಗಾರಪ್ಪ ಕಾಂಗ್ರೆಸ್ ಸೇರುತ್ತಾರೆಂಬ ವದಂತಿ ಬಂದೊಡನೆ, ಇಂದಿನ ಅಸಂಗತ ಪಕ್ಷಾಂತರಗಳ ಹಾವಳಿಯ ನಡುವೆಯೂ ಕಿವಿ ಚುರುಕಾಗುತ್ತದೆ! ಅವರು ಕಾಂಗ್ರೆಸ್ ಸೇರಬಹುದು ಅಥವಾ ಅದರೊಡನೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಬಹುದು. (ಈ ಸೂಚನೆಯನ್ನು ನಾನು ಹಿಂದಿನ

ಅಂಕಣವೊಂದರಲ್ಲಿ– 'ಸಮಾಜವಾದಿಗಳ ಕಾಂಗ್ರೆಸ್ಸೀಕರಣ: ಮುಂದೇನು?'– ನೀಡಿದ್ದೆ) ಆದರೆ ಇದು ಈ ಎಲ್ಲ ಪ್ರಗತಿಪರರು ಸೃಷ್ಟಿ ಮಾಡಲು ಹೆಣಗುತ್ತಿರುವ ರಾಜಕೀಯ ವಾತಾವರಣದ ಬದಲಾವಣೆಗಿಂತ ಹೆಚ್ಚಿನ ಬದಲಾವಣೆಯನ್ನು ಮಾಡಬಹುದು ಎಂಬುದು ಇಲ್ಲಿ ಮುಖ್ಯ. ಹಾಗಾಗಿ ನಮ್ಮ ಪರ್ಯಾಯ ರಾಜಕಾರಣದ ನಾಯಕರು ತುರ್ತಾಗಿ ತಿಳಿಯಬೇಕಾದುದು, ನಮ್ಮ ಗಮನ 'ಪರ್ಯಾಯ'ದ ಕಡೆಗಷ್ಟೇ ಇರದೇ 'ರಾಜಕಾರಣ'ದ ಕಡೆಗೂ ಹರಿಯಬೇಕಾಗಿದೆ ಎಂಬುದು. ಇಂತಹ ಸಕಾಲಿಕ 'ಸಕ್ರಿಯತೆ' ಮಾತ್ರ ಪರ್ಯಾಯ ರಾಜಕಾರಣದ ಪರಿಕಲ್ಪನೆಯನ್ನು ಜನತೆಯ ಮಧ್ಯೆ ಪ್ರಸ್ತುತಗೊಳಿಸಬಹುದು. ಅವರ ಹಿತ ಕಾಯುವ ಬದ್ಧತೆಗೆ ಪ್ರಾಮಾಣಿಕತೆ ಹಾಗೂ ನಂಬುಗೆಗಳ ಪ್ರಭೆಯನ್ನು ಒದಗಿಸಬಲ್ಲುದು.

ಈಗ ನೋಡಿ, ಹಣದುಬ್ಬರ ಶೇ. ಏಳನ್ನು ದಾಟಿ ದಾಟಿ ಹೋಗಿದೆ. ಬೆಲೆಗಳು– ವಿಶೇಷವಾಗಿ ಆಹಾರ ಪದಾರ್ಥಗಳ ಬೆಲೆಗಳು– ಜನಸಾಮಾನ್ಯರನ್ನು ಕಂಗೆಡಿಸುವಷ್ಟು ಮೇಲೇರಿ ಹೋಗಿವೆ. ಕಡು ಬಡವರಂತೂ ನೆರೆಹೊರೆಯಲ್ಲಿ ಭಿಕ್ಷೆ ಎತ್ತಿ ಹಸಿವು ನೀಗಿಸಿಕೊಳ್ಳುವಂತಹ ದುಃಸ್ಥಿತಿ ಉಂಟಾಗಿದೆ. ಆದರೆ ಇದಾವುದೂ ನಮ್ಮ ರಾಜಕೀಯ ಪಕ್ಷಗಳನ್ನು ಮತ್ತು ಮಾಧ್ಯಮಗಳನ್ನು– ಭಾರತ ಅಮೆರಿಕಾ ಪರಮಾಣು ಒಪ್ಪಂದದಷ್ಟೂ– ಕಂಗೆಡಿಸಿಲ್ಲ. ವಿರೋಧ ಪಕ್ಷಗಳು ತಮ್ಮ ಪಾತ್ರ ನಿರ್ವಹಿಸಬೇಕಾದ 'ರಾಜಕೀಯ ನಾಟಕ'ದಲ್ಲೆಂಬಂತೆ ಪ್ರತಿಭಟನೆಯ ಕೂಗು ಹಾಕಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕಾಣದಿದ್ದಷ್ಟು ಗತಿಯಲ್ಲಿ ದರಗಳು ಏರಲು ಏನು ಕಾರಣವೆಂದು ಯಾವ ರಾಜಕೀಯ ಪಕ್ಷವೂ ಗಂಭೀರವಾಗಿ ಚಿಂತಿಸುತ್ತಿಲ್ಲ. ಇಂತಹ ಚಿಂತನೆ ಇಂದಿನ ರಾಜಕಾರಣದ ಭಾಗವಾಗದಷ್ಟು ಅದು ಟೊಳ್ಳಾಗಿದೆ. ಅದನ್ನೆಲ್ಲ ನಾವು ಜಾಗತಿಕ ರಾಜಕಾರಣದ ಸುಪರ್ದಿಗೆ ಒಪ್ಪಿಸಿ, ನಾವು ನಮ್ಮದೇ ಹೂಡಿಕೆ, ಲಾಭ, ಕಮೀಷನ್ ಹಾಗೂ ಅವುಗಳ ಪ್ರಾಯಶ್ಚಿತ್ತ ರೂಪದ ದಾನ– ಧರ್ಮಗಳ ರಾಜಕಾರಣದಲ್ಲಿ ಮುಳುಗಿಹೋಗಿದ್ದೇವೆ. ಹಾಗಾಗಿಯೇ ನಮ್ಮ ಹಣಕಾಸು ಮಂತ್ರಿ ಪಿ. ಚಿದಂಬರಂ, ಶೇ. ಏಳೂವರೆ ದರದ ಹಣದುಬ್ಬರದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದಂತೆ, ಅಂತಾರಾಷ್ಟ್ರೀಯ ಹಣಕಾಸು ನಿಧಿ ಸಭೆಯ ಮುಂದೆ ಈ ವರ್ಷವೂ ನಾವು ಏಳೂವರೆ ಬೆಳವಣಿಗೆ ದರವನ್ನು ಸಾಧಿಸಿಯೇ ತೀರುತ್ತೇವೆ ಎಂಬ ವಿಕ್ಷಿಪ್ತ ವೀರಾವೇಶದ ಮಾತಾಡಬಲ್ಲವರಾಗಿದ್ದಾರೆ. ನಿಜ, ಇದು ಚುನಾವಣಾ ಸಮಯವಾದ್ದರಿಂದ ಆತಂಕಗೊಂಡ ಕೇಂದ್ರ ಸರ್ಕಾರ ಕೆಲವು ರಫ್ತುಗಳ ಮೇಲೆ ನಿಷೇಧ, ಆಮದು ಸುಂಕಗಳ ಕಡಿತ ಮುಂತಾದ ಆಡಳಿತಾತ್ಮಕ ಕ್ರಮಗಳನ್ನು ಕೈಗೊಂಡಿದೆ. ಆದರೆ ಇದರಿಂದ ಬೆಲೆಗಳ ಮೇಲೆ ಅಂತಹ ಗಮನಾರ್ಹ ಪರಿಣಾಮವೇನೂ ಉಂಟಾಗಿಲ್ಲ. ಹೀಗಾಗಿ ಅವರು ಇದು ಜಾಗತಿಕ ಬೆಲೆ ಪರಿಸ್ಥಿತಿಯ ಪರಿಣಾಮ ಎಂದು ಹೇಳಿ ಕೈತೊಳೆದುಕೊಳ್ಳುವ ಸಿದ್ಧತೆಯಲ್ಲಿದ್ದಾರೆ.

ಈ ಮಾತು ಸುಳ್ಳೇನೂ ಅಲ್ಲವೆಂದು ಈಗ ಎಡ– ಬಲಗಳೆರಡರ ಅರ್ಥಶಾಸ್ತ್ರಜ್ಞರೂ ಹೇಳತೊಡಗಿದ್ದಾರೆ. ಮಾನವ ಪರಿಸ್ಥಿತಿಯನ್ನು ಗಣನೆಗೇ ತೆಗೆದುಕೊಳ್ಳದೇ, ಜಾಗತಿಕ

ರಾಜಕಾರಣದ ಒತ್ತಡಗಳಿಗೆ ಸಿಕ್ಕಿ ಸಹಿ ಹಾಕಲಾದ ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದಗಳ ಪರಿಣಾಮವಿದು ಎಂಬುದು ಅವರಲ್ಲಿನ ಬಹುಜನರ ಅಭಿಮತವಾಗಿದೆ. ಇಂದು ಜಾಗತಿಕ ರಾಜಕಾರಣದ ಕೇಂದ್ರದಲ್ಲಿರುವ ತೈಲ ರಾಜಕಾರಣ, (ಇದರ ಅಂಗವಾಗಿ ಅಪಾರ ಪ್ರಮಾಣದ ಆಹಾರ ಧಾನ್ಯಗಳನ್ನು ಇಂಧನ ತಯಾರಿಕೆಗೆ ಬಳಸಲಾಗುತ್ತಿದೆ!) ಅಭಿವೃದ್ಧಿಶೀಲ ದೇಶಗಳಲ್ಲಿನ ಕೃಷಿ ವಲಯದ ಸಂಪೂರ್ಣ ನಿರ್ಲಕ್ಷ– ಹೂಡಿಕೆ ಮತ್ತು ತಾಂತ್ರಿಕ ಸುಧಾರಣೆಗಳ ಬಹುತೇಕ ಕೆಲಸವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಿರುವುದು, ಆಹಾರ ಬೆಳೆಗಳ ಜಾಗದಲ್ಲಿ ಲಾಭ ನಿರ್ದೇಶಿತವಾದ ವಾಣಿಜ್ಯ ಬೆಳೆಗಳ ಹೆಚ್ಚಳ, ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ಕೊಡದೆ ಖಾಸಗಿ ಕಂಪನಿಗಳು ಅವರ ಮೇಲೆ ಹಿಡಿತ ಸಾಧಿಸಿ ಸಟ್ಟಾ ವ್ಯಾಪಾರ ಮಾಡಲು (ಇದಕ್ಕೀಗ ಮುಕ್ತ ಮಾರುಕಟ್ಟೆವಾದಿಗಳು 'future trading' ಎಂಬ ಮಾನವಂತ ಹೆಸರು ನೀಡಿ ವ್ಯಾಪಾರ– ವ್ಯವಹಾರಗಳಲ್ಲಿ ಅದಕ್ಕೊಂದು ಗೌರವಾನ್ವಿತ ಸ್ಥಾನ ಒದಗಿಸಿದ್ದಾರೆ!) ಒದಗಿಸಿರುವ ಅವಕಾಶ ಮತ್ತು ಇದರಿಂದಾಗಿ ಆಹಾರ ಧಾನ್ಯಗಳನ್ನು ಸ್ಥಳೀಯ ಮಾರುಕಟ್ಟೆ ಬೆಲೆಗಳಿಗಿಂತ ಹೆಚ್ಚಿನ ಬೆಲೆಯಲ್ಲಿ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇತ್ಯಾದಿಗಳನ್ನು ಅವರು ಆಹಾರ ಧಾನ್ಯಗಳ ಬೆಲೆ ಏರಿಕೆಯ ಕಾರಣಗಳೆಂದು ಪಟ್ಟಿ ಮಾಡಿದ್ದಾರೆ. ಇನ್ನಿತರ ವಸ್ತುಗಳ ಬೆಲೆ ಹೆಚ್ಚಳಕ್ಕೂ ಇಂತಹುದೇ– ಈಗ ಬದಲಿಸಲಾಗದ– ಜಾಗತಿಕ ವ್ಯಾಪಾರ ಒಪ್ಪಂದಗಳೇ ಕಾರಣವಾಗಿದ್ದು; ಜಾಗತಿಕ– ಅಂದರೆ ಅಮೆರಿಕಾ ಕೇಂದ್ರಿತ– ಆರ್ಥಿಕತೆ ಈಗ ಹಿನ್ನಡೆಯಲ್ಲಿರುವುದರಿಂದ, ನಮ್ಮ ಮೇಲೂ ಹಿನ್ನಡೆಯ ಪರಿಣಾಮಗಳುಂಟಾಗಿವೆ ಎಂದು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಇವು ಸದ್ಯಕ್ಕೆ ನಿವಾರಣೆಯಾಗುವ ಸಂಭವವಿಲ್ಲವೆಂದೂ ಹೇಳುತ್ತಿದ್ದಾರೆ.

ಹಾಗಾದರೆ ನಮ್ಮ ಶ್ರೀಮಂತ ಮತ್ತು ಮಧ್ಯಮ ವರ್ಗಗಳಿಗೆ 'ಹೊಸ ಸಿರಿ' ತಂದು ಕೊಟ್ಟಿರುವ 'ಆರ್ಥಿಕ ಉದಾರೀಕರಣ'ದ ದೀರ್ಘಕಾಲಿಕ ಪರಿಣಾಮಗಳೇನು, ಇವುಗಳ ಆತ್ಯಂತಿಕ ಬಲಿಗಳು ಯಾರು? ಈ ಬಗ್ಗೆ ಈಗಲಾದರೂ, 'ವಾಸ್ತವ ಅನುಭವ'ದ ಆಧಾರದ ಮೇಲೆ ಗಂಭೀರವಾಗಿ ವಿಶ್ಲೇಷಣೆ ಮಾಡಬೇಕಿದೆಯಲ್ಲವೆ? ಆದರೆ, ಸಕ್ರಿಯ ರಾಜಕಾರಣದಲ್ಲಿರುವ ಯಾರಿಗೂ ಇಂತಹ ಗಂಭೀರ ವಿಶ್ಲೇಷಣೆಯ ಅಗತ್ಯ ಕಂಡು ಬಂದಿಲ್ಲ! ಇವರ ಚುನಾವಣಾ ಆಶ್ವಾಸನೆಗಳನ್ನು ನೋಡಿದರೆ ಇದಕ್ಕೇನು ಕಾರಣವೆಂದು ಗೊತ್ತಾಗುತ್ತದೆ: ಕಾಂಗ್ರೆಸ್ಸಿನವರು ಕಡು ಬಡವರಿಗೆ ಬಣ್ಣದ ಟಿ.ವಿ. ಕೊಡುತ್ತಾರಂತೆ! ಜೊತೆಗೆ ಕೆಜಿಗೆ ಎರಡು ರೂಪಾಯಿಗಳ ದರದಲ್ಲಿ ತಿಂಗಳಿಗೆ ೨೫ ಕೆಜಿ ಅಕ್ಕಿ ಕೊಡುತ್ತಾರಂತೆ. ಯಾವುದೇ ರಾಜಕೀಯ ತಾತ್ವಿಕತೆ ಇಲ್ಲದೇ ಭಾವನಾತ್ಮಕ ರಾಜಕಾರಣವನ್ನೇ ನಂಬಿ ನಡೆಯುತ್ತಿರುವ ಡಿ.ಎಂ.ಕೆ. ಪಕ್ಷದಿಂದ ಕದ್ದಿರುವ ಈ ಆಶ್ವಾಸನೆಗಳನ್ನು, ಇತರರೆಲ್ಲಿ ಕದ್ದು ಬಿಡುವರೋ ಎಂಬ ಆತಂಕದಿಂದ ಈ ಪಕ್ಷ, ತನ್ನ ಪ್ರಣಾಳಿಕೆ ಬಿಡುಗಡೆಯ ಮುನ್ನವೇ ಇವನ್ನು ಪ್ರಕಟಿಸಿದೆ! ಇದರಿಂದ ಪೀಕಲಾಟಕ್ಕೆ ಸಿಕ್ಕಿರುವ ಇತರ ಪಕ್ಷಗಳು ಉದಾರತೆ ಹಾಗೂ ರಿಯಾಯ್ತಿಗಳಲ್ಲಿ ಇವನ್ನು ಮೀರಿಸಿದ ಆಶ್ವಾಸನೆಗಳನ್ನು ನೀಡುವ ಲೆಕ್ಕಾಚಾರದಲ್ಲಿ ತೊಡಗಿವೆ. ಒಂದು ಆಳವಾದ ತಾತ್ವಿಕ ಹಿನ್ನೆಲೆಯುಳ್ಳ

ರಾಷ್ಟ್ರೀಯ ಪಕ್ಷವೆನಿಸಿರುವ ಕಾಂಗ್ರೆಸ್ ಪಕ್ಷವೇ ಈ ಸ್ಥಿತಿ ತಲುಪಿದೆ ಎಂದರೆ ಒಟ್ಟಾರೆ ನಮ್ಮ ರಾಜಕಾರಣ ಎಷ್ಟು ಟೊಳ್ಳಾಗಿರಬೇಕು!

ಇದು ರಾಜ ಮಹಾರಾಜರ ಕಾಲದ ದಾನ– ಧರ್ಮಗಳ ರಾಜಕಾರಣ. ಇದು ತನ್ನ ಅಭಿವೃದ್ಧಿ ಮೀಮಾಂಸೆಯಲ್ಲಿ ತಾನೇ ನಂಬಿಕೆ ಕಳೆದುಕೊಂಡು ದಿಕ್ಕೆಟ್ಟಿರುವ ರಾಜಕಾರಣದ ಲಕ್ಷಣ. ದುಡಿಯುವ ಜನಕ್ಕೆ ದುಡಿದು ಗಳಿಸಿ ತಮ್ಮ ಬದುಕಿನ ಘನತೆ ಬೆಳೆಸಿಕೊಳ್ಳುವ ಅವಕಾಶಗಳನ್ನೇ ಸೃಷ್ಟಿಸಲಾಗದಂತಹ ಆಧುನಿಕ ಊಳಿಗಮಾನ್ಯಶಾಹಿ ರಾಜಕಾರಣವಿದು. ಮಕ್ಕಳಿಗೆ ಆಹಾರ, ಪುಸ್ತಕ, ಬಟ್ಟೆ, ಸೈಕಲ್; ಹೆಂಡತಿಗೆ ತಾಳಿ, ಸೀರೆ ಇತ್ಯಾದಿಗಳಿಂದ ಆರಂಭವಾದ ಈ ದಾನ ರಾಜಕಾರಣ, ಇಂದು ಬಣ್ಣದ ಟಿ.ವಿ. ದಾನಕ್ಕೆ ಬಂದು ಮುಟ್ಟಿದೆ... ಇದು ಸಾಂಕೇತಿಕವಾಗಿ ಕೂಡಾ ನಮ್ಮ ರಾಜಕಾರಣ ಮುಟ್ಟಿರುವ ದಿವಾಳಿಕೋರತನವನ್ನು ಸೂಚಿಸುತ್ತದೆ ಎಂದು ನನಗನ್ನಿಸುತ್ತದೆ: ಕಡುಬಡವರನ್ನೂ ಈ ಮೂಲಕ ಜಾಗತಿಕ ರಾಜಕಾರಣದ ಬಣ್ಣ ಬೆಡಗುಗಳಲ್ಲಿ ಮುಳುಗಿಸಿಬಿಟ್ಟರೆ, ತಮ್ಮ ದುಷ್ಟ ಕಾರ್ಯಗಳಿಗೆ ವಿರೋಧವೇ ಇರುವುದಿಲ್ಲವೆಂದು ಅವರು ತೀರ್ಮಾನಿಸಿದಂತೆ ತೋರುತ್ತದೆ.

ಆದರೆ ದೂರದ ಸಿಡಿಲಿನ ಮೊರೆತ ಅವರಿಗೆ ಕೇಳಿಸದಷ್ಟು ಅವರ ಸಂವೇದನೆ ಅಸೂಕ್ಷ್ಮವಾಗಿದೆ. ಆದರೆ ಇದರ ಪರಿಣಾಮವನ್ನು ಎದುರಿಸುವವರು ಅವರು ಮಾತ್ರವಾಗಿರುವುದಿಲ್ಲ ಎಂಬುದೇ ನಿಜವಾದ ದುರಂತವಾಗಿದೆ. ಪರ್ಯಾಯ ರಾಜಕಾರಣ ಮಾಡುವವರು ಇದನ್ನು ಮನಗಂಡು ಕಾರ್ಯಪ್ರವೃತ್ತರಾಗಬೇಕಿದೆ.

ಏಪ್ರಿಲ್ ೨೫, ೨೦೦೮

ಹಿಂದೂ ಕೋಮುವಾದ ಮತ್ತು ಬುದ್ಧಿಜೀವಿಗಳ ಪೀಕಲಾಟ

ಹೋದ ವಾರದ ಅಂಕಣದಲ್ಲಿ ಬರೆದಂತೆ ಕೆ.ಎಚ್. ಶ್ರೀನಿವಾಸ ಅವರು ಬಿ.ಜೆ.ಪಿ.ಗೆ ಸೇರುತ್ತಿಲ್ಲವಂತೆ. ಅವರಿಗೆ ಶಿವಮೊಗ್ಗ ನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಸಿಗುವ ಸಾಧ್ಯತೆ ಇದೆಯಂತೆ. ಈ ನಗರದ ಬ್ರಾಹ್ಮಣ ಮಹಾಸಭೆ, ಅವರಿಗೆ ಟಿಕೆಟ್ ಕೊಟ್ಟರೆ ಗೆಲ್ಲಿಸಿ ಕೊಡುವುದಾಗಿ ಭರವಸೆ ನೀಡಿದೆಯಂತೆ. ಆದರೆ, ಈ ಮಹಾಸಭೆ ಎಲ್ಲ ಪಕ್ಷಗಳಿಗೂ ಈ ರೀತಿಯ ಭರವಸೆ ನೀಡಿದೆಯೆಂದು ಸುದ್ದಿ! ಈಚಿನ ಪುರಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಇಂತಹುದೇ ಜಾತಿ ರಾಜಕಾರಣ ನಡೆದು, ಕೊನೆಗೂ ಬ್ರಾಹ್ಮಣರೇ ಗೆದ್ದಿದ್ದಾರೆ. ಇದರಿಂದಾಗಿ ಕೆ.ಎಸ್. ಈಶ್ವರಪ್ಪ ಮಾತ್ರ ಸೋತುಹೋದಂತಾಗಿದ್ದಾರೆ! ಒಳ್ಳೆಯ ವ್ಯಕ್ತಿಯೆಂದು ಅಧ್ಯಕ್ಷ ಸ್ಥಾನಕ್ಕೆ ಬ್ರಾಹ್ಮಣ ಅಭ್ಯರ್ಥಿಯನ್ನು ಬೆಂಬಲಿಸಿದ್ದೇ ಅವರಿಗೆ ಮುಳುವಾಗಿದೆ. ತಮ್ಮ ಜಾತಿಯ ಅಭ್ಯರ್ಥಿಯನ್ನು ಕೈ ಬಿಟ್ಟದ್ದಕ್ಕಾಗಿ ಈಗ ವೀರಶೈವ ಸಮಾಜದ ನಾಯಕರು ಈಶ್ವರಪ್ಪನವರನ್ನು ಕೈ ಬಿಡಲು ಸಿದ್ಧರಾಗುತ್ತಿದ್ದಾರೆ! ಇನ್ನು ಶ್ರೀನಿವಾಸರಿಗೆ ಟಿಕೆಟ್ ಸಿಕ್ಕರೆ, ಬ್ರಾಹ್ಮಣರೂ ತಮ್ಮನ್ನು ಕೈ ಬಿಡುವುದು ಖಚಿತ ಎಂದು ಗಾಬರಿಗೊಂಡಿರುವ ಅವರು ತಮ್ಮ ವಿಧಾನಸಭಾ ಸ್ಥಾನವನ್ನು ಉಳಿಸಿಕೊಳ್ಳಲು ಕಂಡ ಕಂಡ ವೀರಶೈವ ಸ್ವಾಮಿಗಳ ಕೈ ಕಾಲು ಹಿಡಿಯಲು ಅವಕಾಶಗಳನ್ನು ಕಲ್ಪಿಸಿಕೊಳ್ಳತೊಡಗಿದ್ದಾರೆ! ಇತ್ತೀಚಿನ ಅವರ ಭರ್ಜರಿ ಷಷ್ಠ್ಯಬ್ಧಿ ಸಮಾರಂಭ ಇದಕ್ಕೊಂದು ಉದಾಹರಣೆಯಂತಿತ್ತು.

ನಮ್ಮ ರಾಜಕಾರಣ ಹೀಗೆ ಜಿಗುಪ್ಸೆಕರ ರೀತಿಯಲ್ಲಿ ಜಾತಿಮಯವಾಗುತ್ತಿರುವ ಸಂದರ್ಭದಲ್ಲಿ, ಇಂತಹುದನ್ನೆಲ್ಲ ಖಂಡ ತುಂಡವಾಗಿ ಖಂಡಿಸುತ್ತಿದ್ದ ಮಾಜಿ ಪೋಲೀಸ್ ಅಧಿಕಾರಿ ಸುಭಾಷ್ ಭರಣಿಯವರು ಬಿಜೆಪಿ ಸೇರಿ ಎಲ್ಲರನ್ನೂ ದಂಗು ಬಡಿಸಿದ್ದಾರೆ! ಕರೆದೆಡೆಯಲ್ಲೆಲ್ಲ 'ಹಿಂದುತ್ವ' ಮತ್ತು ಕೋಮುವಾದದ ವಿರುದ್ಧ ಭರ್ಜರಿ ಭಾಷಣ ಬಿಗಿಯುತ್ತಿದ್ದ ಭರಣಿ, ಯಾವ 'ಸೆಕ್ಯುಲರ್' ಪಕ್ಷವೂ ತಮಗೆ ಮಣೆ ಹಾಕಲಿಲ್ಲವೆಂದು ಬಿಜೆಪಿಗೆ ಮೊರೆ

ಹೋಗಿದ್ದಾರೆ... ಈ ಭರಣಿಯವರಂತೆಯೇ ಸರ್ಕಾರಿ ಸೇವೆಯಲ್ಲಿ ಭರ್ಜರಿ ಅಧಿಕಾರ ಅನುಭವಿಸಿ, ಅದನ್ನೆಲ್ಲ ರಾಜಕಾರಣದಲ್ಲಿ ಹೂಡಿ ಬೆಳೆ ತೆಗೆಯಲು ಮುಂದಾಗಿದ್ದ ಅನೇಕ ಅಧಿಕಾರಿಗಳ ಬೆಡಗು- ಬಿನ್ನಾಣಗಳಿಗೆ ಈ ಬಾರಿ ಕಾಂಗ್ರೆಸ್ ಸೊಪ್ಪು ಹಾಕದೆ ಈ ವ್ಯಕ್ತಿತ್ವಗಳ ಢೋಂಗಿತನವನ್ನು ಬಯಲಿಗೆಳೆದಿರುವುದಕ್ಕಾಗಿ ಅದನ್ನು ಅಭಿನಂದಿಸಬೇಕಿದೆ. ಹಾಗೆ ನೋಡಿದರೆ ಈ ಬಾರಿ ಕಾಂಗ್ರೆಸ್ ಇಂತಹ ಹಲವು ಢೋಂಗಿಗಳಿಗೆ ಟಿಕೆಟ್ ನಿರಾಕರಿಸಿ ಭರ್ಜರಿ ಧೈರ್ಯ ತೋರಿದೆ. ತನ್ನ ಹಿರಿಯ ನಾಯಕರುಗಳ ಮಕ್ಕಳು- ಮೊಮ್ಮಕ್ಕಳಿಗೆ, ಸೋದರರಿಗೆ, ಸಿನೆಮಾ ನಟ- ನಟಿಯರಿಗೆ ಟಿಕೆಟ್ ನಿರಾಕರಿಸಿ ಗಂಭೀರ ರಾಜಕಾರಣ ಮಾಡುವ ಸೂಚನೆ ನೀಡಿದೆ. ಆದರೆ ಕೊನೆಯ ನಿಮಿಷದ ಒತ್ತಡದಲ್ಲಿ- ಜಿ. ಮಾದೇಗೌಡರಂತಹ ಹಿರಿಯರೇ ಕುಟುಂಬ ರಾಜಕಾರಣಕ್ಕಿಳಿದು ಬಿಜೆಪಿ ಸೇರುವ ಬೆದರಿಕೆ ಒಡ್ಡುತ್ತಿರುವಾಗ- ಅದು ಹೇಗೆ ವರ್ತಿಸುವುದೋ ಕಾದು ನೋಡಬೇಕು.

ಬಿಜೆಪಿಯಂತೂ ಕಾಂಗ್ರೆಸ್ ಟಿಕೆಟ್ ವಂಚಿತ ಪುಢಾರಿಗಳನ್ನೆಲ್ಲ ಹಲ್ಲು ಕಿರಿಯುತ್ತಾ ತನ್ನ ತೆಕ್ಕೆಗೆ ತೆಗೆದುಕೊಂಡು ತನ್ನ ತತ್ವಾವೇಶವೆಲ್ಲ ಬರೀ ಬುರುಗು ಎನ್ನುವುದನ್ನು ಸಾಬೀತುಪಡಿಸುತ್ತಿದೆ. ಇನ್ನು ತತ್ವಾದರ್ಶಗಳಿಗೆಲ್ಲ ಬಹು ಹಿಂದೆಯೇ ತಿಲಾಂಜಲಿ ಘೋಷಿಸಿರುವ ಜೆಡಿಎಸ್, ಕಾಂಗ್ರೆಸ್- ಬಿಜೆಪಿಗಳೆಲ್ಲ ತುಂಬಿ, ಅವುಗಳಿಂದ ತುಳುಕಿ ಬೀಳುತ್ತಿರುವ ಗಿರಾಕಿಗಳನ್ನು ಹಾರ ಹಾಕಿ ಆಹ್ವಾನಿಸುತ್ತಾ ತನ್ನ ರಾಜಕಾರಣವನ್ನು ಪುನಾರಚಿಸಿಕೊಳ್ಳುತ್ತಿದೆ! ಈ ಮಧ್ಯೆ ಎಲ್ಲೂ ಸಲ್ಲದಂತಾಗಿರುವ ಒಂಟಿ ಸಲಗ ಎಚ್.ಎನ್. ನಂಜೇಗೌಡರು ಬಿ.ಎಸ್.ಪಿ. ಸೇರುವಷ್ಟು ಅಸಹಾಯಕರಾಗಿದ್ದಾರೆಂದರೆ, ನಮ್ಮ ರಾಜ್ಯ ರಾಜಕಾರಣ ಎಷ್ಟು ದಿಕ್ಕೆಟ್ಟು ಹೋಗಿರಬಹುದು! ಇಂತಹ ಪರಿಸ್ಥಿತಿಯಲ್ಲಿ ಈ ರಾಜ್ಯ ರಾಜಕಾರಣಕ್ಕೆ ಒಂದು ದಿಕ್ಕು ತೋರಿಸಲು ತಮ್ಮ ಮಿತಿಗಳಲ್ಲೇ ಪ್ರಯತ್ನಿಸಹೊರಟಿರುವುದಾಗಿ ಹೇಳಿಕೊಂಡಿರುವ 'ಸರ್ವೋದಯ ಕರ್ನಾಟಕ'ದವರ ಸಾಹಸ, ರವಿಕೃಷ್ಣಾ ರೆಡ್ಡಿಯವರ ವೈಯುಕ್ತಿಕ ಧೈರ್ಯ ಮತ್ತು ಮಹಿಮಾ ಪಟೇಲರ 'ಸುವರ್ಣ ಯುಗ'ದ ಬದ್ಧತೆ ಎಷ್ಟರ ಮಟ್ಟಿಗೆ ಕೆಲಸ ಮಾಡಬಹುದು ಎಂಬ ಸಂಶಯ ಎಲ್ಲರಿಗೂ ಇದ್ದೇ ಇದೆ. ಆದರೆ ಸದ್ಯದ ಸಂದರ್ಭದಲ್ಲಿ ಇಂತಹವರಿಗಲ್ಲದೆ, ಉರಿಯುವ ಮನೆಯಲ್ಲಿ ಗಳ ಹಿರಿಯಲೆಂಬಂತೆ ಚುನಾವಣೆ ಹೊತ್ತಿಗೆ ತಮ್ಮ ಹೊಸ ಪಕ್ಷಗಳ ಅಂಗಡಿ ತೆರೆದುಕೊಂಡು ಕೂತಿರುವ ಮಾಜಿ ರೌಡಿಗಳು ಮತ್ತು ಮಾಜಿ ಸಾಹಿತಿಗಳಿಗೆ ಶುಭಾಶಯ ಹೇಳಲಾದೀತೆ?

ಇಂತಹ ಆತಂಕದ, ಗೊಂದಲದ, ಅನಿರ್ದಿಷ್ಟತೆಯ, ಹತಾಶೆಯ ಸನ್ನಿವೇಶದಲ್ಲಿ ಯಾವುದೇ ಆದರ್ಶದ, ತತ್ವದ ಅಥವಾ ಒಳ್ಳೆಯತನದ ಮಾತುಗಳನ್ನಾಡಲು ಧೈರ್ಯ ಸಾಲದಾಗುತ್ತದೆ. ಇದನ್ನೇ ಗೆಳೆಯ ಕೆ. ಸತ್ಯನಾರಾಯಣ ನನ್ನ 'ಮೈಮರೆತಂತಿರುವ ನಮ್ಮ ಸೆಕ್ಯುಲರ್ ರಾಜಕಾರಣ' ಲೇಖನಕ್ಕೆ ಬರೆದಿರುವ ಪ್ರತಿಕ್ರಿಯೆಯಲ್ಲಿ ('ನುಡಿಕಟ್ಟು ಬದಲಾಗಬೇಕು': *ವಿಕ್ರಾಂತ ಕರ್ನಾಟಕ*: ಏಪ್ರಿಲ್, ೧೮) ಪರೋಕ್ಷವಾಗಿ ಪ್ರಸ್ತಾಪಿಸಿರುವುದು ಎಂದು ನಾನು ಭಾವಿಸಿದ್ದೇನೆ. ನನ್ನ 'ವಾರದ ಒಳನೋಟ' ಅಂಕಣಗಳೆಲ್ಲ ಅಂತರ್ಜಾಲದಲ್ಲಿನ ನನ್ನ

'ನಾಗಸಂಪದ' ಬ್ಲಾಗ್‌ನಲ್ಲಿ ಪ್ರಕಟವಾಗುತ್ತಿರುವುದರಿಂದ, ನನ್ನ ಈ ಅಂಕಣಕ್ಕೆ ಇನ್ನೂ ಹಲವಾರು ಪ್ರತಿಕ್ರಿಯೆಗಳು ಬಂದಿವೆ. ಬಹಳಷ್ಟು 'ಬ್ಲಾಗ್' ಓದುಗರು 'ಟೈಮ್ ಪಾಸ್'ಗೆಂಬಂತೆ ಲೇಖನಗಳನ್ನು ಓದಿ ಲಘು ಸಂವಾದ– ಮನರಂಜನೆಗಳಿಗೆಂಬಂತೆ ಪ್ರತಿಕ್ರಿಯಿಸುವುದರಿಂದ ನಾನು ಅವುಗಳಿಗೆ ಮತ್ತೆ ಪ್ರತಿಕ್ರಿಯಿಸಲು ಹೋಗುವುದಿಲ್ಲ. ಆದರೆ ನನ್ನ ಲೇಖನಗಳನ್ನು 'ಬ್ಲಾಗ್'ಗೆ ಹಾಕಿ ಸಹಕರಿಸುತ್ತಿರುವ (ಆ ತಂತ್ರಜ್ಞಾನ ನನಗೆ ಗೊತ್ತಿಲ್ಲವಾದ್ದರಿಂದ) ಗೆಳೆಯ ಶ್ರೀನಿವಾಸಮೂರ್ತಿಯವರು ಇತ್ತೀಚೆಗೆ ನನ್ನ ಇದೇ ಲೇಖನದ ಬಗ್ಗೆ ಕೆ.ಎಸ್. ಸುಪ್ರೀತ್ ಎಂಬ ಇಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬರ ಪ್ರತಿಕ್ರಿಯೆಯೊಂದನ್ನು, ಇದಕ್ಕೆ ನಿಮ್ಮ ಪ್ರತಿಕ್ರಿಯೆ ಅಗತ್ಯ ಎಂಬರ್ಥದಲ್ಲಿ ನನಗೆ ರವಾನಿಸಿದ್ದಾರೆ. ಇವರು ನನ್ನ ಈ ಲೇಖನದಲ್ಲಿ ವ್ಯಕ್ತವಾಗಿರುವ ಆತಂಕಗಳ ಬಗ್ಗೆ ತಾತ್ವಿಕವಾಗಿ ಆಂತರಂಗಿಕ ಸಹಮತ ಹೊಂದಿರುವುದಾದರೂ, ಬಹಿರಂಗ ವಾತಾವರಣ ಅದಕ್ಕೆ ಪೂರಕವಾಗಿಲ್ಲದಿರುವುದರ ವಾಸ್ತವದ ಬಗ್ಗೆ ಬರೆದಿದ್ದಾರೆ. ತಾವು ಸಹ ಇಂತಹ ವಾತಾವರಣದ ಸಹಜ ಬಲಿಯಾಗಿದ್ದು, ಇದರಿಂದ ತಮ್ಮಂತಹವರು ಹೊರ ಬರಲು ಪೂರಕವಾಗುವಂತಹ ವಾತಾವರಣವನ್ನು ನಿರ್ಮಿಸಲು ಸೆಕ್ಯುಲರ್‌ವಾದಿಗಳು ಏಕೆ ಪ್ರಯತ್ನಿಸುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಹಾಗೇ, ಈ ವಿಷಯದಲ್ಲಿ ಮಾರ್ಗದರ್ಶಕವಾಗುವಂತಹ ಸಾಹಿತ್ಯವನ್ನೂ ಸೂಚಿಸಿ ಎಂದು ಸುಪ್ರೀತ್ ಕೇಳಿದ್ದಾರೆ.

ಮೊದಲಿಗೆ, ನಾನೇನೂ ಇಂದಿನ ಸೆಕ್ಯುಲರ್‌ವಾದಿಗಳ ವಕ್ತಾರನಲ್ಲ ಎಂದು ಸ್ಪಷ್ಟಪಡಿಸಬಯಸುವೆ. ಈ ಸೆಕ್ಯಲರ್‌ವಾದವೆಂಬುದೇ ಅನುಮಾನಾಸ್ಪದತೆಗೆ ಈಡಾಗಿರುವ ಇಂದಿನ ರಾಜಕೀಯ ಸನ್ನಿವೇಶದಲ್ಲಿ ನಿಂತು, ಕೋಮುವಾದದ ವಿರುದ್ಧ ಮಾತನಾಡುವಾಗ ಅನೇಕ ತಪ್ಪು ಕಲ್ಪನೆಗಳುಂಟಾಗುವ ಸಂಭವವಿದೆ. ಏಕೆಂದರೆ, ಕೋಮುವಾದದ ವಿರುದ್ಧ ಏಕೈಕ ಅಸ್ತ್ರ ಸೆಕ್ಯುಲರ್‌ವಾದ ಎಂಬ ನಂಬಿಕೆಯನ್ನು ಸೃಷ್ಟಿಸಲಾಗಿದೆ. ಮೂಲತಃ ಭೌತವಾದಿ ರಾಜಕಾರಣದ ಪ್ರತಿಪಾದಕರಾದ ಕಟ್ಟಾ ಎಡಪಂಥೀಯರು ಸೃಷ್ಟಿಸಿರುವ ನಂಬಿಕೆಯಿದು. ಆದರೆ ಸೆಕ್ಯುಲರಿಸಂ ಎಂದರೇನೆಂದು ಈವರೆಗೆ ಯಾರೂ ಖಚಿತವಾಗಿ, ನಿರ್ದಿಷ್ಟವಾಗಿ ನಿರೂಪಿಸಿಲ್ಲ. ಅದಕ್ಕೆ ನಮ್ಮ ಯಾವುದೇ ಭಾರತೀಯ ಭಾಷೆಯಲ್ಲೂ ಸಮರ್ಪಕವಾದ ಸಮಾನ ಶಬ್ದವನ್ನು ಟಂಕಿಸಲಾಗಿಲ್ಲ. ಧರ್ಮ ನಿರಪೇಕ್ಷತೆ ಎಂಬ ಶಬ್ದದಿಂದ ಹಿಡಿದು ಇದಕ್ಕೆ ತದ್ವಿರುದ್ಧ ಅರ್ಥವಿರುವ ಸರ್ವಧರ್ಮ ಸಮಭಾವ ಎಂಬ ಶಬ್ದದವರೆಗೆ ಇದರರ್ಥವನ್ನು ಎಳೆದಾಡಲಾಗಿದೆ! ಇದಕ್ಕೆ ಕಾರಣ, ಇದು ಆಧುನಿಕತೆಯ ಹಂಬಲದಲ್ಲಿ ನಮ್ಮ ಸಂವಿಧಾನ ನಿರ್ಮಾತೃಗಳು ಐರೋಪ್ಯ ರಾಜಕಾರಣದಿಂದ ಕಿತ್ತು ತಂದು ಇಲ್ಲಿ ನೆಡಲಾಗಿರುವ ಪರಿಕಲ್ಪನೆಯಾಗಿರುವುದೇ ಆಗಿದೆ.

ಸೆಕ್ಯುಲರಿಸಂ ಎಂಬುದು ಆಧುನಿಕ ಐರೋಪ್ಯ ಸಂದರ್ಭದಲ್ಲಿ, ಆಗ ಸರ್ವ ಪ್ರಧಾನವಾಗಿದ್ದ ಕ್ರಿಶ್ಚಿಯನ್ ಧರ್ಮದ ನಿಯಂತ್ರಣದಿಂದ ರಾಜಕಾರಣವನ್ನು ಬಿಡುಗಡೆಗೊಳಿಸಿಕೊಳ್ಳಲು ಅಲ್ಲಿನ ರಾಜತಂತ್ರಜ್ಞರು ರೂಪಿಸಿದ ಒಂದು ಪರಿಕಲ್ಪನೆ. ಆದರೆ ಬಹು ಬಗೆಯ ಧರ್ಮಗಳಿರುವ ಈ ರಾಷ್ಟ್ರದಲ್ಲಿ ಸೆಕ್ಯುಲರಿಸಂ ಎಂದರೆ, ಒಂದೊಂದು

ಧರ್ಮದ ನೆಲೆಯಿಂದ ಒಂದೊಂದು ಅರ್ಥ ಹೊರಡುವಂತಾಗಿದೆ! ಹಾಗೇ ಒಂದೊಂದು ರಾಜಕೀಯ ಪಕ್ಷವೂ ತನ್ನ ತಾತ್ವಿಕತೆಗೆ ತಕ್ಕಂತೆ ಇದನ್ನು ಅರ್ಥೈಸಬಹುದಾಗಿದೆ! ಹೀಗಾಗಿಯೇ. ಹಿಂದೂ ಕೋಮುವಾದಿಗಳು ಹಿಂದೂ ಧರ್ಮವೇ ಮೂಲತಃ ಸೆಕ್ಯುಲರ್ ಆಗಿರುವುದರಿಂದ ಇತರರು ಹೇಳುವ ಸೆಕ್ಯುಲರಿಸಂ 'ಹುಸಿ' ಸೆಕ್ಯುಲರಿಸಂ ಎಂದು ಪ್ರತಿಪಾದಿಸುತ್ತಾ ತಸ್ನ ರಾಜಕಾರಣವನ್ನು ಯಶಸ್ವಿಯಾಗಿ ಮಾಡುತ್ತಿದ್ದರೆ; ಮುಸ್ಲಿಂ ಕೋಮುವಾದಿಗಳೂ ತಮ್ಮೆಲ್ಲ ಕಾರ್ಯಕ್ರಮಗಳನ್ನೂ ಸೆಕ್ಯುಲರಿಸಂನ ಹೆಸರು ಹೇಳಿಕೊಂಡೇ ಯಶಸ್ವಿಯಾಗಿ ನಡೆಸುತ್ತಿದ್ದಾರೆ! ಸೆಕ್ಯುಲರಿಸಂ ನಮ್ಮ ಸಮಾಜದಲ್ಲಿ ಯಾವುದೇ ಗೊಂದಲಗಳನ್ನುಂಟುಮಾಡದೆ, ಅರ್ಥಪೂರ್ಣವಾಗಿ ಬೇರೂರಲು ಸಾಧ್ಯವಾಗುತ್ತಿದ್ದುದು, ಎಲ್ಲ ಧರ್ಮಗಳಿಗೆ ಸಮಾನವಾದ ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಮೂಲಕ– ಅಂದರೆ ರಾಷ್ಟ್ರವನ್ನು ಒಂದು ಸರ್ವ ಸಾಮಾನ್ಯ ನಾಗರಿಕ ಸಂಹಿತೆಯ ಸಮಾಜವನ್ನಾಗಿ ಪುನರ್ರೂಪಿಸುವ ಮೂಲಕ. ಆದರೆ ಈ ಜವಾಬ್ದಾರಿಯಿಂದ ನುಣಿಚಿಕೊಂಡು, ಸೆಕ್ಯುಲರಿಸಂನ ಆಧುನಿಕತೆ ಬೇಕು; ಅದು ಒತ್ತಾಯಿಸುವ ಸಾಮಾನ್ಯ ನಾಗರಿಕ ಸಂಹಿತೆ ಅನಿವಾರ್ಯವೇನೂ ಅಲ್ಲ ಎಂದು ನಂಬಿ ಹುಂಬತನದಿಂದ ಮುಂದುವರಿದ ನಮ್ಮ ಈವರೆಗಿನ ಸುಲಭ ಹಾಗೂ ವಿರೋಧಾಭಾಸದ ರಾಜಕಾರಣವೇ ಇಂದು ಬಹುಸಂಖ್ಯಾತ ಕೋಮುವಾದಿ ಮತ್ತು ಅಲ್ಪಸಂಖ್ಯಾತ ಕೋಮುವಾದಿ ರಾಜಕಾರಣಗಳೆರಡನ್ನೂ ಹುಟ್ಟು ಹಾಕಿದೆ. ಇದು, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಮಾಜವನ್ನು ಸೆಕ್ಯುಲರೀಕರಣಗೊಳಿಸದೆ ಸರ್ಕಾರವನ್ನು ಮಾತ್ರ ಸೆಕ್ಯುಲರೀಕರಣಗೊಳಿಸಹೊರಟ ಸಮಯಸಾಧಕ ರಾಜಕಾರಣದ ಫಲವೇ ಆಗಿದೆ. ಇದರ ಲಾಭ ಸಹಜವಾಗಿಯೇ ಇತ್ತೀಚೆಗೆ– ಗಾಂಧೀಜಿ ಪ್ರಭಾವ ಕುಂದಿ, ನೆಹರೂ– ಇಂದಿರಾಗಾಂಧಿಯವರಂತಹ ಪ್ರಬಲ ರಾಜಕಾರಣಿಗಳ ಆಡಳಿತ ಕೊನೆಗೊಳ್ಳುತ್ತಿದ್ದಂತೆ– ಬಹುಸಂಖ್ಯಾತ ಕೋಮುವಾದಿ ರಾಜಕಾರಣಕ್ಕೇ ಹೆಚ್ಚು ದಕ್ಕಿದೆ.

ಈ ವೈರುಧ್ಯವನ್ನು ಈ ದೇಶದ ಎಡಪಂಥೀಯ ಬುದ್ಧಿಜೀವಿಗಳು ನೆಹರೂ ಪ್ರಣೀತ ಆಧುನಿಕ ರಾಜಕಾರಣದ ಮರುಳಿನಲ್ಲಿ ಇಷ್ಟು ವರ್ಷಗಳ ಕಾಲ ಗುರುತಿಸದೇ ಹೋದ ಕುರುಡಿನಿಂದಾಗಿ, ಬಹುಸಂಖ್ಯಾತ ಕೋಮುವಾದದ ಜೊತೆ ಜೊತೆಗೇ ಅಲ್ಪಸಂಖ್ಯಾತ ಕೋಮುವಾದವೂ ಬೆಳೆದು ನಿಂತಿರುವುದು ಕಾಣದೇ ಹೋಗಿದೆ! ಆದರೆ ಈಗ ಪರಿಸ್ಥಿತಿ ಕುತ್ತಿಗೆಗೆ ಬಂದಿರುವ– ಸಾಮಾನ್ಯ ಜನಕ್ಕೆ ಇದು ಸ್ಪಷ್ಟವಾಗಿ ಕಾಣತೊಡಗಿ, ಈ ಬುದ್ಧಿಜೀವಿಗಳ ಬುದ್ಧಿಜೀವಿತ್ವವನ್ನೇ ಪ್ರಶ್ನಿಸಲಾರಂಭಿಸಿರುವ– ಸಂದರ್ಭದಲ್ಲಿ ನಮ್ಮ ಕೆಲವು ಬುದ್ಧಿಜೀವಿಗಳು ತಮ್ಮೆಲ್ಲಾ ಬುದ್ಧಿಜೀವಿತ್ವವನ್ನು ಬಳಸುತ್ತಾ, ಮೂಲಭೂತವಾದವೇ ಬೇರೆ ಕೋಮುವಾದವೇ ಬೇರೆ ಎಂಬ ಕೂದಲು ಸೀಳುವ ಬೌದ್ಧಿಕ ಆಟದಲ್ಲಿ ತೊಡಗಿ, ಅಲ್ಪಸಂಖ್ಯಾತರದ್ದು ಮೂಲಭೂತವಾದರೆ; ಬಹುಸಂಖ್ಯಾತರದು ಕೋಮುವಾದವಾಗಿದ್ದು, ಸದ್ಯಕ್ಕೆ ಈ ಕೋಮುವಾದವೇ ಹೆಚ್ಚು ಅಪಾಯಕಾರಿ ಎಂದು ವಾದಿಸುವ ಅಪ್ರಾಮಾಣಿಕ ಮತ್ತು ಅಪಾಯಕಾರಿ ರಾಜಕಾರಣಕ್ಕೆ ದಾರಿ ಮಾಡಿಕೊಡುತ್ತಿದ್ದಾರೆ. ಆ ಮೂಲಕ ತಮ್ಮ ರಾಜಕೀಯ

ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇದನ್ನು ಅವರ ಮುಖಕ್ಕೆ– ರಾಜನ ಮೈಮೇಲೆ ಬಟ್ಟೆಯಿಲ್ಲ ಎಂದು ಹೇಳಬಲ್ಲ ಮಗುವಿನ ನಿರಾತಂಕ ಸ್ಪಷ್ಟತೆಯಲ್ಲಿ– ಹೇಳುವ ಧೈರ್ಯವನ್ನು ನಾವು ತೋರದೇ ಹೋದಲ್ಲಿ ಈ ಬಹುಸಂಖ್ಯಾತರ ಹಾಗೂ ಅಲ್ಪಸಂಖ್ಯಾತರ ಕೋಮುವಾದಗಳ ನಡುವಣ ಜಗಳದಲ್ಲಿ ಮೊದಲಿನವರ ನಿರ್ಣಾಯಕ ವಿಜಯವನ್ನು– ಸ್ವಲ್ಪ ಕಾಲ ಇಂತಹ ಬೌದ್ಧಿಕ ಆಟಗಳ ಮೂಲಕ ಮುಂದೂಡಬಹುದಾದರೂ– ನಾವೇ ಕೈಯಾರೆ ಖಚಿತಪಡಿಸದಂತಾಗುತ್ತದಷ್ಟೆ. ಈ ಧೈರ್ಯ ಮತ್ತು ಸ್ಪಷ್ಟತೆಗಳಷ್ಟೇ ಸೆಕ್ಯುಲರಿಸಂಗೆ ಭಾರತೀಯ ಸಂದರ್ಭದಲ್ಲಿ ಹೊಸ ಅರ್ಥ ಕೊಡಬಲ್ಲವು ಮತ್ತು ಎಲ್ಲ ರೀತಿಯ ಕೋಮುವಾದಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಮಣಿಸಬಲ್ಲವು. ಇದು ನೇರವಾದ; ಹಾಗಾಗಿ ತುಸು ಕಷ್ಟದ– ಕೆಟ್ಟ ಆಪಾದನೆಗಳನ್ನು ಎದುರಿಸಬೇಕಾದ– ದಾರಿ. ಅದರೆ ಇದೊಂದೇ ಸದ್ಯಕ್ಕಿರುವ ದಾರಿ ಎಂದು ಗೆಳೆಯ ಸತ್ಯನಾರಾಯಣರಿಗೆ ಹೇಳಬಯಸುವೆ.

ಹಾಗೇ ಸುಪ್ರೀತ್ ಅವರಿಗೆ ಗಾಂಧಿ, ಅಂಬೇಡ್ಕರ್ ಹಾಗೂ ಲೋಹಿಯಾರನ್ನು ಮುಕ್ತ ಮನಸ್ಸಿನಿಂದ ಓದಿ ಎಂದು ಸೂಚಿಸಬಯಸುವೆ. ರಾಷ್ಟ್ರ ವಿಭಜನೆ ಸೃಷ್ಟಿಸಿದ್ದ ಕೋಮು ದಳ್ಳುರಿಯ ಮಧ್ಯೆಯೂ, ಪಾಕಿಸ್ಥಾನಕ್ಕೆ ಕೊಡಬೇಕಾದ ನಿಧಿಯನ್ನು ಕೊಡುವಂತೆ ಸಾರ್ವಜನಿಕವಾಗಿ ಒತ್ತಾಯಿಸಿ ಹಿಂದೂ ಕೋಮುವಾದಿಯೊಬ್ಬನ ಗುಂಡಿಗೆ ಬಲಿಯಾದ ಸನಾತನ ಹಿಂದೂ ಎನ್ನಿಸಿಕೊಂಡಿದ್ದ ಗಾಂಧಿ; ತಾವು ರೂಪಿಸಿದ್ದ ಸಮಗ್ರ ಹಿಂದೂ ನಾಗರಿಕ ಸಂಹಿತೆ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಅವಕಾಶ ಕೊಡದ ಸರ್ಕಾರದ ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಹೊರಬಂದ ಆಧುನಿಕತಾವಾದಿ ಅಂಬೇಡ್ಕರ್ ಮತ್ತು ಸಾಮಾನ್ಯ ನಾಗರಿಕ ಸಂಹಿತೆಯ ಜಾರಿಯನ್ನು ತಮ್ಮ ಪಕ್ಷದ ಒಂದು ಚುನಾವಣಾ ವಿಷಯವನ್ನಾಗಿ ಮಾಡಿಕೊಂಡು ಪ್ರಚಾರ ಮಾಡಬಲ್ಲವರಾಗಿದ್ದ ರಾಜಕೀಯ ದುಸ್ಸಾಹಸಿ ಲೋಹಿಯಾ, ಹೊಸ ರಾಷ್ಟ್ರಕ್ಕೆ ಹೊಸ ಧರ್ಮ ಸಂಹಿತೆಯೊಂದನ್ನು ರೂಪಿಸಿ ಸೆಕ್ಯುಲರಿಸಂಗೆ ಹೊಸ ಅರ್ಥ ಕೊಡಲೆತ್ನಿಸಿದವರು. ಇವರ ಜೊತೆಗೇ, ಈಚಿನ ಅಸ್ಗರಾಲಿ ಇಂಜಿನಿಯರರ ಪುಸ್ತಕ– ಲೇಖನಗಳನ್ನೂ ಓದಿದರೆ ಚೆನ್ನು. ಆಗ ಆರೋಗ್ಯಕರ ವರ್ತಮಾನವನ್ನು ಕಟ್ಟಲು ಚರಿತ್ರೆಯನ್ನು ಎಷ್ಟು ಎಚ್ಚರಿಕೆ ಮತ್ತು ವಿವೇಕಗಳಿಂದ ಅರ್ಥ ಮಾಡಿಕೊಂಡು ಬಳಸಿಕೊಳ್ಳಬೇಕಾಗುತ್ತದೆ ಎಂಬುದು ಗೊತ್ತಾಗುತ್ತದೆ.

ಮೇ ೨, ೨೦೦೮

ನಮ್ಮ ಮತ ಯಾರಿಗೆ ?

ಈ ಚುನಾವಣೆಗಳಲ್ಲಿ ಎದ್ದು ಕಾಣುತ್ತಿರುವ ಅತಿ ದೊಡ್ಡ ಆತಂಕಕಾರಿ ಸಂಗತಿ ಎಂದರೆ, ರಾಜ್ಯದಲ್ಲಿ ಪಕ್ಷ ರಾಜಕಾರಣ ಚಿಂದಿ ಚಿಂದಿಯಾಗುತ್ತಿರುವುದು. ರಾಜ್ಯದ ರಾಜಕೀಯ ಇತಿಹಾಸದಲ್ಲೇ ಹಿಂದೆಂದೂ ಕಾಣದಿದ್ದಷ್ಟು– ಬಹುಶಃ, ೧೯೬೯ರ ಕಾಂಗ್ರೆಸ್ ವಿಭಜನೆಯ ನಂತರ ನಡೆದ ೧೯೭೧ರ ಚುನಾವಣಾ ಸಂದರ್ಭದ ಹೊರತಾಗಿ– ಪ್ರಮಾಣದಲ್ಲಿ ಚುನಾವಣಾ ಟಿಕೆಟ್‌ಗಾಗಿ ಪಕ್ಷಾಂತರ ನಡೆದಿದೆ. ಅದೂ, ಸಣ್ಣ ಪುಟ್ಟವರಿಂದಲ್ಲ; ಪಕ್ಷಗಳ ಮೊದಲ ಸಾಲಿನ ಅಥವಾ ಪ್ರಮುಖ ನಾಯಕರಿಂದಲೇ ಎಂದರೆ, ಯಾರಾದರೂ ನಿಜವಾಗಿ ಆತಂಕಪಡುವ ವಿಷಯವೇ ಆಗಿದೆ. ಕಾಂಗ್ರೆಸ್ ಪಕ್ಷವಂತೂ ಇತರ ಪಕ್ಷಗಳಿಗೆ ಅಭ್ಯರ್ಥಿಗಳನ್ನು ಒದಗಿಸುವ 'ಮಾತೃ' ಪಕ್ಷವಾಗಿ ಹೋಗಿದೆ! ಎಂ. ಮಹದೇವು, ಜಿ. ಮಾದೇಗೌಡ ಹಾಗೂ ನಾಗಮಾರಪಲ್ಲಿ ಅವರಂತಹ, ಬಹುಕಾಲ ಕಾಂಗ್ರೆಸ್ ಪಕ್ಷದಲ್ಲೇ ಬೇರು ಬಿಟ್ಟಿದ್ದ ನಾಯಕರು ಬೇರು ಕಿತ್ತುಕೊಂಡು ಹೊರಟಿದ್ದಾರೆಂದರೆ, ಕಾಂಗ್ರೆಸ್ ಪಕ್ಷದೊಳಗೆ ಸಣ್ಣದೊಂದು ಭೂಕಂಪವೇ ಆಗಿರಬೇಕು! ಪಕ್ಷ ಒಂದಿಷ್ಟು ಹೊಸ ಮುಖಗಳಿಗೆ ಅವಕಾಶ ಮಾಡಿಕೊಡುವ ಧೈರ್ಯ ತೋರಿರಬೇಕು ಅಥವಾ ಪಕ್ಷದೊಳಗಿನ ಪ್ರಭಾವಿ ಗುಂಪೊಂದು ಚುನಾವಣೆ ನಂತರ ತನ್ನ ವಿರುದ್ಧ ಮೂಡಬಹುದಾದ ಗುಂಪನ್ನು ಈಗಲೇ ನಿಯಂತ್ರಿಸುವ ಪ್ರಯತ್ನ ಮಾಡುತ್ತಿರಬೇಕು! ಜಾಫರ್ ಷರೀಫರಂತಹ ಹಿರಿಯ ನಾಯಕರು ತಾವು ಪಕ್ಷ ಬಿಡುವುದಾಗಿ ಘೋಷಿಸಿದ್ದುದು, ಇಂತಹ ಕಾರಣಗಳ ಮೇಲೇ ತಾನೆ? ಅವರ ಪ್ರಕಾರ ಪಕ್ಷದಲ್ಲಿ ಎಲ್ಲವೂ ಸರಿಯಾಗಿಲ್ಲ!

ಆದರೆ, ಈ ಹಿರಿಯ ನಾಯಕರು ಪಕ್ಷದ ನಡಾವಳಿ ಬಗ್ಗೆ ಚುನಾವಣೆ ಹೊತ್ತಿಗಷ್ಟೇ ಚುರುಕಾಗುವುದರ ಮರ್ಮವಾದರೂ ಏನು? ಚುನಾವಣೆ ಹೊತ್ತಿಗೆ ತಮಗೆ ಬೇಕಾದವರಿಗೆಲ್ಲ– ಮಕ್ಕಳು, ಮೊಮ್ಮಕ್ಕಳು ಮತ್ತು ನೆಂಟರಿಷ್ಟರೂ ಸೇರಿದಂತೆ– ಟಿಕೆಟ್ ಕೊಡಿಸುವುದರ ಮೂಲಕ ಪಕ್ಷದಲ್ಲಿ ಸರಿಯಾಗಿರದ ಎಲ್ಲವನ್ನೂ ಸರಿಪಡಿಸಿಕೊಳ್ಳಬಹುದು ಎಂಬ ನಂಬಿಕೆ! ಹಾಗಾಗಿಯೇ,

ಜಾಫರ್ ಷರೀಫರಂತಹ ವಯೋವೃದ್ಧ ನಾಯಕರೇ ಇಂದು 'ಮೌಲ್ಯ'ಗಳ ಬಗ್ಗೆ ಮಾತನಾಡಿದರೂ ಸಹ, ಜನ ಅದನ್ನು ನಂಬುವುದಿಲ್ಲ. ಏಕೆಂದರೆ, ಈ ಎಲ್ಲರೂ ಸೇರಿಯೇ ರಾಜಕಾರಣವನ್ನು ಸಂಪೂರ್ಣವಾಗಿ ಕುಟುಂಬ, ಜಾತಿ, ಧರ್ಮಗಳ ಹೆಸರಲ್ಲಿ, ಕೋಟಿಗಟ್ಟಲೆ ಹಣಕ್ಕೆ ಹರಾಜು ಹಾಕುತ್ತಿರುವ ಮೂಲಕ ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನೇ ಜಖಂ ಮಾಡುತ್ತಿರುವ ದೃಶ್ಯವನ್ನು ಜನ ಕಣ್ಣಾರೆ ಕಾಣುತ್ತಿದ್ದಾರೆ. ಚುನಾವಣೆ ಎಂದರೆ ಇಂದು ಮತ್ತೇನೂ ಆಗಿರದೆ, ಕೋಟ್ಯಾಧೀಶ್ವರರ ಭೀಕರ ಕಾಳಗವೇ ಆಗಿದೆ. ಇನ್ನೂ ಕಾಳಗ ಶುರುವಾಗುವ ಬಹು ಮುನ್ನವೇ ಚುನಾವಣಾ ಆಯೋಗದ ಕಟ್ಟುನಿಟ್ಟಿನ ಪಹರೆಯ ನಡುವೆಯೂ ರಾಜ್ಯಾದ್ಯಂತ ಕೋಟ್ಯಾಂತರ ರೂಪಾಯಿಗಳ ಬೆಲೆಯ ನಗದು, ಸೀರೆ, ಮದ್ಯ ಇತ್ಯಾದಿಗಳ ಸರಬರಾಜು ನಡೆದೇ ಇದೆ ಎಂದರೆ, ಈ ಕಾಳಗದಲ್ಲಿ ಗಣರಾಜ್ಯದ, ಪ್ರಜಾಪ್ರಭುತ್ವದ, ಶಾಸನಾಡಳಿತದ, ಜನಸೇವೆಯ ಯಾವ ಮೌಲ್ಯಗಳು ಉಳಿದಾವು?

ಹಾಗಾಗಿಯೇ, ಎಷ್ಟೇ ಹತಾಶೆಯಿದ್ದರೂ, ಈ ಚುನಾವಣೆಗಳಲ್ಲಿ 'ಮೌಲ್ಯ'ಗಳಿಗಾಗಿಯೇ ಸ್ಪರ್ಧಿಸಿರುವ 'ಸರ್ವೋದಯ ಕರ್ನಾಟಕ', 'ಸುವರ್ಣಯುಗ', 'ಲೋಕ ಪರಿತ್ರಾಣ'ದಂತಹ ಪಕ್ಷಗಳು ಮತ್ತು ರವಿಕೃಷ್ಣಾ ರೆಡ್ಡಿ(ಜಯನಗರ)ಯವರಂತಹ ವ್ಯಕ್ತಿಗಳು ಗಮನ ಸೆಳೆಯುತ್ತಾರೆ. ಈ ಚುನಾವಣೆಗಳಲ್ಲಿ ಇವರ ಗೆಲವು ಅಸಾಧ್ಯವೆನಿಸುವಷ್ಟರ ಮಟ್ಟಿಗೆ (ಬಹುಶಃ ಶ್ರೀರಂಗಪಟ್ಟಣದ ನಂಜುಂಡೇಗೌಡ ಹಾಗೂ ಮೇಲ್ಕೋಟೆಯ ಪುಟ್ಟಣ್ಣಯ್ಯರ ಹೊರತಾಗಿ) ಇವರೆಲ್ಲ ದುರ್ಬಲ ಅಭ್ಯರ್ಥಿಗಳೇ, ನಿಜ. ಆದರೆ ಇವರೆಲ್ಲ ವ್ಯವಸ್ಥೆಯ ಭ್ರಷ್ಟತೆಯನ್ನು ಇನ್ನೂ ಸಹಿಸುತ್ತಾ ಕೂತರೆ, ಸಮಾಜಕ್ಕೆ ಸರ್ವ ರೀತಿಯಲ್ಲೂ ಅಪಾಯ ಕಟ್ಟಿಟ್ಟ ಬುತ್ತಿ ಎಂಬ ಪ್ರಾಮಾಣಿಕ ಆತಂಕದಿಂದ ನಮ್ಮೆಲ್ಲರ ಧ್ವನಿಯಾಗಿ ಚುನಾವಣಾ ಕಣಕ್ಕೆ ಇಳಿದಿದ್ದಾರೆ. ಇವರ್ಯಾರೂ, ಸದ್ಯಕ್ಕೆ ಕೋಟ್ಯಾಧೀಶರೂ ಅಲ್ಲ, ಪಟ್ಟಭದ್ರರೂ ಅಲ್ಲ. ಹಾಗಾಗಿ, ಸದ್ಯದ ವ್ಯವಸ್ಥೆ ಬಗ್ಗೆ ಆತಂಕಿತರಾದವರೆಲ್ಲ, ಅವರ ಸೋಲು ಗೆಲುವುಗಳ ಸಾಧ್ಯತೆಗಳನ್ನು ಪರಿಗಣಿಸದೇ, ಅವರಿಗೆ ಮತ ಹಾಕಬೇಕಾಗಿದೆ. ಇವರು ನಮ್ಮೆಲ್ಲರ ಪರವಾಗಿ ಇಂದು ಸಣ್ಣ ಪ್ರಮಾಣದಲ್ಲಾದರೂ ಆರಂಭಿಸಿರುವ ಹೋರಾಟ, ಮುಂದಿನ ದಿನಗಳಲ್ಲಿ ದೊಡ್ಡ ರೂಪ ತಾಳುವಂತೆ ನಾವು ಮಾಡಬಹುದಾದದ್ದು ಸದ್ಯಕ್ಕೆ ಹೀಗೆ ಮಾತ್ರ.

ಮಿಕ್ಕಂತೆ ಇಂದಿನ ಜಟಿಲ ಪರಿಸ್ಥಿತಿಯಲ್ಲಿ, ಪಕ್ಷ ಮತ್ತು ಅಭ್ಯರ್ಥಿ– ಈ ಎರಡನ್ನೂ ನೋಡಿ ಮತ ಹಾಕುವುದೇ ಒಳ್ಳೆಯದೆಂದು ತೋರುತ್ತದೆ. ಕಳೆದ ಮೂರು– ಮೂರೂವರೆ ವರ್ಷಗಳಲ್ಲಿ ಸಮ್ಮಿಶ್ರ ಸರ್ಕಾರಗಳ ಹೆಸರಲ್ಲಿ ರಾಜ್ಯದ ಮೂರೂ ಪ್ರಮುಖ ಪಕ್ಷಗಳು ಆಡಿರುವ ಆಟಗಳ ಪರಿಯನ್ನು ನಾವು ನೋಡಿದ್ದೇವೆ. ವಿಶೇಷವಾಗಿ ಕಳೆದ ಒಂದೂವರೆ ವರ್ಷದಲ್ಲಿ ಎರಡನೇ ಸಮ್ಮಿಶ್ರ ಸರ್ಕಾರ ರಚನೆಯಾದ ಮತ್ತು ಇಪ್ಪತ್ತು ತಿಂಗಳ ನಂತರ ಅದು ದಿಢೀರನೆ ಕೊನೆಗೊಂಡ ಅಸಹ್ಯಕರ ರೀತಿ ನೀತಿಗಳನ್ನು ಗಮನಿಸಿದವರಿಗೆ, ಈ ಚುನಾವಣೆಗಳಲ್ಲಿ ಮತ ಹಾಕುವುದು ಎಷ್ಟು ಕಷ್ಟ ಎಂಬುದು ಅರಿವಾಗಿರುತ್ತದೆ. ಮುಖ್ಯವಾಗಿ ಬಳ್ಳಾರಿಯ ಇಬ್ಬರು ಗಣಿ ಉದ್ಯಮಿಗಳಿಂದ ಹರಿದು ಬಂದ ಅಪಾರ ಪ್ರಮಾಣದ ಹಣದ ಬೆಂಬಲದಿಂದ

ಎಲ್ಲ ಪ್ರಾಥಮಿಕ ರಾಜಕೀಯ ತತ್ವಗಳನ್ನೂ– ಸಾಮಾನ್ಯ ನೈತಿಕತೆಯನ್ನೂ ಧಿಕ್ಕರಿಸಿ ರೂಪುಗೊಂಡ ಈ ಮೈತ್ರಿ, ರಾಜ್ಯ ರಾಜಕಾರಣವನ್ನು ಹೇಗೆ ಕೋಟ್ಯಾಂತರ ರೂಪಾಯಿಗಳ ದಂಧೆಯನ್ನಾಗಿ ಪರಿವರ್ತಿಸಿತು ಎಂಬುದನ್ನು ನಾವು ಕಂಡಿದ್ದೇವೆ. ಇದರಿಂದಾಗಿ, ಮೊದಲೇ ಕುಸಿದಿದ್ದ ರಾಜಕೀಯ ನೈತಿಕತೆ ಹೇಗೆ ಪಾತಾಳ ಮುಟ್ಟಿ, ಹುಟ್ಟಾ ರಾಜಕೀಯ ಕುತಂತ್ರಿಗಳ ಬಾಯಲ್ಲಿ ಹೇಗೆ ದಿನ ದಿನವೂ ಹೊಸ ಹೊಸ ವ್ಯಾಖ್ಯಾನಗಳನ್ನು ಪಡೆದು ಜನರಲ್ಲಿ ಜಿಗುಪ್ಸೆಯನ್ನುಂಟು ಮಾಡಿತು ಎಂಬುದನ್ನೂ ನೋಡಿದ್ದೇವೆ. ಹಾಗೇ, ಎರಡೂ ಕಡೆ ವ್ಯಕ್ತವಾದ ಅಧಿಕಾರದ ಹಪಾಹಪಿ ಎರಡೂ ಕಡೆಯ ಮುಖಂಡರನ್ನೂ ಹೇಗೆ ಎಲ್ಲ ನಾಚಿಕೆ ಬಿಟ್ಟು, ಮತ್ತೆ ಮತ್ತೆ ಎಲ್ಲ ರಾಜಕೀಯ ಮರ್ಯಾದೆಯ ಎಲ್ಲೆಗಳನ್ನೂ ಮೀರಿ ವರ್ತಿಸುವಂತೆ ಮಾಡಿತು ಎಂಬುದನ್ನೂ ಗಮನಿಸಿದ್ದೇವೆ. ಇಂದಿನ ಚುನಾವಣೆಗಳ ಇಬ್ಬರು ಮುಖ್ಯಮಂತ್ರಿ ಅಭ್ಯರ್ಥಿಗಳು ತಮ್ಮ ವೈಯುಕ್ತಿಕ ಜನಪ್ರಿಯತೆಗಾಗಿ ಖಜಾನೆಯ ಹಣವನ್ನು ತಮಗೆ ಬೇಕಾದವರಿಗೆಲ್ಲ ಹೇಗೆ ಎಗ್ಗಿಲ್ಲದೆ ಹಂಚಿದರು ಮತ್ತು ತಮ್ಮ ಅಧಿಕಾರಕ್ಕೆ ಕುತ್ತು ಬಂದಾಗ ಜನಶಕ್ತಿಯಲ್ಲಿ ನಂಬಿಕೆಯನ್ನೇ ಕಳೆದುಕೊಂಡವರಂತೆ, ಕಂಡ ಕಂಡ ದೇವರು ದೆವ್ವಗಳಿಗೆಲ್ಲ ಮೊರೆ ಹೋಗಿ; ಹೂವು– ಕುಂಕುಮ– ತೆಂಗಿನಕಾಯಿ– ದಕ್ಷಿಣೆಗಳ ರಾಶಿಯಲ್ಲಿ ಹೇಗೆ ಕಳೆದುಹೋಗಿದ್ದರು ಎಂಬುದೂ ಜನರ ನೆನಪಿನಲ್ಲಿದೆ. ಹಾಗಾಗಿ ರಾಜ್ಯದ ಜನತೆ ಈಗ ವೈಚಾರಿಕವಾಗಿ ಪ್ರಬುದ್ಧವಾದ ಮತ್ತು ಸಾಮಾನ್ಯ ನೈತಿಕತೆಯ ಬಗ್ಗೆ ಕಿಂಚಿತ್ತಾದರೂ ಗೌರವವುಳ್ಳ ರಾಜಕೀಯ ನಾಯಕತ್ವಕ್ಕಾಗಿ ಕಾಯುತ್ತಿದೆ.

ಇಂತಹ ನಾಯಕತ್ವವನ್ನು ಕಾಂಗ್ರೆಸ್ ಕೊಡಬಲ್ಲದೇ ಎಂದು ಅತ್ತ ನೋಡಿದರೆ, ಅದು ಕಳೆದ ಚುನಾವಣೆಗಳ ಸೋಲಿನಿಂದ ಏನೂ ಪಾಠ ಕಲಿತಂತೇ ಕಾಣುವುದಿಲ್ಲ. ಕಳೆದ ಬಾರಿಯ ಸೋಲು ಬರೀ ಆಕಸ್ಮಿಕವೇನೋ ಎಂಬ ನಿರಾಳತೆಯಲ್ಲಿ ಅದು ಆ ಹಳೆಯ ಪಕ್ಷವಾಗೇ ಉಳಿದಿದೆ! ಒಂದೇ ಗಮನಾರ್ಹ ಬದಲಾವಣೆ ಎಂದರೆ, ಈಗ ಅದರ ನಾಯಕತ್ವವನ್ನು ಅಷ್ಟೇನೂ ಹೆಸರು ಕೆಡಿಸಿಕೊಳ್ಳದ ಮತ್ತು ಒಂದಿಷ್ಟು ಸ್ವಾಭಿಮಾನಿಯಂತೆ ಕಾಣುವ ಜಾತ್ಯತೀತ ದೃಷ್ಟಿಯ ದಲಿತ ಮುಖಂಡರೊಬ್ಬರು ವಹಿಸಿಕೊಂಡಿದ್ದಾರೆ ಎನ್ನುವುದು. ತೀರಾ ಸಂಪ್ರದಾಯವಾದಿಯೂ ಅಲ್ಲದ ಹಾಗೇ ತೀರಾ ಆಧುನಿಕರೂ ಅಲ್ಲದ ಮಲ್ಲಿಕಾರ್ಜುನ ಖರ್ಗೆ ರಾಜ್ಯದ ಇಂದಿನ ಎಲ್ಲ ಪಕ್ಷಗಳ ನಾಯಕರ ಪೈಕಿ ಮುಖ್ಯಮಂತ್ರಿ ಸ್ಥಾನಕ್ಕೆ ಹೆಚ್ಚು ಅರ್ಹರಂತೆ ಕಾಣುತ್ತಾರೆ. ಆದರೆ ಅವರ ಪಕ್ಷ ಚುನಾವಣೆಗಳಲ್ಲಿ ಈ ಮೊದಲು ನಿರೀಕ್ಷಿಸಿದಂತೆ, ಟಿಕೆಟ್ ಹಂಚಿಕೆಯನ್ನು ಸ್ವಯಂ–ನಂಬಿಕೆಯ ವಿಶ್ವಾಸ ಮತ್ತು ಧೈರ್ಯಗಳೊಂದಿಗೆ ನಿರ್ವಹಿಸುವಲ್ಲಿ ಸೋತಿದೆ ಎಂದೇ ಹೇಳಬೇಕು. ಕೊನೇ ನಿಮಿಷದಲ್ಲಿ ಅದು ಎಲ್ಲ ರೀತಿಯ ಒತ್ತಡಗಳಿಗೆ ಮಣಿದಂತೆ ತೋರುತ್ತದೆ. ಪಕ್ಷ ಹಿರಿಯ ನಾಯಕರನ್ನು ಎದುರು ಹಾಕಿಕೊಳ್ಳುವಲ್ಲಿ ತೋರಿಸಿದ ಧೈರ್ಯವನ್ನು, ಹಣದ ಥೈಲಿಗಳೊಂದಿಗೆ ಬಂದ ರಿಯಲ್ ಎಸ್ಟೇಟ್ ಖದೀಮರಿಗೆ, ಗಣಿ ಕುಳಗಳಿಗೆ ಹಾಗೂ ಬಾಯಿ ಬಡುಕರಾದ ಸಿನೆಮಾ ನಟ ನಟಿಯರಿಗೆ ಟಿಕೆಟ್ ನಿರಾಕರಿಸುವಲ್ಲಿ ತೋರಲಾಗಿಲ್ಲ. ಇತರ ಪಕ್ಷಗಳೂ ಇಂತಹ ಅನೇಕ ಖದೀಮ ಹಾಗೂ

ಪೊಟ್ಟಿ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿವೆ ಎಂದಷ್ಟೇ ಈ ಪಕ್ಷ ಈ ವಿಷಯವಾಗಿ ಸಮಾಧಾನ ಪಟ್ಟುಕೊಳ್ಳಬಹುದಾಗಿದೆ. ಆದರೂ, ಇತರ ಪಕ್ಷಗಳಿಗೆ ಹೋಲಿಸಿದರೆ, ಈ ಪಕ್ಷದಲ್ಲಿ ಟಿಕೆಟ್‌ಗಾಗಿ ಎದ್ದಿರುವ ಹಾಹಾಕಾರ ಮತ್ತು ಇದರ ಪರಿಣಾಮವಾಗಿ ಸ್ಫೋಟಗೊಂಡಿರುವ ಬಂಡಾಯದ ಪ್ರಮಾಣ ನೋಡಿದರೆ, ಇದು ಜನರ ಕಣ್ಣಲ್ಲಿ ಗೆಲ್ಲುವ ಪಕ್ಷವಾಗಿ ಕಂಡಿರಬಹುದೇ ಎನ್ನುವ ಅನುಮಾನವೂ ಉಂಟಾಗುತ್ತದೆ!

ಇನ್ನು ಬಿ.ಎಸ್.ಪಿ.ಯಾದರೋ, ಮಾಯಾವತಿಯವರು ತಮ್ಮ ಎಂದಿನ ಧಾರ್ಷ್ಟ್ಯತೆಯಿಂದ ಬೆಂಗಳೂರಿನ ಸಾರ್ವಜನಿಕ ಸಭೆಯೊಂದರಲ್ಲೇ ಉಪ ಜಾತಿ ರಾಜಕಾರಣದ ಲೆಕ್ಕಾಚಾರದ ಮೇಲೆ ಬಿ. ಗೋಪಾಲರನ್ನು ಪಕ್ಷದ ನಾಯಕತ್ವದಿಂದ ಉಚ್ಚಾಟಿಸಿದ ನಂತರ ಮಂಕಾಗಿದ್ದುದು, ಈಗ ಚುನಾವಣೆ ಹೊತ್ತಿಗೆ ಇತರ ಪಕ್ಷಗಳ ಅತೃಪ್ತರ ವಲಸೆಯಿಂದಾಗಿ ಚುರುಕಾದಂತಿದೆ. ಆದರೆ ಎಲ್ಲೂ ಸಲ್ಲಲಾಗದ ಹಂತ ತಲುಪಿರುವ ಎಚ್.ಎನ್. ನಂಜೇಗೌಡ, ಕೆ.ಎಚ್. ಹನುಮೇಗೌಡ, ಡಿ.ಟಿ. ಜಯಕುಮಾರರಂತಹ ನಾಯಕರು ಚುನಾವಣೆ ಮುಗಿಯುವವರೆಗೆ ಮಾತ್ರ ಈ ಪಕ್ಷದಲ್ಲಿರಬಲ್ಲರೆಂಬುದು ಬಹುಶಃ ಪಿ.ಜಿ.ಆರ್. ಸಿಂಧ್ಯಾ ಅವರಿಗೂ ಗೊತ್ತಿದೆ. ಆದರೆ ತನ್ನ ಪೂರ್ವಯೋಜನೆಯಂತೆ, ಬ್ರಾಹ್ಮಣ ನಾಯಕರನ್ನಾಗಲೀ, ಲಿಂಗಾಯ್ತ ನಾಯಕರನ್ನಾಲೀ ಸೆಳೆಯಲಾಗದ ಪಕ್ಷ; ಸದ್ಯಕ್ಕೆ ಖಾಲಿ ಇರುವುದಕ್ಕಿಂತ ಇಂತಹ 'ಗಣನೀಯ'ರಾದ ಒಂದಷ್ಟು ಜನರನ್ನು ಇರಿಸಿಕೊಳ್ಳುವುದು ಒಳ್ಳೆಯದೆಂದು ಅವರು ಭಾವಿಸಿದಂತಿದೆ! ಹಾಗೆ ನೋಡಿದರೆ, ಸಿಂಧ್ಯಾರ ಸ್ಥಾನಮಾನವೇ ಆ ಪಕ್ಷದಲ್ಲಿ ಭದ್ರವಾದಂತಿಲ್ಲ. ರಾಜ್ಯದ ಯಾವ ನಾಯಕರಿಗೂ ಯಾವುದೇ ಅಧಿಕಾರ ನೀಡದ ಮಾಯಾವತಿ, ಕರ್ನಾಟಕದಲ್ಲಿನ ತಮ್ಮ ರಾಜಕಾರಣವನ್ನೆಲ್ಲ ತಮ್ಮ ಪ್ರತಿನಿಧಿ ವೀರ್ ಸಿಂಗ್ ಅವರ ಮೂಲಕವೇ ಮಾಡಿಸುತ್ತಿದ್ದಾರೆ. ಸಿಂಧ್ಯಾರ ಕೆಲಸವೇನಿದ್ದರೂ, ದಲಿತರಲ್ಲಷ್ಟೇ– ಇತ್ತೀಚೆಗಂತೂ ಬಲಗೈನವರಲ್ಲಷ್ಟೇ– ಸಂಘಟನೆಗೊಂಡಂತಿದ್ದ ಈ ಪಕ್ಷವನ್ನು ಈಗ ಎಲ್ಲ ಜಾತಿಗಳ ಜನರ ಪಕ್ಷವೆಂದು ಬಿಂಬಿಸುವುದಾಗಿದೆ. ಇದು ಕೂಡಾ ಮಾಯಾವತಿಯವರನ್ನು ದೇಶದ ಪ್ರಧಾನ ಮಂತ್ರಿ ಮಾಡುವುದರ ಹೊರತಾಗಿ ಬೇರಾವ ಉದಾತ್ತ ಉದ್ದೇಶವನ್ನೂ ಬಿಂಬಿಸುತ್ತಿಲ್ಲವಾದ್ದರಿಂದ; ಪಕ್ಷ ಈ ಚುನಾವಣೆಗಳಲ್ಲಿ ಹಲವು 'ಪಕ್ಷಾಂತರಿ'ಗಳಿಗೆ ತನ್ನ ಕಡೆಯಿಂದ ಸ್ಪರ್ಧೆಯ ಅವಕಾಶ ಮಾಡಿಕೊಟ್ಟು, ಇತರ ಪ್ರಮುಖ ಪಕ್ಷಗಳ ಅಭ್ಯರ್ಥಿಗಳಲ್ಲಿ ಆತಂಕ ಉಂಟು ಮಾಡುವ ಮಟ್ಟಿಗೆ 'ಸುದ್ದಿ' ಮಾಡಬಹುದು ಇದರ ಹೊರತಾಗಿ ಇನ್ನಾವ ಪರಿಣಾಮವನ್ನೂ ಉಂಟುಮಾಡಲಾರದೆಂದು ತೋರುತ್ತದೆ. ಹೆಚ್ಚೆಂದರೆ, ಹೋದ ಬಾರಿ ಮಾಡಿದಂತೆ, ಕೆಲವೆಡೆ ಪ್ರಮುಖ ಪಕ್ಷಗಳ ಸೋಲಿಗೆ ಕಾರಣವಾಗಬಹುದು.

ಪರಿಸ್ಥಿತಿ ಹೀಗಿರುವಾಗ ಜನ ಏನು ನೋಡಿ ಮತ ಹಾಕಬೇಕು? ನೈತಿಕತೆ ಹಾಗೂ ರಾಜಕೀಯ ತಾತ್ವಿಕತೆ ಬಗ್ಗೆ ಉಡಾಫೆಯಿಂದ ಮಾತಾಡುವವರನ್ನು ಮೊದಲು ತಿರಸ್ಕರಿಸಬೇಕು. ಜಾತಿ ಹಾಗೂ ಧರ್ಮಗಳ ಹೆಸರಲ್ಲಿ ರಾಜಕಾರಣ ಮಾಡುವವರನ್ನು

ತಿರಸ್ಕರಿಸಬೇಕು. ಅಕ್ರಮ ಮಾರ್ಗಗಳ ಮೂಲಕ ದಿಢೀರ್ ಆಸ್ತಿ ಮಾಡಿರುವವರನ್ನು ತಿರಸ್ಕರಿಸಬೇಕು. ಆದಷ್ಟೂ ಸಾತ್ವಿಕರನ್ನು; ಆದರೆ ಕ್ರಿಯಾಶೀಲರಾಗಿರುವವರನ್ನು ಮತ್ತು ಸಭ್ಯ ಜೀವನವನ್ನು ನಡೆಸುತ್ತಿರುವ, ಮಿತವಾದ ಆಸ್ತಿಯನ್ನಷ್ಟೇ ಹೊಂದಿರುವವರನ್ನು ಆರಿಸುವ ಕಡೆ ಗಮನ ಹರಿಸಬೇಕು. ಹೀಗೆ ಆರಿಸುವಾಗ, ಪಕ್ಷ ಅಡ್ಡ ಬಂದರೂ ಅದನ್ನು ತಿರಸ್ಕರಿಸಬೇಕು. ಉದಾಹರಣೆಗೆ, ಸುರೇಶ್ ಕುಮಾರ್, ವಿ.ಎಸ್. ಆಚಾರ್ಯ, ಬಸವರಾಜ ಯತ್ನಾಳ್ ಅಥವಾ ವಿಶ್ವೇಶ್ವರ ಕಾಗೇರಿಯಂತಹವರನ್ನು ಕೋಮುವಾದಿ ಪಕ್ಷಕ್ಕೆ ಸೇರಿದವರೆಂದು ತಿರಸ್ಕರಿಸಲಾದೀತೇ? ಹಾಗೇ, ಪುಟ್ಟೇಗೌಡ, ಸಿ. ನಾರಾಯಣ ಸ್ವಾಮಿ, ಎ.ಟಿ. ರಾಮಸ್ವಾಮಿ ಅಥವಾ ಅಮರನಾಥ ಶೆಟ್ಟಿಯವರಂತಹವರನ್ನು ಕುಟುಂಬ ರಾಜಕಾರಣದ ಸಮರ್ಥಕರೆಂದು ತಿರಸ್ಕರಿಸಲಾದೀತೇ? ಇಂತಹವರು ಯಾವ, ಎಂತಹ ಪಕ್ಷಲ್ಲಿದ್ದರೂ– ಅವರೆಲ್ಲ ವೈಯುಕ್ತಿಕ ದೌರ್ಬಲ್ಯಗಳ ನಡುವೆಯೂ– ಜನ ವಿರೋಧಿಗಳಾಗಲಾರರು. ಏಕೆಂದರೆ ಇಂತಹವರಿನ್ನೂ ಸಾರ್ವಜನಿಕ ಜೀವನದಲ್ಲಿ ನಾಚಿಕೆ ಎಂಬುದನ್ನು ಕಾಪಾಡಿಕೊಂಡು ಬಂದಂತಿದೆ! ಅಲ್ಲದೆ, ಇಂದಿನ ಗೊಂದಲಮಯ ರಾಜಕಾರಣದಲ್ಲಿ ಕೆಟ್ಟ ಪಕ್ಷಗಳಲ್ಲೂ ಒಂದಷ್ಟು ಒಳ್ಳೆಯ ಜನರು ಇರುವಂತಹ ಸನ್ನಿವೇಶ ಸೃಷ್ಟಿಯಾಗಿದೆ....

ಅಂದ ಹಾಗೆ: ಕಸ್ತೂರಿ ಟಿ.ವಿ. ವಾಹಿನಿ ಆರಂಭವಾದಾಗ, ಅದರ ಮುಖ್ಯಸ್ಥೆ ಅನಿತಾ ಕುಮಾರಸ್ವಾಮಿಯವರು, ಇದಕ್ಕೂ ತಮ್ಮ ಪತಿಯ ರಾಜಕಾರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಘೋಷಿಸಿದ್ದರು. ಅದನ್ನು ನಂಬಿದ್ದ ಜನ ಈಗ ಕಸ್ತೂರಿ ವಾರ್ತೆಗಳನ್ನು ಕೇಳಿ ಗಾಬರಿಗೊಳ್ಳತೊಡಗಿದ್ದಾರೆ. ಅದು ಎಲ್ಲ ಮಾಧ್ಯಮ ಸಂಹಿತೆ– ಮರ್ಯಾದೆಗಳನ್ನು ಮೀರಿ ಜೆಡಿಎಸ್ ಪಕ್ಷದ ರಣ ಕಹಳೆಯಾಗಿ ಮಾರ್ಪಾಡಾಗಿದೆ!

ಮೇ ೯, ೨೦೦೮

ಅನುಬಂಧ – ೧

ಪಂಚ ಪ್ರಶ್ನೆಗಳು:

೧ 'ಮರಳಿ ಬರಲಿದೆ ಸಮಾಜವಾದ' ಎಂಬ ಆಶಯದೊಂದಿಗೆ ಸಮಾಜವಾದಿಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡುತ್ತಿದ್ದೀರಿ. ನಿಮ್ಮ ಪ್ರಯತ್ನ ಆಶಾವಾದಿಯಾಗಿದೆಯೇ?

'ಮರಳಿ ಬರಲಿದೆ ಸಮಾಜವಾದ' ಪುಸ್ತಕದ ಮೂಲಕ ನಾನು ಸಮಾಜವಾದದ ಅನಿವಾರ್ಯತೆ ಹಾಗೂ ಅದು ಸೃಷ್ಟಿಯಾಗುತ್ತಿರುವ ಹೊಸ ಬಗೆಗಳನ್ನು ನಿರೂಪಿಸುವ ಪ್ರಯತ್ನ ಮಾಡಿದ್ದೇನೆಯೇ ಹೊರತು, ಸಮಾಜವಾದಿಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಿಲ್ಲ. ಜಾಗತೀಕರಣದ ಸಂದರ್ಭದಲ್ಲಿ ಒಡಮೂಡಬೇಕಾದ ಹೊಸ ಸಮಾಜವಾದದೆಡೆಗೆ ಯುವಜನರ ಗಮನ ಸೆಳೆಯುವ ಉದ್ದೇಶವಷ್ಟೆ ನನ್ನದು.

೨. ಕಾಂಗ್ರೆಸ್ ಕುರಿತು ಇಂದಿನ ಸಮಾಜವಾದಿಗಳ ನಿಲುವು ಹೇಗಿರಬೇಕು?

ಸದ್ಯದ ಸಂದರ್ಭದಲ್ಲಿ ಸಮಾಜವಾದಿಗಳೆನಿಸಿಕೊಂಡವರಿಗೆ ಕಾಂಗ್ರೆಸ್ಸೇ ತಾತ್ವಿಕವಾಗಿ ಅತಿ ಹತ್ತಿರದ ಪಕ್ಷ. ಹಾಗೆ ನೋಡಿದರೆ, ಅದು ಅವರ ಮಾತೃ ಪಕ್ಷ. ಹಾಗಾಗಿ, ಇಂದು ಪಕ್ಷ ಕಳೆದುಕೊಂಡಿರುವ ಸಮಾಜವಾದಿಗಳು ಹೊರಗಿನಿಂದಲೋ, ಒಳಗಿನಿಂದಲೋ ಆ ಪಕ್ಷದ ಮೇಲೆ ಒತ್ತಡ ಹೇರಿ, ಅದು ನಿಜವಾದ 'ದೇಸಿ' ಪಕ್ಷವಾಗುವಂತೆ ಪ್ರಯತ್ನಿಸುವುದೇ ಇಂದು ಅವರಿಗೆ ಉಳಿದಿರುವ ದಾರಿ.

೩ .ಸಮಾಜವಾದಕ್ಕೆ ಮಿತಿಗಳಿವೆ, ಬಂಡವಾಳಶಾಹಿಯೊಂದಿಗೆ ಈಗ ರಾಜಿ ಅಗತ್ಯ ಅನ್ನುತ್ತಿದ್ದಾರಲ್ಲ ಮಾರ್ಕ್ಸ್‌ವಾದಿಗಳು?

ಬಂಡವಾಳಶಾಹಿ ಮತ್ತು ಕಮ್ಯುನಿಸಂ, ಪಶ್ಚಿಮದ ಎಲ್ಲೆಯಿಲ್ಲದ ಭೌತವಾದಿ ನಾಗರೀಕತೆಯ ಎರಡು ಮುಖಗಳು ಎಂದು ಲೋಹಿಯಾ ಹೇಳುತ್ತಿದ್ದರು. ಏಕೆಂದರೆ, ಅವೆರಡೂ ವಸಾಹತುಗಳನ್ನು ಸೂರೆ ಮಾಡಿ ಕ್ರೋಢೀಕರಿಸಿಕೊಂಡ ಬಂಡವಾಳದಿಂದ ಹುಟ್ಟಿದ 'ಅಮಾನವ' ತಂತ್ರಜ್ಞಾನವನ್ನು ನೆಚ್ಚಿಕೊಂಡವು. ಆ ಸತ್ಯ ಈಗ ಬಂಗಾಳದ ಮಾರ್ಕ್ಸ್‌ವಾದಿಗಳ ಸಮಾಜವಾದ ಕುರಿತ ನಿಲುವಿನ ಮೂಲಕ ವ್ಯಕ್ತವಾಗಿದೆಯಷ್ಟೆ.

೪. ಭಾರತಕ್ಕೆ ಇಂದು ಎಂತಹ ಅಭಿವೃದ್ಧಿ ಮಾದರಿ ಬೇಕಿದೆ?

ಆದಷ್ಟೂ ದೇಶೀ ಬಂಡವಾಳ ಮತ್ತು ಮಾನವ ಕೇಂದ್ರಿತ ತಂತ್ರಕೌಶಲ್ಯವನ್ನು ಆಧರಿಸಿದ ಪರಿಸರ ಸ್ನೇಹಿ ಅಭಿವೃದ್ಧಿ ಮಾದರಿಯ ಅಗತ್ಯವಿದೆ.

೫. ಕಿಷನ್ ಪಟ್ನಾಯಕ್ ಅವರು ಸಮಾಜವಾದಿಗಳಿಗೆ ಇದು ಧ್ಯಾನದ ಕಾಲ ಎಂದಿದ್ದಾರೆ. ಇದನ್ನು ಸರಳವಾಗಿ ವಿವರಿಸುವರಾ?

ಸಮಾಜವಾದಿಗಳು ಪ್ರತಿಭಟಿಸಿ, ಪ್ರತಿಭಟಿಸಿ ದಣಿದಿದ್ದಾರೆ. ಈ ದಣಿವನ್ನು ನಿವಾರಿಸಿಕೊಳ್ಳಲು ಬಹಳಷ್ಟು ಜನ ಸಮಾಜವಾದದಿಂದಲೇ ದೂರ ಸರಿದು, ಅಧಿಕಾರ ರಾಜಕಾರಣದ ಐಷಾರಾಮಿ ವಿಶ್ರಾಂತಿಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಿಷನ್ ಪಟ್ನಾಯಕ್ ಹೇಳಿದ್ದು, ಈ ದುರಂತ ಸಂಭವಿಸಲು ಕಾರಣಗಳೇನು ಮತ್ತು ಇದನ್ನು ಮುಂದೆ ತಡೆಯಲು ಸಮಾಜವಾದಿ ಮಾರ್ಗವನ್ನು ಹೇಗೆ ಪುನರ್ರೂಪಿಸಬೇಕು ಎಂಬುದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಅರ್ಥದ ಧ್ಯಾನದ ಬಗ್ಗೆ.

ವಿಜಯ ಕರ್ನಾಟಕ : ೬.೨.೨೦೦೮

ಅನುಬಂಧ - ೨

ಕರ್ನಾಟಕದ ಇಂದಿನ ರಾಜಕಾರಣ: ಒಂದು ಪ್ರಶ್ನೋತ್ತರ

೧. ಕರ್ನಾಟಕದ ಸದ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ಬಂದು ನಿಂತಿದೆ. ಇಂತಹ ಅಧಃಪತನಕ್ಕೆ ನೀವು ಕಂಡುಕೊಳ್ಳುವ ಕಾರಣಗಳೇನು?

ಜಾಗತೀಕರಣ ಬದುಕಿನ ಮೇಲೆ ಸ್ಥಾಪಿಸಿರುವ ಹಣದ ಪರಮಾಧಿಕಾರ ಹಾಗೂ ಎಲ್ಲ ರಾಜಕೀಯ ಪಕ್ಷಗಳೂ ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನೇ ಕಳೆದುಕೊಂಡಂತೆ, ಇದನ್ನು ಸದ್ದಿಲ್ಲದೆ ಒಪ್ಪಿಕೊಳ್ಳುವ ಮಂಕಿಗೆ ಒಳಗಾಗಿರುವುದು.

೨. ಜಾತ್ಯತೀತ ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ (ಎಸ್) ಪಕ್ಷದ ನೈತಿಕ ಕುಸಿತ, ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೇ?

ಸಾರ್ವಜನಿಕ ಜೀವನದಲ್ಲಿ ಈಗ ನೈತಿಕತೆ ಎನ್ನುವುದು ಸಾಂದರ್ಭಿಕ ಮಾತ್ರವಾಗಿರುವುದರಿಂದ, ಜೆಡಿಎಸ್ ಸದ್ಯಕ್ಕಷ್ಟೇ ಹಿನ್ನೆಲೆಗೆ ಸರಿದಂತೆ ನಮಗೆ ಕಂಡಿದ್ದರೂ, ಅದು ಪ್ರತಿನಿಧಿಸುವ ಮಧ್ಯಮ ಜಾತಿಗಳ ಊಳಿಗಮಾನ್ಯ ಶಕ್ತಿಗಳು ಜೀವಂತವಾಗಿರುವವರೆಗೆ ಅದು ಒಂದಲ್ಲ ಒಂದು ಹೆಸರಿನಲ್ಲಿ ಉಳಿದೇ ಉಳಿದಿರುತ್ತದೆ. ಎಲ್ಲಿಯವರೆಗೆ ಜಾತಿಗಳಿರುತ್ತವೋ ಅಲ್ಲಿವರೆಗೆ ಇಲ್ಲಿ ದ್ವಿಪಕ್ಷ ಪದ್ಧತಿ ಸಾಧ್ಯವಿಲ್ಲ.

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ, ಅದು ಸಾಧ್ಯವಾಗದಿರುವುದಕ್ಕೆ ನೀವು ಗುರುತಿಸುವ ಕಾರಣಗಳೇನು?

ಒಂದುಗೂಡಲು, ಕರ್ನಾಟಕದಲ್ಲಿ 'ಎಡ' ಹಾಗೂ 'ಪ್ರಜಾಸತ್ತಾತ್ಮಕ' ಎರಡೂ ಆಗಿರುವ ಶಕ್ತಿಗಳು ಎಲ್ಲಿ ಉಳಿದಿವೆ?

೪. ಜನಪರ ಚಳುವಳಿಗಳು ಅಧಿಕಾರ ರಾಜಕಾರಣದ ಸಂದರ್ಭದಲ್ಲಿ ಸಮರ್ಥ(ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿರುವುದೇಕೆ?

ಜನಪರ ಚಳುವಳಿಗಳು ಎಂದು ಕರೆಯಲಾಗುವ ಚಳುವಳಿಗಳು ನಿಜವಾದ ಹಾಗೂ ಪೂರ್ಣವಾದ ಅರ್ಥದಲ್ಲಿ ಜನಪರವಾಗಿಲ್ಲದಿದ್ದುದೇ ಅವು ಸೋಲಲು ಕಾರಣ.

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆಯಾ? ಬಿ.ಎಸ್.ಪಿ., ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ. ಇವೇ ಮೊದಲಾದ ಪಕ್ಷಗಳ ಮುಂದಿನ ದಾರಿ ಮತ್ತು ಗುರಿಗಳನ್ನು ನೀವು ಹೇಗೆ ಕಾಣುತ್ತೀರಿ?

ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹಾಗೂ ಕೊಡುತ್ತಾ ನಮ್ಮ ಮುಕ್ಕಾಲು ಆಯುಷ್ಯವೇ ಕಳೆದುಹೋಗಿದೆ. ಏನೂ ಪ್ರಯೋಜನವಾಗಿಲ್ಲ. ಬಿಎಸ್‌ಪಿ ಎಂದೋ ತನ್ನ ತಾತ್ವಿಕತೆಯನ್ನು ಅನಗತ್ಯ ಭಾರವೆಂಬಂತೆ ಕಿತ್ತೆಸೆದಿದೆ. ಅದು ತನ್ನ ನಾಯಕಿಯನ್ನು ದೇಶದ ಪ್ರಧಾನಿಯಾಗಿ ಮಾಡಿಬಿಟ್ಟರೆ ತಳ ಸಮುದಾಯಗಳ ಸಮಸ್ಯೆಗಳೆಲ್ಲ ಪರಿಹಾರವಾಗಿಬಿಡುತ್ತವೆ ಎಂಬ ಹುಂಬ ನಂಬಿಕೆಯಿಂದ ಸಮಯಸಾಧಕ ರಾಜಕೀಯ ತಂತ್ರವನ್ನಷ್ಟೇ ತನ್ನ ದಾರಿಯನ್ನಾಗಿ ಆರಿಸಿಕೊಳ್ಳುವ ಮೂಲಕ ರಾಜಕೀಯ ಗುರಿ ಕಳೆದುಕೊಂಡಿದೆ. ಸರ್ವೋದಯ ಕರ್ನಾಟಕ ಅದು ಹುಟ್ಟಿದಾಗ ಹುಟ್ಟಿಸಿದ್ದ ಆಸೆಯನ್ನು, ಈ ಮೂರು ವರ್ಷಗಳಲ್ಲಿ ತನ್ನ ನಿಷ್ಕ್ರಿಯತೆಯ ಮೂಲಕ ಮಣ್ಣುಗೂಡಿಸಿದೆ. ರಾಜ್ಯ ರಾಜಕೀಯದ ಗೊಂದಲಗಳ ಸಂದಿಯಲ್ಲಿ ತನ್ನ ರಾಜಕೀಯ ಸಮಾರಾಧನೆಯನ್ನು ಮಾಡಿಕೊಳ್ಳಲೆಣಿಸಿದ ಹುಟ್ಟಾ ಪರಾವಲಂಬಿ ಪಕ್ಷದಂತೆ ಅದು ಇಂದು ಕಾಣುತ್ತಿದೆ. ಆರ್.ಪಿ.ಐ. ನನಗೆ ತಿಳಿದಂತೆ ಕರ್ನಾಟಕದ ನೆಲದಲ್ಲಿ ಎಂದೂ ನೆಲೆಯೂರಿಲ್ಲ. ಹೀಗಾಗಿ ಈ ಪಕ್ಷಗಳ ಭರವಸೆಯ ಮೇಲೆ ಕರ್ನಾಟಕದ ರಾಜಕಾರಣವನ್ನು ಪುನಾರಚಿಸುವುದು ಸದ್ಯಕ್ಕೆ ಅಸಾಧ್ಯವೆಂದೇ ನನಗೆ ಕಾಣುತ್ತದೆ.

೬. ಕರ್ನಾಟಕದ ಮುಂದಿನ ರಾಜಕಾರಣ ಹೇಗಿರಬೇಕೆಂದು ನೀವು ಬಯಸುತ್ತೀರಿ?

ಎಷ್ಟೇ ಕೆಟ್ಟಿದ್ದರೂ, ಇಂದು ಕಾಂಗ್ರೆಸ್ಸೊಂದೇ ಸದ್ಯಕ್ಕೆ ಕರ್ನಾಟಕದ ಮುಂದಿನ ರಾಜಕಾರಣಕ್ಕೆ ಆಧಾರವಾಗಬಲ್ಲ ಪಕ್ಷವೆಂದು ಹೇಳಬೇಕಾಗಿರುವ ದುಃಸ್ಥಿತಿ ನಮ್ಮದಾಗಿದೆ! ನೀವು ಹೇಳುವಂತಹ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳೇನಾದರೂ ರಾಜ್ಯದಲ್ಲಿ ಉಳಿದಿದ್ದರೆ, ಅವು ಈ ಪಕ್ಷದ ಮೇಲೆ ಒತ್ತಡ ಹೇರಿ ಅದನ್ನು ವರ್ತಮಾನದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲ ರಾಜಕೀಯ ಪಕ್ಷವನ್ನಾಗಿ ಸನ್ನದ್ಧಗೊಳಿಸಬೇಕಿದೆ. ಆ ಪಕ್ಷ ಕೂಡಾ ಸೋನಿಯಾ ಗಾಂಧಿ ಪಕ್ಷವೆನ್ನಿಸಿಕೊಳ್ಳಲು ಹಿಂದೆಗೆದು, ಮಹಾತ್ಮ ಗಾಂಧಿ ಪಕ್ಷವಾಗಿ ಪುನರ್ರೂಪಗೊಳ್ಳುವ ಸಂಕಲ್ಪ ಮಾಡಬೇಕಾಗಿದೆ. ಇದಕ್ಕಾಗಿ ಆ ಪಕ್ಷದ ಬಸವಳಿದು ಹೋಗಿರುವ ಹಿರಿಯ ನಾಯಕರು ಹೊಸ ಮತ್ತು ಯುವ ನಾಯಕತ್ವವನ್ನು ಪಕ್ಷದ ಒಳಗೂ ಹೊರಗೂ ಹುಡುಕಿ ರೂಪಿಸಬೇಕಿದೆ. ಪಕ್ಷಕ್ಕೆ ಹೊಸ ಕಳೆ ತರಬೇಕಿದೆ. ಇದು ಕಾಂಗ್ರೆಸ್ ಇತರ ಜಾತ್ಯತೀತ ಹಾಗೂ ಪ್ರಗತಿಪರ ಶಕ್ತಿಗಳೊಡಗೂಡಿ ತುರ್ತಾಗಿ ಕೈಗೊಳ್ಳಲೇಬೇಕಾದ ಐತಿಹಾಸಿಕ ಕೆಲಸ. ಇಲ್ಲದೇ ಹೋದಲ್ಲಿ ಅದಕ್ಕೂ ಉಳಿಗಾಲವಿಲ್ಲ ಹಾಗೂ ಅದರೊಂದಿಗೆ ನಾವೆಲ್ಲ ರಾಜ್ಯವನ್ನು ಮತ್ತು ರಾಷ್ಟ್ರವನ್ನು ಬಿಜೆಪಿಗೆ ತಟ್ಟೆಯಲ್ಲಿಟ್ಟು ಕೊಡಲು ತಯಾರಾಗಬೇಕಾಗುತ್ತದೆ.

ಸಂವಾದ ಮಾರ್ಚ್, ೨೦೦೮



ಇದು ಭಾರತ!
ಇದು ಭಾರತ!!

ಹಿರಿಯ ಮಿತ್ರ ಡಿ.ಎಸ್. ನಾಗಭೂಷಣ– ಪ್ರಮುಖ ಸಮಕಾಲೀನ ವಾಗ್ವಾದಗಳಲ್ಲಿ ಸದಾ ತಮ್ಮನ್ನು ಜೀವಂತವಾಗಿರಿಸಿಕೊಂಡವರು. ಈ ಸಂಕಲನದಲ್ಲಿ ಕೆ. ರಾಮದಾಸ್ ಬಗ್ಗೆ ಉಲ್ಲೇಖಗೊಂಡ– 'ಸಮಾಜವಾದಿ, ವಿಚಾರವಾದಿ, ನಿಷ್ಠುರವಾದಿ, ಹಠವಾದಿ, ಜಗಳಗಂಟ'– ಎಂಬ ಬಣ್ಣನೆ ಬಹುತೇಕ ನಾಗಭೂಷಣರಿಗೇ ಒಪ್ಪುವಂಥದ್ದಾದರೂ, ಅವರು ಯಾವುದೋ 'ಸಂದು ಹೋದ ಕಾಲದ ಸಮಾಜವಾದ' ಎಂಬುದರ ತಾತ್ವಿಕ ಪಂಜರದಲ್ಲಿ ಸಿಕ್ಕಿಕೊಂಡವರಲ್ಲ.

ಈ ಬರಹಗಳಲ್ಲಿ, ನಾಗಭೂಷಣ ತಮ್ಮ ಸಮಾಜವಾದಿ ಪಯಣದ ಎಲ್ಲ ಅನುಭವ, ನೆನಪು, ವಿದ್ವತ್ತುಗಳೊಂದಿಗೆ ಸಜ್ಜಾಗಿ ಸಮಕಾಲೀನ ಸಂಕಟಗಳ ಬೇರು ತಡಕಹೊರಡುತ್ತಾರೆ. ಇಲ್ಲಿ ಸಿನಿಕತೆ, ವಿತಂಡವಾದಗಳಿಲ್ಲದ, ಕಕ್ಕುಲತೆ ತುಂಬಿದ ದಿಟ್ಟ ಗ್ರಹಿಕೆಯಲ್ಲೂ ಎದ್ದು ಕಾಣುವುದು– ಅವರ ಆತಂಕ. ಸದ್ಯದ ದಿಕ್ಕೇಡಿತನ ಕುರಿತ ಆತಂಕ. ಜೊತೆಗಾರರಿಲ್ಲದೆ ಏಕಾಂಗಿಯಾಗಿ ಬೆಟ್ಟ ಹತ್ತುವವನ ಅಮಾಯಕ ನಿರ್ಭೀತಿಯಿಂದ ಹೊರಡುವ ನಾಗಭೂಷಣ, ತಮ್ಮ ಹರಿತ ನೋಟ ಮತ್ತು ಮೊನಚು ಉಪಮೆಗಳೊಂದಿಗೆ ಪ್ರಗತಿಪರರೆನಿಸಿಕೊಳ್ಳುವ ನಮ್ಮ ಎಷ್ಟೋ ಸಹಯಾತ್ರಿಗಳ ಕರ್ಮಠತ್ವ ಬಯಲಾಗುವಷ್ಟು ನಿರ್ದಾಕ್ಷಿಣ್ಯವಾಗಿ ಚಿಂತಿಸಬಲ್ಲರು. ಹಾಗಾದರೂ, ಇಂಥ ಬರವಣಿಗೆ ವ್ಯಾಪಕ ಚರ್ಚೆಗೆ, ಸಂವಾದಕ್ಕೆ ಒಳಪಡದಂತೆ ಮಾಡಿದ ಖಳನಾಯಕ ಯಾರು? ಉದ್ದನೆ ವಾಕ್ಯಗಳಲ್ಲಿ ತೊಡರಿಕೊಳ್ಳುವ ಇವರ ಭಾಷಾ ಶೈಲಿಯೇ? ಎಲ್ಲ ಓದಿದ ಮೇಲೆ ಇವರು ಉದ್ದಕ್ಕೂ ಪ್ರತಿಪಾದಿಸಿದ್ದು ಒಂದೇ ವಿಷಯವನ್ನು ಎಂಬ ಮಾಯೆ ಕವಿಸುವ ತಾತ್ವಿಕ ಹೊರೆಯೇ?... ಅಥವಾ ಓದುಗರ ವೈವಿಧ್ಯಮಯ ಭಾವಸ್ತರಗಳನ್ನು ಮುಟ್ಟದ ಅಂಕಣಕಾರನ ವರ್ಚಸ್ಸು ಸವೆಯುವುದು ಸಹಜವೇ ಇರಬಹುದು. ಅಥವಾ ನಾಗಭೂಷಣರ ಬರವಣಿಗೆಯಲ್ಲಿ ತೇವಾಂಶ ಕಮ್ಮಿ ಎಂಬುದೂ ನಿಜವೇ.

ಹಾಗೆನ್ನುತ್ತಿದ್ದಂತೆಯೇ ಅದನ್ನು ತಟ್ಟನೆ ಸುಳ್ಳು ಮಾಡಬಲ್ಲ ಉದಾಹರಣೆಗಳು ಪುಸ್ತಕದಿಂದಲೇ ಎದ್ದು ಬರುತ್ತವೆ! ದಲಿತ ಚಳವಳಿ ಮತ್ತು ಬಿಎಸ್‌ಪಿ ಬಗೆಗಿನ ಬರಹದ ಮಾರ್ದವತೆಯನ್ನು ನೋಡಿದರೆ ಸಾಕು: ನಾಗಭೂಷಣರ ಚಿಂತನೆ, ಆರ್ದ್ರ ಮಣ್ಣಿಗೆ ಬಿದ್ದ ಬೀಜದಂತೆ, ಒಳಗೇ ಮೊಳೆಯುತ್ತ ಹೋಗುವ ಬೆರಗು ನಮ್ಮದಾಗುತ್ತದೆ.

ಜಾಗತೀಕರಣ, ಭಾಷೆ– ಸಂಸ್ಕೃತಿ, ಸಾಮಾಜಿಕ ನ್ಯಾಯ, ಮೂಲಭೂತವಾದ, ಸ್ಥಳೀಯ ಮತ್ತು ರಾಷ್ಟ್ರ/ಅಂತಾರಾಷ್ಟ್ರೀಯ ರಾಜಕಾರಣದ ಮುಖ್ಯ ಪ್ರಶ್ನೆಗಳನ್ನು ಅಸೀಮ ಪ್ರೌಢಿಮೆಯೊಂದಿಗೆ ಎದುರಿಸುವ ನಾಗಭೂಷಣ ನಮ್ಮ ಕಾಲದ ಮಹತ್ವದ ಸಾಂಸ್ಕೃತಿಕ ದನಿ ಎಂಬುದನ್ನು ಯಾರೂ ತಳ್ಳಿ ಹಾಕಲು ಸಾಧ್ಯವಿಲ್ಲ. ಈ ಮಾತಿಗೆ ಈ ಸಂಕಲನವೇ ಸಾಕ್ಷಿ.

–ಎನ್.ಎಸ್. ಶಂಕರ್

ರೂಪ ಪ್ರಕಾಶನ
ಮೈಸೂರು